"ಬೃಹತ್ ಅಭಿವೃದ್ಧಿ ಯೋಜನೆ ಹಾಗೂ ಪುನರ್ವಸತಿ"

(ಸೂಪಾ ಜಲಾಶಯದ ಸಂತ್ರಸ್ತ ಕುಣಬಿಯರನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯಕ್ಕೆ
ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿರುವ
ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ಗಾಯತ್ರಿ

ಎಂ.ಎಸ್.ಡಬ್ಲ್ಯು

ಮಾರ್ಗದರ್ಶಕರು

ಡಾ. ಕೇಶವನ್ ಪ್ರಸಾದ್.ಕೆ

ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
ಹೊಸಪೇಟೆ ತಾ॥ ಬಳ್ಳಾರಿ ಜಿ॥

೨೦೧೭

"ಬೃಹತ್ ಅಭಿವೃದ್ಧಿ ಯೋಜನೆ ಹಾಗೂ ಪುನರ್ವಸತಿ"

(ಸೂಪಾ ಜಲಾಶಯದ ಸಂತ್ರಸ್ತ ಕುಣಬಿಯರನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯಕ್ಕೆ
ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿರುವ
ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ
ಗಾಯತ್ರಿ
ಎಂ.ಎಸ್.ಡಬ್ಲ್ಯೂ

ಮಾರ್ಗದರ್ಶಕರು
ಡಾ. ಕೇಶವನ್ ಪ್ರಸಾದ್.ಕೆ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

Kannada University, Hampi

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬
ಹೊಸಪೇಟೆ ತಾ॥ ಬಳ್ಳಾರಿ ಜಿ॥

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಗಾಯತ್ರಿ ಇವರು ಪಿಹೆಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಬೃಹತ್ ಅಭಿವೃದ್ಧಿ ಯೋಜನೆ ಹಾಗೂ ಪುನರ್ವಸತಿ" (ಸೂಪಾ ಜಲಾಶಯದ ಸಂತ್ರಸ್ತ ಕುಣಬಿಯರನ್ನು ಪರಿಗಣಿಸಿ)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಬೇರೆ ಯಾವುದೇ ಪದವಿ ಪಡೆಯಲು ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

7-8-2018

ಸ್ಥಳ : ವಿದ್ಯಾರಣ್ಯ

ದಿನಾಂಕ:

(ಪ್ರೊ. ಕೇಶವನ್ ಪ್ರಸಾದ್ ಕೆ.)
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಘೋಷಣಾ ಪತ್ರ

"ಬೃಹತ್ ಅಭಿವೃದ್ಧಿ ಯೋಜನೆ ಹಾಗೂ ಪುನರ್ವಸತಿ" (ಸೂಪಾ ಜಲಾಶಯದ ಸಂತ್ರಸ್ತ ಕುಣಬಿಯರನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪ್ರೊ.ಕೇಶವನ್ ಪ್ರಸಾದ್.ಕೆ ಇವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಬೇರೆ ಯಾವುದೇ ಪದವಿ ಪಡೆಯಲು ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಎಲ್ಲಿಯೂ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

ಗಾಯತ್ರಿ
ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಸ್ಥಳ : ವಿದ್ಯಾರಣ್ಯ

ದಿನಾಂಕ: 05-8-2017

ಪರಿವಿಡಿ

ಅಧ್ಯಾಯಗಳ ಒಳನೋಟ

ಕೋಷ್ಟಕಗಳು

ಸ್ಥಂಭ ನಕ್ಷೆಗಳು

ಪೈ ನಕ್ಷೆಗಳು

ಸಂಕ್ಷೇಪಣಗಳು

ಕ.ವಿ.ನಿ.ನಿ. – ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ರಿ)

ಕೆ.ಪಿ.ಸಿ. – ಕರ್ನಾಟಕ ಪವರ್ ಕಾರ್ಪೊರೇಷನ್

ಪು.ಕೇ. – ಪುನರ್ವಸತಿ ಕೇಂದ್ರ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರಸ್ತಾವನೆ

ಭಾರತ ಅಭಿವೃದ್ಧಿಶೀಲ ರಾಷ್ಟ್ರ. ಇದು 'ತೃತೀಯ ಜಗತ್ತಿನ' ಸಾಲಿನಲ್ಲಿ ನಿಲ್ಲುತ್ತದೆ. ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯಗಳಲ್ಲಿ ಕ್ರಾಂತಿಯನ್ನು ತಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿಗೆ ಸೇರುವತ್ತ ದಾಪುಗಾಲು ಇಟ್ಟಿದೆ. ತ್ವರಿತಗತಿ ಅಭಿವೃದ್ಧಿಗಾಗಿ ಪಾಶ್ಚಿಮಾತ್ಯ ಪ್ರೇರಿತ ಬೃಹತ್ ಯೋಜನೆಗಳನ್ನು ಕೈಗೊಂಡಿದೆ. ರಾಷ್ಟ್ರೀಯ ಹಿತ, ಅಭಿವೃದ್ಧಿ ಮತ್ತು ಪ್ರಗತಿ ಎಂಬ ಲಾಂಛನದಡಿಯಲ್ಲಿ ಅಣೆಕಟ್ಟು, ಜಲವಿದ್ಯುತ್, ಉಷ್ಣ ವಿದ್ಯುತ್, ಅಣು ವಿದ್ಯುತ್, ಕೈಗಾರಿಕೆ, ಗಣಿಗಾರಿಕೆ, ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೇ ಹಳಿಗಳು, ವಿಮಾನ ನಿಲ್ದಾಣ, ಬಂದರು ನಿರ್ಮಾಣ, ರಕ್ಷಣಾ ಯೋಜನೆಗಳು, ರಾಷ್ಟ್ರೀಯ ಉದ್ಯಾನವನಗಳು, ಅಭಯಾರಣ್ಯಗಳ ವಿಸ್ತರಣೆ ಮುಂತಾದ ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ[೧].

ಈ ರೀತಿಯ ಬೃಹತ್ತಾದ ಅಭಿವೃದ್ಧಿ ಯೋಜನೆಗಳಿಗೆ ಸಾಕಷ್ಟು ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಅಲ್ಲಿನ ಮೂಲನಿವಾಸಿಗಳನ್ನು ಸ್ಥಳಾಂತರಗೊಳಿಸಿದೆ. ಪುನರ್ವಸತಿ ಬಗೆಗೆ ಒಂದು ರಾಷ್ಟ್ರೀಯ ನೀತಿ ಇಲ್ಲದಿದ್ದರೂ ೧೯೭೦ ರಿಂದ ೧೯೯೦ ರವರೆಗೆ ಆಯಾ ರಾಜ್ಯಗಳ ಪುನರ್ವಸತಿ ನೀತಿ ಹಾಗೂ ಭೂ ಸ್ವಾಧೀನ ಕಾಯಿದೆ ೧೮೯೪ರ ಪರಿಹಾರಗಳಿಗೆ ಅನುಗುಣವಾಗಿ ಯೋಜನಾ ಸಂತ್ರಸ್ತರನ್ನು ಪುನರ್ವಸತಿಗೊಳಿಸಲು ಪ್ರಯತ್ನಿಸಲಾಗಿದೆ. ಆದರೆ ಸಂತ್ರಸ್ತರು ಒಂದೆಡೆ ನೆಲೆ ನಿಂತಿದ್ದಾರೆಯೇ? ಯೋಜನೆಯಿಂದ ಪ್ರಯೋಜನವನ್ನು ಪಡೆದುಕೊಂಡಿದ್ದಾರೆಯೇ? ಬದುಕನ್ನು ಮತ್ತೆ ಕಟ್ಟಿಕೊಂಡಿದ್ದಾರೆಯೇ? ಅಭಿವೃದ್ಧಿಯನ್ನು ಕಂಡಿದ್ದಾರೆಯೇ? ಎಂಬ ಅಂಶಗಳ ಬಗ್ಗೆ ಅಧ್ಯಯನ ಅವಶ್ಯಕ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಳಾಂತರಕ್ಕೆ ಕಾರಣವಾದ ಬೃಹತ್ ಅಭಿವೃದ್ಧಿ ಯೋಜನೆಗಳಲ್ಲಿ ಕಾಳಿ ಜಲವಿದ್ಯುತ್ ಯೋಜನೆಯೂ ಒಂದಾಗಿದೆ. ಇದರ ಪ್ರಥಮ ಯೋಜನೆಯಾದ ಸೂಪಾ ಜಲಾಶಯ ಯೋಜನೆ ಹಾಗೂ ಸಂತ್ರಸ್ತರಲ್ಲಿ ಒಂದಾದ ಕುಣಬಿ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ಪುನರ್ವಸತಿ ಹಾಗೂ ಪ್ರಸ್ತುತ ಪರಿಸ್ಥಿತಿ ಅಧ್ಯಯನ ಮಾಡಲಾಗಿದೆ. ಸಂತ್ರಸ್ತರ ಪುನರ್ ನಿರ್ಮಾಣಕ್ಕಾಗಿ ಮಾದರಿಯನ್ನು ರೂಪಿಸಲಾಗಿದೆ.

೧.೧. ಅಧ್ಯಯನದ ಸಮಸ್ಯೆಯ ಬಗೆಗಿನ ಹೇಳಿಕೆ

ಪ್ರಸ್ತುತ ಮಹಾ ಪ್ರಬಂಧದಲ್ಲಿ ಬಳಸಲ್ಪಡುವ ಅಧ್ಯಯನದ ಶೀರ್ಷಿಕೆಯಲ್ಲಿರುವ 'ಬೃಹತ್', 'ಅಭಿವೃದ್ಧಿ', 'ಯೋಜನೆ' ಹಾಗೂ 'ಪುನರ್ವಸತಿ'ಯನ್ನು ಇಲ್ಲಿ ವಿವರಿಸಿ ಹೇಳಲಾಗಿದೆ. 'ಬೃಹತ್' ಅಂದರೆ ದೊಡ್ಡ ಪ್ರಮಾಣದ್ದು. ಭಾರೀ ಬಂಡವಾಳ ಹೂಡಿಕೆ, ಸಾಕಷ್ಟು ಪರಿಸರ ನಾಶ, ಹೆಚ್ಚಿನ ಭೂ ಸ್ವಾಧೀನ ಜೊತೆಗೆ ಜನರ ಸ್ಥಳಾಂತರಕ್ಕೆ ಕಾರಣವಾಗುವಂತದ್ದು. 'ಅಭಿವೃದ್ಧಿ' ಎಂದರೆ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ.

ದೊಡ್ಡ ಮಟ್ಟದಲ್ಲಿ ಬಂಡವಾಳ ಹೂಡಿಕೆ ಮಾಡಿ ಹೆಚ್ಚು ಲಾಭ ಗಳಿಸುವ ವಿದ್ಯಮಾನ. 'ಯೋಜನೆ' ಅಂದರೆ ದೇಶದ ಒಟ್ಟು ಆರ್ಥಿಕತೆಯ ವೃದ್ಧಿಗೋಸ್ಕರ ಹಮ್ಮಿಕೊಳ್ಳುವ ದೊಡ್ಡ ಮಟ್ಟದ ಕಾರ್ಯಗಳು. ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಕೈಗಾರಿಕೆಗಳನ್ನು ನಿರ್ಮಾಣ ಮಾಡುವುದು. ಕುಡಿಯುವ ನೀರು, ಕೃಷಿಗಾಗಿ ನೀರಾವರಿ ಸೌಲಭ್ಯ, ಕೈಗಾರಿಕೆಗಳಿಗೆ ನೀರು ಮತ್ತು ವಿದ್ಯುತ್ ಉತ್ಪಾದನೆಗಾಗಿ ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸುವುದು. ಅಣುವಿದ್ಯುತ್ ಹಾಗೂ ಶಾಖೋತ್ಪನ್ನ ಸ್ಥಾವರಗಳನ್ನು ಸ್ಥಾಪಿಸುವುದು. ವೇಗದ ಹಾಗೂ ಲಾಭದ ವ್ಯಾಪಾರ ವಹಿವಾಟಿನ ಅನುಕೂಲಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೇ ಹಳಿಗಳನ್ನು ನಿರ್ಮಾಣ ಮಾಡುವುದು. ಭದ್ರತೆಗಾಗಿ ನೌಕಾನೆಲೆಗಳನ್ನು ಸ್ಥಾಪಿಸುವುದು. ಹಾನಿಗೊಳಗಾದ ಪರಿಸರವನ್ನು ಸಂವರ್ಧನೆ ಮಾಡುವುದಕ್ಕಾಗಿ ಅರಣ್ಯವನ್ನು ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನಾಗಿ ಘೋಷಿಸುವುದು. ಈ ರೀತಿಯಾದ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಅಭಿವೃದ್ಧಿಯ ಸಂಕೇತವಾಗಿ ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳುವಂತದ್ದನ್ನು ಯೋಜನೆಗಳು ಎಂದು ಕರೆಯಲಾಗಿದೆ. ಸಂತ್ರಸ್ತರೆಂದರೆ 'ಅಭಿವೃದ್ಧಿ ಯೋಜನೆಯ ಕಾರಣದಿಂದಾಗಿಯೇ ಜಮೀನನ್ನು ಕಳೆದುಕೊಂಡು ತಮ್ಮ ಪಾರಂಪರಿಕ ಮೂಲನೆಲೆಯಿಂದ ಒತ್ತಾಯ ಪೂರ್ವಕವಾಗಿ ಎಬ್ಬಿಸಲ್ಪಟ್ಟವರು'. 'ಪುನರ್ವಸತಿ' ಎಂದರೆ ಬೃಹತ್ ಅಭಿವೃದ್ಧಿ ಯೋಜನೆಯ ಬಾಧಿತರನ್ನು ಬೇರೆ ಕಡೆಗೆ ವ್ಯವಸ್ಥಿತವಾಗಿ ಮತ್ತೆ ಮೊದಲಿನ ರೂಪದಲ್ಲಿಯೇ ನೆಲೆಗೊಳಿಸುವ ಪ್ರಕ್ರಿಯೆ. ಯಾವುದೇ ಯೋಜನಾ ಬಾಧಿತರ ಸಾಮಾಜಿಕ-ಆರ್ಥಿಕ ಆಯಾಮಗಳನ್ನು ಸ್ಥಳಾಂತರ ಪೂರ್ವದಲ್ಲಿ ಅಧ್ಯಯನ ಮಾಡಿ ಅದಕ್ಕೆ ಹೊಂದಿಕೆಯಾಗುವಂತೆ ಯೋಜನಾ ಸಂತ್ರಸ್ತರನ್ನು ಪುನರ್ ನೆಲೆಗೊಳಿಸುವುದಾಗಿದೆ. ಪುನರ್ವಸತಿ ಕೇಂದ್ರದಲ್ಲಿ ಅವರ ಜೀವನಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಡುವುದು. ಸಂತ್ರಸ್ತರು ಬದುಕನ್ನು ಮತ್ತೆ ಮೊದಲಿಗಿಂತಲೂ ಉತ್ತಮವಾಗಿ ನಡೆಸಿಕೊಂಡು ಹೋಗುವಂತೆ ಮಾಡುವ ಒಂದು ಸುದೀರ್ಘ ಹಾಗೂ ನಿರಂತರ ಪ್ರಕ್ರಿಯೆ ಆಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ(ಸೂಪಾ) ತಾಲ್ಲೂಕಿನ ಗಣೇಶಗುಡಿಯ ಸೂಪಾ ಜಲಾಶಯ ಯೋಜನೆಯನ್ನು ಆಯ್ದುಕೊಳ್ಳಲಾಗಿದೆ. ಯೋಜನೆಯ ಸ್ಥಾಪನೆ, ಗ್ರಾಮಗಳ ಮುಳುಗಡೆ, ಜನರ ಸ್ಥಳಾಂತರ, ಪುನರ್ವಸತಿ ಮತ್ತು ಅನುಸರಣಾ ಕಾರ್ಯಕ್ರಮಗಳ ಬಗ್ಗೆ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಸೂಪಾ ಜಲಾಶಯಕ್ಕೆ ಅಡಿಗಲ್ಲು ಹಾಕಿದ ೧೯೭೦ ರಿಂದ ೨೦೧೪ ರವರೆಗಿನ ಅವಧಿಯನ್ನು ಅಧ್ಯಯನ ಒಳಗೊಂಡಿದೆ. ಇಲ್ಲಿ ಅಂತರ್ ಕಾಲಘಟ್ಟಗಳ ನಡುವಿನ ಬೆಳವಣಿಗೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಲಾಗಿದೆ.

ಸೂಪಾ ಜಲಾಶಯ ನಿರ್ಮಾಣದಿಂದಾಗಿ ಹಲವು ಸಮುದಾಯಗಳು ತಮ್ಮ ಮೂಲನೆಲೆಯನ್ನು ಕಳೆದುಕೊಂಡಿದ್ದಾರೆ. ಇವರಲ್ಲಿ ಕುಣಬಿಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಯೋಜನೆಯಿಂದ ಸುಮಾರು ೩೫೦ರಷ್ಟು (ಜಾತಿವಾರು ಸ್ಪಷ್ಟ ಅಂಕಿ ಅಂಶಗಳು ಲಭ್ಯವಿಲ್ಲ) ಕುಣಬಿ ಕುಟುಂಬಗಳು ತಮ್ಮ ನೆಲೆಯನ್ನು ಕಳೆದುಕೊಂಡು, ರಾಮನಗರ ಹಾಗೂ ಜೋಯಿಡಾ ಟೌನ್‌ಶಿಪ್ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡರು. ಪ್ರಸ್ತುತ ಈ ಎರಡು ಪುನರ್ವಸತಿ ಕೇಂದ್ರಗಳಲ್ಲಿ ವಾಸವಾಗಿದ್ದ ಎಲ್ಲಾ ೧೨೬ ಸಂತ್ರಸ್ತ ಕುಣಬಿ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಮಾಹಿತಿ ಸಂಗ್ರಹಿಸುವಾಗ ಕರ್ನಾಟಕ ವಿದ್ಯುತ್ ನಿಗಮದವರು ನೀಡಿರುವ ಒಂದು ನಿವೇಶನದಲ್ಲಿ ವಾಸ ಮಾಡುತ್ತಿರುವ ಅಷ್ಟೂ ಕುಟುಂಬಗಳನ್ನು 'ಒಂದು ಕುಟುಂಬ' ಎಂದು ಪರಿಗಣಿಸಲಾಗಿದೆ.

೧. ೩. ಅಧ್ಯಯನದ ಉದ್ದೇಶಗಳು

೧) ಸೂಪಾ ಜಲಾಶಯ ಯೋಜನೆಯ ಸ್ಥಾಪನೆ, ಮುಳುಗಡೆ, ಸ್ಥಳಾಂತರ, ಪುನರ್ವಸತಿ ಮತ್ತು ಅನುಸರಣಾ ಕಾರ್ಯಗಳನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡುವುದು.

೨) ಸಂತ್ರಸ್ತ ಕುಣಬಿಯರ ಪ್ರಸ್ತುತ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡುವುದು.

೩) ಸಂತ್ರಸ್ತ ಕುಣಬಿಯರ ಜೀವನದ ಪುನರ್ ನಿರ್ಮಾಣಕ್ಕೆ ಸೂಕ್ತ ವಿಧಾನಗಳನ್ನು ಕಂಡುಕೊಳ್ಳುವುದು.

೧.೪. ಅಧ್ಯಯನದ ಪ್ರಾಕಲ್ಪನೆಗಳು

೧. ಸೂಪಾ ಅಣೆಕಟ್ಟು ಯೋಜನೆಯ ಸಂತ್ರಸ್ತರ ಪುನರ್ವಸತಿ ಕಾರ್ಯಕ್ರಮಗಳು ಸಮರ್ಪಕವಾಗಿ ಜಾರಿಯಾಗಲಿಲ್ಲ.

೨. ಕುಣಬಿಯರ ಅನನ್ಯ ಬದುಕು ಅತಂತ್ರವಾಗಿದೆ.

೧.೫. ಅಧ್ಯಯನದ ಮಹತ್ವ

ವಿದ್ವಾಂಸರು ಬೃಹತ್ ಅಭಿವೃದ್ಧಿ ಯೋಜನೆಗಳು ಮತ್ತು ಅವುಗಳಿಂದಾದ ಸ್ಥಳಾಂತರ, ಪುನರ್ವಸತಿ ಹಾಗೂ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಕುರಿತು ಚಿಂತನೆಗಳನ್ನು ನಡೆಸಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ

ವಿಷಯಗಳ ಬಗೆಗಿನ ಕಾರ್ಯಾಗಾರಗಳು ನಡೆದಿವೆ. ಸಾಕಷ್ಟು ಪ್ರಬಂಧಗಳು ಲಭ್ಯವಿವೆ. ಆದರೆ ಒಂದು ಸಂತ್ರಸ್ತ ಸಮುದಾಯವನ್ನು ಆಧಾರವಾಗಿಟ್ಟುಕೊಂಡು ಸ್ಥಳಾಂತರ, ಪುನರ್ವಸತಿ, ಪ್ರಸ್ತುತ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಹಾಗೂ ಅವರ ಅನುಸರಣಾ ಕಾರ್ಯಕ್ರಮಗಳನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಿರುವ ಮಹಾ ಪ್ರಬಂಧಗಳ ಕೊರತೆ ಇದೆ. ಪ್ರಕಟಿತ ಲೇಖನಗಳು ಕ್ಷೇತ್ರಕಾರ್ಯವನ್ನು ಆಧರಿಸದೇ ಆನುಷಂಗಿಕ ಮಾಹಿತಿಗಳ ಆಧಾರದ ಮೇಲೆ ರಚಿಸಲ್ಪಟ್ಟಿವೆ. ಇವು ಆಂಗ್ಲ ಭಾಷೆಯಲ್ಲಿ ಲಭ್ಯವಿದ್ದು ಕನ್ನಡದಲ್ಲಿ ಲಭ್ಯವಿರುವುದಿಲ್ಲ. ಯೋಜನೆಗಳಿಂದ ಜನ ಸ್ಥಳಾಂತರಗೊಂಡಿದ್ದು ದುಸ್ಥಿತಿಯಲ್ಲಿದ್ದಾರೆ ಎಂಬ ಮಾಹಿತಿ ಮಾತ್ರ ಕನ್ನಡದ ಬರಹಗಳಲ್ಲಿ ಲಭ್ಯವಿದೆ. ಆದರೆ ಅವು ಕ್ಷೇತ್ರ ಕಾರ್ಯವನ್ನು ಆಧರಿಸಿಲ್ಲ. ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಬಗೆಗೆ ಅಲ್ಪಸ್ವಲ್ಪ ಮಾಹಿತಿ ಲಭ್ಯವಿದೆ. ಆದರೆ ಸೂಪಾ ಅಣೆಕಟ್ಟು ಯೋಜನೆ, ಪುನರ್ವಸತಿ ಹಾಗೂ ಸಂತ್ರಸ್ತರ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಾಹಿತಿಯಿರುವುದಿಲ್ಲ. ಮತ್ತು ಈ ಕುರಿತು ಸಂಶೋಧನಾತ್ಮಕ ಅಧ್ಯಯನ ನಡೆದಿಲ್ಲ. ಆದ್ದರಿಂದ ಇದು ಸೂಪಾ ಜಲಾಶಯ ಸಂತ್ರಸ್ತ ಕುಣಬಿಯರ ಸಾಮಾಜಿಕ-ಆರ್ಥಿಕ ಬದುಕಿನ ಸ್ಥಿತ್ಯಂತರಗಳ ಪ್ರಾಥಮಿಕ ಅಧ್ಯಯನವಾಗಿದೆ.

೧.೬. ಅಧ್ಯಯನದ ಪ್ರಸ್ತುತತೆ

ಸೂಪಾ ಜಲಾಶಯ ಸಂತ್ರಸ್ತರ ಪುನರ್ವಸತಿ ಕಾರ್ಯವು ಮೂವತ್ತೈದು ವರ್ಷಗಳಷ್ಟು ಸಮಯವನ್ನು ತೆಗೆದುಕೊಂಡಿದೆ. ಆದರೆ ಇಂದಿನವರೆಗೂ ಸಂತ್ರಸ್ತರು ಪುನರ್ವಸತಿಗೊಂಡಿಲ್ಲ. ಆದಾಗ್ಯೂ ಇವರ ಕಡೆ ಗಮನ ಹರಿಯದಾಗಿದೆ. ಇಂದಿಗೂ ಅವರು ಪರಿಹಾರದ ನಿರೀಕ್ಷೆಯಲ್ಲಿದ್ದಾರೆ. ಮೇಲ್ನೋಟಕ್ಕೆ ಅವರ ಸಾಮಾಜಿಕ-ಆರ್ಥಿಕ ಬದುಕು ತೀರಾ ಹದಗೆಟ್ಟಿದೆ. ಹಾಗಾಗಿ ರಾಷ್ಟ್ರೀಯ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಅವಶ್ಯ ಪರಿಹಾರಗಳನ್ನು ಪಡೆಯುವಂತೆ ಮಾಡುವುದು ದೊಡ್ಡ ಸವಾಲಾಗಿದೆ. ಆದ್ದರಿಂದ ಈ ಅಧ್ಯಯನದಲ್ಲಿ ಅವರ ಪರಿಸ್ಥಿತಿಯ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಅವಶ್ಯಕ ಪರಿಹಾರಗಳನ್ನು ಕಂಡುಕೊಳ್ಳುವ ಉದ್ದೇಶವಿದೆ. ಇದು ವರ್ತಮಾನದ ಅವಶ್ಯಕತೆಯಾಗಿದೆ. ಇಲ್ಲಿ ಸಂತ್ರಸ್ತರ ಬಡತನಕ್ಕೆ ಕಾರಣಗಳನ್ನು ಶೋಧಿಸಿ ಅವುಗಳನ್ನು ವಿಶ್ಲೇಷಿಸಿ ಪರಿಹಾರದ ಕ್ರಮಗಳನ್ನು ಸೂಚಿಸಬೇಕಿದೆ. ಕುಣಬಿಯರು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೆ ಹೊಂದಿರುವ ಸಂಬಂಧಗಳನ್ನು ಅರಿಯುವ ಅವಶ್ಯಕತೆ ಇದೆ.

ಇಂತಹ ಯೋಜನೆಗಳಿಂದ ಸ್ಥಳಾಂತರಗೊಂಡವರಿಗೆ ವ್ಯವಸ್ಥಿತವಾದ ಪುನರ್ವಸತಿಯನ್ನು ಕಲ್ಪಿಸಲು ಕಾನೂನು ಹಾಗೂ ಯೋಜನೆಗಳನ್ನು ರೂಪಿಸುವವರಿಗೆ ಮಾರ್ಗದರ್ಶಿ ಸೂತ್ರ ಕಂಡುಕೊಳ್ಳಬೇಕಿದೆ. ರಾಷ್ಟ್ರೀಯ ಅಭಿವೃದ್ಧಿ ಎಂದಾಗ ಯೋಜನೆಯ ಪ್ರಗತಿ ಮಾತ್ರವಲ್ಲ. ಬದಲಾಗಿ ಇದರಿಂದ ತೊಂದರೆ ಅನುಭವಿಸಿದವರ

ಬದುಕನ್ನು ಮತ್ತೆ ಕಟ್ಟಿಕೊಡುವುದು ಸಹ ಅಷ್ಟೇ ಮುಖ್ಯ. ಸೂಪಾ ಜಲಾಶಯದಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಕೋಟಿಗಟ್ಟಲೆ ಲಾಭವಿರುವ ಮಾಹಿತಿ ಇದೆ. ಆದರೆ ಇದರಿಂದಾಗಿ ನೆಲೆ ಕಳೆದುಕೊಂಡ ಕುಟುಂಬಗಳು ಏನಾದವು ಎಂಬುದಕ್ಕೆ ಪುರಾವೆಗಳಿಲ್ಲ. ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ ಮಾತ್ರ ಬೃಹತ್ ಅಭಿವೃದ್ಧಿ ಯೋಜನೆಗಳಿಂದ ದೇಶಕ್ಕೆ, ಜನತೆಗೆ ಲಾಭ ಆಗಿದೆಯೋ ಅಥವಾ ಮತ್ತೇನಾಗಿದೆ ಎಂಬ ಅಂಶ ಬೆಳಕಿಗೆ ಬರುತ್ತದೆ. ಈ ನಿಟ್ಟಿನಲ್ಲಿ ಅಧ್ಯಯನದ ಪ್ರಸ್ತುತತೆ ಕಂಡುಬರುತ್ತದೆ.

೧.೭. ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವು **ವಿಶ್ಲೇಷಣಾತ್ಮಕ ಸಂಶೋಧನಾ ವಿನ್ಯಾಸವನ್ನು** ಹೊಂದಿದೆ.

ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಮಾಹಿತಿಗಳನ್ನು **ಪ್ರಾಥಮಿಕ ಮೂಲಗಳು** ಮತ್ತು **ಆನುಷಂಗಿಕ ಮೂಲಗಳಿಂದ** ಪಡೆಯಲಾಗಿದೆ.

ಪ್ರಾಥಮಿಕ ಮೂಲಗಳಿಂದ ಮಾಹಿತಿ ಸಂಗ್ರಹಣೆ

ಸೂಪಾ ಜಲಾಶಯ ಯೋಜನಾ ಇಲಾಖೆ (ಕೆ.ಪಿ.ಸಿ. ಗಣೇಶಗುಡಿ) ಭೇಟಿ, ಪುನರ್ವಸತಿ ಕೇಂದ್ರಗಳಲ್ಲಿರುವ ಸಂತ್ರಸ್ತ ಕುಣಬಿಯರ ಮನೆ ಭೇಟಿ, ಪುನರ್ವಸತಿ ಕೇಂದ್ರದಲ್ಲಿನ ಮುಖ್ಯ ವ್ಯಕ್ತಿಗಳು, ಸೂಪಾ ಜಲಾಶಯ ಯೋಜನೆಯ ಸಂತ್ರಸ್ತರಾಗಿರುವ ಇತರೇ ಸಮುದಾಯದ ವ್ಯಕ್ತಿಗಳು, ಸಂತ್ರಸ್ತರಲ್ಲದ ಕುಣಬಿಯರು, ಅತಿಥಿ ಸಮುದಾಯ (ಹೋಸ್ಟ್ ಕಮ್ಯುನಿಟೀಸ್), ಸೂಪಾ ಜಲಾಶಯದ ಹಿನ್ನೀರಿನಿಂದ ಸಂತ್ರಸ್ತರಾಗುತ್ತಿರುವವರು, ವಿಷಯ ಪರಿಣಿತರು ಮತ್ತು ವಿದ್ವಾಂಸರ ಭೇಟಿ, ಕಾರ್ಯಾಗಾರಗಳಲ್ಲಿ ಭಾಗಿಯಾಗುವುದರ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಪ್ರಾಥಮಿಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಈ ಎಲ್ಲಾ ಪ್ರಾಥಮಿಕ ಮಾಹಿತಿಗಳನ್ನು ೨೦೧೨-೨೦೧೪ರ ಕಾಲಾವಧಿಯಲ್ಲಿ ಸಂಗ್ರಹಿಸಲಾಗಿದೆ.

ಸಂಶೋಧನೆಯ ದತ್ತಾಂಶ ಸಂಗ್ರಹಣೆಯ ವಿಧಾನವಾದ **ಸಮೀಕ್ಷಾ ವಿಧಾನವನ್ನು** ಬಳಸಿಕೊಂಡು ಸಂತ್ರಸ್ತ ಕುಣಬಿಯರು ವಾಸ ಮಾಡುತ್ತಿರುವ ರಾಮನಗರ ಮತ್ತು ಜೋಯಿಡಾ ಟೌನ್‌ಶಿಪ್‌ಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ **'ಜನಗಣತಿ ಸಮೀಕ್ಷಾ ವಿಧಾನ'**ವನ್ನು ಬಳಸಿಕೊಳ್ಳಲಾಗಿದೆ. ಮೂರು ಪುನರ್ವಸತಿ ಕೇಂದ್ರಗಳಲ್ಲಿ ಅಧ್ಯಯನದ ಕಾಲಾವಧಿಯಲ್ಲಿ ವಾಸವಿದ್ದ ಎಲ್ಲಾ ಸಂತ್ರಸ್ತ ಕುಣಬಿಯರ ಸ್ಥಳಾಂತರಪೂರ್ವ ಹಾಗೂ ಸ್ಥಳಾಂತರ ನಂತರದ 'ಸಾಮಾಜಿಕ-ಆರ್ಥಿಕ' ಪರಿಸ್ಥಿತಿಗಳ ಬಗ್ಗೆ **ಆಳವಾದ ಜನಗಣತಿ ಸಮೀಕ್ಷಾ ವಿಧಾನ**ದಿಂದ ದತ್ತಾಂಶಗಳನ್ನು ಪಡೆಯಲಾಗಿದೆ.

ಜನಗಣತಿ ಸಮೀಕ್ಷೆಯ ಸಂದರ್ಭದಲ್ಲಿ **ಸಂದರ್ಶನ** ಮತ್ತು **ಅವಲೋಕನ** ಎಂಬ ಎರಡು ಸಂಶೋಧನಾ ವಿಧಾನವನ್ನು ಬಳಸಿಕೊಂಡು ಅಗತ್ಯ ಮಾಹಿತಿಗಳನ್ನು ಕಲೆ ಹಾಕಲಾಗಿದೆ.

ಸಂದರ್ಶನದಲ್ಲಿ **ಸಂರಚಿತ** ಮತ್ತು **ನೇರ ಸಂದರ್ಶನ** ಎಂಬ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ **ಸಂರಚಿತ ಸಂದರ್ಶನ ಅನುಸೂಚಿ** ಎಂಬ ಮಾಹಿತಿ ಸಂಗ್ರಹಣೆಯ ಸಾಧನವನ್ನು ಬಳಸಿಕೊಳ್ಳಲಾಗಿದೆ. ಇದರಲ್ಲಿ **ಪರಿಮಾಣಾತ್ಮಕ** ಮತ್ತು **ಗುಣಾತ್ಮಕ**ವಾಗಿರುವ **ಮುಚ್ಚಿದ** ಹಾಗೂ **ತೆರೆದ** ಮಾದರಿಯ ಪ್ರಶ್ನೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ವಕ್ತೃಗಳು ನೀಡಿರುವ ಮಾಹಿತಿಯನ್ನು ಸಂಶೋಧಕರು ತಮ್ಮ ಸಂದರ್ಶನ ಅನುಸೂಚಿಯಲ್ಲಿ ಸ್ವತಃ ತಾವೇ **ಕೈ ಬರಹ**ದ ಮೂಲಕ ಭರ್ತಿ ಮಾಡಿರುತ್ತಾರೆ.

ಸೂಪಾ ಜಲಾಶಯ ಹಾಗೂ ಇತರೇ ಇಲಾಖಾ ಅಧಿಕಾರಿಗಳನ್ನು ನೇರ ಸಂದರ್ಶನ ಮಾಡಿ **ಸಂರಚಿತ ಪ್ರಶ್ನೆ**ಗಳ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅವಲೋಕನ ವಿಧಾನದಲ್ಲಿ **ಸಹಭಾಗಿ ಅವಲೋಕನ, ನೇರ ಅವಲೋಕನ** ಮತ್ತು **ಅಸಹಭಾಗಿ ಅವಲೋಕನ** ಎಂಬ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಣೆಯ ದಿನಗಳಲ್ಲಿ ಸಂಶೋಧಕರು ಸಂತ್ರಸ್ತ ಕುಣಬಿಯರ ಮನೆಗಳಲ್ಲೇ ವಾಸ್ತವ್ಯ ಹೂಡಿದ್ದರು. ಈ ಸಂದರ್ಭಗಳಲ್ಲಿ ಸಂತ್ರಸ್ತ ಕುಣಬಿಯರ ಶಾಬ್ಧಿಕ ಮತ್ತು ಅಭಿವ್ಯಕ್ತಾತ್ಮಕ ನಡತೆ, ಸಮಯವನ್ನು ವ್ಯಯಿಸುವ ರೀತಿ, ಭೌತಿಕ ಚಟುವಟಿಕೆಗಳು ಇವುಗಳನ್ನು ಅವಲೋಕನ ಮಾಡಿ ಅಧ್ಯಯನ ಮಾಡಲಾಗಿದೆ. ಈ ಅವಲೋಕನವು **ಅಸಂರಚಿತ ಮಾದರಿ**ಯಲ್ಲಿದ್ದು **ಸಹಜ ಪರಿಸ್ಥಿತಿ**ಯಲ್ಲಿ ಅವರ ಕ್ರಿಯೆಗಳನ್ನು ಅಧ್ಯಯನದ ದೃಷ್ಟಿಯಲ್ಲಿ ಅವಲೋಕನ ಮಾಡಲಾಗಿದೆ.

ಮೂರು ಪುನರ್ವಸತಿ ಕೇಂದ್ರಗಳ ಚಿತ್ರಣ, ಕೃಷಿ ಭೂಮಿ ಹಾಗೂ ಮನೆಗಳಿಗೆ ತೊಂದರೆ ನೀಡುತ್ತಿದ್ದ ಕಲ್ಲಿನ ಕೋರೆ, ಕೃಷಿ ಭೂಮಿಯ ಪರಿಸ್ಥಿತಿ, ಕುಡಿಯುವ ನೀರನ್ನು ಪೂರೈಸುವ ಪಾಂಡರಿ ನದಿಯ ನೀರು ಸರಬರಾಜು ಘಟಕದ ಪರಿಸ್ಥಿತಿ, ನದಿಯ ಮರಳುಗಾರಿಕೆಯಿಂದ ಕೊಳಕಾಗಿರುವ ಕುಡಿಯುವ ನೀರು, ರಾಮನಗರದ ಬೋರ್‌ವೆಲ್ ಮತ್ತು ಬಾವಿ ನೀರು ಬಳಕೆ ಮಾಡುವ ಸಂತ್ರಸ್ತರ ಸಮಸ್ಯೆಗಳನ್ನು **ನೇರ ಅವಲೋಕನ** ಮಾಡಿ ಪರಿಸ್ಥಿತಿಯನ್ನು ಅರಿತುಕೊಳ್ಳಲಾಗಿದೆ.

ಸಂತ್ರಸ್ತ ಕುಣಬಿಯರ ಮೂಲ ಬದುಕಿನ ರೀತಿಯಲ್ಲೇ ಇಂದಿಗೂ ಬದುಕುತ್ತಿರುವ ವಿವಿಧ ಊರುಗಳಿಗೆ ಭೇಟಿ ನೀಡಿ ಅವರ ದಿನನಿತ್ಯದ ಬದುಕು, ಸಂಪ್ರದಾಯ, ಸಾಂಸ್ಕೃತಿಕ ಆಚರಣೆಗಳು, ಆಹಾರ ಪದ್ಧತಿ, ಆರ್ಥಿಕ ಚಟುವಟಿಕೆಗಳು ಇವೆಲ್ಲವುಗಳನ್ನು ಅವರ ಮಧ್ಯೆ ಕೆಲ ಕಾಲ ವಾಸವಿದ್ದು **ಅಸಹಭಾಗಿ ಅವಲೋಕನ** ವಿಧಾನದಿಂದ ಮಾಹಿತಿ ಕಲೆ ಹಾಕಲಾಗಿದೆ.

ಆನುಷಂಗಿಕ ಮೂಲಗಳಿಂದ ಮಾಹಿತಿ ಸಂಗ್ರಹಣೆ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆ.ಪಿ.ಸಿ.) ಸೂಪಾ ಜಲಾಶಯಕ್ಕೆ ಸಂಬಂಧಿಸಿದ ಕೆಲವು ಅಪ್ರಕಟಿತ ವರದಿಗಳನ್ನು ಪರಾಮರ್ಶನ ಮಾಡಲಾಗಿದೆ.

ರಾಮನಗರ ಪುನರ್ವಸತಿ ಕೇಂದ್ರದಲ್ಲಿರುವ ಸೂಪಾ ಸಂತ್ರಸ್ತರಾದ ಶ್ರೀಯುತ ಶರಚ್ಚಂದ್ರ ವಾಸುದೇವ ಗುರ್ಜಾರ್ ಇವರು ಸಂಗ್ರಹಿಸಿದ್ದ ಕೆ.ಪಿ.ಸಿ.ಯ ವರದಿಗಳನ್ನು ಪಡೆದು ಫೋಟೋಕಾಪಿ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ವಿವಿಧ ಪ್ರಕಟಿತ ಗ್ರಂಥಗಳು, ಲೇಖನಗಳು, ಜೆ–ಸ್ಟೋರ್ ಅಂತರ್ಜಾಲ, ಅಪ್ರಕಟಿತ ಪಿಎಚ್.ಡಿ. ಹಾಗೂ ಎಂ.ಫಿಲ್ ಮಹಾ ಪ್ರಬಂಧಗಳು, ಇಕನೊಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿಯಲ್ಲಿನ ಪ್ರಕಟಿತ ಲೇಖನಗಳು, ವರ್ತಮಾನ ಪತ್ರಿಕೆಗಳು, ಕರ್ನಾಟಕ ಸರ್ಕಾರದ ಗೆಜೆಟೀಯರ್, ವಿವಿಧ ಸರ್ಕಾರಿ ಇಲಾಖೆಗಳ ಯೋಜನೆಗಳು, ಸಮೂಹ ಮಾಧ್ಯಮಗಳಲ್ಲಿ ಭಿತ್ತರವಾದ ಪ್ರಸಕ್ತ ಜ್ವಲಂತ ವಿಷಯಗಳ ಪರಾಮರ್ಶನ ಹಾಗೂ ಮಾರ್ಗದರ್ಶಕರ ಮಾರ್ಗದರ್ಶನದಿಂದ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸುವ ಸಂದರ್ಭಗಳಲ್ಲಿ ಸಂದರ್ಶನ, ಆಲಿಸುವಿಕೆ, ಅವಲೋಕಿಸುವಿಕೆ, ಪ್ರಶ್ನಿಸುವುದು, ಬೆಂಬಲಿಸುವುದು, ವಿವರಿಸುವುದು, ಒಪ್ಪಿಗೆ ಸೂಚಿಸುವುದು, ಖಚಿತಪಡಿಸಿಕೊಳ್ಳುವುದು ಮುಂತಾದ **ಸಂಶೋಧನೆಯ ತಂತ್ರ**ಗಳನ್ನು ಬಳಸಿಕೊಳ್ಳಲಾಗಿದೆ.

ಮಾಹಿತಿದಾರರ ಜೊತೆಗೆ ಸಂದರ್ಶನ ಮಾಡುತ್ತಿರಬೇಕಾದರೆ ನೇರ ದೃಷ್ಟಿ ಸಂಪರ್ಕ ಇಟ್ಟುಕೊಳ್ಳುವುದು, ಮಾಹಿತಿದಾರರ ಮಾತಿಗೆ ತಲೆ ಅಲ್ಲಾಡಿಸುವುದು, ದೇಹವನ್ನು ಮುಂದಕ್ಕೆ ಬಾಗಿಸುವುದು, ಅವರಂತೆ ಅವರ ಜೊತೆಗೆ ಕುಳಿತುಕೊಳ್ಳುವುದು ಮುಂತಾದ **ಸಂಶೋಧನಾ ಕೌಶಲ್ಯ**ಗಳನ್ನು ಬಳಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ದತ್ತಾಂಶಗಳನ್ನು **ಪರಿಷ್ಕರಣೆ, ಸಂಕೇತೀಕರಣ** ಮಾಡಿ ಮೈಕ್ರೋಸಾಫ್ಟ್ ಎಕ್ಸೆಲ್ ಮೂಲಕ ದತ್ತಾಂಶ ದಾಖಲು ಪಟ್ಟಿಯಲ್ಲಿ ದಾಖಲು ಮಾಡಲಾಗಿದೆ. ದತ್ತಾಂಶಗಳನ್ನು **ಪಟ್ಟೀಕರಣ** ಮಾಡಿ ಕೋಷ್ಟಕ, ಸ್ಥಂಭ ನಕಾಶೆ, ಪೈ ನಕಾಶೆಗಳ ಮೂಲಕ ಪ್ರಸ್ತುತ ಪಡಿಸಲಾಗಿದೆ. ದತ್ತಾಂಶಗಳನ್ನು ಒಟ್ಟು ಅಂಕಿ ಅಂಶಗಳು ಮತ್ತು ಶೇಕಡಾವಾರು ಅಂಶಗಳ ಮೂಲಕ ನಿರೂಪಿಸಲಾಗಿದೆ. ಮಾಹಿತಿಯ ವಿಶ್ಲೇಷಣೆಯಲ್ಲಿ ಪರಿಮಾಣಾತ್ಮಕವಾದ ಹಾಗೂ ಗುಣಾತ್ಮಕವಾದ ವಿಧಾನಗಳನ್ನು ಅನುಸರಿಸಲಾಗಿದೆ.

೧.೮. ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಎರಡನೇ ಅಧ್ಯಾಯವಾದ **'ಬೃಹತ್ ಅಭಿವೃದ್ಧಿ ಯೋಜನೆಯ ಪ್ರಕ್ರಿಯೆಗಳು'** ಇದರಲ್ಲಿ ಅಭಿವೃದ್ಧಿಯ ಸರಳ ವ್ಯಾಖ್ಯಾನ, ಬೃಹತ್ ಅಭಿವೃದ್ಧಿ ಮಾದರಿ ಬೆಳವಣಿಗೆ, ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳ ಬೆಳವಣಿಗೆ, ಸೂಪಾ ಜಲಾಶಯ ಯೋಜನೆಗೆ ಭೂಸ್ವಾಧೀನ, ಮುಳುಗಡೆ, ಸ್ಥಳಾಂತರ, ಪುನರ್ವಸತಿ ಬಗೆಗೆ ವಿಶ್ಲೇಷಿಸಲಾಗಿದೆ.

ಮೂರನೇ ಅಧ್ಯಾಯವಾದ **'ಸಂತ್ರಸ್ತ ಕುಣಬಿಯರ ಸ್ಥಿತಿಗತಿ'** ಇದರಲ್ಲಿ ಕುಣಬಿಯರ ಸ್ಥಳಾಂತರಪೂರ್ವದ, ಸ್ಥಳಾಂತರದ ಸಂದರ್ಭ, ಪುನರ್ವಸತಿ ಕೇಂದ್ರದಲ್ಲಿನ ಆರಂಭದ ಮತ್ತು ಪ್ರಸ್ತುತ ಪರಿಸ್ಥಿತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ನಾಲ್ಕನೇ ಅಧ್ಯಾಯವಾದ **'ಸಂತ್ರಸ್ತ ಕುಣಬಿಯರ ಪುನರ್ನಿರ್ಮಾಣ'** ಇದರಲ್ಲಿ ಕುಣಬಿಯರ ಹಿಂದುಳಿರುವಿಕೆಗೆ ಕಾರಣಗಳನ್ನು ಕಂಡುಹಿಡಿಯಲಾಗಿದೆ. ಅದರಿಂದಾದ ಪರಿಣಾಮಗಳನ್ನು ಅಧ್ಯಯನ ಮಾಡಲಾಗಿದೆ. ಅದಕ್ಕೆ ತಕ್ಕುದಾದ ಪರಿಹಾರಗಳನ್ನು ಸೂಚಿಸಲಾಗಿದೆ. ಸಂತ್ರಸ್ತ ಕುಣಬಿಯರ ಮನೋ-ಸಾಮಾಜಿಕ-ಆರ್ಥಿಕ ಪುನರ್ನಿರ್ಮಾಣದ ಚಿಂತನೆ ಮಾಡಿ ಮನೋ-ವೈಜ್ಞಾನಿಕ ಪುನರ್ನಿರ್ಮಾಣ, ಮನೋ-ಸಾಮಾಜಿಕ ಪುನರ್ನಿರ್ಮಾಣ ಮತ್ತು ಮನೋ-ಆರ್ಥಿಕ ಪುನರ್ನಿರ್ಮಾಣ ಎಂಬ ಮಾದರಿಗಳನ್ನು ವೃತ್ತಿಪರ ಸಮಾಜಕಾರ್ಯದ ವಿಧಾನಗಳ ಅಡಿಯಲ್ಲಿ ಪ್ರಸ್ತುತ ಪಡಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು, ಸಲಹೆಗಳು ಮತ್ತು **ಸಮಾರೋಪ**ವನ್ನು ನೀಡಲಾಗಿದೆ.

೧.೯. ಸಾಹಿತ್ಯ ಪರಾಮರ್ಶೆ

೧.೯.೧. 'ಬೃಹತ್ ಅಭಿವೃದ್ಧಿ' ಎಂಬ ಚಿಂತನಾ ಕ್ರಮದ ಉಗಮಕ್ಕೆ ಸಂಬಂಧಿಸಿದಂತೆ

Visvesvaraya M. (೧೯೫೧)[೨], 'Memories of my working life' ಎಂಬ ಕೃತಿಯಲ್ಲಿ ಆಧುನಿಕ ಬದುಕಿನಲ್ಲಿ ಕಾರ್ಖಾನೆ ಉತ್ಪಾದನಾ ವ್ಯವಸ್ಥೆಯ ಅನಿವಾರ್ಯತೆ, ವಿದ್ಯುತ್ ಉತ್ಪಾದನೆಯ ಅವಶ್ಯಕತೆ, ವಿದೇಶಿ ನೆರವು, ಬೃಹತ್ ಯೋಜನೆಗಳ ನಿರ್ಮಾಣಗಳಿಂದಾಗುವ ಪ್ರಯೋಜನ ಮತ್ತು ಅವು ಜಾರಿಯಾಗದಿದ್ದರೆ ಭವಿಷ್ಯದಲ್ಲಿ ನಿರ್ಮಾಣವಾಗಬಹುದಾದ ಬಿಕ್ಕಟ್ಟುಗಳನ್ನು ಭವಿಷ್ಯತಾವಾದದ ನೆಲೆಗಟ್ಟಿನಲ್ಲಿ ದಾಖಲಿಸಿರುತ್ತಾರೆ. ಈ ವಿಷಯದಲ್ಲಿ ದಿವಾನ್ ಶ್ರೀ. ರಂಗಚಾರ್ಲುರವರು ಹೊಂದಿದ್ದ ನಿಲುವನ್ನು ಕೂಡಾ ದಾಖಲಿಸಿರುತ್ತಾರೆ.

ಕೃಷ್ಣಮೂರ್ತಿ ಎಚ್. ಆರ್. (೨೦೧೨)[೩] 'ಅಭಿವೃದ್ಧಿ ಅರ್ಥಶಾಸ್ತ್ರ' ಎಂಬ ಪುಸ್ತಕದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ಬೃಹತ್ ಪ್ರಯತ್ನಗಳು ಹೇಗೆ ನಡೆಯಬೇಕು ಎಂಬ ಎನ್. ರೋಸೆನ್ ಸ್ಟೈನ್ ರೊಡಾನ್‌ರವರ ಬೃಹತ್ ಪ್ರಯತ್ನ ಸಿದ್ಧಾಂತವನ್ನು ದಾಖಲಿಸಿದ್ದಾರೆ. ರಾಗ್ನಾರ್ ನರ್ಕ್ಸ್‌ರವರ ಸಮತೋಲನ (ಸಮತೂಕದ) ಬೆಳವಣಿಗೆ ಸಿದ್ಧಾಂತದಲ್ಲಿ ಬಡತನದ ವಿಷ ವರ್ತುಲವನ್ನು ಭೇದಿಸಲು ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆಯೊಂದೇ ಮಾರ್ಗ ಎಂದು ವಿವರಿಸಿದ್ದನ್ನು ದಾಖಲಿಸಿದ್ದಾರೆ. ಆರ್ಥಿಕ ಅಭಿವೃದ್ಧಿಯು ಯಾವ ನಿರ್ದಿಷ್ಟ ಹಂತಗಳ ಮುಖಾಂತರ ನೆರವೇರುತ್ತವೆ. ಬೃಹತ್ ಕೈಗಾರಿಕೆಗಳ ಅಭಿವೃದ್ಧಿ ಏಕೆ ಬೇಕು ಎಂಬ ರಾಸ್ಟೋರವರ ವಿಚಾರಗಳನ್ನು ದಾಖಲಿಸಿದ್ದಾರೆ. ಬಂಡವಾಳ ಹೂಡಿಕೆಯನ್ನು ವಿವಿಧ ಕ್ಷೇತ್ರಗಳಲ್ಲಿ ಏಕಕಾಲಕ್ಕೆ

ಮಾಡುವುದರ ಬದಲು ಕೆಲವು ಆಯ್ದ ಕ್ಷೇತ್ರಗಳಲ್ಲಿ ಮಾತ್ರಾ ಭಾರೀ ಪ್ರಮಾಣದಲ್ಲಿ ಹೂಡಿಕೆ ಮಾಡುವುದರಿಂದ ಯಾವ ರೀತಿಯ ಅನುಕೂಲವಾಗುತ್ತದೆ ಎಂಬ ಎ. ಒ. ಹರ್ಷ್‌ಮನ್‌ರವರ ವಿಚಾರಗಳನ್ನು ದಾಖಲಿಸಿದ್ದಾರೆ. ರಾಷ್ಟ್ರೀಯ ಆದಾಯದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳು ಮತ್ತು ಬಡ ರಾಷ್ಟ್ರಗಳಲ್ಲಿ ಹೇಗೆ ಅಭಿವೃದ್ಧಿ ಸಾಧಿಸಬಹುದು ಎಂದು ಥಾಮಸ್ ರಾಬರ್ಟ್ ಮಾಲ್ಥಸ್‌ರವರ ವಿಚಾರಗಳನ್ನು ದಾಖಲಿಸಿದ್ದಾರೆ.

ಈ ಕೃತಿಗಳ ಅಧ್ಯಯನದಿಂದ ಅಭಿವೃದ್ಧಿಗಾಗಿ ಬೃಹತ್ ಯೋಜನೆಗಳು ಯಾಕೆ ಹುಟ್ಟಿಕೊಂಡವು ಮತ್ತು ಇದಕ್ಕೆ ಮುಖ್ಯ ಪ್ರೇರಕರು ಯಾರು ಎಂಬುದನ್ನು ತಿಳಿದುಕೊಳ್ಳಲಾಗಿದೆ. ಬಡರಾಷ್ಟ್ರಗಳು, ತೃತೀಯ ಜಗತ್ತಿನ ಅಥವಾ ಯಾವುದೇ ದೇಶ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಆರ್ಥಿಕತೆಯಲ್ಲಿ ಹೆಚ್ಚಳವಾಗಬೇಕು. ಇದನ್ನು ಕೈಗಾರಿಕಾ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಯಿಂದ ಸಾಧಿಸಬಹುದು. ಬೃಹತ್ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿದರೆ ದೇಶಕ್ಕೆ ಅಧಿಕ ಲಾಭ ಬರುತ್ತದೆ. ಇವು ಬೃಹತ್ ಯೋಜನೆಗಳ ಹಿಂದಿನ ತಾತ್ಪರ್ಯ. ಇಂತಹ ವಿಚಾರಧಾರೆಗಳಂತೆ ದೇಶದ ಆರ್ಥಿಕ ಅಭಿವೃದ್ಧಿಗಾಗಿ ಈ ರೀತಿಯ ಯೋಜನೆಗಳು ಸರಿ ಹೊಂದುತ್ತವೆ. ಆದರೆ ಅಲ್ಲಿ ವಾಸ ಮಾಡುವ ವ್ಯಕ್ತಿಯ ವೈಯಕ್ತಿಕ ಅಭಿವೃದ್ಧಿಯನ್ನು ಯಾವ ಸಿದ್ಧಾಂತಿಗಳೂ ಪರಿಗಣಿಸಿಲ್ಲ. ದೇಶ ಅಂದರೆ ಅಲ್ಲಿ ವಾಸ ಮಾಡುವ ಪ್ರತಿಯೊಂದೂ ಜನರು ಮತ್ತು ಅವರ ಪರಿಸರ ಎಂಬುದನ್ನು ಯಾರೂ ಕೂಡಾ ಗಮನಿಸಲಿಲ್ಲ. ಇಲ್ಲಿ ಅಭಿವೃದ್ಧಿಯನ್ನು ಆರ್ಥಿಕತೆಯ ನಿಟ್ಟಿನಲ್ಲಿ ಅಳೆಯಲಾಗಿದೆ ಮತ್ತು ಅಭಿವೃದ್ಧಿಗೆ ಬೃಹತ್ ಯೋಜನೆಗಳೇ ಬೇಕು ಎಂದು ಪರಿಭಾಷಿಸಲಾಗಿದೆ. ಎಲ್ಲಾ ಚಿಂತಕರು ದೇಶದ ಆರ್ಥಿಕತೆಯ ನಾಗಾಲೋಟವನ್ನೇ ಪ್ರೋತ್ಸಾಹಿಸಿದ್ದಾರೆ. ಕೈಗಾರಿಕೆಗಳು ಅಭಿವೃದ್ಧಿಯಾದರೆ ಅದಕ್ಕೆ ಹೊಂದಿಕೊಂಡಂತೆ ಎಲ್ಲಾ ಕ್ಷೇತ್ರಗಳು ಅಭಿವೃದ್ಧಿಯಾಗುತ್ತವೆ ಹಾಗೂ ದೇಶ ಕೂಡಾ ಎಂಬ ಅಂಶ ಬಿಂಬಿತವಾಗಿದೆ. ಹಾಗಾದರೆ ಭಾರತ ದೇಶದಲ್ಲಿ ಕೈಗೊಂಡಿರುವ ಸಾವಿರಾರು ಬೃಹತ್ ಯೋಜನೆಗಳಿಂದಾಗಿ ದೇಶದ ಜನರು ಅಭಿವೃದ್ಧಿ ಹೊಂದಿದ್ದಾರೆಯೇ? ಇಂತಹ ಅಭಿವೃದ್ಧಿ ಯೋಜನೆಗಳು ಜನರ ಸಂಕಷ್ಟವನ್ನು ದೂರ ಮಾಡಿವೆಯೇ? ಈ ಯೋಜನೆಗಳು ದೇಶದ ಅಭಿವೃದ್ಧಿಯ ಪರ ಇವೆಯೇ? ದೇಶದ ಬೃಹತ್ ಅಭಿವೃದ್ಧಿಯನ್ನು ಬಯಸುವ ವ್ಯವಸ್ಥೆ ದೇಶ ವಾಸಿಗಳನ್ನು ಮತ್ತು ಅವರ ಪರಿಸರವನ್ನು ಬೃಹತ್ತಾಗಿ ಬೆಳೆಸಿದೆಯೇ? ಇಂತಹ ಯೋಜನೆಗಳಿಂದ ಭಾರತ ಸಂಪದ್ಭರಿತವಾಗಿದೆಯೇ? ಅಭಿವೃದ್ಧಿ ಎಂದರೆ ಕೇವಲ ಬೃಹತ್ ಯೋಜನೆಗಳ ಅಭಿವೃದ್ಧಿಯೇ? ಯೋಜನೆಗಳು ಬೃಹತ್ತಾಗದ ಹೊರತು ಮಾನವನ ಅಭಿವೃದ್ಧಿ ಸಾಧ್ಯವಿಲ್ಲವೇ? ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಯೋಜನೆಗಳ ಪರಾಮರ್ಶೆ ಮಾಡಲಾಗಿದೆ. ಅವುಗಳಿಂದ ಉಂಟಾದ ಪರಿಸ್ಥಿತಿಗಳ ಬಗೆಗೆ ಅವಲೋಕಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಬೃಹತ್ತಾದ ಯೋಜನೆಗಳ ಈ ರೀತಿಯ ನಿಲುವನ್ನು ಸಕಾರಾತ್ಮಕವಾಗಿ

ಅಲ್ಲಗಳೆಯಲಾಗಿದೆ. ಯಾಕೆಂದರೆ ದೇಶದ ಅಭಿವೃದ್ಧಿಯ ಹೆಸರಲ್ಲಿ ಕೈಗಾರಿಕೆಗಳನ್ನು ಹಾಗೂ ಇತರೇ ಯೋಜನೆಗಳನ್ನು ಕೈಗೊಳ್ಳುವವರು ಬಂಡವಾಳಶಾಹಿಗಳು. ಸ್ವಲ್ಪ ಬಂಡವಾಳ ಹೂಡಿ ಜಾಸ್ತಿ ಲಾಭ ಗಳಿಸಬೇಕು ಎಂಬ ಮನೋಭಾವ ಉಳ್ಳವರು. ಇವರು ದೇಶದ ಜನರ ಉದ್ಧಾರ ಮಾಡಲು ಸಾಧ್ಯವೇ? ಒಟ್ಟಾರೆ ದೇಶದ ಆದಾಯ ಜಾಸ್ತಿಯಾಗಿ ಕಾಣಬಹುದೇ ಹೊರತು ಇದರಿಂದ ಸಾಮಾನ್ಯ ಜನತೆಗೆ ಪ್ರಯೋಜನವಾಗದು.

೧.೯.೨. ಅಭಿವೃದ್ಧಿ ಸಿದ್ಧಾಂತಕ್ಕೆ ಸಂಬಂಧಿಸಿದಂತೆ

ಕೃಷ್ಣ, ಜೆ. (೨೦೦೦)[೪] ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಪರಿಕಲ್ಪನೆಗಳು ಬೆಳೆದುಕೊಂಡು ಬಂದ ರೀತಿ ಮತ್ತು ಹಂತಗಳು ಮತ್ತು ಅಭಿವೃದ್ಧಿ ವ್ಯಾಖ್ಯಾನಗಳನ್ನು ದಾಖಲಿಸಿದ್ದಾರೆ.

ದೊಡ್ಡನ ಗೌಡ ಪಾಟೀಲ (೨೦೦೨)[೫] ಅಭಿವೃದ್ಧಿ ಪರಿಕಲ್ಪನೆಯ ಬಗ್ಗೆ ಮಾಹಿತಿಗಳನ್ನು ದಾಖಲಿಸಿದ್ದಾರೆ.

ಚಂದ್ರ ಪೂಜಾರಿ ಎಂ. (ಸಂ) (೨೦೦೨)[೬] ಅಭಿವೃದ್ಧಿಯ ಮಿಸ್ಸಿಂಗ್ ಲಿಂಕ್‌ಗಳ ಚರ್ಚೆಯ ಕಿರು ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಚಂದ್ರಪೂಜಾರಿ ಎಂ., (೨೦೦೪)[೭] ಜನರ ಯೋಜನೆ (ಪೀಪಲ್ಸ್ ಪ್ಲಾನ್) ಅಂದರೆ ಯೋಜನೆಯ ಆದ್ಯತೆಗಿಂತ ಯೋಜನೆ ಯಾರು ಮಾಡುತ್ತಾರೆ ಅಥವಾ ಮಾಡಬೇಕು ಎಂಬ ಅಂಶದ ಬಗೆಗೆ ಹೇಳುತ್ತಾ ಗಾಂಧೀಜಿಯ ಅಭಿವೃದ್ಧಿ ತತ್ವಗಳು, ದೇಶದಲ್ಲಿ ಅಭಿವೃದ್ಧಿ ಯೋಜನೆಗಳು ಯಾವೆಲ್ಲಾ ಹಂತವಾಗಿ ರೂಪು ತಾಳಿದವು ಎಂಬುದನ್ನು ದಾಖಲಿಸಿದ್ದಾರೆ.

ಚಂದ್ರಶೇಖರ ಟಿ. ಆರ್. (೨೦೦೭)[೮] ಅಭಿವೃದ್ಧಿಯ ಸೈದ್ಧಾಂತಿಕ ನೆಲೆಯ ಬಗ್ಗೆ ಮತ್ತು ಹೊಸ ಮಾದರಿಯ ಅಭಿವೃದ್ಧಿ ಸಿದ್ಧಾಂತ 'ಜನರನ್ನು ಒಳಗೊಳ್ಳುವ ಅಭಿವೃದ್ಧಿ' ಪರಿಕಲ್ಪನೆಯನ್ನು ಕಟ್ಟಿಕೊಟ್ಟಿದ್ದಾರೆ.

ಚಂದ್ರಶೇಖರ ಟಿ. ಆರ್. ಪ್ರಭಾಕರ ಎ.ಎಸ್. (ಸಂ) (೨೦೦೮)[೯] ಅಭಿವೃದ್ಧಿ ಮೀಮಾಂಸೆಯು ಯಾವ ಹಂತಗಳಲ್ಲಿ ಬೆಳೆದುಕೊಂಡು ಬಂದಿತು ಎಂಬ ವಿಷಯದ ಬಗ್ಗೆ ದಾಖಲಿಸಿದ್ದಾರೆ.

ಚಂದ್ರ ಪೂಜಾರಿ ಎಂ., ಪ್ರಭಾಕರ ಎ.ಎಸ್. (ಸಂ) (೨೦೦೮)[೧೦] ಭಾರತ ದೇಶದ ಅಭಿವೃದ್ಧಿ ಪಥದ ಕಿರು ಪರಿಚಯವನ್ನು ಮಾಡಿದ್ದಾರೆ.

ಚಂದ್ರಶೇಖರ ಟಿ. ಆರ್. (೨೦೧೦)[೧೧] ಅಭಿವೃದ್ಧಿಯ ಬೇರೆ ಬೇರೆ ಆಯಾಮಗಳ ಬಗ್ಗೆ ಒಂದಿಷ್ಟು ಮಾಹಿತಿ ದಾಖಲಿಸಿದ್ದಾರೆ.

ಚಂದ್ರ ಪೂಜಾರಿ ಎಂ. (೨೦೧೦)[೧೨] ವಿಶ್ವ ಸಮರದ ನಂತರದ ದಿನಗಳಲ್ಲಿ ವಿಶ್ವಮಟ್ಟದಲ್ಲಿ ಬೆಳೆದುಕೊಂಡು ಬಂದ ಅಭಿವೃದ್ಧಿಯ ಮಾದರಿಗಳ ಬಗ್ಗೆ ಮಾಹಿತಿ ನೀಡಿ ಸ್ವಾತಂತ್ರ್ಯೋತ್ತರ ಭಾರತ ದೇಶವು ತನ್ನ ದೇಶದ ವೇಗದ ಅಭಿವೃದ್ಧಿಗಾಗಿ

ಅಳವಡಿಸಿಕೊಂಡಿರುವ ಅಭಿವೃದ್ಧಿ ಮಾದರಿ ಮತ್ತು ಇದರ ಅಳವಡಿಕೆಯ ಪ್ರಕ್ರಿಯೆಯ ಬಗ್ಗೆ ದಾಖಲಿಸಿದ್ದಾರೆ.

ನಾಗೇಶ ಹೆಗಡೆ, (೨೦೧೦)[೧೩] ಅಭಿವೃದ್ಧಿಯ ನೈಜತೆಗೆ, ಅಭಿವೃದ್ಧಿಯ ಫಲಿತಗಳಿಗೆ ಸಂಬಂಧಿಸಿದಂತೆ ಕೆಲವು ವಿಚಾರಗಳನ್ನು ದಾಖಲಿಸಿದ್ದಾರೆ.

ತಿರುಪತಿ ನಾಯಕ್, (೨೦೧೦)[೧೪] ಭಾರತ ಪ್ರಗತಿ ಹೊಂದುತ್ತಿರುವ ದೇಶವೆಂದು ನಮಗೆ ಭ್ರಮೆ ಮೂಡಿಸಲಾಗುತ್ತಿದೆ. ಆದರೆ ದೇಶದ ನಿಜವಾದ ಪ್ರಗತಿ ಎಂದರೆ ಏನು? ಇಡೀ ವಿಶ್ವದ ಪರಿಚಯವಿದ್ದ ನೆಹರು ಅವರು, ಆರ್ಥಿಕ ನೀತಿ ರೂಪಿಸುವ ಸಂದರ್ಭದಲ್ಲಿ ಗಾಂಧೀಜಿಯ ಗ್ರಾಮ ಸ್ವರಾಜ್ಯ ಅಭಿಪ್ರಾಯಕ್ಕೆ ಮನ್ನಣೆ ನೀಡಲಿಲ್ಲ. ಹೀಗೆ ಸರ್ಕಾರದ ಅಭಿವೃದ್ಧಿ ಧೋರಣೆಯನ್ನು ಖಂಡಿಸಿ ವಾಸ್ತವ ಅಭಿವೃದ್ಧಿಯೆಂದರೆ ಹೇಗಿರಬೇಕು ಎಂಬ ವಿಷಯವನ್ನು ಮಂಡಿಸಿದ್ದಾರೆ.

ಕೃಷ್ಣಮೂರ್ತಿ. ಎಚ್. ಆರ್., (೨೦೧೨)[೧೫] ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿ ಎಂಬ ಪರಿಕಲ್ಪನೆ ವಿಶ್ವಮಟ್ಟದಲ್ಲಿ ಬೆಳೆದುಕೊಂಡು ಬಂದ ಬಗೆಯನ್ನು ದಾಖಲಿಸಿರುತ್ತಾರೆ. ಈ ಪುಸ್ತಕದ ಅಧ್ಯಾಯಗಳಲ್ಲಿ ಅಭಿವೃದ್ಧಿ ಅರ್ಥಶಾಸ್ತ್ರದ ವಿವರಣೆ ಮತ್ತು ಮೂಲ ಅಭಿವೃದ್ಧಿ ಸಿದ್ಧಾಂತಗಳು ಮತ್ತು ಆಧುನಿಕ ಅಭಿವೃದ್ಧಿ ಸಿದ್ಧಾಂತಗಳ ಬಗ್ಗೆ ವಿವರವಾಗಿ ದಾಖಲಿಸಿರುತ್ತಾರೆ.

ಚಂದ್ರ ಪೂಜಾರಿ ಎಂ. (೨೦೧೪)[೧೬] ಅಭಿವೃದ್ಧಿಗೆ ಸಂಬಂಧಿಸಿದಂತೆ, ಅಭಿವೃದ್ಧಿ ಯೋಜನೆಗಳ ತಾತ್ವಿಕತೆ ಮತ್ತು ಅವುಗಳ ಪರಿಣಾಮಗಳ ಬಗ್ಗೆ ವಿಮರ್ಶಾತ್ಮಕವಾಗಿ ದಾಖಲಿಸಿದ್ದಾರೆ.

ಈ ಎಲ್ಲಾ ಪುಸ್ತಕಗಳನ್ನು ಪರಾಮರ್ಶಿಸಿದಾಗ ಅಭಿವೃದ್ಧಿಯ ಪರಿಕಲ್ಪನೆಯನ್ನು ಸಮಗ್ರವಾಗಿ ಪುಷ್ಟೀಕರಿಸದೇ ಇರುವುದು ಒಂದು ಮುಖ್ಯ ಅಂತರ ಎಂಬುದನ್ನು ಕಂಡುಕೊಳ್ಳಲಾಗಿದೆ. ಅಭಿವೃದ್ಧಿ ಎಂದರೆ ಆರ್ಥಿಕ ಅಭಿವೃದ್ಧಿ, ಮಾನವ ಅಭಿವೃದ್ಧಿ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಎಂದು ಎಲ್ಲಾ ಅಧ್ಯಯನಗಳಲ್ಲಿ ಪರಿಭಾವಿಸಲಾಗಿದೆ. ಈ ರೀತಿಯ ಚಿಂತನೆಗಳನ್ನು, ಬರಹಗಳನ್ನು ಆನುಷಂಗಿಕ ಮೂಲಗಳ ಅಧ್ಯಯನದಿಂದ ಮಾಡಲಾಗಿದೆ. 'ಪ್ರಗತಿಪರ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳಿಂದ ದೇಶ ಉದ್ಧಾರವಾಗುತ್ತದೆ' ಎಂದು ಕಾರ್ಲ್‌ಮಾರ್ಕ್ಸ್ ೧೮೪೮ರಲ್ಲೇ ಹೇಳಿದ್ದಾರೆ. ವಿಶ್ವದ ಪ್ರಖ್ಯಾತ ಆರ್ಥಿಕ ತಜ್ಞರು ಅಭಿವೃದ್ಧಿಯನ್ನು ಯಾವ ತರಹ ಪರಿಭಾವಿಸಿಕೊಂಡು ಬಂದಿದ್ದಾರೆಯೋ ಅದನ್ನೇ ವಿವರಿಸಿ ಬರೆದದ್ದು ಈ ಎಲ್ಲಾ ಅಧ್ಯಯನಗಳಲ್ಲಿ ಕಂಡುಬರುವ ಮುಖ್ಯ ಅತಿವ್ಯಾಪನೆ ಎಂದೆನಿಸುವುದು. ಈ ಅಧ್ಯಯನಗಳ ಪ್ರಮುಖ ಫಲಿತಗಳೆಂದರೆ 'ಅಭಿವೃದ್ಧಿ' ಎಂಬ ಪದದ ಪರಿಕಲ್ಪನೆ ಆಯಾಯ ದೇಶ ಹಾಗೂ ವಿದ್ವಾಂಸರುಗಳಿಗೆ ಸಂಬಂಧಿಸಿದಂತೆ ನಿರಂತರ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಆದರೆ ಸಾಮಾನ್ಯವಾಗಿ ಅಭಿವೃದ್ಧಿ ಎಂದರೆ 'ಆರ್ಥಿಕ ಅಭಿವೃದ್ಧಿ' ಅಥವಾ 'ಒಟ್ಟು ತಲಾ ಆದಾಯದ ಪ್ರಗತಿ'. ಒಂದು ದೇಶದ ಆರ್ಥಿಕತೆ

ಉತ್ತಮವಾಗಿದ್ದರೆ ಆ ದೇಶ ಸದೃಢವಾಗಿರುತ್ತದೆ ಎಂದು ಪರಿಭಾವಿಸಿಕೊಳ್ಳಲಾಗಿತ್ತು. ಈ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದಕ್ಕೋಸ್ಕರ ಅರ್ಥಶಾಸ್ತ್ರಜ್ಞರು ಅಭಿವೃದ್ಧಿಯನ್ನು ಯಾವ ರೀತಿಯಾಗಿ ನಿರ್ವಚಿಸಿರುತ್ತಾರೋ ಅದಕ್ಕೆ ತಕ್ಕಂತೆ ದೇಶದಲ್ಲಿ ಅಭಿವೃದ್ಧಿ ಹೆಸರಲ್ಲಿ, ರಾಷ್ಟ್ರದ ಹೆಸರಲ್ಲಿ ಯೋಜನೆಗಳನ್ನು ಹಮ್ಮಿಕೊಂಡು ಬರಲಾಗಿತ್ತು. ಅಭಿವೃದ್ಧಿಗೆ ಸಂಬಂಧಿಸಿದಂತೆ ಚಿಂತನೆಗಳು ಕಾಲಕಾಲಕ್ಕೆ ಬದಲಾಗಿಕೊಂಡು ಬಂದು ಇದೀಗ ಅಭಿವೃದ್ಧಿ ಎಂದರೆ ಮಾನವ ಅಭಿವೃದ್ಧಿ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಎಂಬ ನಿಲುವಿಗೆ ತಲುಪಿದೆ.

ಇಲ್ಲಿ ಪ್ರತಿವಾದ ಏನೆಂದರೆ ಮಾನವ ಅಭಿವೃದ್ಧಿ ಚಿಂತನೆಗಳು ಯೋಜನೆಗಳ ಪರ್ವಕಾಲದ ವರ್ಷಗಳಲ್ಲಿ ಕಾರ್ಯಪ್ರವೃತ್ತಗೊಂಡಿದ್ದರೆ ನೆಲೆ ಕಳೆದುಕೊಂಡವರಿಗೆ, ಯೋಜನಾ ಬಾಧಿತರಿಗೆ ಅನುಕೂಲವಾಗುತ್ತಿತ್ತು. ಆ ದಿನಗಳಲ್ಲಿ ದೇಶದ ಒಟ್ಟಾರೆ ಆರ್ಥಿಕತೆಗೆ ಹೆಚ್ಚು ಗಮನ ನೀಡಿ, ಸರಿ ಬಾರದ್ದನ್ನೆಲ್ಲಾ ಅಳಿಸಿ ಪುನರ್ವಸತಿ ಕಡೆಗೆ ಗಮನ ಕೊಡದೇ ಇರುವುದರಿಂದ ಸಮಾಜದಲ್ಲಿ, ಜನ ಜೀವನದಲ್ಲಿ ಸಾಕಷ್ಟು ಏರುಪೇರುಗಳು ಜರುಗಿದೆ. ಈಗಿನ ಹೊಸ ಅಭಿವೃದ್ಧಿ ಚಿಂತನೆಗಳಿಂದ ಆ ದಿನಗಳಲ್ಲಿ ಜೀವನ ಕಳೆದುಕೊಂಡವರಿಗೆ ನ್ಯಾಯ ದೊರಕಿಸಿ ಕೊಡಲು ಸಾಧ್ಯವೇ? ಮಿಲಿಯಗಟ್ಟಲೆ ಜನರು ದಶಕಗಳನ್ನು ಸ್ಥಳಾಂತರದ ನೋವಲ್ಲಿ ಕಳೆದುಕೊಂಡ ಸುಖ ಸಂತೋಷವನ್ನು ಬದಲಾದ ಅಭಿವೃದ್ಧಿ ಚಿಂತನೆಗಳಿಂದ ತುಂಬಲು ಸಾಧ್ಯವೇ? ಅದಕ್ಕಿಂತಲೂ ಮಿಗಿಲಾಗಿ ಈ ಚಿಂತನೆಗಳು ಬಡ ಜನರನ್ನು ತಲುಪಿವೆಯೇ? ಇಂತಹ ಅಭಿವೃದ್ಧಿ ಚಿಂತನೆಗಳು, ಬರಹಗಳು, ಸಿದ್ಧಾಂತಗಳ ಫಲವಾಗಿ ಮೂಡಿಬಂದ ಹೊಸ ರೀತಿಯ ಅಭಿವೃದ್ಧಿ ಹಾದಿ ಸಂತ್ರಸ್ತರನ್ನು ತಲುಪಿದೆಯೇ? ಯೋಜನಾ ಬಾಧಿತರ ಜೀವನದ ಕಷ್ಟದ ದಿನಗಳನ್ನು ದೂರ ಮಾಡಿವೆಯೇ? ಇಂತಹ ಅಭಿವೃದ್ಧಿ ಚಿಂತನೆಗಳಿಂದ, ಅದರಿಂದ ಪ್ರೇರಿತವಾದ ಯೋಜನೆಗಳಿಂದ ಜನರ ಜೀವನಕ್ಕೆ ಆಧಾರ, ತ್ಯಾಗಕ್ಕೆ ಫಲ, ನ್ಯಾಯ, ಮಾನ-ಸಮ್ಮಾನ ದೊರಕಿದೆಯೇ? ಆಗಿನ ಮಾನಸಿಕ ವೇದನೆಗೆ ಈಗಿನ ಚಿಂತನೆಗಳು, ಯೋಜನೆಗಳು ಸಮಾಧಾನ ನೀಡಬಲ್ಲವೇ? ಉಪಶಾಮಕವಾಗಬಲ್ಲವೇ? ಈ ಪ್ರಶ್ನೆಗಳನ್ನು ಎತ್ತಿಕೊಂಡು ಅದರ ಆಧಾರದಲ್ಲಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. ಇವು ನೆಲೆ ಕಳೆದುಕೊಂಡವರಿಗೆ ಅವರ ಜೀವನವನ್ನು ಮತ್ತೆ ಕಟ್ಟಿಕೊಡಲಾರವು. ಅಲ್ಲದೆ ಅಭಿವೃದ್ಧಿಯ ಚಿಂತನೆಗಳು ತುಂಬಾ ತಡವಾಗಿ ರೂಪುಗೊಂಡವು.

ಮಾನವ ಅಭಿವೃದ್ಧಿ ಎಂದರೆ ಅವನ ಮನೋವೈಜ್ಞಾನಿಕ ಅಭಿವೃದ್ಧಿ. ಇದು ಅವನ ಎಲ್ಲಾ ಅಭಿವೃದ್ಧಿಗೂ ಮೂಲಬೇರು. ಆರ್ಥಿಕ ಅಭಿವೃದ್ಧಿ, ಮಾನವ ಅಭಿವೃದ್ಧಿ, ಸ್ವಾತಂತ್ರ್ಯವಾಗಿ ಅಭಿವೃದ್ಧಿ, ಜನರನ್ನು ಒಳಗೊಳ್ಳುವ ಅಭಿವೃದ್ಧಿ ಹೀಗೆ ಅಭಿವೃದ್ಧಿ ಚಿಂತನೆಗಳು ವ್ಯಾಪಕವಾಗಿ ಹಾಗೂ ವೇಗವಾಗಿ ಬೆಳೆದುಕೊಂಡು ಬಂದರೂ ದೇಶದ ಅಭಿವೃದ್ಧಿಯೆಂದರೆ ಪ್ರತಿಯೊಬ್ಬ ವ್ಯಕ್ತಿಯ ಮನೋವೈಜ್ಞಾನಿಕ ಅಭಿವೃದ್ಧಿ ಎಂಬ ಚಿಂತನೆಗಳು ನಡೆದಿಲ್ಲ. ಹಾಗಾಗಿ ಅಭಿವೃದ್ಧಿಯನ್ನು 'ಮನೋವೈಜ್ಞಾನಿಕ ಅಭಿವೃದ್ಧಿ ಸಿದ್ಧಾಂತ'ದ ಅಡಿಯಲ್ಲಿ ವಿಶ್ಲೇಷಿಸಲಾಗಿದೆ. ಇದರಿಂದ ಕಂಡುಕೊಂಡ ಅಂಶಗಳ

ಆಧಾರದಲ್ಲಿ ಪುನರ್ವಸತಿಯನ್ನು 'ವೃತ್ತಿಪರ ಸಮಾಜಕಾರ್ಯದ ವಿಧಾನಗಳ ಅಡಿಯಲ್ಲಿ ಹೇಗೆ ಮಾಡಬೇಕು, ಸಮಗ್ರ ಅಭಿವೃದ್ಧಿಯನ್ನು ಹೇಗೆ ಕಾಣಬೇಕು ಎಂಬುದನ್ನು ವಿಶ್ಲೇಷಿಸಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಮನೋ-ಸಾಮಾಜಿಕ ಅಭಿವೃದ್ಧಿಯನ್ನು ವ್ಯವಸ್ಥಿತವಾಗಿ ಮಾಡುವ ಉದ್ಧೇಶವಿದ್ದರೆ **"ದೇಶದ ಬೃಹತ್ ಅಭಿವೃದ್ಧಿಗೆ ಬೃಹತ್ತಾದ ಯೋಜನೆಗಳ ಬದಲಾಗಿ ಪ್ರತಿಯೊಬ್ಬ ವ್ಯಕ್ತಿಯ ಮನೋಧೋರಣೆ ಮತ್ತು ವ್ಯಕ್ತಿತ್ವವನ್ನು ಬೃಹತ್ತಾಗಿ ಬೆಳೆಸಬೇಕು"** ಎಂಬುದೇ ಈ 'ಬೃಹತ್ ಅಭಿವೃದ್ಧಿ ಯೋಜನೆ ಮತ್ತು ಪುನರ್ವಸತಿ' ಬಗೆಗಿನ ಅಧ್ಯಯನದ ಮುಖ್ಯ ಸಿದ್ಧಾಂತ ಎಂದು ಈ ಮಹಾಪ್ರಬಂಧದಲ್ಲಿ ಮಂಡಿಸಲಾಗಿದೆ.

೧.೯.೩. ಬೃಹತ್ ಅಣೆಕಟ್ಟುಗಳ ಉಗಮ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ

Parasuraman S. and Sohini Sengupta, (೨೦೦೧)[೧೭] ಪ್ರಪಂಚದಲ್ಲಿನ ದೊಡ್ಡ ಅಣೆಕಟ್ಟುಗಳ ಅಭಿಯಾನ ಯಾವ ರೀತಿ ಬೆಳೆದು ಬಂದಿತು ಎಂಬ ವಿಷಯವಾಗಿ ಮತ್ತು ಪ್ರಚಂಚದಲ್ಲಿನ ಅಣೆಕಟ್ಟುಗಳ ಮಾಹಿತಿಯನ್ನು ನೀಡಿರುತ್ತಾರೆ.

Satyajit K. Singh, (೧೯೯೦)[೧೮] ಭಾರತದಲ್ಲಿ ಬೃಹತ್ ಅಣೆಕಟ್ಟುಗಳು ಯಾವ ರೀತಿಯಾಗಿ ಹುಟ್ಟಿಕೊಂಡವು, ನೀರಾವರಿಯಲ್ಲಿ ಕಡಿಮೆ ಜ್ಞಾನವನ್ನು ಹೊಂದಿದ್ದ ಬ್ರಿಟೀಷರು ನಂತರದ ದಿನಗಳಲ್ಲಿ ಇದಕ್ಕೆ ಯಾವ ರೀತಿಯ ಪ್ರೋತ್ಸಾಹ ನೀಡಿ ಅದರ ಪ್ರಯೋಜನವನ್ನು ಭಾರತೀಯರಿಂದ ಹೇಗೆ ದೋಚಿಕೊಂಡರು ಎಂಬುದರ ಬಗ್ಗೆ ದಾಖಲಿಸಿರುತ್ತಾರೆ.

Ramaswamy R. Iyer, (೧೯೮೯)[೧೯] ದೊಡ್ಡ ಅಣೆಕಟ್ಟುಗಳ ಪ್ರಯೋಜನದ ಬಗ್ಗೆ ಚರ್ಚಿಸುತ್ತಾ ಸಣ್ಣ ಸಣ್ಣ ಅಣೆಕಟ್ಟುಗಳು ಪ್ರಯೋಜನಕಾರಿಯಾಗವು ಹಾಗೂ ಇವು ಪರ್ಯಾಯವಲ್ಲ ಎಂದು ಹೇಳಿದ್ದಾರೆ. ಅಂತೆಯೇ ಬೃಹತ್ ಅಣೆಕಟ್ಟುಗಳು ಹೇಗೆ ಪ್ರಯೋಜನಕಾರಿಯಾಗಿವೆ ಎಂಬುದನ್ನು ಮನವರಿಕೆ ಮಾಡಿದ್ದಾರೆ.

Pradip Baijal and P. K. Singh, (೨೦೦೦)[೨೦] ಬೃಹತ್ ಅಣೆಕಟ್ಟುಗಳು ಯಾಕೆ ಅವಶ್ಯಕವಾಗಿದೆ ಎಂದು ಹೇಳುತ್ತಾ, ಸುದೀರ್ಘ ಸಮತೋಲನವನ್ನು ಕಾಪಾಡಿಕೊಳ್ಳಲು ಅಭಿವೃದ್ಧಿಯೊಂದಿಗೆ ಪ್ರಸಕ್ತ ಅವಶ್ಯಕತೆಗಳನ್ನು ಸರಿದೂಗಿಸಿಕೊಳ್ಳಬೇಕು ಎಂದು ದಾಖಲಿಸಿದ್ದಾರೆ.

Kader Asmal, (೨೦೦೧)[೨೧] ನೀರಾವರಿ ಹಾಗೂ ವಿದ್ಯುತ್ ಉದ್ಧೇಶಗಳಿಗಾಗಿ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸುವುದು ಒಂದು ಹಳೆಯ ಪದ್ಧತಿ ಹಾಗೂ ಆಲೋಚನೆ. ದೇಶಗಳು ಇದರಿಂದ ನಿರ್ಗಮಿಸಬೇಕು. ಬೃಹತ್ ಅಣೆಕಟ್ಟುಗಳ ನಿರ್ಮಾಣ ಎಂಬ ಪರಿಕಲ್ಪನೆ ಅರ್ಥವಿಲ್ಲದೆ ಮಾಮೂಲು ಮಾತಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಈ ಎಲ್ಲಾ ಲೇಖನಗಳ ಮತ್ತು ಪ್ರಬಂಧಗಳ ಅಧ್ಯಯನದಿಂದ ಬೃಹತ್ ಅಣೆಕಟ್ಟು ಯೋಜನೆಗಳಿಗೆ ಪರ ಮತ್ತು ವಿರೋಧ ವ್ಯಕ್ತವಾಗಿರುವುದು ಕಂಡು ಬರುತ್ತದೆ. ಅಣೆಕಟ್ಟುಗಳಿಂದ ನಿಜವಾಗಿಯೂ ಜನರಿಗೆ ಪ್ರಯೋಜನವಾಗಿದೆಯೇ? ಒಂದು ಅಣೆಕಟ್ಟು ತನಗಾಗಿ ಜಾಗ ನೀಡಿದ ಜನರ ನೀರಿನ ಬವಣೆಯನ್ನು ತಣಿಸಿದೆಯೇ? ಅವರ ಬಾಳಿಗೆ ಬೆಳಕು ನೀಡಿದೆಯೇ? ಪರಿಸರಕ್ಕೆ ಅಂದ ಜೀವನಕ್ಕೆ ಆನಂದವನ್ನು ಕೊಟ್ಟಿದೆಯೇ? ಹಸಿವನ್ನು ಇಂಗಿಸುವ ಅವರ ಜಮೀನನ್ನು ಹಸನು ಮಾಡಿದೆಯೇ? ಪೂರಕ ಉದ್ಯೋಗವನ್ನು ದೊರಕಿಸಿದೆಯೇ? ಇಂತಹ ಬೃಹತ್ ಅಣೆಕಟ್ಟುಗಳಿಂದ ಮಾತ್ರವೇ ಮನುಷ್ಯ ತನ್ನ ಜೀವನಕ್ಕೆ ಬೇಕಾದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವೇ? ಇದರ ಹೊರತಾಗಿ ನಾವೇನು ಮಾಡಲು ಸಾಧ್ಯವಿಲ್ಲವೇ? ಅಣೆಕಟ್ಟುಗಳು ನಿಜವಾಗಿಯೂ ಭಾರತದ ದೇವಾಲಯಗಳೇ? ಅಭಿವೃದ್ಧಿಯ ಸಂಕೇತಗಳೇ? ಈ ರೀತಿಯಾದ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಉತ್ತರವನ್ನು ಕಂಡುಕೊಳ್ಳಲಾಗಿದೆ.

೧.೯.೪. ಸ್ಥಳಾಂತರಕ್ಕೆ ಸಂಬಂಧಿಸಿದಂತೆ

ಭೂಸ್ವಾಧೀನ ಕಾಯಿದೆ ೧೮೯೪[೨೨] ಸರ್ಕಾರ ಯಾವ ಉದ್ದೇಶಗಳಿಗಾಗಿ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಎಂಬುದನ್ನು ಹೇಳಿದೆ.

ಚೈತನ್ಯ ಪ್ರಕಾಶನ, ಧಾರವಾಡ ಭೂಸ್ವಾಧೀನ (ಕರ್ನಾಟಕ ವ್ಯಾಪ್ತಿ ಮತ್ತು ತಿದ್ದುಪಡಿ) ಅಧಿನಿಯಮ, ೧೯೬೧[೨೩] ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಯಾವ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದು ಎಂಬುದು ವ್ಯಕ್ತವಾಗಿದೆ.

ಭೂಸ್ವಾಧೀನ (ತಿದ್ದುಪಡಿ) ಕಾಯಿದೆ ೧೯೮೪[೨೪] ಸಂತ್ರಸ್ತರಿಗೆ ಒದಗಿಸಲಾಗಿರುವ ಪರಿಹಾರದ ಕುರಿತು ಹೇಳಲಾಗಿದೆ.

ಭೂಸ್ವಾಧೀನ ತಿದ್ದುಪಡಿ ಬಿಲ್ ೧೯೯೮[೨೫] ಇದರಲ್ಲಿ ಅಭಿವೃದ್ಧಿ ಯೋಜನೆಗಳಿಗಾಗಿ ಭೂಸ್ವಾಧೀನತೆಯ ಬಗ್ಗೆ ವಿವರಿಸಲಾಗಿದೆ.

ಭೂಸ್ವಾಧೀನದಲ್ಲಿ ಉಚಿತ ಪರಿಹಾರ ಮತ್ತು ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕು ಅಧಿನಿಯಮ, ೨೦೧೩[೨೬] ಇದರಲ್ಲಿ ಭೂಸ್ವಾಧೀನತೆ ಮತ್ತು ಪುನರ್ವಸತಿಯ ಸೌಲಭ್ಯಗಳ ಬಗ್ಗೆ ವಿವರಿಸಲಾಗಿದೆ.

Kent H. Redford and Eva Fearn (Ed), (೨೦೦೭)[೨೭] ಸ್ಥಳಾಂತರ ಎಂದರೇನು? ಇದರ ಸ್ವರೂಪ, ವ್ಯಾಪ್ತಿ ಮತ್ತು ಪರಿಣಾಮಗಳನ್ನು ದಾಖಲಿಸಿದ್ದಾರೆ.

Mahendra P Lama, (೨೦೦೦)[೨೮] ಭಾರತದಲ್ಲಿ ಸ್ಥಳಾಂತರದ ನಾಲ್ಕು ದೊಡ್ಡ ಪ್ರಮಾಣದ ವಿಧಗಳು, ಸ್ಥಳಾಂತರಕ್ಕೆ ಕಾರಣಗಳು ಮತ್ತು ಇದರಿಂದ ಉಂಟಾದ

ತೊಂದರೆಗಳನ್ನು ದಾಖಲಿಸಿದ್ದಾರೆ. ಪುನರ್ವಸತಿ ಯೋಜನೆಗಳನ್ನು ಅನುಷ್ಠಾನ ಮಾಡಬೇಕಾದ ವಿಧಾನಗಳನ್ನು ಹೇಳಿದ್ದಾರೆ.

Biswaranjan Mohanty, (೨೦೦೫)[೨೯] ೧೯೫೧-೯೦ರವರೆಗೆ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರಗೊಂಡವರ ಅಂದಾಜು ಅಂಕಿ ಅಂಶವನ್ನು ಲೆಕ್ಕ ಹಾಕಿದ್ದಾರೆ. ಅಭಿವೃದ್ಧಿ ಯೋಜನೆಗಳಿಂದ ಅವರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

NMP Verma, (೨೦೧೦)[೩೦] ರೈತಾಪಿ ಜನರು ಭೂಸ್ವಾಧೀನ ಮತ್ತು ಭೂ ಪರಿವರ್ತನೆಯನ್ನು ಯಾಕೆ ವಿರೋಧಿಸುತ್ತಾರೆ ಎಂಬುದನ್ನು ಇವರು ದಾಖಲಿಸಿದ್ದಾರೆ.

Smitu Kothari, (೧೯೯೬)[೩೧] ಭಾರತದ ಬೇರೆ ಬೇರೆ ಬೃಹತ್ ಅಭಿವೃದ್ಧಿ ಯೋಜನೆಗಳು ಹಾಗೂ ಅವುಗಳಿಂದ ಉಂಟಾದ ಸ್ಥಳಾಂತರದ ಬಗ್ಗೆ ದಾಖಲಿಸಿದ್ದಾರೆ. ಸ್ಥಳಾಂತರದಿಂದಾಗಿ ಮಹಿಳೆಯರಿಗೆ, ಮಕ್ಕಳಿಗೆ ಯಾವ ರೀತಿಯಾಗಿ ತೊಂದರೆಯಾಗಿದೆ ಎಂಬುದನ್ನು ಉದಾಹರಣೆ ಸಹಿತ ದಾಖಲಿಸಿದ್ದಾರೆ.

Sharma R. N. & Shashi. R. Singh, (೨೦೦೯)[೩೨] ದೇಶದಲ್ಲಿನ ಬೃಹತ್ ಯೋಜನೆಗಳು ಹಾಗೂ ಹೋರಾಟದ ಬಗೆಗೆ ವಿವರಿಸಿದ್ದಾರೆ. ಭಾರತದ ಶಕ್ತಿಯ ರಾಜಧಾನಿಯಾದ ಸಿಂಗ್ರೌಲಿಯ ಹಲವಾರು ಯೋಜನೆಗಳ ವಿವರ ನೀಡಿ ಆ ಯೋಜನೆಗಳಿಂದಾಗಿ ಮತ್ತೆ ಮತ್ತೆ ಸ್ಥಳಾಂತರಕ್ಕೆ ಒಳಗಾದ ಬುಡಕಟ್ಟು ಸಮುದಾಯದ ಅಂಕಿ ಅಂಶವನ್ನು ದಾಖಲಿಸಿರುತ್ತಾರೆ.

Kate Hoshour and Jennifer Kalafut, (೨೦೧೦)[೩೩] ಅಭಿವೃದ್ಧಿ ಪ್ರೇರಿತ ಸ್ಥಳಾಂತರ ಮತ್ತು ಪುನರ್‌ನೆಲೆ ಎಂಬುದು ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿರುವ ಬಿಕ್ಕಟ್ಟು ಎಂದು ದಾಖಲಿಸಿದ್ದಾರೆ. ವಿಶ್ವದಲ್ಲಿ ಪ್ರತೀ ವರ್ಷವೂ ಮಿಲಿಯಗಟ್ಟಲೆ ಜನರು ಬೃಹತ್ ಅಭಿವೃದ್ಧಿ ಯೋಜನೆಗಳಿಂದಾಗಿ ಒತ್ತಾಯ ಪೂರ್ವಕವಾಗಿ ಎಬ್ಬಿಸಲ್ಪಟ್ಟು ಅಂತರಾಷ್ಟ್ರೀಯ ಕಾನೂನು ಮಾನದಂಡದಿಂದ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ ಎಂಬ ಮಾಹಿತಿಯನ್ನು ದಾಖಲಿಸಿದ್ದಾರೆ.

Amrita patwardhan, (೨೦೦೯)[೩೪] ೧೯೫೦-೯೦ರವರೆಗೆ ಅಣೆಕಟ್ಟುಗಳಿಂದ ಸ್ಥಳಾಂತರವಾದ ಬುಡಕಟ್ಟು ಹಾಗೂ ಬುಡಕಟ್ಟೇತರ ಸಮುದಾಯದ ಮಾಹಿತಿ ಕಲೆ ಹಾಕಿದ್ದಾರೆ. ಅಭಿವೃದ್ಧಿಯ ತತ್ವಗಳು, ಬೃಹತ್ ಅಣೆಕಟ್ಟುಗಳಿಂದ ಮಾನವ ಜೀವನದ ಮೇಲಾಗುವ ಪರಿಣಾಮ, ಸ್ಥಳಾಂತರದ ರೀತಿ ಹಾಗೂ ನೀತಿ, ಪರಿಹಾರ ಧನ, ಸ್ಥಳಾಂತರ ಮೊದಲು ಮತ್ತು ನಂತರ ನಿರಾಶ್ರಿತರ ಸಾಮಾಜಿಕ ಜೀವನ ಮಟ್ಟ, ಆರೋಗ್ಯ, ಸಾಂಸ್ಕೃತಿಕ, ಸಾಮಾಜಿಕ ಜೀವನದ ಮೇಲಿನ ಪರಿಣಾಮ, ಅಂಚಿನ ಸಮುದಾಯಗಳಾದ ಮಹಿಳೆ, ಮಕ್ಕಳು, ವಿಧವೆ, ವೃದ್ಧರು ಇವರ ಮೇಲೆ ಸ್ಥಳಾಂತರ ಯಾವ ರೀತಿಯ ಪರಿಣಾಮ ಬೀರಿದೆ ಎಂಬುದನ್ನು ದಾಖಲಿಸಿದ್ದಾರೆ.

Vedavathy,S., (೨೦೧೦)[೩೫] ಆಂಧ್ರಪ್ರದೇಶದ ಯಾನಾಡಿ ಬುಡಕಟ್ಟುಗಳ ಸ್ಥಳಾಂತರದಿಂದಾಗಿ ಅವರ ಪಾರಂಪರಿಕ ಜ್ಞಾನ, ಸಾಂಪ್ರದಾಯಿಕ ಕಾನೂನು ಹಾಗೂ ಅವರ ಅರಣ್ಯಗಳನ್ನು ಕಾಪಾಡಿಕೊಳ್ಳುವಲ್ಲಿ ತೊಂದರೆಯಾದ ವಿಚಾರಗಳನ್ನು ದಾಖಲಿಸಿದ್ದಾರೆ.

Norvy Paul (Ed.) (೨೦೧೪)[೩೬] ನೇಪಾಳ, ಶ್ರೀಲಂಕಾ ಹಾಗೂ ಭಾರತದ ಲೇಖಕರು ಬರೆದಂತಹ ಅಭಿವೃದ್ಧಿ ಹಾಗೂ ಸ್ಥಳಾಂತರಕ್ಕೆ ಸಂಬಂಧಪಟ್ಟಂತಹ ಲೇಖನಗಳಿವೆ. ಇದರಲ್ಲಿ ಹಲವು ಯೋಜನೆ, ಸ್ಥಳಾಂತರದ ಪರಿಸ್ಥಿತಿಗಳು, ನಂತರದ ದಿನದ ಜನರ ದುಃಸ್ಥಿತಿಗಳ ಬಗ್ಗೆ ದಾಖಲಿಸಿದ್ದಾರೆ.

ಸ್ಥಳಾಂತರದ ಬಗೆಗಿನ ಈ ಎಲ್ಲಾ ಲೇಖನಗಳಿಂದ ಕಂಡುಕೊಂಡ ಅಂಶಗಳೆಂದರೆ ೧೮೯೪ರ ಭೂಸ್ವಾಧೀನ ಕಾಯಿದೆಯು ಸಂತ್ರಸ್ತರ ಹಿತದೃಷ್ಟಿಯನ್ನು ಕಾಪಾಡುವ ದೃಷ್ಟಿಕೋನವನ್ನು ಹೊಂದಿಲ್ಲ. ಮತ್ತು ಅತಿಯಾದ ಸ್ಥಳಾಂತರಕ್ಕೆ ಈಡು ಮಾಡಿದೆ. ಸ್ಥಳಾಂತರವು ಅತ್ಯಂತ ಯಾತನಾಮಯವಾಗಿರುತ್ತದೆ. ಮಿಲಿಯಗಟ್ಟಲೆ ಜನರನ್ನು ದಟ್ಟ ದಾರಿದ್ರ್ಯಕ್ಕೆ ಈಡು ಮಾಡುವುದು ಅಭಿವೃದ್ಧಿಯಲ್ಲ. ಸಂಪೂರ್ಣ ಗ್ರಾಮ ಮತ್ತು ಸಮುದಾಯವನ್ನೇ ಸ್ವಾಧೀನಪಡಿಸಿಕೊಂಡಾಗ ನಷ್ಟವೆಂಬುದು ಕೇವಲ ಒಂದು ತುಂಡು ಭೂಮಿಯದು ಮಾತ್ರವಲ್ಲ; ನಷ್ಟವು ಹಲವು ಸಂಕೀರ್ಣ ಸಾಮಾಜಿಕ ಆಯಾಮಗಳನ್ನು ಹೊಂದಿದೆ. ಸ್ಥಳಾಂತರಕ್ಕೆ ಸುಲಭವಾಗಿ ಪರ್ಯಾಯ ಉಪಾಯಗಳನ್ನು ಕಂಡು ಕೊಳ್ಳಲಾಗಿಲ್ಲ. ಆಂತರಿಕವಾಗಿ ಸ್ಥಳಾಂತರ ಆದವರಿಗೆ ಬಾಹ್ಯ ಬೆಂಬಲ ದೊರಕುವುದು ತೀರಾ ಕಡಿಮೆ. ಬಲಾತ್ಕಾರದ ಒಕ್ಕಲೆಬ್ಬಿಸುವಿಕೆ ಮಾನವನ ಮೂಲಭೂತ ಹಕ್ಕುಗಳಿಗೆ ಧಕ್ಕೆ ತರುತ್ತದೆ. ಆದ್ದರಿಂದ ಬಲಾತ್ಕಾರದ ಒಕ್ಕಲೆಬ್ಬಿಸುವಿಕೆಯನ್ನು ತಡೆಯಬೇಕು.

ಸರ್ಕಾರ ಯಾವಾಗ ಬೇಕಾದರೂ ಖಾಸಗಿ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಸ್ಥಳಾಂತರವೆಂದರೆ ಕೇವಲ ಭೌತಿಕವಾದದ್ದು, ಕಣ್ಣಿಗೆ ಗೋಚರಿಸುವಂತದ್ದು, ಅವುಗಳನ್ನು ಗಣನೆ ಮಾಡಬಹುದು ಎಂಬ ಲೆಕ್ಕಾಚಾರದಲ್ಲೇ ಬಿಂಬಿಸಲಾಗಿದೆ. ಯಾವ ಯಾವ ಉದ್ದೇಶದಿಂದ ಎಷ್ಟು ಜನರು ಸ್ಥಳಾಂತರವಾಗಿದ್ದಾರೆ? ಸ್ಥಳಾಂತರದಿಂದ ಯಾರಿಗೆ ಎಷ್ಟು ತೊಂದರೆಯಾಗಿದೆ? ಭೌತಿಕ ಸ್ಥಳಾಂತರದ ವಿಧಗಳದ್ದೇ ಅತಿ ವ್ಯಾಪನೆಯಾಗಿದೆ. ಸರ್ಕಾರ ತನ್ನ ಇಚ್ಛೆ ಪ್ರಕಾರ ಭೂಸ್ವಾಧೀನ ಮಾಡಿಕೊಳ್ಳುವುದಾದರೆ ಜಮೀನು ಮತ್ತು ಮೂಲನಿವಾಸಿಗಳ ಮಧ್ಯೆ ಇರುವ ಸಂಬಂಧ ಏನು? ಒಂದು ಯೋಜನೆ ಸ್ಥಾಪನೆಯಾದಾಗ ಸ್ಥಳಾಂತರವಾಗುವುದು ಕೇವಲ ಇವುಗಳು ಮಾತ್ರವಾ? ಅಥವಾ ಇಷ್ಟೇ ಘಟಕಗಳಾ? ಯೋಜನೆಯಿಂದ ನಿಜವಾಗಿಯೂ ಸ್ಥಳಾಂತರಗೊಂಡವರು ಇಷ್ಟು ಜನರೇ? ಸ್ಥಳಾಂತರ ಕೇವಲ ಭೌತಿಕವಾದದ್ದಾ? ಅದನ್ನು ಅಂಕಿ ಅಂಶಗಳ ರೂಪದಲ್ಲಿ ಪ್ರಸ್ತುತ ಪಡಿಸಬಹುದಾ? ಸ್ಥಳಾಂತರದ ಪರಿಣಾಮ ಇಷ್ಟೇನಾ? ಜನರು ಯಾಕೆ ಸ್ಥಳಾಂತರವನ್ನು ವಿರೋಧಿಸುತ್ತಾರೆ? ಇದಕ್ಕೆ ಪರ್ಯಾಯ ಇಲ್ಲವಾ? ಒಟ್ಟಾರೆಯಾಗಿ ಸ್ಥಳಾಂತರ ಎಂಬ ಪ್ರಕ್ರಿಯೆಯ ಮೇಲೆ

ಪ್ರಸ್ತುತ ಪ್ರಬಂಧಗಳಲ್ಲಿ ಇರುವ ಅಂಶಗಳ ಆಚೆಗೆ ಆಲೋಚಿಸಲು, ಪ್ರಸ್ತುತ ಪಡಿಸಲು ಸಾಧ್ಯವಿಲ್ಲವೇ? ಈ ಎಲ್ಲಾ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ವಿಮರ್ಶಿಸಲಾಗಿದೆ.

ಈ ಅಂಶಗಳ ಹೊರತಾಗಿಯೂ ದೇಶದ ಸ್ಥಿತಿ ಬಿಗಡಾಯಿಸಿದೆ. ಸ್ಥಳಾಂತರವನ್ನು ಅಂಕಿ ಅಂಶಗಳಲ್ಲಿ ಪ್ರಸ್ತುತಪಡಿಸಲು ಸಾಧ್ಯವಿಲ್ಲ. ಸ್ಥಳಾಂತರ ಕೇವಲ ಜನರನ್ನು ಮಾತ್ರಾ ಒಳಗೊಂಡಿಲ್ಲ ಮತ್ತು ಜನರಿಗೆ ಮಾತ್ರಾ ಬಾಧಿಸುವುದಲ್ಲ. ಇದರಿಂದ ಆಚೆಗೆ ಕೂಡಾ ಸ್ಥಳಾಂತರ ಆಗುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಇಷ್ಟು ಅಧ್ಯಯನಗಳಾದರೂ ಸ್ಥಳಾಂತರದ ಬಗೆಗಿನ ಸಂಶೋಧನೆಗಳಲ್ಲಿ ಅಂತರ ಕಂಡುಬಂದಿದೆ. ಸ್ಥಳಾಂತರ ಎಂಬುದು ಕಣ್ಣಿಗೆ ಕಾಣುವ ಅಂಶಗಳಷ್ಟೇ ಅಲ್ಲದೆ ಅಸದೃಶ್ಯವಾಗಿ ಕೂಡಾ ನೆರವೇರುತ್ತದೆ. ಪ್ರತ್ಯಕ್ಷ ಪರಿಣಾಮಗಳು ಮಾತ್ರವಲ್ಲದೇ ದೊಡ್ಡ ಮಟ್ಟದಲ್ಲಿ ವ್ಯವಸ್ಥೆಯೇ ಪರೋಕ್ಷವಾಗಿ ಪಲ್ಲಟಗೊಳ್ಳುತ್ತದೆ. ಇವು ವ್ಯಾಪಕವಾಗಿ ಮತ್ತು ಗಂಭೀರವಾಗಿ ದೇಶವನ್ನು, ಪರಿಸ್ಥಿತಿಯನ್ನು, ಜನರನ್ನು ಮುತ್ತಿಗೆ ಹಾಕುತ್ತವೆ. ಸ್ಥಳಾಂತರ ಕಳೆದು ಹೋದ ದೇಶದ ಸ್ಥಿತಿಯನ್ನು ದೊರಕಿಸಿಕೊಡಲಾರದಷ್ಟು ತಲ್ಲಣಗೊಳಿಸಿದೆ. ಇದು ಎಲ್ಲವನ್ನೂ ಕೆಲವೇ ಕೈಗಳಿಗೆ ಧಾರೆಯೆರೆದಿದೆ. ಕೆಲವೇ ವ್ಯಕ್ತಿಗಳಿಗೆ ಪ್ರಯೋಜನವಾಗಿದೆಯೇ ಹೊರತು ಲೆಕ್ಕವಿಲ್ಲದಷ್ಟು ಅಂಶಗಳನ್ನು ಅವಸಾನ ಮಾಡಿದೆ. ಈ ಎಲ್ಲಾ ಅಂತರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.

೧.೯.೫. ಪುನರ್ವಸತಿಗೆ ಸಂಬಂಧಿಸಿದಂತೆ

Debnath.B., (೨೦೦೭)[೩೭] ಪುನರ್ವಸತಿ ಎಂದರೆ ಏನು, ಸ್ಥಳಾಂತರವು ಏನನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಎಂಬುದನ್ನು ದಾಖಲಿಸಿದ್ದಾರೆ.

Sah D. C, (೧೯೯೫)[೩೮] ೧೯೯೫ರ ರಾಷ್ಟ್ರೀಯ ಪುನರ್ವಸತಿ ಕರಡು ನೀತಿಯ ವೈಫಲ್ಯದ ಕುರಿತು ದಾಖಲಿಸಿದ್ದಾರೆ.

Sinha B. K., ೧೯೯೬)[೩೯] ಸ್ಥಳಾಂತರದ ನೋವು ಹಾಗೂ ನಷ್ಟವನ್ನು ಕರಡು ನೀತಿಯ ಸಹಾಯದಿಂದ ಸಂಪೂರ್ಣವಾಗಿ ಭರಿಸಲು ಸಾಧ್ಯವಿಲ್ಲ. ಆದರೆ ಭೌತಿಕ ಹಾಗೂ ಆರ್ಥಿಕ ರೀತಿಯಲ್ಲಿ ದೊಡ್ಡಮಟ್ಟಿಗೆ ಉಪಶಮನ ಮಾಡಬಹುದು ಎಂಬುದನ್ನು ವ್ಯಕ್ತಪಡಿಸಿದ್ದಾರೆ. ಲೇಖಕರು ಪುನರ್ವಸತಿ ತತ್ವವನ್ನು ಪ್ರತಿಪಾದಿಸಿದ್ದಾರೆ.

Sangeeta Goyal, (೧೯೯೬)[೪೦] ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಭಾರತದಲ್ಲಿ ಅಭಿವೃದ್ಧಿಯ ಹೆಸರಲ್ಲಿ ಕೈಗೊಂಡಂತಹ ಬೃಹತ್ ಯೋಜನೆಗಳಿಂದ ಬಡ ಜನರಿಗಾದ ಅನಾನುಕೂಲಗಳನ್ನು ಪಟ್ಟಿ ಮಾಡಿದ್ದಾರೆ. ರಾಷ್ಟ್ರೀಯ ಪುನರ್ವಸತಿ ಕಾನೂನಿನ ಕೊರತೆಯಿಂದಾಗಿ ರಾಜ್ಯಗಳಲ್ಲಿನ ಕಾನೂನಿನ ಪ್ರಯೋಜನಗಳು ಅಸಮರ್ಪಕ ಹಾಗೂ ತಾರತಮ್ಯದಿಂದ ಕೂಡಿದವುಗಳಾಗಿದ್ದವು ಎಂದು ಪ್ರತಿಪಾದಿಸಿದ್ದಾರೆ. ಭಾರತದಲ್ಲಿ

ಸ್ಥಳಾಂತರದ ವಿರುದ್ಧದ ಹೋರಾಟಗಳು, ಕಾನೂನಿನ ಅಸಮರ್ಪಕತೆ, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯಿದೆಯ ಅವಶ್ಯಕತೆ ಯಾಕೆ ಎಂಬುದನ್ನು ಹೇಳಿದ್ದಾರೆ. ಸರಿಯಾದ ಮತ್ತು ಸಂಪೂರ್ಣ ಪುನರ್ವಸತಿ ಹಾಗೂ ಪುನರ್ ನಿರ್ಮಾಣದ ತತ್ವವನ್ನು ದಾಖಲಿಸಿದ್ದಾರೆ.

Usha Ramanathan, (೧೯೯೬)[೪೧] ಸಾರ್ವಜನಿಕ ಹಿತಾಸಕ್ತಿಯ ಹೆಸರಿನಲ್ಲಿ ಸರ್ಕಾರ ಸಾರ್ವಜನಿಕರ ಭೂಮಿಯನ್ನು ವಶಪಡಿಸಿಕೊಂಡಾಗ ಕಾನೂನಾತ್ಮಕವಾಗಿ ಸಂತ್ರಸ್ತರಿಗೆ ಯೋಗ್ಯ ಪರಿಹಾರ ನೀಡಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದರೆ ೧೮೯೪ರ ಭೂಸ್ವಾಧೀನ ಕಾಯಿದೆ ಪುನರ್ವಸತಿ ನಿಟ್ಟಿನಲ್ಲಿ ಸಮರ್ಪಕವಾಗಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಅಸಮರ್ಥನೀಯವಾದರೆ ಸಂತ್ರಸ್ತರು ಯೋಗ್ಯ ಪುನರ್ವಸತಿಯಿಲ್ಲದೆ ಹೇಗೆ ಡಟ್ಟ ದಾರಿದ್ರ್ಯಕ್ಕೆ ಈಡಾಗುತ್ತಾರೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

Walter Fernandes, (೧೯೯೮)[೪೨] ಪ್ರಕಾರ ತಿದ್ದುಪಡಿ ಕಾಯಿದೆ ಯೋಜನಾ ಸಂತ್ರಸ್ತರ ಹಕ್ಕುಗಳನ್ನು ರಕ್ಷಿಸುವ ಬದಲು ಖಾಸಗಿ ಕೈಗಾರಿಕೆಗಳಿಗೆ ಭೂಸ್ವಾಧೀನಗೊಳಿಸುವುದನ್ನು ಇನ್ನಷ್ಟು ಸರಳಗೊಳಿಸಿದೆ. ಯೋಜನಾ ಸಂತ್ರಸ್ತರ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಯಿದೆ ೧೯೯೮ರ ಬಗ್ಗೆ ಕೂಡಾ ನಮೂದಿಸಿದ್ದಾರೆ.

Medha Patkar, (೧೯೯೮)[೪೩] ಪುನರ್ವಸತಿಯ ರೂಪುರೇಷೆಯನ್ನು ಕೊಟ್ಟಿದ್ದಾರೆ. ಯೋಜನೆಯನ್ನು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಸಂತ್ರಸ್ತರಿಗೆ ನೀಡಿದಾಗ ಸ್ಥಳಾಂತರವಾಗುವುದಿಲ್ಲ ಅಥವಾ ಕಡಿಮೆ ಪ್ರಮಾಣದ ಸ್ಥಳಾಂತರವಾಗುತ್ತದೆ. ಸಂತ್ರಸ್ತರ ಸಹಭಾಗಿತ್ವದಲ್ಲಿ ನ್ಯಾಯಯುತವಾದ ಪುನರ್ವಸತಿಯು ಸಂತ್ರಸ್ತರಿಗೆ ದೊರೆಯುವಂತಾಗಬೇಕು. ಯೋಜನೆಯ ಪ್ರಯೋಜನದಲ್ಲಿ ಪ್ರಥಮ ಆದ್ಯತೆಯನ್ನು ಸಂತ್ರಸ್ತರಿಗೆ ನೀಡಬೇಕು ಎಂದು ಪ್ರತಿಪಾದಿಸಿದ್ದಾರೆ.

Chittaroopa Palit, (೨೦೦೪)[೪೪] ೧೯೯೫ ರ ಪುನರ್ವಸತಿ ಕರಡು ನೀತಿಯಲ್ಲಿ ನೀಡಿದ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

Walter Fernandes, (೨೦೦೪)[೪೫] ಸ್ಥಳಾಂತರಗೊಂಡವರ ಪುನರ್ವಸತಿಗಾಗಿ ನಾಲ್ಕು ಬಾರಿ ಜಾರಿಗೊಳಿಸಲಾದ ಕರಡು ನೀತಿಯ ಕುರಿತು ಚರ್ಚಿಸಿದ್ದಾರೆ. ಸ್ಥಳಾಂತರಗೊಡವರ ಸಂಖ್ಯೆಯ ಮೇಲೆ ಸರಿಯಾದ ಕಛೇರಿ ದಾಖಲಾತಿಗಳು ಲಭ್ಯವಿರುವುದಿಲ್ಲದ್ದನ್ನು ಸ್ಪಷ್ಟಪಡಿಸಿದ್ದಾರೆ.

Shekhar Singh, (೨೦೦೬)[೪೬] ಸ್ಥಳಾಂತರ ಹಾಗೂ ಪುನರ್ವಸತಿ ಬಗೆಗಿನ ಎರಡು ರಾಷ್ಟ್ರೀಯ ಕರಡು ನೀತಿಗಳಾಗಿದ್ದ 'ಗ್ರಾಮೀಣಾಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಪುನರ್ವಸತಿ ನೀತಿ' ಹಾಗೂ 'ರಾಷ್ಟ್ರೀಯ ಸಲಹಾ ಸಮಿತಿಯ ರಾಷ್ಟ್ರೀಯ ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್ವಸತಿ ನೀತಿ ೨೦೦೬' ಇವುಗಳನ್ನು ತುಲನಾತ್ಮಕ ಅಧ್ಯಯನ

ಮಾಡಿದ್ದಾರೆ. ಇಲ್ಲಿ ಪುನರ್ವಸತಿ ನೀತಿಯನ್ನು ಐದು ರೀತಿಯ ಮಾನದಂಡಗಳನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ.

Ramaswamy R. (೨೦೦೭)[೪೭] ಪುನರ್ ನಿರ್ಮಾಣ ಮತ್ತು ಪುನರ್ವಸತಿಯ ರಾಷ್ಟ್ರೀಯ ಕಾನೂನು, ೨೦೦೩ ಇದು ಹೇಗೆ ಬಂದಿತು ಎಂಬುದರ ಜೊತೆಗೆ ರಾಷ್ಟ್ರೀಯ ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್ವಸತಿ ಕರಡು ನೀತಿ ೨೦೦೬ರ ಕುರಿತು ಹೇಳಲಾಗಿದೆ. ಭಾರತದಲ್ಲಿ ಅಭಿವೃದ್ಧಿ ಯೋಜನೆಗಳು ಉಗಮವಾದ ಬಗ್ಗೆ, ನ್ಯಾಯಯುತವಾದ ಸ್ಥಳಾಂತರ ಮತ್ತು ಪುನರ್ವಸತಿ ಕಾಯಿದೆಯ ಅವಶ್ಯಕತೆಯನ್ನು ಚರ್ಚಿಸಿದ್ದಾರೆ.

Mihir Desai, (೨೦೧೧)[೪೮] ೧೮೯೪ರ ಭೂಸ್ವಾಧೀನ ಕಾಯಿದೆಯ ಕಾನೂನಾತ್ಮಕ ಅಂಶಗಳ ತಾತ್ವಿಕತೆ, ಕಾನೂನಾತ್ಮಕ ವಿವಾದಗಳು, ಪರಿಹಾರ ಮತ್ತು ಪುನರ್ವಸತಿ ಬಗೆಗಿನ ತೊಡಕುಗಳನ್ನು ಕಂಡುಕೊಂಡಿದ್ದಾರೆ. ಬೇರೆ ಬೇರೆ ರೀತಿಯಿಂದ ದೊಡ್ಡ ಪ್ರಮಾಣದಲ್ಲಿ ಜನರು ಪುನರ್ ನೆಲೆ ಮತ್ತು ಪುನರ್ವಸತಿಯಿಂದ ಹೊರಗುಳಿದಿದ್ದಾರೆ. ಆದ್ದರಿಂದ ಒಟ್ಟು ಸಮುದಾಯದ ಪುನರ್ವಸತಿಯಾಗಬೇಕು ಮತ್ತು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ಅಮೆಯ ಪ್ರಕಾಶನ, (೨೦೧೩)[೪೯] ಪುನರ್ವಸತಿಯ ಕಾನೂನಿನ ಅಂಶಗಳನ್ನು ದಾಖಲಿಸಿಕೊಳ್ಳಲಾಗಿದೆ.

Brookings-LSE Project on Internal Displacement, (೨೦೧೩)[೫೦] ಸೆಪ್ಟಂಬರ್೨೬, ೨೦೧೩ರಲ್ಲಿ ಭಾರತವು ಅಳವಡಿಸಿಕೊಂಡ 'ಭೂಸ್ವಾಧೀನ ಮತ್ತು ಪುನರ್ವಸತಿಯ' ಐತಿಹಾಸಿಕ ಹೊಸ ಕರಡು ಮಸೂದೆಯ ಕುರಿತು ಹೇಳಿದೆ.

ಪುನರ್ವಸತಿಗೆ ಸಂಬಂಧಿಸಿದಂತಹ ಲೇಖನಗಳು ಮತ್ತು ಪ್ರಬಂಧಗಳ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳೆಂದರೆ; ಭಾರತದ ಹಲವು ಯೋಜನೆಗಳಿಂದಾಗಿ ಬೇರೆ ಬೇರೆ ರೀತಿಯಲ್ಲಿ ದೊಡ್ಡ ಪ್ರಮಾಣದ ಜನರು ಪುನರ್‌ನೆಲೆ ಮತ್ತು ಪುನರ್ವಸತಿಯಿಂದ ಹೊರಗುಳಿದಿದ್ದಾರೆ. ಸ್ಥಳಾಂತರಗೊಂಡು ಯೋಗ್ಯ ಪುನರ್ವಸತಿ ದೊರೆಯದೆ, ತಮ್ಮ ಮೂಲಭೂತ ಹಕ್ಕುಗಳನ್ನು ಕಳೆದುಕೊಂಡು ಭಾವೀ ಬದುಕಿನಲ್ಲಿ ಆಸಕ್ತಿ, ಮಾನ, ಸಮ್ಮಾನಗಳಿಲ್ಲದೆ ಬದುಕು ಸಾಗಿಸುವಂತಾಗಿದೆ. ಅಸಂಬದ್ಧ ಪುನರ್‌ನೆಲೆ ಮತ್ತು ಪುನರ್ವಸತಿ ನೀತಿಗಳ ಜೊತೆಗೆ ಪುನರ್ವಸತಿ ಹೊಣೆಗಾರಿಕೆಯನ್ನು ಯೋಜನೆಯವರಿಗೆ ವಹಿಸಿಕೊಟ್ಟಿರುವುದು, ಅವರು ಅದನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು, ಅಸಮರ್ಪಕ ದತ್ತಾಂಶ ಸಂಗ್ರಹಣೆ, ಹಣಕಾಸಿನ ಕೊರತೆ, ಸಂತ್ರಸ್ತ ಕುಟುಂಬದವರು ಸಕ್ರಿಯವಾಗಿ ಭಾಗಿಯಾಗದೇ ಇರುವುದು ಇವುಗಳಿಂದಾಗಿ ಪುನರ್ವಸತಿಯಲ್ಲಿ ಹಿನ್ನಡೆಯಾಗಿದೆ. ಸಂತ್ರಸ್ತರಿಗೆ ಹಣದ ರೂಪದ ಪರಿಹಾರ ಮಾತ್ರ ಹೆಚ್ಚಿನ ಪರಿಣಾಮ ಬೀರಲಾರದು. ಅವರಿಗೆ ಭೂಮಿ, ಕೌಶಲ್ಯವನ್ನು ಮುನ್ನಡೆಸಲು ಅವಕಾಶ, ದುಡಿದುಕೊಳ್ಳಲು ಗುತ್ತಿಗೆಗೆ ಭೂಮಿ, ಯೋಜನೆಯಲ್ಲಿ ಸಂತ್ರಸ್ತರಿಗೂ

ಪಾಲುಗಾರಿಕೆ, ಪರಿಹಾರದ ಹಣವನ್ನು ಲಾಭದಾಯಕವಾಗಿ ಠೇವಣಿ ಹೂಡುವಿಕೆ ಇವುಗಳನ್ನು ದೊರಕಿಸಿಕೊಟ್ಟಿಲ್ಲ. ಸ್ಥಳಾಂತರವಾದವರನ್ನು ಶೀಘ್ರವಾಗಿ ಪುನರ್‌ನೆಲೆ ಮತ್ತು ಪುನರ್ವಸತಿಗೊಳ್ಳುವಂತೆ ಖಚಿತಪಡಿಸಬೇಕು. ಮಾನವ ಹಕ್ಕುಗಳಿಗೆ ಚ್ಯುತಿಯಾಗದಂತೆ ಕಾಳಜಿವಹಿಸಬೇಕು. ಒಟ್ಟು ಸಮುದಾಯದ ಪುನರ್ವಸತಿಯಾಗಬೇಕು ಮತ್ತು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಡಬೇಕು. ಅಭಿವೃದ್ಧಿ ಕಾರಣದಿಂದಾದ ಒತ್ತಾಯದ ಪುನರ್‌ನೆಲೆ ಸುಸ್ಥಿರವಾಗಿ ಯಶಸ್ಸಾಗಲು 'ಉತ್ತಮ ಸಾಮರ್ಥ್ಯ'ದ ಅಗತ್ಯವಿದೆ. ಸುಸ್ಥಿರ ಅಭಿವೃದ್ಧಿ ಮತ್ತು ಮಾನವನ ಅವಶ್ಯಕತೆ ಎಂಬ ವಿಶಾಲ ದೃಷ್ಟಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ೨೦೧೩ರ ಕಾಯಿದೆಯಲ್ಲಿರುವ ಧನಾತ್ಮಕ ಅಂಶಗಳಿಂದಾಗಿ ಇದು ಬೇರೆ ಬೇರೆ ಅಭಿವೃದ್ಧಿ ಯೋಜನೆಗಳಿಂದಾಗಿ ಆಂತರಿಕವಾಗಿ ಸ್ಥಳಾಂತರ ಆದವರ ಹಕ್ಕುಗಳನ್ನು ರಕ್ಷಿಸಿ ಭಾರತ ದೇಶವನ್ನು ಪ್ರಗತಿಯತ್ತ ಒಯ್ಯಬಹುದು.

ಈ ಎಲ್ಲಾ ಬರಹಗಳಲ್ಲಿ ಕಂಡುಬರುವ ಪ್ರಮುಖ ಅತಿವ್ಯಾಪನೆ ಎಂದರೆ ಎಲ್ಲಾ ಬರಹ ಪುನರ್ವಸತಿ ಕರಡು ನೀತಿ, ಪುನರ್ವಸತಿ ಕಾನೂನಿನಲ್ಲಿ ಏನಿದೆ ಎಂಬುದನ್ನು ಉಲ್ಲೇಖಿಸಿ ಅವರವರ ಮಾತುಗಳಲ್ಲಿ ವಿಸ್ತರಿಸಿ ಬರೆದದ್ದು. ಕೆಲವೇ ಕೆಲವು ಲೇಖನಗಳು ಹೊಸ ಪುನರ್ವಸತಿ ತತ್ವಗಳನ್ನು ಉಲ್ಲೇಖಿಸಿವೆ. ಏನು ಮಾಡಬೇಕು ಎಂಬುದನ್ನು ದಾಖಲಿಸಿದ್ದಾರೆ. ಆದರೆ ಯಾವ ರೀತಿಯಾಗಿ ನೆರವೇರಿಸಬೇಕು ಎಂಬುದಕ್ಕೆ ವ್ಯವಸ್ಥಿತವಾದ ಮಾದರಿಯನ್ನು ನೀಡಲಾಗಿಲ್ಲ. ಇದು ಈ ಬರಹಗಳಲ್ಲಿ ಕಂಡುಬರುವ ಪ್ರಮುಖ ಸಂಶೋಧನಾ ಅಂತರ.

ಹಾಗಾದರೆ ಪುನರ್ವಸತಿ ಎಂದರೆ ಇಷ್ಟೇನಾ? ಯಾಕೆ ಪುನರ್ವಸತಿ ಸರಿಯಾಗಿ ಆಗುವುದಿಲ್ಲ? ಯಾಕೆ ಜನರು ಪುನರ್ವಸತಿಗೊಳ್ಳುವುದಿಲ್ಲ? ಪುನರ್ವಸತಿ ಯಾಕೆ ತಡವಾಗುತ್ತದೆ? ಸರ್ಕಾರ ಯಾಕೆ ರಾಷ್ಟ್ರೀಯ ಸಲಹಾ ಸಮಿತಿ ನೀಡಿದ್ದ ಪುನರ್ವಸತಿ ಕಾನೂನು ತಿರಸ್ಕರಿಸಿತ್ತು? ಸರ್ಕಾರದ ಪ್ರಕಾರ ಪುನರ್ವಸತಿ ಎಂದರೆ ಯಾವೆಲ್ಲಾ ಅಂಶಗಳು ಒಳಗೊಂಡಿವೆ? ಪುನರ್ವಸತಿ ತತ್ವ ಇಲ್ಲವೇ? ಇದ್ದರೆ ಇಷ್ಟೇನಾ? ಇವುಗಳೆಲ್ಲಾ ನೆರವೇರಿದರೆ ಪುನರ್ವಸತಿ ಸರಿಯಾಗುತ್ತದೆಯೇ? ಸರ್ಕಾರ ಸಂತ್ರಸ್ತರಿಗೆ ಯೋಗ್ಯ ಪರಿಹಾರ ನೀಡಲಿಲ್ಲವೇ? ದಾರಿದ್ರ್ಯತನ ಎಂದರೆ ಏನು? ಕಾಯಿದೆಗಳು ಯಾಕೆ ಪುನರ್ವಸತಿಯನ್ನು ಅಷ್ಟಕ್ಕೇ ಸೀಮಿತಗೊಳಿಸುತ್ತವೆ? ನಿಗದಿತ ಸಮಯದಲ್ಲಿ ಯಾಕೆ ಪುನರ್ವಸತಿಗೊಳಿಸುವುದಿಲ್ಲ? ಸ್ಥಳಾಂತರದ ಬಗ್ಗೆ ಸರಿಯಾದ ದಾಖಲಾತಿ ಇಲ್ಲ ಯಾಕೆ? ಕಾಯಿದೆಗಳು ಮಾತ್ರಾ ಪುನರ್ವಸತಿ ಮಾಡಬಲ್ಲುವೇ? ಪುನರ್ವಸತಿಯ ಎಲ್ಲಾ ಆಯಾಮಗಳಿಗೆ ಕಾಯಿದೆಗಳಿಂದ ಪರಿಹಾರ ನೀಡಲು ಸಾಧ್ಯವೇ? ಪುನರ್ವಸತಿ ಎಂಬುದೊಂದು ಕಾಯಿದೆ-ಕಟ್ಟಳೆಗಳಿಂದ ಬಗೆಹರಿಯುವ ವಿದ್ಯಮಾನವೇ? ಇದಕ್ಕೆ ಸಹೃದಯತೆ ಬೇಡವೇ? ಪುನರ್ವಸತಿ ಎಂಬುದು ಭೌತಿಕ ಪ್ರಕ್ರಿಯೆಯೇ ಅಥವಾ ಅಭೌತಿಕವಾದದ್ದೇ? ಕೇವಲ ಭೌತಿಕ ಅಂಶಗಳ ಪುನರ್ವಸತಿ ಆದರೆ ಸಾಕೇ? ಹಾಗಿದ್ದ

ಮಾತ್ರದಲ್ಲಿ ಅದನ್ನು ಪುನರ್ವಸತಿ ಎನ್ನಲು ಸಾಧ್ಯವೇ? ಈ ಎಲ್ಲಾ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಅಮೂಲಾಗ್ರವಾಗಿ ಪುನರ್ವಸತಿ ಎಂದರೆ ಏನು ಎಂಬುದನ್ನು ವಿಮರ್ಶಿಸಲಾಗಿದೆ. ಪುನರ್ವಸತಿ ಕೇವಲ ಭೌತಿಕ ಅಂಶಗಳ ಕುರಿತಾಗಿರುವುದು ಅಲ್ಲ. ಅದು ಮನುಷ್ಯನ ಭಾವನಾತ್ಮಕತೆಗೆ ಸಂಬಂಧಿಸಿದ್ದು. ಇದು ಬದುಕಿನ ವಿವಿಧ ಆಯಾಮಗಳ ಬಂಧನವಾಗಿದೆ. ಮನುಷ್ಯ ತನ್ನ ಅಸ್ತಿತ್ವವನ್ನು ಯಾವುದೇ ಸಂದರ್ಭದಲ್ಲಿಯೂ ಯಥಾವತ್ತಾಗಿ ಕಾಪಾಡಿಕೊಂಡು ಬರಲು ಮಾಡುವ ಪ್ರಯತ್ನವಾಗಿದೆ. ವ್ಯಕ್ತಿ-ಗೌರವ ಮತ್ತು ಆತ್ಮ ನಿಷ್ಠೆಗಳ ಸಂಗಮವಾಗಿದೆ. ಅದು ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಘಟಕಾಂಶಗಳು ಮೌನವಾಗಿ ಮಾಡಿಕೊಳ್ಳುವ ಸ್ವೀಕಾರವಾಗಿದೆ. ಯಾವುದೇ ಸಂದರ್ಭದಲ್ಲಿ ಎದೆಗುಂದದೇ, ಛಲಬಿಡದೇ ಪರಿಸ್ಥಿತಿಯನ್ನು ಯಥಾವತ್ತಾಗಿ ನಡೆಸಿಕೊಂಡು ಹೋಗುವ ಮನೋಧರ್ಮದ ಸಾಕಾರವಾಗಿದೆ. ವಿವರಿಸಲಾಗದ ಪರಿಸ್ಥಿತಿಯ ಸ್ವೀಕಾರವಾಗಿದೆ ಎಂಬುದನ್ನು ಇಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

೧.೯.೬. ಭಾರತದ ಬೃಹತ್ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ

Soumendra Mohan Patnaik, (೧೯೮೯)[೫೧] ಕೋಲಬ್‌ನದಿ ಮೇಲ್ದಂಡೆ ಪುನರ್ವಸತಿ ಯೋಜನೆಯ ಕುರಿತು ದಾಖಲಿಸಿದ್ದಾರೆ. ಸ್ಥಳಾಂತರ ಪ್ರಕ್ರಿಯೆಯನ್ನು ಹೇಗೆ ನೆರವೇರಿಸಲಾಯಿತು? ಪುನರ್ವಸತಿಯಲ್ಲಿ ಯೋಜನಾ ಸಂತ್ರಸ್ತರ ಪರಿಗಣನೆ, ಪುನರ್ವಸತಿಗಾಗಿ ಸ್ಥಳದ ಆಯ್ಕೆ, ಪುನರ್ವಸತಿ ಕೇಂದ್ರದ ನಿರ್ಮಾಣ, ಸಂತ್ರಸ್ತರಿಗೆ ನೀಡಿದ ಪರಿಹಾರ, ಪ್ರಯೋಜನಗಳು ಮತ್ತು ಪುನರ್ವಸತಿಯ ವೈಫಲ್ಯಗಳ ಕುರಿತು ಹೇಳಿದ್ದಾರೆ.

I.U.B. Reddy, (೧೯೯೩)[೫೨] ಒರಿಸ್ಸಾ ರಾಜ್ಯದ ಕೊರಪುಟ್ ಜಿಲ್ಲೆಯ National Aluminium Company Limited (NALCO) ಹಾಗೂ ಇದೇ ಜಿಲ್ಲೆಯ ಕರಂಗಾ ಗ್ರಾಮದಲ್ಲಿನ ಗೋದಾವರಿಯ ಉಪನದಿಯಾದ ಕೊಲಬ್ ನದಿಗೆ ಕಟ್ಟಲಾದ ಜಲಾಶಯ ಹಾಗೂ ಜಲವಿದ್ಯುದಾಗಾರಾದಿಂದ ಸ್ಥಳಾಂತರಗೊಂಡ ಬುಡಕಟ್ಟು ಹಾಗೂ ಇತರೇ ಜನರ ಪುನರ್ವಸತಿ ಹಾಗೂ ಪ್ರಸ್ತುತ ಪರಿಸ್ಥಿತಿಯನ್ನು ದಾಖಲಿಸಿದ್ದಾರೆ.

Parasuraman S.(೧೯೯೬)[೫೩] ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯ ನಾರಾಯಣಪುರ ಅಣೆಕಟ್ಟು ನಿರಾಶ್ರಿತರು ಮತ್ತು ಬೊಂಬಾಯಿಯ ಜವಾಹರಲಾಲ್ ನೆಹರು ಬಂದರು ಈ ಅಭಿವೃದ್ಧಿ ಯೋಜನೆಗಳನ್ನು ಉದಾಹರಣೆಯನ್ನಾಗಿ ಇಟ್ಟುಕೊಂಡು ಯೋಜನೆಯ ಸ್ಥಳಾಂತರ ಮತ್ತು ಸಂತ್ರಸ್ತರ ಪುನರ್ವಸತಿಯ ಕುರಿತು ಚರ್ಚಿಸಿದ್ದಾರೆ. ಈ ಯೋಜನೆಗಳ ಸಂತ್ರಸ್ತರಿಗೆ ಸರಿಯಾದ ಪುನರ್ವಸತಿ, ಉದ್ಯೋಗಾವಕಾಶವನ್ನು ದೊರಕಿಸಿಕೊಡಲಾಗಿಲ್ಲ ಎಂಬ ಅಂಶವನ್ನು ದಾಖಲಿಸಿದ್ದಾರೆ.

William Stanley, (೧೯೯೬)[೩೪] ಒರಿಸ್ಸಾದ ಕೆಲವು ಯೋಜನೆಗಳಿಂದಾಗಿ ಅಲ್ಲಿನ ಪರಿಸರ ಹಾಗೂ ಸಂತ್ರಸ್ತರ ಮೇಲಾಗಿರುವ ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ. ಸ್ವಾತಂತ್ರ್ಯಾ ನಂತರದ ಆರ್ಥಿಕ ಅಭಿವೃದ್ಧಿ ಯೋಜನೆಗಳು ಹಾಗೂ ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ರಾಷ್ಟ್ರದಲ್ಲಿ ಆರ್ಥಿಕ ಅಸಮತೋಲನಕ್ಕೆ ಕಾರಣವಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

Enakshi Ganguly Thukral, (೧೯೯೬)[೩೫] ಅಭಿವೃದ್ಧಿ, ಸ್ಥಳಾಂತರ ಹಾಗೂ ಪುನರ್ವಸತಿ ಪ್ರಕ್ರಿಯೆ ಮಹಿಳೆಯರನ್ನು ಯಾವ ರೀತಿಯಾಗಿ ಬಲಿಪಶುಗಳನ್ನಾಗಿಸಿದೆ ಎಂಬುದನ್ನು ದಾಖಲಿಸಿದ್ದಾರೆ. ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಬಿಹಾರ, ಒರಿಸ್ಸಾದ ಹಲವು ಅಭಿವೃದ್ಧಿ ಯೋಜನೆಗಳನ್ನು ಉದಾಹರಿಸಿ ಸಂತ್ರಸ್ತ ಮಹಿಳೆಯರ ದುಸ್ಥಿತಿಯನ್ನು ದಾಖಲಿಸಿದ್ದಾರೆ. ಪುನರ್ವಸತಿ ಕಾನೂನುಗಳು ಮಹಿಳೆಯರನ್ನು ಮತ್ತು ಅವರ ಹಕ್ಕನ್ನು ಕಡೆಗಣಿಸಿವೆ ಎಂಬ ಅಂಶವನ್ನು ವ್ಯಕ್ತಪಡಿಸಿದ್ದಾರೆ.

Asmita Kabra, (೨೦೦೩)[೩೬] ಕುನೋ ವನ್ಯಜೀವಿಧಾಮ ಯೋಜನೆಯಿಂದ ಸ್ಥಳಾಂತರವಾದ ಸಹಾರಿಯಾ ಬುಡಕಟ್ಟು ಜನರನ್ನು ಯಾವ ರೀತಿಯಾಗಿ ಪುನರ್‌ನೆಲೆ ಮತ್ತು ಪುನರ್ವಸತಿಗೊಳಿಸಲಾಯಿತು? ಅಲ್ಲಿನ ಬುಡಕಟ್ಟು ಜನರಿಗೆ ದೊರಕಿಸಿದ ಪುನರ್ವಸತಿ ಪ್ಯಾಕೇಜ್ ಮತ್ತು ಸಂತ್ರಸ್ತರ ಮೇಲೆ ಬೀರಿರುವ ಪರಿಣಾಮಗಳನ್ನು ದಾಖಲಿಸಿದ್ದಾರೆ.

ನರ್ಮದಾ ಬಚಾವೋ ಆಂದೋಲನ ಸಮಿತಿ, (೨೦೦೪)[೩೭] ಸರ್ದಾರ್ ಸರೋವರ ಅಣೆಕಟ್ಟು ಪುನರ್ವಸತಿ ಕುರಿತು ನರ್ಮದಾ ಬಚಾವೋ ಆಂದೋಲನ ಸಮಿತಿಯು ಸಮೀಕ್ಷೆ ಮಾಡಿ ಮಧ್ಯಪ್ರದೇಶ ಸರ್ಕಾರದ ಪುನರ್ವಸತಿ ವ್ಯವಸ್ಥೆಯು ಅಸಮರ್ಪಕ ಹಾಗೂ ಕಾನೂನು ಬಾಹಿರವಾಗಿತ್ತು ಎಂದು ದಾಖಲಿಸಿದೆ. ರಾಜ್ಯದ ಪುನರ್ವಸತಿ ನೀತಿ, ಸುಪ್ರೀಂ ಕೋರ್ಟ್‌ನ ನಿರ್ಧಾರದಂತೆ ಪುನರ್ವಸತಿ ಮಾಡುವಲ್ಲಿ ಮಧ್ಯಪ್ರದೇಶ ಸರ್ಕಾರವು ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು ಹೇಳಿದೆ.

Sujit Kumar Mishra, (೨೦೦೫)[೩೮] ಒರಿಸ್ಸಾದ ರೇನ್‌ಗಲಿ ವಿವಿದೋದ್ಧೇಶ ನದಿಕಣಿವೆ ಯೋಜನೆಯ ಸಂತ್ರಸ್ತರ ಕುರಿತು ಚರ್ಚಿಸಿದ್ದಾರೆ. ಒರಿಸ್ಸಾದಲ್ಲಿ ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರಗೊಂಡವರ ಅಂಕಿ ಅಂಶಗಳು, ಭೂರಹಿತರ, ಭೂಹಿಡುವಳಿದಾರರ ಬದುಕು ಸ್ಥಳಾಂತರದ ನಂತರ ಏನಾಗಿದೆ ಮತ್ತು ಸಂತ್ರಸ್ತರಿಗೆ ಭೂಮಿ ಹಂಚಿಕೆ ಯಾವ ರೀತಿಯಾಗಿ ಮಾಡಿದ್ದಾರೆ. ಒರಿಸ್ಸಾ ಸರ್ಕಾರದ ಪುನರ್ವಸತಿ ಕಾನೂನು ಹೇಗಿತ್ತು ಎಂದು ಹೇಳಿದ್ದಾರೆ.

Ghazala Shahabuddin & others, (೨೦೦೭)[೩೯] ಸಾರಿಕಾ ಹುಲಿ ಸಂರಕ್ಷಿತ ಪ್ರದೇಶದಿಂದ ಸ್ಥಳಾಂತರಗೊಂಡವರನ್ನು ಪುನರ್‌ನೆಲೆಗೊಳಿಸಿದ ಕಾರ್ಯ ಯೋಜನೆಯಲ್ಲಿನ ಲೋಪದೋಷಗಳನ್ನು ಚರ್ಚಿಸಿದ್ದಾರೆ. ಯೋಜನೆಯಿಂದಾಗಿ ಸಂತ್ರಸ್ತರ

ಬವಣೆಗಳು, ಸ್ಥಳಾಂತರ, ಪುನರ್ವಸತಿ ಹಾಗೂ ಅವರ ಉಪಚಾರಗಳನ್ನು ದಾಖಲಿಸಿರುತ್ತಾರೆ.

Ratna V Reddy and B Suresh Reddy (೨೦೦೭)[೬೦] ಹೈದರಾಬಾದ್ ಮತ್ತು ಸಿಕಂದರಾಬಾದ್ ನಗರ ಮತ್ತು ಗ್ರಾಮಗಳಲ್ಲಿ ಯಾವ ಯಾವ ಯೋಜನೆಗಳಿಂದಾಗಿ ಎಷ್ಟು ಭೂಸ್ವಾಧೀನವಾಯಿತು. ರೈತರು ಮತ್ತು ಕೃಷಿ ಭೂಮಿಯ ಮೇಲೆ ಯೋಜನೆಯಿಂದಾಗುವ ಪರಿಣಾಮಗಳನ್ನು ಚರ್ಚಿಸಿ ಭೂಸ್ವಾಧೀನ, ಅಭಿವೃದ್ಧಿ ಚಟುವಟಿಕೆಗಳ ಕುರಿತು ಸಲಹೆಗಳನ್ನು ನೀಡಿದ್ದಾರೆ.

Keerthiman Avasti, (೨೦೦೭)[೬೧] ಕರ್ನಾಟಕ ವಿದ್ಯುತ್ ನಿಗಮ ಯೋಜನೆಯವರು ಸೂಪಾ ಅಣೆಕಟ್ಟು ಯೋಜನೆಯ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ನೀರಾವರಿ ವ್ಯವಸ್ಥೆಯ ಆಶ್ವಾಸನೆಯನ್ನು ನೀಡಿದ್ದು, ಅವು ಕಾರ್ಯರೂಪಕ್ಕೆ ಬಂದಿರುವುದಿಲ್ಲ. ವ್ಯವಸಾಯಕ್ಕೆ ನೀರಿಲ್ಲದ ಕಾರಣ ಸಂತ್ರಸ್ತರು ತಮ್ಮ ಭೂಮಿಯನ್ನು ನೀಲಗಿರಿ, ಅಕೇಶಿಯಾ ಮತ್ತು ಸರ್ವೆ ಗಿಡ ನೆಡಲು ದಾಂಡೇಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್‌ಗೆ ಗುತ್ತಿಗೆ ನೀಡಿರುತ್ತಾರೆ. ಇದರಿಂದಾಗಿ ಸಂತ್ರಸ್ತರಿಗೆ ಹೇಗೆ ಅನ್ಯಾಯವಾಗುತ್ತಿದೆ ಎಂಬುದನ್ನು ದಾಖಲಿಸಿರುತ್ತಾರೆ.

Divya Krishnaswamy, (೨೦೦೯)[೬೨] ಸ್ಥಳಾಂತರವು ಸಾಮಾಜಿಕ ಸಂರಚನೆಯನ್ನು ನಾಶ ಮಾಡಿಬಿಡುತ್ತದೆ. ಪುರುಷರಿಗಿಂತ ಮಹಿಳೆಯರು ಹೆಚ್ಚು ಬಾಧಿತರಾಗುತ್ತಾರೆ. ಸ್ಥಳಾಂತರಕ್ಕೆ ಪರಿಹಾರವು ಅಸಮರ್ಪಕವಾಗಿದೆ, ತಡಮಾಡಲಾಗಿದೆ ಎಂದು ವ್ಯಕ್ತಪಡಿಸಿದ್ದಾರೆ.

ಯೋಜನೆಗಳಿಗೆ ಸಂಬಂಧಿಸಿದಂತಹ ಈ ಎಲ್ಲಾ ಅಧ್ಯಯನಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳೆಂದರೆ ದೇಶದಲ್ಲಿ ಕೈಗೊಂಡಂತಹ ಯಾವುದೇ ಯೋಜನೆಗಳು ತಮ್ಮ ಯೋಜನಾ ಕಾರ್ಯಕ್ಕೆ ಕೊಟ್ಟಷ್ಟು ಪ್ರಾಮುಖ್ಯತೆ ಅದರಿಂದ ಸಂತ್ರಸ್ತರಾದ ಜನರಿಗೆ ಕೊಡಲಿಲ್ಲ. ಈ ಎಲ್ಲಾ ಯೋಜನೆಗಳಿಂದ ಸಂತ್ರಸ್ತರಾದವರು ಸರಿಯಾದ ಪುನರ್ವಸತಿ ಇಲ್ಲದೇ ಇನ್ನಿಲ್ಲದಂತೆ ಕಷ್ಟ ಪಡುತ್ತಿದ್ದಾರೆ. ಈ ಎಲ್ಲಾ ಪ್ರಬಂಧಗಳಲ್ಲಿನ ಅತಿವ್ಯಾಪನೆ ಏನೆಂದರೆ ಯೋಜನೆಯಿಂದಾದ ಸ್ಥಳಾಂತರದ ಅಂಕಿ ಅಂಶ ಮತ್ತು ನೀಡಿದ ಪರಿಹಾರ ಕುರಿತು ಮಾತ್ರಾ ದಾಖಲಿಸಿರುತ್ತಾರೆ. ಹೆಚ್ಚಾಗಿ ಇವು ಅಣೆಕಟ್ಟು ಯೋಜನೆಗಳ ಸ್ಥಳಾಂತರ ಮತ್ತು ಪುನರ್ವಸತಿ ಬಗೆಗಿವೆ. ಬೃಹತ್ ಅಭಿವೃದ್ಧಿ ಯೋಜನೆಗಳಿಂದಾದ ಸ್ಥಳಾಂತರ ಪ್ರಕ್ರಿಯೆ, ಪುನರ್ವಸತಿ ಪ್ರಕ್ರಿಯೆ ಇವುಗಳನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿ ತಮ್ಮದೇ ಆದ ಅಭಿವೃದ್ಧಿ ಮಾದರಿ, ಯೋಜನೆ ಮಾದರಿ, ಸ್ಥಳಾಂತರ ಮಾದರಿ, ಪುನರ್ವಸತಿ ಮಾದರಿ, ಅನುಸರಣಾ ಮಾದರಿಗಳನ್ನು ರಚಿಸಲು ಸಾಧ್ಯವಾಗದೇ ಇರುವುದು ಈ ಎಲ್ಲಾ ಪ್ರಬಂಧಗಳ ಅಧ್ಯಯನದಿಂದ ಕಂಡುಕೊಂಡ ಅಂತರವಾಗಿದೆ. ಎಲ್ಲಾ ಬೃಹತ್ ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಳಾಂತರ ಮತ್ತು ಪುನರ್ವಸತಿ ಇದೇ ರೀತಿ

ವೈಫಲ್ಯವಾಗಿದೆಯೇ? ಅಭಿವೃದ್ಧಿ ಹೆಸರಲ್ಲಿ ಕೈಗೊಳ್ಳುವ ಯೋಜನೆಗಳು ಯಾಕೆ ಪುನರ್ವಸತಿಯನ್ನು ಕಡೆಗಣಿಸುತ್ತವೆ? ಯಾಕೆ ಪುನರ್ವಸತಿ ಯೋಜನೆಗಳು ವೈಫಲ್ಯವಾಗುತ್ತವೆ? ಪುನರ್ವಸತಿಯಲ್ಲಿ ಯೋಜನಾ ಬಾಧಿತರ ಪಾತ್ರವೇನು? ಸಂತ್ರಸ್ತರು ಬೇರೆ ಬೇರೆ ರೀತಿಯಲ್ಲಿ ಮೋಸ ಹೋಗುತ್ತಿದ್ದಾರೆಯೇ? ಇಂತಹ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ.

೧.೯.೭. ಬುಡಕಟ್ಟುಗಳ ಪುನರ್ವಸತಿಗೆ ಸಂಬಂಧಿಸಿದಂತೆ

Hari mohan mathur, (೨೦೧೪)[೬೩] ಅಭಿವೃದ್ಧಿ ಯೋಜನೆಗಳಿಂದ ಬುಡಕಟ್ಟುಗಳ ಸ್ಥಳಾಂತರದ ದಾರುಣ ಪರಿಣಾಮಗಳು ಹಾಗೂ ಪುನರ್ವಸತಿ ಯೋಜನೆಯಲ್ಲಿ ಬುಡಕಟ್ಟು ಜನರ ಸಾಂಸ್ಕೃತಿಕ ಅನನ್ಯತೆಯನ್ನು ಪರಿಗಣಿಸಲಾಗಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಜೊತೆಗೆ ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಜನರ ಪರಿಸ್ಥಿತಿಯ ಕುರಿತು ದಾಖಲಿಸಿರುತ್ತಾರೆ.

Devendrappa Thakur (Ed), (೧೯೯೭)[೬೪] ಇವರು ಬೇರೆ ಬೇರೆ ರೀತಿಯ ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರಗೊಂಡ ಬುಡಕಟ್ಟುಗಳ ಪುನರ್ವಸತಿಯನ್ನು ಸರ್ಕಾರ ಯಾವ ರೀತಿ ಮಾಡುತ್ತಿದೆ ಮತ್ತು ಇದಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಕಾನೂನುಗಳನ್ನು ಚರ್ಚಿಸಿದ್ದಾರೆ. ಬುಡಕಟ್ಟುಗಳಿಗಾಗಿ ಸಾಂವಿಧಾನಿಕವಾಗಿ ಯಾವ ಪುನರ್ವಸತಿ ಯೋಜನೆಗಳಿವೆ, ಪುನರ್ವಸತಿ ಸಾಮಾನ್ಯ ನೀತಿ, ಪುನರ್ವಸತಿ ಸಂಸ್ಥೆ ಕೈಗೊಳ್ಳಬೇಕಾದ ಕ್ರಮ, ಸರಿಯಾದ ಪರಿಹಾರಧನ ಹಾಗೂ ಪುನರ್ವಸತಿ ಒದಗಿಸುವಲ್ಲಿ ಶಿಫಾರಸ್ಸು, ಗೃಹ ಖಾತೆಯನ್ನು ಈ ನಿಟ್ಟಿನಲ್ಲಿ ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ದಾಖಲಿಸಿದ್ದಾರೆ.

Walter Fernandes (Ed), (೨೦೦೯)[೬೫] ಇವರು ಬೇರೆ ಬೇರೆ ಕಾರಣಕ್ಕಾಗಿ ಬುಡಕಟ್ಟು ಜನರ ಭೂಸ್ವಾಧೀನತೆಯ ಕುರಿತು ಚರ್ಚಿಸಿದ್ದಾರೆ. ತ್ರಿಪುರಾದ ಗುಮಟಿ ಜಲವಿದ್ಯುತ್ ಸ್ಥಾವರದಿಂದ ಆದ ಭೂಸ್ವಾಧೀನತೆ ಹಾಗೂ ಬುಡಕಟ್ಟು ಜನರಿಗೆ ಸರಿಯಾದ ಪುನರ್ವಸತಿ ಸಿಗದೆ ತತ್ತರಿಸಿ ಹೋಗಿರುವ ಕುರಿತು ಚರ್ಚಿಸಿದ್ದಾರೆ. ಜಲವಿದ್ಯುತ್ ಯೋಜನೆಗಳಿಂದ ಅರುಣಾಚಲ ಪ್ರದೇಶದಲ್ಲಿ ಭೂಸ್ವಾಧಿನತೆ ಹಾಗೂ ಇದರಿಂದ ಉಂಟಾದ ಪರಿಸರದ ಹಾನಿ, ಯೋಜನಾ ನಿರಾಶ್ರಿತರು, ಅವರಿಗೆ ದೊರೆತ ಪರಿಹಾರ ಹಾಗೂ ಪುನರ್ವಸತಿ ಯೋಜನೆಗಳ ಕುರಿತು ದಾಖಲಿಸಿದ್ದಾರೆ.

ಬುಡಕಟ್ಟು ಜನರು ಬೃಹತ್ ಅಭಿವೃದ್ಧಿ ಯೋಜನೆಗಳಿಂದಾಗಿ ಇನ್ನಿಲ್ಲದಂತೆ ತತ್ತರಿಸಿ ಹೋಗಿದ್ದಾರೆ ಎಂಬ ಅಂಶವನ್ನು ಈ ಎಲ್ಲಾ ಬರಹಗಳಿಂದ ಕಂಡುಕೊಳ್ಳಲಾಗಿದೆ. ಸ್ಥಳಾಂತರ ಬುಡಕಟ್ಟುಗಳಿಗೆ ಯಾಕೆ ಪರಿಣಾಮ ಬೀರುತ್ತದೆ? ಬುಡಕಟ್ಟುಗಳಿಗೆ ಇಷ್ಟೆಲ್ಲಾ ಕಾನೂನು ರಕ್ಷಣೆಗಳಿದ್ದರೂ ಅವರ ಪರಿಸ್ಥಿತಿ ಯಾಕೆ ಹೀಗಾಗುತ್ತದೆ? ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ವಿಮರ್ಶೆ ಮಾಡಲಾಗಿದೆ.

೧.೯.೮. ಅಭಿವೃದ್ಧಿ ಯೋಜನೆಗಳ ಪರಿಣಾಮಗಳಿಗೆ ಸಂಬಂಧಿಸಿದಂತೆ

ಬೋರಲಿಂಗಯ್ಯ ಹಿ.ಚಿ., (೧೯೯೫)[೬೬] ನವವಸಾಹತುಶಾಹಿಯ ಆಕ್ರಮಣಕಾರಿ ಧೋರಣೆಯ ಅಭಿವೃದ್ಧಿ ಯೋಜನೆಗಳು ದೇಶೀ ಸಂಸ್ಕೃತಿ ಹಾಗೂ ಬದುಕನ್ನು ಹೇಗೆ ಮೂಲೆ ಗುಂಪು ಮಾಡಿ ಆ ಸಮುದಾಯಗಳು ಇಂದಿಗೂ ನಲುಗುವಂತೆ ಮಾಡಿವೆ ಎಂಬುದನ್ನು ನಮೂದಿಸಿದ್ದಾರೆ.

ಬೋರಲಿಂಗಯ್ಯ ಹಿ.ಚಿ, ಕಾಳೇಗೌಡ ನಾಗವಾರ (ಸಂ), (೨೦೦೦)[೬೭] ಅಣೆಕಟ್ಟು ಯೋಜನೆಗಳಿಂದಾಗಿ ಗಿರಿಜನರು ಹೇಗೆ ನಾಶವಾಗಿದ್ದಾರೆ, ಸ್ಥಳಾಂತರಗೊಂಡ ಗಿರಿಜನರ ಬದುಕು ಏನಾಯಿತು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

Michael M. Cernea, (೧೯೯೬)[೬೮] ಅಭಿವೃದ್ಧಿ ಯೋಜನೆಗಳಿಂದಾಗಿ ಉಂಟಾಗುವ ಬಲಾತ್ಕಾರದ ಸ್ಥಳಾಂತರವು ಸಮಾಜದಲ್ಲಿ ಒಡಕನ್ನು ಉಂಟುಮಾಡುತ್ತದೆ. ಒತ್ತಾಯಪೂರ್ವಕವಾದ ಅಭಿವೃದ್ಧಿ ಯೋಜನೆಗಳು ನ್ಯಾಯಯುತವಾದ ಪ್ರಯೋಜನಗಳನ್ನು ನೀಡುವುದಿಲ್ಲ ಎಂದು ದಾಖಲಿಸಿದ್ದಾರೆ.

Bharathi M and R. S. Rao, (೧೯೯೯)[೬೯] ಅಭಿವೃದ್ಧಿ ಯೋಜನೆಗಳು ಬುಡಕಟ್ಟು ಜನರನ್ನು, ರೈತರನ್ನು ಹಾಗೂ ಕುಶಲಕರ್ಮಿಗಳನ್ನು ಅವರ ಮೂಲನೆಲೆಯಿಂದ ಕಿತ್ತು ತೆಗೆದು ಸರಿಯಾದ ಪುನರ್ವಸತಿಯಿಲ್ಲದೇ ಕಾನೂನು ಬಾಹಿರವಾಗಿ ಜೀವನ ಮಾಡುವಂತೆ ಮಾಡಿವೆ ಎಂದು ಹೇಳಿದ್ದಾರೆ.

Chris de Wet, (೨೦೦೧)[೭೦] ಅಭಿವೃದ್ಧಿ ಯೋಜನೆಗಳಿಂದಾಗಿ ಸ್ಥಳಾಂತರಗೊಂಡು ಸಂತ್ರಸ್ತರು ಎಲ್ಲದರಲ್ಲಿಯೂ ಬಲಹೀನಗೊಳ್ಳುತ್ತಾ ಬರುತ್ತಾರೆ. ಕೊನೆಗೆ ಅವರ ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ನಿಯಂತ್ರಣವನ್ನು ಕಳೆದುಕೊಳ್ಳುತ್ತಾರೆ. ಸಮುದಾಯದಲ್ಲಿ ಪ್ರಾಮುಖ್ಯತೆ ಕಳೆದುಕೊಳ್ಳುತ್ತಾರೆ. ಹೆಚ್ಚಿನ ಯೋಜನೆಗಳು ತನ್ನ ಸಂತ್ರಸ್ತರನ್ನು ಪುನರ್‌ನೆಲೆಗೊಳಿಸುವಲ್ಲಿ ವಿಫಲವಾಗಿವೆ. ಸಂತ್ರಸ್ತರನ್ನು ವ್ಯವಸ್ಥಿತವಾಗಿ ಪುನರ್‌ನೆಲೆಗೊಳಿಸುವಲ್ಲಿ ಅನುಸರಿಸಬೇಕಾದ ಪ್ರಮುಖ ಅಂಶಗಳನ್ನು ದಾಖಲಿಸಿರುತ್ತಾರೆ.

ವಿಷ್ಣುನಾಯ್ಕ, (೨೦೦೭)[೭೧] ಉತ್ತರಕನ್ನಡ ಜಿಲ್ಲೆಗೆ ಬಂದಿರುವ ಬೃಹತ್ ಯೋಜನೆಗಳಿಂದ ಆ ಜಿಲ್ಲೆಗೆ ಕನಿಷ್ಟ ಪ್ರಮಾಣದ ಪ್ರಯೋಜನ ಕೂಡಾ ಆಗಲಿಲ್ಲ. ಉತ್ತರ ಕನ್ನಡ ಜಿಲ್ಲೆಯ ಮೇಲೆ ಈಗಾಗಲೇ ಹೇರಿರುವ ಯೋಜನೆಗಳಿಂದಾಗಿ ಸಾವಿರಾರು ಜನರು ಬದುಕಿನ ನೆಮ್ಮದಿ ಕಳೆದುಕೊಂಡಿದ್ದಾರೆ. ಇನ್ನು ಮುಂದೆ ಯಾವುದೇ ಬೃಹತ್ ಯೋಜನೆಗಳನ್ನು ಸಹಿಸಿಕೊಳ್ಳುವಂಥ ಧಾರಣ ಶಕ್ತಿ ಈ ಜಿಲ್ಲೆಗೆ ಉಳಿದಿಲ್ಲ ಎಂದು ದಾಖಲಿಸಿದ್ದಾರೆ.

ಬೃಹತ್ ಅಭಿವೃದ್ಧಿ ಯೋಜನೆಗಳ ನಿರ್ಮಾಣದಿಂದ ಸ್ಥಳಾಂತರವಾಗಿ ಜನರ ಜೀವನದಲ್ಲಿ ಒಡಕುಗಳು ಉಂಟಾಗಿವೆ. ಇದರಿಂದಾಗಿ ದೇಶೀ ಸಂಸ್ಕೃತಿ ಹಾಳಾಗಿದೆ. ಪುನರ್‌ನೆಲೆ ಕಾರ್ಯಕ್ರಮಗಳು ವಿಫಲಗೊಂಡಿವೆ. ಯೋಜನೆಗಳಿಗಾಗಿ ತ್ಯಾಗ ಮಾಡಿದ ಜನರಿಗೆ ಯೋಜನೆಯಿಂದ ಕಿಂಚಿತ್ತೂ ಪ್ರಯೋಜನವಾಗಲಿಲ್ಲ ಎಂಬುದನ್ನು ಈ ಎಲ್ಲಾ

ಅಧ್ಯಯನಗಳಿಂದ ಕಂಡುಕೊಳ್ಳಲಾಗಿದೆ. ಸ್ಥಳಾಂತರ ಒತ್ತಾಯ ಪೂರ್ವಕವಾಗಿದ್ದರೆ ಮಾನವ ಹಕ್ಕುಗಳಿಗೆ ರಕ್ಷಣೆ ಇಲ್ಲವೇ? ಸ್ಥಳಾಂತರದಿಂದ ದೇಶೀ ಸಂಸ್ಕೃತಿ ಹೇಗೆ ಹಾಳಾಗುತ್ತದೆ? ಸಂತ್ರಸ್ತರನ್ನು ವ್ಯವಸ್ಥಿತವಾಗಿ ಪುನರ್‌ನೆಲೆಗೊಳಿಸಲು ಸಾಧ್ಯವಿಲ್ಲವೇ? ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ.

೧.೯.೯. ಪುನರ್ವಸತಿ ಹೇಗಿರಬೇಕು ಎಂಬುದಕ್ಕೆ ಸಂಬಂಧಿಸಿದಂತೆ

A/HRC/4/18[೨೨] ಈ ಮಾರ್ಗದರ್ಶಿಯು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಕ್ಕಲೆಬ್ಬಿಸುವುದು ಮತ್ತು ಸ್ಥಳಾಂತರಗೊಳಿಸುವುದಕ್ಕೆ ಸಂಬಂಧಿಸಿದಂತಹ ಮಾನವ ಹಕ್ಕುಗಳನ್ನು ಸಂಬೋಧಿಸುತ್ತದೆ. ಪ್ರಸ್ತುತ ಮಾರ್ಗದರ್ಶಿ ಸೂತ್ರದಲ್ಲಿ "ಸಾರ್ವಜನಿಕ ಹಿತಾಸಕ್ತಿಯ" ಹೆಸರಲ್ಲಿ ಕೈಗೊಂಡಿರುವ ಅಭಿವೃದ್ಧಿ ಪ್ರೇರಿತ ಒಕ್ಕಲೆಬ್ಬಿಸುವಿಕೆಯ ಮಾರ್ಗದರ್ಶಿ ಸೂತ್ರಗಳನ್ನು ಹೇಳಲಾಗಿದೆ. ಮಾನವನ ಮೂಲಭೂತ ಹಕ್ಕುಗಳ ತತ್ವಗಳನ್ನು ನೀಡಲಾಗಿದೆ. ಸ್ಥಳಾಂತರದಿಂದಾಗಿ ಯಾವೆಲ್ಲಾ ಮೂಲಭೂತ ಹಕ್ಕುಗಳಿಗೆ ತೊಂದರೆ ಉಂಟಾಗುತ್ತದೆ ಎಂಬುದನ್ನು ದಾಖಲಿಸಿದ್ದಾರೆ.

Michael M. Cernea, (೨೦೦೦)[೨೩] ಅಭಿವೃದ್ಧಿಯ ಹೆಸರಿನಲ್ಲಿ ಕೆಲವರು ಪ್ರಯೋಜನವನ್ನು ಪಡೆದುಕೊಂಡರೆ ಹಲವರು ನೋವನ್ನು ಅನುಭವಿಸುತ್ತಾರೆ. ಅಭಿವೃದ್ಧಿಯ ಪ್ರಯೋಜನಗಳನ್ನು ಸಂತ್ರಸ್ತರು ಪಡೆದುಕೊಳ್ಳುವಂತಾಗಲು ಅವರನ್ನು ಪುನರ್ ನೆಲೆಗೊಳಿಸಬೇಕಾಗಿದೆ. ಇದಕ್ಕಾಗಿ ಪುನರ್ ನೆಲೆಯ ರೂಪುರೇಷೆ, ಪುನರ್ ನೆಲೆಯ ಯೋಜನೆ ಹಾಗೂ ಆರ್ಥಿಕ ನೆರವಿನಲ್ಲಿರುವ ಕಾನೂನು ಹಾಗೂ ವಿಧಾನಗಳ ತೊಡಕುಗಳನ್ನು ಚರ್ಚಿಸುತ್ತಾ ಇದರಲ್ಲಿ ಅವಶ್ಯವಾಗಿ ಬದಲಾವಣೆ ಆಗಬೇಕಾಗಿದೆ ಎಂಬುದನ್ನು ಹೇಳಿದ್ದಾರೆ. ಸ್ಥಳಾಂತರದಿಂದಾಗಿ ಸಂತ್ರಸ್ತರು ಯಾವ ರೀತಿಯ ಗಂಡಾಂತರಗಳಿಗೆ ಒಳಗಾಗುತ್ತಾರೆ. ಸಂತ್ರಸ್ತರ ಜೀವನಾಧಾರವನ್ನು ಪುನರ್‌ನಲೆಗೊಳಿಸುವಲ್ಲಿನ ಮುಖ್ಯ ಪ್ರಕ್ರಿಯೆ, ಪುನರ್‌ನೆಲೆಯ ಪ್ರಮುಖ ಅಂಶಗಳು, ಸದ್ಯದ ಪುನರ್‌ನೆಲೆ ಪ್ರಕ್ರಿಯೆಯಲ್ಲಿ ಅವಶ್ಯವಾಗಿ ಮಾಡಿಕೊಳ್ಳಬೇಕಾದ ಬದಲಾವಣೆಗಳನ್ನು ದಾಖಲಿಸಿದ್ದಾರೆ.

United nations high commissioner for human rights, (೨೦೦೩)[೨೪] ನರ್ಮದಾ ಆಣೆಕಟ್ಟನ್ನು ೯೫ಮೀ.ನಿಂದ ೧೧೦ಮೀಟರ್‌ಗೆ ಏರಿಸಲು ನರ್ಮದಾ ಕಂಟ್ರೋಲಿಂಗ್ ಅಥಾರಿಟಿಯವರು ನಿರ್ಧಾರ ತೆಗೆದುಕೊಂಡ ಸಂದರ್ಭದಲ್ಲಿ ಮಾನವ ಹಕ್ಕು ಆಯೋಗದವರು ಭಾರತದ ಪ್ರಧಾನ ಮಂತ್ರಿಯವರಿಗೆ ಬರೆದ ಪತ್ರ. ಇದರಲ್ಲಿ ಅಣೆಕಟ್ಟು ನಿರ್ಮಾಣದಿಂದಾಗಿ ಮಾನವ ಹಕ್ಕುಗಳಿಗೆ ಹೇಗೆ ಚ್ಯುತಿ ಉಂಟಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ನರ್ಮದಾ ಯೋಜನೆಯಲ್ಲಿ ಮೊದಲಿನಿಂದಲೂ ಮಾನವ ಹಕ್ಕುಗಳ ಪರಿಸ್ಥಿತಿಯು ತೀರಾ ಕೆಟ್ಟದಾಗಿದ್ದು ಈ ಬಾರಿ ಅದು ನಡೆಯಬಾರದೆಂದು ಅವರು ತಮ್ಮ ಕಾಳಜಿಯನ್ನು ಈ ಪತ್ರದಲ್ಲಿ ದಾಖಲಿಸಿದ್ದಾರೆ. ಅಣೆಕಟ್ಟು

ನಿರ್ಮಾಣದಿಂದಾಗಿ ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸಿದಾಗ ಮಾನವ ಹಕ್ಕುಗಳನ್ನು ಯೋಜನೆ ಹೇಗೆ ಉಲ್ಲಂಘನೆ ಮಾಡಿದಂತಾಗುತ್ತದೆ ಮತ್ತು ಸರಿಯಾದ ಪುನರ್ವಸತಿ ಮಾಡದಿದ್ದಾಗಲೂ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂಬುದನ್ನು ದಾಖಲಿಸಿರುತ್ತಾರೆ.

Bela Bhatia & K. Balagopal, (೨೦೦೮)[೭೫] ಸ್ಥಳಾಂತರವು ಭೌತಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತುಂಬಾ ದೀರ್ಘಕಾಲೀನ ವಿವಿಧ ಪರಿಣಾಮಗಳನ್ನು ಬೀರುವ ನೋವಿನ ಪ್ರಕ್ರಿಯೆಯಾಗಿದ್ದು ಅಷ್ಟು ಸುಲಭವಾಗಿ ಅದಕ್ಕೆ ಪರ್ಯಾಯ ಪರಿಹಾರೋಪಾಯಗಳನ್ನು ನೀಡಲಾಗುವುದಿಲ್ಲ. ಒಂದು ವೇಳೆ ಸ್ಥಳಾಂತರದ ರೀತಿ ಮತ್ತು ಪರಿಣಾಮಗಳನ್ನು ಪೂರ್ವಯೋಜಿತವಾಗಿ ವಿಶ್ಲೇಷಿಸಿ ಯೋಗ್ಯ ರಕ್ಷಣಾ ತಂತ್ರಗಳನ್ನು ಬಳಸಿಕೊಳ್ಳದೇ ಇದ್ದರೆ ಯೋಜನೆಯ ಅನುಷ್ಠಾನವು ವ್ಯಾಪಕ ಅಸಮಾಧಾನಕ್ಕೆ ಒಳಪಡಬೇಕಾಗುತ್ತದೆ ಎಂದು ದಾಖಲಿಸಿದ್ದಾರೆ.

Hari Mohan Mathur, (೨೦೧೪)[೭೬] ಲೇಖಕರು ಸ್ಥಳಾಂತರ ಮತ್ತು ಪುನರ್‌ನೆಲೆಯ ಸಮಸ್ಯೆಯನ್ನು ಮತ್ತು ಸ್ಥಳಾಂತರದ ಕೆಟ್ಟ ಪರಿಣಾಮಗಳನ್ನು ವಿಮರ್ಶಾತ್ಮಕವಾಗಿ ದಾಖಲಿಸಿರುತ್ತಾರೆ. ಅಭಿವೃದ್ಧಿ ಪಥದ ನಡಿಗೆಯ ಸುಖ ಮತ್ತು ದು:ಖಗಳನ್ನು ಸರಿಸಮಾನವಾಗಿ ಹಂಚದೆ ತ್ಯಾಗ ಮಾಡಿದವರಿಗೆ ಅನ್ಯಾಯ ಮಾಡಲಾಗಿದೆ ಎಂದು ದಾಖಲಿಸಿದ್ದಾರೆ.

Members of Parliament reference note, (೨೦೧೩)[೭೭] ಹಲವು ಕಾರಣಗಳಿಂದಾಗಿ ಪುನರ್ವಸತಿಯಲ್ಲಿ ಹಿನ್ನಡೆಯಾಗಿದೆ ಎಂದು ಹೇಳಲಾಗಿದೆ.

Shankar Venkateswaran, (೨೦೦೭)[೭೮] ರೈತರಿಗೆ ಭೂಮಿ ಎಂದರೆ ಏನು? ರೈತರನ್ನು ಸ್ಥಳಾಂತರಗೊಳಿಸಿದಾಗ ಅವರ ಮೇಲೆ ಯಾವ ಪರಿಣಾಮ ಬೀರುತ್ತದೆ? ಅವರನ್ನು ಯಾವ ರೀತಿಯಾಗಿ ಪುನರ್ವಸತಿಗೊಳಿಸಬೇಕು ಎಂಬುದನ್ನು ಸೂಚಿಸಿದ್ದಾರೆ.

Michael M. Cernea, (೨೦೦೨)[೭೯] ಸ್ಥಳಾಂತರದಿಂದ ಉಂಟಾಗುವ ಗಂಡಾಂತರದ ವಿಧಗಳು, ಈ ಗಂಡಾಂತರಗಳನ್ನು ಎದುರಿಸಿ ಹೇಗೆ ಪುನರ್ವಸತಿಗೊಳ್ಳಬೇಕು ಎಂಬುದಕ್ಕೆ ಪುನರ್ವಸತಿಯ ಎಂಟು ಮಾದರಿಗಳನ್ನು ದಾಖಲಿಸಿದ್ದಾರೆ.

Michael M Cernea, (೨೦೦೭)[೮೦] ಅಭಿವೃದ್ಧಿ ಪ್ರೇರಿತ ಸ್ಥಳಾಂತರಕ್ಕೆ ಒಳಗಾದವರ ಸಮರ್ಪಕ ಪುನರ್ವಸತಿ ಮತ್ತು ಸರಿಯಾದ ಪುನರ್‌ನೆಲೆಯು ಪರಿಹರಿಸಲು ತುಂಬಾ ಕ್ಲಿಷ್ಟಕರವಾದ ಸಮಸ್ಯೆಯಾಗಿದೆ. ಸರಕಾರದಿಂದ ಪರಿಹಾರ ನೀಡುವ ವಿಧಾನವು ಯಾವತ್ತೂ ಸಾಕಷ್ಟು ಪ್ರಮಾಣದಲ್ಲಿರಲಿಲ್ಲ. 'ಲಾಭ-ಹಂಚಿಕೊಳ್ಳುವ' ಹೊಸರೂಪದ ವಿಧಾನವನ್ನು ಅಳವಡಿಸಿಕೊಂಡು ಸಮಾಧಾನಕರ ಪುನರ್ವಸತಿ ಮತ್ತು ಪುನರ್ ನೆಲೆಯ ಪ್ರಶ್ನೆಗೆ ಹೇಗೆ ಪರಿಹಾರ ಸೂಚಿಸಬಹುದು ಮತ್ತು ಅಭಿವೃದ್ಧಿ ಕಾರಣದಿಂದಾದ ಒತ್ತಾಯದ

ಪುನರ್‌ನೆಲೆ ಸುಸ್ಥಿರವಾಗಿ ಯಶಸ್ಸಾಗಲು ಬೇಕಾದ ಉತ್ತಮ ಸಾಮರ್ಥ್ಯದ ಘಟಕಾಂಶಗಳನ್ನು ದಾಖಲಿಸಿರುತ್ತಾರೆ.

ಮಾನವನ ಮೂಲಭೂತ ಹಕ್ಕುಗಳ ರಕ್ಷಣೆ, ಸ್ಥಳಾಂತರದ ರೀತಿ ಮತ್ತು ಪರಿಣಾಮಗಳನ್ನು ಪೂರ್ವಯೋಜಿತವಾಗಿ ವಿಶ್ಲೇಷಿಸುವುದು, ಯೋಗ್ಯ ರಕ್ಷಣಾ ತಂತ್ರಗಳನ್ನು ಬಳಸಿಕೊಳ್ಳುವುದು, ಪುನರ್ವಸತಿಯ ಎಂಟು ಮಾದರಿಗಳು ಮತ್ತು ಲಾಭ ಹಂಚಿಕೊಳ್ಳುವ ವಿಧಾನದಿಂದ ಪುನರ್ವಸತಿ ಹಾಗೂ ಪುನರ್ ನೆಲೆಯನ್ನು ಸಮಾಧಾನಕರವಾಗಿ ನೀಡಲು ಸಾಧ್ಯ ಎಂದು ಈ ಎಲ್ಲಾ ಲೇಖನಗಳ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮಾನವನ ಮೂಲಭೂತ ಹಕ್ಕುಗಳ ತತ್ವಗಳು ಸ್ಥಳಾಂತರಗೊಂಡವರಿಗೆ ನಿಜವಾಗಿಯೂ ಧಕ್ಕೆಯಾಗದಂತೆ ನೋಡಿಕೊಂಡಿವೆಯೇ? ಯಾವ ರೀತಿಯಾಗಿ ಸ್ಥಳಾಂತರದ ರೀತಿ ಮತ್ತು ಪರಿಣಾಮಗಳನ್ನು ಪೂರ್ವಯೋಜಿತವಾಗಿ ವಿಶ್ಲೇಷಣೆ ಮಾಡಬಹುದು? ಯೋಗ್ಯ ರಕ್ಷಣಾ ತಂತ್ರಗಳನ್ನು ಯಾವ ರೀತಿಯಾಗಿ ಬಳಸಿಕೊಳ್ಳಬಹುದು? ಪುನರ್ವಸತಿಯನ್ನು ಸರಿಯಾದ ಸಮಯದಲ್ಲಿ ನಿರ್ವಹಿಸುವಂತಾಗಲು ಏನು ಮಾಡಬೇಕು? ಪುನರ್ವಸತಿಯ ಎಂಟು ಮಾದರಿಗಳಿಂದ ಪುನರ್ವಸತಿಗೊಳಿಸಲು ಸಾಧ್ಯವೇ? ಲಾಭ-ಹಂಚಿಕೊಳ್ಳುವ ವಿಧಾನದಿಂದ ಸಮಾಧಾನಕರ ಪುನರ್ವಸತಿ ಮತ್ತು ಪುನರ್ ನೆಲೆ ನೀಡಲು ಸಾಧ್ಯವೇ? ಎಂಬ ಪ್ರಶ್ನೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಎತ್ತಿಕೊಂಡು ವಿಶ್ಲೇಷಿಸಲಾಗಿದೆ.

೧.೯.೧೦. ಉತ್ತರಕನ್ನಡ ಜಿಲ್ಲೆ, ಬೃಹತ್ ಅಭಿವೃದ್ಧಿ ಯೋಜನೆಗಳು ಹಾಗೂ ಕುಣಬಿ ಸಮುದಾಯ ಇವುಗಳಿಗೆ ಸಂಬಂಧಿಸಿದಂತೆ

National Bank for Agriculture and Rural Development, Bangalore Regional Office (೧೯೯೮)[೮೧] ಉತ್ತರ ಕನ್ನಡ ಜಿಲ್ಲೆಯ ಸಮಗ್ರ ಮಾಹಿತಿ, ಜಿಲ್ಲೆಯಲ್ಲಿ ಜಾರಿಯಾದ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ದಾಖಲಾಗಿದೆ.

ಕೃಷ್ಣ ಮೂರ್ತಿ ಭಟ್ಟ, (೨೦೦೦)[೮೨] ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಕ್ಷೇತ್ರ, ಕರಾವಳಿ, ಬಯಲುಗಳು, ಪ್ರಮುಖ ನದಿಗಳು, ಕಲೆ, ಹಬ್ಬ, ಜನಾಂಗಗಳು, ಉತ್ಸವ ಇವುಗಳ ಕುರಿತು ಮಾಹಿತಿ ದಾಖಲಿಸಿದ್ದಾರೆ.

Suryanath U kamath (Chief Editor), (೧೯೮೨)[೮೩] 'ಶಕ್ತಿಯ ಅಭಿವೃದ್ಧಿ' ಎಂಬ ವಿಭಾಗದಲ್ಲಿ ಕರ್ನಾಟಕದಲ್ಲಿ ಜಲವಿದ್ಯುತ್ ಯೋಜನೆಗಳು ಬೆಳೆದು ಬಂದ ರೀತಿ ವಿವರಿಸಲಾಗಿದೆ. ಕಾಳಿ ಜಲವಿದ್ಯುತ್ ಯೋಜನೆ, ಕಾಳಿ ನದಿ, ಕುಣಬಿಯರು, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಇವೆಲ್ಲವುಗಳ ಕುರಿತು ಮಾಹಿತಿ ದಾಖಲಾಗಿರುತ್ತದೆ.

ಕೃಷ್ಣಾನಂದ ಕಾಮತ್, ಜ್ಯೋತ್ಸ್ನಾ ಕೃಷ್ಣಾನಂದ ಕಾಮತ್ (ಸಂ), (೨೦೧೧)[೮೪] ಬೃಹತ್ ನಾಗಝರಿ ಜಲವಿದ್ಯುತ್ ಕೇಂದ್ರ ಸ್ಥಾಪನೆಯ ತಾತ್ವಿಕತೆ. ಸ್ಥಾಪಿಸಲಾಗಿದ್ದರಿಂದಾದ

ಪರಿಣಾಮಗಳನ್ನು ವಿವರಿಸಿದ್ದಾರೆ. 'ಪರಿಸರ ಮತ್ತು ನಾವು' ಎಂಬ ಲೇಖನದಲ್ಲಿ ನಮ್ಮ ದೇಶವು ಪ್ರಗತಿಯ ಮಾಪನಗಳನ್ನು ಪಾಶ್ಚಿಮಾತ್ಯರಿಂದ ಎರವಲು ಪಡೆದದ್ದು ದೊಡ್ಡದೊಂದು ಕೊರತೆ. ವಿದ್ಯುತ್ ಉತ್ಪಾದನಾ ಕಾರ್ಯವನ್ನು ಪ್ರಾರಂಭಿಸಲು ಅರ್ಥಶಾಸ್ತ್ರಜ್ಞರು ಯಾವ ರೀತಿ ಕಾರಣರಾದರು. ಸೂಪಾ ಅಣೆಕಟ್ಟು ಪ್ರಾರಂಭವಾದ ತಾತ್ವಿಕತೆಯನ್ನು ದಾಖಲಿಸಿರುತ್ತಾರೆ.

ಜಗದೀಶ ಕೊಪ್ಪ. ಎನ್. (೧೯೯೯)[೮೫] ಅಣುವಿದ್ಯುತ್, ಅಣ್ವಸ್ತ್ರ, ಅಣುವಿಕಿರಣ, ಅಣುಸ್ಥಾವರಗಳ ಇತಿಹಾಸ ಹಾಗೂ ಅವುಗಳ ದುರಂತದ ಸರಮಾಲೆ ಕುರಿತು ವಿಮರ್ಶೆ ಮಾಡಿದ್ದಾರೆ. ಸಣ್ಣ ಜಲಾಶಯ, ಕಾಲುವೆ, ಪವನಶಕ್ತಿ, ಸೌರಶಕ್ತಿ, ಗೋಬರ್‌ಗ್ಯಾಸ್ ಈ ರೀತಿಯ ಪ್ರಾಕೃತಿಕ ಸಂಪತ್ತಿನಿಂದ ವಿದ್ಯುತ್ ಪಡೆಯುವ ಬಗೆ. ಕೈಗಾ ಅಣುಸ್ಥಾವರ, ಸೀಬರ್ಡ್ ನೌಕಾನೆಲೆ, ಉತ್ತರ ಕನ್ನಡದ ಅಣೆಕಟ್ಟುಗಳು, ಗಣಿಗಾರಿಕೆ ಯೋಜನೆಗಳಿಂದ ಅಲ್ಲಿನ ಪ್ರಕೃತಿ ಮೇಲಾಗಿರುವ ದೌರ್ಜನ್ಯಗಳ ಕುರಿತು ಚರ್ಚಿಸಿರುತ್ತಾರೆ. ಈ ಯೋಜನೆಗಳಿಂದ ಸ್ಥಳಾಂತರಗೊಂಡ ಅಲ್ಲಿನ ಮೂಲನಿವಾಸಿಗಳ ಬದುಕು ಕುರಿತು ದಾಖಲಿಸಿದ್ದಾರೆ.

ಬೋರಲಿಂಗಯ್ಯ ಹಿ. ಚಿ., (೨೦೧೦)[೮೬] ಉತ್ತರ ಕನ್ನಡ ಜಿಲ್ಲೆಯ ಕುಣಬಿಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತಿಗತಿ ಚಿತ್ರಿಸಿದ್ದಾರೆ. ನಿಸರ್ಗ ಸಂಪತ್ತನ್ನು ಹೊಂದಿರುವ ಉತ್ತರ ಕನ್ನಡ ಜಿಲ್ಲೆಯು ಯಾವೆಲ್ಲಾ ಯೋಜನೆಗಳಿಂದ ತಲ್ಲಣಗಳನ್ನು ಅನುಭವಿಸುತ್ತಿದೆ ಎಂಬುದನ್ನು ದಾಖಲಿಸಿದ್ದಾರೆ.

Radhakrishnan P. (೧೯೯೦)[೮೭] ಕರ್ನಾಟಕದ ಹಿಂದುಳಿದವರ ಅಧ್ಯಯನಕ್ಕಾಗಿ ನೇಮಿಸಿದ್ದ ಆಯೋಗಗಳ ವಿವರಣೆ ಮತ್ತು ನ್ಯಾಯಮೂರ್ತಿ ರೆಡ್ಡಿಯವರ ವರದಿಯಂತೆ ಕರ್ನಾಟಕದಲ್ಲಿ ಕುಣಬಿಯರನ್ನು ಕುರಿತು ಬರೆದ ಮಾಹಿತಿ ದಾಖಲಾಗಿರುತ್ತದೆ.

ಮಲ್ಲಿಕಾರ್ಜುನ ಪ. ಸೊಬರದ, (೨೦೦೮)[೮೮] ಕುಣಬಿಯರ ಬಗ್ಗೆ ಪ್ರಾಥಮಿಕ ಮಾಹಿತಿ, ಉತ್ತರ ಕನ್ನಡ ಜಿಲ್ಲೆಯ ಯಾವ ಯಾವ ಯೋಜನೆಗಳಿಗೆ ಎಷ್ಟು ಭೂಮಿ ಪರಭಾರೆಯಾಗಿದೆ ಎಂಬ ಮಾಹಿತಿ ದಾಖಲಾಗಿರುತ್ತದೆ.

ಬಸವರಾಜ್ ಎ.ಡಿ., (೨೦೦೩)[೮೯] ಕುಡುಬಿಯರ ಬಗ್ಗೆ ನಡೆದಿರುವ ಅಧ್ಯಯನಗಳು ಹಾಗೂ ಅವರ ಸಾಂಸ್ಕೃತಿಕ ಬದುಕಿನ ಮಾಹಿತಿ ದಾಖಲಿಸಿರುತ್ತಾರೆ.

ನಾವಡ ಎ. ವಿ., (೨೦೦೮)[೯೦] ಉತ್ತರಕನ್ನಡ ಜಿಲ್ಲೆಯಲ್ಲಿ ಕುಣಬಿಗಳೆಂದು ಕರೆಯಲ್ಪಡುವ ಸಮುದಾಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಬಿಗಳೆಂದು ಕರೆಯಲ್ಪಡುತ್ತಾರೆ. ಭೌತಿಕ ಮಾನವಶಾಸ್ತ್ರ ಹಾಗೂ ಸಾಂಸ್ಕೃತಿಕ ಮಾನವಶಾಸ್ತ್ರದ ದೃಷ್ಟಿಯಿಂದ ಇವರುಗಳನ್ನು ಬುಡಕಟ್ಟುಗಳೆಂದೇ ಒಪ್ಪಿಕೊಳ್ಳಬೇಕು ಎಂದು ದಾಖಲಿಸಿರುತ್ತಾರೆ.

ಅರ್ಥಶಾಸ್ತ್ರಜ್ಞರ ಬರಹಗಳಿಂದ ಬೃಹತ್ ಅಭಿವೃದ್ಧಿ ಯೋಜನೆಗಳು ಪ್ರೇರಿತಗೊಂಡವು. ಜನರನ್ನು ಸ್ಥಳಾಂತರಗೊಳಿಸದೇ ಇರುವ ಯೋಜನೆಗಳಿಂದ ಕೂಡಾ

ವಿದ್ಯುತ್ ಪಡೆಯಬಹುದು, ಯೋಜನೆಗಳಿಂದ ಪ್ರಕೃತಿ ಮೇಲೆ ದೌರ್ಜನ್ಯ ನಡೆಯುತ್ತಿದೆ, ಯೋಜನೆಗಳಿಂದ ಎಲ್ಲವೂ ತಲ್ಲಣಗೊಳ್ಳುತ್ತಿದೆ ಎಂಬ ಮಾಹಿತಿಗಳನ್ನು ಈ ಎಲ್ಲಾ ಬರಹಗಳ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಯಾಕೆ ಕುಣಬಿಯರನ್ನು ಬುಡಕಟ್ಟು ಪಟ್ಟಿಗೆ ಸೇರಿಸಲಾಗಿಲ್ಲ? ಯೋಜನಾ ಸಂತ್ರಸ್ತರಾದ ಕುಣಬಿಯರ ಪ್ರಸಕ್ತ ಪರಿಸ್ಥಿತಿ ಏನಾಗಿದೆ? ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ.

ಬೃಹತ್ ಅಭಿವೃದ್ಧಿ ಚಿಂತನೆ, ಸಿದ್ಧಾಂತ, ಯೋಜನೆ, ಸ್ಥಳಾಂತರ, ಪುನರ್ವಸತಿ ಮತ್ತು ಅನುಸರಣಾ ಯೋಜನೆ, ಕುಣಬಿ ಸಮುದಾಯ ಇವುಗಳಿಗೆ ಸಂಬಂಧಿಸಿದಂತೆ ವಿದ್ವಾಂಸರು, ಅಧಿಕಾರಿಗಳು, ಸಮಾಜಶಾಸ್ತ್ರಜ್ಞರು, ಹೋರಾಟಗಾರರು, ಚಿಂತಕರು, ಸಂಶೋಧಕರು, ಸ್ವಯಂ ಸೇವಾ ಸಂಸ್ಥೆಗಳ ನಿರ್ದೇಶಕರುಗಳು, ಅಂತರಾಷ್ಟ್ರೀಯ ಸಂಸ್ಥೆಗಳ ಅಧಿಕಾರಿಗಳ ಬರವಣಿಗೆಗಳನ್ನು ಪರಾಮರ್ಶನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಹಲವು ಪ್ರಶ್ನೆಗಳನ್ನು ಎತ್ತಿಕೊಂಡು ಅದಕ್ಕೆ ತಕ್ಕುದಾದ ಪ್ರಶ್ನಾವಳಿ ರಚಿಸಿ, ದತ್ತಾಂಶಗಳನ್ನು ಸಂಗ್ರಹಿಸಿ ಅವುಗಳನ್ನು ವಿಶ್ಲೇಷಿಸಿ ಸಿದ್ಧಾಂತ ಮಂಡಿಸಲಾಗಿದೆ.

ಕೊನೆಟಿಪ್ಪಣಿಗಳು

೧. ಅರ್ಥಶಾಸ್ತ್ರ, ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ವಿವಿಧ ಬರಹಗಳಿಂದ ಪಡೆದ ಮಾಹಿತಿಯನ್ನು ಆಧರಿಸಿದೆ.

೨. Visvesvaraya M. *'Memories of my working life'*, 1951

೩. ಕೃಷ್ಣಮೂರ್ತಿ ಎಚ್. ಆರ್. *'ಅಭಿವೃದ್ಧಿ ಅರ್ಥಶಾಸ್ತ್ರ'*, ೨೦೧೨.

೪. ಕೃಷ್ಣ ಜೆ., *'ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ'*, ೨೦೦೦.

೫. ದೊಡ್ಡನ ಗೌಡ ಪಾಟೀಲ, *'ಭೌತಿಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ'*, ೨೦೦೨.

೬. ಚಂದ್ರಪೂಜಾರಿ ಎಂ. (ಸಂ), *'ಸಮುದಾಯ ಮತ್ತು ಸಹಭಾಗಿತ್ವ'*, ೨೦೦೨

೭. ಚಂದ್ರಪೂಜಾರಿ ಎಂ., *"ಜನಾಯೋಜನೆ"*, ೨೦೦೪

೮. ಚಂದ್ರಶೇಖರ ಟಿ. ಆರ್., *"ಕರ್ನಾಟಕ ಅಭಿವೃದ್ಧಿಯ ಆಕೃತಿ"* , ೨೦೦೭.

೯. ಚಂದ್ರಶೇಖರ್ ಟಿ. ಆರ್.(ಲೇ), ಪ್ರಭಾಕರ ಎ.ಎಸ್., (ಸಂ) *"ಬುಡಕಟ್ಟು ಅಭಿವೃದ್ಧಿ-ಕೆಲವು ಟಿಪ್ಪಣಿಗಳು"*, ಆದಿವಾಸಿ ಆಖ್ಯಾನ, ೨೦೦೮.

೧೦. ಚಂದ್ರಪೂಜಾರಿ ಎಂ.(ಲೇ), ಪ್ರಭಾಕರ ಎ.ಎಸ್., (ಸಂ) *"ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ"* ಆದಿವಾಸಿ ಆಖ್ಯಾನ, ೨೦೦೮.

೧೧. ಚಂದ್ರಶೇಖರ ಟಿ.ಆರ್, *"ಧರೆ ಹತ್ತಿ ಉರಿದರೆ"*, ೨೦೧೦

೧೨. ಚಂದ್ರಪೂಜಾರಿ ಎಂ., *"ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು"*, ೨೦೧೦

೧೩. ನಾಗೇಶ ಹೆಗಡೆ, *"ಅಭಿವೃದ್ಧಿಯ ಅಂಧಯುಗ"*, ೨೦೧೦.

೧೪. ತಿರುಪತಿ ನಾಯಕ್, *'ಹಳ್ಳಿಗಳು ಸಾಯುತ್ತಿವೆ...,'* ೨೦೧೦

೧೫. ಕೃಷ್ಣಮೂರ್ತಿ ಎಚ್. ಆರ್., *'ಅಭಿವೃದ್ಧಿ ಅರ್ಥಶಾಸ್ತ್ರ'*, ೨೦೧೨

೧೬. ಚಂದ್ರಪೂಜಾರಿ ಎಂ, *'ಅಭಿವೃದ್ಧಿ ಮತ್ತು ರಾಜಕೀಯ'*, ೨೦೧೪.

೧೭. Parasuraman S. and Sohini Sengupta , *'World Commission on Dams: Democratic Means for Sustainable Ends'*, Economic and Political Weekly, Vol. 36, No. 21, 2001.

೧೮. Satyajit K. Singh, '*Evaluating Large Dams in India'*, Economic and Political Weekly, Vol. 25, No. 11, 1990

೧೯. Ramaswamy R. Iyer, *'Large Dams: The Right Perspective'*, Economic and Plitical Weekly, Vol. 24, No. 39, 1989.

೨೦. Pradip Baijal and P. K. Singh, *'Large Dams: Can We Do without Them?'*, Economic and Political Weekly, Vol. 35, No. 19, 2000

೨೧. Kader Asmal, *World Commission on Dams report*, Dams and Development, American university International Law Review, Volume 16, Issue 6, 2001.

೨೨. *ಭೂಸ್ವಾಧೀನ ಕಾಯಿದೆ ೧೮೯೪.*

೨೩. *ಭೂಸ್ವಾಧೀನ (ಕರ್ನಾಟಕ ವ್ಯಾಪ್ತಿ ಮತ್ತು ತಿದ್ದುಪಡಿ ಅಧಿನಿಯಮ) ೧೯೬೧.* ಚೈತನ್ಯ ಪ್ರಕಾಶನ. ಧಾರವಾಡ.

೨೪. ಭೂಸ್ವಾಧೀನ (ತಿದ್ದುಪಡಿ) ಕಾಯಿದೆ ೧೯೮೪

೨೫. Land Acquisition (Amendment) Bill ,1998

೨೬. ಭೂಸ್ವಾಧೀನದಲ್ಲಿ ಉಚಿತ ಪರಿಹಾರ ಮತ್ತು ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕು ಅಧಿನಿಯಮ, ೨೦೧೩

೨೭. Kent H. Redford and Eva Fearn (Ed), *'Protected areas and human displacement: a conservation perspective'*, 2007

೨೮. Mahendra P Lama, *"Internal displacement in India: causes, protection and dilemmas"*

೨೯. Biswaranjan Mohanty, '*Displacement and Rehabilitation of Tribals'*, Economic and Political Weekly, Vol. 40, No. 13, 2005.

೩೦. NMP Verma & V. Kumar, *Environment of land diversion, Displacement and Rehabilitation: A study of Indian SEZz.*,

೩೧. Smitu Kothari, *'Whose Nation? The Displaced as Victims of Development'*, Economic and Political Weekly, Vol. 31, No. 24, 1996,

೩೨. Sharma R N and Shashi R Singh, *'Displacement in Singrauli Region: Entitlements and Rehabilitation'*, Economic and Political Weekly, Vol. 44, No. 51, 2009

೩೩. Kate Hoshour and Jennifer Kalafut, *'A growing global crisis Development-induced Displacement & Resettlement'*, International Accountability Project, 2010 .

೩೪. Amrita patwardhan, '*Dams and Tribal people in India'*

೩೫. Vedavathy, S. *'Displaced and Marginalsed: Protecting the traditional knowledge, customary laws and forest rights of the Yanadi Tribals of Andhra Pradesh'*, 2010.

೩೬. Norvy Paul (Ed), '*Development, Displacement and Marginalisation'*, 2014

೩೭. Debnath B., *'Resettlement and Rehabilitation'*, Economic and Political Weekly, Vol. 42, No. 32 , 2007

೩೮. Sah D. C, *'Development and Displacement: National Rehabilitation Policy'*, Economic and Political Weekly, Vol. 30, No. 48, 1995

೩೯. Sinha B. K., *'Draft National Policy for Rehabilitation: Objectives and Principles'* Economic and Political Weekly, Vol. 31, No. 24, 1996

೪೦. Sangeeta Goyal, *'Economic Perspectives on Resettlement and Rehabilitation'*, Economic and Political Weekly, Vol. 31, No. 24, 1996

೪೧. Usha Ramanathan, *"Displacement and the Law"*, Economic and Political Weekly, Vol. 31, No. 24, 1996

೪೨. Walter Fernandes, *"Land Acquisition (Amendment) Bill, 1998: Rights of Project-Affected People Ignored"* , Economic and Political Weekly, Vol. 33, No. 42/43,1998

೪೩. Medha Patkar, *'The People's Policy on Development, Displacement and Resettlement: Need to Link Displacement and Development',* Economic and Political Weekly, Vol. 33, No. 38, 1998

೪೪. Chittaroopa Palit, *'Short-Changing the Displaced: National Rehabilitation Policy',* Economic and Political Weekly, Vol. 39, No. 27, 2004

೪೫. Walter Fernandes, *'Rehabilitation Policy for the Displaced',* Economic and Political Weekly, Vol. 39, No. 12, Money, Banking and Finance, 2004

೪೬. Shekhar Singh, *'Displacement and Rehabilitation: A Comparison of Two Policy Drafts ,* Economic and Political Weekly, Vol. 41, No. 52, 2006

೪೭. Ramaswamy R. Iyer, *'Towards a Just Displacement and Rehabilitation Policy',* Economic and Political Weekly, Vol. 42, No. 30, 2007.

೪೮. Mihir Desai, "*Land Acquisition Law and the Proposed Changes",* Economic and Political weekly, Vol. XL VI No.26&27, June 25, 2011

೪೯. ಭೂಸ್ವಾಧೀನದಲ್ಲಿ ಉಚಿತ ಪರಿಹಾರ ಮತ್ತು ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕು ಅಧಿನಿಯಮ, ೨೦೧೩ .

೫೦. Brookings-LSE Project on Internal Displacement, *"Progress in India: New legislation to protect persons internally displaced by development projects",* 2013

೫೧. Soumendra Mohan Patnaik *"Development and Displacement: An Analysis of the Rehabilitation Policies and Programmes of Upper Kolab River Project',* Orissa. 1989

೫೨. Reddy I.U.B. *'Displacement and rehabilitation',* 1993.

೫೩. Parasuraman S., *'Development Projects, Displacement and Outcomes for Displaced: Two Case Studies',* Economic and Political Weekly, Vol. 31, No. 24, Jun. 15, 1996.

೫೪. William Stanley, *"Machkund, Upper Kolab and NALCO Projects in Koraput District, Orissa",* Economic and Political Weekly, Vol. 31, No. 24 , 1996

೫೫. Enakshi Ganguly Thukral, *'Development, Displacement and Rehabilitation: Locating Gender',* Economic and Political Weekly, Vol. 31, No. 24, Jun. 15, 1996.

೫೬. Asmita Kabra, *"Displacement and Rehabilitation of an Adivasi Settlement: Case of Kuno Wildlife Sanctuary, Madhya Pradesh",* Economic and Political Weekly, Vol. 38, No. 29 , 2003

೫೭. Narmada bachao andolan committee, *"Displacement Without Rehabilitation"- Adivasis of Alirajpur Tehsil, Jhabua Dist.*, Madhya Pradesh, 2004

೫೮. Sujit Kumar Mishra, *'Impact of Rehabilitation Policy and Low Crop Yield: Rengali Dam in Orissa',* Economic and Political Weekly, Vol. 40, No. 26, Jun. 25 - Jul. 1, 2005.

೫೯. Ghazala Shahabuddin & others, *Creation of 'Inviolate Space'- Lives, Livelihoods and Conflict in Sarika Tiger Reserve*, Economic and Political weekly, Vol. XL 11 No.20, May 19-25, 2007.

೬೦. Ratna V Reddy and B Suresh Reddy, *"Land Alienation and local communities- case studies in Hyderabad-Secunderabad"*, Economic and Political weekly, Vol. XL 11 No.31, August 4-10, 2007

೬೧. Keerthiman Avasti, *"Supa dam displaced lease out lands to paper mill"*, http://www.downtoearth.org.in?author? 207, 2007

೬೨. Divya Krishnamurthy , *'Gender Issues in Displacement – an Empirical Analysis: a case study on Sansilo Rehabilitation Colony'*, Jajpur District of Orissa, 2009

೬೩. Hari Mohan Mathur, *'Issues in Sustainable Development-Displacement and Resettlement in India'*, 2014

೬೪. Devendrappa Thakur (Ed), *'Tribal development and planning'*, 1997.

೬೫. Walter fernandes (Ed), *'Land people and politics: contest over tribal Land in moutheast India'*, Mouth Eastorn Social Research centre, International work group for indiagenous affairs 2008.

೬೬. ಬೋರಲಿಂಗಯ್ಯ ಹಿ.ಚಿ. *"ಕಾಡು ಕಾಂಕ್ರೀಟ್ ಮತ್ತು ಜಾನಪದ"*, ೧೯೯೫

೬೭. ಬೋರಲಿಂಗಯ್ಯ ಹಿ.ಚಿ.(ಲೇ), ಕಾಳೇಗೌಡ ನಾಗವಾರ(ಸಂ), *'ಬೆಂಕಿ ಮತ್ತು ವಿದ್ಯುತ್ ಯುಗಗಳ ನಡುವೆ ಗಿರಿಜನ ಸಂಸ್ಕೃತಿ'*, ೨೦೦೦

೬೮. Michael M. Cernea, *"Public Policy Responses to Development-Induced Population Displacements"*, Economic and Political Weekly, Vol. 31,No.24 1996

೬೯. Bharathi M. and R. S. Rao, *" Linking Development to Displacement"*, Economic and Political Weekly, Vol. 34, No. 28, 1999

೭೦. Chris de Wet, *"Economic Development and Population Displacement: Can Everybody Win?"*,Economic and Political Weekly,Vol.36, No.50, 2001

೭೧. ವಿಷ್ಣುನಾಯ್ಕ, *'ಉತ್ತರಕನ್ನಡದ ಮೆಲುಕು-ಮುನ್ನೋಟ'*, (೧೭೨ರಡನೆಯ ಪ್ರಕಟಣೆ), ೨೦೦೭

೭೨. United Nations, *'Basic principles and guidelines on development-based evictions and displacement'*, Annex 1 of the report of the Special Rapporteur on adequate housing as a component of the right to an adequate standard of living A/HRC/4/18

೭೩. Michael M. Cernea, *"Risks, Safeguards and Reconstruction: A Model for Population Displacement and Resettlement"*, Economic and Political Weekly, Vol. 35, No. 41, 2000

೭೪. Atal Bihari Vajpayee, Prime Minister, Government of India ಯವರಿಗೆ United nations high commissioner for human rights, 2003 ಬರೆದ ಪತ್ರ

೭೫. Bela Bhatia & K. Balagopal *"Development Challenges in Extremist Affected Areas"*, Planning commission govt of India New delhi, Planning commission.gov.in>rep_dce, 2008

೭೬. Hari Mohan Mathur, *"Issues in Sustainable Development-Displacement and Resettlement in India"*, 2014

೭೭. Parliament library and reference, research, documentation and information service (LARRDIS) *"Displacement and Rehabilitation of people due to Developmental Projects"*, 2013

೭೮. Shankar Venkateswaran, *"Industrial displacement- Looking beyond cash Compensation"*, Economic and Political weekly, Vol. XL 11 No.22, June 2, 2007

೭೯. Michael M. Cernea, *"Risks, Safeguards and Reconstruction: A Model for Population Displacement and Resettlement"*, Economic and Political Weekly, Vol. 35, No. 41, 2000

೮೦. Michael M Cernea, *"Financing for Development- Benefit Sharing mechanisms in population resettlement"*, Economic and Political weekly, Vol. XL 11 No.12, March 24 -30, 2007

೮೧. NABARD, *'Potential Linked Plan 1999-2000, Uttara Kannada District'* 1998

೮೨. ಕೃಷ್ಣ ಮೂರ್ತಿ ಭಟ್ಟ, *'ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆ ೧೯೪೫ ರಿಂದ ೧೯೯೮', ೧೯೯೯–೨೦೦೦*

೮೩. Suryanath U kamath, *Gazetter of India,* Karnataka state gazetteer Part-1, 1982

೮೪. ಕೃಷ್ಣಾನಂದ ಕಾಮತ್, *"ಪರಿಸರ ಮತ್ತು ನಾವು"* ಪರಿಸರ ಪರ್ಯಟನ: ಕೃಷ್ಣಾನಂದ ಕಾಮತ್ ಕುರಿತ ಬರಹಗಳು, ೨೦೧೧

೮೫. ಜಗದೀಶ ಕೊಪ್ಪ, ಎನ್. *'ಅಣುವೆಂಬ ಸದ್ದಿಲ್ಲದ ಸಾವ ಕುರಿತು....', ೧೯೯೯*

೮೬. ಬೋರಲಿಂಗಯ್ಯ ಹಿ.ಚಿ., *'ಕುಣಬಿಯರು', ೨೦೧೦*

೮೭. Radhakrishnan P., *'Karnataka Backward Classes'*, Economic and Political Weekly, Vol. 25, No. 32, 1990

೮೮. ಮಲ್ಲಿಕಾರ್ಜುನ ಪ. ಸೊಬರದ, *'ಕುಣಬಿ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ', ೨೦೦೮*

೮೯. ಬಸವರಾಜ್ ಎ.ಡಿ., *'ಕುಡುಬಿಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ', ೨೦೦೨–೨೦೦೩.*

೯೦. ನಾವಡ ಎ, *'ಕೊಂಕಣ ಕುಡುಬಿಯರು', ೨೦೦೮*

ಅಧ್ಯಾಯ : ಎರಡು

ಬೃಹತ್ ಅಭಿವೃದ್ಧಿ ಯೋಜನೆಯ ಪ್ರಕ್ರಿಯೆಗಳು

ಪೀಠಿಕೆ

'ಬೃಹತ್ ಅಭಿವೃದ್ಧಿ' ಎಂಬ ಚಿಂತನೆ ವಿಶ್ವ ಮಟ್ಟದಲ್ಲಿ ಬಹಳ ಸಂಚಲನವನ್ನು ಮೂಡಿಸಿದಂತಹ ವಿದ್ಯಮಾನವಾಗಿದೆ. ಪ್ರಪಂಚದ ವೇಗದ ಅಭಿವೃದ್ಧಿಗೆ ಇದು ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ. ಪ್ರಸ್ತುತ ಅಧ್ಯಾಯದಲ್ಲಿ **ಅಭಿವೃದ್ಧಿ** ಮತ್ತು **ಬೃಹತ್ ಅಭಿವೃದ್ಧಿ** ಎಂಬ ವಿಚಾರಗಳು ವಿಶ್ವಮಟ್ಟ ಹಾಗೂ ಭಾರತದ ವಿದ್ಯಮಾನದಲ್ಲಿ ಹೇಗೆ ಬೆಳೆದುಕೊಂಡು ಬಂದವು ಎಂಬುದನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಭಾರತದ ಬೃಹತ್ ಅಭಿವೃದ್ಧಿ ಯೋಜನೆಗಳ ಬಗ್ಗೆ ವಿಮರ್ಶಿಸಲಾಗಿದೆ. ಪ್ರಸ್ತುತ ಅಧ್ಯಯನದ ಕ್ಷೇತ್ರವಾದ ಸೂಪಾ ಅಣೆಕಟ್ಟು ಯೋಜನೆ ನಿರ್ಮಾಣ, ಜಲಾಶಯ ಹಾಗೂ ಪುನರ್ವಸತಿಗಾಗಿನ ಭೂಸ್ವಾಧೀನ, ಮುಳುಗಡೆ, ಸ್ಥಳಾಂತರ ಮತ್ತು ಪುನರ್ವಸತಿ ಕಾರ್ಯಕ್ರಮದ ಬಗ್ಗೆ ವಿಶ್ಲೇಷಿಸಲಾಗಿದೆ.

೨.೧. ಅಭಿವೃದ್ಧಿಯ ಸರಳ ವ್ಯಾಖ್ಯಾನ

ಸರಳವಾದ ಪದದಲ್ಲಿ ಅಭಿವೃದ್ಧಿ ಎಂದರೆ 'ಯಾವುದೇ ಕ್ಷೇತ್ರದ ಉತ್ತಮ ಸಾಧನೆ' ಎನ್ನಬಹುದು. ಅಭಿವೃದ್ಧಿ ಪ್ರಕ್ರಿಯೆಯನ್ನು ಇನ್ನೂ ಸ್ವಲ್ಪ ವಿಸ್ತೃತ ರೂಪದಲ್ಲಿ ಹೇಳುವುದಾದರೆ 'ಒಂದು ಜನ ವರ್ಗದ, ಸಮುದಾಯದ ಅಥವಾ ಸಮಾಜದ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವುದು' ಎಂದುಕೊಳ್ಳಬಹುದು. ಇದು ಸಾಮಾಜಿಕ, ಆರ್ಥಿಕ ಮತ್ತು ಮನೋವೈಜ್ಞಾನಿಕ ಅಭಿವೃದ್ಧಿಯಾಗಿರಬಹುದು. ಒಟ್ಟಾರೆಯಾಗಿ ಅಭಿವೃದ್ಧಿ ಎನ್ನುವುದು 'ಸಾಧ್ಯವಾದಷ್ಟು ಉನ್ನತ ಮಟ್ಟದ್ದನ್ನು ದೊರಕಿಸಿಕೊಡುವ ಒಂದು ಪ್ರಕ್ರಿಯೆ'ಯಾಗಿದೆ. ಅಭಿವೃದ್ಧಿ ಒಂದೇ ಸಲಕ್ಕೆ ಹಾಗೂ ಒಮ್ಮಿಂದೊಮ್ಮೆಲೇ ನಿರ್ಮಾಣವಾಗದು. ಅಭಿವೃದ್ಧಿ ಯೋಜಿತವಾಗಿದ್ದರೂ ಇದು ಒಂದು ನಿಧಾನ, ದೀರ್ಘಕಾಲೀನ, ಸರಳ ರೇಖಾತ್ಮಕವಾದ ಹಾಗೂ ನಿರಂತರ ಪ್ರಕ್ರಿಯೆಯಾಗಿರುತ್ತದೆ.[೧]

೨.೨. ಬೃಹತ್ ಅಭಿವೃದ್ಧಿ ಮಾದರಿ ಬೆಳವಣಿಗೆ

ಅಭಿವೃದ್ಧಿ ಬಗೆಗಿನ ಚಿಂತನೆಗಳು ವಿಶ್ವಮಟ್ಟದಲ್ಲಿ ಬೆಳೆದು ಬಂದಿದೆ. ಸಂಪ್ರದಾಯ ಪಂಥದ ಆಡಂಸ್ಮಿತ್, ಡೇವಿಡ್ ರಿಕಾರ್ಡೊ, ಟಿ. ಆರ್. ಮಾಲ್ಥಸ್, ಜೆ.ಎಸ್. ಮಿಲ್ ಇವರ ಅಭಿವೃದ್ಧಿ ಸಿದ್ಧಾಂತಗಳಲ್ಲಿ ದೇಶದ ಅಭಿವೃದ್ಧಿಗಾಗಿ ಆರ್ಥಿಕ ಅಭಿವೃದ್ಧಿಯನ್ನು ಪ್ರತಿಪಾದಿಸಿದ್ದಾರೆ. ಇದಕ್ಕಾಗಿ ಹೆಚ್ಚಿನ ಭೂಮಿಯ ಪೂರೈಕೆ, ಬೃಹತ್ ಬಂಡವಾಳ ಹೂಡಿಕೆ, ಆಧುನಿಕ ತಂತ್ರಜ್ಞಾನ, ಹೆಚ್ಚು ಉತ್ಪಾದನೆ, ಮಾರುಕಟ್ಟೆ ವಿಸ್ತರಣೆ ಮುಂತಾದ ಕ್ರಿಯೆಗಳಿಗೆ ಹೆಚ್ಚು ಒತ್ತು ನೀಡಿರುತ್ತಾರೆ. ಬಡರಾಷ್ಟ್ರಗಳಲ್ಲಿ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳೆರಡನ್ನೂ ಏಕಕಾಲಕ್ಕೆ ಅಭಿವೃದ್ಧಿಪಡಿಸುವುದರಿಂದ ಆರ್ಥಿಕ ಚೇತರಿಕೆ ಉಂಟಾಗುತ್ತದೆ. ಈ ಮುಖಾಂತರ ಅಭಿವೃದ್ಧಿ ಸಾಧಿಸಬಹುದು ಎಂದು ಅಭಿವೃದ್ಧಿ ಸಿದ್ಧಾಂತಗಳಲ್ಲಿ ಪ್ರತಿಪಾದಿಸಿ ಬಡ ರಾಷ್ಟ್ರಗಳನ್ನು ತಮ್ಮ ಚಿಂತನೆಯ ಅಡಿಯಲ್ಲಿ ಬರುವಂತೆ ಪ್ರೇರೇಪಣೆ ನೀಡಿದ್ದಾರೆ. ಅಭಿವೃದ್ಧಿ ಎಂದರೆ ಬೃಹತ್ ಉದ್ಯಮಶೀಲತೆ ಮತ್ತು ವ್ಯಕ್ತಿಯ

ಆರ್ಥಿಕ ಅಭಿವೃದ್ಧಿ. ಅದಕ್ಕಾಗಿ ದೇಶದಲ್ಲಿ ಎಲ್ಲಾ ವ್ಯವಸ್ಥೆಗಳು ಅವನಿಗೆ ಮುಕ್ತವಾಗಿ ದೊರೆಯಬೇಕು. ಅವನ ಸಂಪತ್ತು ಹೆಚ್ಚಾದರೆ ದೇಶದ ಸಂಪತ್ತು ಹೆಚ್ಚಾಗುತ್ತದೆ. ಇದರಿಂದ ಬಡರಾಷ್ಟ್ರಗಳು ಕೂಡಾ ಶ್ರೀಮಂತ ರಾಷ್ಟ್ರಗಳಂತೆ ವೇಗವಾಗಿ ಮುಂದುವರಿಯಲು ಸಾಧ್ಯ ಎಂದು ಬಂಡವಾಳಶಾಹಿ ಬೀಜವನ್ನು ಇವರುಗಳು ಪ್ರಪಂಚದ ದೇಶಗಳಲ್ಲಿ ಬಿತ್ತಿದ್ದಾರೆ.[೨] ಹೀಗೆ ಸಂಪ್ರದಾಯ ಪಂಥದ ಆರ್ಥಿಕ ಚಿಂತಕರು **ಬೃಹತ್ ಪ್ರಯತ್ನಕ್ಕೆ** ಹೆಚ್ಚಿನ ಒತ್ತು ಕೊಟ್ಟಿರುತ್ತಾರೆ.

ಮುಂದುವರಿಯುತ್ತಿರುವ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಸಿದ್ಧಾಂತವಾದ ಪಾಲ್. ಎನ್. ರೊಸೆನ್‌ಸ್ಟೈನ್ ರೊಡಾನ್‌ರವರ **ಬೃಹತ್ ಪ್ರಯತ್ನ ಸಿದ್ಧಾಂತ**ದ ಪ್ರಕಾರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ಪ್ರಯತ್ನಗಳು ಜೋರಾಗಿ, ಬಿರುಸಾಗಿ ಮತ್ತು ದೊಡ್ಡದಾಗಿ, ಎತ್ತರವಾಗಿ ನಡೆಯಬೇಕು. ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಕೆಳಮಟ್ಟದ ಸಮಾನಾಂತರ ಬಲೆಯಿಂದ ಮೇಲೆತ್ತಲು ಇಡೀ ಸಾಮಾಜಿಕ ವ್ಯವಸ್ಥೆಯನ್ನೇ ಬದಲಿಸುವಂತಹ ಆರ್ಥಿಕ ಯೋಜನೆ ಮತ್ತು ಬೃಹತ್ ಪ್ರಯತ್ನಗಳು ಅಗತ್ಯವಾಗಿವೆ. ಚಿಕ್ಕ ಪ್ರಯತ್ನಗಳು ನಿರರ್ಥಕ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಏಕಕಾಲದಲ್ಲಿ ಭಾರೀ ಪ್ರಮಾಣದ ಬಂಡವಾಳ ಹೂಡಿಕೆ ಮಾಡಿದರೆ ಮಾತ್ರಾ ಅಭಿವೃದ್ಧಿ ಪರಿಣಾಮಕಾರಿ ಆಗಬಲ್ಲದು. ವಿದ್ಯುಚ್ಛಕ್ತಿ, ಸಾರಿಗೆ, ಸಂಪರ್ಕ, ಬಂದರುಗಳು, ವಸತಿ ಮುಂತಾದ ಕ್ಷೇತ್ರಗಳಲ್ಲಿ ಬೃಹತ್ ಪ್ರಮಾಣದ ಹೂಡಿಕೆಯನ್ನು ಮಾಡಬೇಕು. ಚಿಕ್ಕಮಟ್ಟ ಒಂದು ಪ್ರಯತ್ನದಿಂದ ಅಭಿವೃದ್ಧಿ ಪ್ರಾರಂಭವಾಗಲಾರದು. ಇದು ಬೃಹತ್ ಪ್ರಯತ್ನಗಳಿಂದ ಮಾತ್ರ ಸಾಧ್ಯ. ಅಭಿವೃದ್ಧಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾದರೆ ದೊಡ್ಡ ಪ್ರಮಾಣದ ಹೂಡಿಕೆ, ಬೃಹತ್ ಪ್ರಯತ್ನ ಮತ್ತು ಉದ್ಯಮಗಳ ಸ್ಥಾಪನೆ ಅತ್ಯವಶ್ಯಕ[೨೪] ಎಂಬ ವಿಚಾರಧಾರೆಯಿಂದ ಬಡರಾಷ್ಟ್ರಗಳನ್ನು ತನ್ನ ಸಿದ್ಧಾಂತದೆಡೆಗೆ ಸೆಳೆದರು.

ರಾಗ್ನಾರ್ ನರ್ಕ್ಸ್‌ರವರು 'ಬಡತನದ ವಿಷವರ್ತುಲವನ್ನು ಹೋಗಲಾಡಿಸಲು ಬೃಹತ್ ಪ್ರಮಾಣದ ಹೂಡಿಕೆಯೊಂದೇ ಮಾರ್ಗ'[೩] ಎಂಬ ಚಿಂತನೆಯನ್ನು ಬಿತ್ತಿದರು. ಪ್ರೊ. ಆಲ್ಬರ್ಟ್ ಒಟ್ಟೋ ಹರ್ಷಮನ್‌ರವರು ಬಂಡವಾಳ ಹೂಡಿಕೆಯನ್ನು ವಿವಿಧ ಕ್ಷೇತ್ರಗಳಲ್ಲಿ ಏಕಕಾಲಕ್ಕೆ ಮಾಡುವುದರ ಬದಲು ಕೆಲವು ಆಯ್ದ ಕ್ಷೇತ್ರಗಳಲ್ಲಿ ಮಾತ್ರ ಭಾರೀ ಪ್ರಮಾಣದಲ್ಲಿ ಮಾಡಬೇಕು; ಕೆಲವು ಕೈಗಾರಿಕೆಗಳಲ್ಲಿ ಭಾರೀ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯಾದರೆ ಅವು ವಿಕಾಸಗೊಳ್ಳುತ್ತಾ ಹೋಗುತ್ತವೆ[೪] ಎಂಬ ಚಿಂತನೆಯನ್ನು ಬಿತ್ತಿದರು. ಹೀಗೆ ಪ್ರಪಂಚದ ಕೆಲವು ಅಭಿವೃದ್ಧಿ ಚಿಂತಕರು ತಮ್ಮ ಬರಹಗಳಲ್ಲಿ ಬೃಹತ್ ಅಭಿವೃದ್ಧಿ ಎಂಬ ವಿಚಾರಧಾರೆಯನ್ನು ಬಿತ್ತಿ ಪ್ರಪಂಚದ ಆರ್ಥಿಕ ವಿದ್ಯಮಾನಗಳು ಇವನ್ನು ಅನುಸರಿಸುವಂತೆ ಪ್ರೇರೇಪಿಸಿರುತ್ತಾರೆ.

ದ್ವಿತೀಯ ವಿಶ್ವ ಸಮರದ ನಂತರ ಏಷ್ಯಾ ಹಾಗೂ ಆಫ್ರಿಕಾ ಖಂಡಗಳಲ್ಲಿ ರಾಜಕೀಯ ಪುನರುತ್ಥಾನ ಅಲೆಯು ವೇಗವಾಗಿ ಬೀಸಲಾರಂಭಿಸಿತು. ಇಲ್ಲಿ ಹೊಸದಾಗಿ ಆಳ್ವಿಕೆಗೆ ಬಂದಂತಹ ಪ್ರಭುತ್ವಕ್ಕೆ ಈ ಎಲ್ಲಾ ಅಭಿವೃದ್ಧಿ ಚಿಂತನೆಗಳು ಅಭಿವೃದ್ಧಿಶೀಲ

ರಾಷ್ಟ್ರಗಳ ವೇಗದ ಆರ್ಥಿಕ ಅಭಿವೃದ್ಧಿಗೆ ಪೂರಕ ಎಂದು ಗಮನ ಸೆಳೆಯಲ್ಪಟ್ಟವು. ದೇಶದ ಯಾವುದೇ ಭಾಗದಲ್ಲಿ ಬಡತನವಿದ್ದರೂ ಅದು ಎಲ್ಲಾ ಕಡೆಗೆ ಸಮೃದ್ಧಿಯಾಗಲು ತೊಡಕಾಗುವುದು ಎಂಬ ಅರಿವು ಮೂಡಲಾರಂಭಿಸಿತು.

೧೯೫೦ ಮತ್ತು ೧೯೬೦ರ ದಶಕದಲ್ಲಿ ಒಟ್ಟು ರಾಷ್ಟ್ರೀಯ ತಲಾ ಉತ್ಪನ್ನದ ಬೆಳವಣಿಗೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಯಿತು.[೫] ಆಧುನೀಕರಣ ಸಿದ್ಧಾಂತದ ಮೇರೆಗೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಉಳ್ಳವರ ಅಧಿಪತ್ಯವನ್ನು ಅಳವಡಿಸಿಕೊಳ್ಳಲಾಯಿತು. ಅಭಿವೃದ್ಧಿ ಎಂದರೆ ಪಾರಂಪರಿಕ, ಸರಳವಾದ, ಮೂರನೇ ಜಗತ್ತಿನ ದೇಶಗಳನ್ನು ಆಧುನಿಕ, ಕ್ಲಿಷ್ಟಕರ ಮತ್ತು ಪಾಶ್ಚಾತ್ಯರನ್ನಾಗಿ ಪರಿವರ್ತಿಸುವುದು ಎಂಬುದಾಗಿ ಭಾವಿಸಲಾಯಿತು. ಇದು ತುಂಬಾ ಕ್ರೂರವಾಗಿ ಅಭಿವೃದ್ಧಿಯ ಬೀಜವನ್ನು ಬಿತ್ತಿತು. ೧೯೬೦ರ ಅಭಿವೃದ್ಧಿ ದಶಕಕ್ಕೆ ವಿಶ್ವ ಸಂಸ್ಥೆಯು ಹಿಂದುಳಿದ ರಾಷ್ಟ್ರಗಳಿಗೆ ಶೇಕಡಾ ೫ರ ಒಟ್ಟು ರಾಷ್ಟ್ರೀಯ ಉತ್ಪನ್ನದ ಬೆಳವಣಿಗೆ ದರದ ಗುರಿ ನಿಗಧಿಗೊಳಿಸಿತು. ಈ ನಿಗಧಿತ ಗುರಿಯ ಸಾಧನೆಗಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ವ್ಯಾಪಕ ಕೈಗಾರಿಕೀಕರಣ ಮತ್ತು ನಗರೀಕರಣ ನಡೆಯಬೇಕೆಂದು ಅರ್ಥಶಾಸ್ತ್ರಜ್ಞರು ಸಲಹೆ ಮಾಡಿದರು. ಈ ಅವಧಿಯಲ್ಲಿ ಬಡತನ, ನಿರುದ್ಯೋಗ ಮತ್ತು ಆದಾಯ ಹಂಚಿಕೆಯ ವಿಚಾರಗಳಿಗೆ ದ್ವಿತೀಯ ಸ್ಥಾನದ ಪ್ರಾಶಸ್ತ್ಯ ನೀಡಲಾಯಿತು. 'ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿನ ಬೆಳವಣಿಗೆಯ ಲಾಭ ಅಥವಾ ಪ್ರಯೋಜನಗಳು ಬಡಜನರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಮತ್ತು ಆದಾಯದ ರೂಪದಲ್ಲಿ ಸ್ವಯಂಚಾಲಿತವಾಗಿ ಇಳಿಮುಖ ಹನಿಯುವಿಕೆ ಮೂಲಕ ಲಭ್ಯವಾಗುತ್ತವೆ ಎಂದು ಭಾವಿಸಲಾಯಿತು.'[೬] ಈ ಎಲ್ಲಾ ಬೆಳವಣಿಗೆಗಳ ಪ್ರಭಾವದಿಂದಾಗಿ ವಿಶ್ವ ಮಟ್ಟದಲ್ಲಿ ಅಭಿವೃದ್ಧಿಗಾಗಿ ಬೃಹತ್ ಯೋಜನೆಗಳ ಕಡೆಗೆ ಚಿಂತನೆ ಬೆಳೆದುಕೊಂಡು ಬಂದಿತು.

೨.೩. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಬೃಹತ್ ಅಭಿವೃದ್ಧಿ ಚಿಂತನೆ ಬೆಳೆದು ಬಂದ ಬಗೆ

ಭಾರತದಲ್ಲಿ ನೀರಾವರಿಗಾಗಿ ಸಣ್ಣ ಪುಟ್ಟ ಅಣೆಕಟ್ಟುಗಳು, ವಿದ್ಯುತ್ ರಹಿತ ಗುಡಿ ಕೈಗಾರಿಕೆಗಳು ಬಹು ಹಿಂದಿನಿಂದಲೇ ಬೆಳೆದುಕೊಂಡು ಬಂದಿದ್ದವು. ಅಣೆಕಟ್ಟು ನಿರ್ಮಾಣ ಮಾಡಿ ನೀರು ಪೂರೈಸುವುದರ ಬಗ್ಗೆ ವಿಜ್ಞಾನೇಶ್ವರರು ಕೂಡಾ ತಮ್ಮ ಮಿತಾಕ್ಷರದಲ್ಲಿ ಉಲ್ಲೇಖಿಸಿದ್ದನ್ನು ನಾವು ಕಾಣಬಹುದು. 'ನೀರಾವರಿ ಕೆಲಸ ಕಾರ್ಯಗಳು ರಾಜ್ಯದ ಮೊದಲ ಕೆಲಸವಾಗಿದೆ. ಅಣೆಕಟ್ಟುಗಳನ್ನು ನಿರ್ಮಿಸುವುದರಿಂದ ಕೆಲವರಿಗೆ ತೊಂದರೆಯಾದರೂ ಹಲವರಿಗೆ ಅನುಕೂಲವಾಗುತ್ತದೆ. ಈ ಕಾರಣದಿಂದಾಗಿ ಅಣೆಕಟ್ಟು ನಿರ್ಮಾಣವನ್ನು ಯಾರೂ ವಿರೋಧಿಸಬಾರದು'.[೭] ಈ ರೀತಿಯಾಗಿ ಅಭಿವೃದ್ಧಿಗಾಗಿ ಬೃಹತ್ ಯೋಜನೆಗಳು ಎಂಬ ಆಶಯ ಹಿಂದಿನಿಂದಲೇ ಬೆಳೆದುಕೊಂಡು ಬಂದು ಅದು ಎಲ್ಲರ ಹಿತವನ್ನು ಬಯಸುತ್ತಿದ್ದನ್ನು ನಾವು ಅಧ್ಯಯನಗಳಿಂದ ಕಂಡುಕೊಳ್ಳಬಹುದಾಗಿದೆ.

ಬ್ರಿಟಿಷರ ಆಡಳಿತದ ಅವಧಿಯಲ್ಲಿ ನೋಡುವುದಾದರೆ ಅವರಿಗೆ ನೀರಾವರಿಯಲ್ಲಿ ಭಾರತೀಯರಿಗಿದ್ದಷ್ಟು ಜ್ಞಾನವಿರಲಿಲ್ಲ. ಬ್ರಿಟಿಷರು ಇಲ್ಲಿಯ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಆಸಕ್ತರಾಗಿರಲಿಲ್ಲ. ಆದ್ದರಿಂದ ಪ್ರಾರಂಭದಲ್ಲಿ ವಿದ್ಯುತ್, ನೀರಾವರಿ ಯೋಜನೆಗಳ ಕಡೆಗೆ ಹೆಚ್ಚಿನ ಆಸಕ್ತಿ ತೋರಲಿಲ್ಲ. ಆದರೆ ಯಾವಾಗ ಈ ಕ್ಷೇತ್ರದಲ್ಲಿ ತೀವ್ರತರವಾದ ತೊಡಕುಗಳು ಉಂಟಾದವೋ ಆಗ ಅವರು ಕೂಡಾ ನೀರಾವರಿ ಕಡೆಗೆ ಗಮನವನ್ನು ಕೊಡಲಾರಂಭಿಸಿದರು. ಭಾರತದಲ್ಲಿ ೧೮೮೦ರ ದಶಕದಲ್ಲಿ ನೀರಾವರಿ ಯೋಜನೆಗಳು ಪ್ರಾರಂಭವಾದವು. ಬ್ರಿಟಿಷರಿಂದ ಕೈಗಾರಿಕೆಗಳು ಕೂಡಾ ಪ್ರಾರಂಭವಾದವು.[೮]

೧೮೮೧ ರಲ್ಲಿ ಶ್ರೀ. ಸಿ ರಂಗಚಾರ್ಲುರವರು ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಕೈಗಾರಿಕೆ ಮತ್ತು ಅದರ ಅಭಿವೃದ್ಧಿ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಅವರು ಪ್ರಥಮವಾಗಿ ಅಭಿವೃದ್ಧಿಗಾಗಿ ಬೃಹತ್ ಯೋಜನೆಗಳ ಅಗತ್ಯತೆಯನ್ನು ಪ್ರಸ್ತಾಪಿಸಿದ್ದಾರೆ. ದೊಡ್ಡ ಯೋಜನೆಗಳು ಜಾರಿಯಾಗದಿದ್ದರೆ ದೇಶದಲ್ಲಿ ಬರಗಾಲ ಎದುರಿಸುವ ಶಕ್ತಿ ಬರದು ಎಂದು ಅಭಿಪ್ರಾಯಪಟ್ಟಿದ್ದಾರೆ. ಕೃಷಿ ಮತ್ತು ಕೈಗಾರಿಕೆಗಳಲ್ಲಿ ಸಮತೋಲನವನ್ನು ಕಾಪಾಡಿಕೊಂಡು ಬರಲು ಅಣೆಕಟ್ಟು ನೀರಾವರಿ ಯೋಜನೆ ಮತ್ತು ಕೈಗಾರಿಕೆಗಳಿಗೆ ವಿದ್ಯುತ್ ಪೂರೈಕೆಗಾಗಿ ಜಲವಿದ್ಯುತ್ ಯೋಜನೆಗಳು ನಮ್ಮ ಕರ್ನಾಟಕದಲ್ಲಿ ಬೆಳೆದು ನಿಲ್ಲಬೇಕಾಯಿತು. ೧೯೧೩ರ ಅಕ್ಟೋಬರ್ ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್.ಎಂ. ವಿಶ್ವೇಶ್ವರಯ್ಯರವರು ಮಾಡಿದ ಭಾಷಣದಲ್ಲಿ "ಆಧುನಿಕ ಬದುಕಿನಲ್ಲಿ ಕೈಗಾರಿಕೆಗಳೇ ದೇಶದ ಪ್ರಗತಿ ಮತ್ತು ಅಭ್ಯುದಯಗಳ ಆಧಾರಸ್ಥಂಭ. ಕೈಗಾರಿಕೆಗಳಿಂದ ಜನರ ಬದುಕಿನ ಸಮಸ್ಯೆಗಳು ಬಗೆಹರಿಯುತ್ತವೆ, ಜನರ ಜೀವನಮಟ್ಟ ಸುಧಾರಣೆಯಾಗುತ್ತದೆ. ಕಾವೇರಿ ಜಲಾಶಯ ನಿರ್ಮಾಣದಿಂದ ರಾಜ್ಯದಲ್ಲಿ ಹೊಸ ಮೌಲ್ಯಗಳ ಹೊಸ ಭರವಸೆಗಳ ನವ ಮನ್ವಂತರದ ಹೆಬ್ಬಾಗಿಲು ತೆರೆಯಲಿದೆ. ಇಂತಹ ಯೋಜನೆಗಳು ದೇಶದ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುತ್ತವೆ"[೯] ಎಂಬ ಕರೆಯನ್ನು ಅವರು ದೇಶಕ್ಕೆ ನೀಡಿದ್ದರು. ಇದಕ್ಕಾಗಿ ಅವರು ವಿದೇಶಿ ನೆರವನ್ನು ಕೂಡಾ ಬಯಸಿದ್ದರು. ಅದರಂತೆ ಅಭಿವೃದ್ಧಿ ಹೆಸರಲ್ಲಿ ದೇಶದಲ್ಲಿ ಬೃಹತ್ ಯೋಜನೆಗಳು ತಲೆಯೆತ್ತಿದವು.

ಸರ್.ಎಂ.ವಿಶ್ವೇಶ್ವರಯ್ಯರವರು ೧೯೩೪ ರಲ್ಲಿ "ಯೋಜಿತ ಆರ್ಥಿಕ ವ್ಯವಸ್ಥೆ" ಎಂಬ ಕೃತಿಯನ್ನು ಬರೆದು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ೧೦ ವರ್ಷದ ಯೋಜನೆಯನ್ನು ರೂಪಿಸಿದರು. ಇದರಲ್ಲಿ ಇವರು "ಕೈಗಾರಿಕೀಕರಣ ಇಲ್ಲವೇ ವಿನಾಶ" ಮತ್ತು "ಯೋಜಿಸಿ ಇಲ್ಲವೇ ಹಾಳಾಗಿರಿ" ಎಂದು ಘೋಷಣೆ ನೀಡಿದರು.[೧೦] ಹೀಗೆ ಇವರು ಭಾರತದಲ್ಲಿ ಆರ್ಥಿಕ ಯೋಜನೆ, ಯೋಜನೆ ಪದ್ಧತಿಯ ಬಗ್ಗೆ ಪ್ರಥಮ ಬಾರಿಗೆ ಅರಿವು ಮೂಡಿಸಿದರು. ವಿಶ್ವೇಶ್ವರಯ್ಯರವರು ದೇಶದಲ್ಲಿ ಬೃಹತ್ ಯೋಜನೆಗಳಿಗೆ ಹೆಚ್ಚು ಒತ್ತು ಕೊಟ್ಟರು.[೧೧]

ಮಹಾತ್ಮಾ ಗಾಂಧೀಜಿಯವರು ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ಭಾರತದಂತಹ ದೇಶಕ್ಕೆ ಸರಿಹೊಂದುವುದಿಲ್ಲ ಎಂದು ಪ್ರತಿಪಾದಿಸಿದ್ದರು. ಆದರೆ ಜವಾಹರಲಾಲ್ ನೆಹರೂರವರು ರಷ್ಯಾದ ಯೋಜಿತ ಬೃಹತ್ ಅಭಿವೃದ್ಧಿ ಯೋಜನೆಗಳ ಮೇಲೆ ಬಲವಾದ ನಂಬಿಕೆಯನ್ನಿಟ್ಟಿದ್ದರು. ಭಾರತದ ಬಡತನವನ್ನು ತೀವ್ರಗತಿಯಲ್ಲಿ ಹೋಗಲಾಡಿಸಲು ಅವರು ಬೃಹತ್ ಯೋಜನೆಗಳನ್ನು ಪ್ರತಿಪಾದಿಸಿದ್ದರು.[೧೨] ಅದರಂತೆ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯು ೧೯೩೮ ಅಕ್ಟೋಬರ್‌ನಲ್ಲಿ ಪಂಡಿತ ಜವಾಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯನ್ನು ರೂಪಿಸಿತು.[೧೩] ಇವರು ಸಮಗ್ರ ಕಾರ್ಯಕ್ರಮಗಳುಳ್ಳ ರಾಷ್ಟ್ರೀಯ ಯೋಜನೆಗಳನ್ನು ರೂಪಿಸುವ ಯೋಜನೆಯನ್ನು ಹಾಕಿಕೊಂಡರು. ಭಾರತದ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುತ್ತಿರುವ ಸಂದರ್ಭದಲ್ಲಿ ಯೋಜನಾ ಮಾದರಿಗಳಿಗೆ ಬೇಡಿಕೆ ಉಂಟಾಯಿತು. ಅದರಂತೆ ಜೆ.ಆರ್.ಡಿ. ಟಾಟಾರವರನ್ನು ಒಳಗೊಂಡ ಆಧುನಿಕ ಪ್ರಮುಖ ಕೈಗಾರಿಕೋದ್ಯಮಿಗಳ ತಂಡ ೧೯೪೪ರಲ್ಲಿ ಬಾಂಬೆ ಯೋಜನೆಯನ್ನು ರಚಿಸಿ ಬೃಹತ್ ಕೈಗಾರಿಕೆಗಳಿಂದ ಮಾತ್ರಾ ದೇಶದ ಅಭಿವೃದ್ಧಿ ಸಾಧ್ಯ ಎಂಬುದಾಗಿ ಪ್ರತಿಪಾದಿಸಿತು.[೧೪]

ಈ ರೀತಿಯಾಗಿ ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ಜವಾಹರಲಾಲ್ ನೆಹರೂರವರ ಚಿಂತನೆಗಳಿಂದ ಪ್ರಭಾವಿತವಾದ ಬೃಹತ್ತಾದ ಯೋಜನೆಗಳು ದೇಶದಲ್ಲಿ ಸ್ಥಾಪಿಸಲಾರಂಭಿಸಿದವು.

೨.೪. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೃಹತ್ ಅಭಿವೃದ್ಧಿ ಯೋಜನೆ ಬೆಳವಣಿಗೆ

ರಾಜಕೀಯವಾಗಿ ಬ್ರಿಟಿಷರಿಂದ ಸುದೀರ್ಘ ವಸಾಹತು ಆಡಳಿತಕ್ಕೊಳಪಟ್ಟಿದ್ದ ಭಾರತ ದೇಶವು ೧೯೪೭ರಲ್ಲಿ ಸ್ವತಂತ್ರಗೊಂಡಿತು. ಭಾರತ ಸ್ವಾತಂತ್ರ್ಯ ಕಾಯಿದೆಯು ಭಾರತವನ್ನು ವಸಾಹತುಶಾಹಿಯಿಂದ ಮುಕ್ತಗೊಳಿಸಿ ಸಾರ್ವಭೌಮತ್ವಕ್ಕೆ ಅಡಿಪಾಯ ಹಾಕಿತು. ವಿದೇಶಿಯರಿಂದ ಆಳಲ್ಪಟ್ಟ ನಮ್ಮ ದೇಶದಲ್ಲಿ ಅತಿಯಾದ ಬಡತನವಿತ್ತು. ಈ ಬಡತನದ ತೀವ್ರಗತಿಯ ನಿವಾರಣೆಗಾಗಿ ಮತ್ತು ರಾಷ್ಟ್ರ ಕಟ್ಟುವಿಕೆಯ ಗುರಿಯನ್ನು ಸಾಧಿಸುವುದಕ್ಕಾಗಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬೇಕಾಗಿತ್ತು. 'ಯಾರು ವಿಜ್ಞಾನ–ತಂತ್ರಜ್ಞಾನಗಳ ಜೊತೆಗೆ ಸಂವಾದಿಸಬಲ್ಲರೋ ಅಂಥವರಿಗೆ ಮಾತ್ರಾ ಭವಿಷ್ಯವಿರುವುದು' ಎಂದು ಸ್ವಾತಂತ್ರ್ಯ ಬಂದ ಹೊಸತರಲ್ಲಿಯೇ ಭಾರತದ ಪ್ರಥಮ ಪ್ರಧಾನ ಮಂತ್ರಿಯಾಗಿದ್ದ ಪಂಡಿತ್ ಜವಹರಲಾಲ್ ನೆಹರೂರವರು ಹೇಳಿದರು.[೧೫] ೧೯೪೮ ರಲ್ಲಿ ಭಾರತದ ಪ್ರಥಮ ಪ್ರಮುಖ ನದಿ ಕಣಿವೆ ಯೋಜನೆಯಾದ ಒರಿಸ್ಸಾದ ಹಿರಾಕುಡ್ ಅಣೆಕಟ್ಟಿನ ಅಡಿಗಲ್ಲು ಹಾಕುವ ಸಂದರ್ಭದಲ್ಲಿ 'ಅಣೆಕಟ್ಟು, ಕಾರ್ಖಾನೆಗಳೇ ಆಧುನಿಕ ಭಾರತದ ಗುಡಿ ಗೋಪುರಗಳು' ಎಂದು ನೆಹರುರವರು ಭಾಷಣ ಮಾಡಿದರು.[೧೬] "If you are to suffer, you should suffer in the interest of the country" ಅಂದರೆ ನೀವು ಕಷ್ಟ ಅನುಭವಿಸುತ್ತಿದ್ದಿರೆಂದರೆ ರಾಷ್ಟ್ರದ ಹಿತಕ್ಕಾಗಿ ನೀವು ಸಹಿಸಿಕೊಳ್ಳಬೇಕು ಎಂದು

ಸ್ಥಳಾಂತರ ಆದವರಿಗೆ ಕರೆ ನೀಡಿದ್ದರು.[೧೭] ಆಂಧ್ರಪ್ರದೇಶದ ನಾಗಾರ್ಜುನ ಸಾಗರ ಅಣೆಕಟ್ಟು ಉದ್ಘಾಟನಾ ಸಮಾರಂಭದಲ್ಲಿ 'ಅಣೆಕಟ್ಟುಗಳು ಭಾರತದ ಬೃಹತ್ ಜಾತ್ಯಾತೀತ ದೇವಾಲಯಗಳು' ಎಂದು ಜವಾಹರಲಾಲ್ ನೆಹರೂರವರು ಹೇಳಿರುತ್ತಾರೆ.[೧೮] ಅಣೆಕಟ್ಟು, ಕೈಗಾರಿಕೆ ಮುಂತಾದ ಬೃಹತ್ತಾದ ಯೋಜನೆಗಳ ಅನುಷ್ಠಾನದಿಂದಲೇ ದೇಶದ ಅಭಿವೃದ್ಧಿ ಎಂಬುದಾಗಿ ಬಿಂಭಿಸಲಾಯಿತು.

೧೯೪೮ರಲ್ಲಿ ಕೆ.ಸಿ. ನಿಯೋಗಿಯವರ ಅಧ್ಯಕ್ಷತೆಯಲ್ಲಿ ಯೋಜನೆಗಳನ್ನು ರೂಪಿಸಲು ಸಂಬಂಧಿಸಿದಂತೆ ಸಲಹೆಗಳನ್ನು ನೀಡಲು ಯೋಜನಾ ಸಲಹಾ ಮಂಡಳಿಯನ್ನು ರಚಿಸಲಾಯಿತು.[೧೯] ಭಾರತದಲ್ಲಿ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲು ನಿರ್ಧರಿಸಿ ೧೯೫೦ ಮಾರ್ಚ್ ೧೫ ರಂದು ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು.[೨೦] ಪಂಚವಾರ್ಷಿಕ ಯೋಜನೆಗಳನ್ನು ಅನುಮೋದಿಸುವ ಸಂಸ್ಥೆಯಾಗಿ ೬-೮-೧೯೫೨ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಜಾರಿಗೆ ತರಲಾಯಿತು.[೨೧] ದೇಶದ ಬಡತನವನ್ನು ಸಂಪೂರ್ಣವಾಗಿ ಹೋಗಲಾಡಿಸುವ ದೃಷ್ಟಿಯಿಂದ ಭಾರತ ದೇಶವು ರಷ್ಯಾ ದೇಶದ ಯೋಜಿತ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡಿತು. ಅದರಂತೆ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿತು. ಭಾರತದಲ್ಲಿ ರಷ್ಯಾದ ಯೋಜಿತ ಅಭಿವೃದ್ಧಿ ಮಾದರಿಯನ್ನು ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಕೇಂದ್ರೀಕೃತ ಯೋಜಿತ ಅಭಿವೃದ್ಧಿ ಮಾದರಿಯೋ ಅಥವಾ ವಿಕೇಂದ್ರಿತ ಯೋಜಿತ ಅಭಿವೃದ್ಧಿ ಮಾದರಿನೋ, ಬೃಹತ್ ಉದ್ದಿಮೆಗಳೋ ಅಥವಾ ಸಣ್ಣ ಉದ್ದಿಮೆಗಳೋ, ನಗರಾಭಿವೃದ್ಧಿ ಮೊದಲೋ ಗ್ರಾಮೀಣಾಭಿವೃದ್ಧಿ ಮೊದಲೋ, ಬಂಡವಾಳ ಆಧಾರಿತ ಅಭಿವೃದ್ಧಿಯೋ ಅಥವಾ ಶ್ರಮ ಆಧಾರಿತ ಅಭಿವೃದ್ಧಿಯೋ ಎಂಬ ವಿಷಯಗಳ ಮೇಲೆ ನೆಹರೂ ಹಾಗೂ ಗಾಂಧೀಜಿಯ ದೃಷ್ಟಿಕೋನಗಳಲ್ಲಿ ಚರ್ಚೆಗಳು ಪ್ರಾರಂಭವಾದವು.[೨೨] ಭಾರತವು ಹಲವಾರು ಜಾತಿ, ಧರ್ಮ, ಭಾಷೆ, ಸಂಸ್ಕೃತಿ ಮುಂತಾದ ವಿವಿಧತೆಗಳಿಂದ ಕೂಡಿದ ಗ್ರಾಮ ಪ್ರಧಾನವಾದ ರಾಷ್ಟ್ರವಾದ್ದುದರಿಂದ ಗ್ರಾಮೀಣ ಬದುಕಿಗೆ ಮಹತ್ವ ನೀಡುವ ವಿಕೇಂದ್ರಿತ ಅಭಿವೃದ್ಧಿ ಮಾದರಿಯನ್ನು ಮಹಾತ್ಮಾ ಗಾಂಧೀಜಿಯವರು ಪ್ರತಿಪಾದಿಸಿದರು.[೨೩] ಆದರೆ ಜವಾಹರಲಾಲ್ ನೆಹರೂ ಮತ್ತು ಡಾ. ಬಿ. ಆರ್ ಅಂಬೇಡ್ಕರ್‌ರವರಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆಯನ್ನು ಹೊಂದಿದ್ದ ಗ್ರಾಮ ಸಮುದಾಯದಲ್ಲಿ ಗ್ರಾಮೀಣಾಭಿವೃದ್ಧಿಯ ಮೂಲಕ ಆಧುನಿಕ ಭಾರತ ನಿರ್ಮಿಸುವ ಕನಸು ತುಂಬಾ ಕಷ್ಟ ಎನಿಸಿತು.[೨೪] ನೆಹರೂರವರು ದೇಶವನ್ನು ಕೆಲವೇ ವರ್ಷಗಳಲ್ಲಿ ಅತ್ಯುನ್ನತ ಮಟ್ಟಕ್ಕೆ ಒಯ್ಯಬೇಕು ಎಂಬ ಮಹಾತ್ವಾಕಾಂಕ್ಷೆ ಹೊಂದಿದ್ದರು. ಆದ್ದರಿಂದ ಇವರುಗಳು ಗಾಂಧೀಜಿ ಸೂಚಿಸಿದ ಗ್ರಾಮ ಕೇಂದ್ರಿತ ರಾಷ್ಟ್ರ ನಿರ್ಮಾಣ ಕಲ್ಪನೆಗೆ ವಿರುದ್ಧವಾಗಿ ಕೇಂದ್ರ ನಿರ್ದೇಶಿತ ಅಭಿವೃದ್ಧಿ ಕಲ್ಪನೆಗೆ ಒತ್ತು ನೀಡಿದರು. ಇಡೀ ವಿಶ್ವದ ಪರಿಚಯವಿದ್ದ ನೆಹರೂರವರು ಭಾರತದ ಆರ್ಥಿಕ ನೀತಿ ರೂಪಿಸುವ ಸಂದರ್ಭದಲ್ಲಿ ಗಾಂಧೀಜಿಯ ಪರಿಕಲ್ಪನೆ 'ಗ್ರಾಮಸ್ವರಾಜ್ಯಕ್ಕೆ' ಮನ್ನಣೆ ನೀಡಲಿಲ್ಲ.[೨೫] ನೆಹರೂರವರು

ಸೂಚಿಸಿದ ರಾಷ್ಟ್ರೀಯ ಯೋಜನಾ ಸಮಿತಿ ಕಾರ್ಯಾರಂಭಗೊಂಡಿತು. ರಾಷ್ಟ್ರ ಮಟ್ಟದಲ್ಲಿ ಅಭಿವೃದ್ಧಿ ಯೋಜನೆಯನ್ನು ರೂಪಿಸುವ ಜವಾಬ್ದಾರಿ ಹೊತ್ತ ಕೇಂದ್ರ ಯೋಜನಾ ಆಯೋಗವನ್ನು ರಚಿಸಲಾಯಿತು. ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಮತ್ತು ನಿರ್ವಹಿಸುವ ಜವಾಬ್ದಾರಿಯನ್ನು ಇದಕ್ಕೆ ನೀಡಲಾಯಿತು.

ಸ್ವತಂತ್ರ ಭಾರತದಲ್ಲಿ ೧೯೫೦ ರ ಸುಮಾರಿಗೆ ರಾಷ್ಟ್ರೀಯ ಅಭಿವೃದ್ಧಿಯೆಂದರೆ ಕೇವಲ ಆರ್ಥಿಕ ಅಭಿವೃದ್ಧಿ ಹಾಗೂ ರಾಷ್ಟ್ರೀಯ ಆದಾಯದ ಹೆಚ್ಚಳ ಎಂದು ಭಾವಿಸಲಾಗಿತ್ತು. ಇಡೀ ದೇಶವನ್ನು ಒಂದು ಘಟಕವನ್ನಾಗಿ ಮಾಡಿಕೊಂಡು ಅಭಿವೃದ್ಧಿಯನ್ನು ಪರಿಭಾವಿಸಲಾಯಿತು. ಅಭಿವೃದ್ಧಿಯನ್ನು ರಾಷ್ಟ್ರೀಯ ಉತ್ಪಾದನೆ, ರಾಷ್ಟ್ರೀಯ ವರಮಾನದ ಹೆಚ್ಚಳ, ರಾಷ್ಟ್ರೀಯ ಹಿತಾಸಕ್ತಿಯನ್ನು ಪೂರೈಸಿಕೊಳ್ಳುವುದು ಎಂಬ ದೃಷ್ಟಿಯಲ್ಲಿ, ರಾಷ್ಟ್ರೀಯ ಹಿತಚಿಂತನೆಯಲ್ಲಿ ಪರಿಭಾವಿಸಲಾಯಿತು. ಸರಕು, ಸಾಮಗ್ರಿ, ತಂತ್ರಜ್ಞಾನ, ವರಮಾನ, ಉದ್ಯೋಗ, ಬಂಡವಾಳ, ಉಳಿತಾಯ, ಬಡ್ಡಿ ಮುಂತಾದುವುಗಳ ವರ್ಧನೆಯನ್ನೇ ಅಭಿವೃದ್ಧಿ ಎಂಬ ಪರಿಭಾಷೆಯಲ್ಲಿ ಭಾವಿಸಲಾಯಿತು. ೧೯೫೦ರ ದಶಕದಲ್ಲಿ ಆರ್ಥಿಕ ತಜ್ಞರು ಕಡಿಮೆ ಉತ್ಪಾದನಾ ಕ್ಷೇತ್ರವಾದ ಕೃಷಿಯಿಂದ ಹೆಚ್ಚು ಉತ್ಪಾದನಾ ಕ್ಷೇತ್ರವಾದ ಆಧುನಿಕ ಕೈಗಾರಿಕೆಗಳಿಗೆ ಶ್ರಮವನ್ನು ಪರಿವರ್ತಿಸುವುದೇ ಅಭಿವೃದ್ಧಿ ಎಂದು ವ್ಯಾಖ್ಯಾನಿಸಿದರು. ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಕಡಿಮೆ ಖರ್ಚಿನಿಂದ ಹೆಚ್ಚಿನ ಉತ್ಪಾದನೆ ಮಾಡಬಹುದು ಇದರಿಂದ ಕೈಗೆಟಕುವ ಬೆಲೆಯಲ್ಲಿ ಎಲ್ಲರಿಗೂ ಸರಕುಗಳು ದೊರೆಯುತ್ತವೆ. ಹೆಚ್ಚಿನ ಜನರಿಗೆ ಉದ್ಯೋಗ ದೊರಕುತ್ತದೆ, ಜನರ ಆದಾಯ ಹೆಚ್ಚಾಗುತ್ತದೆ, ವ್ಯಾಪಾರ ವಹಿವಾಟು ವೃದ್ಧಿಯಾಗಿ ಹೆಚ್ಚಿನ ತೆರಿಗೆ ಪಾವತಿಯಾಗಿ ರಾಷ್ಟ್ರೀಯ ವರಮಾನದ ವೃದ್ಧಿಯಾಗುತ್ತದೆ ಎಂದು ಅಂದಾಜಿಸಲಾಯಿತು.[೨೬]

ಆರ್ಥಿಕ ಅಭಿವೃದ್ಧಿಯು ತುಂಬಾ ಕೆಳಮಟ್ಟದಲ್ಲಿದ್ದುದರಿಂದ ಯೋಜನಾಗಾರರು ಆರ್ಥಿಕ ಅಭಿವೃದ್ಧಿಯ ಮೇಲೆ ಹೆಚ್ಚು ಒತ್ತು ಕೊಡಲಾರಂಭಿಸಿದರು. ಆರ್ಥಿಕಾಂಶದಿಂದ ಮಾತ್ರ ಗುರುತಿಸಲ್ಪಡುತ್ತಿದ್ದ ಈ ಪರಿಕಲ್ಪನೆ ಮೊದಲಿಗೆ "ರಾಜಕೀಯ ಅಭಿವೃದ್ಧಿ ಕಲ್ಪನೆಯನ್ನು" ತನ್ನದಾಗಿಸಿಕೊಂಡಿತು. ಮುಖ್ಯವಾಗಿ ರಾಷ್ಟ್ರೀಯ ನಿವ್ವಳ ಉತ್ಪನ್ನದ ಹೆಚ್ಚಳಕ್ಕಾಗಿ ಪ್ರಯತ್ನ ಪಡಲಾಯಿತು. ಇದರ ಹೆಗ್ಗುರುತುಗಳಾಗಿ ಕೈಗಾರಿಕೆಗಳು, ಅಣೆಕಟ್ಟುಗಳು, ಬೃಹತ್ ಯೋಜನೆಗಳು, ಗಣಿಗಾರಿಕೆಗಳನ್ನು ಆರಂಭಿಸಲಾಯಿತು. ಅಣೆಕಟ್ಟುಗಳೇ ಆಧುನಿಕ ಭಾರತದ ದೇವಾಲಯಗಳೆಂದು ಮತ್ತು ಇವುಗಳನ್ನು ದೇಶದ ಪ್ರಗತಿ ಹಾಗೂ ಸಮೃದ್ಧಿಯ ಸಂಕೇತವೆಂದು ಬಿಂಬಿಸಲಾಯಿತು. ದೇಶದಲ್ಲಿ ಕೈಗೊಳ್ಳುವ ರಾಷ್ಟ್ರೀಯ ಅಭಿವೃದ್ಧಿ ಹೆಸರಿನ ಯೋಜನೆಗಳಿಗೆ ಪಾಶ್ಚಾತ್ಯ ಯುರೋಪಿನ ಅಭಿವೃದ್ಧಿ ವಿಧಾನ, ಜ್ಞಾನದ ಬಂಡವಾಳ, ದೃಷ್ಟಿಕೋನ, ಹಾಗೂ ತಂತ್ರಜ್ಞಾನವನ್ನು ಯಥಾವತ್ತಾಗಿ ಅಳವಡಿಕೆ ಮಾಡಿಕೊಳ್ಳಲಾಯಿತು. ಸ್ವತಂತ್ರ ಭಾರತ ಪ್ರಭುತ್ವ ನೇತೃತ್ವದ ಯೋಜಿತ ಅಭಿವೃದ್ಧಿ ಮಾದರಿ ಜೊತೆಗೆ ದೊಡ್ಡ ಪ್ರಮಾಣದಲ್ಲಿ ಮುಕ್ತ ಮಾರುಕಟ್ಟೆಯ ಮಾದರಿಗಳನ್ನು ಮಿಶ್ರಗೊಳಿಸಿ ತನ್ನ ದೇಶದ ಅಭಿವೃದ್ಧಿ ಮಾದರಿಯನ್ನು ಕಟ್ಟಿಕೊಂಡಿತು.

ನೆಹರೂರವರ ನೇತೃತ್ವದಲ್ಲಿ ಕೇಂದ್ರದಲ್ಲಿ ತಾಂತ್ರಿಕ ಆಧುನಿಕ ಭಾರತ ನಿರ್ಮಾಣಕ್ಕೆ ತಳಹದಿ ಹಾಕಿದರು. ಭವ್ಯ ಭಾರತ ನಿರ್ಮಾಣದಲ್ಲಿ ಸ್ಥಳೀಯವಾದುದು ಯಾವುವೂ ಪ್ರಯೋಜನಕ್ಕೆ ಬರುವುದಿಲ್ಲ ಎಂದುಕೊಂಡು ಪಶ್ಚಿಮದ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಉತ್ಪಾದನೆಯನ್ನು ಮಾಡುವ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಉತ್ಪಾದನಾ ಪ್ರಮಾಣ ಹೆಚ್ಚಾದರೆ ಮಾತ್ರಾ ಅಭಿವೃದ್ಧಿಯಾಗುತ್ತದೆ ಎಂದು ಬಿಂಬಿಸಲಾಯಿತು.[೨೭]

ಭಾರತದಲ್ಲಿ ಕಲ್ಯಾಣ ರಾಜ್ಯ ಸ್ಥಾಪನೆಗೊಂಡು ಪ್ರಜಾಪ್ರತಿನಿಧಿಕವಾಗಿ ಹಾಗೂ ಯೋಜನಾ ಬದ್ಧವಾಗಿ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಮಾಡಿ ಸಾಮಾಜಿಕ ನ್ಯಾಯದ ಗುರಿಯತ್ತ ಸಾಗುವುದಕ್ಕೆ ೧೯೫೦ರಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಯೋಜನಾ ಸಮಿತಿಯು ಬಯಸಿತು. ಆದ್ದರಿಂದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಹಲವಾರು ಆರ್ಥಿಕ ಸಾಮಾಜಿಕ ಅಭಿವೃದ್ಧಿ ಯೋಜನೆಗಳು ಕಾಯಕಲ್ಪಗೊಂಡವು. ಅಭಿವೃದ್ಧಿಯ ಯೋಜನೆಗಳಾದ ಬೃಹತ್ತಾದ ಕೇಂದ್ರೀಕೃತ ಕೈಗಾರಿಕೆಗಳು, ನೀರಾವರಿ ಯೋಜನೆಗಳು ರಾಷ್ಟ್ರದ ಅಭಿವೃದ್ಧಿಯ ಸಂಕೇತಗಳಾಗಿ ಸರ್ಕಾರದಿಂದಲೇ ರೂಪುಗೊಂಡವು. ೧೯೫೦ರ ನಂತರ ಭಾರತದಲ್ಲಿ ಭರದಿಂದ ಸಾಗಿದ ದೊಡ್ಡ ಹಾಗೂ ವಿವಿದೋದ್ದೇಶ ಅಣೆಕಟ್ಟುಗಳ ಸ್ಥಾಪನೆ, ವಿದ್ಯುಶ್ಚಕ್ತಿ ಉತ್ಪಾದನೆ, ಗಣಿಗಾರಿಕೆಗಳು, ಹೆದ್ದಾರಿಗಳ ನಿರ್ಮಾಣ, ರೈಲ್ವೇ ಅಭಿವೃದ್ಧಿ, ಕೈಗಾರಿಕೆಗಳು ಮುಂತಾದ ಬೃಹತ್ ಅಭಿವೃದ್ಧಿ ಯೋಜನೆಗಳು ಆರ್ಥಿಕ ಅಭಿವೃದ್ಧಿಗೆ ತಳಪಾಯ ಹಾಕಿದವು. ಇವೆಲ್ಲಾ ಪ್ರಕೃತಿಯನ್ನು ಅವಲಂಭಿಸಿರುವ ಯೋಜನೆಗಳು. ಪ್ರಾಕೃತಿಕ ಸಂಪನ್ಮೂಲಗಳು ಹೇರಳವಾಗಿರುವಂತಹ ಅದೆಷ್ಟೋ ಪ್ರದೇಶಗಳು ಕೈಗಾರಿಕಾ ಸ್ಥಾಪನೆಗೆ ಹಾಗೂ ಜಲವಿದ್ಯುದಾಗಾರ ಯೋಜನೆಗಳ ಸ್ಥಾಪನೆಗೆ ಆಶ್ರಯ ತಾಣಗಳಾದವು.

ಪಂಡಿತ್ ಜವಾಹರಲಾಲ ನೆಹರೂ ನಂತರ ಶ್ರೀಮತಿ ಇಂದಿರಾಗಾಂಧಿಯರು ಕೂಡ ವಿಜ್ಞಾನ ತಂತ್ರಜ್ಞಾನಗಳನ್ನು ಆಧರಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಂಚವಾರ್ಷಿಕ ಯೋಜನೆಗಳ ಮೂಲಕ ಜಾರಿಗೊಳಿಸಿದರು. ದೇಶದ ನಗರದ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ನಡೆಸಲಾಯಿತು. ಒಂದರಿಂದ ಎಂಟನೇ ಪಂಚವಾರ್ಷಿಕ ಯೋಜನೆವರೆಗೆ ಪಂಚವಾರ್ಷಿಕ ಯೋಜನೆಗಳ ಒಟ್ಟು ಮೊತ್ತದ ಶೇಕಡಾ ಅರುವತ್ತರಿಂದ ಎಪ್ಪತ್ತರಷ್ಟು ಮೊತ್ತವನ್ನು ಕೃಷಿ, ನೀರಾವರಿ ಹಾಗೂ ವಿದ್ಯುತ್ ಉತ್ಪಾದನಾ ಕ್ಷೇತ್ರಗಳಿಗೆ ವಿನಿಯೋಜಿಸಲಾಯಿತು.[೨೮]

ಹೀಗೆ ೧೯೮೦ರ ದಶಕದವರೆಗೆ ಭಾರತದಲ್ಲಿ ಅಭಿವೃದ್ಧಿ ಹಸ್ತಕ್ಷೇಪ ವಿಧಾನವೆಂದರೆ ಹೆಚ್ಚಾಗಿ ಪೂರೈಕೆ ಆಧಾರಿತ ಸ್ವರೂಪದ್ದಾಗಿತ್ತು. ಅಭಿವೃದ್ಧಿ ಎಂದರೆ ಒಟ್ಟಾರೆ ದೇಶದ ಅಭಿವೃದ್ಧಿ, ಅಭಿವೃದ್ಧಿಗಾಗಿ ದೊಡ್ಡ ಮಟ್ಟದ ವಿನಿಯೋಗ ಮಾಡಬೇಕು. ಮತ್ತು ದೇಶದ ಕಲ್ಯಾಣಕ್ಕಾಗಿ ಅಲ್ಪ ಮಟ್ಟದ ತ್ಯಾಗ ಅನಿವಾರ್ಯ ಎಂಬ ಧೋರಣೆ ಬೇರೂರಿತ್ತು. ಹೀಗೆ ಭಾರತದಲ್ಲಿ ರಾಷ್ಟ್ರೀಯ ಹಿತಾಸಕ್ತಿಯ ಹೆಸರಲ್ಲಿ ಬೃಹತ್ ಯೋಜನೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಎಲ್ಲಾ ಯೋಜನೆಗಳು ಅಲ್ಲಿನ ಪ್ರಾಕೃತಿಕ

ಮತ್ತು ಸಾಮಾಜಿಕ ಪರಿಸರದ ಮೇಲೆ ಸಾಕಷ್ಟು ಪರಿಣಾಮಗಳನ್ನು ಬೀರಿದೆ. ಅಲ್ಲಿನ ಮೂಲನಿವಾಸಿಗಳಿಂದ ದೊಡ್ಡ ಮಟ್ಟದ ತ್ಯಾಗವನ್ನು ಮಾಡಿಸಿಕೊಂಡಿದೆ.

೨.೫. ಭಾರತದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳಿಗಾಗಿ ಭೂಸ್ವಾಧೀನ

ರಾಷ್ಟ್ರೀಯ ಹಿತಾಸಕ್ತಿ ಹೆಸರಲ್ಲಿ ಕೈಗೊಂಡ ಬೃಹತ್ ಯೋಜನೆಗಳಿಗೆ ಸಾಕಷ್ಟು ಭೂಮಿ ಬೇಕಾಗುತ್ತದೆ. ಇದನ್ನು ಸರಳಗೊಳಿಸಲು ಇದ್ದ ಅಸ್ತ್ರ 'ಭೂಸ್ವಾಧೀನ ಕಾಯಿದೆ ೧೮೯೪'. ಈ ಕಾಯಿದೆ ಪ್ರಕಾರ ರಾಜ್ಯವು ತನ್ನ ಸುಪರ್ದಿಯಲ್ಲಿ ಬರುವಂತಹ ಎಲ್ಲಾ ಭೂಮಿಯ ಮೇಲೆ ತನ್ನ ಎಲ್ಲಾ ರೀತಿಯ ಅಧಿಕಾರವನ್ನು ಹೊಂದಿತ್ತು. ಭಾರತದಲ್ಲಿ ಕೈಗೊಂಡ ದೊಡ್ಡ ಪ್ರಮಾಣದ ಅಭಿವೃದ್ಧಿ ಯೋಜನೆಗಳು ಈ ನೀತಿಯನ್ನು ಅನುಸರಿಸಿ ತಮಗೆ ಬೇಕಾದಷ್ಟು ಭೂಸ್ವಾಧೀನ ಮಾಡಿಕೊಂಡಿವೆ.[೨೯] ಇತರೇ ಕಾಯಿದೆಗಳಾದ 'ಕಲ್ಲಿದ್ದಲು ಹೊಂದಿದ ಪ್ರದೇಶಗಳ (ಸ್ವಾಧೀನ ಮತ್ತು ಅಭಿವೃದ್ಧಿ) ಕಾಯಿದೆ ೧೯೫೭, ಅರಣ್ಯ ಕಾಯಿದೆ ೧೯೨೭ ಮತ್ತು ಸೇನಾಚಾಲನೆ ಮತ್ತು ಅಭ್ಯಾಸ ಕಾಯಿದೆ ೧೯೩೮ ಕೂಡಾ ಭೂಸ್ವಾಧೀನಕ್ಕೆ ಅವಕಾಶ ಮಾಡಿ ಕೊಟ್ಟಿವೆ. ಲಾಭ ಮಾಡಿಕೊಳ್ಳುವ ಖಾಸಗಿ ಕಂಪನಿಗಳು ಮತ್ತು ವಿಶೇಷ ಆರ್ಥಿಕ ವಲಯಗಳನ್ನು ಅಭಿವೃದ್ಧಿ ಚಟುವಟಿಕೆಯೆಂದು ಪರಿಗಣಿಸಿ ಸರ್ಕಾರ ಭೂಸ್ವಾಧೀನಪಡಿಸಿಕೊಂಡು ಅವರಿಗೆ ಪೂರೈಸಿದೆ. ಇದು ಕೃಷಿ ಆಧಾರಿತ ಆರ್ಥಿಕತೆಯನ್ನು ಕೃಷಿಯೇತರ ಆರ್ಥಿಕ ಚಟುವಟಿಕೆಯನ್ನಾಗಿ ಪರಿವರ್ತಿಸಿತು.

ಸ್ವಾತಂತ್ರ್ಯ ಬಂದ ನಂತರದ ಅಭಿವೃದ್ಧಿ ರಾಜಕಾರಣ ಮುಖ್ಯ ಗುರಿಯಾಗಿಸಿಕೊಂಡದ್ದು ಅರಣ್ಯವನ್ನು.[೩೦] ಬೇರೆ ಬೇರೆ ಅಭಿವೃದ್ಧಿ ಯೋಜನೆಗಳಿಗಾಗಿ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಅಧ್ಯಯನಗಳ ಪ್ರಕಾರ ೧೯೫೧-೧೯೯೫ ರವರೆಗಿನ ಅಭಿವೃದ್ಧಿ ಯೋಜನೆಗಳಿಂದ ಭಾರತದಾದ್ಯಂತ ಸುಮಾರು ೨೦ ಮಿಲಿಯನ್ ಹೆಕ್ಟೇರ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಲ್ಲಿ ೭ ಮಿಲಿಯನ್ ಹೆಕ್ಟೇರ್ ಅರಣ್ಯ ಭೂಮಿ ಮತ್ತು ೬ ಮಿಲಿಯನ್ ಹೆಕ್ಟೇರ್ ಇತರೇ ಸಮುದಾಯ ಸಂಪನ್ಮೂಲಗಳು(CPRs). ನೀರಾವರಿಗಾಗಿ ೬.೭೨೨.೨೯ ಹೆಕ್ಟೇರು, ಜಲವಿದ್ಯುತ್ ಯೋಜನೆಗಾಗಿ ೫೧೮೩.೭ ಹೆಕ್ಟೇರು, ಗಣಿಗಾರಿಕೆಗಾಗಿ ೩೮೧.೮೧೪ ಹೆಕ್ಟೇರು, ರೈಲ್ವೇಗಾಗಿ ೩೪೮.೮೮ ಹೆಕ್ಟೇರು, ಇತರೆ ವಿವಿಧ ಅಭಿವೃದ್ಧಿಗಳಿಗಾಗಿ ವಶಪಡಿಸಿಕೊಂಡ ಅರಣ್ಯ ४೫೫೦.೧೩४೮ ಹೆಕ್ಟೇರು. ಹೀಗೆ ಒಟ್ಟು ಪರಿವರ್ತನೆಯಾದ ಅರಣ್ಯ ೧೧.४೬४.೬೨ ಹೆಕ್ಟೇರುಗಳು.'[೩೧] ೧೯४೦-೮೦ರವರೆಗೆ ನದಿ ಕಣಿವೆ ಯೋಜನೆಗಳಿಗಾಗಿ ४.೮ ಲಕ್ಷ ಹೆಕ್ಟೇರ್, ಕೈಗಾರಿಕೆಗಾಗಿ ೧.೩ ಲಕ್ಷ ಹೆಕ್ಟೇರ್ ಹಾಗೂ ರಸ್ತೆ, ಕಟ್ಟಡಗಳು, ನಗರಗಳು ಇಂಥ ಇತರ ಕಾರಣಗಳಿಂದಾಗಿ ೧೦.೨ ಲಕ್ಷ ಹೆಕ್ಟೇರ್ ಅರಣ್ಯವೆಂದು ವರ್ಗೀಕೃತವಾದ ಭೂಮಿಯನ್ನು ಪರಭಾರೆ ಮಾಡಲಾಗಿದೆ.'[೩೨] 'ಇದು ಅಧಿಕೃತ ದಾಖಲೆ. ಆದರೆ ಬಲಾಢ್ಯರ ಒತ್ತುವರಿಗಾಗಿ ಬಲಿಯಾದ ಸಾವಿರಾರು ಹೆಕ್ಟೇರುಗಳಾಗಲೀ, ಗಣಿಗಾರಿಕೆಯ ಅನಧಿಕೃತ ಒತ್ತುವರಿಗಾಗಿ ಅರಣ್ಯ ಲೂಟಿಕೋರರಿಗೆ

ಬಲಿಯಾದ ಅಸಂಖ್ಯಾತ ಪ್ರದೇಶಗಳಾಗಲೀ ಎಲ್ಲಿಯೂ ದಾಖಲಾಗಿಲ್ಲ.'[೩೩] ಇನ್ನೊಂದು ಅಂಕಿ ಅಂಶದ ಪ್ರಕಾರ 'ಭಾರತದಲ್ಲಿ ನಾನಾ ಯೋಜನೆಗಳಿಗೆಂದು ಆದಿವಾಸಿಗಳು ಅಥವಾ ಮೂಲನಿವಾಸಿಗಳಿಂದ ಕಿತ್ತುಕೊಳ್ಳಲಾಗಿರುವ ನೆಲದ ಅಧಿಕೃತ ವಿಸ್ತೀರ್ಣ ೧೫ ಲಕ್ಷ ಎಕರೆಗಳು. ಅನಧಿಕೃತ ೦೮ ಲಕ್ಷವೆಂಬ ಅಂದಾಜು.[೩೪] 'ಒಬ್ಬರು ಅಣೆಕಟ್ಟು ನಿರ್ಮಾಣ ಜ್ಞಾನಿಯ ಪ್ರಕಾರ ದೊಡ್ಡ ಅಣೆಕಟ್ಟುಗಳ ಜಲಾಶಯದಿಂದ ಮುಳುಗಡೆಯಾದ ಒಟ್ಟು ಭೂಮಿಯು ಭಾರತ ಸ್ವಾತಂತ್ರ್ಯವಾದಾಗಿನಿಂದ ಎಷ್ಟು ಭೂಮಿಯನ್ನು ಕಳೆದುಕೊಂಡಿದೆಯೋ ಅದರ ಶೇಕಡಾ ೫ ರಷ್ಟು ಇದೆ.'[೩೫]

ಹೀಗೆ ಭಾರತದಲ್ಲಿ ಕೈಗೊಂಡಂತಹ ಬೃಹತ್ ಯೋಜನೆಗಳಿಗೆ ಬೇಕಾದ ಭೂಮಿಯನ್ನು ಕಾಯಿದೆ ಮುಖಾಂತರ ಸ್ವಾಧೀನಪಡಿಸಿಕೊಳ್ಳಲಾಗಿದೆ. ಯಾರದೇ ಜಮೀನಿನ ಮೇಲೆ ಸರ್ಕಾರವೇ ಅಂತಿಮ ಎಂಬ ಧೋರಣೆ ಈ ಕಾಯಿದೆಗೆ ಇದ್ದ ಕಾರಣ ದೇಶದಲ್ಲಿ ಯೋಜನೆಗಳ ಹೆಸರಲ್ಲಿ ಎಗ್ಗಿಲ್ಲದೇ ಭೂಸ್ವಾಧೀನವಾಗಿದೆ. ೧೯೮೪ರಲ್ಲಿ ಈ ಕಾಯಿದೆಯನ್ನು ತಿದ್ದುಪಡಿಗೊಳಿಸಲಾಯಿತು.

೨.೬. ಬೃಹತ್ ಅಭಿವೃದ್ಧಿ ಯೋಜನೆಗಳಿಂದಾದ ಸ್ಥಳಾಂತರ

ರಾಷ್ಟ್ರ ನಿರ್ಮಾಣದ ಯೋಜಿತ ಅಭಿವೃದ್ಧಿ ತತ್ವದಡಿಯಲ್ಲಿ ಎಲ್ಲಿ ಪ್ರಕೃತಿ ಸಂಪತ್ತು ಹೇರಳವಾಗಿತ್ತೋ ಅಲ್ಲೆಲ್ಲಾ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಹೆಚ್ಚು ಯೋಜನೆಗಳು ತುಂಬಾ ಹಿಂದುಳಿದ ಅನುಸೂಚಿತ ಪ್ರದೇಶದಲ್ಲಿ ನಿರ್ಮಾಣವಾಗಿದ್ದರಿಂದಾಗಿ ಆರ್ಥಿಕವಾಗಿ ದುರ್ಬಲರಾಗಿರುವ, ಸಮಾಜದ ಅಂಚಿನಲ್ಲಿ ಬದುಕುತ್ತಿದ್ದ ಸಾಕಷ್ಟು ಬುಡಕಟ್ಟು ಸಮುದಾಯಗಳು ತಮ್ಮ ಜೀವನಾಧಾರದಿಂದ ಹೊರ ದೂಡಲ್ಪಟ್ಟವು. ಭಾರತದಲ್ಲಿ ಹಲವಾರು ವರ್ಷಗಳಿಂದ ಅಭಿವೃದ್ಧಿ ಯೋಜನೆಗಳ ಉದ್ಧೇಶಕ್ಕೆ ಜನರನ್ನು ಒತ್ತಾಯ ಪೂರ್ವಕವಾಗಿ ಸ್ಥಳಾಂತರಗೊಳಿಸಲಾಗುತ್ತಿದೆ. ಭಾರತದಲ್ಲಿ ಯೋಜನೆಗಳಿಂದ ಸ್ಥಳಾಂತರಗೊಂಡವರ ಬಗೆಗೆ ಸರಿಯಾದ ಕಛೇರಿ ದಾಖಲಾತಿಗಳಿಲ್ಲ. ಭಾರತ ಸ್ವಾತಂತ್ರ್ಯವಾದ ಮೇಲೂ ಬೃಹತ್ ಯೋಜನೆಗಳಿಂದ ಸ್ಥಳಾಂತರ ಆದವರ ಸರಿಯಾದ ಅಂಕಿ ಅಂಶಗಳು ದೊರೆಯುತ್ತಿಲ್ಲ.[೩೬]

ವಿಶ್ವ ಅಣೆಕಟ್ಟುಗಳ ಆಯೋಗದ ಪ್ರಕಾರ ಪ್ರಪಂಚದಾದ್ಯಂತ ೪೦ ಮಿಲಿಯನ್‌ದಿಂದ ೮೦ ಮಿಲಿಯನ್ ಜನರು ಅಣೆಕಟ್ಟುಗಳಿಂದ ಭೌತಿಕವಾಗಿ ಸ್ಥಳಾಂತರಗೊಂಡಿರುತ್ತಾರೆ.[೩೭] ನಿರಾಶ್ರಿತರ ಬಗೆಗಿನ US ಸಮಿತಿಯ ವಿಶ್ವ ನಿರಾಶ್ರಿತರ ಸಮೀಕ್ಷೆಯ [USCR] ಅಂದಾಜಿನ ಪ್ರಕಾರ ವಿಶ್ವದಾದ್ಯಂತ ಸರಿಸುಮಾರು ೨೦ ಮಿಲಿಯನ್‌ಗಿಂತಲೂ ಹೆಚ್ಚಿನ ಜನರು ನಿರಾಶ್ರಿತರಾಗಿದ್ದಾರೆ.[೩೮]

ಭಾರತದಲ್ಲಿ ಆಂತರಿಕವಾಗಿ ಸ್ಥಳಾಂತರವಾದವರ ಅಂಕಿಸಂಖ್ಯೆಯ ಅಂದಾಜಿನಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸವಿದೆ.[೩೯] ಕಳೆದ ೬೦ ವರ್ಷಗಳಲ್ಲಿ ಭಾರತ ದೇಶವೊಂದರಲ್ಲೇ ೬೦ ಮಿಲಿಯನ್‌ಗಿಂತಲೂ ಹೆಚ್ಚು ಜನರು ಸ್ಥಳಾಂತರಗೊಂಡಿರುತ್ತಾರೆ.[೪೦] ಯೋಜನಾ

ಆಯೋಗದ ಪ್ರಕಾರ ೨೧.೩ ಮಿಲಿಯನ್ ಜನರನ್ನು ೧೯೫೧ ರಿಂದ ೧೯೯೦ ರವರೆಗೆ ಸ್ಥಳಾಂತರಿಸಲಾಗಿದೆ. ೧೯೫೧-೧೯೯೫ ರವರೆಗಿನ ಸ್ಥಳಾಂತರದ ಮೇಲಿನ ಆರು ರಾಜ್ಯಗಳ ಅಧ್ಯಯನ ಹಾಗೂ ಇತರೇ ಸಂಶೋಧನೆಯ ಮಾಹಿತಿಯಂತೆ ೧೯೪೭ ರಿಂದ ೨೦೦೦ದವರೆಗೆ ೫೦ ಮಿಲಿಯನ್‌ದಷ್ಟು, ೧೯೪೭-೨೦೦೦ರವರೆಗೆ ೬೦ ಮಿಲಿಯನ್ ಜನರು ಸ್ಥಳಾಂತರಗೊಂಡಿದ್ದಾರೆ.[೪೧] ಶ್ರೀ ವಾಲ್ಟರ್ ಫೆರ್ನಾಂಢೀಸ್‌ರವರ ಪ್ರಕಾರ ಅಭಿವೃದ್ಧಿ ಯೋಜನೆಗಳಿಂದಾಗಿ ಭಾರತದ ೨/೩ ರಾಜ್ಯಗಳಲ್ಲಿ ೧೯೫೦ ರಿಂದ ೨೦೦೫ ರವರೆಗೆ ೬೫ ಮಿಲಿಯನ್ ಜನರು ಆಂತರಿಕವಾಗಿ ಸ್ಥಳಾಂತರಗೊಂಡಿದ್ದಾರೆ.[೪೨] ಸ್ಮಿತು ಕೊಠಾರಿಯವರ ವರದಿಯ ಪ್ರಕಾರ ಪ್ರತಿವರ್ಷವೂ ೫ ಲಕ್ಷ ಜನರನ್ನು ಸ್ಥಳಾಂತರಿಸಲಾಗುತ್ತಿದೆ.[೪೩] ಭಾರತೀಯ ಸಾಮಾಜಿಕ ಸಂಸ್ಥೆಯ ಅಂಕಿ ಅಂಶಗಳು ಮತ್ತು ವಿಶ್ವ ಆಂತರಿಕವಾಗಿ ಸ್ಥಳಾಂತರವಾದವರ ಪ್ರಕಾರ ೨೧.೩ ಮಿಲಿಯನ್ ಜನರು ಅಭಿವೃದ್ದಿ ಪ್ರೇರಿತ ಯೋಜನೆಗಳಿಂದ ಆಂತರಿಕವಾಗಿ ಸ್ಥಳಾಂತರಗೊಂಡಿರುತ್ತಾರೆ.[೪೪] ಸುಮಾರು ೨೧.೩ ಮಿಲಿಯನ್ ಅಭಿವೃದ್ಧಿ ಪ್ರೇರಿತ ಆಂತರಿಕವಾಗಿ ಸ್ಥಳಾಂತರವಾದವರಲ್ಲಿ ೧೬.೪ ಮಿಲಿಯನ್ ಅಣೆಕಟ್ಟುಗಳಿಂದ, ೨.೫೫ ಮಿಲಿಯನ್ ಗಣಿಗಾರಿಕೆಯಿಂದ, ೧.೨೫ ಮಿಲಿಯನ್ ಕೈಗಾರಿಕಾ ಅಭಿವೃದ್ಧಿಯಿಂದ ೦.೬ ಮಿಲಿಯನ್ ವನ್ಯಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನವನಗಳಿಂದ.[೪೫] ಇತ್ತೀಚಿನ ವಿಶ್ವ ನಿರಾಶ್ರಿತರ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ೫,೦೭,೦೦೦ ಜನರು ಸ್ಥಳಾಂತರಗೊಂಡಿರುತ್ತಾರೆ.[೪೬] ಬೃಹತ್ ಅಭಿವೃದ್ಧಿ ಯೋಜನೆಗಳ ರಚನೆ ನಿರ್ಮಾಣಗಳ ಪ್ರಕ್ರಿಯೆಯಲ್ಲಿ ಐದು ಕೋಟಿಗಿಂತ ಹೆಚ್ಚಿನ ಭಾರತೀಯರು ತಮ್ಮ ಮನೆ ಮಾರುಗಳನ್ನು ಕಳೆದುಕೊಂಡು ಸ್ಥಾನಾಂತರಗೊಂಡಿದ್ದಾರೆ.[೪೭] ಟೈಮ್ಸ್ ಆಫ್ ಇಂಡಿಯಾ ನವ ದೆಹಲಿ ಇದು ದಿನಾಂಕ ೬.೪.೨೦೧೨ರಂದು ಪ್ರಕಟಿಸಿದ ವರದಿ ಪ್ರಕಾರ ಅಭಿವೃದ್ಧಿ ಯೋಜನೆಗಳಿಂದಾಗಿ ದೇಶದೊಳಗೆ ಸ್ಥಳಾಂತರಗೊಂಡವರ ಸಂಖ್ಯೆ ೬೦-೬೫ ಮಿಲಿಯನ್, ಭಾರತವು ಅಭಿವೃದ್ಧಿ ಯೋಜನೆಗಳಿಗಾಗಿಯೇ ಸ್ಥಳಾಂತರ ಆದವರನ್ನು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದೆ.[೪೮] ಸ್ವಾತಂತ್ರ್ಯವಾದಾಗಿನಿಂದ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಅಭಿವೃದ್ಧಿ ಯೋಜನೆಗಳಿಂದ ಭೂಸ್ವಾಧೀನಗೊಳಿಸಿ ಪ್ರತೀ ವರ್ಷವೂ ಸರಿಸುಮಾರು ೫ ಲಕ್ಷ ಜನರನ್ನು ಸ್ಥಳಾಂತರಗೊಳಿಸಲಾಗುತ್ತಿದೆ.

ಕಳೆದ ಐವತ್ತು ವರ್ಷಗಳಿಂದ ನೋಡಿದರೆ ಜನರು ತಮ್ಮ ಮೂಲ ನೆಲೆಗಳನ್ನು ಕಳೆದುಕೊಳ್ಳಲು ಅಣೆಕಟ್ಟು ಮುಖ್ಯ ಕಾರಣವಾಗಿದೆ. ಅಣೆಕಟ್ಟು ಯೋಜನೆಗಳಲ್ಲಿ ಒಂದು ದೊಡ್ಡ ಅಣೆಕಟ್ಟು ೨೫,೦೦೦-೨,೫೦,೦೦೦ ಜನರವರೆಗೆ, ಒಂದು ಮಧ್ಯಮ ಅಣೆಕಟ್ಟು ೪೦೦-೬೦೦೦ ಜನರನ್ನು ಸ್ಥಳಾಂತರಗೊಳಿಸುತ್ತದೆ.[೪೯] ವಿಶ್ವ ಬ್ಯಾಂಕ್‌ನ ಪರಾಮರ್ಶನದ ಪ್ರಕಾರ ಭಾರತದ ೩೦೦೦ಕ್ಕಿಂತಲೂ ಹೆಚ್ಚಿನ ಅಣೆಕಟ್ಟುಗಳಿಂದಾಗಿ ೩೯ ಮಿಲಿಯನ್‌ಗಿಂತಲೂ ಹೆಚ್ಚಿನ ಜನರು ಸ್ಥಳಾಂತರಗೊಂಡಿರುತ್ತಾರೆ ಎಂದು ಅಂದಾಜಿಸಲಾಗಿದೆ.[೫೦] ಭಾರತದಲ್ಲಿ ೨೧ ಮಿಲಿಯನ್ ದಿಂದ ೪೨ ಮಿಲಿಯನ್ ಜನರು ಅಣೆಕಟ್ಟುಗಳು ಮತ್ತು ಜಲಾಶಯಗಳಿಂದಾಗಿ ಸ್ಥಳಾಂತರವಾಗಿದ್ದಾರೆ.[೫೧] ಫೆರ್ನಾಂಡೀಸ್,

ದಾಸ್ ಮತ್ತು ರಾವ್(೧೯೮೯)ರವರ ಪ್ರಕಾರ ಭಾರತದಲ್ಲಿ ಅಣೆಕಟ್ಟು ಯೋಜನೆಗಳಿಂದಾಗಿ ೨೧ ಮಿಲಿಯನ್ ಜನರು ಸ್ಥಳಾಂತರಗೊಂಡಿರುತ್ತಾರೆ.[೫೨] ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡ್ಮಿನಿಸ್ಟ್ರೇಷನ್ ೫೪ ದೊಡ್ಡ ಅಣೆಕಟ್ಟುಗಳನ್ನು ಅಧ್ಯಯನ ಮಾಡಿ, ಪ್ರತಿಯೊಂದು ದೊಡ್ಡ ಅಣೆಕಟ್ಟಿನ ನಿರ್ಮಾಣದಿಂದ ಸರಾಸರಿ ೪೪,೧೮೨ ಜನರು ನಿರ್ವಸಿತರಾಗಿರುವರೆಂದು ತಿಳಿಯಪಡಿಸಿದೆ.[೫೩] ಫೆರ್ನಾಂಡೀಸ್, ದಾಸ್ ಮತ್ತು ರಾವ್(೧೯೮೯)ರವರ ಪ್ರಕಾರ ೫೪ ಯೋಜನೆಗಳನ್ನು ಸರ್ವೆ ಮಾಡಿ ೫೦ ವರ್ಷಗಳಲ್ಲಿ ದೊಡ್ಡ ಅಣೆಕಟ್ಟುಗಳಿಂದ ೩೩ ಮಿಲಿಯನ್ ಜನರು ಸ್ಥಳಾಂತರಗೊಂಡಿರುತ್ತಾರೆ.[೫೪] ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಗಳಾದ ಶ್ರೀ. ಎನ್.ಸಿ. ಸಕ್ಸೇನ ಅವರ ಪ್ರಕಾರ ೫೦ ಮಿಲಿಯನ್ ಜನರು ಬೃಹತ್ ಅಣೆಕಟ್ಟುಗಳಿಂದ ಸ್ಥಳಾಂತರವಾಗಿದ್ದಾರೆ. ಈ ರೀತಿಯಾಗಿ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಂದಾಗಿ ಎಷ್ಟು ಜನರು ಸ್ಥಳಾಂತರಗೊಂಡಿದ್ದಾರೆ ಎಂಬುದಕ್ಕೆ ಅಧ್ಯಯನಗಳು ಒಂದೊಂದು ರೀತಿಯ ಅಂಕಿ ಅಂಶಗಳನ್ನು ನೀಡಿದ್ದು ಯಾವುದೇ ರೀತಿಯ ನಿಖರ ಮಾಹಿತಿ ಇಲ್ಲದಾಗಿದೆ.

ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಸ್ಥಾಪಿಸುವ ಸಂದರ್ಭಗಳಲ್ಲಿ ಇಂತಿಷ್ಟು ಜನರು ಸ್ಥಳಾಂತರವಾಗುತ್ತಾರೆ ಎಂದು ಅಂದಾಜಿಸುತ್ತದೆ. ಆದರೆ ಯೋಜನೆ ಪೂರ್ಣವಾಗುವ ಸಂದರ್ಭದಲ್ಲಿ ಲೆಕ್ಕಕ್ಕಿಂತ ಹೆಚ್ಚು ಜನರು ಯಾವುದೇ ಪೂರ್ವ ಸೂಚನೆ ಇಲ್ಲದೇ ಸ್ಥಳಾಂತರವಾಗಿದ್ದಾರೆ ಎಂಬುದನ್ನು ಅಧ್ಯಯನಗಳು ಪ್ರಸ್ತುತಪಡಿಸಿವೆ. ಉದಾಹರಣೆಗೆ ೧೯೭೯ ರಲ್ಲಿ ಸರ್ದಾರ ಸರೋವರ ಜಲಾಶಯ ಯೋಜನೆಯಿಂದ ಸ್ವಲ್ಪ ಅಂದರೆ ೬,೦೦೦ ಕುಟುಂಬಗಳು ಸ್ಥಳಾಂತರ ಆಗುತ್ತಾರೆ ಎಂದು ಅಂದಾಜು ಮಾಡಲಾಗಿತ್ತು. ೧೯೮೭ ರಲ್ಲಿ ೧೨,೦೦೦ದಷ್ಟು ಹೆಚ್ಚಿಸಲಾಯಿತು. ೧೯೯೧ ರಲ್ಲಿ ೨೭,೦೦೦ ಕುಟುಂಬದಷ್ಟಾಗಿತ್ತು. ೧೯೯೨ ರಲ್ಲಿ ಈ ಜಲಾಶಯ ಯೋಜನೆ ೪೦,೦೦೦ ಕುಟುಂಬಗಳಿಗೆ ಪರಿಣಾಮ ಬೀರುತ್ತದೆ ಎಂದು ಪ್ರಕಟಿಸಿತು. ಆದರೆ ನರ್ಮದಾ ಬಚಾವೋ ಆಂದೋಲನದ ನಿಜವಾದ ಅಂಕಿ ಅಂಶಗಳ ಪ್ರಕಾರ ೮೫,೦೦೦ ಕುಟುಂಬಗಳು ಅಥವಾ ೫,೦೦,೦೦೦ ಜನರು ಸ್ಥಳಾಂತರ ಆದರು. ಆರು ಕುಟುಂಬಗಳ ಬದಲಾಗಿ ಎಂಭತ್ತೈದು ಸಾವಿರ ಎಂದರೆ ಎಷ್ಟೊಂದು ವ್ಯತ್ಯಾಸವನ್ನು ಅಧ್ಯಯನದಲ್ಲಿ ಕಾಣಬಹುದು. ಸ್ಥಳಾಂತರವಾಗುವವರ ಅಂಕಿಅಂಶಗಳನ್ನು ಯಾವ ಮಾನದಂಡ ಇಟ್ಟುಕೊಂಡು ಅಳತೆ ಮಾಡಿದರು ಎಂಬುದು ತಿಳಿಯದಾಗಿದೆ. ಹಾಗೆಯೇ ೧೯೯೦ ರಲ್ಲಿ ಮುಕ್ತಾಯಗೊಳ್ಳಬೇಕಾಗಿದ್ದ ನರ್ಮದಾ ನದಿಯ ಮೇಲಿನ ಪ್ರಥಮ ಅಣೆಕಟ್ಟಾದ ಜಬಲಪುರದಲ್ಲಿನ ಬಾರ್ಗಿ ಅಣೆಕಟ್ಟು ೧೦೧ ಗ್ರಾಮಗಳಿಂದ ಸುಮಾರು ೭೦,೦೦೦ ಕುಟುಂಬಗಳು ಸ್ಥಳಾಂತರ ಆಗಬಹುದು ಎನ್ನುವ ನಿರೀಕ್ಷೆಯಲ್ಲಿತ್ತು. ಆದರೆ ಜಲಾಶಯ ತುಂಬಿದಾಗ ಯಾವುದೇ ರೀತಿಯ ಅಧಿಸೂಚನೆಯಿಲ್ಲದೇ ೧೬೨ ಗ್ರಾಮಗಳನ್ನು ಮುಳುಗಡೆಗೊಳಿಸಲಾಯಿತು.'[೫೫] ಕರ್ನಾಟಕದ ಕೃಷ್ಣಾ ಮೇಲ್ದಂಡೆ ನೀರಾವರಿ

ಯೋಜನೆಯು ೨೦,೦೦೦ದ ಬದಲಿ ೨,೪೦,೦೦೦ ಜನರನ್ನು ಸ್ಥಳಾಂತರಗೊಳಿಸಿತು.[೫೬] ಈ ರೀತಿಯಾಗಿ ಪೂರ್ವದಲ್ಲಿ ಅಂದಾಜಿಸಿದ್ದಕ್ಕಿಂತ ಹೆಚ್ಚಾಗಿ ಅಣೆಕಟ್ಟು ಯೋಜನೆಗಳಿಂದ ಜನರು ಯಾವುದೇ ಮುನ್ಸೂಚನೆ ಇಲ್ಲದೇ ಸ್ಥಳಾಂತರವಾಗಿದ್ದಾರೆ.

ಕೆಲವೊಂದು ಯೋಜನೆಗಳಿಂದಾಗಿ ಜನರು ಒಂದಕ್ಕಿಂತ ಹೆಚ್ಚು ಸಲ ಸ್ಥಳಾಂತರಗೊಂಡಿರುತ್ತಾರೆ. ಉದಾಹರಣೆಗೆ ಮಧ್ಯಪ್ರದೇಶದ ಸಿಂಗ್ರೌಲಿ ಪ್ರದೇಶದಲ್ಲಿ ೧೯೬೦ ರಿಂದ ೧೯೬೪ ರವರೆಗಿನ ಗೋಬಂದ್ ಸಾಗರ ಜಲಾಶಯ, ರಿಹಾಂದ್ ಅಣೆಕಟ್ಟು, ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್, ಕಲ್ಲಿದ್ದಲು ಗಣಿಗಾರಿಕೆ ಇವುಗಳಿಂದಾಗಿ ೨,೦೦,೦೦೦ ಜನರು ಮತ್ತೆ ಮತ್ತೆ ಸ್ಥಳಾಂತರಗೊಂಡರು.[೫೭]

ರಾಷ್ಟ್ರೀಯ ಅಭಿವೃದ್ಧಿಗಾಗಿ ಬುಡಕಟ್ಟು ಜನರು ಹೆಚ್ಚು ಬೆಲೆ ತೆತ್ತವರಾಗಿದ್ದಾರೆ. ಸ್ಥಳಾಂತರ ಈ ದೇಶದ ಆದಿವಾಸಿಗಳನ್ನು ನಾಶ ಮಾಡಿದಷ್ಟು ಯಾವ ಸಮಸ್ಯೆಯೂ ನಾಶ ಮಾಡಿಲ್ಲ. ಈ ದೇಶದ ಬೃಹತ್ ಯೋಜನೆಗಳಲ್ಲಿ ಸ್ಥಳಾಂತರಗೊಂಡು ದಿಕ್ಕೆಟ್ಟು ಹೋದ ಜನರಲ್ಲಿ ಶೇ. ೫೫.೧೬ರಷ್ಟು ಜನ ಆದಿವಾಸಿಗಳೇ ಆಗಿದ್ದಾರೆ.[೫೮] ಭಾರತದಲ್ಲಿ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ರಕ್ಷಣೆಯ ಕಾರ್ಯ ತಂಡವು(WGHR) ೨೦೧೨ರಲ್ಲಿ ಬಿಡುಗಡೆ ಮಾಡಿದ ವರದಿಯ ಪ್ರಕಾರ 'ಸ್ಥಳಾಂತರಗೊಂಡವರಲ್ಲಿ ಶೇಕಡಾ ೪೦ ಕ್ಕಿಂತ ಹೆಚ್ಚು ಸಂತ್ರಸ್ತರು ಬುಡಕಟ್ಟು ಸಮುದಾಯದವರು ಹಾಗೂ ೪೦% ದಲಿತರು ಮತ್ತು ಇತರರು ಗ್ರಾಮೀಣ ಸಮುದಾಯಕ್ಕೆ ಸೇರಿದವರು.'[೫೯] ಬುಡಕಟ್ಟು ಸಚಿವಾಲಯದಿಂದ ನೇಮಕಗೊಂಡ ಬೇರೆ ಬೇರೆ ಸಂಘಗಳ ಪ್ರತಿನಿಧಿಗಳ ಅಭಿವೃದ್ಧಿ, ಸ್ಥಳಾಂತರ ಹಾಗೂ ಪುನರ್ ನಿರ್ಮಾಣ ಕರಡು ಪಾಲಿಸಿ ಸಮಿತಿಯು ೧೯೫೧-೧೯೮೦ರವರೆಗೆ ಸ್ಥಳಾಂತರಗೊಂಡವರಲ್ಲಿ ಮತ್ತು ಯೋಜನಾ ಸಂತ್ರಸ್ತರಲ್ಲಿ ೪೦% ಬುಡಕಟ್ಟುಗಳು ಎಂದು ೧೯೮೫ರ ಭಾರತ ಸರ್ಕಾರದ ಪ್ರಕಟಣೆ ತಿಳಿಸುತ್ತದೆ.[೬೦] ಬುಡಕಟ್ಟು ಸಚಿವಾಲಯದ ಪ್ರಕಾರ ೧೯೫೦-೧೯೯೦ ರವರೆಗೆ ಬೃಹತ್ ಯೋಜನೆ ಅಥವಾ ಕಾದಿಟ್ಟ (ಮೀಸಲು) ಅರಣ್ಯ ಭೂಮಿಯಿಂದ ೮೫.೩೯ ಲಕ್ಷ ಬುಡಕಟ್ಟುಗಳು ಸ್ಥಳಾಂತರಗೊಂಡಿದ್ದಾರೆ. ಅದರಲ್ಲಿ ಶೇಕಡಾ ೫೫ಕ್ಕಿಂತ ಹೆಚ್ಚಿನವರು ಆದಿವಾಸಿಗಳು. ಯೋಜನಾ ಆಯೋಗದ ಪ್ರಕಾರ ೧೯೫೧ ರಿಂದ ೧೯೯೦ ರವರೆಗೆ ಸ್ಥಳಾಂತರಗೊಂಡ ೨೧.೩ ಮಿಲಿಯನ್ ಜನರಲ್ಲಿ ೮.೫೪ ಮಿಲಿಯನ್ ಅಂದರೆ ಶೇ. ೪೦ ರಷ್ಟು ಜನರು ಬುಡಕಟ್ಟುಗಳು.[೬೧]

೧೯೯೦ರವರೆಗೆ ದೇಶದ ವಿವಿಧ ಯೋಜನೆಗಳಿಂದ ೯೦ ಲಕ್ಷ ಜನ ಆದಿವಾಸಿಗಳು ಸ್ಥಳಾಂತರಗೊಂಡು ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.[೬೨] ಸ್ಮಿತು ಕೊಠಾರಿಯವರ ವರದಿಯಲ್ಲಿರುವಂತೆ ೪.೫ ಲಕ್ಷ ಬುಡಕಟ್ಟು ಜನಾಂಗದವರನ್ನು ಕಾಡುಪ್ರಾಣಿಗಳ ರಕ್ಷಣೆಗಾಗಿ ಒಕ್ಕಲೆಬ್ಬಿಸಲಾಗಿದೆ.[೬೩] ಯೋಜನೆಗಳಿಂದಾಗಿ ಈವರೆಗೆ ೧೭ ಲಕ್ಷ ಮಂದಿ ಝಾರ್ಖಂಡಿಗರನ್ನು ಒಕ್ಕಲೆಬ್ಬಿಸಲಾಗಿದೆ. ಇವರ ಪೈಕಿ ೮೫ ಶೇ.ರಷ್ಟು ಮಂದಿ ಆದಿವಾಸಿಗಳು.[೬೪] ಬೃಹತ್ ಯೋಜನೆಗಳಿಂದಾಗಿ ೧೯೯೦ ರವರೆಗೆ ಸುಮಾರು ೮೫.೩೯ ಲಕ್ಷದಷ್ಟು ಗಿರಿಜನ ಸ್ಥಳಾಂತರಗೊಂಡಿದ್ದಾರೆ. ದೇಶದ ಒಟ್ಟಾರೆ ಸ್ಥಳಾಂತರಗೊಂಡ ಜನರಲ್ಲಿ

ಬುಡಕಟ್ಟು ಜನಾಂಗ ಶೇ.೫೫.೧೬ರಷ್ಟಿದ್ದಾರೆ.[೬೫] ೧೯೫೧ ರಿಂದ ಈಚೆಗೆ ಭಾರತ ಸರ್ಕಾರದ ಬೃಹತ್ ಯೋಜನೆಗಳಿಂದ ಗಂಭೀರ ತೊಂದರೆಗಳಿಗೀಡಾದ ೨೧.೩ ಮಿಲಿಯನ್ ಜನರಲ್ಲಿ ೮.೫೪ ಮಿಲಿಯನ್ ಜನ ಆದಿವಾಸಿಗಳು.[೬೬] ೧೯೮೫ ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಪ್ರಕಾರ ಸ್ಥಳಾಂತರಗೊಂಡವರಲ್ಲಿ ಶೇಕಡಾ ೪೦ ಬುಡಕಟ್ಟುಗಳು.[೬೭] ಸ್ವತಂತ್ರ ಭಾರತದ ಈ ಐವತ್ತು ವರ್ಷಗಳಲ್ಲಿ ಕಾರ್ಯರೂಪಕ್ಕೆ ಬಂದ ನಮ್ಮ ಬೃಹತ್ ಅಭಿವೃದ್ಧಿ ಯೋಜನೆಗಳು; ವಿಶೇಷವಾಗಿ ಬೃಹತ್ ಜಲಾಶಯಗಳು ಮತ್ತು ಕೈಗಾರಿಕೆಗಳು ಸುಮಾರು ಹತ್ತುಲಕ್ಷ ಜನ ಆದಿವಾಸಿಗಳನ್ನು ನಿರ್ವಸಿತರನ್ನಾಗಿ ಮಾಡಿವೆ.[೬೮]

೧೯೫೦ರಿಂದ ೧೯೯೦ ರ ಮಧ್ಯೆ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಂದಾಗಿ ನೆಲೆತಪ್ಪಿದ ಮೂಲನಿವಾಸಿಗಳ ಸಂಖ್ಯೆ [ಲಕ್ಷಗಳಲ್ಲಿ][೬೯]

ಯೋಜನೆ	**ನೆಲೆ ತಪ್ಪಿದವರು**	**ಪುನರ್ವಸತಿ ಪಡೆದವರು**	**ಪ್ರಸ್ತುತ ನಿರ್ಗತಿಕರು**
ಅಣೆಕಟ್ಟು	೫೩ಲ	೧೩ಲ	೪೦ಲ
ಗಣಿಗಾರಿಕೆ	೧೨ಲ	೩ಲ	೯ಲ
ಉದ್ಯಮ	೨.೬೦ಲ	೦.೬೫ಲ	೧.೯೫ಲ
ವನ್ಯಧಾಮ	೫ಲ	೧.೨೫ಲ	೩.೭೫ಲ
ಇತರ	೧.೫ಲ	೦.೪೦ಲ	೧.೧೦ಲ
ಒಟ್ಟು	**೭೪.೧೦ಲ**	**೧೮.೩೦ಲ**	**೫೫ಲ**

ಹೀಗೆ ಭಾರತದಲ್ಲಿ ಸ್ವಾತಂತ್ರ್ಯವಾದಾಗಿನಿಂದಲೂ ಉಳ್ಳವರ ಅಧಿಪತ್ಯ ತತ್ವದಡಿಯಲ್ಲಿ ವಸಾಹತುಶಾಹಿ ನೀತಿಯನ್ನು ಅನುಸರಿಸಿ ಕೈಗೊಂಡ ದೊಡ್ಡ ಪ್ರಮಾಣದ ಅಭಿವೃದ್ಧಿ ಯೋಜನೆಗಳು ತಮಗೆ ಬೇಕಾದ ಭೂಸ್ವಾಧೀನಕ್ಕಾಗಿ ಸಾಕಷ್ಟು ಜನರನ್ನು ಒತ್ತಾಯಪೂರ್ವಕವಾಗಿ ಸ್ಥಳಾಂತರಗೊಳಿಸಿವೆ.[೭೦] ಆದರೆ ಇಂತಿಷ್ಟು ಜನರು ಸ್ಥಳಾಂತರವಾಗಿದ್ದಾರೆ ಎಂಬುದಕ್ಕೆ ಯಾವುದೇ ರೀತಿಯ ಸ್ಪಷ್ಟ ದಾಖಲೆಗಳಿಲ್ಲ ಎಂಬುದು ಅಧ್ಯಯನಗಳಿಂದ ಕಂಡುಬರುತ್ತದೆ. ಸ್ವಾತಂತ್ರ್ಯಾವಾದಾಗಿನಿಂದ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಅಭಿವೃದ್ಧಿ ಯೋಜನೆಗಳಿಂದ ಭೂಸ್ವಾಧೀನಗೊಳಿಸಿ ಪ್ರತೀ ವರ್ಷವೂ ಸರಿಸುಮಾರು ೫ ಲಕ್ಷ ಜನರನ್ನು ಸ್ಥಳಾಂತರಗೊಳಿಸಲಾಗುತ್ತಿದೆ. ಬೇರೆ ಬೇರೆ ಯೋಜನೆಗಳಲ್ಲಿ ಸ್ಥಳಾಂತರವಾದವರ ಸರಿಯಾದ ಅಂಕಿ ಅಂಶವಿಲ್ಲದ ಕಾರಣ ೧೯೫೧-೯೦ರವರೆಗೆ ೧೧೦ ಲಕ್ಷದಿಂದ ೧೮೫ ಲಕ್ಷ ಜನರು ಸ್ಥಳಾಂತರವಾಗಿದ್ದಾರೆ ಎಂದು ಅಂದಾಜಿಸಲಾಗಿದೆ.[೭೧]

ಆದರೆ ಲೆಕ್ಕಕ್ಕಿಂತಲೂ ಮತ್ತು ಲೆಕ್ಕ ಇಟ್ಟುಕೊಂಡಿದ್ದಕ್ಕಿಂತಲೂ ಹೆಚ್ಚಿನ ಜನರು ಸ್ಥಳಾಂತರವಾಗಿದ್ದಾರೆ ಎಂಬುದು ಕಂಡುಬರುತ್ತದೆ. ಅಭಿವೃದ್ಧಿ ಪ್ರೇರಿತ ಸ್ಥಳಾಂತರ ಮತ್ತು ಪುನರ್ವಸತಿ ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಾಗುತ್ತದೆ. ನಗರೀಕರಣದ ದರ ವಾರ್ಷಿಕವಾಗಿ ಶೇಕಡಾ ಆರರಷ್ಟು ಹೆಚ್ಚುತ್ತಿದೆ. ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ೨೦೨೫ರ ಸುಮಾರಿಗೆ ಎರಡು ಬಿಲಿಯನ್‌ಗಿಂತಲೂ ಹೆಚ್ಚಿನ ಜನರು ಬೃಹತ್ ನಗರಗಳಲ್ಲಿ ವಾಸಿಸುತ್ತಾರೆ.[೨೨] ಹೀಗೆ ಇಂತಹ ದೊಡ್ಡ ಯೋಜನೆಗಳು, ವಿದ್ಯುತ್ ಉತ್ಪಾದನೆ, ಕೈಗಾರಿಕಾ ಅಭಿವೃದ್ಧಿಗೆ ವಿದ್ಯುತ್ ಶಕ್ತಿಯನ್ನು ದೊರಕಿಸಿಕೊಡು, ಕೃಷಿಗೆ ನೀರಾವರಿ ಪೂರೈಕೆ, ಪ್ರವಾಹ ನಿಯಂತ್ರಣ, ದೇಶಕ್ಕೆ ಆರ್ಥಿಕ ಸಮೃದ್ಧಿಯನ್ನು ತಂದಿವೆಯಾದರೂ ನಿಸ್ಸಂದೇಹವಾಗಿ ಇನ್ನೆಂದೂ ಇಲ್ಲದ ಬಲವಂತದ ಸ್ಥಳಾಂತರಕ್ಕೆ ಕಾರಣವಾಗುತ್ತವೆ.

೨.೭. ಬೃಹತ್ ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರವಾದವರ ಪುನರ್ವಸತಿ

ಪುನರ್ವಸತಿ ಎಂದರೆ ಕಳೆದುಕೊಂಡಂತಹ ಆರ್ಥಿಕ ಸಂಪನ್ಮೂಲಗಳನ್ನು ಮತ್ತೆ ಲಭ್ಯವಾಗುವಂತೆ ಮಾಡುವುದು. ಸ್ಥಳಾಂತರದಿಂದಾಗಿ ದುರ್ಬಲಗೊಂಡಂತಹ ಸಾಮುದಾಯಿಕ ವ್ಯವಸ್ಥೆಗಳನ್ನು ಪುನಃ ನಿರ್ಮಾಣ ಮಾಡುವುದು. ಜೀವನಾಧಾರದಿಂದ ಬಲಾತ್ಕಾರವಾಗಿ ದೂರ ಮಾಡಿದ ಮನೋವೈಜ್ಞಾನಿಕ ನೋವನ್ನು ಗುಣಪಡಿಸಲು ಪ್ರಯತ್ನಪಡುವುದು. ಹೊಸ ಆರ್ಥಿಕತೆಗೆ ಬದಲಾಗುವಂತೆ ಮಾಡುವುದು. ಸಂತ್ರಸ್ತರನ್ನು ಅನೌಪಚಾರಿಕ ಸಮಾಜದಿಂದ ಹೊಸ ಸಮಾಜಕ್ಕೆ ಬದಲಾಯಿಸುವುದು.

೧೯೭೦ರವರೆಗೆ ಸ್ಥಳಾಂತರಕ್ಕೆ ಕೇವಲ ಪರಿಹಾರ ಮಾತ್ರ ಇದ್ದು ಸಂತ್ರಸ್ತರ ಪುನರ್ ನಿರ್ಮಾಣ ಹಾಗೂ ಪುನರ್ವಸತಿ ಬಗ್ಗೆ ಕಡಿಮೆ ಅರಿವು ಇತ್ತು. ಸಾರ್ವಜನಿಕ ಕಾರಣಕ್ಕಾಗಿ ಕೆಲವೊಂದು ಜನ ಭೂಮಿ ಹಾಗೂ ಮನೆ ಕಳೆದುಕೊಳ್ಳಲೇ ಬೇಕು ಎಂಬ ದೃಷ್ಟಿಯಿಂದ ಜನರು ತಮ್ಮ ಭೂಮಿ ಬಿಟ್ಟು ಕೊಡುತ್ತಿದ್ದರು. ಭೂಮಿಯನ್ನು ಕಳೆದುಕೊಂಡವರಿಗೆ ೧೮೯೪ರ ಭೂಸ್ವಾಧೀನ ಕಾಯಿದೆಯಂತೆ ಪರಿಹಾರವನ್ನು ನೀಡಲಾಗುತ್ತಿತ್ತು. ಇದು ಹಣದ ರೂಪದ ಪರಿಹಾರಕ್ಕೆ ಒತ್ತು ಕೊಡುತ್ತಿತ್ತು. ಈ ಪರಿಕಲ್ಪನೆಯು "ಒಬ್ಬ ವ್ಯಕ್ತಿಯ ಆಸಕ್ತಿಗಿಂತ ಒಂದು ಸಂಪೂರ್ಣ ಸಮುದಾಯದ ಹಿತಾಸಕ್ತಿ ಮತ್ತು ಹಕ್ಕುದಾರಿಕೆ ಉನ್ನತವಾದುದು" ಎಂಬ ಮೂಲಭೂತ ತತ್ವವನ್ನು ಆಧರಿಸಿತ್ತು.[೨೩]

ಸಂತ್ರಸ್ತರ ಜೀವನಮಟ್ಟ ಉತ್ತಮಗೊಳಿಸಲು ಸ್ವಾಧೀನಪಡಿಸಿಕೊಂಡ ಭೂಮಿ ಮತ್ತು ಆಸ್ತಿಗೆ ಕೇವಲ ಪರಿಹಾರಧನ ಸಾಕಾಗುವುದಿಲ್ಲ ಎಂಬ ಅರಿವಾದಾಗ ಪುನರ್ವಸತಿಯೆಂಬ ಪರಿಕಲ್ಪನೆ ನಿಧಾನವಾಗಿ ಬೆಳೆದುಕೊಂಡು ಬಂದಿತು. ಸರ್ಕಾರವು ಪುನರ್‌ನೆಲೆ ಮತ್ತು ಪುನರ್ವಸತಿಗಾಗಿ ಒಂದು ಶಾಸನ ಅಥವಾ ಒಂದು ನೀತಿಯನ್ನು ಅಳವಡಿಸಿಕೊಂಡಿರಲಿಲ್ಲ. ಕೆಲವು ಯೋಜನೆಗಳನ್ನು ಬಿಟ್ಟರೆ ೧೯೮೦ರ ಮೊದಲಿನ ಹೆಚ್ಚಿನ

ಯೋಜನೆಗಳು ನಿಖರವಾದ ಪುನರ್‌ನೆಲೆ ಯೋಜನೆಯನ್ನು ಹೊಂದಿರಲಿಲ್ಲ. ಆಯಾಯ ಯೋಜನೆಗೆ ತಕ್ಕಂತೆ ಪುನರ್‌ನೆಲೆಗೊಳಿಸುತ್ತಿದ್ದರು.

೧೯೫೧-೧೯೮೦ರವರೆಗಿನ ಅವಧಿಯ ಯೋಜನೆಗಳಿಂದಾಗಿ ಸ್ಥಳಾಂತರಗೊಂಡವರಲ್ಲಿ ಮತ್ತು ಯೋಜನಾ ಸಂತ್ರಸ್ತರಲ್ಲಿ ಶೇ.೪೦ಕ್ಕಿಂತಲೂ ಹೆಚ್ಚು ಜನರು ಬುಡಕಟ್ಟುಗಳು ಎಂದು ಯಾವಾಗ ಅರಿವಾಯಿತೋ ಆವಾಗ ರಾಷ್ಟ್ರೀಯ ಮಟ್ಟದಲ್ಲಿ 'ಅಭಿವೃದ್ಧಿ, ಸ್ಥಳಾಂತರ ಹಾಗೂ ಪುನರ್ ನಿರ್ಮಾಣ'ದ ಪ್ರಥಮ ಕರಡು ನೀತಿಯನ್ನು ಬುಡಕಟ್ಟು ಅಭಿವೃದ್ಧಿ ಇಲಾಖೆ ಆಯ್ಕೆ ಮಾಡಿದ ಸಮಿತಿಯಿಂದ ೧೯೮೫ರಲ್ಲಿ ರಚಿಸಲಾಯಿತು. ೧೯೮೭ರಲ್ಲಿ ನರ್ಮದಾ ಬಚಾವೋ ಆಂದೋಲನದಿಂದ ಬೆಂಬಲಿತವಾದ ರಾಷ್ಟ್ರೀಯ ಕಾರ್ಯಕಾರಿ ಗುಂಪು ಒಂದು ಕರಡು ಪ್ರತಿಯನ್ನು ತಯಾರಿಸಿತು. ಎರಡನೇ ಕರಡು ನೀತಿಯನ್ನು ೧೯೯೩ರಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ತಯಾರಿಸಲಾಯಿತು. ೧೯೯೪ರಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಮೂರನೇ ಕರಡು ನೀತಿಯನ್ನು ತಯಾರಿ ಮಾಡಲಾಯಿತು. ೧೯೯೮ರಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಷ್ಟ್ರೀಯ ಪುನರ್ವಸತಿಯ ಕರಡು ನೀತಿ ತಯಾರಿಸಿತು. ಇದರ ಜೊತೆಗೇ ೧೯೯೮ರಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ೧೮೯೪ರ ಭೂಸ್ವಾಧೀನ ಕಾಯಿದೆಗೂ ತಿದ್ದುಪಡಿಯನ್ನೂ ತಂದಿತು. ಅಕ್ಟೋಬರ್ ೩೧, ೧೯೯೮ರಲ್ಲಿ ಕೇಂದ್ರ ಸಚಿವ ಸಂಪುಟವು ಭೂಸ್ವಾಧೀನ (ತಿದ್ದುಪಡಿ) ಕರಡು ಮಸೂದೆ ೧೯೯೮ನ್ನು ಒಪ್ಪಿಕೊಂಡಿತು. ಆದರೆ ಕೇಂದ್ರ ಸಚಿವ ಸಂಪುಟವು ರಾಷ್ಟ್ರೀಯ ಪುನರ್ವಸತಿ ನೀತಿಯ ಕರಡು ನೀತಿಯನ್ನು ತಿರಸ್ಕರಿಸಿತು.[೭೪] ಗ್ರಾಮೀಣಾಭಿವೃದ್ಧಿ ಸಚಿವಾಲಯವು ಜನವರಿ ೧೯೯೯ರಲ್ಲಿ ಸಭೆ ಕರೆದು ಪುನರ್ವಸತಿಯ ಒಂದು ಕರಡು ನೀತಿಯನ್ನು ತಯಾರಿ ಮಾಡುವ ನಿರ್ಧಾರಕ್ಕೆ ಬಂದಿತು.

೨೦೦೩ರಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಸರ್ಕಾರದ ಸಚಿವಾಲಯವು ಯೋಜನಾ ಸಂತ್ರಸ್ತ ಕುಟುಂಬದವರ ಪುನರ್‌ನೆಲೆ ಮತ್ತು ಪುನರ್ವಸತಿಗಾಗಿನ ರಾಷ್ಟ್ರೀಯ ನೀತಿಯನ್ನು ಪ್ರಕಟಿಸಿತು. ಆದರೆ ರಾಷ್ಟ್ರೀಯ ಸಲಹಾ ಸಮಿತಿಯು ಈ ನೀತಿಯಿಂದ ಅಸಂತುಷ್ಟಗೊಂಡಿತ್ತು. ಅದು ಅದರದ್ದೇ ಆದ ಪರಿಷ್ಕೃತ ನೀತಿಯ ಕರಡನ್ನು ಸರ್ಕಾರಕ್ಕೆ ಕಳುಹಿಸಿತು. ಈ ನೀತಿಯು ೨೦೦೪ ರಲ್ಲಿ ಯೋಜನಾ ಸಂತ್ರಸ್ತ ಕುಟುಂಬದವರ ಪುನರ್ವಸತಿ ಮತ್ತು ಪುನರ್‌ನೆಲೆಯ ರಾಷ್ಟ್ರೀಯ ನೀತಿಯಾಗಿ ಜಾರಿಗೆ ಬಂದಿತು. ಇದನ್ನು ಫೆಬ್ರವರಿ ೧೭, ೨೦೦೪ ರ ಭಾರತದ ಗೆಜೆಟ್‌ನಲ್ಲಿ ಪ್ರಕಟಿಸಲಾಯಿತು.

ಅಕ್ಟೋಬರ್ ೨೦೦೬ರಲ್ಲಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು 'ರಾಷ್ಟ್ರೀಯ ಪುನರ್ವಸತಿ ನೀತಿ-೨೦೦೬' ಎಂಬ ಸಾರ್ವಜನಿಕ ಕರಡು ನೀತಿಯನ್ನು ತಯಾರು ಮಾಡಿತು. ರಾಷ್ಟ್ರೀಯ ಸಲಹಾ ಸಮಿತಿಯು 'ರಾಷ್ಟ್ರೀಯ ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್ವಸತಿ ನೀತಿ-೨೦೦೬' ಎಂಬ ಕರಡು ನೀತಿಯನ್ನು ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯುವುದಕ್ಕೋಸ್ಕರ ಅಂತರ್ಜಾಲದಲ್ಲಿ

ಪ್ರಕಟಗೊಳಿಸಿತು. ಸಾರ್ವಜನಿಕರ ಅಭಿಪ್ರಾಯವನ್ನು ಪಡೆದುಕೊಂಡ ಬಳಿಕ ೨೦೦೬ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ಹಾಗೂ ಭಾರತ ಸರ್ಕಾರ ಈ ರಾಷ್ಟ್ರೀಯ ಕಾಯಿದೆಯನ್ನು ಜಾರಿಗೊಳಿಸಿತು. 'ರಾಷ್ಟ್ರೀಯ ಪುನರ್ವಸತಿ ನೀತಿ-೨೦೦೬' ಸ್ಥಳಾಂತರವನ್ನು ಕಡಿಮೆಗೊಳಿಸುವುದರ ಜೊತೆಗೆ ಸಾಧ್ಯವಾದಷ್ಟು ಸ್ಥಳಾಂತರವಿಲ್ಲದ ಯೋಜನೆಗಳನ್ನು ಕೈಗೊಳ್ಳಬೇಕು ಎಂದು ಪ್ರತಿಪಾದಿಸಿತು. ೨೦೦೩ರ ಪರಿಷ್ಕೃತ ರೂಪಾಂತರ ನೀತಿಯನ್ನು ನೌಕರಶಾಹಿಯು 'ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್‌ನೆಲೆ ನೀತಿ ೨೦೦೭' ನ್ನಾಗಿ ಜಾರಿಗೆ ತಂದಿತು.

ಮುಂದಿನ ರಾಷ್ಟ್ರೀಯ ಪುನರ್ವಸತಿ ನೀತಿಯನ್ನು ೨೦೧೧ರಲ್ಲಿ ಲೋಕಸಭೆಯಲ್ಲಿ ಮಂಡಿಸಲಾಯಿತು. ಸೆಪ್ಟಂಬರ್೨೬, ೨೦೧೩ರಲ್ಲಿ ಭಾರತವು "ಭೂಸ್ವಾಧೀನದಲ್ಲಿ ಉಚಿತ ಪರಿಹಾರ ಮತ್ತು ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕು ಅಧಿನಿಯಮ, ೨೦೧೩"(LARR) ಎಂಬ ಹೊಸ ಕಾಯಿದೆಯನ್ನು ಅಳವಡಿಸಿಕೊಂಡಿತು. ಈ ಹೊಸ ಕಾಯಿದೆಯು ಭೂಸ್ವಾಧೀನಕ್ಕೆ ಸಂಬಂಧಿಸಿದ ೧೮೯೪ಳರ ಕಾಯಿದೆಯನ್ನು ತೊಡೆದು ಹಾಕಿದೆ. ಖಾಸಗಿ ಕಂಪನಿಯವರು ಭೂಸ್ವಾಧೀನಪಡಿಸಿಕೊಳ್ಳಲು ಕನಿಷ್ಠ ಶೇಕಡಾ ೮೦ ಹಾಗೂ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಾದರೆ ಪ್ರತಿಶತ ೭೦ ಭೂಹಿಡುವಳಿದಾರರ ಸಹಿ ಪಡೆಯಬೇಕು. ಗ್ರಾಮೀಣ ಪ್ರದೇಶದಲ್ಲಿ ಪರಿಹಾರ ಧನವನ್ನು ಮಾರುಕಟ್ಟೆ ಮೌಲ್ಯದ ನಾಲ್ಕು ಪಟ್ಟು ನೀಡಬೇಕು. ಹಾಗೂ ನಗರ ಪ್ರದೇಶದಲ್ಲಿ ಮಾರುಕಟ್ಟೆ ಮೌಲ್ಯದ ಎರಡುಪಟ್ಟು ನೀಡಬೇಕು. ಪರಿಹಾರವನ್ನು ಪಡೆಯದೇ ಸಂತ್ರಸ್ತರು ಸ್ಥಳಾಂತರವಾಗುವಂತಿಲ್ಲ. ಕಂಪನಿಗಳು ತಮಗೆ ಬೇಕಾದ ಭೂಮಿಯನ್ನು ಖರೀದಿಸುವ ಬದಲು ಭೋಗ್ಯಕ್ಕೆ ಪಡೆಯಬಹುದು. ಖಾಸಗಿ ಕಂಪನಿಯವರು ನಗರದಲ್ಲಿ ೫೦ಕ್ಕಿಂತ ಹೆಚ್ಚು ಕುಟುಂಬಗಳ ಆಸ್ತಿಯನ್ನು ಖರೀದಿಸಿರೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ೧೦೦ ಕುಟುಂಬಗಳಿಗಿಂತ ಹೆಚ್ಚು ಆಸ್ತಿಯನ್ನು ಖರೀದಿಸಿದರೆ ಪುನರ್ವಸತಿ ಮತ್ತು ಪುನರ್ ನೆಲೆ ಸೌಕರ್ಯವನ್ನು ದೊರಕಿಸಿಕೊಡಬೇಕು. ಪರಿಹಾರ ಧನದ ಜೊತೆಗೆ ಪ್ರತಿಯೊಂದೂ ಕುಟುಂಬಕ್ಕೆ ನಷ್ಟ ಪರಿಹಾರವನ್ನು ಮಾರುಕಟ್ಟೆ ಮೌಲ್ಯದ ಒಂದು ಪಟ್ಟು ನೀಡಬೇಕು. ಪುನರ್ವಸತಿ ನೆಲೆಗೆ ಸಾಗಾಣೆ ಸಾರಿಗೆ ವೆಚ್ಚವನ್ನು ಭರಿಸಬೇಕು. ೧೨ ತಿಂಗಳುವರೆಗೆ ಪ್ರತೀ ತಿಂಗಳು ಆಹಾರ ಖರ್ಚಿಗಾಗಿ ಹಣ ನೀಡಬೇಕು. ಯೋಜನೆಯ ಸಾಮಾಜಿಕ ಪರಿಣಾಮದ ಮೌಲ್ಯಮಾಪನ ಮಾಡಬೇಕು. ಸ್ಥಳಾಂತರ, ಪುನರ್ ನೆಲೆ, ಹಾಗೂ ಮೊದಲಿನಂತಾಗಲು ವ್ಯವಸ್ಥಿತವಾದ ಮೇಲುಸ್ತುವಾರಿ ತೆಗೆದುಕೊಳ್ಳಬೇಕು. ಸಾಧ್ಯವಾದಷ್ಟು ಕನಿಷ್ಟ ಸ್ಥಳಾಂತರ ಮಾಡಬೇಕು. ಹಾಗೂ ಫಲವತ್ತತೆಯಲ್ಲದ ಭೂಮಿ ನೀಡುವ ಪ್ರಮಾಣವನ್ನು ಕಡಿಮೆ ಮಾಡಬೇಕು. ಪ್ರತಿಯೊಬ್ಬರಿಗೂ ಮನೆ ನಿವೇಶನ, ಮನೆ ನೀಡಿ ಸಂತ್ರಸ್ತರ ವಸತಿ ಹಕ್ಕನ್ನು ಪೂರೈಸಬೇಕು.[೭೫] ಇದು ಭಾರತದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳಿಂದ ಅನೈಚ್ಛಿಕವಾಗಿ ಸ್ಥಳಾಂತರಗೊಂಡವರಿಗೆ ಸರ್ಕಾರ ಮತ್ತು ಖಾಸಗಿ

ಯೋಜನೆಗಳ ಕಡೆಯಿಂದ ನೀಡಬೇಕಾಗಿರುವ ಪುನರ್ವಸತಿ ಯೋಜನೆಯ ಪ್ರಮುಖ ಅಂಶಗಳು.

೨.೮. ಭಾರತದ ಬೃಹತ್ ಅಭಿವೃದ್ಧಿ ಯೋಜನೆಗಳ ತಾತ್ವಿಕ ವಿಶ್ಲೇಷಣೆ

ಭಾರತದ ಇಂಜಿನಿಯರ್‌ಗಳು ತಮ್ಮ ಇಂಜಿನಿಯರಿಂಗ್ ಸಾಮರ್ಥ್ಯವನ್ನು ಪ್ರದರ್ಶಿಸುವುದಕ್ಕಾಗಿ ಭಾರಿ ವೆಚ್ಚದ ಬೃಹತ್ ಯೋಜನೆಗಳನ್ನು ರೂಪಿಸುತ್ತಿದ್ದರು.[೭೬] ಅವು ತಂತ್ರಜ್ಞಾನ ಕೇಂದ್ರಿತವಾದವೇ ವಿನಃ ಕಟ್ಟ ಕಡೆಯ ಮನುಷ್ಯನನ್ನು ಕೇಂದ್ರದಲ್ಲಿಟ್ಟುಕೊಂಡಿರಲಿಲ್ಲ. ಈಗಾಗಲೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶಕ್ತರಾಗಿರುವಂತಹ ದೊಡ್ಡ ಭೂ ಹಿಡುವಳಿದಾರರು, ಶ್ರೀಮಂತ ರೈತರು, ಇಂಜಿನಿಯರ್, ಅಧಿಕಾರಶಾಹಿ, ರಾಜಕೀಯ ವ್ಯಕ್ತಿಗಳು, ಇವರುಗಳ ಪರವಾಗಿ ಸಹಾಯ ಮಾಡುತ್ತವೆ.[೭೭]

ಅಲ್ಲಿ ಪರಿಸರ ಹಾಗೂ ಸ್ಥಳಾಂತರಗೊಳ್ಳುವವರ ಮೇಲಿನ ಪರಿಣಾಮಗಳ ಬಗ್ಗೆ ಕಾಳಜಿ ಇರಲಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕೂಡಾ ಅಭಿವೃದ್ಧಿ ಯೋಜನಾ ಅಧಿಕಾರಿಗಳು ಯೋಜನೆಯನ್ನು ವಿಶೇಷವಾಗಿ ಪರಿಗಣಿಸುವಂತೆ ತಮ್ಮ ಮೂಲನೆಲೆಯಿಂದ ಸ್ಥಳಾಂತರಗೊಳ್ಳುವಂತಹ ಬುಡಕಟ್ಟು ಜನರು ಹಾಗೂ ಸಂತ್ರಸ್ತರನ್ನು ಪುನರ್ ನೆಲೆಗೊಳಿಸುವಲ್ಲಿ ವಿಶೇಷವಾದ ಕಾಳಜಿವಹಿಸುವುದಿಲ್ಲ.[೭೮] ಇಡೀ ದೇಶ ಕಟ್ಟುವ ಹಾಗೂ ರಾಷ್ಟ್ರಾಭ್ಯುದಯದ ನೆಪದಲ್ಲಿ ಸಣ್ಣ ಪುಟ್ಟದ್ದನ್ನು ಹಾಗೂ ತನಗೆ ಸರಿ ಬಾರದ್ದನ್ನು ಅಳಿಸಿ ಹಾಕುವ ವ್ಯವಸ್ಥಿತ ಸಂಚು ತುಂಬಾ ನಾಜೂಕಾಗಿ ನಡೆಯುತ್ತಿದೆ.[೭೯] ಈ ದೇಶದಲ್ಲಿ ಕಟ್ಟುವ ಅಣೆಕಟ್ಟುಗಳಾಗಲಿ, ಮುಳುಗಡೆಯಾಗುವ ಕಾಡಾಗಲಿ, ಕಲ್ಲು ಅದಿರುಗಳನ್ನು ತೆಗೆಯುವುದಾಗಲಿ, ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳಿಗೂ ರಾಜಕೀಯಕ್ಕೂ ಅಗತ್ಯವಾಗತೊಡಗಿದೆ.[೮೦] ಇದರಿಂದಾಗಿ ಭಾರತ ಬಡವಾಗುತ್ತಿದೆ.

ಇಲ್ಲಿ ಅಭಿವೃದ್ಧಿ ಯೋಜನೆಗಳ ಹೆಸರಲ್ಲಿ ಒಂದಕ್ಕೆ ಮೂರು ಪಟ್ಟು ಹಣ ಪೋಲಾಗುತ್ತಿದೆ. ಕಾಲು ಭಾಗ ಕೂಡಾ ಯೋಗ್ಯ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಸ್ವಾತಂತ್ರ್ಯ ಬಂದಾಗಿನಿಂದ ಭಾರತದ ಬಡ ಜನರ ಉದ್ಧಾರಕ್ಕಾಗಿ ಹಣದ ಹೊಳೆ ಹರಿದಿದೆ. ಇಷ್ಟು ಪಂಚವಾರ್ಷಿಕ ಯೋಜನೆಗಳು ಕಳೆದರೂ ಕೂಡಾ ಈ ಬಡತನದ ಪ್ರಶ್ನೆಯ ಅಂಚನ್ನು ಸಹ ಮುಟ್ಟಲು ಸಾಧ್ಯವಾಗಲಿಲ್ಲ. ಯೋಜಕರ ತಂತ್ರಗಳೆಲ್ಲವೂ ಉಳ್ಳವರು ಇನ್ನೂ ಗಿಟ್ಟಿಸುವಂತೆಯೂ, ಇಲ್ಲದವರು ಮತ್ತೂ ಕಳೆದುಕೊಳ್ಳುವಂತೆಯೂ ಮಾಡುತ್ತಿವೆ.[೮೧]

ಬೃಹತ್ ಅಭಿವೃದ್ಧಿ ಯೋಜನೆಗಳು ಬಹುಮುಖ್ಯವಾಗಿ ಬೃಹತ್ ಅಣೆಕಟ್ಟುಗಳು ಅಭಿವೃದ್ಧಿಯ ಬಲಿಪಶುಗಳನ್ನು ನಿರ್ಮಾಣ ಮಾಡಿವೆ.[೮೨] ಭಾರತದಲ್ಲಿನ ವೈವಿಧ್ಯಮಯ ದಟ್ಟ ಅರಣ್ಯಗಳನ್ನು ಮತ್ತು ಅಲ್ಲಿ ವಾಸ ಮಾಡುವ ಆದಿವಾಸಿಗಳ ಬದುಕನ್ನು ಭಾರತದ ಬೃಹತ್ ಯೋಜನೆಗಳು ನುಂಗಿ ಹಾಕಿವೆ.[೮೩] ನೆಹರು ವಿವರಿಸಿದ ಭಾರತದ ಜಾತ್ಯಾತೀತ

ದೇವಾಲಯಗಳಾದ ಕೈಗಾರೀಕರಣ, ಜಲವಿದ್ಯುತ್ ಯೋಜನೆಗಳ ಪ್ರಯೋಜನವನ್ನು ಯಾರು ಅನುಭವಿಸುತ್ತಿದ್ದಾರೆ? ಲಾಭದ ಸಿಂಹಪಾಲು ಯಾರ ಕಿಸೆಗೆ ಹೋಗುತ್ತಿದೆ ಎಂಬುದು ಪ್ರಶ್ನಾತೀತ. 'ಅಣೆಕಟ್ಟುಗಳು ಆಧುನಿಕ ದೇವಸ್ಥಾನಗಳು'ಎಂದು ದೇಶದ ಮೊದಲ ಪ್ರಧಾನಿ ನೆಹರೂರವರು ಘೋಷಿಸಿದಾಗ ಅವರ ಕಣ್ಣ ಮುಂದೆ ಇದ್ದದ್ದು ಹಚ್ಚ ಹಸಿರಿನ ಪೈರುಗಳು ಮತ್ತು ಭರ್ತಿಯಾಗಿದ್ದ ಗೋದಾಮುಗಳೇ ವಿನಹ: ಆದಿವಾಸಿಗಳು, ಬಡರೈತರು ಮತ್ತು ಪರಿಸರವಲ್ಲ. ಆದರೆ ೧೯೫೮ರ ಸುಮಾರಿಗೆ ನೆಹರೂರವರೇ ಈ ಬೃಹತ್ ಡ್ಯಾಂಗಳು ದೇವಸ್ಥಾನಗಳಲ್ಲ 'ದೈತ್ಯ ರೋಗಗಳು' ಎಂದು ಅಭಿಪ್ರಾಯಪಟ್ಟರೆಂದು ಹೇಳಲಾಗುತ್ತದೆ. ಬೃಹತ್ ಅಭಿವೃದ್ಧಿ ಯೋಜನೆ, ಸ್ಥಳಾಂತರ, ಪುನರ್ವಸತಿಗೊಳಿಸದೇ ಇರುವುದು ಈ ದೃಷ್ಟಿ ಕೋನದಿಂದ ಭಾರತವು ವಿನಾಶದ ಹಾದಿಯಲ್ಲಿ ಸಾಗುತ್ತಿರುವ ರಾಷ್ಟ್ರವಾಗಿದೆ.[೮೪]

ಮಾನವ ಸಂಪತ್ತಿನ ಮೇಲೆ ಯುದ್ಧ ಸಾರುವಂತೆ ಮಾರುಕಟ್ಟೆಯ ಅರ್ಥಶಾಸ್ತ್ರವು ಬಲಗೊಂಡಿದೆ. ಇತ್ತೀಚೆಗೆ ನಡೆಸಿದ ಅಧ್ಯಯನವೊಂದರ ಪ್ರಕಾರ ಕೇಂದ್ರ ಸರ್ಕಾರವು ವಿದೇಶಿ ಸಂಸ್ಥೆಗಳೊಡನೆ ಕಳೆದ ಕೆಲವು ವರ್ಷಗಳಲ್ಲಿ ಮಾಡಿಕೊಂಡ ಒಪ್ಪಂದಗಳೆಲ್ಲವೂ ಜಾರಿಗೆ ಬಂದರೆ ಇನ್ನೂ ಕನಿಷ್ಟ ಆರರಿಂದ ಏಳು ದಶಲಕ್ಷ ಆದಿವಾಸಿಗಳು ತಮ್ಮ ತಾಯಿ ನಾಡನ್ನು ಕಳೆದುಕೊಳ್ಳಲಿದ್ದಾರೆ. ಇದಿಷ್ಟೂ ನಡೆಯುವುದು ಬೃಹತ್ ಅಭಿವೃದ್ಧಿ ಯೋಜನೆಗಳ ಲಾಂಛನದಡಿಯಲ್ಲಿ.[೮೫] ಮಾನವ ಸಂಪತ್ತಿನ ಸಂರಕ್ಷಣೆಯೇ ಇಲ್ಲದೆ ಕೇವಲ ಬೃಹತ್ ಕೈಗಾರಿಕಾ ವಲಯಗಳನ್ನು, ಅಣೆಕಟ್ಟುಗಳನ್ನು, ಖಾಸಗಿ ಉದ್ದಿಮೆಗಳನ್ನು ಬಲಪಡಿಸಿದರೆ ಅದು ನಾಳಿನ ವಿನಾಶಕ್ಕೆ ವೇದಿಕೆಯನ್ನು ಸಿದ್ಧಪಡಿಸಿದಂತಾಗುತ್ತದೆ. ಅಭಿವೃದ್ಧಿಯೇ ಆಕ್ರಮಣ ಶಾಲಿಯಾಗಿಬಿಟ್ಟರೆ ಮಾನವ ಕಲ್ಯಾಣ ಅಸಾಧ್ಯವಾಗುತ್ತದೆ.[೮೬] ಅಭಿವೃದ್ಧಿ ಯೋಜನೆಗಳು ಈಗ ಇರುವಂತಹ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಸ್ವಲ್ಪವೇ ಪ್ರಯತ್ನಪಟ್ಟಿವೆ. ಇದಕ್ಕೆ ತದ್ವಿರುದ್ಧವಾಗಿ ಇವು ಈಗಾಗಲೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶಕ್ತರಾಗಿರುವಂತಹ ಸಾಮಾಜಿಕ ರಚನೆಯ ಪರವಾಗಿ ಇನ್ನೂ ಹೆಚ್ಚಿನ ಪ್ರೇರಣೆ ನೀಡುತ್ತವೆ. ಈ ರೀತಿಯಾಗಿ ಮಾಡುವುದರಿಂದ ಇದು ಈಗಾಗಲೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದವರ ಬಾಳನ್ನು ಇನ್ನಷ್ಟು ಹದಗೆಡಿಸುತ್ತವೆ. ಹೀಗೆ ಅದು ಸಂವಿಧಾನದ ಸಮಾಜವಾದಿ, ಸಮಾನತೆಯ ಹಕ್ಕನ್ನು ಗಾಳಿಗೆ ತೂರಿದಂತಾಗಿದೆ.[೮೭]

ಹೀಗೆ ದೇಶದ ತೀವ್ರಗತಿಯ ಆರ್ಥಿಕ ಅಭಿವೃದ್ದಿಗೆ ಬೃಹತ್ ಅಭಿವೃದ್ಧಿ ಯೋಜನೆಗಳು ಸಾಧನವಾಗಿದ್ದರೂ ಅಥವಾ ಕಾರಣವಾಗಿದ್ದರೂ ಅವು ಬಹಳ ನೋವುಕಾರಕ ಎಂದು ಆಗಾಗ ಸಾಬೀತುಪಡಿಸುತ್ತವೆ.[೮೮] ಅಭಿವೃದ್ಧಿಯ ನೆಪದಲ್ಲಿ ತಮ್ಮ ಮೂಲ ನೆಲೆ, ನಿವಾಸಗಳನ್ನು ಕಳೆದುಕೊಂಡು ದಿಕ್ಕಾಪಾಲಾಗುತ್ತಿರುವ ಸಂದರ್ಭದಲ್ಲಿ ಅತ್ಯಂತದ ಮಹತ್ವದ ಸಂಗತಿಯೆಂದರೆ; ಅಭಿವೃದ್ಧಿ ಯೋಜನೆಗಳಿಗೆ ಬಲಿಪಶುವಾಗುವವರು ಸಮಾಜದ ದುರ್ಬಲ ವರ್ಗದವರಾದರೆ: ಯೋಜನೆಗಳ ಫಲ

ಪಡೆದುಕೊಳ್ಳುವವರು ಯಾವಾಗಲೂ ಬಲಿಷ್ಠರು ಮತ್ತು ಶ್ರೀಮಂತರೆ.[೧೯] ಇಂದು ಯಾವ ವರ್ಗ ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿ ಪ್ರಭುತ್ವವನ್ನು ಸ್ಥಾಪಿಸಿದೆಯೋ ಅದು ನಿಜ್ವಳವಾಗಿ ಅಭಿವೃದ್ಧಿಯ ಹೆಸರಲ್ಲಿ ಈ ನಾಡಿನ ಸಂಪತ್ತನ್ನು ತನ್ನದಾಗಿಸಿಕೊಳ್ಳುತ್ತಿದೆ. ಅದಕ್ಕಾಗಿ ಅದು ಹೇರುವ ಅನೇಕ ಯೋಜನೆಗಳು ಎಂದೂ ಮನುಷ್ಯರ ಪರ, ಪರಿಸರದ ಪರವಾಗಿರುವುದಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಈ ವರ್ಗದ ಸಂಪತ್ತನ್ನು ಕಾವಲು ಕಾಯುತ್ತಿವೆಯಷ್ಟೇ.[೨೦] ಇಂತಹ ಮೆದುಳು ಇಲ್ಲದ ಯೋಜನೆಗಳನ್ನು ನಿಯಂತ್ರಿಸುವವರು ಯಾರು?

ಅಭಿವೃದ್ಧಿ ಯೋಜನೆ ದೊಡ್ಡದಾದಷ್ಟೂ ಇದರ ಮೇಲಿನ ಕೇಂದ್ರೀಕೃತ ನಿಯಂತ್ರಣ ಹೆಚ್ಚಾಗುತ್ತದೆ. ಈ ಕೇಂದ್ರೀಕೃತ ನಿಯಂತ್ರಣದಿಂದ ಸಂವಿಧಾನದ ಸಮಾಜವಾದಿ ಹಕ್ಕನ್ನು ಗಾಳಿಗೆ ತೂರಿದಂತಾಗುತ್ತದೆ.[೨೧] ಬೃಹತ್ ಯೋಜನೆಗಳು ಸಮಾನತೆ, ಕಾರ್ಯಕ್ಷಮತೆ, ಎಲ್ಲರ ಭಾಗವಹಿಸುವಿಕೆ, ಸುಸ್ಥಿರತೆ, ಬಾದ್ಯಸ್ಥಿಕೆ ಈ ಐದು ತತ್ವಗಳಲ್ಲಿ ಪ್ರತಿಯೊಂದನ್ನೂ ಉಲ್ಲಂಘಿಸುವುದರಿಂದ ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸಬಾರದು ಎಂಬುದೇ ವಿಶ್ವ ಡ್ಯಾಂ ಆಯೋಗದ ತೀರ್ಮಾನ.[೨೨] ನಮ್ಮ ಆಧುನಿಕ ಬದುಕಿನ ವೈಫಲ್ಯಗಳು ಈ ಬೃಹತ್ ಯೋಜನೆಗಳು.[೨೩] ಇಂಡಿಯಾದ ಒಟ್ಟು ಅಭಿವೃದ್ಧಿಯ ಫಲಗಳು ನೇರವಾಗಿ ಬಂಡವಾಳಿಗರ, ಮದ್ಯವರ್ತಿಗಳ, ಗುತ್ತಿಗೆದಾರರ ಖಜಾನೆಗಳಿಗೆ ತಲುಪುತ್ತವೆ.[೨೪] ಪ್ರೊ. ವಾಲ್ಟರ್ ಕ್ರಾಸ್ ಎಂಬ ವಿದ್ವಾಂಸರ ಪ್ರಕಾರ ಅಭಿವೃದ್ಧಿ ಪ್ರಕ್ರಿಯೆಯಿಂದ ಕೇವಲ ಒಂದು ವರ್ಗದ ಜನ ಮಾತ್ರಾ ಅನುಕೂಲ ಪಡೆಯುತ್ತಿದ್ದರೆ ಅದು ನಿಜ ಅರ್ಥದಲ್ಲಿ ಆರ್ಥಿಕ ಅಭಿವೃದ್ಧಿಯಾಗುವುದಿಲ್ಲ. ಹೆಚ್ಚುತ್ತಿರುವ ಆದಾಯ ಇಡೀ ಜನಸಮುದಾಯಕ್ಕೆ ಪ್ರಯೋಜನ ಕಲ್ಪಿಸುವಂತಿರಬೇಕು.

ಭಾರತದಲ್ಲಿ ಬಲಿಷ್ಠರ ಕಪಿಮುಷ್ಠಿಯಲ್ಲಿ ಯೋಜನೆಗಳ ಫಲಗಳು ಮಡುಗಟ್ಟಿವೆ.[೨೫] ಅಭಿವೃದ್ಧಿಯ ಫಲಗಳು ಅದಕ್ಕಾಗಿ ತ್ಯಾಗ ಮಾಡಿದವರಿಗಾಗಲೀ ಅಥವಾ ದೇಶದ ತಳಸಮುದಾಯದ ಜನರಿಗಾಗಲೀ ದಕ್ಕಲಿಲ್ಲ. ಯಾರದೋ ಸುಖಕ್ಕಾಗಿ ಇನ್ಯಾರದೋ ಬಲಿಯಾಗಿದೆ. ದೀಪದ ಕೆಳಗೆ ಕತ್ತಲೆ ಎಂಬಂತೆ ಸಂತ್ರಸ್ತರು ಸದಾ ಯಾರದೋ ಬರುವಿಕೆಗೆ ಕಾದು ಕುಳಿತವರಂತೆ ಜೀವನದ ಪ್ರಯೋಜನಗಳಿಗಾಗಿ ಕಾದು ಕುಳಿತುಕೊಳ್ಳುವಂತಾಗಿದೆ. ಆದರೆ ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ವಿಜ್ಞಾನವಾಗಲೀ, ತಂತ್ರಜ್ಞಾನವಾಗಲೀ ಕೆಟ್ಟದ್ದನ್ನು ಮಾಡಿಲ್ಲ. ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳಲಾಗಿದೆ ಎನ್ನುವ ಪ್ರಶ್ನೆಯಲ್ಲಿಯೇ ಉತ್ತರವೂ ಅಡಗಿದೆ. ಕೇವಲ ಯಾವುದೋ ಒಂದು ಗುಂಪಿನ ಹಿತಾಸಕ್ತಿ ಮಾತ್ರ ಮುಖ್ಯವಾದಾಗ ಈ ರೀತಿಯ ತಪ್ಪುಗಳಾಗುವುದು ಸಹಜ[೨೬].

ನಮ್ಮ ದೇಶದಲ್ಲಿ ಗಾಳಿಯಿಂದ ೨೦ ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಅವಕಾಶವಿದ್ದರೂ, ಈವರೆಗೆ ಉತ್ಪಾದಿಸಿರುವುದು ಕೇವಲ ೪೦೦ ಮೆಗಾವ್ಯಾಟ್ ಮಾತ್ರಾ. ಸಣ್ಣ ಜಲಾಶಯ ಕಾಲುವೆಗಳಲ್ಲಿ ೧೦ ಸಾವಿರ ಮೆಗಾವ್ಯಾಟ್‌ಗೆ

ಅವಕಾಶವಿದ್ದರೆ, ಉತ್ಪಾದನೆ ಮುನ್ನೂರು ಮೆಗಾವ್ಯಾಟ್ ಮಾತ್ರಾ. ಗೋಬರ್ ಗ್ಯಾಸ್ ಇತರೆ ಮೂಲಗಳಿಂದ ೨೦ ಸಾವಿರ ಮೆಗಾವ್ಯಾಟ್‌ಗೆ ಅವಕಾಶವಿದ್ದು, ಈವರೆಗೆ ಸಾಧನೆಯಾಗಿರುವುದು ೩೭೦ ಮೆಗಾವ್ಯಾಟ್ ಮಾತ್ರಾ. ಹೀಗೆ ಪ್ರಾಕೃತಿಕ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಭಾರತ ದೇಶ ಸಂಪೂರ್ಣ ವಿಫಲವಾಗಿದೆ.[೯೭] ಒಟ್ಟಾರೆಯಾಗಿ ಅಭಿವೃದ್ಧಿಯ ಅಸಲೀ ಪ್ರಯತ್ನ ಸಮರ್ಪಕವಾಗಿ ನಡೆದಿಲ್ಲ.[೯೮]

ಹೀಗೆ ಭಾರತ ದೇಶದ ಸಮಗ್ರ ಅಭಿವೃದ್ಧಿ ನಿಟ್ಟಿನಲ್ಲಿ ಕೈಗೊಂಡಂತಹ ಬೃಹತ್ ಅಭಿವೃದ್ಧಿ ಯೋಜನೆಗಳು ಕೆಲವು ವರ್ಗದ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿದೆ. ಅದರಿಂದ ಇಡೀ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗಲಿಲ್ಲ. ಇದು ಪ್ರಬಲ ಬಂಡವಾಳಶಾಹಿ ವರ್ಗದವರಿಗೆ ಒಂದು ವರದಾನ ಎಂಬುದು ಸಾಬೀತಾಗಿದೆ.

೨.೯. ಭಾರತದಲ್ಲಿನ ಬೃಹತ್ ಅಭಿವೃದ್ಧಿ ಯೋಜನೆಗಳ ಸಂತ್ರಸ್ತರ ಪುನರ್ವಸತಿಯ ತಾತ್ವಿಕ ವಿಶ್ಲೇಷಣೆ

ಭಾರತದ ಅಭಿವೃದ್ಧಿ ಯೋಜನೆಗಳಲ್ಲಿ ಅತ್ಯಂತ ತಿರಸ್ಕಾರಕ್ಕೆ ಒಳಗಾದ ವಿಭಾಗವೆಂದರೆ ಯೋಜನಾ ನಿರಾಶ್ರಿತರ ಪುನರ್ವಸತಿ.[೯೯] ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದಂತೆ ಪುನರ್ವಸತಿಯನ್ನು ಮರೆತೇ ಬಿಡುವ ಜಾಯಮಾನ ನಮ್ಮ ವ್ಯವಸ್ಥೆಯದು. ದೇಶದ ಸಂಪತ್ತು ಆಡಳಿತಶಾಹಿ, ಬಂಡವಾಳಶಾಹಿ ಕೈಯಲ್ಲಿ ಕೊಚ್ಚಿ ಹೋಗುತ್ತಿದೆ. ಅಷ್ಟೇ ಅಲ್ಲದೇ ಅಭಿವೃದ್ಧಿಗಾಗಿ ಸ್ಥಳಾಂತರ ಸರ್ಕಾರಕ್ಕೆ, ರಾಜಕಾರಣಿಗಳಿಗೆ, ನೀತಿ ರೂಪಿಸುವವರಿಗೆ ಒಂದು ಸಂಗತಿಯಾಗಿ ಪರಿಣಮಿಸಲೇ ಇಲ್ಲ. ಬೃಹತ್ ಯೋಜನೆಗಳಿಂದ ಸ್ಥಾನಾಂತರ ಆದವರ ಪುನರ್ವಸತಿ ಮತ್ತು ಪುನರ್ ನಿರ್ಮಾಣ ತುಂಬಾ ಕಳಪೆ ಮಟ್ಟದ್ದಾಗಿದ್ದು ಇದು ಸಾಕಷ್ಟು ಜನರ ಬದುಕನ್ನು ಕೆಟ್ಟ ಪರಿಸ್ಥಿತಿಯಲ್ಲಿ ಬಂದು ನಿಲ್ಲುವಂತೆ ಮಾಡಿದವು.[೧೦೦]

ಭಾರತದಲ್ಲಿ ಕೇವಲ ಮೂರನೇ ಒಂದು ಭಾಗ ಅಭಿವೃದ್ಧಿ ಯೋಜನೆಗಳನ್ನು ಯೋಜನಾಬದ್ಧವಾಗಿ ಕೈಗೊಂಡು ಸಂತ್ರಸ್ತರಿಗೆ ಯೋಜನಾ ಬದ್ಧವಾಗಿ ಪುನರ್ ನೆಲೆಯನ್ನು ದೊರಕಿಸಿಕೊಡಲಾಗಿದೆ.[೧೦೧] ಇದಕ್ಕೆ ಸಾಕ್ಷಿಯೆಂಬಂತೆ ಸತ್ಯಾಂಶ ಏನೆಂದರೆ ಬೇರೆ ಬೇರೆ ಬೃಹತ್ ಅಭಿವೃದ್ಧಿ ಯೋಜನೆಗಳಿಂದ ನಿಖರವಾಗಿ ಸ್ಥಳಾಂತರಗೊಂಡವರ ಅಂಕಿ ಅಂಶಗಳು ಸರ್ಕಾರದ ಬಳಿ ಇರದಿರುವುದು.[೧೦೨] ಅಧಿಕೃತ ಅಂಕಿ ಸಂಖ್ಯೆಗಳ ಪ್ರಕಾರ ಬೃಹತ್ ಯೋಜನೆಗಳ ಕಾರಣಗಳಿಗಾಗಿ ಒಕ್ಕಲೆಬ್ಬಿಸಲ್ಪಟ್ಟು ನೆಲೆ, ನಿವಾಸ ಕಳೆದುಕೊಂಡ ನಿರ್ಗತಿಕರಿಗೆ ಅಂದರೆ ತಮ್ಮ ಸರ್ವಸ್ವವನ್ನೂ ಸಮರ್ಪಿಸಿ ಅಭಿವೃದ್ಧಿಗಾಗಿ ದಾರಿ ಮಾಡಿ ಕೊಟ್ಟ ಅಮಾಯಕರ ಒಟ್ಟು ಸಂಖ್ಯೆಯಲ್ಲಿ ಶೇಕಡಾ ೨೫ ರಷ್ಟು ಜನರಿಗೆ ಮಾತ್ರ ಪುನರ್ವಸತಿ ಕಲ್ಪಿಸಲಾಗಿದೆ.[೧೦೩]

ಸ್ವಾತಂತ್ರ್ಯವಾದಾಗಿನಿಂದ ಸ್ಥಳಾಂತರಗೊಂಡ ಸುಮಾರು ೬೦ ಮಿಲಿಯನ್ ಜನರಲ್ಲಿ ಹೆಚ್ಚಿನ ಜನರು ಇನ್ನೂ ಪುನರ್ವಸತಿಗೊಂಡಿಲ್ಲ.[೧೦೪] ಸ್ಥಳಾಂತರಗೊಂಡ

ಶೇ.೭೦ರಷ್ಟು ಜನಕ್ಕೆ ಇಂದಿಗೂ ಸರಿಯಾಗಿ ಪುನರ್ವಸತಿ ಹಾಗೂ ಪರಿಹಾರ ದೊರೆತಿಲ್ಲ.[೧೦೫] ೧೯೯೪ ರ ಕಛೇರಿ ಅಂಕಿ ಅಂಶಗಳ ಪ್ರಕಾರ ೧೫.೫ ಮಿಲಿಯನ್ ಆಂತರಿಕವಾಗಿ ಸ್ಥಳಾಂತರವಾದವರಲ್ಲಿ ೧೧.೫ ಮಿಲಿಯನ್ ಜನರು ಪುನರ್ವಸತಿಗಾಗಿ ಕಾಯುತ್ತಿದ್ದಾರೆ.[೧೦೬] ವಾಲ್ಟರ್ ಫರ್ನಾಂಢೀಸ್ ಇವರ ಪ್ರಕಾರ ಅಭಿವೃದ್ಧಿ ಯೋಜನೆಗಳಿಂದಾಗಿ ಭಾರತದ ೨/೩ ರಾಜ್ಯಗಳಲ್ಲಿ ೧೯೫೦ ರಿಂದ ೨೦೦೫ ರವರೆಗೆ ಆಂತರಿಕವಾಗಿ ಸ್ಥಳಾಂತರಗೊಂಡ ೬೫ ಮಿಲಿಯನ್ ಜನರಲ್ಲಿ ಹೆಚ್ಚಿನ ಸಂಖ್ಯೆಯ ಜನರು ಸ್ಥಳಾಂತರಕ್ಕಿಂತಲೂ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಕೇವಲ ಪ್ರತಿಶತ ೩೩ರಷ್ಟು ಸಂತ್ರಸ್ತರನ್ನು ಸರಿಯಾದ ಪುನರ್ ನೆಲೆಗೊಳಿಸಲಾಗಿದೆ. ಇತರೇ ೨/೩ರಷ್ಟು ಜನರನ್ನು ಯೋಜಿತವಾಗಿ ಪುನರ್ವಸತಿಗೊಳಿಸಿದ್ದಕ್ಕೆ ಪುರಾವೆಗಳಿಲ್ಲ.[೧೦೭] ಒಂದು ಅಂದಾಜಿನ ಪ್ರಕಾರ ದೊಡ್ಡ ಅಣೆಕಟ್ಟುಗಳಿಂದ ಸ್ಥಳಾಂತರ ಆದ ೩/೪ ಸಂತ್ರಸ್ತರು ಕೆಟ್ಟ ರೀತಿಯ ಬದುಕು ಸಾಗಿಸುತ್ತಿದ್ದಾರೆ. ಹೆಚ್ಚಿನ ಸಂದರ್ಭದಲ್ಲಿ ಅವರೆಲ್ಲಾ ಎಲ್ಲಿದ್ದಾರೆ ಎಂಬುದೇ ತಿಳಿದಿಲ್ಲ. ಹಲವಾರು ಸಂತ್ರಸ್ತರು ಕಾಡಿನಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ. ಕೆಲವರು ಪಟ್ಟಣದ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ.[೧೦೮] ಹಲವಾರು ಜನರು ನವದೆಹಲಿ, ಕೊಲ್ಕತ್ತಾ ಹಾಗೂ ಇತರೇ ನಗರಗಳ ಸುತ್ತಮುತ್ತ ಕೊಳೆಗೇರಿವಾಸ ಮಾಡುತ್ತಿದ್ದಾರೆ.[೧೦೯]

ಹೆಚ್ಚು ಯೋಜನೆಗಳು ತುಂಬಾ ಹಿಂದುಳಿದ ಅನುಸೂಚಿತ ಪ್ರದೇಶದಲ್ಲಿ ನಿರ್ಮಾಣವಾಗಿದ್ದರಿಂದಾಗಿ ಬುಡಕಟ್ಟು ಜನರು ಯೋಜನೆಗಳಿಗೆ ಹೆಚ್ಚಾಗಿ ಬಲಿಯಾಗಿರುತ್ತಾರೆ. ಈ ದೇಶದ ಬೃಹತ್ ಯೋಜನೆಗಳಲ್ಲಿ ಸ್ಥಳಾಂತರಗೊಂಡು ದಿಕ್ಕೆಟ್ಟು ಹೋದ ಜನರಲ್ಲಿ ಶೇ. ೫೫.೧೬ ರಷ್ಟು ಜನ ಆದಿವಾಸಿಗಳಾಗಿದ್ದಾರೆ. ೧೯೯೦ರವರೆಗೆ ದೇಶದ ವಿವಿಧ ಯೋಜನೆಗಳಿಂದ ಸ್ಥಳಾಂತರಗೊಂಡ ೯೦ ಲಕ್ಷ ಜನ ಆದಿವಾಸಿಗಳು ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.[೧೧೦] ಬುಡಕಟ್ಟು ಸಮುದಾಯಗಳಲ್ಲಿ ಈ ಸ್ಥಳಾಂತರ ತುಂಬಾ ಕರಾಳರೂಪವಾದುದು ಹಾಗೂ ಘೋರವಾದುದು. ಬೃಹತ್ ಅಭಿವೃದ್ಧಿ ಯೋಜನೆಗಳಿಂದ ನಿರ್ವಸಿತರಾದ ಸುಮಾರು ಹತ್ತುಲಕ್ಷ ಜನ ಆದಿವಾಸಿಗಳಿಗೆ ಯಾವ ಭೌಗೋಳಿಕ ಅಥವಾ ಮಾನಸಿಕ ಆಶ್ರಯವೂ ಇಲ್ಲದಂತಾಗಿದೆ.[೧೧೧]ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರ ಆದವರು ಈ ಯೋಜನೆಗಳಿಂದ ಯಾವುದೇ ರೀತಿಯ ಪ್ರಯೋಜನವನ್ನು ಪಡೆಯದೇ ಶಕ್ತಿಹೀನವಾಗಿದ್ದಾರೆ.[೧೧೨] ಬುಡಕಟ್ಟು ಸಮುದಾಯಗಳು ಕೇವಲ ಅವರ ಮನೆಯನ್ನು ಕಳೆದುಕೊಂಡಿಲ್ಲ; ಅವರ ಜೀವನಾಧಾರವನ್ನೂ ಕಳೆದುಕೊಂಡಿರುತ್ತಾರೆ. ತಾಯಿನೆಲ, ನೆಲೆ, ಉದ್ಯೋಗ ಕಳೆದುಕೊಂಡು ಬೇರೆಡೆಗೆ ವರ್ಗಾಯಿಸಿದ ಬುಡಕಟ್ಟು ಜನರ ಬದುಕು ನೀರಿನಿಂದ ಹೊರಬಿದ್ದ ಮೀನಿನಂತಾಗಿದೆ.

ಸಾಮ್ರಾಜ್ಯಶಾಹಿ ಪ್ರಣೀತ ಅಭಿವೃದ್ಧಿ ಯೋಜನೆಗಳಿಂದ ನೊಂದ ಬುಡಕಟ್ಟುಗಳು ಇಂದು ಅನೇಕ ಯಾತನೆಗಳಿಗೆ ಈಡಾಗಿವೆ. ಇವರು ಒಟ್ಟಾರೆಯಾಗಿ ಗಾಬರಿಗೊಂಡಿದ್ದಾರೆ, ದಿಗ್ಭ್ರಮೆಗೊಂಡಿದ್ದಾರೆ, ಶಕ್ತಿ ಹೀನವಾಗಿದ್ದಾರೆ, ಅಧಿಕಾರ ಕಳೆದುಕೊಂಡಿದ್ದಾರೆ, ಅಂಚಿಗೆ ತಳ್ಳಲ್ಪಟ್ಟಿದ್ದಾರೆ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಅಧಃಪತನವಾಗಿದ್ದಾರೆ.

ಆದರೆ ಅಭಿವೃದ್ಧಿಯ ಅಬ್ಬರದಲ್ಲಿ ಇವರ ಆಕ್ರಂದನ ಯಾರ ಕಿವಿಗೂ ಕೇಳಿಸದಂತೆ ಮಾಡುತ್ತಿದೆ.[೧೧೩] ಸ್ವಂತ ಆಸ್ತಿಯ ಕಲ್ಪನೆಯಿಲ್ಲದೆ ಸ್ವಚ್ಛಂದವಾಗಿ ಬದುಕುತ್ತಿದ್ದ ಬುಡಕಟ್ಟುಗಳ ಬದುಕು ರಕ್ಷಣೆಯ ನೆಪದಲ್ಲಿ ಕಾಡಿಗೆ ದಾಳಿ ಇಟ್ಟ ಅರಣ್ಯ ಇಲಾಖೆಯ ಆಕ್ರಮಣಕಾರಿ ಧೋರಣೆಯಿಂದಾಗಿ ದಿಕ್ಕೆಟ್ಟು ಇಂದಿಗೂ ಅವರು ಡೋಲಾಯಮಾನದಲ್ಲಿ ಬದುಕುತ್ತಿದ್ದಾರೆ.[೧೧೪] ಬುಡಕಟ್ಟು ಜನರನ್ನು ಅರಣ್ಯದಿಂದ ಹೊರಹಾಕುವುದರಿಂದ ಅವರ ಜೀವನ ಅಸ್ತವ್ಯಸ್ಥವಾಗಿ ಹೋಗುತ್ತದೆ.[೧೧೫] ಅಮಾಯಕ ಗಿರಿಜನರು ಅಸ್ಥಿರತೆಯ ಭೀತಿಯನ್ನು ಎದುರಿಸುತ್ತಿದ್ದಾರೆ. ನೆಲದ ಮೂಲನಿವಾಸಿಗಳಾದ ಇವರು ಅತಂತ್ರರಾಗಿದ್ದಾರೆ. ಸ್ಥಳಾಂತರದಿಂದಾಗಿ ಅವರು ಕೇವಲ ನೆಲೆ ಕಳೆದುಕೊಳ್ಳುವುದಲ್ಲ ಬದುಕನ್ನೇ ಕಳೆದುಬಿಡುತ್ತಾರೆ.[೧೧೬]

ಸ್ವಾತಂತ್ರ್ಯ ನಂತರ ಬೆಳವಣಿಗೆ, ಅಭಿವೃದ್ಧಿಯ ಹೆಸರಲ್ಲಿ ರೂಪಿತವಾದ ಕಾರ್ಯಕ್ರಮಗಳು ಆದಿವಾಸಿಗಳ ಸಾಮಾಜಿಕ, ಸಾಂಸ್ಕೃತಿಕ ಒಳತೋಟಿಗಳನ್ನು ಅರಿತು ರೂಪಿಸಿಲ್ಲ. ಹೀಗಾಗಿ ಈ ಕಾರ್ಯಕ್ರಮಗಳು ಬರಿಯ ಕಾರ್ಯಕ್ರಮಗಳಾದವೇ ಹೊರತು, ಮೂಲನಿವಾಸಿಗಳ ಸಮಗ್ರ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿಲ್ಲ. ಆಧುನಿಕ ಯಂತ್ರಗಳು, ಕೌಶಲ್ಯಗಳು ಇವುಗಳ ಬಗ್ಗೆ ಅವರಿಗೆ ಅರಿವಿಲ್ಲ. ಇದರಿಂದಾಗಿ ಭೂಮಿ ಕಳೆದುಕೊಂಡ ಅವರು ಜೀತ, ಸೇವಕ ಹಾಗೂ ಚಾಕರಿ ಕೆಲಸ ಮಾಡುವ ಹಾಗಾಯಿತು.[೧೧೭] ಇನ್ನೊಂದೆಡೆ, ಪ್ರಕೃತಿಯ ಕಂದಮ್ಮಗಳಾದ ಆದಿವಾಸಿಗಳನ್ನು ಕಾಲಾನುಕ್ರಮವಾಗಿ ಒಕ್ಕಲೆಬ್ಬಿಸಿ, ಅತಂತ್ರ ಸ್ಥಿತಿಗೆ ತಳ್ಳುವಲ್ಲಿ ಹಾಗೂ ಸಂಪನ್ಮೂಲಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸುವಲ್ಲಿ ಅರಣ್ಯ ನೀತಿಗಳು ಯಶಸ್ವಿಯಾದವು. ಇದರೊಂದಿಗೆ ನಾಗರಿಕತೆಯ ಹೆಸರಲ್ಲಿ, ಆದಿವಾಸಿಗಳ ಬದುಕನ್ನು ಅರಿಯುವ ಬದಲು, ಅವರಲ್ಲಿ ಕೀಳರಿಮೆ ಹಾಗೂ ಪರಕೀಯ ಭಾವನೆಗಳನ್ನು ಹೆಚ್ಚಿಸಿದವು. ಸಮಾಜದ ಒಂದು ಭಾಗವಾಗಿ ರೂಪುಗೊಳ್ಳಬೇಕಿದ್ದ ಬುಡಕಟ್ಟು ಪಂಗಡಗಳು ಅತಂತ್ರತೆಯಲ್ಲಿ ಅಸಹನೀಯ ನೋವು, ಹತಾಶೆ, ಅವಮಾನಗಳಿಗೆ ಗುರಿಯಾಗಬೇಕಾಯಿತು.[೧೧೮] ನಮ್ಮ ಆಧುನಿಕ ಅಭಿವೃದ್ಧಿ ಪರಿಕಲ್ಪನೆಯ ವೈಫಲ್ಯ ಈ ಜನರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವಂತೆ ವ್ಯವಸ್ಥಿತವಾಗಿ ಮಾಡಿಬಿಟ್ಟಿತು. ನಮ್ಮ ಅರ್ಥವ್ಯವಸ್ಥೆಯ ಅಸಮಾನ ನಡೆ ಇಲ್ಲಿನ ವಿಷಮ ವ್ಯವಸ್ಥೆಯ ಅರಿವಿಲ್ಲದ ವೇಗ ಬದಲಾದ ಉತ್ಪಾದನಾ ಸಂಬಂಧದಿಂದ ಆದಿವಾಸಿ ಸಮುದಾಯಗಳು ದಿಕ್ಕೆಟ್ಟು ಹೋದವು.[೧೧೯]

ಭಾರತದ ಬೃಹತ್ ಯೋಜನೆಗಳಿಂದಾಗಿ ನೆಲೆ ಕಳೆದುಕೊಂಡ ಬುಡಕಟ್ಟು ಜನಾಂಗಗಳು ಇಂದಿಗೂ ಅದೇ ರೀತಿಯ ಡೋಲಾಯಮಾನದಲ್ಲಿಯೇ ಬದುಕುತ್ತಿವೆ.[೧೨೦] ತಮ್ಮ ನಿತ್ಯ ಬದುಕಿನ ಬಿಡಿಸಲಾಗದ ಭಾಗವಾದ ಅಡವಿಯ ಸಾಧನ ಸಂಪನ್ಮೂಲಗಳಿಂದ ದೂರ ಮಾಡಿ, ಹುಟ್ಟಬೆಳೆದ, ಜಮೀನುಗಳನ್ನು ಕಿತ್ತುಕೊಂಡು, ಬದುಕನ್ನು ಮುರಿದು ಬಿಸುಟಿರುವ ಪ್ರಭುತ್ವ ಶಕ್ತಿಗೆ ತಮ್ಮದೇ ರೀತಿಯಲ್ಲಿ ಮುಖಾಮುಖಿಯಾಗಿ ನಿಂತಿದೆ ಅಸಹಾಯಕ ಗಿರಿಜನ ಸಮುದಾಯ. ಅಸ್ತಿತ್ವವೇ ಅಳಿಸಿ ಹೋಗುವ ಅಳಿವು ಉಳಿವಿನ

ಹೋರಾಟದಲ್ಲಿ ತೊಡಗಿವೆ.[೧೩೧] ಝಾರ್ಖಂಡ ಗಿರಿಜನರು, ಗ್ರಾಮೀಣರು ಹಾಗೂ ನಿರ್ಗತಿಕರನ್ನು ಹುರಿದು ಮುಕ್ಕಿರುವ ಏಕೈಕ ದೊಡ್ಡ ಸಮಸ್ಯೆಯೇನೆಂದರೆ ತಮ್ಮ ಪೂರ್ವಿಕರು ಬದುಕಿ ಬಾಳಿದ ನೆಲದಿಂದ ಅವರನ್ನು ಒಕ್ಕಲೆಬ್ಬಿಸಿರುವುದು. ಔಪಚಾರಿಕವಾಗಿ ಒಕ್ಕಲೆಬ್ಬಿಸಲಾದ ೧೭ ಲಕ್ಷ ಮಂದಿ ಝಾರ್ಖಂಡಿಗರಲ್ಲಿ ಮರುವಸತಿಯ ಅದೃಷ್ಟ ದಕ್ಕಿದ್ದು ಕೇವಲ ಶೇ.೨೫ರಷ್ಟು ಮಂದಿಗೆ ಮಾತ್ರಾ.[೧೩೨] ಮಹಾನಗರಗಳ ಕೊಳೆಗೇರಿಗಳಲ್ಲಿ ಆಶ್ರಯ ಪಡೆದು, ಅಲ್ಲಿನ ಅಸಂಖ್ಯಾತ ನಿರ್ಗತಿಕ ಕಾರ್ಮಿಕರೊಂದಿಗೆ ಬದುಕುವಂತಾಗಿದೆ.[೧೩೩] ಅವರ ಸಾಂಪ್ರದಾಯಿಕ ಉದ್ಯೋಗದಲ್ಲಿ ಬಹುದೊಡ್ಡ ಪ್ರಮಾಣದ ನಷ್ಟವುಂಟಾಗಿದೆ. ಬಹುಸಂಖ್ಯಾತರ ಅನುಕೂಲಕ್ಕಾಗಿ ಎಂಬ ಹಣೆಪಟ್ಟಿಯಲ್ಲಿ ರೂಪಿಸುವ ಇಂಥ ಯೋಜನೆಗಳು ಅಲ್ಪಸಂಖ್ಯಾತರನ್ನು ನಿರ್ನಾಮಗೊಳಿಸುತ್ತವೆ.[೧೩೪] ಅಧಿಕಾರವಿಲ್ಲದ, ಸೂರಿಲ್ಲದ ಬಡಜನ ತುತ್ತು ಅನ್ನಕ್ಕೂ ಕೈಯೊಡ್ಡಿ ನಿಲ್ಲಬೇಕಾಗಿದೆ.[೧೩೫]

ದೇಶದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳಿಂದಾಗಿ ಸ್ಥಳಾಂತರಗೊಂಡ ಬುಡಕಟ್ಟೇತರ ಬಡಜನ ಕೂಡಾ ಪುನರ್ವಸತಿಗೊಳ್ಳದೇ ತುಂಬಾ ಕಷ್ಟದ ಬದುಕು ಸಾಗಿಸುವಂತಾಗಿದೆ. ಇವರ ದೈನಂದಿನ ಬದುಕು ಬಾಣಾಲೆಯ ಎಣ್ಣೆಯಂತೆ ಬಡತನದಿಂದ ಕುದಿಯುತ್ತಿದೆ. ಉಳುಮೆ ಮಾಡಿ ಉತ್ತು ಬೆಳೆತೆಗೆದು ಹೊಟ್ಟೆ ಹೊರೆಯಬೇಕಾದ ಭೂಮಿ, ಬಂಡವಾಳ ಸೃಷ್ಟಿಸುವ ಭೂಮಿಯನ್ನಾಗಿ ಕೆಲವೇ ಜನರ ಕೈ ಸೊತ್ತಾಗಿದ್ದು, ಸಾವಿರಾರು ಜನರ ಬವಣೆಯ ದಾರಿಯಾಗಿದೆ.[೧೩೬] ಮೊದಲಿನ ನಾಯಕತ್ವ ವಿಧಾನ, ಸಾಮಾಜಿಕ ಸಂಸ್ಥೆಗಳ ಅಸ್ತಿತ್ವ ಭಗ್ನಗೊಂಡಿದೆ. ಪರಸ್ಪರ ಬೆಂಬಲ ನೀಡುತ್ತಿದ್ದ ರಕ್ತ ಸಂಬಂಧಿ ಬಂಧಗಳು ಹಾಗೂ ಇತರೇ ಅನೌಪಚಾರಿಕ ಸಂಪರ್ಕಗಳು ಬಿಡಿಸಿಕೊಂಡಿವೆ. ಬಹಳಷ್ಟು ಸಂದರ್ಭದಲ್ಲಿ ಅವು ಮರೆಯಾಗಿವೆ. ವಿದ್ಯಾಭ್ಯಾಸ ಸೌಲಭ್ಯದ ಕೊರತೆಯಿಂದಾಗಿ ಹೆಚ್ಚಿನ ಮಕ್ಕಳು ವಿದ್ಯಾರ್ಜನೆಯ ಅವಕಾಶವನ್ನು ಕಳೆದುಕೊಂಡಿದ್ದಾರೆ. ಹಲವರಿಗೆ ಇದು ತಡವಾಗಿ ಲಭ್ಯವಾಗುತ್ತಿದೆ. ಆಸ್ಪತ್ರೆ ಸೌಲಭ್ಯಗಳ ಕೊರತೆಯಿಂದಾಗಿ ಜೀವಕ್ಕೆ ಕುತ್ತು ತರುವ ಕಾಯಿಲೆಗಳು, ಸಾಂಕ್ರಾಮಿಕ ರೋಗಗಳು ಹಾಗೆಯೇ ಭೌತಿಕ ಮತ್ತು ಮಾನಸಿಕ ಅನಾರೋಗ್ಯ ಇವುಗಳು ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರವಾದವರಲ್ಲಿ ಹೆಚ್ಚಾಗಿದೆ. ಬೆದರಿಕೆ, ತುಚ್ಛವಾಗಿ ಕಾಣುವುದು, ಶಿಕ್ಷಿಸುವುದು, ಬಂಧಿಸುವುದು, ಹಿಂಸಾಚಾರ, ಖಾಸಗಿ ಅಥವಾ ಸರ್ಕಾರಿ ಭದ್ರತಾ ಪಡೆಗಳಿಂದ ಚಿತ್ರಹಿಂಸೆ ಇವುಗಳ ವಿರುದ್ಧ ಸಂತ್ರಸ್ತರು ತಮ್ಮ ಹಕ್ಕುಗಳನ್ನು ಸಾಧಿಸಲು ಪ್ರಯತ್ನ ಪಡುತ್ತಿರುತ್ತಾರೆ. ಅದಾಗಲೇ ಅಲ್ಲಿ ವಾಸವಿರುವ ಜನರು ಮತ್ತು ಹೊಸದಾಗಿ ನೆಲೆಗೊಂಡ ಸಂತ್ರಸ್ತರ ಮಧ್ಯೆ ಒತ್ತಡಗಳಿರುವುದರಿಂದ ಪುನರ್‌ನೆಲೆಗೊಂಡ ಜನರು ಪುನರ್ವಸತಿ ಕೇಂದ್ರದಲ್ಲಿ ಆವಾಗಾವಾಗ ಕೋಮು ಹಿಂಸಾಚಾರದ ಗಂಡಾಂತರವನ್ನು ಎದುರಿಸುತ್ತಿದ್ದಾರೆ.[೧೩೭] ಅವರು ಕಳೆದುಕೊಂಡ ಜೀವನಾಧಾರವನ್ನು ಯಾರಿಂದಲೂ ಪುನರ್ ವ್ಯವಸ್ಥೆ ಮಾಡಲು, ಹಾನಿಗೆ ಪರಿಹಾರ ಕೊಟ್ಟು ಸರಿದೂಗಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ಹಿತಾಸಕ್ತಿಗಾಗಿ ತ್ಯಾಗ ಮಾಡಿದ್ದರಿಂದ ಅವರು ಹಲವಾರು ಶತಮಾನಗಳಿಂದ

ಹಾಗೂ ತಲೆಮಾರುಗಳಿಂದ ಕಾಪಾಡಿಕೊಂಡು ಬಂದಿದ್ದ ಸಂಸ್ಕೃತಿ, ಬಂಧುತ್ವವು ಕೊಂಡಿಗಳನ್ನು ಕಳಚಿಕೊಂಡು ಬಿಟ್ಟಿದೆ.[೧೨೮]

ಹೀಗೆ ಅಭಿವೃದ್ಧಿ ಪ್ರೇರಿತ ಸ್ಥಳಾಂತರಕ್ಕೆ ಒಳಗಾದವರ ಸಮರ್ಪಕ ಪುನರ್ವಸತಿ ಮತ್ತು ಸರಿಯಾದ ಪುನರ್‌ನೆಲೆಯು ಪರಿಹರಿಸಲು ತುಂಬಾ ಕ್ಲಿಷ್ಟಕರವಾದ ಸಮಸ್ಯೆಯಾಗಿದೆ. ಸರಕಾರದಿಂದ ಪರಿಹಾರ ನೀಡುವ ವಿಧಾನವು ಯಾವತ್ತೂ ಸಾಕಷ್ಟು ಪ್ರಮಾಣದಲ್ಲಿರಲಿಲ್ಲ.[೧೨೯] ನ್ಯಾಯಾಂಗವು ಪುನರ್ವಸತಿಗೊಳ್ಳುವ ಹಕ್ಕನ್ನು ಭಾರತ ಸಂವಿಧಾನದ ೨೧ನೇ ಪರಿಚ್ಛೇದದಲ್ಲಿ ಮೂಲಭೂತ ಹಕ್ಕನ್ನಾಗಿ ಮಾನ್ಯತೆ ಮಾಡಿದ್ದರೂ ನಿಜರೂಪದಲ್ಲಿ ಈ ಹಕ್ಕನ್ನು ಪಾಲಿಸಲಾಗುತ್ತಿಲ್ಲ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಅಭಿವೃದ್ಧಿ ಸ್ಥಳಾಂತರ ನೀತಿಯ ಬಗ್ಗೆ ಅನುದಾನ ಪಡೆಯುವ ದೇಶಗಳ ಕಾನೂನು ರೂಪಿಸುವವರ ಜೊತೆ ಚರ್ಚಿಸಿದರೂ ಕೆಲವೊಂದು ದೇಶಗಳಲ್ಲಿ ಅವರದ್ದೇ ಆದ ಪನರ್ವಸತಿ ನೀತಿಯಿರುವುದರಿಂದ ಈ ಸಂಸ್ಥೆಗಳ ನೀತಿಗಳು ಅಲ್ಲಿ ಕಾರ್ಯರೂಪಕ್ಕೆ ತರಲಾಗುವುದಿಲ್ಲ. ತಮ್ಮ ಪ್ರಭಾವದ ಹೊರತಾಗಿಯೂ ಈ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ತಮ್ಮ ಕಾರ್ಯಾಚರಣೆಯಿಂದ ನೊಂದವರ ಜೀವನಾಧಾರವನ್ನು ಸಮರ್ಪಕವಾಗಿ ರಕ್ಷಿಸಲು ವಿಫಲವಾಗಿವೆ.[೧೩೦] ಸಂತ್ರಸ್ತರ ನಿರ್ಬಂಧಗಳನ್ನು ಕಾಪಾಡಲು, ಯೋಗ್ಯ ಪರಿಹಾರ, ಪುನರ್ ನೆಲೆ, ಮತ್ತು ಜನರ ಜೀವನಾಧಾರವನ್ನು ಪುನಃಸ್ಥಾಪಿಸಲು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಪದೇ ಪದೇ ಸೋಲುತ್ತವೆ. ಮಾನವನ ರಕ್ಷಣೆಗೆ ಎಲ್ಲಾ ರೀತಿಯಲ್ಲಿಯೂ ಅವಕಾಶವಿದ್ದರೂ ನಿಜರೂಪದಲ್ಲಿ ಅವು ಯಾವುವೂ ಜಾರಿಯಾಗುತ್ತಿಲ್ಲ.

'ಅಭಿವೃದ್ಧಿ, ಬಲಾತ್ಕಾರದ ಸ್ಥಳಾಂತರ ಮತ್ತು ಪುನರ್ ನೆಲೆ' ಈ ವಿಷಯದ ಮೇಲೆ ಮಾಡಿದ 'ಸಮಸ್ಯೆ ಕೇಂದ್ರಿತ' ಅಧ್ಯಯನಲ್ಲಿ ಹೆಚ್ಚಿನವು ಅಭಿವೃದ್ಧಿ, ಬಲಾತ್ಕಾರದ ಸ್ಥಳಾಂತರ ಮತ್ತು ಪುನರ್ ನೆಲೆಯ ದು:ಖಕರ ಫಲಿತಾಂಶವನ್ನು ಹೊರಸೂಸಿವೆ. ಸರ್ಕಾರ ಕೈಗೊಂಡಿರುವ ಪುನರ್ವಸತಿ ಕಾರ್ಯಕ್ರಮಗಳಲ್ಲಿ ಸಾಕಷ್ಟು ಲೋಪದೋಷಗಳನ್ನು ಕಂಡುಹಿಡಿದಿವೆ. ಮಾಹಿತಿ, ನಿವೇಷನ, ಕುಡಿಯುವ ನೀರು, ನೌಕರಿ, ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಸ್ಥಳಾವಕಾಶ, ಕೃಷಿಭೂಮಿ ಮತ್ತು ಫಲವತ್ತತೆ, ಕೃಷಿಗಾಗಿ ನೀರಾವರಿ ಈ ಎಲ್ಲಾ ಅಂಶಗಳಲ್ಲಿ ಸಾಕಷ್ಟು ಕೊರತೆ ಕಂಡುಬಂದಿದೆ. ಅದಲ್ಲದೇ ಪುನರ್ವಸತಿ ಕೇಂದ್ರದಲ್ಲಿ ಅದಾಗಲೇ ಇರುವವರ ಜೊತೆಗೆ ಜಾತಿ ಸಂಘರ್ಷ, ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿದ ಗಲಭೆ ಸರ್ವೆಸಾಮಾನ್ಯವಾಗಿತ್ತು.[೧೩೧]

ಬೃಹತ್ ಅಭಿವೃದ್ಧಿ ಯೋಜನೆಗಳು ಬಹು ಮುಖ್ಯವಾಗಿ ಬೃಹತ್ ಅಣೆಕಟ್ಟುಗಳು ಅಭಿವೃದ್ಧಿಯ ಬಲಿಪಶುಗಳನ್ನು ನಿರ್ಮಾಣ ಮಾಡಿವೆ.[೧೩೨] ಯಾವ ಜನ ಗಿಡ ಮರಗಳನ್ನು ಆರಾಧಿಸಿ ಪೂಜಿಸುತ್ತಿದ್ದರೋ ಅವರನ್ನೇ ಇಂದು ಸೌದೆ ಮಾರಾಟ ಮಾಡಿ ಜೀವನ ಸಾಗಿಸುವ ಸ್ಥಿತಿಗೆ ತಂದಿಡಲಾಗಿದೆ. ಈ ವಿಪರ್ಯಾಸ ನಮ್ಮ ಆಧುನಿಕ ವ್ಯವಸ್ಥೆಯಿಂದಲೇ

ಉಂಟಾದದ್ದು.[೧೩೩] ಬೆಂಗಳೂರು, ಮುಂಬೈ ಮುಂತಾದ ದೊಡ್ಡ ದೊಡ್ಡ ನಗರಗಳ ಸ್ಲಂಗಳಲ್ಲಿ ಹೊಸದಾಗಿ ಸೇರ್ಪಡೆಯಾಗುತ್ತಿರುವ ಬಹುಪಾಲು ಜನ ಈ ರೀತಿಯ ಅಭಿವೃದ್ಧಿಯ ಹತ್ಯಾಕಾಂಡಕ್ಕೆ ಬಲಿಯಾಗಿ ಬದುಕು ಕಳೆದುಕೊಂಡವರೇ.[೧೩೪]

ಆರ್ಥಿಕ ಅಭಿವೃದ್ಧಿಯಿಂದ ಉತ್ಪನ್ನದ ಮತ್ತು ಆದಾಯದ ಹೆಚ್ಚಳ, ಆಧುನೀಕರಣ, ಸೇವೆಗಳ ವಿಸ್ತರಣೆ, ನಿರುದ್ಯೋಗ ಮತ್ತು ಬಡತನ ನಿವಾರಣೆ, ಆದಾಯ ಅಸಮಾನತೆಯ ನಿವಾರಣೆ, ಆರ್ಥಿಕ ಸ್ವಾವಲಂಬನೆ, ಜೀವನ ಮಟ್ಟದಲ್ಲಿ ಸುಧಾರಣೆ, ಬಂಡವಾಳ ಸಂಚಯನ, ಪ್ರಾದೇಶಿಕ ಅಸಮತೋಲನ ನಿವಾರಣೆ, ಸಂಪನ್ಮೂಲಗಳ ದಕ್ಷ ಬಳಕೆ ಹೀಗೆ ಅನೇಕ ಅನುಕೂಲತೆಗಳು ಸೃಷ್ಟಿಯಾಗುತ್ತವೆ. ಆದರೆ ಪ್ರಶ್ನೆ ಇದು ಯಾರಿಗೆ ದಕ್ಕಿದೆ ಎಂಬುದು. ಸಂತ್ರಸ್ತರು ಇದರ ಪ್ರಯೋಜನವನ್ನು ಉಂಡಿದ್ದಾರೆಯೇ? ಅಭಿವೃದ್ಧಿಯಿಂದ ಇವೆಲ್ಲಾ ಸಾಧ್ಯವಾಗುವುದಾದರೆ ರಾಷ್ಟ್ರದ ಅಭಿವೃದ್ಧಿ ಹೆಸರಲ್ಲಿ ಕೈಗೊಂಡ ಇಷ್ಟೆಲ್ಲಾ ಯೋಜನೆಗಳು ಸಂತ್ರಸ್ತರನ್ನು ಯಾಕೆ ಕಡೆಗಣಿಸಿವೆ ಎಂಬುದು ಪ್ರಶ್ನಾತೀತ.

೨.೧೦. ಬೃಹತ್ ಅಭಿವೃದ್ಧಿ ಯೋಜನಾ ಸಂತ್ರಸ್ತರ ಪುನರ್‌ನಿರ್ಮಾಣ ವಿಫಲವಾಗಲು ಕಾರಣ

ಅಧ್ಯಯನಗಳ ಪ್ರಕಾರ ದೇಶದಲ್ಲಿ ಕೈಗೊಂಡಂತಹ ಅದೆಷ್ಟೋ ಪುನರ್ ನಿರ್ಮಾಣ ಯೋಜನೆಗಳು ವಿಫಲಗೊಂಡಿವೆ. ಇದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಮಾಹಿತಿ ಕೊರತೆ, ಪುನರ್ವಸತಿಗೆ ಆಳವಾದ ಯೋಜನೆಯನ್ನು ಮಾಡದೇ ಇರುವುದು, ಪರಿಹಾರವನ್ನು ಸರಿಯಾಗಿ ಮೌಲ್ಯಮಾಪನ ಮಾಡದೇ ಇರುವುದು, ಹಾಗೂ ಇದನ್ನು ಹಣದ ರೂಪದಲ್ಲಿ ಕೊಟ್ಟಿರುವುದು. ಅವರ ಸಂಪತ್ತು ಹಾಗೂ ಜೀವನಾಧಾರವನ್ನು ಖೇದಕರ ರೀತಿಯಲ್ಲಿ ಹಾಗೂ ತಡಮಾಡಿ ಪುನರ್‌ನೆಲೆಗೊಳಿಸಿರುವುದು. ಪುನರ್ ನೆಲೆಯಲ್ಲಿ ಮನೆ ನಿವೇಶನದ ಸಮಸ್ಯೆ, ಒಂದಕ್ಕಿಂತ ಹೆಚ್ಚು ಸಲ ಸ್ಥಳಾಂತರ, ವಿಶೇಷ ತಳ ಸಮುದಾಯಗಳ ತಿರಸ್ಕಾರ, ಯೋಜನೆಗಳಲ್ಲಿ ಸಂತ್ರಸ್ತರ ಸಹ ಭಾಗಿತ್ವವಿಲ್ಲದಿರುವುದು. ಸಂತ್ರಸ್ತರಲ್ಲಿನ ಇಚ್ಛಾಶಕ್ತಿ ಕೊರತೆ ಇತ್ಯಾದಿ ಅಂಶಗಳಿಂದಾಗಿ ಭಾರತದಲ್ಲಿ ಪುನರ್ವಸತಿ ವ್ಯವಸ್ಥೆ ವಿಫಲಗೊಂಡಿದೆ.

೨.೧೧. ಬೃಹತ್ ಅಣೆಕಟ್ಟು ಯೋಜನೆಗಳು

೧೯೭೦ರ ಸುಮಾರಿಗೆ ಅರ್ಥಶಾಸ್ತ್ರಜ್ಞರು ಈ ಶತಮಾನ ಮುಗಿಯುವುದರೊಳಗಾಗಿ, ವಿದ್ಯುತ್ ಉತ್ಪಾದನೆಯಲ್ಲಿ ಶೇಕಡಾ ೫೦ರಷ್ಟು ಅಭಿವೃದ್ಧಿ ಮಾಡಿದರೆ ಮಾತ್ರ ಉದ್ದಿಮೆಗಳು ಬೆಳೆದು ಬಡಬಗ್ಗರ ಏಳ್ಗೆಗೆ ಯತ್ನಿಸಲು ಸಾಧ್ಯವೆಂದು ಶಿಫಾರಸ್ಸು ಮಾಡುತ್ತಾರೆ. ಆದ್ದರಿಂದ ಪ್ರಪಂಚದ ಹೆಚ್ಚು ದೇಶಗಳು ಅಣೆಕಟ್ಟು ಕಟ್ಟುವ ಕಡೆ ದೃಷ್ಟಿ ಹಾಯಿಸಲಾರಂಭಿಸಿದವು. ಪ್ರಪಂಚದಲ್ಲಿ ದಿನಕ್ಕೆ ೨-೩ ಅಣೆಕಟ್ಟುಗಳು ದಿನಾಲೂ ಆದೇಶ ಪಡೆದುಕೊಂಡವು. ೧೯೭೦ರಲ್ಲಿ ಅಣೆಕಟ್ಟು ನಿರ್ಮಾಣ ಉತ್ತುಂಗಕ್ಕೇರಿತು. ವಿಶ್ವ ಅಣೆಕಟ್ಟು ಆಯೋಗದ ಪ್ರಕಾರ ಪ್ರಪಂಚದಾದ್ಯಂತ ೪೫.೦೦೦ ಅಣೆಕಟ್ಟುಗಳನ್ನು

ಕಟ್ಟಲಾಗಿದೆ. ೪೦,೦೦೦ಕ್ಕಿಂತಲೂ ಹೆಚ್ಚು ದೊಡ್ಡ ಅಣೆಕಟ್ಟು ಹಾಗೂ ೧೦೦ಕ್ಕಿಂತ ಜಾಸ್ತಿಯಾಗಿ ೧೫೦ ಮೀಟರ್‌ಗಿಂತಲೂ ದೊಡ್ಡ ಅಣೆಕಟ್ಟುಗಳು ಇವೆ.[೧೩೫] ದೊಡ್ಡ ಅಣೆಕಟ್ಟುಗಳು ಸಾಮಾನ್ಯವಾಗಿ ತಳಪಾಯದಿಂದ ಕ್ರೆಸ್ಟ್ ಗೇಟ್‌ವರೆಗೆ ೧೫ ಮೀ ಎತ್ತರವನ್ನು ಹೊಂದಿರುತ್ತದೆ. ೧೦-೧೫ ಮೀಟರ್ ಎತ್ತರ ಇರುವ ಅಣೆಕಟ್ಟುಗಳು ಕೂಡಾ ದೊಡ್ಡ ಅಣೆಕಟ್ಟುಗಳೇ.[೧೩೬] ಪ್ರಪಂಚದ ದೊಡ್ಡ ಅಣೆಕಟ್ಟುಗಳಲ್ಲಿ ೩/೪ ಭಾಗಕ್ಕಿಂತ ಹೆಚ್ಚಿನ ಅಣೆಕಟ್ಟುಗಳು ಅಮೇರಿಕಾ, ಭಾರತ, ಜಪಾನ್ ಹಾಗೂ ಸ್ಪೈನ್ ದೇಶಗಳಲ್ಲಿವೆ.

ಬೃಹತ್ ಅಣೆಕಟ್ಟುಗಳು ಅಭಿವೃದ್ಧಿಯ ಒಂದು ಅಂಗ. ಅಣೆಕಟ್ಟಿನಿಂದ ವಿದ್ಯುತ್ ಶಕ್ತಿ, ಕೃಷಿಗೆ ನೀರಾವರಿ, ಕುಡಿಯುವ ನೀರು ದೊರೆಯುತ್ತದೆ. ಪ್ರವಾಹ ನಿಯಂತ್ರಣವಾಗುತ್ತದೆ. ಜಲ ಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಣೆಕಟ್ಟುಗಳು ಪ್ರಮುಖವಾದ ಪಾತ್ರವನ್ನು ವಹಿಸಿವೆ. ಇದು ಅಭಿವೃದ್ಧಿಗೆ ಕಾರಣವಾಗುತ್ತದೆ ಹಾಗೂ ಬಡತನ ಕಡಿಮೆ ಮಾಡುತ್ತದೆ ಎಂಬ ವಿಶ್ವಾಸದೊಂದಿಗೆ ಅಂತರಾಷ್ಟ್ರೀಯ ಸಂಸ್ಥೆಯಾದ ವಿಶ್ವ ಬ್ಯಾಂಕ್ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಣೆಕಟ್ಟು ನಿರ್ಮಾಣಕ್ಕಾಗಿ ಹೆಚ್ಚಿನ ಹಣವನ್ನು ವಿನಿಯೋಗಿಸಿದೆ. ಜಗತ್ತಿನಾದ್ಯಂತ ಇಂದು ಬೃಹತ್ ಅಣೆಕಟ್ಟುಗಳನ್ನು ವಿವಿಧ ಅವಶ್ಯಕತೆಗಳಿಂದಾಗಿ ನಿರ್ಮಿಸಲಾಗುತ್ತಿದೆ. ವ್ಯವಸ್ಥಿತವಾಗಿ ಯೋಜಿಸಿದಂತಹ ನೀರಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯು ಆರ್ಥಿಕ ಅಭಿವೃದ್ಧಿಯಲ್ಲಿ ಒಂದು ಅತ್ಯವಶ್ಯವಾದ ಅಂಶವಾಗಿದೆ. ಇವುಗಳನ್ನು ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ನಿರ್ಮಾಣ ಮಾಡಲಾಗುತ್ತದೆ. ನೀರಾವರಿ, ಆಹಾರ ಬೆಳೆಗಳು, ಪ್ರವಾಹ ನಿಯಂತ್ರಣ, ವಿದ್ಯುತ್ ಸರಬರಾಜು, ಶಕ್ತಿಯ ಆಕರ, ಕಾರ್ಬನ್ ಮುಕ್ತ ಶಕ್ತಿಯನ್ನು ಪೂರೈಸು ಇವೆಲ್ಲದರಲ್ಲಿ ಹೆಚ್ಚಾದ ಬೇಡಿಕೆಯನ್ನು ಪೂರೈಸುವಲ್ಲಿ ಬೃಹತ್ ಅಣೆಕಟ್ಟುಗಳು ಅವಶ್ಯಕವಾಗಿದೆ.[೧೩೭]

ಪ್ರಪಂಚದ ನದಿಗಳಲ್ಲಿ ಸರಿಸುಮಾರು ಶೇ. ೬೦ರಷ್ಟು ನದಿ ಹರಿವನ್ನು ತಡೆ ಹಿಡಿಯಲಾಗಿದೆ. ಪ್ರಪಂಚದಲ್ಲಿನ ಸರಿಸುಮಾರು ಅರ್ಧದಷ್ಟು ನದಿಗಳು ಕನಿಷ್ಠಪಕ್ಷ ಒಂದೊಂದು ಅಣೆಕಟ್ಟುಗಳನ್ನು ಹೊಂದಿವೆ.[೧೩೮] ಈಗಿರುವ ಅಣೆಕಟ್ಟುಗಳಲ್ಲಿ ೨/೩ ಅಣೆಕಟ್ಟುಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಂಡುಬರುತ್ತವೆ. ಚೀನಾ ದೇಶವೊಂದರಲ್ಲಿಯೇ ಪ್ರಪಂಚದ ಶೇಕಡಾ ೪೫ರಷ್ಟು ಅಣೆಕಟ್ಟುಗಳು ಇವೆ. ಪ್ರಪಂಚದ ೧/೩ ದೇಶಗಳು ಅದರ ವಿದ್ಯುತ್ ಪೂರೈಕೆಯಲ್ಲಿ ಅರ್ಧದಷ್ಟು ಜಲವಿದ್ಯುತ್ ಶಕ್ತಿಗೆ ಅವಲಂಬಿತವಾಗಿದೆ. ಪ್ರಪಂಚದ ವಿದ್ಯುತ್ ಉತ್ಪಾದನೆಯಲ್ಲಿ ಪ್ರತಿಶತ ೧೯ರಷ್ಟು ವಿದ್ಯುತ್ ದೊಡ್ಡ ಅಣೆಕಟ್ಟುಗಳ ಜಲಶಕ್ತಿಯಿಂದ ಪಡೆದುಕೊಳ್ಳಲಾಗುತ್ತಿದೆ. ದೊಡ್ಡ ಅಣೆಕಟ್ಟುಗಳು ಕೇವಲ ಅಥವಾ ಬಹುಮುಖ್ಯವಾಗಿ ನೀರಾವರಿಗಾಗಿ ನಿರ್ಮಾಣ ಆಗಿವೆ. ಪ್ರಪಂಚದ ೨೭೧ ಮಿಲಿಯನ್ ಹೆಕ್ಟೇರ್ ನೀರಾವರಿ ಭೂಮಿಯಲ್ಲಿ ಪ್ರತಿಶತ ೩೦-೪೦ರಷ್ಟು ಭೂಮಿ ಅಣೆಕಟ್ಟುಗಳ ಮೇಲೆ ಅವಲಂಬಿತವಾಗಿವೆ. ವಿಶ್ವದ ಆಹಾರ ಉತ್ಪಾದನೆಯಲ್ಲಿ ಪ್ರತಿಶತ ೧೨-೧೬ರಷ್ಟು ಅಣೆಕಟ್ಟುಗಳ ನೀರಾವರಿ ಕೃಷಿಯಿಂದ ಲಭ್ಯವಾಗುತ್ತಿದೆ.[೧೩೯] ಅನೇಕ ದೇಶಗಳಿಗೆ ಅಣೆಕಟ್ಟು

ಒಂದೇ ದೊಡ್ಡ ಮಟ್ಟದ ಬಂಡವಾಳ ವಿನಿಯೋಗಿಸುವ ಯೋಜನೆಯಾಗಿದೆ. ವಿಸ್ತಾರಗೊಳ್ಳುತ್ತಿರುವಂತಹ ಆಧುನಿಕ ಆರ್ಥಿಕತೆಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯ ನೀರು ಹಾಗೂ ಶಕ್ತಿ ಅಗತ್ಯತೆಗಳನ್ನು ಪೂರೈಸಿಕೊಳ್ಳುವಲ್ಲಿ ಬೃಹತ್ ಅಣೆಕಟ್ಟುಗಳು ವ್ಯವಸ್ಥಿತವಾಗಿ ಅಭಿವೃದ್ಧಿಗೊಂಡಿವೆ. ಬೃಹತ್ ಅಣೆಕಟ್ಟು ಒಂದೇ ಅತೀ ಪ್ರಾಮುಖ್ಯ ಹಾಗೂ ಪರಿಣಾಮಕಾರಿ ಮದ್ಯವರ್ತಿಯಾಗಿದೆ. ಅಂತೆಯೇ ಈ ಅಣೆಕಟ್ಟುಗಳು ೪೦ ಮಿಲಿಯನ್ ಜನರನ್ನು ಸ್ಥಳಾಂತರಿಸಿದೆ.[೧೪೦]

೨.೧೨. ಭಾರತದಲ್ಲಿ ಅಣೆಕಟ್ಟು ಯೋಜನೆಗಳ ಅನುಷ್ಠಾನ

ಭಾರತೀಯರಿಗೆ ಹೋಲಿಸಿದರೆ ಬ್ರಿಟಿಷರು ನೀರಾವರಿಯಲ್ಲಿ ಭಾರತೀಯರಿಗಿಂತ ಕಡಿಮೆ ಜ್ಞಾನವನ್ನು ಹೊಂದಿದ್ದರು. ಬ್ರಿಟಿಷರು ನೀರಾವರಿಗೆ ಪ್ರಾಮುಖ್ಯತೆ ನೀಡಿರಲಿಲ್ಲ. ಇದರಿಂದಾಗಿ ನೀರಾವರಿ ಸ್ಥಿತಿ ತುಂಬಾ ಹದೆಗೆಟ್ಟು ಸಮಸ್ಯೆಗಳು ಉದ್ಭವಿಸಿದವು. ಆದ್ದರಿಂದ ನಂತರದಲ್ಲಿ ಇದಕ್ಕೆ ಹೆಚ್ಚಿನ ಒತ್ತು ಕೊಡಲಾರಂಭಿಸಿದರು. ಸೇನೆಯಲ್ಲಿನ ನಾಗರಿಕ ಅಭಿಯಂತರರು ಮಾತ್ರ ಈ ಕಾರ್ಯದಲ್ಲಿ ಅನುಭವವುಳ್ಳವರಾಗಿದ್ದರು. ೧೯ನೇ ಶತಮಾನದ ಪ್ರಾರಂಭದಲ್ಲಿ ನಾಗರಿಕ ಅಭಿಯಂತರರನ್ನು ಟ್ಯಾಂಕ್ ರಿಪೇರಿ ಕಾರ್ಯಕ್ಕಾಗಿ ನೇಮಿಸಿಕೊಳ್ಳಲಾಯಿತು. ಪ್ರಾರಂಭದಲ್ಲಿ ನೀರಾವರಿಯ ಉಸ್ತುವಾರಿಯನ್ನು ಈಸ್ಟ್ ಇಂಡಿಯಾ ಕಂಪನಿಯವರು ವಹಿಸಿಕೊಳ್ಳುತ್ತಿದ್ದರು. ೧೮೮೦ರಲ್ಲಿ ಜೋಯಿಂಟ್ ಸ್ಟಾಕ್ ಕಂಪನಿಯಂತಹ ಆಡಳಿತವನ್ನು ಕೈಗೊಂಡು ಅಧೀಕ್ಷರನ್ನು ನೀರಾವರಿ ಯೋಜನೆಯ ನಿರ್ದೇಶಕರನ್ನಾಗಿ ನೇಮಿಸಿಕೊಳ್ಳಲಾಯಿತು. ನೀರಾವರಿ ಯೋಜನೆಯಿಂದ ಹೆಚ್ಚು ಹೆಚ್ಚು ಲಾಭ ಗಳಿಸಲು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಕೈಗಾರಿಕೆಗಾಗಿ ವಿದ್ಯುತ್‌ನ ಅವಶ್ಯಕತೆ ಕಂಡುಬಂದಿತು. ಅದಕ್ಕಾಗಿ ದೊಡ್ಡ ದೊಡ್ಡ ಜಲಾಶಯಗಳ ಅಗತ್ಯತೆ ಬಿತ್ತು. ಇದರಿಂದಾಗಿ ಫಲವತ್ತಾದ ಭೂಮಿ ಮುಳುಗಡೆ, ಕಾಡು ಮುಳಗಡೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜನರ ಸ್ಥಳಾಂತರ ಪ್ರಾರಂಭವಾಯಿತು.[೧೪೧]

ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ೧೯೪೭ ರ ಮುಂಚೆ ೧೫ಮೀ ದಿಂದ ೨೦ ಮೀಟರ್ ಎತ್ತರದ ಕೆಲವೊಂದು ಅಣೆಕಟ್ಟುಗಳು ಇದ್ದವು. ಕೇವಲ ೩೦ ಅಣೆಕಟ್ಟುಗಳು ೩೦ ಮೀ. ಎತ್ತರದವು ಇದ್ದವು.[೨೪೨] ಅದರಂತೆಯೇ ದೊಡ್ಡ ಶೇಖರಣಾ ಕಾಮಗಾರಿಗಳಾದ ಭಾಕ್ರಾ, ಹಿರಾಕುಡ್, ತುಂಗಭದ್ರಾ, ಹಾಗೂ ದಾಮೋದರ ಕಣಿವೆ ಅಣೆಕಟ್ಟುಗಳು ಭಾರತದಲ್ಲಿ ಸ್ವತಂತ್ರ ಪೂರ್ವದಲ್ಲಿದ್ದವು. ೧೯೧೨ರವರೆಗೂ ಇಡಿಯ ಭಾರತ ದೇಶದಲ್ಲಿದ್ದ ಒಂದೇ ಒಂದು ಬೃಹತ್ ಜಲಾಶಯವೆಂದರೆ ಮೈಸೂರಿನ ಕಾವೇರಿ ಜಲಾಶಯ. ೧೯೨೫ ರಲ್ಲಿ ಮದ್ರಾಸು ಸರ್ಕಾರವು ಈ ಜಲಾಶಯದ ದುಪ್ಪಟ್ಟು ಎತ್ತರದಷ್ಟು ಮೆಟ್ಟೂರು ಜಲಾಶಯವನ್ನು ನಿರ್ಮಾಣ ಮಾಡಿತು.

ಪ್ರಪಂಚದಲ್ಲಿ ಭಾರತವು ಅತೀ ಹೆಚ್ಚಿನ ಸಂಖ್ಯೆಯ ದೊಡ್ಡ ನೀರಾವರಿ ಯೋಜನೆಯನ್ನು ಹೊಂದಿದ್ದು ಇದು ಸ್ಪಷ್ಟವಾಗದ ಶ್ರೇಣಿಯಲ್ಲಿದೆ. ೧೯೮೫ರ ಸುಮಾರಿಗೆ

೧೫೭೮ರಷ್ಟು ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಪ್ರಪಂಚದಲ್ಲಿ ಭಾರತವು ಅತೀ ಹೆಚ್ಚಿನ ಸಂಖ್ಯೆಯಲ್ಲಿ ನದೀ ಕಣಿವೆ ಯೋಜನೆಗಳನ್ನು ಹೊಂದಿದೆ. ಕೇಂದ್ರ ಜಲ ಆಯೋಗದ ವರದಿಯ ಪ್ರಕಾರ ಭಾರತದಲ್ಲಿ ೩೬೦೦ ಬೃಹತ್ ಅಣೆಕಟ್ಟುಗಳು ಇವೆ.[೧೪೨] ಹೆಚ್ಚಿದ ಕೃಷಿ ಉತ್ಪನ್ನಗಳಿಂದಾಗಿ ಭಾರತದಂತಹ ದೇಶಗಳಲ್ಲಿ ಬೃಹತ್ ಅಣೆಕಟ್ಟುಗಳು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಭಾರತ ದೇಶವು ಸುಮಾರು ೪೭೧೦ ಪೂರ್ತಿಗೊಳಿಸಿದ ಬೃಹತ್ ಅಣೆಕಟ್ಟುಗಳನ್ನು ಹೊಂದಿದೆ. ಭಾರತದ ೪,೨೯೧ ಅಣೆಕಟ್ಟುಗಳಲ್ಲಿ ೩೦೦ ದೊಡ್ಡವು ಹಾಗೂ ಉಳಿದವು ಸಣ್ಣವು.[೧೪೩] ಇದರಲ್ಲಿ ೩೩೦೦ ಅಣೆಕಟ್ಟು ಸ್ವಾತಂತ್ರ್ಯಾನಂತರದಲ್ಲಿ ನಿರ್ಮಾಣವಾದವು. ೬೯೫ ರಷ್ಟು ಅಣೆಕಟ್ಟುಗಳು ನಿರ್ಮಾಣದ ಹಂತದಲ್ಲಿವೆ.[೧೪೪]

ಕರ್ನಾಟಕದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆ.ಪಿ.ಸಿ.) ಅಣೆಕಟ್ಟುಗಳ ಅನುಷ್ಠಾನ ಮತ್ತು ವಿದ್ಯುತ್ ಉತ್ಪಾದನೆ ಮಾಡುತ್ತದೆ. ಇದು ೧೯೫೬ರಲ್ಲಿ ಜಲವಿದ್ಯುತ್ ನಿರ್ಮಾಣ ಯೋಜನೆ (ಹೆಚ್. ಇ. ಸಿ. ಪಿ.)ಎಂಬ ಹೆಸರಿನಲ್ಲಿ ಕರ್ನಾಟಕ ಸರ್ಕಾರದ ಇಲಾಖೆಯಾಗಿ ಪ್ರಾರಂಭವಾಯಿತು. ಮೈಸೂರು ಪವರ್ ಕಾರ್ಪೋರೇಷನ್ ಲಿಮಿಟೆಡ್ ಎಂಬ ಹೆಸರಿನಲ್ಲಿ ೨೦-೭-೧೯೭೦ರಲ್ಲಿ ಭಾರತದ ಕಂಪನಿ ಕಾಯಿದೆಯ ಪ್ರಕಾರ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿತು. ಮೈಸೂರು ಜಲವಿದ್ಯುತ್ ನಿಗಮವು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಜವಾಬ್ದಾರಿಯಾದ ಎಲ್ಲಾ ಜಲ ಯೋಜನೆಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ತನ್ನದಾಗಿಸಿಕೊಂಡಿತು. ೧೬-೧೦-೧೯೮೦ ರಂದು ಇದು ತನ್ನ ಹೆಸರನ್ನು ಕರ್ನಾಟಕ ವಿದ್ಯುತ್ ನಿಗಮವೆಂದು ಮರುನಾಮಕರಣ ಮಾಡಿಕೊಂಡಿತು.[೧೪೫] ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇದು ಒಂದು ಸ್ವಾಯತ್ತ ಸಂಸ್ಥೆ. ಇದು ಕರ್ನಾಟಕ ಸರ್ಕಾರದ ಅಧೀನದಲ್ಲಿದೆ. ೧೯೭೦ರಲ್ಲಿ ಸ್ಥಾಪನೆಯಾದ ಕ.ವಿ.ನಿ.ನಿ. ಇಂದು ಕರ್ನಾಟಕದಲ್ಲಿ ಒಂದು ಮುಖ್ಯ ವಿದ್ಯುತ್ ಉತ್ಪಾದನಾ ಕಂಪನಿಯಾಗಿ ಬೆಳೆದು ನಿಂತಿದೆ. ಶಕ್ತಿಯುತ್ಪಾದನೆಯ ಅವಕಾಶಗಳನ್ನು ಅನ್ವೇಷಿಸಿ ಅಭಿವೃದ್ಧಿಗೊಳಿಸಿ, ಸ್ಥಾವರಗಳನ್ನು ಸ್ಥಾಪಿಸಿ ನಿರ್ವಹಿಸುವ ಮೂಲಕ ವಿದ್ಯುತ್ ಉತ್ಪಾದನೆಯನ್ನು ಉನ್ನತೀಕರಿಸುವುದು ಇದರ ಧ್ಯೇಯ.[೧೪೬] ಜಲವಿದ್ಯುತ್ ಯೋಜನೆಗಳಿಗಾಗಿ ಅನ್ವೇಷಣೆ, ಯೋಜನೆ ರೂಪಿಸುವುದು ಹಾಗೂ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಗುರಿಯೊಂದಿಗೆ ಪ್ರಾರಂಭವಾದ ಇದು ಕರ್ನಾಟಕದಲ್ಲಿ ವಿದ್ಯುತ್ ಯೋಜನೆಗಳನ್ನು ನಿರ್ವಹಿಸುವ ಕಾರ್ಯವನ್ನು ಹೊಂದಿದೆ. ಇದು ಕರ್ನಾಟಕದ ವಿದ್ಯುತ್‌ನ ಶೇಕಡಾ ೭೫ ರಷ್ಟು ವಿದ್ಯುತ್‌ನ್ನು ಪೂರೈಸುತ್ತಿದೆ. ೪೩೫೦ ಇನಸ್ಟಾಲ್ಡ್ ಸಾಮರ್ಥ್ಯವನ್ನು ಇದು ಹೊಂದಿದೆ. ಜಲ, ಪವನ, ಸೌರ, ಉಷ್ಣಸ್ಥಾವರಗಳಿಂದ ವಿದ್ಯುತ್‌ನ್ನು ಉತ್ಪಾದಿಸುವ ಶಕ್ತಿಯನ್ನು ಇದು ಹೊಂದಿದೆ.[೧೪೭] ರಾಜ್ಯದಲ್ಲಿ ಜಲವಿದ್ಯುದಾಗರ ಹೆಚ್ಚಿಸುವ ಸಲುವಾಗಿ ಕಾಳಿ ಜಲವಿದ್ಯುತ್ ಯೋಜನೆಯೇ ಇದರ ಪ್ರಥಮ ದೊಡ್ಡ ಯೋಜನೆಯಾಗಿ ಪ್ರಾರಂಭಿಸಲಾಯಿತು.

ಕಾಳಿ ನದಿಯು ಕರ್ನಾಟಕದ ಪಶ್ಚಿಮ ಘಟ್ಟದಲ್ಲಿನ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಡಿಗ್ಗಿಯಿಂದ ೯೦೦ಮೀ. ಎತ್ತರದಲ್ಲಿ ಉಗಮವಾಗುತ್ತದೆ. ಇದು ೬೪ ಕಿ.ಮೀ. ಪೂರ್ವಾಭಿಮುಖವಾಗಿ ಹರಿದು ನಂತರ ಈಶಾನ್ಯಕ್ಕೆ ತಿರುಗಿ ೧೬ ಕಿ. ಮೀ. ದೂರ ೩೦೦ ಮೀ. ಎತ್ತರದಲ್ಲಿ ಹರಿಯುತ್ತದೆ. ನಂತರ ಮತ್ತೊಮ್ಮೆ ಈ ನದಿಯು ಪಶ್ಚಿಮಾಭಿಮುಖವಾಗಿ ತಿರುಗಿ ೯೬ ಕಿ.ಮೀ. ದೂರ ಕ್ರಮಿಸಿ ಕಾರವಾರದ ಬಳಿ ಅರಬ್ಬೀ ಸಮುದ್ರ ಸೇರುತ್ತದೆ. ಇದು ೪೮೪೦ ಚ.ಕಿ.ಮೀ. ಜಲಾನಯನ ಪ್ರದೇಶವನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ವಾರ್ಷಿಕ ೬೫೦ ಮಿ.ಮೀ.ನಿಂದ ೧೩೫೩ ಮಿ.ಮೀ.ವರೆಗೆ ಮಳೆಯಾಗುತ್ತದೆ.[೧೪೮] ಈ ಕಾಳಿನದಿಯ ವಿಶೇಷತೆ ಏನೆಂದರೆ ಇದು ಉತ್ತರ ಕನ್ನಡದಲ್ಲಿ ಹುಟ್ಟಿ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಸಮುದ್ರ ಸೇರುತ್ತದೆ. ಕಾಳಿಯು ಪಾಂಡರಿ, ತಟ್ಟಿಹಳ್ಳ, ಭರ್ಚಿ, ನಾಗಝರಿ, ಕಾನೇರಿ ಹಾಗೂ ವಾಕಿ ಎನ್ನುವ ಆರು ಉಪನದಿಗಳಿಂದ ಕೂಡಿ ಹರಿಯುತ್ತದೆ.[೧೪೯]

ಹಿಂದೂಗಳು ಯಾವಾಗಲೂ ಕಾಳಿ ದೇವತೆಗೆ ಅಪರಿಮಿತ ಶಕ್ತಿ ಇರುವುದೆಂದು ಆಕೆಯನ್ನು ಶಕ್ತಿಯ ಮೂಲರೂಪವಾಗಿ ಆರಾಧಿಸುತ್ತಾರೆ. ಈ ಕಾಳಿಯ ಹೆಸರಲ್ಲಿರುವ ಕಾಳಿ ನದಿಯೂ ಅಂತ್ಯವಿಲ್ಲದಷ್ಟು ವಿದ್ಯುತ್ ಉತ್ಪಾದಿಸುವ ಶಕ್ತಿಯನ್ನು ಹೊಂದಿದೆ. ತನ್ನ ೧೬೦ ಕಿ.ಮೀ. ಪ್ರಯಾಣದಲ್ಲಿ ಇದು ತಿರುವು ಹಾಗೂ ವೇಗವಾಗಿ ಹರಿಯುತ್ತಾ ತುಂಬಾ ಪ್ರಬಲವಾದ ವಿದ್ಯುತ್ ಹಾಗೂ ಶಕ್ತಿಯ ರೂಪವಾಗುತ್ತದೆ. ಇದು ೧೬೦೦ ಮೆ.ವ್ಯಾ. ವಿದ್ಯುತ್ ಉತ್ಪಾದಿಸುವ ಶಕ್ತಿಯನ್ನು ಹೊಂದಿದೆ. ಬೆಟ್ಟ ಹಾಗೂ ಘಟ್ಟಗಳಲ್ಲಿ ಹರಿಯುವುದರಿಂದ ಅಲ್ಲಿ ನೀರಾವರಿಗೆ ಅವಕಾಶ ಕಡಿಮೆಯಿದೆ.[೧೫೦]

೧೯೨೦ರಲ್ಲಿ ಬಾಂಬೇ ಸರ್ಕಾರ ಕಾಳಿ ಜಲವಿದ್ಯುತ್ ಅಭಿವೃದ್ಧಿಗಾಗಿ ಪ್ರಾಥಮಿಕ ತನಿಖೆ ಮಾಡಿತು. ಸೂಪಾ ಬಳಿ ಒಂದು ಅಣೆಕಟ್ಟು ನಿರ್ಮಿಸಿ ನಾಗಝರಿಯ ಬಳಿ ವಿದ್ಯುತ್ ಘಟಕ ನಿರ್ಮಿಸುವ ಹಾಗೂ ಯೋಜನೆಯನ್ನು ಹಂತ ಹಂತವಾಗಿ ಮಾಡುವ ಬಗ್ಗೆ ಪ್ರಸ್ತಾವವನ್ನು ಇಟ್ಟಿತ್ತು. ಆದರೆ ಮುಂದಿನ ೧೯೪೭-೪೮ ರವರೆಗೆ ಯಾವುದೇ ರೀತಿಯ ಪ್ರಗತಿ ಕಾಣಲಿಲ್ಲ. ೧೯೪೮ ರಲ್ಲಿ ಮತ್ತೆ ಅದೇ ಬಾಂಬೇ ಸರ್ಕಾರ ಅಮೇರಿಕಾ ಸಂಯುಕ್ತ ಸಂಸ್ಥಾನದ ಮಿಸ್ಸೆಸ್ ಅಸೋಸಿಯೇಟೆಡ್ ಕನ್‌ಸ್ಸಲ್ಟಾಂಟ್ ಇಂಜಿನಿಯರ್ ಇವರಿಂದ ಕಾಳಿ ನದಿ ಯೋಜನೆಯ ಬಗ್ಗೆ ಒಂದು ವರದಿಯನ್ನು ಸಂಗ್ರಹಿಸಿತು. ಭಾರತದ ಜಲವಿದ್ಯುತ್ ಸರ್ವೆಯವರಿಂದ ಸಮಗ್ರ ತನಿಖಾ ವರದಿಯನ್ನು ಪಡೆಯಲಾಯಿತು. ೧೯೬೦-೬೧ ರಲ್ಲಿ ಮೈಸೂರು ಸರ್ಕಾರ ಯು.ಕೆ.ಯ ಸರ್ವೆ ರಿಪೋರ್ಟ್ ಆಧಾರದ ಮೇಲೆ ಮುಂದಾಳತ್ವ ವಹಿಸಿ ಕಾಳಿ ಜಲವಿದ್ಯುತ್ ಯೋಜನೆ ಮಾಡುವ ಯೋಚನೆ ಮಾಡಿದರು. ಇದಕ್ಕಾಗಿ ಮೊದಲಿಗೆ ಅವರು ಜಲವಿದ್ಯುತ್ ಯೋಜನೆಗಳ ನಿರ್ಮಾಣ ಸಂಸ್ಥೆ ಮಾಡಿದರು. ನಂತರ ಮುಂದಿನ ದಿನದಲ್ಲಿ ಅದನ್ನು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಎಂದು ಪರಿವರ್ತಿಸಿದರು.[೧೫೧]

ಕಾಳಿ ಜಲವಿದ್ಯುತ್ ಅಭಿವೃದ್ಧಿಗಾಗಿ ತನಿಖಾ ವಿಭಾಗವನ್ನು ಧಾರವಾಡದಲ್ಲಿ ನಿರ್ಮಾಣ ಮಾಡಿ ಅಣೆಕಟ್ಟು ಯೋಜನೆಗೆ ಬೇಕಾದಂತಹ ತನಿಖೆ ಮಾಡಲು ಪ್ರಾರಂಭಿಸಲಾಯಿತು. ಹಾಗೆಯೇ ಇನ್ನೊಂದು ವಿಭಾಗವನ್ನು ಯಲ್ಲಾಪೂರದಲ್ಲಿ ತೆರೆಯಲಾಯಿತು. ಏರಿಯಲ್ ಸರ್ವೆಯ ಮುಖಾಂತರ ಅಣೆಕಟ್ಟು ಸ್ಥಳಗಳನ್ನು, ಭೂ, ಅರಣ್ಯ ಮುಳುಗಡೆ ಪ್ರದೇಶಗಳು ಇನ್ನು ಮುಂತಾದವುಗಳನ್ನು ಗುರುತಿಸಲಾಯಿತು. ಮೈಸೂರು ಜಲವಿದ್ಯುತ್ ನಿಗಮ ಕಾಳಿ ಜಲವಿದ್ಯುತ್ ಯೋಜನೆಯನ್ನು ಮೂರು ಪ್ರಮುಖ ಹಂತಗಳಲ್ಲಿ ಮಾಡುವ ಯೋಜನೆಯನ್ನು ಇಟ್ಟುಕೊಂಡಿತು.[೧೫೨]

ಕಾಳಿ ಪ್ರಥಮ ಹಂತದಲ್ಲಿ ಸೂಪಾ ಅಣೆಕಟ್ಟು ಹಾಗೂ ವಿದ್ಯುತ್ ಘಟಕ, ಬೊಮ್ಮನಹಳ್ಳಿ ಪಿಕಪ್ ಡ್ಯಾಂ, ತಟ್ಟಿಹಳ್ಳ ಡ್ಯಾಂ, ನಾಗಝರಿ ವಿದ್ಯುತ್ ಘಟಕ. ಕಾಳಿ ದ್ವಿತೀಯ ಹಂತದಲ್ಲಿ ಕೊಡಸಳ್ಳಿ ಅಣೆಕಟ್ಟು ಮತ್ತು ವಿದ್ಯುತ್ ಘಟಕ, ಕದ್ರಾ ಅಣೆಕಟ್ಟು ಮತ್ತು ವಿದ್ಯುತ್ ಘಟಕ, ದಾಂಡೇಲಿ ಅಣೆಕಟ್ಟು ಹಾಗೂ ವಿದ್ಯುತ್ ಘಟಕ. ಕಾಳಿ ತೃತೀಯ ಹಂತದಲ್ಲಿ ವಾಕಿ ಅಣೆಕಟ್ಟು ಹಾಗೂ ವಿದ್ಯುತ್ ಘಟಕ. ಈ ಮೂರು ಹಂತದಲ್ಲಿ ೧) ಸೂಪಾ ಜಲವಿದ್ಯುತ್ ಯೋಜನೆ ೨) ಕುಂಬಾರವಾಡ ಅಣೆಕಟ್ಟು (ಅಪ್ಪರ್ ಕಾನೇರಿ ಅಥವಾ ಕನೇರಿ ಡೈವರ್ಷನ್) ೩) ತಟ್ಟಿಹಳ್ಳ ಅಣೆಕಟ್ಟು ೪) ಬೊಮ್ಮನಹಳ್ಳಿ ಪಿಕಪ್ ಡ್ಯಾಂ ೫) ಕೊಡಸಳ್ಳಿ ಜಲವಿದ್ಯುತ್ ಯೋಜನೆ ೬) ಕದ್ರಾ ಜಲವಿದ್ಯುತ್ ಯೋಜನೆ. ಒಟ್ಟು ಈ ಆರು ಅಣೆಕಟ್ಟುಗಳನ್ನು ಕಟ್ಟುವ ಯೋಜನೆಯನ್ನು ಹಾಕಿಕೊಂಡಿತು.[೧೫೩]

೨.೧೩. ಸೂಪಾ ಅಣೆಕಟ್ಟು ಯೋಜನೆಯ ಅನುಷ್ಠಾನ

ಸೂಪಾ ಅಣೆಕಟ್ಟು ಯೋಜನೆಯು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಉತ್ತರ ಕನ್ನಡ ಜಿಲ್ಲೆಯು ಭೌಗೋಳಿಕವಾಗಿ ಕರ್ನಾಟಕ ರಾಜ್ಯದ ಉತ್ತರದ ಪಶ್ಚಿಮ ಭಾಗದಲ್ಲಿದೆ. ಉತ್ತರಾರ್ಧಗೋಳದ ಉಷ್ಣವಲಯದ ಉತ್ತರ ಅಕ್ಷಾಂಶ ೧೩-೫೫ ಡಿಗ್ರಿ ರಿಂದ ೧೫೦-೩೧ ಡಿಗ್ರಿ ಮತ್ತು ೭೪-೦೯ ಡಿಗ್ರಿ ರಿಂದ ೭೫-೧೦ ಪೂರ್ವ ರೇಖಾಂಶದ ಮಧ್ಯೆ ಅಡಕವಾಗಿದೆ. ಜಿಲ್ಲೆಯ ಉತ್ತರಕ್ಕೆ ಗೋವಾ ರಾಜ್ಯ ಮತ್ತು ಬೆಳಗಾಂವ ಜಿಲ್ಲೆಯ ಖಾನಾಪುರ ತಾಲ್ಲೂಕು, ಪೂರ್ವಕ್ಕೆ ಧಾರವಾಡ ಜಿಲ್ಲೆ ಹಾಗೂ ಹಾವೇರಿ ಜಿಲ್ಲೆ, ದಕ್ಷಿಣಕ್ಕೆ ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳು ಪಶ್ಚಿಮಕ್ಕೆ ಅರಬ್ಬೀ ಸಮುದ್ರದಿಂದ ಆವರಿಸಲ್ಪಟ್ಟಿದೆ.[೧೫೪] ಇದು ರಾಜ್ಯದ ೧೦ನೆಯ ದೊಡ್ಡ ಜಿಲ್ಲೆಯಾಗಿದೆ. ಉತ್ತರಕನ್ನಡ ಜಿಲ್ಲೆ ದಕ್ಷಿಣೋತ್ತರವಾಗಿ ನೂರು ಮೈಲುಗಳಷ್ಟು ಉದ್ದವೂ, ಪೂರ್ವ ಪಶ್ಚಿಮವಾಗಿ ಅರವತ್ತು ಮೈಲಿಗಳಷ್ಟು ಅಗಲವೂ ಇದೆ.[೧೫೫] ಭೌಗೋಳಿಕವಾಗಿ ಈ ಜಿಲ್ಲೆಯು ಕರಾವಳಿ ವಲಯ, ಶೃಂಗ ವಲಯ ಮತ್ತು ಮೈದಾನ ವಲಯ ಎಂಬ ಮೂರು ವಲಯಗಳನ್ನು ಒಳಗೊಂಡಿದೆ. ಕಾರವಾರವು ಜಿಲ್ಲಾ ಕೇಂದ್ರವಾಗಿದೆ. ಜಿಲ್ಲೆಯು ೧೧ ತಾಲ್ಲೂಕುಗಳನ್ನು ಒಳಗೊಂಡಿದ್ದು ೪ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಇದು ೧೩೨೧ ಗ್ರಾಮಗಳನ್ನು ಒಳಗೊಂಡಿದೆ.[೧೫೬]

ಜಿಲ್ಲೆಯು ೧೦,೨೯೧.೦೦ ಚ.ಕಿ.ಮೀ. (೧೦,೨೪,೬೭೯ಹೆ.) ವಿಸ್ತೀರ್ಣವನ್ನು ಹೊಂದಿದ್ದು ರಾಜ್ಯದಲ್ಲಿ ೫ನೇ ಸ್ಥಾನವನ್ನು ಪಡೆದಿದೆ. ೧,೯೧೦.೪೪ ಚ.ಕಿ.ಮೀ. ವಿಸ್ತೀರ್ಣ ಹೊಂದಿದ ಸೂಪಾ ತಾಲ್ಲೂಕು ಎಲ್ಲಕ್ಕಿಂತ ದೊಡ್ಡದು ಮತ್ತು ೩೫೫.೫೦ ಚ.ಕಿ.ಮೀ. ವಿಸ್ತೀರ್ಣದ ಭಟ್ಕಳ ತಾಲ್ಲೂಕು ಎಲ್ಲಕ್ಕಿಂತ ಚಿಕ್ಕದು ಆಗಿದೆ. ಇದು ೩೫ ಹೋಬಳಿಗಳನ್ನು, ೨೦೮ ಗ್ರಾಮ ಪಂಚಾಯತಿಗಳನ್ನು, ೩ ನಗರಸಭೆಗಳನ್ನು, ೨ ಪುರಸಭೆಗಳನ್ನು, ೬ ಪಟ್ಟಣ ಪಂಚಾಯತಿಗಳನ್ನು ಹೊಂದಿರುತ್ತದೆ. ೨೦೦೧ರ ಜನಗಣತಿಯ ಅನುಸಾರ ಒಟ್ಟು ೧೨೮೯ ಗ್ರಾಮಗಳಿದ್ದು ಅವುಗಳಲ್ಲಿ ೧೨೪೬ ಜನವಸತಿ ಇರುವ ಮತ್ತು ೪೩ ಜನವಸತಿ ಇಲ್ಲದಿರುವ ಗ್ರಾಮಗಳು ಆಗಿರುತ್ತವೆ. ಆಡಳಿತ ದೃಷ್ಟಿಯಿಂದ ಜಿಲ್ಲೆಯನ್ನು ಭಟ್ಕಳ, ಕಾರವಾರ, ಕುಮಟಾ ಹಾಗೂ ಶಿರಸಿ ಎಂಬ ನಾಲ್ಕು ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಸೂಪಾ ತಾಲ್ಲೂಕು ಕಾರವಾರ ಉಪವಿಭಾಗಕ್ಕೆ ಸೇರಿದೆ.[೧೫೭]

ಜಗತ್ತಿನ ಅತ್ಯಂತ ಸುಂದರ ಜಿಲ್ಲೆಗಳಲ್ಲಿ ಉತ್ತರ ಕನ್ನಡವೂ ಒಂದಾಗಿದೆ. ಇದು ಕಡಲು ಮತ್ತು ಕಾಡುಗಳ ಸಂಗಮಸ್ಥಾನ. ಜಿಲ್ಲೆಯು ೧೪೪ ಕಿ.ಮೀ. ಉದ್ದದ ಪಶ್ಚಿಮ ಕರಾವಳಿ ತೀರವನ್ನು ಹೊಂದಿದೆ.[೧೫೮] ೨೩೦೦ ಚ.ಕಿ. ಮೀ. ವಿಸ್ತಾರದ ಮೀನುಗಾರಿಕಾ ಪ್ರದೇಶವನ್ನು ಹೊಂದಿದೆ. ರಾಜ್ಯದ ಮೀನುಗಾರಿಕೆಯಲ್ಲಿ ಶೇ. ೩೦ರ ಪಾಲರನ್ನು ಇದು ಪೂರೈಸುತ್ತದೆ.[೧೫೯] ಕಾರವಾರ ಬಂದರು ಈ ಜಿಲ್ಲೆಯಲ್ಲಿನ ಒಂದು ಉತ್ತಮ ಪ್ರಾಕೃತಿಕ ಬಂದರಾಗಿದೆ.

ಈ ಜಿಲ್ಲೆಯನ್ನು ಅರಣ್ಯ ಜಿಲ್ಲೆಯೆಂದು ಪರಿಗಣಿಸಲಾಗಿದೆ. ರಾಜ್ಯದ ಒಟ್ಟು ಅರಣ್ಯ ಪ್ರದೇಶದ ಶೇಕಡಾ ೨೮ ರಷ್ಟು ಪಾಲು ಈ ಜಿಲ್ಲೆಯದೇ ಆಗಿದೆ.[೧೬೦] ಇಲ್ಲಿನ ಅರಣ್ಯದಲ್ಲಿ ಜಗತ್ತಿನಲ್ಲಿ ಹೆಚ್ಚು ಬೆಲೆಬಾಳುವ ತೇಗ, ಹೊನ್ನೆ, ಸೀಸಂ, ಮತ್ತಿ, ಸಾಗುವಾನಿ, ಹಲಸು, ಬಿದಿರು, ಬೀಟೆ ಮುಂತಾದ ಮರಗಳಿವೆ.[೧೬೧] ಇಲ್ಲಿನ ಅರಣ್ಯವು ಶ್ರೀಮಂತ ಬೆಟ್ಟಕಾಡುಗಳು, ತಂಪಾದ ತಾಳೆಮರಗಳು, ಮನಮೋಹಕ ಭೂಪ್ರದೇಶ, ಚಿತ್ತಾಕರ್ಷಕ ನದಿ ಕಣಿವೆಗಳು ಮುಂತಾದ ಪ್ರದೇಶಗಳನ್ನು ಒಳಗೊಂಡಿದೆ.[೧೬೨] ಜೋಯಿಡಾ ತಾಲ್ಲೂಕಿನಲ್ಲಿ ಬರುವ ಅಣಶಿ-ದಾಂಡೇಲಿಯ ಅಭಯಾರಣ್ಯವು ಹುಲಿಧಾಮವಾಗಿದೆ. ಈ ಜಿಲ್ಲೆಯ ಮೂಲಕ ಹಾದು ಹೋಗುವ ಪಶ್ಚಿಮ ಘಟ್ಟವು ಪ್ರಪಂಚದ ಜೀವ ವೈವಿಧ್ಯದ ತಾಣಗಳಲ್ಲಿ ೧೮ನೇ ಸ್ಥಾನವನ್ನು ಪಡೆದುಕೊಂಡಿದೆ.[೧೬೩]

ಜಿಲ್ಲೆಯ ನದಿಗಳಲ್ಲಿ ಕಾಳಿ, ಗಂಗಾವಳಿ, ಅಘನಾಶಿನಿ, ಭೇಡ್ತಿ, ಶರಾವತಿ ಮುಖ್ಯವಾದವು ಗಳಾಗಿದ್ದು, ವೆಂಕಟಾಪುರ ಮತ್ತು ವರದಾ ಉಪನದಿಗಳಾಗಿವೆ. ವರದಾ ಹೊರತುಪಡಿಸಿ ಉಳಿದವು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಇತರೇ ಸಣ್ಣ ನದಿಗಳಾದ ಬೇಲೇಕೇರಿ, ಬಡಗೇರಿ ಈ ಜಿಲ್ಲೆಯಲ್ಲಿ ಹರಿಯುತ್ತವೆ.[೧೬೪] ಇಲ್ಲಿ ಒಟ್ಟು ೧೨೭೯೮೨ ಹೆ. ವ್ಯವಸಾಯ ಭೂಮಿ ಇದ್ದು ಇದರಲ್ಲಿ ೩೪೧೦೭ ಹೆ. ನೀರಾವರಿ ಪ್ರದೇಶ ಮತ್ತು ೧೪೪೧೮ ಹೆ. ಪಾಳು ಭೂಮಿಯನ್ನು ಹೊಂದಿದೆ. ಜಿಲ್ಲೆಯು ಉತ್ತಮ ಮೇಲ್ಮೈ ಹಾಗೂ ಅಂತರ್ಜಲ ಹೊಂದಿದೆ.

ಸಾಮಾನ್ಯವಾಗಿ ಇಲ್ಲಿ ಪದರು ಪದರಾಗಿರುವ ಬೆಣಚು ಕಲ್ಲಿನಿಂದ ಕೂಡಿದ ಹಗುರವಾದ ಮಣ್ಣು ಕಂಡುಬರುತ್ತದೆ.[೧೬೫] ಮ್ಯಾಂಗನೀಸ್ ಅದಿರು, ಲೈಮ್ ಶೆಲ್, ಮೌಲ್ಡಿಂಗ್ ಸ್ಯಾಂಡ್, ಕಬ್ಬಿಣದ ಅದಿರು, ಸುಣ್ಣಕಲ್ಲು, ಗಾಜು, ಅಭ್ರಕ, ಬಾಕ್ಸೈಟು, ಇವು ಇಲ್ಲಿ ದೊರಕುವ ಖನಿಜ ಸಂಪತ್ತುಗಳಾಗಿವೆ.[೧೬೬] ಸೂಪಾ ತಾಲ್ಲೂಕಿನ ಕೊಡ್ಡಿ [ಖೊಡ್ಡಲಿ] ಗಣಿಗಳು ಮ್ಯಾಂಗನೀಸ್‌ಗೆ ಪ್ರಸಿದ್ಧವಾಗಿವೆ.[೧೬೭]

ರಾಜ್ಯದಲ್ಲಿ ಇದು ಭೌಗೋಳಿಕವಾಗಿ ೧೦ನೇ ಸ್ಥಾನವನ್ನು ಪಡೆದರೂ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಇದೂ ಒಂದಾಗಿದೆ. ಸಾಮಾನ್ಯವಾಗಿ ೨೮೩೫ ಮಿ.ಮೀ. ಮಳೆಯನ್ನು ಪಡೆಯುತ್ತಿದೆ. ಜಿಲ್ಲೆಯ ಮುಖ್ಯ ಆದಾಯದ ಮೂಲವೆಂದರೆ ಕೃಷಿ ಹಾಗೂ ಬಂದರು ಮೀನುಗಾರಿಕೆ. ಮುಂಗಾರು ಅಭಿವೃದ್ಧಿಯಲ್ಲಿ ಭತ್ತವನ್ನು ಮುಖ್ಯ ಬೆಳೆಯನ್ನಾಗಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಏಕದಳ ಧಾನ್ಯವಾದ ಭತ್ತ ಪ್ರಮುಖ ಬೆಳೆಯಾಗಿದ್ದು, ದ್ವಿದಳ ಧಾನ್ಯಗಳಾದ ಕಡಲೆ, ತೊಗರಿ, ಹುರುಳಿ, ಹೆಸರು, ಅವರೆ ಮತ್ತು ಅಲಸಂದಿಯನ್ನು ಕಡಿಮೆ ಪ್ರದೇಶದಲ್ಲಿ ಬೆಳೆಯುತ್ತಾರೆ. ಗೋಡಂಬಿ ಮತ್ತು ಅಡಿಕೆ ಇವು ಪ್ರಮುಖ ವಾಣಿಜ್ಯ ಬೆಳೆಗಳಾಗಿರುತ್ತವೆ. ಕರಾವಳಿ ಪ್ರದೇಶದಲ್ಲಿ ಬೇಳೆಕಾಳುಗಳನ್ನು ಎರಡನೇ ಬೆಳೆಯಾಗಿ ಬೆಳೆಯಲಾಗುತ್ತಿದೆ. ರಾಗಿ, ಜೋಳ, ಮೆಕ್ಕೆಜೋಳವನ್ನು ಕಡಿಮೆ ಮಳೆ ಬೀಳುವ ಸಣ್ಣ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಆರ್ಥಿಕ ಬೆಳೆಗಳಾದ ಶೇಂಗಾ, ಕಬ್ಬು ಹಾಗೂ ಹತ್ತಿ ಕೂಡಾ ಇಲ್ಲಿ ಬೆಳೆಯುತ್ತದೆ. ಅಡಿಕೆ, ತೆಂಗು, ಬಾಳೆಹಣ್ಣು, ಮಾವು, ಹಲಸು, ಸಪೋಟ, ಪೇರಳೆ, ಅನಾನಸು, ಗೇರುಬೀಜ ಹಾಗೂ ಕಾಳು ಮೆಣಸು ಪ್ಲಾಂಟೇಷನ್‌ಗಳನ್ನು ಬೆಳೆಯಲಾಗುತ್ತಿದೆ.

ಮೀನು ಉತ್ಪಾದನೆ ಕುಂಠಿತವಾಗುತ್ತಿರುವುದರಿಂದ ಹಾಗೂ ವ್ಯವಸಾಯಕ್ಕೆ ಮಿತಿಯಾದ ಜಾಗವಿರುವುದರಿಂದ ಈ ಜಿಲ್ಲೆಯು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿಲ್ಲ. ಜಿಲ್ಲೆಯಲ್ಲಿನ ಇತರೇ ಮುಖ್ಯ ಆರ್ಥಿಕ ಚಟುವಟಿಕೆಗಳು ಎಂದರೆ ಕ್ಷೀರ ಅಭಿವೃದ್ಧಿ, ಪುಷ್ಪಕೃಷಿ, ಗೋಡಂಬಿ ಸಂಸ್ಕರಣೆ, ಆಹಾರ ಸಂಸ್ಕರಣೆ, ಘಟಕಗಳು, ದೇಶೀಯ ಹಾಲು ಉತ್ಪಾದನಾ ಘಟಕಗಳು, ಕರಕುಶಲತೆ, ಸಾಮಾನ್ಯ ಇಂಜಿನಿಯರಿಂಗ್, ಅರಣ್ಯ ಆಧಾರಿತ ಕೈಗಾರಿಕೆಗಳು, ರಾಸಾಯನಿಕ, ಜವಳಿ ಮತ್ತು ಸಿದ್ಧ ಉಡುಪು, ಚರ್ಮದ ವಸ್ತುಗಳು ಮುಂತಾದವು.[೧೬೮] ಇದು ೨೧೫ ಬ್ಯಾಂಕುಗಳು ಹೊಂದಿದ್ದು, ೧೪ ವಾಣಿಜ್ಯ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಪ್ರಾಂತೀಯ ಗ್ರಾಮೀಣ ಬ್ಯಾಂಕು, ಖಾಸಗೀ ಭೂ ಅಭಿವೃದ್ಧಿ ಬ್ಯಾಂಕುಗಳು, ಕೆನರಾ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ವರದಾ ಗ್ರಾಮೀಣ ಬ್ಯಾಂಕ್‌ಗಳನ್ನು ಹೊಂದಿರುತ್ತದೆ.[೧೬೯] ಜಿಲ್ಲೆಯು ಉತ್ತಮ ಸಾರಿಗೆ ಸಂಪರ್ಕವನ್ನು ಹೊಂದಿದೆ. ಕೊಂಕಣ ರೈಲ್ವೆ ಆರ್ಥಿಕ ಸಮೃದ್ಧಿ ತಂದಿದೆ.[೧೭೦]

೨೦೧೧ ರ ಜನಗಣತಿಯಂತೆ ಈ ಜಿಲ್ಲೆಯ ಸಾಕ್ಷರತೆ ೭೫.೨೮% ಆಗಿರುತ್ತದೆ.[೧೭೧] ಉತ್ತರ ಕನ್ನಡ ಬಹುಮುಖಿ ಸಂಸ್ಕೃತಿಯ ಪ್ರದೇಶ. ಈ ಜಿಲ್ಲೆಯಲ್ಲಿರುವ ೧೬,೫೫,೬೬೪ ಜನರಲ್ಲಿ (೨೦೧೧ರ ಜನಗಣತಿಯಂತೆ) ಸರಿಸುಮಾರು ಅರ್ಧದಷ್ಟು

ಜನ ಹಾಲಕ್ಕಿ, ಸಿದ್ಧಿ, ಲಮ್ಮಾಣಿ, ಗೊಂಡ, ಕುಣಬಿ, ಕರೆಒಕ್ಕಲು ಮುಂತಾದ ಬುಡಕಟ್ಟು ವರ್ಗಕ್ಕೆ ಸೇರಿದವರಿದ್ದಾರೆ.[೧೭೨] ಅದಲ್ಲದೇ ಇಲ್ಲಿ ಅಗೇರ, ಮುಕ್ರಿ, ಹಸಲ ಮುಂತಾದ ಪರಿಶಿಷ್ಟ ಜಾತಿಗೂ ಸೇರಿದವರಿದ್ದಾರೆ.[೧೭೩]

ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲಿ ಸೂಪಾ ತಾಲ್ಲೂಕು ಕೂಡಾ ಒಂದಾಗಿತ್ತು. ಇದು ಸಮುದ್ರ ಮಟ್ಟಕ್ಕಿಂತ ೫೯೧.೭೦ಮೀ ಎತ್ತರದಲ್ಲಿದೆ. ಅಕ್ಷಾಂಶ ೧೪.೫೪.೦೦ರಿಂದ ೧೫.೩೧.೪೫ ಮತ್ತು ರೇಖಾಂಶ ೭೪.೧೪.೪೫ ರಿಂದ ೭೪.೩೮.೪೫ಗಳ ಮಧ್ಯೆ ಇದೆ. ಈಗ ಈ ತಾಲ್ಲೂಕನ್ನು ಜೋಯಿಡಾ (ಸೂಪಾ) ತಾಲ್ಲೂಕು ಎಂದು ಕರೆಯಲಾಗುತ್ತದೆ. ಇದು ಉತ್ತರ ಕನ್ನಡ ಜಿಲ್ಲೆಯ ಉತ್ತರ ದಿಕ್ಕಿನಲ್ಲಿದೆ. ಭೌಗೋಳಿಕವಾಗಿ ಇದು ಜಿಲ್ಲೆಯ ಅತೀ ದೊಡ್ಡ ತಾಲ್ಲೂಕಾಗಿದೆ. ಸೂಪಾ ತಾಲ್ಲೂಕು ಜೋಯಿಡಾ ಅರಣ್ಯಗಳನ್ನು ಒಳಗೊಂಡಂತೆ ದಟ್ಟ ಅರಣ್ಯ ಪ್ರದೇಶಗಳನ್ನು ಒಳಗೊಂಡಿದೆ.[೧೭೪] ಸೂಪಾ ಪ್ರದೇಶ ಇದು ಮಾಧವ ಗಾಡ್ಗೀಳ್ ವರದಿಯ ಪ್ರಕಾರ ಅತ್ಯಂತ ಸೂಕ್ಮ ಪ್ರದೇಶ ಎಂದು ಗುರುತಿಸಲಾಗಿದೆ.[೧೭೫] ಈ ಸೂಪಾ ತಾಲ್ಲೂಕಿನ ಸೂಪಾ ಎಂಬ ಪಟ್ಟಣದಲ್ಲಿ ಹರಿಯುತ್ತಿದ್ದ ಕಾಳಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಅಣೆಕಟ್ಟನ್ನು ಸೂಪಾ ಅಣೆಕಟ್ಟು ಎಂದು ಕರೆಯುಲಾಗುತ್ತದೆ.

ಸೂಪಾ ಜಲಾಶಯ ಇದು ಕಾಳಿ ನದಿಯ ಮುಖ್ಯ ನೀರು ಸಂಗ್ರಹಣಾ ಜಲಾಶಯ. ಹುಬ್ಬಳ್ಳಿ ಪಟ್ಟಣದಿಂದ ಹಳಿಯಾಳ ಮಾರ್ಗವಾಗಿ ೧೦೦ ಕಿ.ಮೀ., ದಾಂಡೇಲಿಯಿಂದ ಪಣಜಿ ಮಾರ್ಗವಾಗಿ ೩೨ ಕಿ.ಮೀ., ಕಾರವಾರದಿಂದ ಜೋಯಿಡಾ ಮುಖಾಂತರ ಬೆಳಗಾವಿ ರಸ್ತೆಯಲ್ಲಿ ೧೦೩ ಕಿ.ಮೀ. ದೂರದಲ್ಲಿರುವ ಉತ್ತರ ಕನ್ನಡ ಜಿಲ್ಲೆಯ ಆಗಿನ ಸೂಪಾ ಈಗಿನ ಜೋಯಿಡಾ ತಾಲ್ಲೂಕಿನ ಅವೇಡಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವೀರ್‌ಖೋಲ್ ಎಂಬಲ್ಲಿ ನಿರ್ಮಿಸಲಾಗಿದೆ.[೧೭೬] ಆಗಿನ ಸೂಪಾ ಪಟ್ಟಣದಲ್ಲಿ ಕಾಳಿ ನದಿ ಹಾಗೂ ಚಾಂದೇವಾಡಿ ಕಡೆಯಿಂದ ಹರಿದು ಬರುವ ಪಾಂಡರಿ ನದಿ ಮತ್ತು ನಾಗಿನಾಲಾದ ಸಂಗಮವಾಗುತ್ತಿತ್ತು. ಈ ಸಂಗಮದಲ್ಲಿ ಅಣೆಕಟ್ಟನ್ನು ನಿರ್ಮಿಸಿ ಸೂಪಾ ಪಟ್ಟಣವನ್ನು ಸಂಪೂರ್ಣವಾಗಿ ಮುಳುಗಡೆ ಮಾಡಲಾಗಿದೆ. ಕಾಳಿ ಮತ್ತು ಅದರ ಉಪನದಿಗಳ ಸಂಗಮ ಸ್ಥಾನವಾದ ಸೂಪಾ ಪಟ್ಟಣದಲ್ಲಿ ಅಣೆಕಟ್ಟನ್ನು ಕಟ್ಟಿ ಸೂಪಾ ಪಟ್ಟಣವನ್ನು ಮುಳುಗಡೆ ಮಾಡಿರುವುದರಿಂದ ಈ ಅಣೆಕಟ್ಟಿಗೆ ಸೂಪಾ ಅಣೆಕಟ್ಟು ಎಂದು ಕರೆಯಲಾಗುತ್ತಿದೆ.[೨೯] ಮೈಸೂರು ವಿದ್ಯುತ್ ನಿಗಮವು ಕಾಳಿ ಜಲವಿದ್ಯುತ್ ಅಭಿವೃದ್ಧಿಗಾಗಿ ಕಾಳಿ ನದಿಗೆ ಅಡ್ಡಲಾಗಿ ಕಟ್ಟಿರುವ ಪ್ರಥಮ ಅಣೆಕಟ್ಟು ಇದಾಗಿರುತ್ತದೆ.

ಸೂಪಾ ಅಣೆಕಟ್ಟನ್ನು ಹಿಂದುಸ್ಥಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್‌ರವರು ಟೆಂಡರ್ ಪಡೆದು ನಿರ್ಮಾಣ ಮಾಡಿದರು. ದಿನಾಂಕ ೨೯-೧೦-೧೯೭೩ ರಂದು ಭಾರತದ ಆಗಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಸೂಪಾದಲ್ಲಿ ಕಾಳಿ ಜಲವಿದ್ಯುತ್ ಯೋಜನೆಗೆ ಅಡಿಗಲ್ಲು ಹಾಕಿದರು. ಇದರ ಕಾಮಗಾರಿಯು

೧೯೭೪ರಲ್ಲಿ ಪ್ರಾರಂಭಗೊಂಡು ೧೯೮೩ರಲ್ಲಿ ಮುಕ್ತಾಯಗೊಂಡಿತು.[೧೭೭] ಈ ಅಣೆಕಟ್ಟನ್ನು ಮೂರು ಉಪಹಂತಗಳಲ್ಲಿ ಎತ್ತರಿಸಲಾಯಿತು. ಇದು ೭೦೫ ಮೀ ಹಾಗೂ ೯೪೦ ಮೀ. ಹೊಂದಿರುವ ೦೨ ಸ್ಯಾಡಲ್ ಡ್ಯಾಂಗಳನ್ನು ಹೊಂದಿದೆ.[೧೭೮] ಸೂಪಾ ಅಣೆಕಟ್ಟಿನ ಎತ್ತರ ೧೦೧ ಮೀಟರ್‌ಗಳು. ಕರ್ನಾಟಕದ ಅತ್ಯಂತ ಎತ್ತರದ (ಕಾಂಕ್ರೀಟ್) ಅಣೆಕಟ್ಟು ಸೂಪಾ ಅಣೆಕಟ್ಟು[೧೭೯] ಇದರ ಅಗಲ ೩೩೨ ಮೀಟರ್‌ಗಳು. ಇದು ೪೧೭೮ ಕ್ಯೂಸೆಕ್ಸ್ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ಜಲವಿಸ್ತಾರ ೧೨೨ ಚ.ಕಿ.ಮೀ. ಇದರ ಜಲಾನಯನ ಪ್ರದೇಶ ೧೦೫೭ ಚ.ಕಿ.ಮೀ. ನಷ್ಟು ವ್ಯಾಪಿಸಿದೆ.[೧೮೦]

ಸೂಪಾ ಜಲಾಶಯಕ್ಕೆ ಇನ್ನಷ್ಟು ನೀರಿನ ಒಳ ಹರಿವು ಮಾಡುವುದಕ್ಕಾಗಿ ಕುಂಬಾರವಾಡ ಅಣೆಕಟ್ಟನ್ನು (ಡಿಸೆಂಬರ್ ೧೯೭೯ ರಿಂದ ೧೨.೬.೧೯೮೫ ರವರೆಗೆ) ಕಟ್ಟಲಾಗಿದೆ. ಈ ಪ್ರದೇಶ ಸೂಪಾ ಜಲಾಶಯದಿಂದ ೩೩ ಕಿ.ಮೀ. ದೂರದಲ್ಲಿದೆ. ಇದು ಕುಂಬಾರವಾಡದಿಂದ ಸದಾಶಿವಗಢ ರಸ್ತೆಯಲ್ಲಿ ಸಾಗಿದಾಗ ಕುಂಡಲ್ ರಸ್ತೆಗೆ ತಿರುಗಿ ೬.೫. ಕಿ.ಮೀ. ಕ್ರಮಿಸಿದಾಗ ಘಟ್ಟವ್ ಹಳ್ಳಿಯ ಹತ್ತಿರ ನಿರ್ಮಾಣವಾಗಿದೆ. ಅಪ್ಪರ್ ಕಾನೇರಿ ನದಿಗೆ ಈ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದರ ಎತ್ತರ ೨೭ಮೀ. ಉದ್ದ ೧೬೩ಮೀ. ಇದರಲ್ಲಿ ೦.೫೫ ಟಿ.ಎಂ.ಸಿ. ನೀರು ಹಿಡಿದಿಡುವ ಸಾಮರ್ಥ್ಯವಿದೆ. ಇಲ್ಲಿಂದ ೦೩ ಕಿ.ಮೀ.(೩೧೮೧ಮೀ) ಸುರಂಗ ಮಾರ್ಗದ ಮುಖಾಂತರ ನಂತರ ತೆರೆದ ನಾಲೆಯ ಮುಖಾಂತರ ಸೂಪಾಕ್ಕೆ ನೀರು ಹರಿಸಲಾಗುತ್ತದೆ. ಮಳೆಗಾಲದಲ್ಲಿ ದಿನಾಲೂ ೩.೫೦೦ ಕ್ಯೂಸೆಕ್ಸ್ ನೀರು ಸೂಪಾ ಜಲಾಶಯಕ್ಕೆ ಹರಿದು ಬರುತ್ತದೆ. ವರ್ಷಕ್ಕೆ ೧೯ ಟಿ.ಎಂ.ಸಿ. ನೀರು ಈ ಕಾನೇರಿ ಡೈವರ್ಷನ್ ಡ್ಯಾಂನಿಂದ ಸೂಪಾಕ್ಕೆ ಹರಿದು ಬರುತ್ತದೆ.[೧೮೧] ೨೦೧೪ರವರೆಗೆ ಸೂಪಾ ಜಲಾಶಯವು ೧೯೯೪ ಹಾಗೂ ೨೦೦೬ರಲ್ಲಿ ೨ ಸಲ ಭರ್ತಿಯಾಗಿದೆ.[೧೮೨] ಈ ಜಲಾಶಯದಲ್ಲಿ ಪ್ರವಾಸೋದ್ಯಮ, ಕುಡಿಯುವ ನೀರು, ಮೀನುಗಾರಿಕೆ, ಕೃಷಿಗೆ ನೀರಾವರಿಗೆ ಅವಕಾಶ ಇರುವುದಿಲ್ಲ.[೧೮೩]

ಅಣೆಕಟ್ಟು ಕಾಮಗಾರಿ ನಡೆಯುವ ಸಂದರ್ಭದಲ್ಲಿ ಗಣೇಶನ ವಿಗ್ರಹ ದೊರೆತಿರುವುದರಿಂದ ಈಗ ಈ ಜಾಗಕ್ಕೆ ಗಣೇಶಗುಡಿ ಎಂದು ಹೆಸರಿಟ್ಟಿದ್ದಾರೆ.[೧೮೪] ಇಲ್ಲಿ ಸೂಪಾ ಅಣೆಕಟ್ಟಿಗೆ ಹೊಂದಿಕೊಂಡಂತೆ ಗಣೇಶಗುಡಿ ಜಲವಿದ್ಯುತ್ ಘಟಕವಿದೆ. ಇದನ್ನು ೧೯೮೯ರಲ್ಲಿ ಪ್ರಾರಂಭಿಸಲಾಯಿತು. ಇದು ೧೫*೧೦ ಮೀಟರ್‌ನ ೩ ಕ್ರೆಸ್ಟ್ ಗೇಟ್‌ಗಳನ್ನು ಹೊಂದಿದೆ. ಮುಖ್ಯವಾಗಿ ಈ ಅಣೆಕಟ್ಟಿನಿಂದ ೪೦ ಕಿ.ಮೀ. ದೂರದಲ್ಲಿರುವ ನಾಗಝುರಿ ಜಲವಿದ್ಯುದಾಗಾರಕ್ಕೆ ನೀರು ಪೂರೈಸಬೇಕಾಗುತ್ತದೆ. ಇಲ್ಲಿಂದ ನೀರನ್ನು ಬೊಮ್ಮನಹಳ್ಳಿ ಪಿಕ್ ಅಪ್ ಡ್ಯಾಂಗೆ ಹಾಗೇ ಹರಿಯ ಬಿಡಬಾರದೆಂದು ಇಲ್ಲಿ ೫೦ ಮೆ.ವ್ಯಾ. ಎರಡು ಘಟಕಗಳಿಂದ ವಾರ್ಷಿಕ ೪೫೦ ಮೆ.ವ್ಯಾ. ವಿದ್ಯುತ್ ಉತ್ಪತ್ತಿಯಾಗುತ್ತದೆ.[೧೮೫] ಜಲಾಶಯದ ನೀರಿನ ಮಟ್ಟ ೫೧೩.೫ ಮೀ. ಕೆಳಗೆ ಹೋದರೆ ವಿದ್ಯುತ್ ಉತ್ಪಾದನೆ ಮಾಡುವುದಿಲ್ಲ. ವಿದ್ಯುತ್‌ನ್ನು ಕೆ.ಪಿ.ಟಿ.ಸಿ.ಎಲ್.ಗೆ ಮಾರುತ್ತಾರೆ. ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿ ಆದಾಯ ಬರುತ್ತದೆ.[೧೮೬]

ಸೂಪಾ ಅಣೆಕಟ್ಟನ್ನು ಮೂರು ಉಪಹಂತಗಳಲ್ಲಿ ನಿರ್ಮಾಣ ಮಾಡಲಾಯಿತು. ಮೊದಲನೇಯ ಉಪಹಂತದಲ್ಲಿ ಅಣೆಕಟ್ಟನ್ನು ೫೦೩ ಮೀ ಎತ್ತರಕ್ಕೆ ನಿರ್ಮಿಸಿ ೮ ಗ್ರಾಮಗಳ ಮುಳುಗಡೆಯಾಗಿ ಜನರನ್ನು ಒಕ್ಕಲೆಬ್ಬಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಯಿತು. ಎರಡನೇ ಉಪಹಂತದಲ್ಲಿ ೫೩೩ ಮೀ ಎತ್ತರಕ್ಕೆ ಏರಿಸಿ ೧೪ ಗ್ರಾಮಗಳ ಮುಳುಗಡೆಯಾಗಿ ಜನರನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸಲಾಯಿತು. ಮೂರನೇ ಉಪಹಂತದಲ್ಲಿ ೫೬೫ ಮೀ. ಎತ್ತರಕ್ಕೆ ಏರಿಸಿ ೪ ಗ್ರಾಮಗಳನ್ನು ಮುಳುಗಡೆಗೊಳಿಸಿ ಜನರನ್ನು ಒಕ್ಕಲೆಬ್ಬಿಸಲಾಯಿತು.[೧೮೭] ಈ ಸಂದರ್ಭದಲ್ಲಿ ಎನ್.ಜಿ. ಜೋಶಿಯವರು ಕರ್ನಾಟಕ ವಿದ್ಯುತ್ ನಿಗಮ, ಸೂಪಾದ ಮುಖ್ಯ ಅಭಿಯಂತರರಾಗಿದ್ದರು. ಬಾಬುರಾಮ್‌ರವರು ಸೂಪಾ ಜಲಾಶಯ ಯೋಜನೆಯ ವಿಶೇಷ ಭೂ ಸ್ವಾಧೀನ ಅಧಿಕಾರಿಯಾಗಿದ್ದರು.[೧೮೮]

೨.೧೪. ಸೂಪಾ ಜಲಾಶಯದಿಂದ ಮುಳುಗಡೆಯಾದ ಭೂಮಿ

'ಸೂಪಾ ಅಣೆಕಟ್ಟು ಆರ್ಥಿಕ ದೃಷ್ಟಿಯಿಂದ ತುಂಬಾ ಉತ್ತಮ ಯೋಜನೆ, ಇಲ್ಲಿ ಮುಳುಗಡೆಯಿಂದ ಸಂತ್ರಸ್ತರಾಗುವುದು ಬಹಳ ಕಡಿಮೆ ಜನ, ಇಲ್ಲಿ ಫಲವತ್ತಾದ ಜಮೀನು ಇಲ್ಲ, ಇದು ಮ್ಯಾಂಗನೀಸ್ ಖನಿಜ ಭೂಮಿಯಾಗಿರುವುದರಿಂದ ನೀರು ಮೇಲೆ ಸಿಗುವುದಿಲ್ಲ, ನೀರಾವರಿ ಇಲ್ಲ, ವರ್ಷಕ್ಕೆ ಒಂದೇ ಬೆಳೆ' ಎಂದು ಇಕೊಲೋಜಿಕಲ್ ಸರ್ವೆ ವರದಿ ಮಾಡಿತ್ತು.[೧೮೯] ೧೯೮೧ ರಲ್ಲಿ ಸೂಪಾ ಅಣೆಕಟ್ಟು ಕೆಲಸ ಪೂರ್ಣಗೊಂಡಿತು. ಸೂಪಾ ಜಲಾಶಯದಿಂದ ೩೩,೨೦೦ ಎಕರೆ (೧೨.೩೦೦ ಹೆಕ್ಟೇರ್) ಮುಳುಗಡೆಯಾಯಿತು.[೧೯೦]

ಮುಳುಗಡೆಯಾದ ಒಟ್ಟು ಭೂಮಿ:[೧೯೧]

- ವ್ಯವಸಾಯ ಭೂಮಿ ಮುಳುಗಡೆ– ೫,೬೭೯ ಎಕರೆ
- ಖರಾಬ ಭೂಮಿ ಮುಳುಗಡೆ– ೧,೦೨೬ ಎಕರೆ
- ಅರಣ್ಯ ಭೂಮಿ ಮುಳುಗಡೆ– ೨೬,೫೬೫ ಎಕರೆ

ಮುಳುಗಡೆಯಾದ ಒಟ್ಟು ಗ್ರಾಮಗಳು:[೧೯೨]

- ಪೂರ್ತಿಯಾಗಿ ಮುಳುಗಡೆಯಾದ ಒಟ್ಟು ಗ್ರಾಮಗಳು – ೨೬
- ಭಾಗಶಃ ಮುಳುಗಡೆಯಾದ ಒಟ್ಟು ಗ್ರಾಮಗಳು– ೨೧
- ಒಟ್ಟಾರೆಯಾಗಿ ಮುಳುಗಡೆಯಾದ ಗ್ರಾಮಗಳು– ೪೭

ಮುಳುಗಡೆಯಾದ ಗ್ರಾಮಗಳ ಹೆಸರುಗಳು:[೧೯೩]

ಮೊದಲನೇಯ ಉಪಹಂತದಲ್ಲಿ – ಒಟ್ಟು ೮ ಗ್ರಾಮಗಳು. ಸೂಪಾ, ಕೊನಡಾ, ಅಂಬೇಲಿ, ಅಸಣಗಾಂವ, ಭಾಮರ್ಡೆ, ಕುಕಡಾಳ, ಜಾಮಗಾಳ ಹಾಗೂ ನಿಸ್ರೂರ.

ಎರಡನೇಯ ಉಪಹಂತದಲ್ಲಿ ಒಟ್ಟು ೧೪ ಗ್ರಾಮಗಳು. ವಿರ್ಜೋಲ, ಪಾಟೆ, ಮೈಸೋಡ, ದೊಂಗರವಾಡ, ಆಡಣಗಾಂವ, ಕೇವರ್ಲೆ, ಆಡುಳಿ, ಹಾತಕಾಂಬ, ಬಿರೋಡ, ಶಿರಗೂರೆ, ಬಾಂದೋಡ, ಕುಕ್ರೆ–ಕುರ್ವಾಡೆ, ಫಾವಣೆ ಹಾಗೂ ತಿಟವಾಳಿ.

ಮೂರನೇ ಉಪಹಂತದಲ್ಲಿ ಒಟ್ಟು ೪ ಗ್ರಾಮಗಳು. ಫನಸಖಂಡ, ಸುಲಾವಾಳಿ, ಖೊಡ್ಲಿ, ಹಾಗೂ ಬಾಪೇಲಿ.

ಮೂರನೇ ಉಪಹಂತದಲ್ಲಿ ಭಾಗಶಃ ಒಟ್ಟು **೨೧** ಗ್ರಾಮಗಳು ಮುಳುಗಡೆಯಾಗಿವೆ. ಅವೇಡಾ–ಪೋಪಳವಾಡಿ, ಎಲ್ಯೆ–ದಾಬೆ, ಕಾಮರೆ, ಚಾಂದೇವಾಡಿ, ಕುಣಗಿನಿ, ಬಾಜಾರಕೂಣಂಗ, ಆಸುಳ್ಳಿ, ದೇವಳಿ, ನಾಗೋಡಾ, ಸಮಜೋಯ್ಡ, ಕರಂಜೋಯ್ಡ, ಡೇರಿಯಾ, ವಿರಾಳ, ವೈನಿ, ಐವೊಳಿ, ಪಾಂಜೇಲಿ, ಕಾತೇಲಿ, ಕಳಂಬುಳ್ಳಿ, ಚಾಪೋಳಿ (ಕಲಸೈ), ಕೊನಪೇಟ ಹಾಗೂ ಜೋಯಿಡಾ.

ಮೊದಲನೇ ಉಪಹಂತದಲ್ಲಿ ೦೮ ಗ್ರಾಮಗಳು ಸಂಪೂರ್ಣ ಮುಳುಗಡೆಗೊಳ್ಳುವವು ಹಾಗೂ ೨ನೇ ಉಪಹಂತದ ಪರಿಣಾಮ ಆಗಬಹುದೆಂದು ೦೯ ಗ್ರಾಮಗಳು ಸೇರಿದಂತೆ ಒಟ್ಟು ೧೭ ಗ್ರಾಮಗಳ ಸ್ಥಳಾಂತರಕ್ಕೆ ಆದೇಶಿಸಲಾಯಿತು. ಎರಡನೇ ಉಪಹಂತದಲ್ಲಿ ೦೪ ಗ್ರಾಮ ಸಂಪೂರ್ಣ ಮುಳುಗಡೆಗೊಳ್ಳುವವು ಹಾಗೂ ಮೂರನೇ ಉಪಹಂತದಲ್ಲಿ ಎರಡು ಗ್ರಾಮಗಳು ಭಾಗಶಃ ಮುಳುಗಡೆಗೊಳ್ಳುವವು ಎಂದು ಒಟ್ಟು ೦೫ ಗ್ರಾಮಗಳ ಸ್ಥಳಾಂತರಕ್ಕೆ ಆದೇಶಿಸಲಾಯಿತು. ಮೂರನೇ ಉಪಹಂತದಲ್ಲಿ ೦೪ ಗ್ರಾಮಗಳು ಸಂಪೂರ್ಣ ಮುಳುಗಡೆ ಹಾಗೂ ೨೧ ಗ್ರಾಮಗಳ ಭೂಮಿಗಳು ಭಾಗಶಃ ಮುಳುಗಡೆಯಾಗುತ್ತವೆಂದು ಅಂದಾಜು ಮಾಡಲಾಯಿತು.[೯೪]

ಈ ಅಣೆಕಟ್ಟು ನಿಮಾಣದಿಂದಾಗಿ ನಾಗೋಡ–ಡಿಗ್ಗಿ, ಕ್ಯಾಸಲ್‌ರಾಕ್–ಡಿಗ್ಗಿ, ಜಗಲಬೇಟ–ಕ್ಯಾಸಲ್‌ರಾಕ್ ಈ ಮೂರು ಪಾಯಿಂಟ್‌ಗಳಲ್ಲಿ ರಸ್ತೆ ಮುಳುಗಡೆಯಾಗಿತ್ತು.[೯೫]

- ❖ ತೊಂದರೆಗೊಳಗಾದ ಕುಟುಂಬಗಳ ಸಂಖ್ಯೆ – ೧,೬೩೩[೯೬]
- ❖ ತೊಂದರೆಗೊಳಗಾದ ಒಟ್ಟು ಜನಸಂಖ್ಯೆ – ೮,೫೦೦[೯೭]

೨.೧೫. ಸೂಪಾ ಜಲಾಶಯ ನಿರ್ಮಾಣದಿಂದಾದ ಸ್ಥಳಾಂತರ

ಸ್ಥಳಾಂತರಗೊಂಡ ಕೃಷಿ ಕುಟುಂಬಗಳು	– ೬೯೬
ಕೃಷಿಯೇತರ ಕುಟುಂಬಗಳು	– ೩೮೦
ಕೂಲಿಕಾರ್ಮಿಕರ ಕುಟುಂಬಗಳು	– ೩೦೦
ಒಟ್ಟು ಕುಟುಂಬಗಳು	– **೧೩೭೬**[೯೮]

ಸೂಪಾ ಜಲಾಶಯ ಯೋಜನೆಯ ಮೂರು ಉಪಹಂತಗಳಲ್ಲಿ ಸ್ಥಳಾಂತರಕ್ಕೆ ಒಳಗಾದ ಗ್ರಾಮ ಹಾಗೂ ಕುಟುಂಬಗಳ ವಿವರ [೧೯೯]

ಉಪಹಂತ	ಮುಳುಗಡೆಯಾದ ಗ್ರಾಮಗಳು	ಸ್ಥಳಾಂತರಕ್ಕೆ ಒಳಗಾದ ಒಟ್ಟು ಗ್ರಾಮಗಳು	ಸಂತ್ರಸ್ತ ಕೃಷಿ ಕುಟುಂಬ	ಸಂತ್ರಸ್ತ ಕೃಷಿ ಕೂಲಿ ಕುಟುಂಬ	ಸಂತ್ರಸ್ತ ಕೃಷಿಯೇತರ ಕುಟುಂಬ	ಒಟ್ಟು
೧ನೇ	೦೮	೧೭	೪೨೨	೧೯೯	೩೭೮	೯೯೯
೨ನೇ	೧೪	೦೫	೭೮	೩೫	೦೧	೧೧೪
೩ನೇ	೦೪ ಸಂಪೂರ್ಣ, ೨೧ ಭಾಗಶಃ	೨೫	೩೫೬	೭೯	೦೩	೪೩೮
ಒಟ್ಟು	೨೬ ಸಂಪೂರ್ಣ, ೨೧ ಭಾಗಶಃ ಒಟ್ಟು ೪೭.	೪೭(ಭಾಗಶಃ ಹಾಗೂ ಸಂಪೂರ್ಣ)	೮೫೬	೩೧೩	೩೮೨	೧೫೫೧

ಇಲ್ಲಿ ಅಡಿಟಿಪ್ಪಣಿ ೩೨೦ ಮತ್ತು ೩೨೧ ರಲ್ಲಿನ Note on Rehabilitation works of Kalinadi Hydro Electric Project Stage-1ನ ವರದಿಯಲ್ಲಿ ಸ್ಥಳಾಂತರಗೊಂಡಂತಹ ಕೃಷಿ ಕುಟುಂಬ, ಕೃಷಿಯೇತರ ಕುಟುಂಬ ಹಾಗೂ ಕೂಲಿಕಾರ್ಮಿಕರ ಕುಟುಂಬಗಳ ಅಂಕಿ ಸಂಖ್ಯೆಯಲ್ಲಿ ವ್ಯತ್ಯಾಸವನ್ನು ಗುರುತಿಸಲಾಗಿದೆ.

೨.೧೬. ಸೂಪಾ ಅಣೆಕಟ್ಟು ಸಂತ್ರಸ್ತರ ಪುನರ್ವಸತಿ

ಸೂಪಾ ಜಲಾಶಯವನ್ನು ಮೂರು ಉಪಹಂತಗಳಲ್ಲಿ ನಿರ್ಮಾಣ ಮಾಡಲಾಗಿದೆ. ಅಲ್ಲಿನ ನಿವಾಸಿಗಳು ಮೂರು ಉಪಹಂತಗಳಲ್ಲಿ ಸ್ಥಳಾಂತರಗೊಂಡಿರುತ್ತಾರೆ. ಮೊದಲನೇ ಮತ್ತು ಎರಡನೇ ಉಪಹಂತಗಳಲ್ಲಿನ ಸಂತ್ರಸ್ತರನ್ನು ರಾಮನಗರ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಮೂರನೇ ಉಪಹಂತದಲ್ಲಿನ ಸಂತ್ರಸ್ತರಿಗಾಗಿ ಜೋಯಿಡಾ ಟೌನ್‌ಶಿಪ್ ಮತ್ತು ಕ್ಯಾಸೆಲ್‌ರಾಕ್ ಪುನರ್ವಸತಿ ಕೇಂದ್ರವನ್ನು ಗುರುತಿಸಲಾಗಿದೆ.

೨.೧೬.೧. ಮೊದಲನೇ ಮತ್ತು ಎರಡನೇ ಉಪಹಂತದ ಕಾಮಗಾರಿಯಡಿಯಲ್ಲಿ ಮುಳುಗಡೆಯಾದ ಸಂತ್ರಸ್ತರ ಪುನರ್ವಸತಿ ಕಾರ್ಯಕ್ರಮ

೨.೧೬.೧.೧. ಪುನರ್ವಸತಿ ಪ್ರದೇಶ ಆಯ್ಕೆ

೨೦ ಆಗಸ್ಟ್ ೧೯೭೩ ರಲ್ಲಿ ಸರ್ಕಾರಿ ಆದೇಶ ಸಂಖ್ಯೆ. PWD ೪೪ PPC ೭೩ ದಿನಾಂಕ ೦೧.೫.೧೯೭೪ರಂತೆ ಎರಡು ವರ್ಷದ ಅವಧಿಗೆ ಪುನರ್ವಸತಿ ಸಮಿತಿ ಅಧಿಕಾರಿಗಳನ್ನು ನೇಮಿಸಿ ಪುನರ್ವಸತಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು

ಸಂತ್ರಸ್ತರ ಪುನರ್ವಸತಿ ಸಮಸ್ಯೆಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿತ್ತು. ಅದರಂತೆ ಸೂಪಾ, ನಾಗೋಡ, ಅಸು ಹಾಗೂ ಕ್ಯಾಸಲ್‌ರಾಕ್ ಎಂಬ ಊರುಗಳಲ್ಲಿ ಸಂತ್ರಸ್ತರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಸಭೆ ಕರೆಯಲಾಯಿತು. ಸಂತ್ರಸ್ತರು ತಮಗೆ ನೀರಾವರಿ ಸೌಲಭ್ಯ ಹೊಂದಿದ ಸಾಕಷ್ಟು ವ್ಯವಸಾಯ ಭೂಮಿ ನೀಡಬೇಕೆಂಬ ಬೇಡಿಕೆ ಸಲ್ಲಿಸಿದರು. ಇದಕ್ಕಾಗಿ ಖಾಸಗಿ ಭೂಮಿ ಸಾಕಾಗುವುದಿಲ್ಲ, ಅರಣ್ಯ ಭೂಮಿಯೇ ಬೇಕು ಎಂದು ಸರ್ಕಾರ ನಿರ್ಧರಿಸಿತು.[೨೦೦] ಅರಣ್ಯ ಇಲಾಖೆಯು ಈ ಕೆಳಗಿನ ಜಾಗಗಳನ್ನು ಸೂಚಿಸಿತು:

೧. ಚಾಪೋಲಿ ಬ್ಲಾಕ್- ೬೦೦೦ಎಕರೆ
೨. ಖಾನಾಪೂರದ ಹೆಮ್ಮಡಗ ಬ್ಲಾಕ್- ೫೦೦೦ಎಕರೆ
೩. ಭರ್ಚಿ ಬ್ಲಾಕ್- ೧೩,೦೦೦ ಎಕರೆ
೪. ಕುಂಬಾರವಾಡ-ಉಳವಿ ಬ್ಲಾಕ್- ೧೮೭೫ ಎಕರೆ
೫. ಅಂಕೋಲಾದ ರಾಮನಗಲ್ಲಿ ಬ್ಲಾಕ್- ೧೫೦೦ಎಕರೆ

ಸೂಪಾ ಅಣೆಕಟ್ಟಿನ ಕೆಳಪಾತ್ರದಲ್ಲಿರುವ ಭರ್ಚಿ ಪ್ರದೇಶದಲ್ಲಿ ಸೂಪಾ ಸಂತ್ರಸ್ತರು ಪುನರ್ವಸತಿ ಕೇಂದ್ರದ ಬೇಡಿಕೆಯಿಟ್ಟಿದ್ದರು. 'ಅಲ್ಲಿ ಭರ್ಚಿ ನಾಲೆಯು ವರ್ಷದ ಎಂಟು ತಿಂಗಳಲ್ಲಿ ಹರಿಯುತ್ತದೆ. ವ್ಯವಸಾಯಕ್ಕೆ, ಪಶುಸಂಗೋಪನೆಗೆ ಯೋಗ್ಯ ಭೂಮಿಯಿದೆ. ದಾಂಡೇಲಿ ಪಟ್ಟಣ ಹತ್ತಿರದಲ್ಲಿರುವುದರಿಂದ ಉದ್ಯೋಗಕ್ಕೆ ಹೆಚ್ಚಿನ ಅವಕಾಶವಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಆಗುತ್ತದೆ' ಎಂದು ಸಂತ್ರಸ್ತರು ಆಶಿಸಿದ್ದರು. 'ಇದು ದಾಂಡೇಲಿ ಅರಣ್ಯ ವಲಯಕ್ಕೆ ಬರುವ ಪ್ರದೇಶವಾಗಿದೆ. ಇಲ್ಲಿ ಸಾಗುವಾನಿ, ಬೀಟೆ ಹೇರಳವಾಗಿ ಬೆಳೆಯುತ್ತದೆ. ಇದರಿಂದ ಸರ್ಕಾರಕ್ಕೆ ವರ್ಷಕ್ಕೆ ಎಕರೆಗೆ ಕೋಟಿಗಟ್ಟಲೆ ಆದಾಯ ಬರುತ್ತಿದೆ. ಮನುಷ್ಯ ವ್ಯವಸಾಯ ಮಾಡಿದರೆ ಒಂದು ವರ್ಷಕ್ಕೆ ಒಂದು ಲಕ್ಷ ಆದಾಯ ಗಳಿಸಬಹುದು. ಈ ಅರಣ್ಯದ ಉತ್ಪನ್ನದಿಂದ ರಕ್ಷಣೆ, ರೈಲ್ವೇ, ಕೈಗಾರಿಕೆ ಇವುಗಳಿಗೆಲ್ಲಾ ಸಾಕಷ್ಟು ಅನುಕೂಲ ಇದೆ. ಈಗಾಗಲೇ ವೆಸ್ಟ್ ಕೋಸ್ಟ್ ಪೇಪರ್ ಮಿಲ್, ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ದಿ ಚಿಪ್ ಬೋರ್ಡ ಫ್ಯಾಕ್ಟರಿ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದನ್ನು ಕೊಡಲಾಗುವುದಿಲ್ಲ' ಎಂದು ದಾಂಡೇಲಿ ವಲಯ ಅರಣ್ಯ ಸಂರಕ್ಷಣಾ ಅಧಿಕಾರಿಯವರು ಪ್ರತಿಕ್ರಿಯಿಸಿದರು. 'ಭರ್ಚಿಗೆ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೇ ಸಂಪರ್ಕ ಇರುವುದಿಲ್ಲ. ಅದಲ್ಲದೇ ಇಲ್ಲಿ ಕೇವಲ ಎಂಟು ತಿಂಗಳು ನೀರು ವ್ಯವಸ್ಥೆ ಇರುವುದರಿಂದ ಉಳಿದ ತಿಂಗಳು ರೈತರಿಗೆ ತೊಂದರೆಯಾಗುತ್ತದೆ' ಎಂದು ಅರಣ್ಯ ಇಲಾಖೆಯವರು ಹೇಳಿದ್ದರಿಂದ ಆ ಪ್ರದೇಶವನ್ನು ಕೈ ಬಿಡಲಾಯಿತು.[೨೦೧]

ಈ ಎಲ್ಲಾ ಪ್ರದೇಶಗಳ ಮಣ್ಣಿನ ಪರೀಕ್ಷೆ, ಮಣ್ಣಿನ ಫಲವತ್ತತೆಯ ಬಗ್ಗೆ ತಜ್ಞರ ಅಭಿಪ್ರಾಯ, ದೊರೆಯಬಹುದಾದ ನೀರಾವರಿ ಸೌಲಭ್ಯ ಈ ಎಲ್ಲಾ ವಿಚಾರಗಳ ಬಗ್ಗೆ ಪುನರ್ವಸತಿ ಸಮಿತಿಯು ಆರು ಬಾರಿ ಭೇಟಿಯಾದ ಮೇಲೆ ದಿನಾಂಕ ೨೫.೩.೧೯೭೪ರಂದು ಸರ್ಕಾರಕ್ಕೆ ಪರಿಗಣಿಸಲು ಶಿಫಾರಸ್ಸು ಮಾಡಿತು. ಆದಾಗಲೇ

ಸರ್ಕಾರ ಸಂತ್ರಸ್ತರ ಸಮಸ್ಯೆಗಳನ್ನು ಪರಿಗಣಿಸಲು ಒಂದು ಕ್ಯಾಬಿನೆಟ್ ಉಪಸಮಿತಿಯನ್ನು ರಚಿಸಿತು. ಈ ಉಪಸಮಿತಿ ಐದು ಬಾರಿ ಸಭೆ ಸೇರಿದ ಮೇಲೆ ಲೋಂಡಾ ಕ್ರಾಸ್ ಹತ್ತಿರ ಇರುವ ಖಾನಾಪೂರ ತಾಲ್ಲೂಕಿನ ಚಾಪೋಲಿ ಬ್ಲಾಕ್‌ನ್ನು ಸಂತ್ರಸ್ತರ ಪುನರ್ವಸತಿಗಾಗಿ ಆಯ್ಕೆ ಮಾಡಿತು. ನಂತರ ಚಾಪೋಲಿ ಬ್ಲಾಕ್‌ನ ಭೂಮಿ ಯೋಗ್ಯವಾಗಿದೆಯಾ ಎಂದು ಪರೀಕ್ಷಿಸಲಾಯಿತು. 'ಇದು ಖಾನಾಪೂರ ತಾಲ್ಲೂಕಿನ ಮೂಲೆಯಲ್ಲಿದೆ ಹಾಗೂ ಅಲ್ಲಿ ಭತ್ತ ಬೆಳೆಯಲು ನೀರಾವರಿ ಮೂಲಗಳಿಲ್ಲ. ಒಣ ಬೆಳೆಗಳನ್ನು ಮಾತ್ರಾ ಬೆಳೆಯಬಹುದು. ಮೆಣಸು, ರಾಗಿ ಇತ್ಯಾದಿ ಬೆಳೆಯಬಹುದು. ಕರ್ನಾಟಕ ಜಲವಿದ್ಯುತ್ ಯೋಜನೆಯ ಸಂತ್ರಸ್ತರಿಗೆ ಇದು ಸೂಕ್ತವಾದುದಲ್ಲ'[೨೦೨] ಎಂದು ಸೂಚಿಸಿದರು.

ಆದರೂ ಕ್ಯಾಬಿನೆಟ್ ಉಪಸಮಿತಿ ಇದನ್ನು ಸೂಪಾ ಜಲಾಶಯದ ಒಂದನೇ ಹಾಗೂ ಎರಡನೇ ಉಪಹಂತದ ಸಂತ್ರಸ್ತರ ಪುನರ್ವಸತಿ ಕೇಂದ್ರವಾಗಿ ಆಯ್ಕೆ ಮಾಡಿತು. ಇದನ್ನು ಸೂಪಾ ಜಲಾಶಯದ ಮೊದಲ ಹಾಗೂ ಎರಡನೇಯ ಉಪಹಂತದ ಸಂತ್ರಸ್ತರ ಪುನರ್ವಸತಿ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲು ಅವರು ನೀಡಿರುವ ಕಾರಣಗಳು:[೨೦೩]

೧) ಮೊದಲ ಹಂತದಲ್ಲಿ ಮುಳುಗಡೆಯಾದ ೦೮ ಗ್ರಾಮಗಳ ಪ್ರತಿನಿಧಿಗಳು ಇಲ್ಲಿ ಪುನರ್ವಸತಿಗೊಳ್ಳಲು ಒಲವು ತೋರಿಸಿದ್ದಾರೆ.

೨) ರಾಷ್ಟ್ರೀಯ ಹೆದ್ದಾರಿ ೪ಎ ಮತ್ತು ಬೆಳಗಾಂ ಖಾನಾಪೂರ ರಸ್ತೆಯ ಇಕ್ಕೆಲಗಳಲ್ಲಿ ೪೦೦ ಎಕರೆ ಸಮತಟ್ಟು ಭೂಮಿ ದೊರೆತಿದೆ.

೩) ಅರಣ್ಯ ಭೂಮಿ ಹಾಗೂ ಸಂತ್ರಸ್ತರ ಕಾಲೋನಿಯ ಸುತ್ತಲೂ ೦೨ ಕಿ.ಮೀ ದೂರದಲ್ಲಿ ಲೋಂಡಾ ರೈಲು ಜಂಕ್ಷನ್ ಹುಬ್ಬಳ್ಳಿ ಮೀರಜ್ ರಸ್ತೆ ಇದೆ.

೪) ಪಾಂಡರಿ ನದಿ ಹತ್ತಿರ ಇದೆ.

೫) ಕೃಷಿಯೋಗ್ಯ ಫಲವತ್ತಾದ ಭೂಮಿಯಿದೆ.

೬) ಮುಖ್ಯ ವಿದ್ಯುತ್ ತಂತಿ ಲೋಂಡಾ ಕ್ರಾಸ್ ಮೇಲೆ ಹಾದು ಹೋಗುವುದರಿಂದ ವಿದ್ಯುತ್ ಕೊರತೆ ಬರುವುದಿಲ್ಲ.

೭) ಹೆಂಚು, ಇಟ್ಟಿಗೆ, ಮರ ಆಧಾರಿತ ಕೈಗಾರಿಕೆ ಅಭಿವೃದ್ಧಿ, ಹಾಗೂ ಅರಣ್ಯ ಕಿರು ಉತ್ಪನ್ನ ಸಂಗ್ರಹಕ್ಕೆ ಅನುಕೂಲ ಇದೆ.

೮) ಇದು ಮುಳುಗಡೆ ಪ್ರದೇಶದಿಂದ ಕೇವಲ ೧೫-೨೦ ಕಿ. ಮೀ ದೂರದಲ್ಲಿದೆ.

೯) ಶಾಲೆ, ಪಾರ್ಕುಗಳಿಗೆ ಬೇಕಾದಷ್ಟು ಜಾಗ ಇದೆ.

೧೦) ಪಾಂಡರಿ ನದಿ ಹತ್ತಿರ ಇರುವುದರಿಂದ ತೋಟಗಾರಿಕಾ ಅಭಿವೃದ್ಧಿ, ಬೀಜ ವಂಶವೃದ್ಧಿಗೆ ಅನುಕೂಲವಾಗುವುದು.

೧೧) ಗೋವಾ, ಬೆಳಗಾಂ, ಧಾರವಾಡ, ಹುಬ್ಬಳ್ಳಿ, ಕಾರವಾರ ಈ ಎಲ್ಲಾ ಕಡೆಗೆ ಬಸ್ಸಿನ ಸೌಕರ್ಯಗಳಿವೆ.

೧೯೭೦ರಲ್ಲಿ ಸೂಪಾ ಅಣೆಕಟ್ಟು ನಿರ್ಮಾಣದಿಂದಾಗಿ ಮುಳುಗಡೆಯಾಗಲಿರುವ ಗ್ರಾಮಗಳ ಭೂಸ್ವಾಧೀನ ಮಾಡಿಕೊಳ್ಳಲಾಯಿತು. ಸರ್ಕಾರಿ ಆದೇಶ ಸಂಖ್ಯೆ. PWD ೨೧೨ PPC ೭೪ ದಿನಾಂಕ ೦೬-೦೨-೧೯೭೬ ಪುನರ್ವಸತಿಗಾಗಿ ವಿಶೇಷ ತಹಶೀಲ್ದಾರರನ್ನು ನೇಮಿಸಲಾಯಿತು. ಕಛೇರಿಯನ್ನು ಮೊದಲು ದಾಂಡೇಲಿಯಲ್ಲಿ ಪ್ರಾರಂಭಿಸಿ ನಂತರ ಲೋಂಡಾಕ್ಕೆ ಸ್ಥಳಾಂತರಿಸಲಾಯಿತು.[೨೦೪] ರಾಮನಗರ ಪುನರ್ವಸತಿ ಕೇಂದ್ರವನ್ನು ಗುರುತಿಸಿ, ಲೋಂಡಾದ ಹತ್ತಿರ ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸಿ ಸಂತ್ರಸ್ತರನ್ನು ಸ್ಥಳಾಂತರಿಸಲು ಪ್ರಯತ್ನಿಸಲಾಯಿತು. ಆದರೆ ಸಂತ್ರಸ್ತರ ಭೂಮಿ ಇನ್ನೂ ಮುಳುಗಡೆಯಾಗಿರದೇ ಇರುವುದು, ರಾಮನಗರದಲ್ಲಿ ಅವರಿಗೆ ಬದಲಿ ಉದ್ಯೋಗ ಗೊತ್ತಿರದೇ ಇರುವುದು ಹಾಗೂ ರಾಮನಗರದಲ್ಲಿ ನೀಡಿರುವಂತಹ ಭೂಮಿ ಸದ್ಯಕ್ಕೆ ವ್ಯವಸಾಯಕ್ಕೆ ಅನುಕೂಲಕರವಾಗಿರದ ಕಾರಣ ಅಂದರೆ ಬೊಡ್ಡೆ ತಗೆಯುವ ಕೆಲಸ, ಸಮತಟ್ಟು ಮಾಡುವುದು, ಎಲ್ಲೆ ಗುರುತಿಸುವುದು ಬಾಕಿ ಇದ್ದುದರಿಂದ ೧೯೭೬ರಲ್ಲಿ ಸಂತ್ರಸ್ತರು ಅಲ್ಲಿಗೆ ಹೋಗಿರಲಿಲ್ಲ. ಸಂತ್ರಸ್ತರು ತಮ್ಮ ಗ್ರಾಮ, ಜಮೀನಿನಲ್ಲಿಯೇ ಉಳಿದುಕೊಂಡರು. ೧೯೭೬ರ ಮಳೆಗಾಲದಲ್ಲಿ ಕಾಫರ್ ಡ್ಯಾಂನಿಂದಾಗಿ ಸೂಪಾ ಪಟ್ಟಣ ತಾತ್ಕಾಲಿಕ ಮುಳುಗಡೆಯಾಗುವುದರಿಂದ ಸೂಪಾ ಪಟ್ಟಣದ ೧೦೦ ರೈತ ಕುಟುಂಬ, ೨೭ ಕೃಷಿಯೇತರ ಕುಟುಂಬಗಳಿಗೆ ಸೂಪಾದ ಎತ್ತರ ಪ್ರದೇಶದಲ್ಲಿ ತಾತ್ಕಾಲಿಕ ಶೀಟಿನ ಮನೆಗಳನ್ನು ನಿರ್ಮಾಣ ಮಾಡಲಾಯಿತು. ಅಂಬೇಲಿ, ಕೊನಡಾ, ಸೂಪಾ ೧೯೮೦ರ ಮಳೆಗಾಲದಲ್ಲಿ ಮುಳುಗಡೆಯಾಗಲಿರುವ ಕಾರಣ ನಿರ್ವಸಿತರಿಗಾಗಿ ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸಿಕೊಡಲಾಗಿತ್ತು.[೨೦೫] ಮಳೆಗಾಲದಲ್ಲಿ ಸೂಪಾದ ಕಾಡಿನ ಎತ್ತರ ಪ್ರದೇಶಕ್ಕೆ ಬಂದು ತಾತ್ಕಾಲಿಕ ಶೆಡ್ಡುಗಳಲ್ಲಿ ವಾಸವಿದ್ದು ಮಳೆಗಾಲ ಮುಗಿದ ಮೇಲೆ ತಮ್ಮ ಗ್ರಾಮಗಳಿಗೆ ವಾಪಸ್ಸಾಗುತ್ತಿದ್ದರು. ಅಣೆಕಟ್ಟು ಕೆಲಸ ಸಂಪೂರ್ಣಗೊಳ್ಳುತ್ತಿದ್ದರೂ ಜನರು ಸ್ಥಳಾಂತರಗೊಳ್ಳಲಿಲ್ಲ.[೨೦೬] ಕೊನೆಗೆ ಮಾರ್ಚ್ ೩೧-೧೯೮೧ರ ಒಳಗೆ ಸ್ಥಳಾಂತರ ಆಗುವಂತೆ ಕ.ವಿ.ನಿ.ನಿ.ದಿಂದ ಎಲ್ಲರಿಗೂ ವೈಯಕ್ತಿಕ ನೋಟೀಸ್ ಕೊಡಲಾಯಿತು. ಪುನರ್ವಸತಿ ಕೇಂದ್ರಕ್ಕೆ ಸಂತ್ರಸ್ತರ ಸಾಮಾನುಗಳನ್ನು ಸಾಗಿಸಲು ಸರ್ಕಾರದಿಂದ ಐದು ಗಾಡಿಗಳನ್ನು ಕೊಡಲಾಯಿತು. ಆದರೂ ಇನ್ನೂ ಸಂತ್ರಸ್ತರು ಸ್ಥಳಾಂತರ ಆಗದೇ ಇರುವುದರಿಂದ ಜಲಾಶಯದ ನೀರು ತುಂಬಿ ಪ್ರಾಣಹಾನಿ ಆಗಬಾರದು ಎನ್ನುವ ದೃಷ್ಟಿಯಿಂದ ಕ.ವಿ.ನಿ.ನಿ.ದ ಅಧಿಕಾರಿಗಳು ಪೋಲೀಸ್ ಬಲಪ್ರಯೋಗವನ್ನು ಉಪಯೋಗಿಸಿ ಸಂತ್ರಸ್ತರನ್ನು ಸ್ಥಳಾಂತರಿಸಿದರು.ಮನೆಯ ಸಾಮಾನುಗಳನ್ನೆಲ್ಲಾ ಬೀದಿಗೆ ಬಿಸಾಡಿದರು. ಈ ಸಂದರ್ಭದಲ್ಲಿ ಕೆಲವರ ಮೇಲೆ ದೈಹಿಕ ಹಲ್ಲೆ ಕೂಡ ನಡೆಸಲಾಯಿತು. ೧೯೮೩ರಲ್ಲಿ ಅಣೆಕಟ್ಟಿನ ಕೆಲಸ ಪೂರ್ತಿಯಾಗಿ ಜಲಾಶಯ ತುಂಬಿದರೂ ಕೆಲವು ಸಂತ್ರಸ್ತರು ತಮ್ಮ ಜಮೀನು ಬಿಟ್ಟು ಕದಲಲಿಲ್ಲ. ನೀರು ಹರಿದು ಬಂದ ಕಾರಣ ಭತ್ತದ ಕಟಾವು ಮಾಡುತ್ತಿದ್ದ ಜನರು ತಮ್ಮ ಕೈಗೆ ಸಿಕ್ಕ ಸಾಮಾನುಗಳನ್ನು ಹಿಡಿದುಕೊಂಡು ಓಡಿ

ಬಂದರು. ಪೋಲೀಸ್ ಅಧಿಕಾರಿಗಳು ಸಂತ್ರಸ್ತರೊಬ್ಬರ ಐವತ್ತು ಚೀಲ ಭತ್ತವನ್ನು ಪೋಲೀಸ್ ಗಾಡಿಯಲ್ಲಿ ಹಾಕಿಕೊಂಡು ತಮ್ಮ ಮನೆಗೆ ತೆಗೆದುಕೊಂಡು ಹೋಗಿದ್ದಾರೆ.[೨೦೭]

ಸೂಪಾ ಜಲಾಶಯ ಯೋಜನೆಯಡಿಯಲ್ಲಿ ಒಟ್ಟು ೧೫೫೧ ಕುಟುಂಬಗಳಿಗೆ ಪರಿಣಾಮ ಬೀರಿದ್ದು, ೧೩೭೬ ಕುಟುಂಬಗಳ ಮನೆ ಹಾಗೂ ಭೂಮಿ ಸಂಪೂರ್ಣ ಮುಳುಗಡೆಗೆ ಒಳಗಾಗಿರುತ್ತದೆ. ೦೬ ಗ್ರಾಮಗಳ ೧೧೪ ಕುಟುಂಬಗಳು ಅಂದರೆ ಫಾವ್‌ನೋ, ಬಾಂದೋಡಾ, ಶಿರ್ಗುರೆ, ಕುಕ್ರೆ-ಕುರುವಾಡೆ, ತಿಟ್‌ವಳ್ಳಿ, ಹಾಗೂ ಖೊಡ್ಲಿ ಭಾಗಶಃ ಎರಡನೇ ಹಂತದ ಮುಳುಗಡೆಯಾಗಿ ೧೯೮೩ರ ಮೇ ತಿಂಗಳಲ್ಲಿ ಸ್ಥಳಾಂತರಗೊಂಡರು. ಮೊದಲನೇ ಹಾಗೂ ಎರಡನೇ ಹಂತದ ಮುಳುಗಡೆಯ ಸಂತ್ರಸ್ತರಿಗಾಗಿ ಚಾಪೋಲಿ ಬ್ಲಾಕ್‌ನ ರಾಮನಗರ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ಹಾಗೂ ಮೂರನೇ ಉಪಹಂತದ ಮುಳುಗಡೆಯ ೪೩೮ ಸಂತ್ರಸ್ತರಲ್ಲಿ ೨೬೩ ಸಂತ್ರಸ್ತ ಕುಟುಂಬಗಳು ಮನೆ ಹಾಗೂ ಜಮೀನನ್ನು ಕಳೆದುಕೊಳ್ಳುವುದರಿಂದ ಅವರನ್ನು ಸ್ಥಳಾಂತರಿಸಲು ನಿರ್ಧರಿಸಲಾಯಿತು. ಹಾಗೂ ಇವರಿಗೆ ಪುನರ್ವಸತಿ ಸಹಾಯ ಧನ ಹಾಗೂ ಒಂದು ಮನೆ ನಿವೇಶನವನ್ನು ೨೩.೧೨.೧೯೮೫ರ ಸರ್ಕಾರಿ ಆದೇಶದಂತೆ ನೀಡಲಾಯಿತು.[೨೦೮]

೨.೧೬.೧.೨. ರಾಜ್ಯದ ಎಲ್ಲಾ ರೀತಿಯ ಯೋಜನಾ ಸಂತ್ರಸ್ತರಿಗೆ ಪರಿಹಾರ ನೀತಿ.

ಕಾಳಿ ಜಲವಿದ್ಯುತ್ ಯೋಜನೆಯ ನಿರ್ಮಾಣದ ಅವಧಿಯಲ್ಲಿ ಒಂದು ರಾಷ್ಟ್ರೀಯ ಪುನರ್ವಸತಿ ಯೋಜನೆ ಇಲ್ಲವಾಗಿತ್ತು. ಕರ್ನಾಟಕ ಭೂ ಸ್ವಾಧೀನ ಕಾಯಿದೆ, ೧೯೬೪ರ ಪ್ರಕಾರ ಕರ್ನಾಟಕ ಸರ್ಕಾರದ ಆದೇಶ GO. PWD ೨೮೨ PPC /85, B're dtd ೨೩.೧೨.೧೯೮೫ ರಲ್ಲಿ ರಾಜ್ಯದ ಎಲ್ಲಾ ಯೋಜನೆಗಳ ಸಂತ್ರಸ್ತರಿಗೆ ಈ ಕೆಳಗಿನ ಪರಿಹಾರಗಳನ್ನು ನೀಡಲಾಗುವುದಾಗಿ ನಿರ್ಧರಿಸಲಾತ್ತು.[೨೦೯]

೧. ಭೂಮಿ ನೀಡುವುದು.

(i) ಸಮೀಪದಲ್ಲಿ ಎಷ್ಟು ಭೂಮಿ ಸಿಗುತ್ತೋ ಅಷ್ಟರಲ್ಲಿ ಪುನರ್ವಸತಿಗಾಗಿ ಭೂಮಿಯನ್ನು ಒದಗಿಸಲಾಗುವುದು.

(ii) ನೀರಾವರಿ ಯೋಜನೆಗಾಗಿ ಪ್ರದೇಶ ಸ್ವಾಧೀನಪಡಿಸಿದ್ದರೆ:

(ಅ) ಸಂತ್ರಸ್ತರಿಗೆ ಒಣ ಭೂಮಿಯನ್ನು ನೀರಾವರಿ ಮಾಡಿಕೊಡಲಾಗುವುದು.

(ಆ) ಯೋಜನಾ ಪ್ರದೇಶದ ಪರಿಧಿಯಲ್ಲಿಯೇ ಸಂತ್ರಸ್ತರಿಗೆ ಪರ್ಯಾಯ ಭೂಮಿ ನೀಡಲು ಪಡೆದುಕೊಳ್ಳಲಾಗುವುದು.

೨. ಮನೆ ಕಳೆದುಕೊಂಡವರಿಗೆಲ್ಲಾ ಒಂದೇ ಸ್ಥಳದಲ್ಲಿ ಇರುವಂತೆ ಯೋಜನೆಯ ಸಮೀಪದಲ್ಲೇ ಹೊಸ ಟೌನ್‌ಶಿಪ್ ಕಟ್ಟಿ ಕೊಡುವುದು. ಸಂತ್ರಸ್ತರಿಗೆ ಕೇವಲ ಮನೆ ಪ್ಲಾಟುಗಳನ್ನು ಕೊಡಲಾಗುತ್ತದೆ. ಪರಿಹಾರ ಧನದಲ್ಲಿ ಅಥವಾ ಅವರ ಹಣದಲ್ಲಿ ಅವರೇ ಮನೆ ಕಟ್ಟಿಕೊಳ್ಳಬೇಕಾಗುತ್ತದೆ. ಸಂತ್ರಸ್ತರ ಕುಟುಂಬದ ಗಾತ್ರ ಹಾಗೂ ಯಾವ ರೀತಿಯ

ಉದ್ಯೋಗ ಹೊಂದಿದ್ದರು ಎನ್ನುವುದನ್ನು ಪರಿಗಣಿಸಿ ಪ್ಲಾಟುಗಳನ್ನು ಕೊಡಲಾಗುವುದು. ಬಹು ಮುಖ್ಯವಾದ ಸೌಕರ್ಯಗಳಾದ ಶಾಲೆ, ಆಸ್ಪತ್ರೆ ಇತ್ಯಾದಿ ಈ ಟೌನ್‌ಶಿಪ್‌ಗಳಲ್ಲಿ ಸರ್ಕಾರ ಒದಗಿಸಿಕೊಡಬೇಕು.

೩. ಪರ್ಯಾಯ ಭೂಮಿ ದೊರೆಯದೇ ಇದ್ದರೆ ಎಲ್ಲಾ ನೀರಾವರಿ, ಜಲಾಶಯ, ಕಾಲುವೆ ಸಂತ್ರಸ್ತರಿಗೆ ಈ ಕೆಳಗಿನಂತೆ ಪುನರ್ವಸತಿ ಪರಿಹಾರ ಧನ ಕೊಡಬೇಕು.

(i) ೦೫ ಎಕರೆಗಿಂತ ಹೆಚ್ಚಿನ ಭೂಮಿ ಕಳೆದುಕೊಂಡವರಿಗೆ ೩೫,೦೦೦ರೂ/ ಕುಟುಂಬ.

(ii) ೧-೫ ಎಕರೆ ಭೂಮಿ ಕಳೆದುಕೊಂಡವರಿಗೆ ೨೦,೦೦೦ ರೂ/ ಕುಟುಂಬ.

(iii) ೦-೧ ಎಕರೆ ಭೂಮಿ ಕಳೆದುಕೊಂಡವರಿಗೆ ೧೫,೦೦೦ ರೂ/ ಕುಟುಂಬ.

(iv) ಮುಳುಗಡೆ ಪ್ರದೇಶದಲ್ಲಿದ್ದ ಕೃಷಿಕಾರ್ಮಿಕರು, ಸಣ್ಣವ್ಯಾಪಾರಸ್ಥರು, ಕರಕುಶಲಕರ್ಮಿಗಳು ಇವರಿಗೆ-೧೦,೦೦೦/ ಕುಟುಂಬ

೪. ಸಂತ್ರಸ್ತರ ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗಾವಕಾಶ ನೀಡಲಾಗುವುದು.

೫. ಪರಿಹಾಧನ ಕೊಡಲು ಭೂಸ್ವಾಧೀನ ಕಾಯಿದೆ ೪(೧) ಕಲಮು ರ ಪ್ರಕಾರ ಕೊನೆ ದಿನವಾಗಿರುತ್ತದೆ.

೬. ಸಂತ್ರಸ್ತರಿಗೆ ಪರಿಹಾರ ಧನವನ್ನು ಸಂಬಂಧಪಟ್ಟ ಉಪವಿಭಾಗಾಧಿಕಾರಿ ಅಥವಾ ಭೂಸ್ವಾಧೀನಾಧಿಕಾರಿ ಇವರ ಖಾತೆಗೆ ಜಮಾ ಆಗುವಂತೆ ಸಂದಾಯ ಮಾಡಲಾಗುವುದು.

೨.೧೬.೧.೩. ರಾಜ್ಯದ ಅಣೆಕಟ್ಟು ಸಂತ್ರಸ್ತರ ಪುನರ್ವಸತಿ ಯೋಜನೆ

ರಾಷ್ಟ್ರೀಯ ಪುನರ್ವಸತಿ ಯೋಜನೆ ಇರದ ಕಾರಣ ಕರ್ನಾಟಕ ಸರ್ಕಾರವು 'ಅಣೆಕಟ್ಟು ಸಂತ್ರಸ್ತರ ಪುನರ್ವಸತಿ'ಗಾಗಿ ಒಂದು ಯೋಜನೆಯನ್ನು ರೂಪಿಸಿತು. ಅದರ ಹೆಸರು **'ನೀರಾವರಿ ಹಾಗೂ ವಿದ್ಯುತ್ ಯೋಜನೆಗಳಿಂದ ಸಂತ್ರಸ್ತರಾದವರಿಗೆ ಕರ್ನಾಟಕ ಸರ್ಕಾರದ ಪುನರ್ವಸತಿ ಪ್ಯಾಕೇಜ್'**. ಅದರಂತೆ ಮೈಸೂರು ಪವರ್ ಕಾರ್ಪೊರೇಶನ್ ಲಿಮಿಟೆಡ್‌ರವರ ಕಾಳಿ ಜಲವಿದ್ಯುತ್ ಯೋಜನೆಯಡಿಯಲ್ಲಿನ ಪ್ರಥಮ ಯೋಜನೆಯಾದ ಸೂಪಾ ಅಣೆಕಟ್ಟು ಯೋಜನೆಯ ಮೊದಲ ಹಾಗೂ ಎರಡನೇ ಉಪಹಂತದ ಮುಳುಗಡೆಗೆ ಸಂತ್ರಸ್ತರಾದ ಜನರ ಮರುವಸತಿಗಾಗಿ ಈ ಕೆಳಗಿನಂತೆ ಯೋಜನೆಯನ್ನು ರೂಪಿಸಿ ನೀಡಲಾಗಿದೆ.[೨೧೧]

೧. ೬೦*೧೦೦ ಅಳತೆಯ ನಿವೇಶನಗಳನ್ನು ಉಚಿತವಾಗಿ ನೀಡಿದೆ.

೨. ಕೃಷಿಯೇತರ ಕುಟುಂಬಗಳಿಗೆ ೬೦*೪೫ ಅಡಿ ಅಳತೆಯ ನಿವೇಶನಗಳನ್ನು ಉಚಿತವಾಗಿ ನೀಡಿದೆ.

೩. ಮುಳುಗಡೆಯ ಜನರು ಸ್ಥಳಾಂತರವಾಗಿ ಬಂದ ಹಾಗೆ ಅವರು ತಮ್ಮ ತಮ್ಮ ಮನೆಗಳನ್ನು ಕಟ್ಟಿಕೊಳ್ಳುವವರೆಗೆ ತಾತ್ಕಾಲಿಕ ವಸತಿಗಳನ್ನು ನಿರ್ಮಿಸಿಕೊಡುವುದು.

೪. ವ್ಯವಸಾಯದ ಒಕ್ಕಲುತನಕ್ಕಾಗಿ ಭೂಮಿಯನ್ನು ಉಚಿತವಾಗಿ ಈ ಕೆಳಗಿನಂತೆ ಹಂಚಲಾಗಿರುವುದು:-

ಅ) ೦೫ ಎಕರೆ ಅಥವಾ ಅದಕ್ಕೂ ಕಡಿಮೆ ಖುಷ್ಕಿ ಜಮೀನನ್ನು ಕಳೆದುಕೊಂಡವರಿಗೆ, ೦೫ ಎಕರೆ ಖುಷ್ಕಿ ಭೂಮಿಯನ್ನು ಕೊಡಲಾಗಿದೆ.

ಆ) ೦೫ ಎಕರೆಗಿಂತ ಹೆಚ್ಚು ಭೂಮಿಯನ್ನು ಕಳೆದುಕೊಂಡವರಿಗೆ ಅವರು ಕಳೆದುಕೊಂಡ ಭೂಮಿಯ ಅರ್ಧದಷ್ಟು ಖುಷ್ಕಿ ಜಮೀನನ್ನು ಕೊಡಲಾಗಿದೆ. ಆದರೆ ಅವರಿಗೆ ಕೊಡುವ ಭೂಮಿಯು ೦೫ ಎಕರೆಗಿಂತ ಕಡಿಮೆ ಇರುವುದಿಲ್ಲ ಮತ್ತು ೧೦ ಎಕರೆಗಿಂತ ಹೆಚ್ಚಿಗೆ ಇರುವುದಿಲ್ಲ.

ಇ) ಗೇಣಿದಾರರು ಮತ್ತು ಭೂಮಿಯಿಲ್ಲದ ವ್ಯವಸಾಯ ಕೂಲಿಕಾರರಿಗೆ ತಲಾ ೦೨ ಎಕರೆ ಖುಷ್ಕಿ ಭೂಮಿಯನ್ನು ಕೊಡಲಾಗಿದೆ.

೫. ರಾಮನಗರದಿಂದ ವ್ಯವಸಾಯದ ಭೂಮಿಗಳಿಗೆ ಹೋಗಲು ಬಂಡಿ ದಾರಿಗಳನ್ನು ಮಾಡಲಾಗಿದೆ.

೬. ಒಕ್ಕಲುತನದ ಭೂಮಿಗಳಲ್ಲಿ ಗಿಡಗಳನ್ನು ತೆಗೆಯುವ ಕೆಲಸವನ್ನು ಭೂಮಾಲೀಕರಿಗೆ ಒಪ್ಪಿಸಿದ್ದು, ಈ ಕೆಲಸಕ್ಕಾಗಿ ಮೈಸೂರು ಪವರ್ ಕಾರ್ಪೊರೇಶನ್ ಪ್ರತೀ ಮಾಲೀಕನಿಗೆ ಪ್ರತಿ ಎಕರೆಗೆ ೬೮೦ ರೂಪಾಯಿಗಳ ಧನ ಸಹಾಯವನ್ನು ಕಂತಿನಲ್ಲಿ ಕೊಟ್ಟಿದೆ.

೭. ಜನರು ತಮ್ಮ ತಮ್ಮ ಮನೆಗಳನ್ನು ಕಟ್ಟಿಕೊಳ್ಳಲು ಆರ್ಥಿಕ ಅನುಕೂಲತೆಗಾಗಿ ರಾಮನಗರ ಸಹಕಾರಿ ಗೃಹ ನಿರ್ಮಾಣ ಸೊಸೈಟಿಯನ್ನು ಸ್ಥಾಪಿಸಲಾಗಿದ್ದು, ಅದಕ್ಕೆ ಮೈಸೂರು ಪವರ್ ಕಾರ್ಪೊರೇಶನ್ ೦೧ ಲಕ್ಷ ರೂಪಾಯಿ ಬಂಡವಾಳವನ್ನು ಕೊಟ್ಟಿದೆ.

೮. ಮುಳುಗಡೆ ಪ್ರದೇಶದಿಂದ ಜನರನ್ನು ಮತ್ತು ಅವರ ಸಾಮಾನುಗಳನ್ನು ಸಾಗಿಸಲು ಮೈಸೂರು ಪವರ್ ಕಾರ್ಪೊರೇಶನ್ ವಾಹನಗಳ ಸೌಕರ್ಯವನ್ನು ಉಚಿತವಾಗಿ ಕೊಟ್ಟಿದೆ.

೯. ರಾಮನಗರ ಪುನರ್ವಸತಿ ಕೇಂದ್ರಕ್ಕೆ ಬೇಕಾದಂತಹ ಮೂಲಭೂತ ಅವಶ್ಯಕತೆಗಳಾದ ರಸ್ತೆ, ಶಾಲೆ, ಆಸ್ಪತ್ರೆ, ಪಂಚಾಯತ್ ಕಛೇರಿ, ದೇವಸ್ಥಾನ, ಮಸೀದಿ, ಚರ್ಚು ಮತ್ತು ಶಾಲೆಯ ಮಾಸ್ತರರಿಗೆ ಮನೆಗಳನ್ನು ಕಟ್ಟಿ ಕೊಡಲಾಗಿದೆ. ಊರಿಗೆ ರಸ್ತೆ, ವಿದ್ಯುತ್ ದೀಪಗಳ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.[೨೧೧]

೨.೧೬.೧.೪. ಸೂಪಾ ಪುನರ್ವಸತಿ ಕೇಂದ್ರದ ಜಾಗವನ್ನು ಬೆಳಗಾಂ ಜಿಲ್ಲೆಯಿಂದ ಉತ್ತರ ಕನ್ನಡ ಜಿಲ್ಲೆಗೆ ವಿಲೀನಗೊಳಿಸಿರುವುದು

ಸೂಪಾ ಜಲಾಶಯ ಸಂತ್ರಸ್ತರ ಪುನರ್ವಸತಿ ಕೇಂದ್ರವಾದ ಚಾಪೋಲಿ ಬ್ಲಾಕ್ ಬೆಳಗಾಂ ಜಿಲ್ಲೆಗೆ ಸಂಬಂಧಿಸಿತ್ತು. ಈ ಪ್ರದೇಶ ಜಿಲ್ಲೆಯ ಗಡಿಭಾಗದಲ್ಲಿದ್ದು ಎಲ್ಲಾ ಕಛೇರಿ ಕೆಲಸಕ್ಕಾಗಿ

ದೂರದ ಬೆಳಗಾವಿಗೆ ಹೋಗಬೇಕಾಗುವ ಪರಿಸ್ಥಿತಿ. ಸಂತ್ರಸ್ತರು ಈ ಮೊದಲು ಕಾರವಾರ ಜಿಲ್ಲೆಗೆ ಸಂಬಂಧಿಸಿದವರಾಗಿದ್ದು ಇದೀಗ ಬೆಳಗಾವಿ ಜಿಲ್ಲೆಗೆ ಸಂಂಧಿಸಿದವರಾಗಿದ್ದಾರೆ. ಆಡಳಿತದ ಸುವ್ಯವಸ್ಥೆಗಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ, ೧೯೬೪ರ ಸೆಕ್ಷನ್ ೫ರ ಪ್ರಕಾರ ಕರ್ನಾಟಕದ ರಾಜ್ಯಪಾಲರ ಹೆಸರಲ್ಲಿ ಹಾಗೂ ಅವರ ಆದೇಶದ ಮೇರೆಗೆ ಕರ್ನಾಟಕ ಸರ್ಕಾರವು ದಿನಾಂಕ ೧೦-೦೧-೧೯೮೩ ಕ್ಕೆ ಜಾರಿಯಾಗುವಂತೆ ಸಿತಾವಾಡಾ, ಅಡಾಳಿ, ಅಕ್ರಾಳಿ ಗ್ರಾಮಗಳನ್ನು ಗುಂಜಿ ಕಂದಾಯ ವೃತ್ತ, ಖಾನಾಪೂರ ತಾಲ್ಲೂಕು, ಬೆಳಗಾಂ ಉಪವಿಭಾಗ, ಬೆಳಗಾಂ ಜಿಲ್ಲೆಯಿಂದ ಬೇರ್ಪಡಿಸಿ 'ರಾಮನಗರ'ವೆಂಬ ಹೊಸ ಗ್ರಾಮವನ್ನು ರಚಿಸಿತು. ಹಾಗೂ ಈ ಹೊಸ ರಾಮನಗರ ಗ್ರಾಮವನ್ನು ಕ್ಯಾಸಲ್‌ರಾಕ್ ಕಂದಾಯ ವೃತ್ತ, ಸೂಪಾ ತಾಲ್ಲೂಕು, ಕಾರವಾರ ಉಪವಿಭಾಗ, ಉತ್ತರಕನ್ನಡ ಜಿಲ್ಲೆ ಇದರ ಜೊತೆಗೆ ವಿಲೀನಗೊಳಿಸಿತು.[೨೧೨]

೨.೧೬.೧.೫. ರಾಮನಗರ ಪುನರ್ವಸತಿ ಕೇಂದ್ರದ ನಿರ್ಮಾಣ

'ರಾಮನಗರ' ಇದು ಸೂಪಾ ಜಲಾಶಯ ಸಂತ್ರಸ್ತರ ಪುನರ್ವಸತಿ ಕೇಂದ್ರವಾಗಿದೆ. ೧೯೭೦ರ ನಂತರದ ದಿನಗಳಲ್ಲಿ ರೂಪುಗೊಂಡಿದೆ. ಬೆಳಗಾವಿ ಜಿಲ್ಲೆಯ ಕಾಡು ಪ್ರದೇಶವಾಗಿದ್ದ ಇದು ಈಗ ಸೂಪಾ ಸಂತ್ರಸ್ತರ ಆಶ್ರಯ ತಾಣವಾಗಿದೆ. ಈ ಪುನರ್ವಸತಿ ಕೇಂದ್ರವನ್ನು ೧೯೭೦ ರಲ್ಲಿ ಗುರುತಿಸಿ ೧೯೭೫ ರಿಂದ ಸಂತ್ರಸ್ತರನ್ನು ಸ್ಥಳಾಂತರ ಮಾಡಲು ಪ್ರಯತ್ನಿಸಿದರೂ ೧೯೮೩ ರಲ್ಲಿ ಸಂತ್ರಸ್ತರು ರಾಮನಗರದ ಕಡೆಗೆ ಬಂದರು. ಸೂಪಾದಲ್ಲಿ ರಾಮಲಿಂಗೇಶ್ವರ ದೇವಸ್ಥಾನವಿದ್ದುದರಿಂದ ಸಂತ್ರಸ್ತರು ಈ ಹೊಸ ಪುನರ್ವಸತಿ ಕೇಂದ್ರಕ್ಕೆ ರಾಮನಗರವೆಂದು ನಾಮಕರಣ ಮಾಡಿದರು. ಇದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ (ಸೂಪಾ) ತಾಲ್ಲೂಕಿನ ಚಾಪೋಲಿ ಬ್ಲಾಕ್‌ನ ರಾಮನಗರ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ. ಇದು ಒಟ್ಟು ೪೪೩೧ ಎಕರೆ, ೧೮ ಗುಂಟೆ ಭೂ ವಿಸ್ತಾರವನ್ನು ಹೊಂದಿದೆ.[೨೧೩]

ಒಂದು ಕಡೆಯಿಂದ ಕಾರವಾರ-ಬೆಳಗಾವಿ ರಸ್ತೆ, ಇನ್ನೊಂದು ಕಡೆಯಿಂದ ಧಾರವಾಡ-ಪಣಜಿ ರಸ್ತೆಯಲ್ಲಿ ಸಾಗಿದಾಗ ಕಾರವಾರದಿಂದ ೧೩೫ ಕಿ.ಮೀ. ಹಾಗೂ ಧಾರವಾಡದಿಂದ ೬೨ ಕಿ.ಮೀ. ದೂರದಲ್ಲಿ ಇದನ್ನು ರೂಪಿಸಲಾಗಿದೆ. ಹಾಗೆಯೇ ಇದು ಜೋಯಿಡಾದ ಉತ್ತರಕ್ಕೆ ೪೫ ಕಿ.ಮೀ., ದಾಂಡೇಲಿಯ ಉತ್ತರಕ್ಕೆ ೪೮ ಕಿ.ಮೀ. ಸೂಪಾದ ಉತ್ತರಕ್ಕೆ ೨೨ ಕಿ.ಮೀ. ಲೋಂಡಾ ರೈಲ್ವೇ ಜಂಕ್ಷನ್‌ನಿಂದ ದಕ್ಷಿಣಕ್ಕೆ ೦೪ ಕಿ.ಮೀ. ದೂರದಲ್ಲಿದೆ. ಧಾರವಾಡ-ಹಳಿಯಾಳ-ಗಣೇಶಗುಡಿ ಮುಖಾಂತರ ರಾಮನಗರಕ್ಕೆ ಹೋಗಬಹುದು. ಅದಲ್ಲದೇ ಸುಲಭವಾಗಿ ಧಾರವಾಡ-ಅಳ್ನಾವರ-ಲೋಂಡಾಕ್ಕೆ ರೈಲು ಹಾಗೂ ಧಾರವಾಡ-ಅಳ್ನಾವರ-ರಾಮನಗರಕ್ಕೆ ಸರ್ಕಾರಿ ವಾಹನಗಳ ವ್ಯವಸ್ಥೆಯಿದೆ.

ರಾಮನಗರ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ರಾಮನಗರ, ಅಡಾಳಿ, ಹಾರ್ಲಿ ಎಂಬ ಮೂರು ಮಜಿರೆಗಳಿದ್ದು ಸೂಪಾ ಜಲಾಶಯ ಸಂತ್ರಸ್ತರು ನಿವೇಶನಗಳನ್ನು

ರಾಮನಗರ ಮಜಿರೆಯಲ್ಲಿ ಪಡೆದುಕೊಂಡಿದ್ದಾರೆ. ಇವರ ಕೃಷಿ ಭೂಮಿ ಅಡಾಳಿ, ಹಾರ್ಲಿ, ಅಕ್ರಾಳಿ ಹಾಗೂ ಸಿತಾವಾಡ ಊರುಗಳಲ್ಲಿನ ಸರ್ವೆ ನಂಬರ್‌ಗಳಲ್ಲಿ ಬರುತ್ತದೆ. ಅಡಾಳಿ, ಹಾರ್ಲಿ, ಅಕ್ರಾಳಿ ಹಾಗೂ ಸಿತಾವಾಡ ಇವು ಮೊದಲಿನಿಂದಲೂ ಕುಣಬಿ, ಗೌಳಿ ಹಾಗೂ ಇತರೇ ವರ್ಗದ ಜನರನ್ನು ಒಳಗೊಂಡ ಊರಾಗಿತ್ತು. ಈಗಿನ ರಾಮನಗರವೆಂಬ ಕಾಡನ್ನು ಸವರಿ ನಿರ್ಮಿಸಿದ ಪುನರ್ವಸತಿ ಕೇಂದ್ರ ಅವರ ಸೀಮಾ ಪ್ರದೇಶವಾಗಿತ್ತು. ಇದನ್ನು ಅವರು ಸ್ಮಶಾನ, ಉರುವಲು, ಮೇವು, ಅರಣ್ಯ ಕಿರು ಉತ್ಪನ್ನ ಸಂಗ್ರಹ, ಬೇಟೆ ಹಾಗೂ ಇತರೇ ಉದ್ದೇಶಕ್ಕಾಗಿ ಬಳಸುತ್ತಿದ್ದರು. ಈಗಲೂ ಈ ಊರುಗಳಲ್ಲಿ ಮೊದಲಿದ್ದವರು ವಾಸ ಮಾಡುತ್ತಿದ್ದಾರೆ. ಆದರೆ ಅವರು ಅವಲಂಬಿಸಿದ್ದ ಅರಣ್ಯ ಪ್ರದೇಶ ಈಗ ರಾಮನಗರವಾಗಿದ್ದು ಅದರ ಪಾರಂಪರಿಕ ಹಕ್ಕನ್ನು ಹಾಗೂ ಅದರಿಂದ ದೊರೆಯುತ್ತಿದ್ದ ಜೀವನಾಧಾರವನ್ನು ಅವರು ಕಳೆದುಕೊಂಡಿದ್ದಾರೆ. ಸೂಪಾ ಜಲಾಶಯ ಸಂತ್ರಸ್ತರಿಂದಾಗಿ ಇಲ್ಲಿ ಮೊದಲೇ ವಾಸಮಾಡುತ್ತಿದ್ದ ಈ ಜನ ಸಮುದಾಯಗಳು (ಹೋಸ್ಟ್ ಕಮ್ಯುನಿಟಿ) ಕೂಡಾ ಒಂದರ್ಥದಲ್ಲಿ ಸಂತ್ರಸ್ತರಾಗಿ ಬಿಟ್ಟರು. ಆದರೆ ಯೋಜನೆ ಇವರನ್ನು ಆ ರೀತಿಯಾಗಿ ಪರಿಗಣಿಸಲಿಲ್ಲ ಯಾಕೆಂದರೆ ಇವರು ಈ ಅರಣ್ಯ ಪ್ರದೇಶದೊಂದಿಗೆ ಕೇವಲ ಪಾರಂಪರಿಕ ಹಾಗೂ ಭಾವನಾತ್ಮಕ ಸಂಬಂಧವನ್ನಷ್ಟೇ ಹೊಂದಿದ್ದರು.[೨೧೪]

೨.೧೬.೧.೬. ಸಂತ್ರಸ್ತರಿಗೆ ವೈಯಕ್ತಿಕ ಮೂಲಭೂತ ಸೌಲಭ್ಯಗಳ ನಿರ್ಮಾಣ

ಮೈಸೂರು ಪವರ್ ಕಾರ್ಪೊರೇಶನ್ ಸಂತ್ರಸ್ತರಿಗೆ ಕೆಲವು ವೈಯಕ್ತಿಕ ಸೌಲಭ್ಯ ನೀಡಿದೆ.[೨೧೫]

೧) ಸಂತ್ರಸ್ತರಿಗೆ ೧೨೦*೮೦ ಅಳತೆಯ ನಿವೇಶನ, ಕೃಷಿಗಾಗಿ ೫ ಎಕರೆಗಳವರೆಗೆ ಜಮೀನು, ಎಕರೆಗೆ ೩.೫೦೦-೫,೦೦೦ವರೆಗೆ ಪುನರ್ವಸತಿ ಪರಿಹಾರ ಧನವನ್ನು ನೀಡಿದೆ. ಸ್ಥಳಾಂತರಗೊಂಡ ತಕ್ಷಣ ತಂಗಲು ಸಂತ್ರಸ್ತರಿಗೆ ೩೫ ಶೆಡ್ಡಿನ ೩೫೦ ಗುಡಿಸಲುಗಳನ್ನು ನಿರ್ಮಾಣ ಮಾಡಲಾಗಿತ್ತು.

೨) ಸಂತ್ರಸ್ತರು ಮನೆಗಳನ್ನು ನಿರ್ಮಾಣ ಮಾಡಲು ಸಹಕಾರಿಯಾಗುವಂತೆ ಮೈಸೂರು ವಿದ್ಯುತ್ ನಿಗಮ ನಿಯಮಿತವು ಪತ್ರ ಸಂಖ್ಯೆ. A1W5 B2/ ೨೬.೩.೧೯೮೦ ರ ಪ್ರಕಾರ ರೂಪಾಯಿ ಒಂದು ಲಕ್ಷವನ್ನು 'ಕಾಳಿ ಜಲವಿದ್ಯುತ್ ಯೋಜನೆ ಪುನರ್ವಸತಿ ವಸತಿ ಸೇವಾ ಸಹಕಾರಿ ಸಂಘ ನಿಯಮಿತ, ರಾಮನಗರ' ಇವರಿಗೆ ಶೇರು ಬಂಡವಾಳವಾಗಿ ನೀಡಲಾಗಿದೆ.

೨.೧೬.೧.೭. ಸಂತ್ರಸ್ತರಿಗೆ ಸಾರ್ವಜನಿಕ ಮೂಲಭೂತ ಸೌಲಭ್ಯಗಳ ನಿರ್ಮಾಣ

ಮೈಸೂರು ಪವರ್ ಕಾರ್ಪೋರೇಶನ್ ಸಂತ್ರಸ್ತರಿಗೆ ಸಾರ್ವಜನಿಕ ಮೂಲಭೂತ ಸೌಲಭ್ಯವನ್ನು ಒದಗಿಸಿದೆ: [೨೧೬]

೧) ಪ್ರತೀ ೧೫–೨೦ ಮನೆಗಳಿಗೆ ಒಂದು ಬಾವಿಯಂತೆ ೫೦ ಬಾವಿಗಳ ನಿರ್ಮಾಣ ಮಾಡಲಾಗಿದೆ.

೨) ತೋಟಗಾರಿಕೆ, ಉದ್ಯಾನವನ, ಡೈರಿ, ಕೋಳಿ ಸಾಕಾಣಿಕಾ ಫಾರ್ಮ್, ಪೆಟ್ರೋಲ್ ಬಂಕ್, ಆಡಿಟೋರಿಯಂ, ಮಹಿಳಾ ಮಂಡಳ, ಪಾರ್ಕ್, ಗೋಡಾನ್, ಬ್ಯಾಂಕ್, ಹೋಟೆಲ್‌ಗಳು, ಅಂಗಡಿಗಳು ಇವುಗಳಿಗೆ ಸಾಮಾನ್ಯ ದರದಲ್ಲಿ ನಿವೇಶನಗಳನ್ನು ಒದಗಿಸಿಕೊಟ್ಟಿದೆ.

೩) ಕೃಷಿ ಮಾರುಕಟ್ಟೆ ನಿರ್ಮಾಣ ಮಾಡಲಾಗಿದೆ.

೪) ಪುನರ್ವಸತಿ ಕೇಂದ್ರದಲ್ಲಿ ೩೬ ಕಿ.ಮೀ. ರಸ್ತೆ ನಿರ್ಮಾಣ. ಅದರಲ್ಲಿ ೦೭ ಕಿ.ಮೀ. ಮಾತ್ರಾ ಡಾಂಬರೀಕರಣವಾಗಿದೆ.

೫) ರಾಮನಗರದಲ್ಲಿ ಒಂದೊಂದು ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ ನಿರ್ಮಾಣ ಮಾಡಲಾಗಿದೆ.

೬) ೫ ಲಕ್ಷ ರೂಪಾಯಿಗಳನ್ನು ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಪದವಿಪೂರ್ವ ಕಾಲೇಜು ಸ್ಥಾಪನೆಗಾಗಿ ಕಾರವಾರದ ಬಾಪೂಜಿ ವಿಕಾಸ ಸಮಿತಿಗೆ ನೀಡಲಾಗಿದೆ.

೭) ೩.೫೦ ಲಕ್ಷ ರೂಪಾಯಿಗಳನ್ನು ಶ್ರೀ. ಉಳವಿ ಚನ್ನಬಸವೇಶ್ವರ ಪಾಲಿಟೆಕ್ನಿಕ್ ಕಾಲೇಜು, ದಾಂಡೇಲಿ ಇವರಿಗೆ ಅನುದಾನ ನೀಡಿ ಸೂಪಾ ಮುಳುಗಡೆ ಪ್ರದೇಶದ ಸಂತ್ರಸ್ತರ ಕನಿಷ್ಟ ಐದು ವಿದ್ಯಾರ್ಥಿಗಳಿಗೆ ಸೀಟು ಮೀಸಲಾಗಿಡಬೇಕು ಎಂದು ಮನವಿ ಮಾಡಿಕೊಳ್ಳಲಾಗಿದೆ. ೨೪. ೯೮,೨೦೦ ರೂಪಾಯಿಗಳನ್ನು ಐ.ಟಿ.ಐ. ಕಾರವಾರ ಇವರಿಗೆ ಅನುದಾನ ನೀಡಿ ಸೂಪಾ ಮುಳುಗಡೆ ಪ್ರದೇಶದ ಸಂತ್ರಸ್ತರ ಕನಿಷ್ಟ ಐದು ವಿದ್ಯಾರ್ಥಿಗಳಿಗೆ ಸೀಟು ಮೀಸಲಾಗಿಡಬೇಕು ಎಂದು ಮನವಿ ಮಾಡಿಕೊಳ್ಳಲಾಗಿದೆ.

೮) ರಾಮಲಿಂಗೇಶ್ವರ ದೇವಸ್ಥಾನ, ಚರ್ಚು ಹಾಗೂ ಮಸೀದಿ ನಿರ್ಮಾಣ.

೯) ಹಿಂದೂ, ಮುಸ್ಲಿಂ, ಹಾಗೂ ಕ್ರಿಶ್ಚಿಯನ್‌ರಿಗೆ ಪ್ರತ್ಯೇಕವಾಗಿ ಸ್ಮಶಾನ ಜಾಗವನ್ನು ನೀಡಲಾಗಿದೆ.

೧೦) ಸಮುದಾಯ ಭವನ/ ಮಾರುತಿ ದೇವಸ್ಥಾನ

೧೧) ಬಸ್ಸು ನಿಲ್ದಾಣ ನಿರ್ಮಾಣ.

೧೨) ಪಂಚಾಯತ್ ಕಛೇರಿ ನಿರ್ಮಾಣ.

೧೩) ಅಂಚೆ ಕಛೇರಿ ಹಾಗೂ ವಸತಿ ಗೃಹ ನಿರ್ಮಾಣ.

೧೪) ಪೋಲೀಸ್ ಔಟ್‌ಪೋಸ್ಟ್ ನಿರ್ಮಾಣ.

೧೫) ೭೨ ಯೂನಿಟ್‌ನ ಸಿಬ್ಬಂದಿ ವಸತಿ ಗೃಹ ನಿರ್ಮಾಣ.

೧೬) ಹೆರಿಗೆ ವಾರ್ಡ್ ಹಾಗೂ ಶವಾಗಾರದ ಜೊತೆಗೆ ೨೦ ಹಾಸಿಗೆಯ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ.

೧೭) ಬಸ್ಸು ನಿಲ್ದಾಣದ ಹತ್ತಿರ ಸಮುದಾಯ ನೀರಿನ ಟ್ಯಾಂಕ್ ನಿರ್ಮಿಸಿ ಪಾಂಡರಿ ನದಿಯಿಂದ ನೀರು ಎತ್ತಿ ಟ್ಯಾಂಕ್‌ಗೆ ಶೇಖರಣೆ ಮಾಡಿ ಕುಡಿಯುವ ನೀರು ಸರಬರಾಜು ಮಾಡಲಾಗಿದೆ. ೨೬ ಕಿ.ಮೀ ಪೈಪು ಲೈನು ಮಾಡಲಾಗಿದ್ದು ೬೪ ಸಾರ್ವಜನಿಕ ನಳ್ಳಿ ಹಾಗೂ ೬೭೫ ವೈಯಕ್ತಿಕ ನಳ್ಳಿ ವ್ಯವಸ್ಥೆ ಮಾಡಲಾಗಿದೆ. ಅದಲ್ಲದೇ ಐದು ತೆರೆದಬಾವಿಗಳು, ಆರು ಬೋರ್‌ವೆಲ್‌ಗಳನ್ನು ತೆರೆಯಲಾಗಿದೆ.

೧೮) ೦೩ ಗೋಕಟ್ಟಾಗಳನ್ನು ನಿರ್ಮಾಣ ಮಾಡಲಾಗಿದೆ.

೧೯) ೨೨ ಕಿ. ಮೀ.ಉದ್ದದ ವಿದ್ಯುತ್ ಲೈನ್‌ನೊಂದಿಗೆ ೫೨೦ ವಿದ್ಯುತ್ ಪಾಯಿಂಟ್‌ಗಳನ್ನು ಒದಗಿಸಲಾಗಿದೆ. ಇದಕ್ಕಾಗಿ ೧೧.೦೨ ಲಕ್ಷ ವ್ಯಯಿಸಲಾಗಿದೆ.

೨೦) ೧೩.೦೨.೧೯೯೦ ರ ಪುನರ್ವಸತಿ ಸಮಿತಿಯ ೧೭ನೇ ಮೀಟಿಂಗ್ ನಿರ್ಧಾರದಂತೆ ೧೯ ಎಕರೆ ಜಾಗವನ್ನು ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಗೆ ಕೈಗಾರಿಕಾ ಶೆಡ್ಡು ಹಾಗೂ ವಸಾಹತುಗಳನ್ನು ನಿರ್ಮಾಣ ಮಾಡಲು ನೀಡಲಾಗಿದೆ.

೨೧) ಮೈಸೂರು ವಿದ್ಯುತ್ ನಿಗಮದ ಧನ ಸಹಾಯದೊಂದಿಗೆ ದಿನಾಂಕ ೦೯.೮.೧೯೮೫ ರಂದು ಕೈಗಾರಿಕಾ ಇಲಾಖೆ ಕಾರವಾರ ಇವರಿಂದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿತ್ತು. ಇದರಲ್ಲಿ ಸುಮಾರು ೨೦ ಸಂತ್ರಸ್ತರು ಪ್ರಿಂಟಿಂಗ್, ಬುಕ್ ಬೈಂಡಿಂಗ್, ಸೋಪಿನ ಪುಡಿ ತಯಾರಿಕೆ, ಕ್ಯಾಂಡಲ್ ತಯಾರಿಕೆ, ಐಸ್ ತಯಾರಿಕೆ, ಟೈಲರಿಂಗ್, ಕಸೂತಿ ಹಾಗೂ ಎಂಬ್ರಾಯ್‌ಡರಿ ತರಬೇತಿಗಳನ್ನು ಪಡೆದುಕೊಂಡರು.

೨೨) ೫೩೦ ಎಕರೆ ಗೋಮಾಳವನ್ನು ಎಲ್ಲಾ ಸೌಲಭ್ಯಗಳೊಂದಿಗೆ ನಿರ್ಮಾಣ ಮಾಡಿಕೊಟ್ಟಿತು.

೨೩) ಕೃಷಿ ಭೂಮಿ ಅಭಿವೃದ್ಧಿಗಾಗಿ ೧೧೦.೮೫ ಲಕ್ಷವನ್ನು ಕೃಷಿ ಇಲಾಖೆಗೆ ವ್ಯಯಿಸಲಾಗಿದೆ. ೩೪೫೫ ಎಕರೆ ಕೃಷಿಭೂಮಿಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಕೃಷಿ ಇಲಾಖೆಯು ಕಾಡು ಸವರಿ, ಬಿದಿರಿನ ಬುಡಗಳನ್ನು ಕಿತ್ತು, ಬೊಡ್ಡೆಗಳನ್ನು ತೆಗೆದು, ಇಂಗು ಗುಂಡಿ, ತಿರುವು ಕಾಲುವೆ, ಚೆಕ್ ಡ್ಯಾಂ ನಿರ್ಮಾಣ, ಭೂಸಾರ ಸಂರಕ್ಷಣಾ ಕಾರ್ಯಗಳನ್ನು ಮಾಡಿದೆ. ಅದಕ್ಕಾಗಿ ಮೈಸೂರು ವಿದ್ಯುತ್ ನಿಗಮವು ೧೧೦.೮೫ ಲಕ್ಷ ಹಣವನ್ನು ಕೃಷಿ ಇಲಾಖೆಗೆ ನೀಡಿದೆ. ಕೃಷಿಭೂಮಿಗೆ ಹೋಗಲು ೪೦.೪ ಕಿ.ಮೀ ಬಂಡಿ ರಸ್ತೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ.

೨೪) ರಾಮನಗರ ಪುನರ್ವಸತಿ ಕೇಂದ್ರದಲ್ಲಿ ೭೫ ಎಕರೆ ಹಸಿರು ಬೆಲ್ಟ್ ನಿರ್ಮಾಣ ಮಾಡಲು ೦೩ ಲಕ್ಷ ರೂಪಾಯಿ ವ್ಯಯಿಸಿ ನಂತರ ಅದನ್ನು ಉಸ್ತುವಾರಿಗಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಯಿತು.

೨೫) ಸೂಪಾ ತಾಲ್ಲೂಕು ಮುಖ್ಯ ಕಛೇರಿಯನ್ನು ಜೋಯಿಡಾಕ್ಕೆ ಸ್ಥಳಾಂತರಿಸಿ ಜೋಯಿಡಾದಲ್ಲಿ ಕಛೇರಿ ಕಟ್ಟಡಗಳಿಗಾಗಿ ಕ.ವಿ.ನಿ.ನಿ.ದವರು ೨೪ ಲಕ್ಷ ಹಾಗೂ ೧೫.೩೭ ಲಕ್ಷ ರೂಪಾಯಿಗಳನ್ನು ಇತರೇ ಖರ್ಚು ಎಂದು ಸರ್ಕಾರಕ್ಕೆ ಕಟ್ಟಿದರು.

೨೬) ಐದು ವರ್ಷಕ್ಕೆ ಒಪ್ಪಿಕೊಂಡಿದ್ದ ಪುನರ್ವಸತಿ ಅನುಸರಣಾ ಸೇವೆಯನ್ನು ಇಪ್ಪತ್ತು ವರ್ಷಗಳವರೆಗೆ ಮುಂದುವರೆಸಿತು.

೨೭) ಸರ್ಕಾರಿ ಆದೇಶ No. PWD ೨೯೨ PPC ೮೫, ದಿನಾಂಕ ೨೩-೧೨-೧೯೮೫. ಪ್ರಕಾರ ಸೂಪಾ ಸಂತ್ರಸ್ತರ ಪ್ರತಿಯೊಂದು ಕುಟುಂಬದಿಂದ ಒಬ್ಬರಿಗೆ ಸರ್ಕಾರಿ ಉದ್ಯೋಗಾವಕಾಶವನ್ನು ಕೊಡಲು ಪ್ರಾಶಸ್ತ್ಯ ನೀಡಲಾಗುವುದು. ಈ ಆದೇಶ ಹಾಗೂ ಇತರ ಪ್ರಾವಿಷನ್‌ನಂತೆ ದಿನಾಂಕ ೦೮-೬-೨೦೧೦ರಂತೆ ಕ.ವಿ.ನಿ.ನಿ.ವು ಕರ್ನಾಟಕ ಜಲವಿದ್ಯುತ್ ನಿಗಮದಿಂದ ಸಂತ್ರಸ್ತರಾದ ೮೦ ಕುಟುಂಬಗಳಗೆ ಉದ್ಯೋಗಾವಕಾಶ ನೀಡಲಾಗಿದೆ.

೨.೧೬.೧.೮. ರಾಮನಗರ ಪುನರ್ವಸತಿ ಕೇಂದ್ರದ ನಿರ್ಮಾಣ ಕಾರ್ಯದ ಖರ್ಚುವೆಚ್ಚ

ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಪುನರ್ವಸತಿ ಕಾರ್ಯವಾಗಿ ಕೆ.ಪಿ.ಸಿ.ಯು ಅರಣ್ಯ ತೆರವು, ಪರಿಹಾರ ಧನ, ಮೂಲಭೂತ ಸೌಲಭ್ಯಗಳ ನಿರ್ಮಾಣ, ರಸ್ತೆ ಸಂಪರ್ಕಗಳು ಇವುಗಳಿಗೆಲ್ಲಾ ೧೯೯೩ ರವರೆಗೆ ಒಟ್ಟು ೧೨,೯೯,೭೦,೧೮೬,೦೦ ರೂಪಾಯಿ ಹಣ ಖರ್ಚು ಮಾಡಿದೆ. (ಇದರ ವಿವರವನ್ನು ಅನುಬಂಧ ೫ ರಲ್ಲಿ ನೀಡಲಾಗಿದೆ)

೨.೧೬.೧.೯. ರಾಮನಗರ ಪುನರ್ವಸತಿ ಕೇಂದ್ರದ ಪುನರುಜ್ಜೀವನ ಕಾರ್ಯ

ದಿನಾಂಕ ೦೧ ಮತ್ತು ೦೨ ಆಗಸ್ಟ್ ೧೯೯೪ ರಲ್ಲಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾಂ ವಿಭಾಗ ಮಟ್ಟದ '೨೦೦ ದಿನಗಳ ಕಾರ್ಯ ಸಮೀಕ್ಷೆ'ಯಲ್ಲಿ ಕಾಳಿ ಪುನರ್ವಸತಿಗೆ ಸಂಬಂಧಪಟ್ಟ ಚರ್ಚೆಯಲ್ಲಿ ರಾಮನಗರ ಪುನರ್ವಸತಿ ಕೇಂದ್ರದಲ್ಲಿನ ಅವಶ್ಯವಿರುವ ಎಲ್ಲಾ ಕಾಮಗಾರಿಗಳನ್ನು ಕ.ವಿ.ನಿ.ನಿ. ಮಾಡಿಕೊಟ್ಟು ಸದರಿ ಪುನರ್ವಸತಿ ಕೇಂದ್ರವನ್ನು ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಬೇಕೆಂದು ತೀರ್ಮಾನಿಸಲಾಯಿತು.[೨೧೭]

ದಿನಾಂಕ ೧೧.೮.೧೯೯೮ ರಂದು chambers of the principal secretary to govt, energy dept ರಾಮನಗರ ಪುನರ್ವಸತಿ ಕೇಂದ್ರವನ್ನು ಉತ್ತರ ಕನ್ನಡ ಜಿಲ್ಲಾ ಪರಿಷತ್‌ಗೆ ಹಸ್ತಾಂತರಿಸುವ ಬಗ್ಗೆ ನಡೆದ ಮೀಟಿಂಗ್‌ನಲ್ಲಿ ಉತ್ತರ ಕನ್ನಡದ ಜಿಲ್ಲಾಧಿಕಾರಿಯವರಾದ ಭರತ್‌ಲಾಲ್ ಮೀನಾರವರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾರೆ, "ರಾಮನಗರ ಪುನರ್ವಸತಿ ಕೇಂದ್ರ ಒಂದು ಕೆಟ್ಟ ಉದಾಹರಣೆ.

ಪುನರ್ವಸತಿ ವಿಧಾನದಲ್ಲಿ ಆಳವಾದ ಬದಲಾವಣೆ ಆಗಬೇಕಾಗಿದೆ. ಹಾಗೂ ಈ ವಿಷಯದಲ್ಲಿ ಜನರು ಹೆಚ್ಚಿನ ಬೇಡಿಕೆಯಿಟ್ಟಿದ್ದಾರೆ. ಭೂಮಿ ಫಲವತ್ತಾಗಿರಬೇಕು ಹಾಗೂ ನೀರಾವರಿ ಒದಗಿಸಬೇಕು ಎಂದು ಜನರು ಆಶಿಸಿದ್ದರು. ಈಗ ಯೋಜನಾ ನಿರಾಶ್ರಿತರ ಜೀವನ ಮಟ್ಟ ಸುಧಾರಣೆಯ ಅವಶ್ಯಕತೆಯಿದೆ". ಆದರೆ ಕೆ.ಪಿ.ಸಿ. ಅಧಿಕಾರಿಯವರು ಅದಕ್ಕೆ ಪ್ರತ್ಯುತ್ತರವಾಗಿ, "ಕಾನೂನಿನಂತೆ ಎಲ್ಲವನ್ನೂ ಪೂರೈಸಲಾಗಿದೆ, ಆದ್ದರಿಂದ ಹಸ್ತಾಂತರಿಸಬೇಕು" ಎಂದರು. ಅದಕ್ಕೆ ಜಿಲ್ಲಾಧಿಕಾರಿಯವರು, "ಕೆ.ಪಿ.ಸಿ.ಯವರು ಮಾಡಿಲ್ಲ ಎಂದು ಹೇಳುವುದಿಲ್ಲ ಆದರೆ ಇದು ಸಾಮಾನ್ಯ ಅರಿವು. ರಾಮನಗರ ಕೆಟ್ಟ ಉದಾಹರಣೆ. ಪುನರ್ವಸತಿ ಅಗತ್ಯವಾಗಿ ಸರಿಪಡಿಸಬೇಕು" ಎಂದರು. ಅದಕ್ಕೆ ಕೆ.ಪಿ.ಸಿ.ಯು ರಾಮನಗರದಲ್ಲಿ ನಿಖರವಾಗಿ ಏನು ಆಗಬೇಕಾಗಿದೆ ಎಂದು ಕೇಳಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಕಾರವಾರ ಇವರು, "ನೀರಿಗಾಗಿ ಗ್ರಾಮದಲ್ಲಿ ೧೫ ಟ್ಯಾಂಕ್ ನಿರ್ಮಿಸಬೇಕು. ಎಲ್ಲಾ ಸಾರ್ವಜನಿಕ ಮೂಲಭೂತ ಸೌಲಭ್ಯಗಳ ದುರಸ್ತಿ ಆಗಬೇಕು. ರಾಮನಗರ ಪುನರ್ವಸತಿ ಕೇಂದ್ರವನ್ನು ಸ್ವಸ್ತಿ ಗ್ರಾಮ ಯೋಜನೆಯಡಿಯಲ್ಲಿ ಬರುವಂತೆ ವ್ಯವಸ್ಥೆ ಮಾಡಬೇಕು" ಎಂದು ಸೂಚಿಸುತ್ತಾರೆ. "ಮುಂದಿನ ಐದು ವರ್ಷಗಳಲ್ಲಿ ಪುನರ್ವಸತಿ ಕೇಂದ್ರ ಸರ್ವತೋಮುಖ ಅಭಿವೃದ್ಧಿಯಾಗಬೇಕು"ಎಂದು ಕೆ.ಪಿ.ಸಿ.ಗೆ ಒತ್ತಡ ತರುತ್ತಾರೆ. ಮುಖ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು 'ರಾಮನಗರ ಪುನರ್ವಸತಿ ಕೇಂದ್ರದ ತಕ್ಷಣದ ಅವಶ್ಯಕತೆ'ಗಳನ್ನು ಗುರುತಿಸಿ ಅದರ ಪಟ್ಟಿಯನ್ನು ಕೆ.ಪಿ.ಸಿ.ಗೆ ಕಳುಹಿಸಿಕೊಡಬೇಕು ಎಂದು ಹೇಳಿದ್ದರು.

೧.೧೬.೧.೧೦. ಪುನರ್ವಸತಿ ಕೇಂದ್ರದ ಪುನರುಜ್ಜೀವನ ಕಾರ್ಯವಾಗಿ ಸ್ವಸ್ತಿ ಗ್ರಾಮ ಯೋಜನೆ

"ಸ್ವಸ್ತಿ ಗ್ರಾಮ" ಯೋಜನೆಯು ಮಹಾತ್ಮ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕನಸಿನ ಪರಿಕಲ್ಪನೆಯ ಮೇಲೆ ಸರ್ಕಾರ ಹಮ್ಮಿಕೊಂಡ ಒಂದು ನೂತನ ಯೋಜನೆಯಾಗಿದೆ. ಕರ್ನಾಟಕ ಸರ್ಕಾರವು ಸ್ವಸ್ತಿ ಗ್ರಾಮದ ಯೋಜನೆಯಡಿ ರಾಮನಗರದ ಸಂಪೂರ್ಣ ಅಭಿವೃದ್ಧಿಗಾಗಿ ರೂಪಿಸಿರುವ ಕ್ರಿಯಾಯೋಜನೆಯ ಕೆಲವು ಪ್ರಮುಖ ಅಂಶಗಳು.[೨೧೮]

೧. ನೀರು ಶೇಖರಣಾ ಕಾಮಗಾರಿಗಳು: ಕೃಷಿಹೊಂಡ, ನೀರಿನ ಟ್ಯಾಂಕ್, ಒಣಭೂಮಿ ಬೇಸಾಯದ ಪ್ರಾತಕ್ಷಿಕೆ.

೨. ತೋಟಗಾರಿಕೆ: ನರ್ಸರಿ, ಕೈತೋಟ, ತೆಂಗಿನ ಸಸಿ, ರೇಷ್ಮೆ ಬೆಳೆಯುವ ಪ್ರಾತಕ್ಷಿಕೆ.

೩. ಪಶುಸಂಗೋಪನೆ: ಕೋಳಿ ಸಾಕಾಣಿಕೆ, ಕುರಿಸಾಕಾಣಿಕೆ, ಮೇವು ಅಭಿವೃದ್ಧಿ, ಜಾನುವಾರು ಸಾಕಾಣಿಕೆ, ಹಾಲಿನ ಡೈರಿ, ಹಾಲು ಉತ್ಪಾದಕರ ಸೇವಾ ಸಹಕಾರಿ ಸಂಘ ಪ್ರಾರಂಭ.

೪. ನೀರು ಸರಬರಾಜು ಮತ್ತು ನೈರ್ಮಲೀಕರಣ: ಕೊಳವೆ ನೀರು, ಕೈಪಂಪು, ಬಾವಿ, ಧೋಬಿಘಾಟ್, ಇಂಗುಗುಂಡಿ, ಒಳಚರಂಡಿ ವ್ಯವಸ್ಥೆ.

೫. ಸಾಲುಮರ, ಸಾಮಾಜಿಕ ಅರಣ್ಯ, ಉದ್ಯಾನವನ, ಮಕ್ಕಳ ಉದ್ಯಾನವನ, ವ್ಯಾಯಾಮಶಾಲೆ, ಹಾಸ್ಟೆಲ್, ವಾಣಿಜ್ಯ ಸಂಕೀರ್ಣ, ಮಹಿಳೆಯರಿಗೆ ಉದ್ಯೋಗ ತರಬೇತಿ ಇತ್ಯಾದಿ.

೧.೧೬.೧.೧೧. ಸ್ವಸ್ತಿ ಗ್ರಾಮ ಯೋಜನೆಗಾಗಿ ಕರ್ನಾಟಕ ವಿದ್ಯುತ್ ನಿಗಮದ ವೆಚ್ಚ

ಸ್ವಸ್ತಿ ಗ್ರಾಮ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರಾಮನಗರವನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ ವಿದ್ಯುತ್ ನಿಗಮದಿಂದ ೧ ಕೋಟಿ ೬೦ಲಕ್ಷ ರೂಪಾಯಿ ಧನಸಹಾಯ ನೀಡಬೇಕಾಗಿರುತ್ತದೆ. ಇದರಲ್ಲಿ ೫೩ ಲಕ್ಷರೂಪಾಯಿಗಳ ಚೆಕ್‌ನ್ನು ದಿನಾಂಕ ೨೬.೦೧.೨೦೦೧ ರಂದು ಕಾರವಾರ ಜಿಲ್ಲಾ ಉಸ್ತುವಾರಿ ಸಚಿವರಿಗೆ ನೀಡಲಾಯಿತು.[೨೧೯]

ಆದರೆ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಸ್ವಸ್ತಿ ಗ್ರಾಮ ಯೋಜನೆ ಜಾರಿಯಾಗಿರುವುದಿಲ್ಲವೆಂದು ಅಧ್ಯಯನದ ಸಮಯದಲ್ಲಿ ತಿಳಿದು ಬಂದಿದೆ. ಈ ಬಗ್ಗೆ ಕಾರವಾರ ಜಿಲ್ಲಾ ಪಂಚಾಯತ್‌ನಲ್ಲಿ ಮಾಹಿತಿ ಕೇಳಿದಾಗ ಈ ಯೋಜನೆ ಇಲ್ಲಿ ಅನುಷ್ಠಾನಗೊಂಡಿದೆ ಎಂಬುದಾಗಿ ಅವರ ವರದಿ ತಿಳಿಸಿರುತ್ತದೆ. ಒಟ್ಟಾರೆಯಾಗಿ ಸ್ಥಳಾಂತರದ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ನಿಗಮದವರು ಒದಗಿಸಿಕೊಟ್ಟಿದ್ದ ಸಾರ್ವಜನಿಕ ಮೂಲಭೂತ ಸೌಲಭ್ಯಗಳ ಹೊರತಾಗಿ ರಾಮನಗರದಲ್ಲಿ ಇಂದಿನವರೆಗೂ ಯಾವುದೇ ರೀತಿಯ ಅನುಪಾಲನಾ ಯೋಜನೆಗಳು ಜಾರಿಯಾಗಲಿಲ್ಲ. ಆಗಿದೆ ಎನ್ನಲಾದ ಯೋಜನೆಗಳು ಕಾಗದಗಳಲ್ಲಿ ಮಾತ್ರಾ ಇದ್ದು ನೈಜವಾಗಿ ಅನುಷ್ಠಾನಗೊಂಡಿಲ್ಲ. ಕರ್ನಾಟಕ ವಿದ್ಯುತ್ ನಿಗಮದ ಕಾರ್ಯಕ್ರಮಗಳು ಹೆಸರಿಗಷ್ಟೇ ಯೋಜಿತವಾಗಿದ್ದು ಜಾರಿಗೊಳ್ಳಲೇ ಇಲ್ಲ. ಪುನರ್ವಸತಿ ಕೇಂದ್ರ ಯಾವುದೇ ರೀತಿಯ ಅಭಿವೃದ್ಧಿಯನ್ನು ಕಾಣದೇ ಮೂಲೆಗುಂಪಾಗಿದೆ. ಇದು ಪುನರ್ವಸತಿ ಕೇಂದ್ರ ಎನ್ನುವ ಅಸ್ತಿತ್ವವನ್ನು ಕಳೆದುಕೊಳ್ಳುತ್ತಲಿದೆ.

೧.೧೬.೧.೧೨. ರಾಮನಗರ ಪುನರ್ವಸತಿ ಕೇಂದ್ರ ಜಿಲ್ಲಾ ಪಂಚಾಯತ್‌ಗೆ ಹಸ್ತಾಂತರ

ಕರ್ನಾಟಕ ವಿದ್ಯುತ್ ನಿಗಮವು ರಾಮನಗರ ಪುನರ್ವಸತಿ ಕೇಂದ್ರವನ್ನು ೧೯೮೧ರಂದು ಸ್ಥಾಪನೆ ಮಾಡಿ ೨೬.೦೧.೨೦೦೧ರವರೆಗೆ ಸುಮಾರು ಇಪ್ಪತ್ತು ವರ್ಷಗಳವರೆಗೆ ಕಾರ್ಯನಿರ್ವಹಿಸಿತು. ದಿನಾಂಕ ೨೬.೦೧.೨೦೦೧ರಂದು ರಾಮನಗರ ಪುನರ್ವಸತಿ ಕೇಂದ್ರವನ್ನು ಕಾರವಾರ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹಸ್ತಾಂತರ ಮಾಡಲಾಯಿತು.[೨೨೦]

೨.೧೭. ಸೂಪಾ ಜಲಾಶಯ ಯೋಜನೆಯ ಮೂರನೇ ಉಪಹಂತದ ಮುಳುಗಡೆ ಹಾಗೂ ಪುನರ್ವಸತಿ

ಸೂಪಾ ಜಲಾಶಯ ಯೋಜನೆಯ ಮೂರನೇ ಉಪಹಂತದಲ್ಲಿ ಸಂಪೂರ್ಣ ಅಥವಾ ಭಾಗಶಃ ಮುಳುಗಡೆಯಾದ ೪೩೮ ಕುಟುಂಬಗಳಲ್ಲಿ ೨೬೩ ಕುಟುಂಬಗಳು ಪುನರ್ವಸತಿಗೊಳ್ಳಬೇಕಾದವು ಎಂದು ಕೆ.ಪಿ.ಸಿ. ನಿರ್ಧರಿಸುತ್ತದೆ. ಅವರಿಗಾಗಿ ರಾಮನಗರ ಪುನರ್ವಸತಿ ಕೇಂದ್ರವನ್ನೇ ಗುರುತಿಸುತ್ತದೆ. ಆದರೆ ಮೊದಲನೇ ಹಾಗೂ ಎರಡನೇ ಉಪಹಂತದ ಸಂತ್ರಸ್ತರು ರಾಮನಗರ ಪುನರ್ವಸತಿ ಕೇಂದ್ರದ ಕೆಟ್ಟ ಅನುಭವದಿಂದ ಸೋತು ಹೋಗಿದ್ದರು. ಆದ್ದರಿಂದ ಮೂರನೇ ಉಪಹಂತದ ಎಲ್ಲಾ ಸಂತ್ರಸ್ತರು ನಮಗೆ ರಾಮನಗರ ಪುನರ್ವಸತಿ ಕೇಂದ್ರ ಬೇಡವೇ ಬೇಡ ಎಂದು ಹೋರಾಟ ಮಾಡಿದರು. ಬೆಳಗಾವಿಯ ಹೆಮ್ಮಡಗದಲ್ಲಿ ಪುನರ್ವಸತಿ ಕೇಂದ್ರ ದೊರಕಿಸಿಕೊಡಬೇಕಾಗಿ ಆಗ್ರಹಿಸಿದರು. ಆದರೆ ಕ.ವಿ.ನಿ.ನಿ.ಗೆ ಅಲ್ಲಿ ಭೂಮಿ ದೊರೆಯಲಿಲ್ಲ. ಆಗ ಪುನರ್ವಸತಿಗಾಗಿ ನೀರಾವರಿ ಹಾಗೂ ವಿದ್ಯುತ್ ಯೋಜನೆಗಳಿಂದ ಮುಳುಗಡೆಯಾದವರಿಗಾಗಿನ ಪುನರ್ವಸತಿ ತತ್ವಗಳ ಸರಕಾರಿ ಆದೇಶ PWD 282 PPC/85 dtd 23.12.1985 ನ್ನು ಪಾಲಿಸಲು ಯೋಚಿಸಲಾಯಿತು. ಈ ಸರ್ಕಾರಿ ಆದೇಶದಲ್ಲಿ ಕೃಷಿಭೂಮಿ ಕಳೆದುಕೊಂಡವರಿಗೆ ಅವರವರ ಕಳೆದುಕೊಳ್ಳುವಿಕೆಗೆ ತಕ್ಕಂತೆ ಪರಿಹಾರವನ್ನು ಹಣದ ರೂಪದಲ್ಲಿ ಕೊಡುವ ಅವಕಾಶವಿತ್ತು. ಅದರಂತೆ ತಹಶೀಲ್ದಾರರು, ಪುನರ್ವಸತಿ ರಾಮನಗರ ಹಾಗೂ ವಿಶೇಷ ಭೂ ಸ್ವಾಧೀನಾಧಿಕಾರಿ ಸೂಪಾ ಜಲಾಶಯ ಯೋಜನೆ ಅವರಿಗೆ ಎಲ್ಲಾ ಸಂತ್ರಸ್ತರನ್ನು ಭೇಟಿಯಾಗಿ ಅವರ ಅಭಿಪ್ರಾಯ ಸಂಗ್ರಹಿಸುವಂತೆ ಆದೇಶಿಸಲಾಯಿತು. ಈ ಎರಡೂ ಅಧಿಕಾರಿಯವರು ಮೂರನೇ ಹಂತದ ಮುಳುಗಡೆಯ ಎಲ್ಲಾ ಕುಟುಂಬಗಳು ಪರಿಹಾರ ಧನ ಪಡೆದುಕೊಳ್ಳಲು ಒಪ್ಪಿರುತ್ತಾರೆ ಎಂಬುದನ್ನು ತಿಳಿಸಿರುತ್ತಾರೆ. ಅದರಂತೆ ಕ.ವಿ.ನಿ.ನಿ.ರವರು ೨೬೩ ಕುಟುಂಬಗಳಿಗೆ ವಿತರಿಸಲು ವಿಶೇಷ ಭೂ ಸ್ವಾಧೀನಾಧಿಕಾರಿ ಇವರಿಗೆ ಹಣ ಸಂದಾಯ ಮಾಡುತ್ತಾರೆ. ೨೬೩ರಲ್ಲಿ ೨೧೩ ಕುಟುಂಬಗಳಿಗೆ ಒಟ್ಟು ೪೬.೧೫ ಲಕ್ಷ ಹಣವನ್ನು ವಿತರಿಸಲಾಯಿತು, ೪೪ ಕುಟುಂಬಗಳು ತಿರಸ್ಕರಿಸಿದರು, ೦೬ ಕುಟುಂಬಗಳ ವಿಳಾಸಗಳು ತಿಳಿದು ಬಂದಿಲ್ಲ ಎಂಬ ವರದಿಯನ್ನು ನೀಡಿರುತ್ತಾರೆ. ಈ ಮೇಲಿನ ಸರ್ಕಾರಿ ಆದೇಶದಂತೆ ಈ ಕುಟುಂಬಗಳಿಗೆ ನಿವೇಶನಗಳನ್ನು ಜೋಯಿಡಾ ಟೌನ್‌ಶಿಪ್, ಕ್ಯಾಸಲ್‌ರಾಕ್ ಹಾಗೂ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ನೀಡಲಾಯಿತು. ೨೬೩ ಕುಟುಂಬಗಳಲ್ಲಿ ೧೩೬ ಕುಟುಂಬಗಳು ೧೯೮೫ರ ಮಾನ್ಸೂನ್ ಮುಂಚೆ ಸ್ಥಳಾಂತರವಾದರು. ೧೨೭ ಕುಟುಂಬಗಳು ೧೯೮೬ ರ ಮಾನ್ಸೂನ್ ಮುಂಚೆ ಸ್ಥಳಾಂತರವಾದರು. ಇವರಿಗೆ ಉಚಿತ ಸಾರಿಗೆ ಸೌಲಭ್ಯವನ್ನು ಒದಗಿಸಲಾಯಿತು.[೨೨೧]

೨.೧೭.೧. ಜೋಯಿಡಾ ಟೌನ್‌ಶಿಪ್ ಪುನರ್ವಸತಿ ಕೇಂದ್ರದ ಮಾಹಿತಿ

ಜೋಯಿಡಾ ಇದು ಹಿಂದಿನ ಸೂಪಾ ತಾಲ್ಲೂಕಿನ ಒಂದು ಗ್ರಾಮವಾಗಿತ್ತು. ಆದರೆ ಸೂಪಾ ಪಟ್ಟಣ ಮುಳುಗಿದ ನಂತರ ಜೋಯಿಡಾವನ್ನು ತಾಲ್ಲೂಕು ಕೇಂದ್ರವಾಗಿ ಮಾಡಿ ತಾಲ್ಲೂಕು ಕಛೇರಿಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಸೂಪಾ ತಾಲ್ಲೂಕಿನ ನಕಾಶೆಯನ್ನು ಎಸ್.ಬಿ. ದೇಸಾಯಿ ಮಡಚಿದಾಗ ಜೋಯಿಡಾ ಗ್ರಾಮ ಮಧ್ಯಕ್ಕೆ ಬಂದಿದ್ದುದರಿಂದಾಗಿ ಜೋಯಿಡಾವನ್ನು ತಾಲ್ಲೂಕು ಕೇಂದ್ರವನ್ನಾಗಿಸಲಾಯಿತು ಎಂದು ಶರಶ್ಚಂದ್ರ ಗುರ್‌ಜಾರ್‌ರವರು ಹೇಳುತ್ತಾರೆ. ಇದು ಬೆಳಗಾವಿ-ರಾಮನಗರದಿಂದ-ಸೂಪಾ ಜಲಾಶಯ ರಸ್ತೆಯ ಮೂಲಕ-ಸದಾಶಿವಘಡ-ಕಾರವಾರ ರಸ್ತೆಯಲ್ಲಿ ರಾಮನಗರದಿಂದ ೪೫ ಕಿ.ಮೀ. ಮತ್ತು ಸೂಪಾ ಜಲಾಶಯದಿಂದ ೨೨ ಕಿ.ಮೀ. ದೂರದಲ್ಲಿದೆ. ದಾಂಡೇಲಿಯಿಂದ ಕಾರವಾರ ರಸ್ತೆಯಲ್ಲಿ ೨೨ಕಿ.ಮೀ. ದೂರದಲ್ಲಿದೆ. ಸೂಪಾ ಜಲಾಶಯದ ಮೂರನೇ ಉಪಹಂತದಲ್ಲಿ ಮುಳುಗಡೆಯಾದವರಿಗೆ ಪುನರ್ವಸತಿ ಕೇಂದ್ರವನ್ನು ಜೋಯಿಡಾದಲ್ಲಿ ರೂಪಿಸಲು ಗುರುತಿಸಲಾಗಿದೆ. ಜೋಯಿಡಾ ಟೌನ್‌ಶಿಪ್ ಪುನರ್ವಸತಿ ಕೇಂದ್ರವು ಜೋಯಿಡಾ ಕೇಂದ್ರಸ್ಥಾನದಿಂದ ಅರ್ಧ ಕಿ.ಮೀ.ಗಿಂತಲೂ ಕಡಿಮೆ ದೂರದಲ್ಲಿದೆ. ಇದನ್ನು ಕ.ವಿ.ನಿ.ನಿ. ಇವರು ೧೯೮೯ರಲ್ಲಿ ನಿರ್ಮಾಣ ಮಾಡಿದ್ದಾರೆ. ಮೊದಲು ಇಲ್ಲಿ ಯಾರೂ ವಾಸಮಾಡುತ್ತಿರಲಿಲ್ಲ.

ಜೋಯಿಡಾದಲ್ಲಿ ಕರ್ನಾಟಕ ವಿದ್ಯುತ್ ನಿಗಮದಿಂದ ೧೫೭ ನಿವೇಶನ ನಿರ್ಮಿಸಿ ನಿವೇಶನದ ಮೇರೆ ಗುರುತಿಸುವುದನ್ನು ಯೋಜಿಸಲಾಗಿತ್ತು. ಕ.ವಿ.ನಿ.ನಿ. ಧನಸಹಾಯದಿಂದ ಲೋಕೋಪಯೋಗಿ ಇಲಾಖೆಯು ಪುನರ್ವಸತಿ ಕಾಲೋನಿಯಲ್ಲಿ ರಸ್ತೆ ನಿರ್ಮಾಣ ಮಾಡಲು ಯೋಜಿಸಿತ್ತು. ಕರ್ನಾಟಕ ಭೂಸೇನಾ ಕಾರ್ಪೋರೇಶನ್ ಲಿಮಿಟೆಡ್ ಇವರಿಂದ ಕಾಲೋನಿಗೆ ನೀರು ಸರಬರಾಜು ಮಾಡಲು ನಿರ್ಧರಿಸಲಾಗಿತ್ತು. ಇದಕ್ಕಾಗಿ ಕೆ.ಪಿ.ಸಿ. ೬ ಲಕ್ಷ ಹಣ ವಿನಿಯೋಗಿಸಿದೆ. EE/KEB/Sirsi dn/sirsi ಇವರಲ್ಲಿ ಜೋಯಿಡಾ ಪುನರ್ವಸತಿ ಕೇಂದ್ರಕ್ಕೆ ಬೀದಿ ದೀಪದ ವ್ಯವಸ್ಥೆಗಾಗಿ ಖರ್ಚಿನ ಪಟ್ಟಿ ದಿನಾಂಕ ೧೦.೧೦.೧೯೮೧ ರಂದು ಕೇಳಲಾಗಿದೆ[೨೪೭] ಎಂದು ಕಡತಗಳು ತಿಳಿಸುತ್ತವೆ. ಜೋಯಿಡಾ ಟೌನ್‌ಶಿಪ್‌ನಲ್ಲಿ ೧೭೮ ಮನೆ ನಿವೇಶನಗಳನ್ನು ನೀಡಲಾಗಿರುವ ಸಂತ್ರಸ್ತರ ಪಟ್ಟಿಯಿದೆ. ಇಲ್ಲಿ ಫಾರೆಸ್ಟ್ ಸರ್ವೆ ನಂಬರ್ 147/A1A1A ಅನುಕ್ರಮ ಸಂಖ್ಯೆ ೦೧ ರಿಂದ ೧೭೭ ರವರೆಗೆ ನಿವೇಶನ ಹಂಚಿಕೆ ಇರುತ್ತದೆ.

ಈ ಪುನರ್ವಸತಿ ಕೇಂದ್ರದಲ್ಲಿನ ಟೌನ್‌ಶಿಪ್ ಯೋಜನೆಯಲ್ಲಿ ಉದ್ಯಾನವನ, ರಸ್ತೆ, ವಿದ್ಯುತ್ ಪೂರೈಕೆ ಇತ್ಯಾದಿ ಯೋಜನೆಗಳ ದೊಡ್ಡ ಪಟ್ಟಿಯೇ ಇದೆ. ಅದರೆ ಅಲ್ಲಿ ವಾಸ್ತವವಾಗಿ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸಲಾಗಿಲ್ಲ. ಪುನರ್ವಸತಿ ಕೇಂದ್ರದಲ್ಲಿ ಈವರೆಗೆ ಕೇವಲ ೨೦ ಸಂತ್ರಸ್ತರು ಮನೆಯನ್ನು ಕಟ್ಟಿರುತ್ತಾರೆ. ೭೫ ನಿವೇಶನಗಳನ್ನು ಕುಣಬಿ ಸಮುದಾಯದವರಿಗೆ ಹಂಚಲಾಗಿದೆ. ಆದರಲ್ಲಿ ಕೇವಲ ಮೂರು ಕುಟುಂಬಗಳು ಬಂದು ಮನೆ ಕಟ್ಟಿಕೊಂಡಿದ್ದಾರೆ. ಗುಡ್ಡ ಹಾಗೂ ಇಳಿಜಾರು

ಪ್ರದೇಶದಲ್ಲಿ ನಿರಾಶ್ರಿತರಿಗೆ ನಿವೇಶನ ಹಂಚಿಕೆ ಮಾಡಿದ್ದು ಮನೆಗಳನ್ನು ನಿರ್ಮಿಸಲು ಯೋಗ್ಯವಿಲ್ಲ. ಕೇವಲ ೩೫ ಜನರಿಗೆ ಮಾತ್ರಾ ನಿವೇಶನ ಸಿಕ್ಕಿದೆ. ಉಳಿದ ೧೪೨ ನಿವೇಶನಗಳು ಇನ್ನೂ ಸರಿಯಾಗಿ ಹಂಚಿಕೆಯಾಗಿಲ್ಲ. ಇದರ ಮರು ಹಂಚಿಕೆ ಮಾಡಬೇಕಾಗಿದೆ. ಪುನರ್ವಸತಿ ಕೇಂದ್ರದಲ್ಲಿ ದೇಸಾಯಿ–ದೇವುಳಿ–ಕುಣಬಿ–ಹರಿಜನ–ಗೌಳಿ ಹೀಗೆ ಎಲ್ಲಾ ಸಮುದಾಯದವರನ್ನು ಮಿಶ್ರಮಾಡಿ ಮನೆ ನಿವೇಶನಗಳನ್ನು ಗುರುತಿಸಿರುತ್ತಾರೆ. ಇಲ್ಲಿರುವ ಸಂತ್ರಸ್ತರಾದ ಲಕ್ಷ್ಮಣ ದೇವುಳಿಯವರು ಹೇಳುವ ಪ್ರಕಾರ 'ಕ.ವಿ.ನಿ.ನಿ.ದವರು ಬೇರೆಯವರ ಮಾಲಿಕತ್ವದ ಸರ್ವೆ ನಂಬರ್‌ದಲ್ಲಿ ರಸ್ತೆ ಹಾಗೂ ನಿವೇಶನಗಳನ್ನು ಹಂಚಿದ್ದಾರೆ. ನಿವೇಶನ ಮಾತ್ರಾ ಕೊಟ್ಟು ಕೈಬಿಟ್ಟಿದ್ದಾರೆ'.

ಪುನರ್ವಸತಿ ಕೇಂದ್ರದಲ್ಲಿ ಕಾಡು ಬೆಳೆದಿದೆ. ಪ್ರವೇಶದಲ್ಲಿ ಒಂದಿಷ್ಟು ಜಲ್ಲಿ ರಸ್ತೆಯಿದೆ. ಪುನರ್ವಸತಿ ಕೇಂದ್ರದ ಒಳಗಡೆ ಎಲ್ಲೂ ರಸ್ತೆಯಿಲ್ಲ. ವಿದ್ಯುತ್ ಸೌಕರ್ಯ ಒದಗಿಸಿಲ್ಲ. ಬೀದಿ ದೀಪದ ಸೌಕರ್ಯವಿಲ್ಲ. ಕಾಡಿನ ಮಧ್ಯದಲ್ಲಿ ಅಲ್ಲಲ್ಲಿ ಜನ ಕಾಡು ಕಡಿದು ಅವರವರ ಜಾಗದಲ್ಲಿ ವಾಸ ಮಾಡಿದರೆ ಹೇಗಿರುತ್ತೋ ಹಾಗಿದೆ ಪುನರ್ವಸತಿ ಕೇಂದ್ರದ ನೋಟ. ಅಕ್ಷರಶಃ ಅಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳಿಲ್ಲ. ಅದಲ್ಲದೇ ಹಿಂದೆ ಕ.ವಿ.ನಿ.ನಿ.ದವರು ಒದಗಿಸಿಕೊಟ್ಟಿರಬಹುದು ಎನ್ನುವುದಕ್ಕೆ ಯಾವುದೇ ರೀತಿಯ ಕುರುಹುಗಳು ಕೂಡಾ ಅಲ್ಲಿ ಇಲ್ಲವೇ ಇಲ್ಲ.

'ಮೂರನೇ ಉಪಹಂತದಲ್ಲಿ ಮುಳುಗಡೆಯಾದ ಅದೆಷ್ಟೋ ಸಂತ್ರಸ್ತರಿಗೆ ಸಿಕ್ಕ ನಿವೇಶನ ಯಾವುದು ಎಲ್ಲಿದೆ ಎಂದು ಗೊತ್ತಿಲ್ಲ' ಎಂದು ಸಂತ್ರಸ್ತರಾದ ದೇವಿದಾಸ್‌ರವರು ಹೇಳುತ್ತಾರೆ. 'ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಿಲ್ಲ. ಕೆಲವರ ನಿವೇಶನ ಹೊಲ ಹಾಗೂ ಹೊಂಡದಲ್ಲಿದೆ. ಅಲ್ಲಿ ತಂಟೆ ತಕರಾರಿದೆ. ಮನೆ ಕಟ್ಟಲು ಸಾಧ್ಯವಿಲ್ಲ. ಕಂದಾಯ ಭೂಮಿ ಆಗಿಲ್ಲ. ಅವರವರ ಮನೆಗೆ ಅವರವರೇ ವಿದ್ಯುತ್ ಸಂಪರ್ಕ ದೊರಕಿಸಿಕೊಂಡಿದ್ದಾರೆ. ಪುನರ್ವಸತಿ ಕೇಂದ್ರದ ಸುತ್ತ ಇರುವ ಸರ್ಕಾರಿ ಜಾಗ ಅತಿಕ್ರಮಣವಾಗಿದೆ. ನಿರಾಶ್ರಿತರ ನಿವೇಶನಗಳು ಸಂಬಂಧವಿಲ್ಲದವರ ಪಾಲಾಗುತ್ತಿದೆ ಹಾಗೂ ಈಗಾಗಲೇ ಹೆಸ್ಕಾಂ ಗ್ರೀಡ್ ನವರು ಸಾಕಷ್ಟು ಜಾಗ ಕಬಳಿಸಿದ್ದಾರೆ' ಎಂದು ಲಕ್ಷ್ಮಣ ದೇವುಳಿಯವರು ದೂರುತ್ತಾರೆ. ಕ.ವಿ.ನಿ.ನಿ., ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್‌ಗಳಿಂದ ಈ ಪುನರ್ವಸತಿ ಕೇಂದ್ರ ಕಡೆಗಣಿಸಲ್ಪಟ್ಟಿದೆ ಎಂದು ಸ್ಥಳೀಯರು ದೂರುತ್ತಾರೆ. ಕ.ವಿ.ನಿ.ನಿ.ದ ಕಾಗದ ಪತ್ರಗಳಲ್ಲಿ ಈ ಪುನರ್ವಸತಿ ಕೇಂದ್ರದ ಎಲ್ಲಾ ಕೆಲಸಗಳೂ ಪೂರ್ತಿಯಾಗಿದೆ. ಆದರೆ ವಾಸ್ತವವಾಗಿ ಇಲ್ಲಿ ಎಲ್ಲಾ ಕೆಲಸವೂ ಬಾಕಿಯಾಗಿದೆ ಎನ್ನುವ ಮಾಹಿತಿ ಅಧ್ಯಯನದ ಸಮಯದಲ್ಲಿ ಲಭ್ಯವಾಗಿದೆ.

೨.೧೭.೨. ಕ್ಯಾಸೆಲ್‌ರಾಕ್ ಪುನರ್ವಸತಿ ಕೇಂದ್ರದ ಮಾಹಿತಿ

ರಾಮನಗರದಿಂದ ಪಣಜಿ ರಸ್ತೆಯ ಕಡೆಗೆ ೨೫ ಕಿ.ಮೀ. ದೂರ ಕ್ರಮಿಸಿ ಎಡಗಡೆಗೆ ಬಾಜಾರಕೂಣಂಗದೆಡೆಗೆ ಸುಮಾರು ೮ ಕಿ.ಮೀ ದೂರ ಕ್ರಮಿಸಿದರೆ

ಕ್ಯಾಸೆಲ್‌ರಾಕ್ ಊರು ಸಿಗುತ್ತದೆ. ಕಲಂಬೋಲಿ ಇದರ ಮೊದಲ ಹೆಸರು. ಬ್ರಿಟಿಷರು ಇದಕ್ಕೆ 'ಕ್ಯಾಸಲ್‌ರಾಕ್' ಎಂದು ನಾಮಕರಣ ಮಾಡಿದ್ದಾರೆ.[೨೪೮] ಇದು ಅಯೇಡಾ ಗ್ರಾಮ, ಬಾಜಾರಕೂಣಂಗ ಗ್ರಾಮಪಂಚಾಯತ್, ಕ್ಯಾಸೆಲ್‌ರಾಕ್ ಕಂದಾಯ ವೃತ್ತದಲ್ಲಿ ಬರುತ್ತದೆ. ಕ್ಯಾಸಲ್‌ರಾಕ್ ಪಟ್ಟಣದಿಂದ ಬಾಜಾರಕೂಣಂಗದೆಡೆಗೆ ಡೊಂಕಾದ ದಾರಿಯಲ್ಲಿ ೧ಕಿ.ಮೀ. ಕ್ರಮಿಸಿದರೆ ಲಕ್ಷ್ಮೀವಾಡ ಎಂಬ ಪ್ರದೇಶ ಬರುತ್ತದೆ. ಈ ಲಕ್ಷ್ಮಿವಾಡ ಎಂಬ ಪ್ರದೇಶದ ಹತ್ತಿರ ಕಾಡಿಗೆ ಹೊಂದಿಕೊಂಡಂತೆ ಪುನರ್ವಸತಿ ಕೇಂದ್ರದ ನಿವೇಶನ ಗುರುತಿಸಿದ ಪ್ರದೇಶವಿದೆ.

ಕಂದಾಯ ಇಲಾಖೆ ಕ್ಯಾಸಲ್‌ರಾಕ್ ಇಲ್ಲಿಂದ ಕರ್ನಾಟಕ ವಿದ್ಯುತ್ ನಿಗಮವು ೦೫ ಎಕರೆ ಭೂಮಿ ಪಡೆದು ನಿವೇಶನ ಹಾಗೂ ಕಾಲೋನಿ ರಸ್ತೆಗಳನ್ನು ನಿರ್ಮಿಸಿದೆ. ನೀರು ಸರಬರಾಜು, ಪೈಪ್‌ಲೈನ್, ನಳ್ಳಿ ಜೋಡಣೆಯನ್ನು ಸಂತ್ರಸ್ತರು ಅಲ್ಲಿಗೆ ಸ್ಥಳಾಂತರ ಆದ ತಕ್ಷಣ ಕೊಡಲಾಗುವುದು ಎಂದು ಯೋಜಿಸಲಾಗಿತ್ತು. ಕರ್ನಾಟಕ ವಿದ್ಯುತ್ ಮಂಡಳಿಯವರಿಗೆ ಹೊಸ ಪುನರ್ವಸತಿ ಕೇಂದ್ರದಲ್ಲಿ ಬೀದಿ ದೀಪ ವ್ಯವಸ್ಥೆ ಮಾಡಲು ಕೇಳಿಕೊಳ್ಳಲಾಗಿತ್ತು. ೧.೫೭ ಲಕ್ಷ ರೂಪಾಯಿಗಳನ್ನು EE/KEB/Sirsi dn/sirsi ಇವರಿಗೆ ೧೦.೧೦.೧೯೯೧ ರಂದು ಹಣಸಂದಾಯ ಮಾಡಲಾಗಿದೆ[೨೪೯] ಎಂದು ಕಡತಗಳಲ್ಲಿ ದಾಖಲಾಗಿದೆ.

ವಾಸ್ತವವಾಗಿ ಯಾವ ಸಂತ್ರಸ್ತರೂ ಇಲ್ಲಿ ಬಂದು ವಾಸವಿರುವುದಿಲ್ಲ. ಪುನರ್ವಸತಿ ಕೇಂದ್ರ ಅನ್ನೋ ಯಾವ ಲಕ್ಷಣಗಳೂ ಅಲ್ಲಿ ಇಲ್ಲ. ಕಾಡಾಗಿರುವ ಆ ಪ್ರದೇಶದಲ್ಲಿ ಸಂಶೋಧಕರು ಒಳಹೊಕ್ಕು ಹುಡುಕಾಡಿದ್ದಾರೆ. ಅಲ್ಲಿ ಕೆಲವು ಕುರುಹುಗಳಾದ ಮೂರು ಕಡೆ ಮೋರಿಗಳು, ಜಲ್ಲಿಯಿಂದ ಕೂಡಿದ ಸಣ್ಣ ಸಣ್ಣ ಮೂರು ಒಳರಸ್ತೆಗಳು, ಹಾಗೂ ನಿವೇಶನದ ಮೇರೆಯ ಕಲ್ಲುಗಳು ಕಂಡುಬಂದವು. ಇಷ್ಟು ಬಿಟ್ಟರೆ ಪುನರ್ವಸತಿ ಕೇಂದ್ರದಲ್ಲಿ ಇನ್ನೇನೂ ಕಂಡುಬರುವುದಿಲ್ಲ. ಕೇಂದ್ರದ ತುಂಬೆಲ್ಲಾ ಕಾಡು ತುಂಬಿ ಲಕ್ಷ್ಮಿವಾಡದವರ ಬಯಲು ಶೌಚಾಲಯವಾಗಿದೆ. ಇದು ಐದು ಎಕರೆ ಇದೆಯೆಂದು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಪತ್ರಗಳಲ್ಲಿ ಕಂಡುಬರುತ್ತದೆ.

'ಕೆ.ಪಿ.ಸಿ.ಯವರು ಜಲ್ಲಿ ರಸ್ತೆ ಮಾಡಿದ್ದರು ಹಾಗೂ ಪೈಪುಲೈನು ಮಾಡಲು ತಯಾರಿ ನಡೆಸಿದ್ದರು. ಆದರೆ ಇಲ್ಲಿ ಯಾವ ಸಂತ್ರಸ್ತರು ಬರದೇ ಇರುವ ಕಾರಣ ಇಲ್ಲಿ ಬೇರೆ ಏನೂ ಮೂಲಭೂತ ವ್ಯವಸ್ಥೆ ಮಾಡಲಾಗಿಲ್ಲ'[೨೨೨] ಅದಲ್ಲದೇ ೨೦೧೬ ರ ಒಳಗಾಗಿ ಇಲ್ಲಿನವರು ಮನೆ, ಜಾಗ ಬಿಡಬೇಕೆಂದು ಅರಣ್ಯ ಇಲಾಖೆ ನೋಟೀಸ್ ಕೊಟ್ಟಿದೆ. ಆಗ ಅವರು ಬಂದಿದ್ದರೂ ಈಗ ಅಣಶಿ-ದಾಂಡೇಲಿ ಹುಲಿ ಅಭಯಾರಣ್ಯದ ಹೆಸರಲ್ಲಿ ಮತ್ತೆ ಅವರು ಸಂತ್ರಸ್ತರಾಗುತ್ತಿದ್ದರು.[೨೨೩]

ಈ ರೀತಿಯಾಗಿ ಸೂಪಾ ಜಲಾಶಯದಿಂದ ಮೂರು ಉಪಹಂತಗಳಲ್ಲಿ ಮುಳುಗಡೆಯಾದ ಸಂತ್ರಸ್ತರನ್ನು ಪುನರ್ವಸತಿಗೊಳಿಸುವುದಕ್ಕಾಗಿ ಗುರುತಿಸಿದ್ದ ರಾಮನಗರ, ಜೋಯಿಡಾ ಮತ್ತು ಕ್ಯಾಸೆಲ್‌ರಾಕ್ ಪುನರ್ವಸತಿ ಕೇಂದ್ರಗಳಲ್ಲಿ ರಾಮನಗರ

ಪುನರ್ವಸತಿ ಕೇಂದ್ರ ಮಾತ್ರ ಟೌನ್‌ಶಿಪ್ ಆಗಿದೆ. ಅಲ್ಲಿ ಒಂದಿಷ್ಟು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಆದರೆ ಮುಂದಿನ ದಿನಗಳಲ್ಲಿ ಅಲ್ಲಿ ಯಾವುದೇ ರೀತಿಯ ಸೌಲಭ್ಯಗಳನ್ನು ದೊರಕಿಸಿಕೊಡುವುದಾಗಲೀ, ದುರಸ್ತಿ ಕಾರ್ಯವಾಗಲೀ ನಡೆದೇ ಇಲ್ಲ. ಈ ಪುನರ್ವಸತಿ ಕೇಂದ್ರದಲ್ಲಿ ಸಾಕಷ್ಟು ಸಂತ್ರಸ್ತರು ನೆಲೆಗೊಳ್ಳಲೇ ಇಲ್ಲ. ಆದ್ದರಿಂದ ಈ ಯೋಜನೆ ಪರಿಣಾಮಕಾರಿಯಲ್ಲದ ಪುನರ್ವಸತಿ ಯೋಜನೆ ಆಗಿದೆ ಎಂಬ ಮಾಹಿತಿಯನ್ನು ಅಧ್ಯಯನದ ಸಮಯದಲ್ಲಿ ಪಡೆದುಕೊಳ್ಳಲಾಗಿದೆ. ಅದರಂತೆ ಜೋಯಿಡಾದಲ್ಲಿ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳ ವ್ಯವಸ್ಥೆ ಆಗಲಿಲ್ಲ. ಕೇವಲ ಕಾಗದ ಪತ್ರಗಳಲ್ಲಿ ಜಾರಿಯಾಗಿದ್ದು ಸಂತ್ರಸ್ತರಿಗೆ ಅನ್ಯಾಯವಾಗಿದೆ. ಕ್ಯಾಸೆಲ್‌ರಾಕ್‌ನಲ್ಲಿ ಕೂಡಾ ಯಾವುದೇ ಮೂಲಭೂತ ಸೌಲಭ್ಯಗಳ ನಿರ್ಮಾಣ ಆಗಲಿಲ್ಲ. ಮುಖ್ಯವಾಗಿ ಸಂತ್ರಸ್ಥರು ಅಲ್ಲಿಗೆ ಬಂದು ನೆಲೆಸಲೇ ಇಲ್ಲ. ಜೋಯಿಡಾ ಹಾಗೂ ಕ್ಯಾಸೆಲ್‌ರಾಕ್ ಯೋಜನೆ ಸಂಪೂರ್ಣ ವಿಫಲಗೊಂಡಿದ್ದು ಸಾಕಷ್ಟು ಸಂತ್ರಸ್ತರಿಗೆ ಇದರಿಂದ ಅನ್ಯಾಯವಾಗಿದೆ. ಸೂಪಾ ಜಲಾಶಯ ಯೋಜನೆಯ ಸಂತ್ರಸ್ತರ ಪುನರ್ವಸತಿ ಯೋಜನೆಗಳು ಸರಿಯಾಗಿ ಅನುಷ್ಠಾನಗೊಳ್ಳಲಿಲ್ಲ. ಇದರಿಂದ ಸಂತ್ರಸ್ತರ ಬದುಕಿಗೆ ಸಾಕಷ್ಟು ತೊಂದರೆಯಾಗಿದೆ.

೨.೧೮. ಪುನರ್ವಸತಿಗಾಗಿ ಸೂಪಾ ಜಲಾಶಯ ಸಂತ್ರಸ್ತರ ಹೋರಾಟಗಳು

ಪುನರ್ವಸತಿ ಕೇಂದ್ರದಲ್ಲಿನ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ಸಂತ್ರಸ್ತರು ರಾಮನಗರದಲ್ಲಿ ಸಾಕಷ್ಟು ಹೋರಾಟಗಳನ್ನು ಮಾಡಿದ್ದಾರೆ. ದಿನಾಂಕ ೦೮-೧೦ ಡಿಸೆಂಬರ್ ೧೯೮೨ ರಾಮನಗರದಲ್ಲಿ ಸರಪಳಿ ಉಪವಾಸ ಮಾಡಿದ್ದಾರೆ. ದಿನಾಂಕ ೧೭-೧೦-೧೯೮೨ರಲ್ಲಿ ಮೂಲಭೂತ ಸೌಲಭ್ಯಗಳ ಬೇಡಿಕೆಯಿಟ್ಟು ರಾಮನಗರ ಬಂದ್ ಮಾಡಿದ್ದಾರೆ. ೨೫-೦೧-೨೦೦೧ರಲ್ಲಿ ರಾಮನಗರದ ಶಿವಾಜಿ ಸರ್ಕಲ್‌ನಲ್ಲಿ ೧೦ ದಿವಸ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಅಂದು ೫೭ ಜನರಿಗೆ ೩೦೭ ಕೇಸ್ ಹಾಕಿ ಜೈಲಿಗೆ ಸೇರಿಸಿದರು. ಆ ನಂತರ ಯಾರೂ ಏನು ಹೋರಾಟ ಮಾಡಲಿಲ್ಲ. ಕರೆದರೂ ಯಾರೂ ಬರುವುದಿಲ್ಲ. ದುಡಿದ ದುಡ್ಡೆಲ್ಲಾ ವ್ಯಾಜ್ಯೆ ಸಲುವಾಗಿ ಕಾರವಾರಕ್ಕೆ ಹೋಗಿ ಬರುವುದಕ್ಕೇ ಸರಿಯಾಗುತ್ತದೆ ಎಂದು ಸಂತ್ರಸ್ತರಾದ ಶರಶ್ಚಂದ್ರ ಗುರ್‌ಜಾರ್ ರವರು ಹೇಳುತ್ತಾರೆ.

ಇದಲ್ಲದೇ ಸಂತ್ರಸ್ತರು ಪತ್ರದ ಮೂಲಕ ಕೂಡಾ ತಮ್ಮ ಪುನರ್ವಸತಿ ಕೇಂದ್ರಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳಿಗೆ ಬೇಡಿಕೆಗಳನ್ನು ಇಟ್ಟಿದ್ದಾರೆ. ರಾಮನಗರದಲ್ಲಿರುವ ೨೦ ಹಾಸಿಗೆಗಳ ಆಸ್ಪತ್ರೆಯನ್ನು ೩೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಿ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯಗಳನ್ನು ದೊರಕಿಸಿಕೊಡಬೇಕಾಗಿ ಶ್ರೀರಾಮ ಯುವಕ ಮಂಡಳ ರಾಮನಗರ ಇವರು ಮಂತ್ರಿಗಳಾದ ಪ್ರಭಾಕರ ರಾಣೆಯವರಿಗೆ ದಿನಾಂಕ ೦೩.೧೧.೧೯೯೩ರಂದು ಪತ್ರ ಬರೆದಿರುತ್ತಾರೆ. ರಾಮನಗರದಲ್ಲಿ ಪೋಲೀಸ್ ಸ್ಟೇಷನ್ ಪ್ರಾರಂಭಿಸಬೇಕೆಂದು ದಿನಾಂಕ ೨೬.೯.೧೯೯೭ ರಂದು ಶ್ರೀಮತಿ ಯಶೋಧಾ ಎಸ್.ವರ್ಕನಳ್ಳಿಯವರು ರಾಜ್ಯ

ಗೃಹಸಚಿವರಿಗೆ ಪತ್ರ ಬರೆದಿರುತ್ತಾರೆ. ರಾಮನಗರಕ್ಕೆ ಚೌಪಾಳಿಯಿಂದ ಕುಡಿಯುವ ನೀರಿನ ಸರಬರಾಜು ಮಾಡಬೇಕೆಂದು ಜೋಯಿಡಾ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ದಿನಾಂಕ ೨೬.೯.೧೯೯೭ ರಂದು ಕಾರವಾರ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಿರುತ್ತಾರೆ. ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಭೂಸಾಗುವಳಿ ಮಾಡುವ ರೈತರಿಗೆ ನೀರಾವರಿ ಸೌಲಭ್ಯ ದೊರಕಿಸಿಕೊಡಬೇಕೆಂದು ಜೋಯಿಡಾ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ದಿನಾಂಕ ೨೬.೯.೧೯೯೭ ರಂದು ಕಾರವಾರ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಿರುತ್ತಾರೆ. ರಾಮನಗರ ಪುನರ್ವಸತಿ ಕೇಂದ್ರದ ಮೂಲಭೂತ ಸೌಲಭ್ಯಗಳ ಸಮಸ್ಯೆಯ ಕುರಿತು ಕಲ್ಲಪ್ಪ ಡಿ. ರಾಣೆ ಇವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ. ಶ್ರೀ.ಶರಶ್ಚಂದ್ರ ಗುರ್ಜಾರ್‌ರವರು ರಾಮನಗರದ ಸಂತ್ರಸ್ತರ ಅವಶ್ಯಕತೆಗಳನ್ನು ಪೂರೈಸಲು ಬೃಹತ್ ಕೈಗಾರಿಕಾ ಮಂತ್ರಿಗಳಿಗೆ ದಿನಾಂಕ ೦೯.೨.೧೯೯೫ ರಂದು ಪತ್ರ ಬರೆದಿರುತ್ತಾರೆ. ಹೀಗೆ ಇನ್ನೂ ಹಲವಾರು ರೀತಿಯಲ್ಲಿ ಬೇರೆ ಬೇರೆ ಸಂತ್ರಸ್ತರು ಬೇರೆ ಬೇರೆ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಪತ್ರವನ್ನು ಬರೆದಿರುತ್ತಾರೆ. ಹೆಚ್ಚಿನ ಸಂದರ್ಭದಲ್ಲಿ ಅವು ಯಾವುವು ಕೂಡಾ ಈಡೇರಲಿಲ್ಲ ಎಂದು ಶರಶ್ಚಂದ್ರ ಗುರ್‌ಜಾರ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಜೋಯಿಡಾ ಟೌನ್‌ಶಿಪ್ ಪುನರ್ವಸತಿ ಕೇಂದ್ರದ ಮೂಲಭೂತ ಸೌಲಭ್ಯಗಳ ನಿರ್ಮಾಣಕ್ಕಾಗಿ, ನಿವೇಶನವನ್ನು ಯೋಗ್ಯ ರೀತಿಯಲ್ಲಿ ಹಂಚಿಕೆ ಮಾಡುವ ಸಲುವಾಗಿ ಸಂತ್ರಸ್ತರು ನಿರಂತರವಾಗಿ ಹೋರಾಡುತ್ತಲೇ ಬಂದಿದ್ದಾರೆ. ಆದರೆ ಅದರಿಂದ ಯಾವುದೇ ರೀತಿಯ ಪ್ರಯೋಜನ ಆಗಲಿಲ್ಲ ಎಂದ ಲಕ್ಷ್ಮಣ ದೇವುಳಿಯವರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

೨.೧೯. ಪುನರ್ವಸತಿ ಕೇಂದ್ರದ ಅನುಸರಣಾ ಯೋಜನೆಗಳು

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ತಾನು ನಿರ್ಮಿಸಿದ ರಾಮನಗರ ಪುನರ್ವಸತಿ ಕೇಂದ್ರದ ಮೇಲುಸ್ತುವಾರಿಯನ್ನು ಐದು ವರ್ಷ ವಹಿಸಿಕೊಂಡಿತು. ಸದರಿ ಪುನರ್ವಸತಿ ಕೇಂದ್ರದಲ್ಲಿ ಈ ಅವಧಿಯಲ್ಲಿ ಏನೇ ಸೌಲಭ್ಯಗಳು ಬೇಕಿದ್ದರೂ ಅದನ್ನು ಕೆ.ಪಿ.ಸಿ.ಯೇ ನಿರ್ಮಾಣ ಮಾಡಬೇಕಿತ್ತು. ಕೆ.ಪಿ.ಸಿ. ರಾಮನಗರದ ಒಳ ರಸ್ತೆಗಳಿಗೆ ಕೇವಲ ಜಲ್ಲಿಕಲ್ಲು ಹಾಕಿದ್ದು ಡಾಂಬರೀಕರಣ ಮಾಡಿರುವುದಿಲ್ಲ. ಉದ್ಯಾನವನ, ಕ್ರೀಡಾ ಮೈದಾನ, ಕೈಗಾರಿಕಾ ಘಟಕ ನಿರ್ಮಾಣ ಮಾಡಲಿಲ್ಲ. ನೀರಾವರಿ ಸೌಲಭ್ಯ ಮಾಡಲಿಲ್ಲ. ಉಳಿದ ಅವಶ್ಯಕತೆಗಳಾದ ನಲ್ಲಿ, ತೆರೆದ ಬಾವಿ, ಕೊಳವೆ ಬಾವಿ, ವಿದ್ಯುತ್ ಸೌಲಭ್ಯ, ಶಾಲೆ, ದೇವಸ್ಥಾನ, ರಂಗಮಂದಿರ, ಕೃಷಿ ಮಾರುಕಟ್ಟೆ ಇತ್ಯಾದಿಗಳನ್ನು ತೀರಾ ಕಡಿಮೆ ಸಂಖ್ಯೆಯಲ್ಲಿ ನಿರ್ಮಾಣ ಮಾಡಿದೆ. ೪೮ ಊರುಗಳ ಜನರಿಗೆ ಈ ಸೌಲಭ್ಯಗಳು ಏನೂ ಸಾಲದಾಗಿವೆ. ಕೆ.ಪಿ.ಸಿ. ತನ್ನ ಪುನರ್ವಸತಿ ಕೇಂದ್ರವನ್ನು ಕಾರವಾರ ಜಿಲ್ಲಾ ಪಂಚಾಯತ್‌ಗೆ ಹಸ್ತಾಂತರ ಮಾಡಬೇಕೆಂದು ೧೫ ವರ್ಷಗಳ ಕಾಲ ಪ್ರಯತ್ನಪಟ್ಟಿತು. ಈ ಹದಿನೈದು ವರ್ಷಗಳು ಕೆ.ಪಿ.ಸಿ.ಯಿಂದಾಗಲೀ ಅಥವಾ ಜಿಲ್ಲಾ ಪಂಚಾಯತ್‌ನಿಂದಾಗಲೀ ಯಾವುದೇ

ಅಭಿವೃದ್ಧಿ ಕಾರ್ಯಕ್ರಮಗಳು ನಡೆದಿಲ್ಲ. ಈ ಅವಧಿಯಲ್ಲಿ ರಾಮನಗರದ ಮೂಲಭೂತ ಸೌಲಭ್ಯಗಳೆಲ್ಲವೂ ನೆಲಕಚ್ಚಿದವು. ತದನಂತರ ೨೬.೦೧.೨೦೦೧ ರಂದು ರಾಮನಗರ ಪುನರ್ವಸತಿ ಕೇಂದ್ರವನ್ನು ಕಾರವಾರ ಜಿಲ್ಲಾ ಪಂಚಾಯತ್‌ಗೆ ಹಸ್ತಾಂತರ ಮಾಡಲಾಯಿತು.[೨೨೪]

ಕರ್ನಾಟಕ ವಿದ್ಯುತ್ ನಿಗಮ ತನ್ನ ಅವಧಿಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಹೊರತಾಗಿ ಪುನರ್ವಸತಿ ಕೇಂದ್ರದಲ್ಲಿ ಪ್ರಸ್ತುತದವರೆಗೂ ಸರ್ಕಾರದಿಂದಾಗಲೀ ಅಥವಾ ಸ್ವಯಂಸೇವಾ ಸಂಸ್ಥೆಗಳಿಂದಾಗಲೀ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಕ್ರಮ ನಡೆದಿಲ್ಲ ಎಂಬುದು ಅಧ್ಯಯನದಿಂದ ಕಂಡುಬಂದಿದೆ.

ಉಪಸಂಹಾರ

ಈ ರೀತಿಯಾಗಿ ಭಾರತದಲ್ಲಿ ಸ್ವತಂತ್ರ ಪೂರ್ವದಿಂದಲೂ ಅಭಿವೃದ್ಧಿ ಹೆಸರಲ್ಲಿ ಬೃಹತ್ ಯೋಜನೆಗಳನ್ನು ಕೈಗೊಳ್ಳುತ್ತಾ ಬರಲಾಗಿದೆ. ಈ ಯೋಜನೆಗಳಿಂದ ಸಾಕಷ್ಟು ಭೂಸ್ವಾಧೀನಗೊಳಿಸಿ ಜನರನ್ನು ಸ್ಥಳಾಂತರಗೊಳಿಸಲಾಗಿದೆ. ಸಮರ್ಪಕವಾದ ಪುನರ್ವಸತಿ ಸೌಲಭ್ಯ ದೊರೆಯದೇ ಅದೆಷ್ಟೋ ಬುಡಕಟ್ಟುಗಳು ಹಾಗೂ ಮೂಲನಿವಾಸಿಗಳು ನೆಲೆಯಿಲ್ಲದೇ ಅತಂತ್ರ ಬದುಕನ್ನು ಸಾಗಿಸುವ ಪರಿಸ್ಥಿತಿಗೆ ಅಭಿವೃದ್ಧಿ ಹೆಸರಿನಲ್ಲಿ ಕೈಗೊಂಡ ವಿವಿಧ ಯೋಜನೆಗಳು ಕಾರಣವಾಗಿವೆ. ಹಾಗೆಯೇ ಸೂಪಾ ಜಲಾಶಯ ಸಂತ್ರಸ್ತರ ಪುನರ್ವಸತಿ ಕೇಂದ್ರವಾದ ರಾಮನಗರದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿದೆ. ಇದು ಅವ್ಯವಸ್ಥೆಗಳ ಆಗರವಾಗಿದೆ. ಯಾವುದೇ ರೀತಿಯ ಅನುಸರಣಾ ಯೋಜನೆಗಳು ಅಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ. ಜೋಯಿಡಾ ಹಾಗೂ ಕ್ಯಾಸೆಲ್ ರಾಕ್‌ನಲ್ಲಿ ಟೌನ್‌ಶಿಪ್ ನಿರ್ಮಾಣ ಮಾಡದೇ ಸಂತ್ರಸ್ತರಿಗೆ ಮೋಸ ಆಗಿದೆ. ಒಟ್ಟಾರೆಯಾಗಿ ಪುನರ್ವಸತಿ ಯೋಜನೆ ಹೆಸರಿಗಷ್ಟೇ ಅನುಷ್ಠಾನಗೊಂಡಿದ್ದು ಕೆಲವರಿಗಷ್ಟೇ ಇದರಿಂದ ಪ್ರಯೋಜನವಾಗಿರುತ್ತದೆ. ತಳಸಮುದಾಯಗಳು ಇದರಿಂದ ಸಾಕಷ್ಟು ನಷ್ಟವನ್ನು ಅನುಭವಿಸಿದ್ದಾರೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಕೊನೆಟಿಪ್ಪಣಿ

೧) ಕೃಷ್ಣಮೂರ್ತಿ ಎಚ್. ಆರ್. *ಅಭಿವೃದ್ಧಿ ಅರ್ಥಶಾಸ್ತ್ರ*, ೨೦೧೩, ಪುಟ-೯; ನಾಗರಾಜ್ ಡಿ. ಆರ್., *ಸಂಸ್ಕೃತಿ ಸಂಕಥನ*, ೨೦೦೮, ಪುಟ-೩೬೭ ಹಾಗೂ ಆರ್ಥಿಕ ಅಭಿವೃದ್ಧಿ ಸಿದ್ಧಾಂತಗಳ ಅಧ್ಯಯನದಿಂದ ಕಂಡುಕೊಂಡ ಮಾಹಿತಿ

೨) Jhingan M.L. *'The Economics of Development and planning'*, 1999, ಪುಟ ೬೬-೯೧ ರವರೆಗೆ ಅಧ್ಯಯನ ಮಾಡಿ ಬರೆಯಲಾಗಿದೆ.

೩) ಕೃಷ್ಣಮೂರ್ತಿ ಎಚ್. ಆರ್., *ಅಭಿವೃದ್ಧಿ ಅರ್ಥಶಾಸ್ತ್ರ*, ೨೦೧೨, ಪುಟ ೩೭೦-೩೭೩

೪) ಅದೇ, ೨೦೧೨, ಪುಟ ೩೭೫-೩೭೬

೫) ಕೃಷ್ಣಮೂರ್ತಿ ಎಚ್. ಆರ್., *ಅಭಿವೃದ್ಧಿ ಅರ್ಥಶಾಸ್ತ್ರ*, ೨೦೧೨, ಪುಟ ೫

೬) ಅದೇ, ೨೦೧೨, ಪುಟ ೫

೭) ವಿಜ್ಞಾನೇಶ್ವರರು, ಮಿತಾಕ್ಷರದಲ್ಲಿ ಬರೆದಿದ್ದನ್ನು ಮೋಹನಕೃಷ್ಣ ರೈ. ಕೆ., ಪ್ರಭುತ್ವ ಮತ್ತು ಜನತೆ, ೨೦೦೮, ಪುಟ-೨೧ರಲ್ಲಿ ಉಲ್ಲೇಖಿಸಿದ್ದಾರೆ.

೮) Satyajit K. Singh, *Evaluating Large Dams in India,*1990, ಪುಟ-೫೬೧

೯) ವಿಶ್ವೇಶ್ವರಯ್ಯ ಸರ್. ಎಂ.(ಮೂಲ), ಗಜಾನನ ಶರ್ಮ (ಕನ್ನಡಕ್ಕೆ), 'ನನ್ನ ವೃತ್ತಿ ಜೀವನದ ನೆನಪುಗಳು', ೨೦೦೫, ಪುಟ-೯೬

೧೦) Visvesvaraya M, Planned Economy for India, 1934

೧೧) ಚಂದ್ರಪೂಜಾರಿ ಎಂ., ಜನಾಯೋಜನೆ, ೨೦೦೪, ಪುಟ-೫

೧೨) Jhingan M.L. 'The Economics of Development and planning, 1999, ಪುಟ- ೬೨೫

೧೩) ಅದೇ, ಪುಟ-೬೨೫

೧೪) ಅದೇ, ಪುಟ-೬೨೫

೧೫) ನಾಗರಾಜ್ ಡಿ. ಆರ್., ಸಂಸ್ಕೃತಿ ಸಂಕಥನ, ೨೦೦೮, ಪುಟ-೨೯೬

೧೬) Esther Duflo and Rohini Pande, DAMS, ಪುಟ-೧

೧೭) ಅದೇ

೧೮) Dams, Displacement, Policy and law in India,

೧೯) ಭಾರತದ ಚರಿತ್ರೆ, ಶಬರಿ ಕೋಚಿಂಗ್ ಕೇಂದ್ರ, ೨೦೧೫, ಪುಟ-೯೬.

೨೦) ಬಸವಾ. ಕೆ. ಡಿ. ಭಾರತದ ಅರ್ಥವ್ಯವಸ್ಥೆಯ ಪರಿಚಯ, ೨೦೦೦, ಪುಟ-೧೨.೪

೨೧) ಅದೇ

೨೨) ಚಂದ್ರಪೂಜಾರಿ ಎಂ., ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು, ೨೦೧೦, ಪುಟ-೯

೨೩) ಅದೇ, ಪುಟ-೯.

೨೪) ತಿರುಪತಿ ನಾಯಕ್, ೨೦೧೦, ಪುಟ ೫೦

೨೫) ಅದೇ, ಪುಟ-೫೦

೨೬) ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಬೆಳೆದು ಬಂದ ಬಗೆಗೆ ಸಂಬಂಧಿಸಿದ ಬರಹಗಳ ಅಧ್ಯಯನದಿಂದ ಪಡೆದ ಮಾಹಿತಿಯನ್ನು ಆಧರಿಸಿ ಬರೆಯಲಾಗಿದೆ.

೨೭) ಅದೇ

೨೮) Jhingan M.L. 'The Economics of Development and planning, 1999,ಪುಟ- ೬೨೭

೨೯) Sah D. C. , *Development and Displacement: National Rehabilitation Policy,*1995, pp. 3055

೩೦) ಬೋರಲಿಂಗಯ್ಯ ಹಿ.ಚಿ., *ಬುಡಕಟ್ಟು ಅಧ್ಯಯನ,* (ಸಂ ೫ ಸಂಚಿಕೆ ೨), ೨೦೦೮, ಪುಟ-೩

೩೧) ಅದೇ

೩೨) ಉಲ್ಲಾಸ ಕಾರಂತ ಕೆ. *ಕಾಡುಪ್ರಾಣಿಗಳ ಜಾಡಿನಲ್ಲಿ* (೩ನೇ ಆವೃತ್ತಿ), ೨೦೧೧, ಪುಟ-೫೯

೩೩) ಬೋರಲಿಂಗಯ್ಯ ಹಿ.ಚಿ., *ಬುಡಕಟ್ಟು ಅಧ್ಯಯನ,* (ಸಂ ೫ ಸಂಚಿಕೆ ೨), ೨೦೦೮, ಪುಟ-೩

೩೪) ಉಮಾಪತಿ ಡಿ, *ಈ ಆದಿವಾಸಿ 'ಮುನ್ನಿ' ನಿಮ್ಮ ಮಗಳೇ ಆಗಿದ್ದಿದ್ರೆ.....* ವಿಜಯ ಕರ್ನಾಟಕ, ೭ ಏಪ್ರಿಲ್ ೨೦೧೨

೩೫) Mahendra P Lama, *Internal displacement in India: causes, protection and dilemmas,* (ಅಂತರ್ಜಾಲದಿಂದ)

೩೬) ಸ್ಥಳಾಂತರದ ಅಂಕಿ ಅಂಶಗಳಿಗೆ ಸಂಬಂಧಿಸಿದ ವಿವಿಧ ಪ್ರಬಂಧಗಳಲ್ಲಿ ಬರೆದಿರುವ ಆಧಾರದಲ್ಲಿ ದಾಖಲಿಸಲಾಗಿದೆ.

೩೭) World Commission on Dams (WCD), *Dams and Development: A new framework for decision-making*. 2000, part III

೩೮) United States Committee for Refugees and Immigrants,

೩೯) Mahendra P Lama,Internal displacement in India (ಅಂತರ್ಜಾಲದಿಂದ)

೪೦) Walter Fernandes, Mining in north eastern India in the age of globalisation, page 2

೪೧) Walter Fernandes,India.s Forced Displacement Policy and Practice 2007, p- 3,

೪೨) Walter Fernandes, Mining in north eastern India in the age of globalisation, 3

೪೩) Quoted in Sophie Namy, *Addressing the social impacts of large Hydropower Dams,* 2007, page-12

೪೪) UNHCR- *Figure at Glance*

೪೫) Internal Displacement monitoring centre (IDMC), 'India: Large numbers of IDPs are unassisted and in Need of protection 2007,

೪೬) Mahendra P Lama, *Internal displacement in India*

೪೭) Quoted in ಜಸ್ವೀರ್ ಸಿಂಗ್, ರಾಹು (ಕ), ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ,೨೦೦೦,ಪುಟ-೧೦

೪೮) UNHCR- *Figure at Glance*

೪೯) Biswaranjan Mohanty, *Displacement and Rehabilitation of Tribals*, 2005, pp. 1319

೫೦) Cernea Michael, World bank report series,1996, pp. 298

೫೧) Cernea Michael, World bank report series,1996, pp. 298

೫೨) Fernandes, Das & Rao (1989) Quoted in Dams, Displacement, Policy and Law in India,

೫೩) ರಂಗನಾಥ್, *ಪರಿಸರ ಅಧ್ಯಯನ,* ೨೦೧೨ (೫), ಪುಟ-೨೩೨

೫೪) Fernandes, Das & Rao (1989) Quoted in Dams, Displacement, Policy and Law in India,

೫೫) Nalin Sing Negi and Sujatha Ganguly, '*Development Projects vs. Internally Displaced Populations in India,* 2011

೫೬) Arundhati Roy,*The greater Common Good,* 1999 (ಅಂತರ್ಜಾಲದಿಂದ)

೫೭) Parashuraman 1999:167 quoted by Sharma R N,andShashi R Singh,'*Displacement in Singrauli Region: Entitlements and Rehabilitation',* 2009, pp. 65,

೫೮) *ಪ್ರಭಾಕರ ಎ.ಎಸ್, ಬುಡಕಟ್ಟು ಅಧ್ಯಯನ ೪,* ೨೦೦೫, ಪುಟ-೧೪೮

೫೯) Miloon Kothari, Human Rights in India Status Report 2012, pp 149

೬೦) Quoted in Walter Fernandes, *Economic and political weekly,* 2004, pp 1191

೬೧) Quoted in Virginius Xasa, *Journal of Law, Property and Society,* 2016, pp. 158

೬೨) ಪ್ರಭಾಕರ ಎ.ಎಸ್, *ಬುಡಕಟ್ಟು ಅಧ್ಯಯನ ೪,*೨೦೦೫, ಪುಟ-೧೪೮

೬೩) Quoted in ಮುಜಾಫ್ಫರ್ ಅಸ್ಸಾದಿ, *ಬುಡಕಟ್ಟು ಸಂಸ್ಕೃತಿ,* ೨೦೧೧ ಪುಟ ೧೩೦.

೬೪) ಉಮಾಪತಿ ಡಿ, *ವಿಜಯ ಕರ್ನಾಟಕ ೨೮ ಏಪ್ರಿಲ್ ೨೦೧೨,* ಚಿತ್ರದುರ್ಗ.

೬೫) ಪ್ರಭಾಕರ ಎ.ಎಸ್, *ಬುಡಕಟ್ಟು ಅಧ್ಯಯನ ೪,* ೨೦೦೫, ಪುಟ-೧೪೮

೬೬) Walter Fernandes, Social Action 55 (n 2, April-June) pp 123-137

೬೭) ಅದೇ

೬೮) ನಾಗರಾಜ್ ಡಿ. ಆರ್., *ಸಂಸ್ಕೃತಿ ಸಂಕಥನ,* ೨೦೦೮, ಪುಟ-೨೯೭

೬೯) ನಾಗೇಶ ಹೆಗಡೆ, *ಪ್ರತಿದಿನ ಪರಿಸರ ದಿನ,* ೨೦೧೦ ಪುಟ-೯೫

೭೦) Sinha B. K., *Draft National Policy for Rehabilitation: Objectives and Principles,*1996, pp. 1453

೭೧) Biswaranjan Mohanty, *Displacement and Rehabilitation of Tribals*, 2005, pp. 1318.

೭೨) Robinson W.Courtland, *Risks and Rights: The Causes, Consequences, and Challenges of Development-induced Displacement,* 2003 (ಅಂತರ್ಜಾಲದಿಂದ)

೭೩) Sinha B. K., Economic and Political Weekly, Vol. 31, No. 24 1996, pp. 1453-1460,

೭೪) Walter Fernandes, Economic and Political Weekly, Vol. 39, No. 12, 2004, pp. 1191-1193,

೭೫) ಭೂಸ್ವಾಧೀನದಲ್ಲಿ ಉಚಿತ ಪರಿಹಾರ ಮತ್ತು ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕು ಅಧಿನಿಯಮ, ೨೦೧೩

೭೬) ಕುಮಾರಸ್ವಾಮಿ ಬಿ.ಎಂ, *ನದಿಗಳ ಜೋಡಣೆ –ಸಾಧ್ಯವೇ– ಸಾಧುವೇ?* ೨೦೧೨, ಪುಟ-೮

೭೭) ಗಣೇಶ್ ಮೊಗಳ್ಳಿ, 'ದಲಿತರು ಮತ್ತು ಜಾಗತೀಕರಣ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೭೮) ಇಂದಿರಾಗಾಂಧಿಯವರು ಭಾರತದ ಸಮಾಜ ಕಾರ್ಯಕರ್ತರಾದ ಬಾಬಾ ಅಮ್ಟೆಯವರಿಗೆ ಬರೆದ ಪತ್ರ, quoted in,*The greater Common Good,* 1999 (ಅಂತರ್ಜಾಲದಿಂದ)

೭೯) ಬೋರಲಿಂಗಯ್ಯ ಹಿ.ಚಿ. *ಕಾಡು ಕಾಂಕ್ರೀಟ್ ಮತ್ತು ಜಾನಪದ,* ೧೯೯೫, ಪುಟ-೯

೮೦) ಬೋರಲಿಂಗಯ್ಯ ಹಿ.ಚಿ. *ಆದಿವಾಸಿ ಆಖ್ಯಾನ,* ೨೦೦೮ ಪುಟ-೧೪೨

೮೧) ಬಸವಾ. ಕೆ.ಡಿ. *ಭಾರತದ ಅರ್ಥವ್ಯವಸ್ಥೆಯ ಪರಿಚಯ,* ೨೦೦೦, ಪುಟ ೧-೧೨

೮೨) Michael M. Cernea, Impoverishment Risks, Risk Management, and Reconstruction: A Model for Population Displacement and Resettlement , 2015

೮೩) ಪ್ರಭಾಕರ್ ಎ.ಎಸ್., ಬುಡಕಟ್ಟು ಅಧ್ಯಯನ ೪, ೨೦೦೫, ಪುಟ-೧೪೫

೮೪) ಶಿವಸುಂದರ್, ಚಾರ್ವಾಕ, ೨೦೧೧, ಪುಟ-೧೮

೮೫) ನಾಗರಾಜ್ ಡಿ. ಆರ್., ಸಂಸ್ಕೃತಿ ಸಂಕಥನ, ೨೦೦೮, ಪುಟ-೨೯೭

೮೬) ಗಣೇಶ್ ಮೊಗಳ್ಳಿ, ಆದಿವಾಸಿ ಆಖ್ಯಾನ, ಪುಟ ೫೦೧,

೮೭) Biswaranjan Mohanty, 'Displacement and Rehabilitation of Tribals', 2005, pp. 1318-1320,

೮೮) ಅದೇ

೮೯) ಜಸ್ವೀರ್ ಸಿಂಗ್, ರಾಹು (ಕ), ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ. ೨೦೦೦. ಪುಟ-೧೦

೯೦) ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ೨೦೦೦ ಪುಟ- ೩೩

೯೧) Biswaranjan Mohanty, 'Displacement and Rehabilitation of Tribals', 2005, pp. 1318-1320,

೯೨) ಗಣೇಶ್ ಮೊಗಳ್ಳಿ, ಆದಿವಾಸಿ ಆಖ್ಯಾನ, ಪುಟ ೫೦೧,

೯೩) ಅದೇ, ಪುಟ- ೧೮೭

೯೪) ಪ್ರಭಾಕರ ಎ.ಎಸ್.,ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ೨೦೦೦ ಪುಟ-೧೫೩

೯೫) ನಾರಾಯಣ ಕೆ. ವಿ., ಅಭಿವೃದ್ಧಿ ಅಧ್ಯಯನ, ಸಂಪುಟ ೬ ಸಂಚಿಕೆ ೧, ೨೦೦೭, ಪುಟ-೧

೯೬) ಶಿವಸುಂದರ್, ಚಾರ್ವಾಕ, ೨೦೧೧, ಪುಟ-೧೮

೯೭) ಜಗದೀಶ ಕೊಪ್ಪ, ಎನ್. ಅಣುವೆಂಬ ಸದ್ದಿಲ್ಲದ ಸಾವ ಕುರಿತು...., ೧೯೯೯, ಪುಟ-೦೪

೯೮) ನಾಗೇಶ ಹೆಗಡೆ, 'ಪ್ರತಿದಿನ ಪರಿಸರ ದಿನ', (ದ್ವಿತೀಯ ಆವೃತ್ತಿ) ೨೦೧೦, ಪುಟ-೧೨

೯೯) ಕುಮಾರಸ್ವಾಮಿ ಬಿ.ಎಂ, *ನದಿಗಳ ಜೋಡಣೆ -ಸಾಧ್ಯವೇ- ಸಾಧುವೇ?,* ೨೦೧೨, ಪುಟ-೮

೧೦೦) Sangeeta Goyal, Economic and Political Weekly, 1996 pp. 1462.

೧೦೧) Sujit Kumar Mishra, 'Economic and Political Weekly, 2005, pp. 2689

೧೦೨) Mahendra P Lama,*Internal displacement in India: causes, protection and dilemmas,* (ಅಂತರ್ಜಾಲದಿಂದ)

೧೦೩) ಜಸ್ವೀರ್ ಸಿಂಗ್, ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ೨೦೦೦, ಪುಟ-೧೦

೧೦೪) Walter Fernandes, Agenda- Infochange, No.12, 2008, pp 8-12

೧೦೫) ಶಿವಸುಂದರ್, ಚಾರ್ವಾಕ, ೨೦೧೧, ಪುಟ-೨೬೮

೧೦೬) Walter Fernandes, Agenda- Infochange, No.12, 2008, pp 8-12

೧೦೭) ಅದೇ

೧೦೮) Ravi Hemadri, Dams, Displacement, Policy and Law in India- World Bank, 1999 pp121

೧೦೯) Michael. M. Cernea, Progress in India: New legislation to protect persons internally displaced by development projects, 2013,

೧೧೦) ಪ್ರಭಾಕರ ಎ.ಎಸ್. ಬುಡಕಟ್ಟು ಅಧ್ಯಯನ ೪ ಪುಟ-೧೪೮

೧೧೧) ನಾಗರಾಜ್ ಡಿ. ಆರ್., ಸಂಸ್ಕೃತಿ ಸಂಕಥನ, ೨೦೦೮, ಪುಟ-೨೯೭

೧೧೨) Biswaranjan Mohanty,*Displacement and Rehabilitation of Tribals*, 2005, pp. 1318.

೧೧೩) ಶಿವಸುಂದರ್, ಚಾರ್ವಾಕ, ೨೦೧೧, ಪುಟ-೨೬೮

೧೧೪) ಬೋರಲಿಂಗಯ್ಯ ಹಿ.ಚಿ. ಆದಿವಾಸಿ ಆಖ್ಯಾನ, ೨೦೦೮, ಪುಟ-೧೪೫

೧೧೫) ಬೋರಲಿಂಗಯ್ಯ, ಹಿ.ಚಿ., ಬುಡಕಟ್ಟು ದೈವಾರಾಧನೆ, ೨೦೦೦, ಪುಟ ೩೧

೧೧೬) ಗುಲಾಬಿ ಬಿಳಿಮಲೆ, ಒಳಮನ, ೨೦೧೦, ಪುಟ-೬೩

೧೧೭) ಸೇತುಮಾಧವ ಚೂಡಿದಾರ್, ಬುಡಕಟ್ಟು ಅಧ್ಯಯನ ೪, ೨೦೦೫, ಪುಟ-೧೨೩

೧೧೮) ಸೇತುಮಾಧವ ಚೂಡಿದಾರ್, ಬುಡಕಟ್ಟು ಅಧ್ಯಯನ ೪, ೨೦೦೫, ಪುಟ-೧೨೩-೧೨೪

೧೧೯) ಗಣೇಶ್ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ೧೯೯೯

೧೨೦) ಬೋರಲಿಂಗಯ್ಯ ಹಿ.ಚಿ. ಆದಿವಾಸಿ ಆಖ್ಯಾನ, ೨೦೦೮, ಪುಟ-೧೪೫

೧೨೧) ಉಮಾಪತಿ.ಡಿ. 'ಹುತ್ತವ ಬಡಿದರೆ ಉರಗ ಸಾಯುವುದೇ', ವಿಜಯ ಕರ್ನಾಟಕ, ಸಂಪುಟ ೯, ಸಂಚಿಕೆ ೨೬೯, ೨೮ ಏಪ್ರಿಲ್ ೨೦೧೨, ಚಿತ್ರದುರ್ಗ

೧೨೨) ಈ ಆದಿವಾಸಿ 'ಮುನ್ನಿ' ನಿಮ್ಮ ಮಗಳೇ ಆಗಿದ್ದಿದ್ರೆ..., ವಿಜಯ ಕರ್ನಾಟಕ, ೦೭ ಏಪ್ರಿಲ್ ೨೦೧೨, ಚಿತ್ರದುರ್ಗ , ಸಂಚಿಕೆ ೨೬೯ ಸಂಪುಟ ೦೯

೧೨೩) ಅದೇ

೧೨೪) ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ಅಧ್ಯಯನ, ಸಂಪುಟ ೫ ಸಂಚಿಕೆ ೨, ೨೦೦೫, ಪುಟ-೪-೫

೧೨೫) ನಾಗೇಶ ಹೆಗಡೆ, 'ಪ್ರತಿದಿನ ಪರಿಸರ ದಿನ', (ದ್ವಿ ಆ) ೨೦೧೦

೧೨೬) ನಾಗೇಶ ಹೆಗಡೆ, 'ಪ್ರತಿದಿನ ಪರಿಸರ ದಿನ', (ದ್ವಿ ಆ) ೨೦೧೦

೧೨೭) Rangachari, R., &othersLarge Dams: India's Experience, 2000 pp115

೧೨೮) Sanjay, K. Pradhan, Development, Displacement and Marginalisation, 2014 pp 171

೧೨೯) Michael M Cernea,Financing for Development- Benefit Sharing mechanisms in population resettlement, Economic and Political weekly, Vol. XL 11 No.12, 2007

೧೩೦) Kate Hoshour and Jennifer Kalafut, A growing global crisis Development-induced Displacement & Resettlement", International Accountability Project. www.accountabilityproject.org, 2010

೧೩೧) Ghazala Shahabuddin & others, Creation of 'Inviolate Space' - Lives, Livelihoods and Conflict in Sarika Tiger Reserve,, 2007,

೧೩೨) ಬಸವಾ. ಕೆ.ಡಿ. ಭಾರತದ ಅರ್ಥವ್ಯವಸ್ಥೆಯ ಪರಿಚಯ, ೨೦೦೦, ಪುಟ ೪

೧೩೩) ಬೋರಲಿಂಗಯ್ಯ. ಹಿ.ಚಿ. ಒಂದು ಬುಡಕಟ್ಟಿನ ಲೋಕದೃಷ್ಟಿಯಲ್ಲಿ, ೨೦೧೧ ಪುಟ-೧೨೩

೧೩೪) ಈ ಆದಿವಾಸಿ 'ಮುನ್ನಿ' ನಿಮ್ಮ ಮಗಳೇ ಆಗಿದ್ದಿದ್ರೆ.., ವಿಜಯ ಕರ್ನಾಟಕ, ೦೭ ಏಪ್ರಿಲ್ ೨೦೧೨, ಚಿತ್ರದುರ್ಗ, ಸಂಚಿಕೆ ೨೬೯ ಸಂಪುಟ ೦೯

೧೩೫) Don E.Mc Allister & others, Bio diversity impacts of large dams, 2001

೧೩೬) ಅದೇ

೧೩೭) Pradip Baijal and P. K. Singh, 'Large Dams: Can We Do without Them?'2000,1662

೧೩೮) Don E.Mc Allister & others, Bio diversity impacts of large dams, 2001

೧೩೯) Pradip Baijal and P. K. Singh, 'Large Dams: Can We Do without Them?2000,pp 1664

೧೪೦) Pradip Baijal and P. K. Singh, 'Large Dams: Can We Do without Them?2000,pp 1664

೧೪೧) Satyajit K. Singh, Evaluating Large Dams in India, pp 1990, 565

೧೪೨) Central water commission report, 2013

೧೪೩) Satyajit K. Singh, Evaluating Large Dams in India, pp 1990, 567

೧೪೪) ಅದೇ

೧೪೫) ಸೂಪಾ ಅಣೆಕಟ್ಟಿನ ಗಣೇಶಗುಡಿ ಜಲವಿದ್ಯುದಾಗಾರದ ನಿವೃತ್ತ ಸಹಾಯಕ ಅಭಿಯಂತರರಾದ ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೪೬) Chief Engineer (Elect-Const) Brief details of Kalinadi Hydro Electric Project Stage- 1&2, Ambikanagar, 22.12.2004,

೧೪೭) ಅದೇ

೧೪೮) Chief Engineer (Elect-Const) Brief details of Kalinadi Hydro Electric Project Stage- 1&2, Ambikanagar, 22.12.2004, ಸೂಪಾ ಸಂತ್ರಸ್ತರು ಹಾಗೂ ಸಮಾಜಸೇವಾ ಕಾರ್ಯಕರ್ತರಾದ ಶ್ರೀ. ವಾಸುದೇವ ಶರಶ್ಚಂದ್ರ ಗುರ್ಜಾರ್ ನೀಡಿದ ಪ್ರತಿಯಿಂದ

೧೪೯) ಅದೇ

೧೫೦) ಅದೇ

೧೫೧) ಸೂಪಾ ಅಣೆಕಟ್ಟಿನ ಗಣೇಶಗುಡಿ ಜಲವಿದ್ಯುದಾಗಾರದ ನಿವೃತ್ತ ಸಹಾಯಕ ಅಭಿಯಂತರರಾದ ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೫೨) ಸೂಪಾ ಅಣೆಕಟ್ಟಿನ ಗಣೇಶಗುಡಿ ಜಲವಿದ್ಯುದಾಗಾರದ ನಿವೃತ್ತ ಸಹಾಯಕ ಅಭಿಯಂತರರಾದ ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೫೩) Chief Engineer(Elect-Const)Brief details of Kalinadi Hydro Electric Project Stage- 1&2, Ambikanagar, 22.12.2004

೧೫೪) ಉತ್ತರ ಕನ್ನಡದ ಪ್ರಾಕೃತಿಕ ಪರಿಸರಕ್ಕೆ ಸಂಬಂಧಿಸಿದಂತಹ ಬೇರೆ ಬೇರೆ ಮೂಲಗಳನ್ನು ಸಂಗ್ರಹಿಸಿ ಬರೆಯಲಾಗಿದೆ.

೧೫೫) ಅಂತರ್ಜಾಲ, www.census2011.co.in.../district/269-...

೧೫೬) ಕರ್ನಾಟಕ ಪರಿಸರ ಪರಿಸ್ಥಿತಿ ಅಧ್ಯಯನ ವರದಿ ೧೯೮೫-೮೬ರ ಮಾಹಿತಿ, ಬೋರಲಿಂಗಯ್ಯ ಹಿ.ಚಿ., ಕುಣಬಿಯರು,೨೦೧೦ ಪು-೧೦-೧೧ ಪುಸ್ತಕದಿಂದ ಹಾಗೂ ಅಂತರ್ಜಾಲದಿಂದ ಪಡೆದ ಮಾಹಿತಿ

೧೫೭) ವಿಷ್ಣುನಾಯ್ಕ, ಉತ್ತರ ಕನ್ನಡದ ಮೆಲುಕು-ಮುನ್ನೋಟ, ೨೦೦೭ ಪುಟ-೪೮

೧೫೮) ಅದೇ

೧೫೯) ಅದೇ

೧೬೦) ಅದೇ

೧೬೧) ಅದೇ

೧೬೨) ವಿಷ್ಣುನಾಯ್ಕ, ಉತ್ತರ ಕನ್ನಡದ ಮೆಲುಕು-ಮುನ್ನೋಟ, ೨೦೦೭ ಪುಟ-೪೮

೧೬೩) ಅದೇ, ಪು-೪೯.

೧೬೪) ವಿಷ್ಣುನಾಯ್ಕ, ಉತ್ತರ ಕನ್ನಡದ ಮೆಲುಕು-ಮುನ್ನೋಟ, ೨೦೦೭ ಪುಟ-೪೮

೧೬೫) ಅದೇ, ಪುಟ-೪೯

೧೬೬) ಅದೇ

೧೬೭) ಅದೇ

೧೬೮) National Bank for Agriculture and Rural Development, Bangalore Potential Linked Plan 1999-2000, Uttara Kannada District,1998

೧೬೯) ಅದೇ

೧೭೦) ಅದೇ

೧೭೧) ಅದೇ

೧೭೨) ವಿಷ್ಣುನಾಯ್ಕ, ಉತ್ತರಕನ್ನಡದ ಮೆಲುಕು-ಮುನ್ನೋಟ, ೨೦೦೭ ಪುಟ-೪೨

೧೭೩) ಅದೇ

೧೭೪) ಅದೇ

೧೭೫) ಅದೇ

೧೭೬) Chief Engineer(Elect-Const)Brief details of Kalinadi Hydro Electric Project Stage- 1&2, Ambikanagar,22.12.2004

೧೭೭) ಸೂಪಾ ಅಣೆಕಟ್ಟಿನ ಗಣೇಶಗುಡಿ ಜಲವಿದ್ಯುದಾಗಾರದ ನಿವೃತ್ತ ಸಹಾಯಕ ಅಭಿಯಂತರರಾದ ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೭೮) Salient features of supa dam KPCL, Kali hydroelectric project stage-1

೧೭೯) ಮಿಲಿನಿಯಂ ಸಾಮಾನ್ಯ ಅಧ್ಯಯನ, ಪುಟ-೬೯೧ ಬುಕ್‌ಹೌಸ್ ೨೦೦೫

೧೮೦) Salient features of supa dam KPCL, Kali hydroelectric project stage-1

೧೮೧) ಸೂಪಾ ಅಣೆಕಟ್ಟಿನ ಗಣೇಶಗುಡಿ ಜಲವಿದ್ಯುದಾಗಾರದ ನಿವೃತ್ತ ಸಹಾಯಕ ಅಭಿಯಂತರರಾದ ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ ಹಾಗೂ Chief Engineer (Elect-Const) Brief details of Kalinadi Hydro Electric Project Stage- 1&2, Ambikanagar, 22.12.2004

೧೮೨) ಸೂಪಾ ಅಣೆಕಟ್ಟಿನ ಗಣೇಶಗುಡಿ ಜಲವಿದ್ಯುದಾಗಾರದ ನಿವೃತ್ತ ಸಹಾಯಕ ಅಭಿಯಂತರರಾದ ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೮೩) ಅದೇ

೧೮೪) ಅದೇ

೧೮೫) ಅದೇ

೧೮೬) ಅದೇ

೧೮೭) ಪುನರ್ವಸತಿ ತಹಶೀಲ್ದಾರರ ಕಛೇರಿ ಕಾಳಿ ಜಲವಿದ್ಯುತ್ ಯೋಜನೆ ರಾಮನಗರ, ಕಾಳಿ ಜಲವಿದ್ಯುತ್ ಯೋಜನೆ ಕೆಳಗೆ ಮುಳುಗಡೆಯಾದ ಪ್ರದೇಶದಲ್ಲಿ ಆಸ್ತಿ ಕಳೆದುಕೊಂಡ ಜನರಿಗೆ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಒದಗಿಸಲಾದ ಸೌಕರ್ಯಗಳನ್ನು ಹಾಗೂ ಇತರೇ ಮಾಹಿತಿ ಕುರಿತು ಟಿಪ್ಪಣಿ, (ಸೂಪಾ ಜಲಾಶಯ ಸಂತ್ರಸ್ತರಾದ ಶ್ರೀಯುತ ಲಕ್ಷ್ಮಣ ದೇವುಳಿ ನೀಡಿರುವ ಪ್ರತಿ)

೧೮೮) ಅದೇ

೧೮೯) ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೯೦) Chief Engineer (Elect-Const)Brief details of Kalinadi Hydro Electric Project Stage- 1&2, Ambikanagar, 22.12.2004

೧೯೧) Assistant commissioner karwar sub division, comprehensive note on important decisions on the problems connected with the rehabilitation of persons under kali nadi hydro electric project

೧೯೨) ಪುನರ್ವಸತಿ ತಹಶೀಲ್ದಾರರ ಕಛೇರಿ ಕಾಳಿ ಜಲವಿದ್ಯುತ್ ಯೋಜನೆ ರಾಮನಗರ, ಕಾಳಿ ಜಲವಿದ್ಯುತ್ ಯೋಜನೆ ಕೆಳಗೆ ಮುಳುಗಡೆಯಾದ ಪ್ರದೇಶದಲ್ಲಿ ಆಸ್ತಿ ಕಳೆದುಕೊಂಡ ಜನರಿಗೆ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಒದಗಿಸಲಾದ ಸೌಕರ್ಯಗಳನ್ನು ಹಾಗೂ ಇತರೇ ಮಾಹಿತಿ ಕುರಿತು ಟಿಪ್ಪಣಿ

೧೯೩) ಅದೇ

೧೯೪) ಪುನರ್ವಸತಿ ತಹಶೀಲ್ದಾರರ ಕಛೇರಿ ಕಾಳಿ ಜಲವಿದ್ಯುತ್ ಯೋಜನೆ ರಾಮನಗರ, ಕಾಳಿ ಜಲವಿದ್ಯುತ್ ಯೋಜನೆ ಕೆಳಗೆ ಮುಳುಗಡೆಯಾದ ಪ್ರದೇಶದಲ್ಲಿ ಆಸ್ತಿ ಕಳೆದುಕೊಂಡ ಜನರಿಗೆ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಒದಗಿಸಲಾದ ಸೌಕರ್ಯಗಳನ್ನು ಹಾಗೂ ಇತರೇ ಮಾಹಿತಿ ಕುರಿತು ಟಿಪ್ಪಣಿ ಹಾಗೂ ಲಕ್ಷ್ಮಣ ದೇವುಳಿಯವರ ಮಾಹಿತಿಯನ್ನು ಆಧರಿಸಿ ಬರೆಯಲಾಗಿದೆ.

೧೯೫) ಶ್ರೀ. ನಾಗೇಶ್ ರವರ ಮೌಖಿಕ ಮಾಹಿತಿ

೧೯೬) ಪುನರ್ವಸತಿ ತಹಶೀಲ್ದಾರರ ಕಛೇರಿ ಕಾಳಿ ಜಲವಿದ್ಯುತ್ ಯೋಜನೆ ರಾಮನಗರ, ಕಾಳಿ ಜಲವಿದ್ಯುತ್ ಯೋಜನೆ ಕೆಳಗೆ ಮುಳುಗಡೆಯಾದ ಪ್ರದೇಶದಲ್ಲಿ ಆಸ್ತಿ ಕಳೆದುಕೊಂಡ ಜನರಿಗೆ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಒದಗಿಸಲಾದ ಸೌಕರ್ಯಗಳನ್ನು ಹಾಗೂ ಇತರೇ ಮಾಹಿತಿ ಕುರಿತು ಟಿಪ್ಪಣಿ

೧೯೭) Note on Rehabilitation works of Kalinadi Hydro Electric Project Stage-1

೧೯೮) ಅದೇ

೧೯೯) ಅದೇ

೨೦೦) Note on Rehabilitation works of Kalinadi Hydro Electric Project Stage-1

೨೦೧) ಅದೇ

೨೦೨) ಅದೇ

೨೦೩) ಅದೇ

೨೦೪) ಸೂಪಾ ಜಲಾಶಯದ ಸ್ಥಳಾಂತರ ಹಾಗೂ ಪುನರ್ವಸತಿಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಗಮದ ಬೇರೆ ಬೇರೆ ವರದಿಗಳನ್ನು ಆಧರಿಸಿ ಬರೆಯಲಾಗಿದೆ.

೨೦೫) ಅದೇ

೨೦೬) ಸೂಪಾ ಸಂತ್ರಸ್ತರಾದ ಲಕ್ಷ್ಮಣ ದೇವುಳಿ ಹಾಗೂ ಶರಶ್ಚಂದ್ರ ಗುರ್‌ಜಾರ್ ಹಾಗೂ ಇತರ ಸಂತ್ರಸ್ತರ ಮಾಹಿತಿಯನ್ನು ಆಧರಿಸಿ ಬರೆಯಲಾಗಿದೆ.

೨೦೭) ಅದೇ

೨೦೮) Note on Rehabilitation works of Kalinadi Hydro Electric Project Stage-1

೨೦೯) Tulasiramaiah, Proceedings of the Government of Karnataka, Rehabilitation of persons affected by reservoir of Irrigation and Power Projects. Under secretary to public works department, 1986

೨೧೦) Assistant commissioner karwar sub division, comprehensive note on important decisions on the problems connected with the rehabilitation of persons under kali nadi hydro electric project

೨೧೧) KHEP-I Rehabilitation and Resettlement details, Karnataka power corporation ltd

೨೧೨) Comprehensive note on important decisions on the problems connected with the rehabilitation of persons under kali nadi hydro electric project

೨೧೩) Note on Rehabilitation works of Kalinadi Hydro Electric Project Stage-1

೨೧೪) ಸೂಪಾ ಜಲಾಶಯ ಸಂತ್ರಸ್ತರಾದ ಶ್ರೀ. ಶರಶ್ಚಂದ್ರ ಗುರ್‌ಜಾರ್‌ರವರ ಮಾಹಿತಿ

೨೧೫) Developmental works at rehabilitation centre, Karnataka power corporation ltd KHEP Stage-I, Annexure-IV

೨೧೬) ಅದೇ, ಹಾಗೂ ಇತರ ವರದಿಗಳನ್ನು ಆಧರಿಸಿ

೨೧೭) Comprehensive note on important decisions on the problems connected with the rehabilitation of persons under kali nadi hydro electric project

೨೧೮) ರಾಮನಗರ ಸ್ವಸ್ತಿ ಯೋಜನೆ ೧೯೯೮

೨೧೯) ಕರಾವಳಿ ಮುಂಜಾವು ಪತ್ರಿಕೆ ದಿನಾಂಕ, ೨೬.೧.೨೦೦೧

೨೨೦) ಅದೇ

೨೨೧) Proceedings of the meeting of the cabinet sub-committee regarding the problems connected with the rehabilitation of persons in the areas likely to be submerged under the Kalinadi project, 1974

೨೨೨) ಕ್ಯಾಸೆಲ್‌ರಾಕ್ ಗ್ರಾಮಪಂಚಾಯತ್ ಸದಸ್ಯರಾದ ಶ್ರೀಮತಿ ಗಂಗವ್ವ ಸಿದ್ಧಪ್ಪ ವಣ್ಣೂರು (ಸ್ಥಳೀಯರು)

೨೨೩) ಅದೇ

೨೨೪) ಕ್ಷೇತ್ರಕಾರ್ಯ ಅಧ್ಯಯನದ ಸಮಯದಲ್ಲಿ ವಿವಿಧ ಸಂತ್ರಸ್ತರು ನೀಡಿದ ಮಾಹಿತಿ

ಅಧ್ಯಾಯ : ಮೂರು

ಸಂತ್ರಸ್ತ ಕುಣಬಿಯರ ಸ್ಥಿತಿಗತಿ

ಪೀಠಿಕೆ

ಪ್ರಸ್ತುತ ಅಧ್ಯಾಯದಲ್ಲಿ ಸೂಪಾ ಜಲಾಶಯ ಯೋಜನೆಯಿಂದ ಸಂತ್ರಸ್ತರಾದ ವಿವಿಧ ಸಮುದಾಯಗಳಲ್ಲಿ ಒಂದಾಗಿರುವ ಕುಣಬಿಯರ ಅಧ್ಯಯನ ಮಾಡಲಾಗಿದೆ. ಸಂತ್ರಸ್ತ ಕುಣಬಿಯರೆಲ್ಲರೂ ಪುನರ್ವಸತಿ ಕೇಂದ್ರದಲ್ಲಿ ವಾಸವಿರದೇ ಜೋಯಿಡಾ ತಾಲ್ಲೂಕಿನ ವಿವಿದೆಡೆ ವಾಸವಿರುತ್ತಾರೆ. ಹಾಗೂ ಅಂತರ್ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ ಎಂಬ ಮಾಹಿತಿಯನ್ನು ಆಧರಿಸಿ ಈ ಅಧ್ಯಾಯದಲ್ಲಿ ಅವರನ್ನು ಪುನರ್ವಸತಿ ಕೇಂದ್ರದಲ್ಲಿರುವ ಸಂತ್ರಸ್ತರು ಮತ್ತು ಪುನರ್ವಸತೇತರ ಸಂತ್ರಸ್ತರು ಎಂದು ಪ್ರತ್ಯೇಕಿಸಿ ಅಧ್ಯಯನ ಮಾಡಲಾಗಿದೆ. ಪುನರ್ವಸತಿ ಕೇಂದ್ರಗಳಲ್ಲಿ ವಾಸವಿರುವ ಕುಣಬಿ ಸಮುದಾಯದ ಸ್ಥಿತಿಗತಿಗಳನ್ನು ಆಳವಾಗಿ ಅಧ್ಯಯನ ಮಾಡಿ ವಿವರವಾಗಿ ವಿಶ್ಲೇಷಿಸಲಾಗಿದೆ. ಪುನರ್ವಸತೇತರ ಸಂತ್ರಸ್ತರಲ್ಲಿ ಪ್ರಸ್ತುತ ಜೋಯಿಡಾ ತಾಲ್ಲೂಕಿನಲ್ಲಿ ವಾಸವಿರುವವರನ್ನು ಪ್ರಾತಿನಿಧಿಕವಾಗಿ ಅಧ್ಯಯನ ಮಾಡಲಾಗಿದೆ. ಸಂತ್ರಸ್ತರಲ್ಲದ ಕುಣಬಿಯರನ್ನು ಮಾನದಂಡವಾಗಿ ಅಧ್ಯಯನ ಮಾಡಿ ಸಂತ್ರಸ್ತರ ಪರಿಸ್ಥಿತಿಯನ್ನು ತುಲನೆ ಮಾಡಲಾಗಿದೆ.

೩.೧. ಪುನರ್ವಸತಿ ಕೇಂದ್ರದಲ್ಲಿ ವಾಸವಿರುವ ಸಂತ್ರಸ್ತ ಕುಣಬಿಯರ ಸ್ಥಿತಿಗತಿಗಳ ಅಧ್ಯಯನ

ಸೂಪಾ ಜಲಾಶಯದ ಪುನರ್ವಸತಿ ಕೇಂದ್ರಗಳಾದ ರಾಮನಗರ ಟೌನ್‌ಶಿಪ್ ಮತ್ತು ಜೋಯಿಡಾ ಟೌನ್‌ಶಿಪ್‌ಗಳಲ್ಲಿ ಪ್ರಸ್ತುತ ವಾಸವಿರುವ ಎಲ್ಲಾ ಸಂತ್ರಸ್ತ ಕುಣಬಿ ಕುಟುಂಬಗಳನ್ನು ಅಧ್ಯಯನಕ್ಕೆ ಮಾಡಲಾಗಿದೆ.

ಇದನ್ನು ೪ ಉಪಭಾಗಗಳನ್ನಾಗಿ ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.


೧) ಸ್ಥಳಾಂತರ ಪೂರ್ವದ ಪರಿಸ್ಥಿತಿಯ ಅಧ್ಯಯನ
೨) ಸ್ಥಳಾಂತರ ಸಂದರ್ಭದ ಪರಿಸ್ಥಿತಿಯ ಅಧ್ಯಯನ
೩) ಪುನರ್ವಸತಿ ಕೇಂದ್ರದಲ್ಲಿನ ಆರಂಭಿಕ ಪರಿಸ್ಥಿತಿಯ ಅಧ್ಯಯನ
೪) ಪ್ರಸ್ತುತ ಪರಿಸ್ಥಿತಿಯ ಅಧ್ಯಯನ

ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತಹ ಮಾಹಿತಿಗಳನ್ನು ಕ್ಷೇತ್ರಕಾರ್ಯದಿಂದ ಪಡೆದುಕೊಳ್ಳಲಾಗಿದೆ. ಮಾಹಿತಿದಾರರು ನೀಡಿರುವ ಮಾಹಿತಿಯ ಆಧಾರದ ಮೇಲೆ ಇಲ್ಲಿನ ಅಂಕಿ ಅಂಶಗಳನ್ನು ನೀಡಲಾಗಿದೆ. ಸಂದರ್ಭಕ್ಕೆ ತಕ್ಕಂತೆ ದತ್ತಾಂಶಗಳನ್ನು ಕೋಷ್ಟಕ, ಸ್ಥಂಭ ನಕಾಶೆ ಹಾಗೂ ಪೈ ನಕಾಶೆ, ಮೂಲಕ ವಿವರಿಸಿ ವಿಶ್ಲೇಷಿಸಲಾಗಿದೆ. ಕೆಲವು ಮಾಹಿತಿಗಳಿಗೆ ವಿವರಣೆ ಹಾಗೂ ವಿಶ್ಲೇಷಣೆಯನ್ನು ಮಾತ್ರಾ ನೀಡಲಾಗಿದೆ.

೩.೧.೧. ಸ್ಥಳಾಂತರ ಪೂರ್ವದ, ಸ್ಥಳಾಂತರ ಸಂದರ್ಭದ, ಪುನರ್ವಸತಿ ಕೇಂದ್ರದ ಆರಂಭದ ಮತ್ತು ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿದವರ ವೈಯಕ್ತಿಕ ವಿವರ

ಮಾಹಿತಿದಾರರ ವೈಯಕ್ತಿಕ ವಿವರದಲ್ಲಿ ಯಾರು ಮಾಹಿತಿ ನೀಡಿದರು ಮತ್ತು ಅವರ ಲಿಂಗ, ವಯಸ್ಸು, ಶಿಕ್ಷಣ, ಉದ್ಯೋಗ ಈ ಎಲ್ಲಾ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ: ೩.೧. ಸಂತ್ರಸ್ತ ಬದುಕಿನ ಬಗ್ಗೆ ಮಾಹಿತಿ ನೀಡಿದವರ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೧.ರಲ್ಲಿ ತೋರಿಸಿರುವಂತೆ ಸಂತ್ರಸ್ತರಲ್ಲಿ ಶೇ. ೨೭.೭೮ ರಷ್ಟು ಕುಟುಂಬದ ಮುಖ್ಯಸ್ಥರೇ ಬದುಕಿನ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಇನ್ನುಳಿದ ಶೇ. ೭೨.೨೨ ರಷ್ಟು ಮಾಹಿತಿದಾರರು ಕುಟುಂಬದ ಮುಖ್ಯಸ್ಥರ ಪತ್ನಿ, ಹಿರಿಯ ಮಗ ಆಗಿರುತ್ತಾರೆ. ಯೋಜನೆಯು ಮೂವತ್ತೈದು ವರ್ಷಗಳಷ್ಟು ಹಳೆಯದಾದ್ದರಿಂದ ಸಾಧ್ಯವಾದಷ್ಟು ನೈಜ ಮಾಹಿತಿಗಳನ್ನು ಸಂಗ್ರಹಿಸಲು ಇವರುಗಳ ಮಾಹಿತಿಯನ್ನೇ ಬಳಸಿಕೊಳ್ಳಲಾಯಿತು. ಈ ಮೇಲಿನ ಅಂಕಿ ಅಂಶಗಳ ಪ್ರಕಾರ ಸೂಪಾ ಸಂತ್ರಸ್ತರ ಪಟ್ಟಿಯಲ್ಲಿರುವ ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿರುವ ಪುನರ್ವಸತಿ ಕೇಂದ್ರದ ನಿವೇಶನಗಳಲ್ಲಿ ವಾಸವಿರುವವರಲ್ಲಿ ಶೇಕಡಾ ೨೭.೭೮ರಷ್ಟು ಮುಖ್ಯಸ್ಥರು ಮಾತ್ರ ಬದುಕಿರುತ್ತಾರೆ. ಇನ್ನುಳಿದಂತೆ ಮುಖ್ಯಸ್ಥರ ಪತ್ನಿ ಅಥವಾ ಹಿರಿಯ ಮಗ ಕೂಡಾ ಅವರ ಸ್ಥಳಾಂತರಪೂರ್ವ ಬದುಕಿನ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಹೊಂದಿದ್ದು ಕ್ಷೇತ್ರಾಧ್ಯಯನದ ವೇಳೆ ಸಂಶೋಧಕರ ಜೊತೆಗೆ ಸಾಧ್ಯವಾದಷ್ಟು ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಈ ಮೇಲಿನ ನಕಾಶೆಯಿಂದ ತಿಳಿದುಬರುವುದೇನೆಂದರೆ ಸಂತ್ರಸ್ತರ ಸ್ಥಳಾಂತರಪೂರ್ವ ಬದುಕಿನ ಮಾಹಿತಿಯನ್ನು ಅರ್ಹ ವ್ಯಕ್ತಿಗಳಿಂದಲೇ ಪಡೆದುಕೊಳ್ಳಲಾಗಿದೆ. ಮಾಹಿತಿ ನಿಖರವಾಗಿದೆ.

ಕೋಷ್ಟಕ ಸಂಖ್ಯೆ ೩.೧. ಮಾಹಿತಿದಾರರ ಲಿಂಗ, ವಯಸ್ಸು, ಮತ್ತು ಶೈಕ್ಷಣಿಕ ಮಟ್ಟದ ವರ್ಗೀಕರಣ

ಕ್ರಸಂ	ವಯಸ್ಸು / ಲಿಂಗ / ಶೈಕಣಿಕ ಮಟ್ಟ	೪೦–೪೯		೫೦–೫೯		೬೦–೬೯		೭೦–೭೯		೮೦–೮೯		ಒಟ್ಟು
		ಪು	ವು	ಪು	ಮ	ಪು	ಮ	ಪು	ಮ	ಪು	ಮ	ಪು+ಮ
೦೧	ಅನಕ್ಷರಸ್ಥರು	೫	೪	೧೫	೫	೧೫	೨೨	೯	೧೪	೧	೩	೯೩
೦೨	ಪ್ರಾಥಮಿಕ	೮	೧	೭	೪	೩	೦	೦	೦	೦	೦	೨೩
೦೩	ಮಾದ್ಯಮಿಕ	೧	೧	೦	೦	೦	೦	೦	೦	೦	೦	೨
೦೪	ಪ್ರೌಢಶಾಲೆ	೫	೦	೧	೦	೦	೦	೦	೦	೦	೦	೬
೦೫	ಪಿ.ಯು.ಸಿ.	೦	೦	೦	೦	೦	೦	೧	೦	೦	೦	೧
೦೬	ಪದವಿ	೦	೦	೦	೦	೦	೦	೦	೦	೦	೦	೦
೦೭	ಸ್ನಾತಕೋತ್ತರ	೦	೦	೦	೦	೦	೦	೦	೦	೦	೦	೦
೦೮	ವೃತ್ತಿಪರ	೦	೦	೧	೦	೦	೦	೦	೦	೦	೦	೧
	ಒಟ್ಟು	೧೯	೬	೨೪	೯	೧೮	೨೨	೧೦	೧೪	೧	೩	೧೨೬

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೧. ರಲ್ಲಿ ಮಾಹಿತಿದಾರರ ಲಿಂಗ, ವಯಸ್ಸು ಮತ್ತು ಶೈಕ್ಷಣಿಕ ಸ್ಥಿತಿಯನ್ನು ಪರಸ್ಪರ ಸಹಸಂಬಂಧ ಮಾಡಿ ವಿಶ್ಲೇಷಿಸಲಾಗಿದೆ. ಮಾಹಿತಿದಾರರಲ್ಲಿ ಶೇಕಡಾ ೫೭ರಷ್ಟು ಪುರುಷರಾಗಿದ್ದು; ಶೇಕಡಾ ೪೩ರಷ್ಟು ಜನರು ಮಹಿಳೆಯರಾಗಿರುತ್ತಾರೆ.

ಪುರುಷರಲ್ಲಿ ಶೇಕಡಾ ೬೦ರಷ್ಟು ಮಾಹಿತಿದಾರರು ೬೦ ವರ್ಷದ ಒಳಗಿನವರಾಗಿದ್ದು; ಶೇಕಡಾ ೪೦ರಷ್ಟು ಮಾಹಿತಿದಾರರು ೬೦ ವರ್ಷ ವಯಸ್ಸಿಗಿಂತ ಹೆಚ್ಚಿನವರಾಗಿರುತ್ತಾರೆ. ಮಹಿಳೆಯರಲ್ಲಿ ಪ್ರತಿಶತ ೨೮ರಷ್ಟು ಮಾಹಿತಿದಾರರು ೬೦ ವರ್ಷದ ಒಳಗಿನವರಾಗಿದ್ದು; ಪ್ರತಿಶತ ೭೨ರಷ್ಟು ಮಾಹಿತಿದಾರರು ೬೦ ವರ್ಷ ವಯಸ್ಸಿಗಿಂತ ಹೆಚ್ಚಿನವರಾಗಿರುತ್ತಾರೆ.

ಪುರುಷರಲ್ಲಿ ಶೇಕಡಾ ೬೩ರಷ್ಟು ಮತ್ತು ಮಹಿಳೆಯರಲ್ಲಿ ಶೇಕಡಾ ೮೯ರಷ್ಟು ಮಾಹಿತಿದಾರರು ಅನಕ್ಷರಸ್ಥರಾಗಿದ್ದು ಒಟ್ಟು ಮಾಹಿತಿದಾರರಲ್ಲಿ ಶೇಕಡಾ ೭೩.೮೦ ಜನರು ಅನಕ್ಷರಸ್ಥರಾಗಿರುತ್ತಾರೆ.

ಈ ಮೇಲಿನ ಅಂಕಿ ಅಂಶಗಳಿಂದ ತಿಳಿದುಬರುವುದೆಂದರೆ ಲಿಂಗವಾರು ಪ್ರಕಾರ ಮಾಹಿತಿದಾರರಲ್ಲಿ ಪುರುಷರ ಸಂಖ್ಯೆ ಹೆಚ್ಚು ಇದೆ. ವಯಸ್ಸಿನ ಆಧಾರದಲ್ಲಿ ಎಲ್ಲರೂ ೪೦ ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದು ಯೋಜನೆ, ಸ್ಥಳಾಂತರ ಮತ್ತು ಪುನರ್ವಸತಿಯ ಬಗ್ಗೆ ಕನಿಷ್ಟ ೧೮ ವರ್ಷದಿಂದ ೩೫ ವರ್ಷ ಅನುಭವವನ್ನು ಹೊಂದಿದವರಾಗಿರುತ್ತಾರೆ. ಶೇಕಡಾ ೫೪ ಮಾಹಿತಿದಾರರು ಸ್ಥಳಾಂತರಕ್ಕಿಂತ ಮೊದಲಿನ ಬದುಕು ಮತ್ತು ಪುನರ್ವಸತಿ ಕೇಂದ್ರದ ಬದುಕಿನ ಅನುಭವವನ್ನು ಸಮಾನಾವಾಗಿ ಹೊಂದಿದವರಾಗಿದ್ದಾರೆ.

ಇವರು ಸೂಪಾ ಜಲಾಶಯ ಯೋಜನೆ ಪ್ರಾರಂಭ, ಸ್ಥಳಾಂತರದ ಸಂದರ್ಭ, ಪುನರ್ವಸತಿ ಕೇಂದ್ರದಲ್ಲಿ ಪ್ರಾರಂಭಿಕ ಬದುಕಿನ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ಅನುಭವ ಹೊಂದಿದ್ದು ಸಂಶೋಧಕರಿಗೆ ಅವರ ಪರಿಸ್ಥಿತಿಯ ಬಗ್ಗೆ ತಿಳಿದುಕೊಳ್ಳಲು ಸಹಕಾರಿಯಾಗಿದೆ. ಯೋಜನೆ ಹಳೆಯದಾದರೂ ಅಧ್ಯಯನಕ್ಕೆ ಬೇಕಾದ ವಸ್ತುನಿಷ್ಠ ಮಾಹಿತಿಗಳನ್ನು ಅರ್ಹ ವ್ಯಕ್ತಿಗಳಿಂದಲೇ ಪಡೆದುಕೊಳ್ಳಲಾಗಿದೆ.

೩.೧.೨. ಸ್ಥಳಾಂತರ ಪೂರ್ವದಲ್ಲಿನ ಪರಿಸ್ಥಿತಿ

ಯಾವುದೇ ಯೋಜನಾ ಸಂತ್ರಸ್ತರಿಗೆ ಸಮರ್ಪಕ ಪುನರ್ವಸತಿ ಯೋಜನೆಯನ್ನು ಅನುಷ್ಠಾನ ಮಾಡಬೇಕಾದರೆ ಅವರ ಬದುಕಿನ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಅತೀ ಅಗತ್ಯವಾಗಿದೆ. ಈ ಉದ್ದೇಶವನ್ನು ಇಟ್ಟುಕೊಂಡು ಸೂಪಾ ಜಲಾಶಯ ಯೋಜನೆಯಿಂದ ಸಂತ್ರಸ್ತರಾದ ಕುಣಬಿಯರು ಸ್ಥಳಾಂತರ ಪೂರ್ವದಲ್ಲಿ ಯಾವ ರೀತಿಯ ಜೀವನ ನಡೆಸುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕುಣಬಿ ಎಂಬ ಒಂದು ಜನ ಸಮುದಾಯ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಜೋಯಿಡಾ, ಯಲ್ಲಾಪೂರ, ಅಂಕೋಲ, ಕಾರವಾರ, ಹಾಗೂ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕುಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ'.[೧] ಸುಮಾರು ಮೂರೂವರೆ ದಶಕಗಳ ಹಿಂದಿನಿಂದಲೂ ಸೂಪಾ ತಾಲ್ಲೂಕಿನ (ಜೋಯಿಡಾ) ದಟ್ಟ ಕಾನನದ ಕೆಲವು ಪ್ರಮುಖ ಊರುಗಳಾದ ಸೂಪಾ ಪಟ್ಟಣ, ನಿನ್ಸೂರು, ದಿಗಲಾಂಬ, ಕರಂಜೋಯಿಡಾ, ಕುಕ್ರೆ-ಕುರುವಾಡೆ, ಕಾರಸಿಂಗಳ್, ಪಾಟೆ, ಕೇವರ್ಲೆ, ಬಾಂದೋಡ[೨] ಇನ್ನು ಮುಂತಾದ ಸಮೃದ್ಧ ಕಾಡಿನಲ್ಲಿ ಹರಿವ ಕಾಳಿನದಿ, ನಾಗಿನಾಲಾ, ಪಾಂಡರಿ, ಕಾನೇರಿ ಇವುಗಳ ನದಿ ಪಾತ್ರಗಳಲ್ಲಿ ಸಂಪದ್ಭರಿತವಾಗಿ ಬದುಕುತ್ತಿದ್ದ ಹಲವು ಸಮುದಾಯಗಳಲ್ಲಿ ಕುಣಬಿಯರು ಪ್ರಮುಖವಾಗಿ ಕಂಡು ಬರುತ್ತಾರೆ. ದೇಸಾಯಿ, ದೇವುಳಿ, ಭಂಡಾರಿ, ಗೌಳಿಗರು, ಗೌಡ ಸಾರಸ್ವತ ಬ್ರಾಹ್ಮಣ ಮುಂತಾದ ಜನಸಮುದಾಯಗಳ ಮಧ್ಯೆಯೂ ಇವರು ತಮ್ಮದೇ ಆದ ವಿಶೇಷ ಸ್ಥಾನಮಾನಗಳೊಂದಿಗೆ ಬದುಕುತ್ತಿದ್ದರು.[೩]

ಕುಣಬಿಯರು ಮೂಲತಃ ಕರ್ನಾಟಕದವರಲ್ಲ.[೪] ಗೋವಾ ರಾಜ್ಯದಲ್ಲಿ ಕರ್ನಾಟಕದ ಗಡಿ ಪ್ರದೇಶಗಳಲ್ಲಿದ್ದ ಕುಣಬಿಯರು ಸುಮಾರು ಮೂರೂವರೆ ಶತಕಗಳ ಹಿಂದೆ ಪೋರ್ಚುಗೀಸರ ಆಳ್ವಿಕೆಯ ಸಮಯದಲ್ಲಿ ಮತಾಂತರಕ್ಕೆ ಹೆದರಿ ಓಡಿ ಬಂದು ಕರ್ನಾಟಕದಲ್ಲಿ ಗೋವಾದ ಅಂಚಿನಲ್ಲಿರುವ ಕಾಡು ಪ್ರದೇಶಗಳಲ್ಲಿ ನೆಲೆನಿಂತರು.[೫] ಪೋರ್ಚುಗೀಸರು ಕುಣಬಿಯರ ಬಾವಿ ನೀರಿಗೆ ಕೋಳಿ ಮಾಂಸವನ್ನು ತಂದು ಹಾಕಿ ಮತಾಂತರಕ್ಕೆ ಒತ್ತಾಯಿಸುತ್ತಿದ್ದು ಆ ಮಾಂಸ ಇವರಲ್ಲಿ ವ್ಯರ್ಜ್ಯವಿರುವುದರಿಂದ ಇವರ ಪೂರ್ವಜರು ಅಲ್ಲಿಂದ ತಪ್ಪಿಸಿಕೊಂಡು ಬಂದರು.[೬]

'ಸೂಕ್ತ ಅಧ್ಯಯನ ಮತ್ತು ಸಮಗ್ರ ಸಮೀಕ್ಷೆಯ ಕೊರತೆಯ ಕಾರಣದಿಂದ ನಿಜವಾಗಿಯೂ ಬುಡಕಟ್ಟು ಲಕ್ಷಣಗಳುಳ್ಳ ಹಾಗೂ ಪರಂಪರೆಯಿಂದ ವಿಶಿಷ್ಟ ಜೀವನ

ನಡೆಸಿಕೊಂಡು ಬಂದ ಕೆಲವು ಅಧಿಕೃತ ಬುಡಕಟ್ಟು ಸಮುದಾಯಗಳು ಇನ್ನೂ 'ಸರ್ಕಾರಿ ಬುಡಕಟ್ಟು'ಗಳಾಗುವ ಭಾಗ್ಯ ಪಡೆದಿಲ್ಲ. ಅಂಥ ಬುಡಕಟ್ಟಿನಲ್ಲಿ ಕುಣಬಿ ಸಮುದಾಯವೂ ಒಂದು'.[೭] ಸುಮಾರು ಮೂರೂವರೆ ಶತಕಗಳ ಕಾಲದಿಂದಲೂ ಕರ್ನಾಟಕದಲ್ಲಿ ವಾಸವಿದ್ದರೂ, ಅದಕ್ಕಾಗಿ ಸಾಕಷ್ಟು ಪ್ರಯತ್ನ ಪಟ್ಟರೂ ಇವರನ್ನು ಇನ್ನೂ ಬುಡಟ್ಟುಗಳ ಪಟ್ಟಿಯಲ್ಲಿ ಸೇರಿಸಲಾಗಿಲ್ಲ. 'ಗೋವಾದಲ್ಲಿ ೨೦೦೩ ರಲ್ಲಿ ಕುಣಬಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದಾರೆ. ಕರ್ನಾಟಕದಲ್ಲಿ ಹಾವನೂರು ಕಮೀಷನ್ ಇವರನ್ನು ಪ್ರವರ್ಗ–೧ ಕ್ಕೆ ಸೇರಿಸಿದೆ'.[೮]

ಸೂಪಾ ತಾಲ್ಲೂಕಿನ ದಟ್ಟ ಕಾನನದ ಮಧ್ಯದಲ್ಲಿ ವಾಸಿಸುತ್ತಿದ್ದ ಈ ಕುಣಬಿಯರು ೧೯೮೧ರಲ್ಲಿ ಕಾಳಿ ನದಿಗೆ ಸೂಪಾ ಎಂಬ ಪಟ್ಟಣದಲ್ಲಿ ನಿರ್ಮಾಣವಾದ ಜಲಾಶಯದಿಂದಾಗಿ ತಮ್ಮ ವಾಸಸ್ಥಾನದಿಂದ ಅನಿವಾರ್ಯವಾಗಿ ಒಕ್ಕಲೇಳಬೇಕಾಯಿತು. ಸ್ಥಳಾಂತರಗೊಂಡ ೧೫೬೧[೯] ಕುಟುಂಬಗಳಲ್ಲಿ ಸುಮಾರು ೩೫೦[೧೦] ರಷ್ಟು ಕುಟುಂಬಗಳು ಕುಣಬಿಯರದ್ದು. ಸಂತ್ರಸ್ತ ಕುಣಬಿ ಸಮುದಾಯ ಹಿಂದೆ ಯಾವ ರೀತಿಯಾಗಿ ಬದುಕುತ್ತಿದ್ದರು ಎಂಬುದನ್ನು ಇಲ್ಲಿ ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದೆ.

೩.೧.೨.೧. ಮೊದಲು ವಾಸವಾಗಿದ್ದ ಊರುಗಳ ಮಾಹಿತಿ


ಸಂತ್ರಸ್ತ ಕುಣಬಿಯರ ಪರಿಚಯಾತ್ಮಕವಾಗಿ ಸ್ಥಳಾಂತರದ ಮೊದಲು ಯಾವ ಊರುಗಳಲ್ಲಿ ವಾಸವಾಗಿದ್ದರು ಎಂಬುದನ್ನು ತಿಳಿದುಕೊಳ್ಳುವುದು ಅತೀ ಅಗತ್ಯವಾಗಿದೆ.

ಸ್ಥಂಭ ನಕಾಶೆ ಸಂಖ್ಯೆ ೩.೨.ರಲ್ಲಿನ ಮಾಹಿತಿಯಂತೆ ಒಟ್ಟು ಸಂತ್ರಸ್ತರಲ್ಲಿ ಹೆಚ್ಚಿನ ಕುಟುಂಬದವರು ನಿನ್ನೂರು (೧೮.೨೫%), ಕುಕ್ರೆ–ಕುರುವಾಡೆ(೧೫.೦೮%), ಹಾಗೂ ಕೇವರ್ಲೆಯಿಂದ (೧೧.೧೧%) ಸ್ಥಳಾಂತರಗೊಂಡವರಾಗಿರುತ್ತಾರೆ. ಉಳಿದಂತೆ ಕುಕಡಾಳಿ, ಬಾಂದೋಡ, ಪಾಟೆ, ವಿರ್ಜೊಲ್, ಶಿರಗೂರೆ, ದೊಂಗರವಾಡ, ಖೊಡ್ಲಿ ಹಾಗೂ ಅಂಬೇಲಿಯಿಂದ ಸ್ಥಳಾಂತರಗೊಂಡು ಬಂದು ನೆಲೆಸಿದ್ದಾರೆ.

ಸಂತ್ರಸ್ತರ ಮಾಹಿತಿಯ ಪ್ರಕಾರ ಈ ಊರುಗಳಲ್ಲಿ ಹೆಚ್ಚಿನ ಕುಣಬಿಯರು ವಾಸವಿದ್ದು ಅವರಲ್ಲಿ ಒಂದಿಷ್ಟು ಕುಟುಂಬಗಳು ಮಾತ್ರ ಇಲ್ಲಿ ವಾಸವಿರುತ್ತಾರೆ. ಉಳಿದ ಕುಟುಂಬಗಳ ಬಗ್ಗೆ ಮಾಹಿತಿಯಿಲ್ಲ.

ಸ್ಥಳಾಂತರಗೊಂಡ ಎಲ್ಲಾ ಸಂತ್ರಸ್ತ ಕುಣಬಿಯರು ಪುನರ್ವಸತಿ ಕೇಂದ್ರಕ್ಕೆ ಬಂದು ನೆಲೆಸಿಲ್ಲ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ ೩.೨. ಮೊದಲು ವಾಸವಾಗಿದ್ದ ಊರುಗಳ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

೩.೧.೨.೨. ಊರಲ್ಲಿದ್ದ ಒಟ್ಟು ಕುಟುಂಬಗಳಲ್ಲಿ ಕುಣಬಿ ಕುಟುಂಬಗಳ ಮಾಹಿತಿ

ಒಂದು ಊರು, ಗ್ರಾಮ ಎಂದ ಮೇಲೆ ಅಲ್ಲಿ ಹೆಚ್ಚಾಗಿ ವಿವಿಧ ಜಾತಿ ಜನಾಂಗದ ಸದಸ್ಯರು ವಾಸಿಸುತ್ತಾರೆ. ಅವರು ಪರಸ್ಪರ ಸಂಬಂಧಗಳನ್ನು ಹಂಚಿಕೊಂಡು ಬದುಕುತ್ತಿರುತ್ತಾರೆ. ಇದು ಸಂಘಜೀವಿಯಾದ ಮಾನವನ ಅಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತದೆ. ಕುಣಬಿಯರು ಈ ರೀತಿಯಾದ ವಾತಾವರಣದಲ್ಲಿ ಬದುಕುತ್ತಿದ್ದರೇ? ಯಾವ ರೀತಿಯ ಜನಜೀವನ ಇವರಿಗೆ ಒಪ್ಪುತ್ತದೆ ಎಂಬುದನ್ನು ಅರಿತುಕೊಳ್ಳುವ ಸಲುವಾಗಿ ಸ್ಥಳಾಂತರದ ಮೊದಲು ಅವರು ಯಾವ ರೀತಿಯ ಭೌಗೋಳಿಕ ಪರಿಧಿಯಲ್ಲಿ ವಾಸ ಮಾಡುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕುಣಬಿಯರು ಅವರದೇ ಆದ ಪ್ರತ್ಯೇಕ ಊರುಗಳಲ್ಲಿ ವಾಸ ಮಾಡುತ್ತಿದ್ದರೇ ಅಥವಾ ಇವರು ಎಲ್ಲಾ ಸಮುದಾಯಗಳ ಮಧ್ಯೆ ವಾಸ ಮಾಡುತ್ತಿದ್ದರೇ ಎಂಬುದನ್ನು ತಿಳಿದುಕೊಳ್ಳಲಾಗಿದೆ.

ಕೋಷ್ಟಕ ಸಂಖ್ಯೆ ೩.೨. ಊರಲ್ಲಿದ್ದ ಒಟ್ಟು ಕುಟುಂಬಗಳಲ್ಲಿ ಕುಣಬಿ ಕುಟುಂಬಗಳ ಸಂಖ್ಯೆಯ ವರ್ಗೀಕರಣ

ಇದ್ದ ಒಟ್ಟು ಕುಟುಂಬಗಳು	ಕುಣಬಿಯರ ಕುಟುಂಬಗಳ ಸಂಖ್ಯೆ									
	೧–೪.		೫–೯		೧೦–೧೪		೧೫–೧೯		೨೦–೩೦	
	ಸಂ	%	ಸಂ	%	ಸಂ	%	ಸಂ	%	ಸಂ	%
೧–೪	೦ ೧	೦.೮೦	–	–	–	–	–	–	–	–
೫–೯	–	–	–	–	–	–	–	–	–	–
೧೦–೧೪	–	–	೧೮	೧೪.೨೮	–	–	–	–	–	–
೧೫–೧೯	–	–	೧	೦.೮೦	೩	೨.೩೯	೨೯	೨೩.೦೧	–	–
೨೦–೩೦	–	–	೭	೫.೫೫	೧೦	೭.೯೪	೨೩	೧೮.೨೫	೩೪	೨೬.೯೮

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೨.ರಲ್ಲಿನ ಮಾಹಿತಿಯಂತೆ ಸ್ಥಳಾಂತರಕ್ಕಿಂತ ಮೊದಲು ಶೇಕಡಾ ೫೦.೭೯ರಷ್ಟು ಮಾಹಿತಿದಾರರ ಊರಲ್ಲಿ ಕೇವಲ ಕುಣಬಿ ಕುಟುಂಬಗಳು ವಾಸವಿದ್ದವು. ಕುಣಬಿಯರು ತಮ್ಮ ಬಂಧುಗಳೊಂದಿಗೆ ಒಂದೇ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಹೆಚ್ಚಿನ ಊರುಗಳಲ್ಲಿ ಕುಣಬಿಯರದ್ದೇ ಸಮುದಾಯವಿತ್ತು.

ಕುಣಬಿಯರು ಅವರ ಸಮುದಾಯದ ಜನಗಳ ಮಧ್ಯೆ ಹೆಚ್ಚಾಗಿ ವಾಸವಿದ್ದು ಇತರರೊಂದಿಗೆ ಬದುಕಿ ಗೊತ್ತಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೩. ಕುಟುಂಬದ ಮಾದರಿ ಮತ್ತು ಕುಟುಂಬದ ಒಟ್ಟು ಸದಸ್ಯರ ಸಂಖ್ಯೆಯ ಮಾಹಿತಿ

ವ್ಯಕ್ತಿ ವಾಸಿಸುತ್ತಿರುವ ಕುಟುಂಬದ ಮಾದರಿ ಮತ್ತು ಅಲ್ಲಿನ ಜನರ ಗಾತ್ರ ವ್ಯಕ್ತಿತ್ವ ವಿಕಸನದ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ಸುಭದ್ರವಾದ ಕೌಟುಂಬಿಕ ಜೀವನದ ಸಂತೃಪ್ತಿ ವ್ಯಕ್ತಿಯನ್ನು ಜೀನದುದ್ದಕ್ಕೂ ಸುಖವಾಗಿಡುತ್ತದೆ. ಕುಣಬಿಯರ ಕೌಟುಂಬಿಕ ಹಿನ್ನೆಲೆಯನ್ನು ಅರಿತುಕೊಳ್ಳುವ ಸಲುವಾಗಿ ಸ್ಥಳಾಂತರದ ಮೊದಲು ಇವರು ಯಾವ ರೀತಿಯ ಕುಟುಂಬ ಜೀವನವನ್ನು ಹೊಂದಿದ್ದರು ಮತ್ತು ಅವರ ಪ್ರತಿಯೊಂದು ಕುಟುಂಬದಲ್ಲಿ ಎಷ್ಟು ಸದಸ್ಯರಿರುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೩. ಕುಟುಂಬದ ಮಾದರಿ ಮತ್ತು ಕುಟುಂಬದ ಒಟ್ಟು ಸದಸ್ಯರ ಸಂಖ್ಯೆಯ ವರ್ಗೀಕರಣ

ಕುಟುಂಬದ ಮಾದರಿ	ಮಾಹಿತಿದಾರ ಕುಟುಂಬಗಳು	ಪ್ರತಿಶತ
ವಿಭಕ್ತ	೧೭	೧೩.೫೦
ಅವಿಭಕ್ತ	೧೦೯	೮೬.೫೦
ಒಂದು ಕುಟುಂಬದಲ್ಲಿದ್ದ ಒಟ್ಟು ಸದಸ್ಯರ ಸಂಖ್ಯೆ		
೧-೪	೪	೩.೧೮
೫-೧೦	೬೧	೪೮.೪೧
೧೧-೧೫	೪೦	೩೧.೭೪
೧೬-೨೦	೧೨	೯.೫೨
೨೧-೩೦	೯	೭.೧೫


ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೩.ರಲ್ಲಿನ ಮಾಹಿತಿಯಂತೆ ಸಂತ್ರಸ್ತರಲ್ಲಿ ಶೇಕಡಾ ೮೬.೫೦ ರಷ್ಟು ಅವಿಭಕ್ತ ಕುಟುಂಬದಲ್ಲಿ ವಾಸವಿದ್ದರು. ಕುಟುಂಬವೊಂದರಲ್ಲಿ ಕನಿಷ್ಟ ೪ ರಿಂದ ೩೦ ಸದಸ್ಯರಿರುತ್ತಿದ್ದರು. ಮನೆಯ ಯಜಮಾನನನ್ನು ಬುದುವಂತ ಎಂದು ಕರೆಯುತ್ತಿದ್ದರು. ಕುಟುಂಬದ ಸದಸ್ಯರು ಇವನ ಮಾತಿನಂತೆ ನಡೆದುಕೊಳ್ಳುತ್ತಿದ್ದರು. ದೊಡ್ಡದಾದ ಮನೆ ಮಾಡಿಕೊಂಡು ಒಂದೇ ಮನೆಯಲ್ಲಿ ವಾಸವಿರುತ್ತಿದ್ದರು. ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಇವನೇ ತೆಗೆದು ಕೊಳ್ಳುತ್ತಿದ್ದನು. ಕುಟುಂಬದ ಎಲ್ಲಾ ಜವಾಬ್ದಾರಿಗಳು ಬುದುವಂತ ಹೊರುತ್ತಿದ್ದನು. ಕುಟುಂಬದ ಎಲ್ಲಾ ಆಸ್ತಿ ಇವನ ಹೆಸರಲ್ಲೇ ಇರುತ್ತಿತ್ತು.
ಕುಣಬಿಯರು ಹೆಚ್ಚಾಗಿ ಅವಿಭಕ್ತ ಕುಟುಂಬಗಳಲ್ಲಿ ವಾಸವಿದ್ದು ಒಂದು ಕುಟುಂಬ ಎಂದರೆ ಮೂರು ತಲೆಮಾರಿನ ಸರಿ ಸುಮಾರು ೩೦ ಸದಸ್ಯರು ಇದ್ದರು. ಹಾಗೂ ಕುಟುಂಬದ ಆಸ್ತಿಗೆ ಯಜಮಾನನೇ ವಾರಸ್ಧಾರ ಎಂಬ ಮಾಹಿತಿಯನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೪. ಊರಲ್ಲಿದ್ದ ಇತರ ಸಮುದಾಯಗಳೊಂದಿಗೆ ಕುಣಬಿಯರ ಸಂಬಂಧದ ಮಾಹಿತಿ

ಕುಣಬಿಯರ ಸ್ವಭಾವವನ್ನು ಅರಿಯುವ ಸಲುವಾಗಿ ತಮ್ಮ ಊರಲ್ಲಿದ್ದ ಇತರೇ ಸಮುದಾಯಗಳೊಂದಿಗೆ ಇವರು ಬೆರೆಯುತ್ತಿದ್ದರೇ ಅಥವಾ ಬೆರೆಯುತ್ತಿರಲಿಲ್ಲವೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ: ೩.೩. ಇತರ ಸಮುದಾಯಗಳೊಂದಿಗೆ ಕುಣಬಿಯರ ಸಂಬಂಧದ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೩.ರ ಮಾಹಿತಿಯಂತೆ ಶೇಕಡಾ ೨೨.೨೨ರಷ್ಟು ಕುಟುಂಬಗಳು ಇತರೇ ಸಮುದಾಯದ ಜೊತೆಗೆ ಬೆರೆಯುತ್ತಿದ್ದರು. ಶೇಕಡಾ ೬೯.೦೫ರಷ್ಟು ಇತರರ ಜೊತೆಗೆ ಕಡಿಮೆ ಬೆರೆಯುತ್ತಿದ್ದು ಇನ್ನುಳಿದಂತೆ ಶೇಕಡಾ ೮.೭೩ರಷ್ಟು ಕುಟುಂಬಗಳು ಯಾರ ಜೊತೆಯೂ ಸಂಪರ್ಕವಿರದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ.

ಈ ಅಂಕಿ ಅಂಶಗಳನ್ನು ಗಮನಿಸಿದಾಗ ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ಇತರರ ಜೊತೆಗೆ ಅಷ್ಟಾಗಿ ಬೆರೆಯುತ್ತಿರಲಿಲ್ಲ ಎಂಬ ಅಂಶವು ತಿಳಿದುಬರುತ್ತದೆ. ಕಾರಣ ತಾವು ಬ್ರಾಹ್ಮಣರಿಗಿಂತಲೂ ಹೆಚ್ಚು, ಶುದ್ಧಾಚಾರಿಗಳು, ಸ್ವಾವಲಂಬಿಗಳು ಎಂಬ ಧೋರಣೆ ಅವರಲ್ಲಿ ಇದ್ದುದರಿಂದ ಅವರು ಇತರರ ಸಂಬಂಧವನ್ನು ಬಯಸುತ್ತಿರಲಿಲ್ಲ.

ಕುಣಬಿ ಸಮುದಾಯವು ಶುದ್ಧ ಸಂಪ್ರದಾಯವಾದಿಗಳು ಹಾಗೂ ಅವರದೇ ಆಚಾರ–ವಿಚಾರವನ್ನು ಹೊಂದಿದ್ದು ಇತರೇ ಸಮುದಾಯಗಳ ಜೊತೆ ಬೆರೆಯಲು ಇಷ್ಟ ಪಡುವುದಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೫. ವಾಸವಾಗಿದ್ದ ಊರಿನ ಭೌಗೋಳಿಕ ಪರಿಸರದ ಮಾಹಿತಿ

ವ್ಯಕ್ತಿಗಳ ಗುಣ, ಸ್ವಭಾವ, ಆಸಕ್ತಿ, ಆಲೋಚನೆಗಳು ಇವೆಲ್ಲಾ ಅವರು ಬೆಳೆದುಬಂದ ಭೌಗೋಳಿಕ ಪರಿಸರದ ಮೇಲೆ ಅವಲಂಭಿತವಾಗಿರುತ್ತವೆ. ಸುತ್ತಮುತ್ತಲ ಭೌಗೋಳಿಕ ವಾತಾವರಣ ವ್ಯಕ್ತಿಯ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಕುಣಬಿಯರಿಗೆ ಯಾವ ರೀತಿಯ ಪರಿಸರ ಒಪ್ಪುತ್ತದೆ ಎಂಬುದನ್ನು ಅರಿತುಕೊಳ್ಳಲು ಮೊದಲು ಅವರು ಯಾವ ರೀತಿಯ ಪರಿಸರದಲ್ಲಿ ವಾಸವಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೪. ವಾಸವಾಗಿದ್ದ ಊರಿನ ಭೌಗೋಳಿಕ ಪರಿಸರದ ವರ್ಗೀಕರಣ

ಊರಿನ ಭೌಗೋಳಿಕ ಪರಿಸರ	**ಮಾಹಿತಿದಾರ ಕುಟುಂಬಗಳ ಸಂಖ್ಯೆ**	**ಪ್ರತಿಶತ**
ಗುಡ್ಡಗಾಡು	೧೨೦	೯೫.೨೩
ಗ್ರಾಮೀಣ	೩	೨.೩೮
ಅರೆಗ್ರಾಮೀಣ	೧	೦.೭೯
ಪಟ್ಟಣ	೨	೧.೫೯

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪.ರ ಮಾಹಿತಿಯಂತೆ ಸಂತ್ರಸ್ತ ಕುಣಬಿಯರಲ್ಲಿ ಶೇಕಡಾ ೯೫.೨೩ರಷ್ಟು ಕುಟುಂಬಗಳು ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿದ್ದುದು ತಿಳಿದುಬರುತ್ತದೆ. ಇವರು ಮತಾಂತರಕ್ಕೆ ಹೆದರಿಕೊಂಡು ಅಂತರ ರಾಜ್ಯದಿಂದ ವಲಸೆ ಬಂದು ಕಾಡಲ್ಲಿ ಎಲ್ಲಿ ಜಾಗ ದೊರೆಯಿತೋ ಅಲ್ಲಿ ಅಡಗಿದರು. ಕಾಳಿ ಮತ್ತು ಪಾಂಡರಿ ನದಿಯ ಇಕ್ಕೆಲಗಳಲ್ಲಿ ಡಟ್ಟವಾದ ಕಾಡು ಮತ್ತು ಸಮೃದ್ಧವಾದ ಭೂಮಿಯಿದ್ದು ಇವರು ಅಲ್ಲಿ ವಾಸವಿದ್ದರು. ಬಾಹ್ಯ ಪ್ರಪಂಚಕ್ಕೆ ತಾವು ಕಾಣಿಸಿಕೊಳ್ಳದ ರೀತಿಯಲ್ಲಿ ಬದುಕುತ್ತಿದ್ದರು.

ಸಂತ್ರಸ್ತ ಕುಣಬಿಯರು ಡಟ್ಟವಾದ ಕಾಡಿನ ಮಧ್ಯೆ ವಾಸವಿದ್ದು ಕಾಡಿನ ಪರಿಸರಕ್ಕೆ ಹೊಂದಿಕೊಂಡಿದ್ದವರು ಹಾಗೂ ಬಾಹ್ಯ ಪ್ರಪಂಚಕ್ಕೆ ತೆರೆದುಕೊಳ್ಳದವರು ಎಂಬ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೬. ಕಾಡಿನಿಂದ ಪಡೆದುಕೊಳ್ಳುತ್ತಿದ್ದ ಪ್ರಯೋಜನಗಳು

ಕುಣಬಿಯರು ಸ್ಥಳಾಂತರದ ಮೊದಲು ಕಾಡನ್ನು ಎಷ್ಟು ಆಶ್ರಯಿಸುತ್ತಿದ್ದರು? ಕಾಡು ಅವರನ್ನು ಎಷ್ಟು ಪೋಷಿಸುತ್ತಿತ್ತು? ಸ್ಥಳಾಂತರ ಅವರನ್ನು ಎಷ್ಟು ಕಾಡಿರಬಹುದು ಎಂಬುದನ್ನು ಅರಿತುಕೊಳ್ಳುವ ಸಲುವಾಗಿ ಅವರು ಕಾಡಿನಿಂದ ಏನೆಲ್ಲಾ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೫. ಕಾಡಿನಿಂದ ಪಡೆದುಕೊಳ್ಳುತ್ತಿದ್ದ ಪ್ರಯೋಜನಗಳ ವರ್ಗೀಕರಣ

ಪ್ರಯೋಜನಗಳು	ಮಾಹಿತಿದಾರ ಒಟ್ಟು ಕುಟುಂಬಗಳು	ಪ್ರತಿಶತ
ಬೇಟೆ	೪೧	೩೨.೫೪
ಆಹಾರ ಸಂಗ್ರಹಣೆ	೯೮	೭೭.೭೮
ಉರುವಲು	೧೨೬	೧೦೦
ಸೊಪ್ಪು	೧೧೨	೮೮.೮೯
ನೀರು	೧೨೨	೯೬.೮೨
ಮೇವು	೧೧೪	೯೦.೪೮
ಕಿರು ಉತ್ಪನ್ನ	೮೪	೬೪.೬೭
ಔಷಧಿ	೮೮	೬೯.೮೪
ಮರ ಮುಟ್ಟು	೧೦೩	೮೧.೭೪
ಕಲ್ಲು, ಮಣ್ಣು,	೧೦೨	೮೦.೯೫

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ಸಂಖ್ಯೆ ೩.೫.ರಲ್ಲಿನ ಅಂಕಿಅಂಶಗಳ ಮಾಹಿತಿಯಂತೆ ಹೆಚ್ಚಿನ ಸಂತ್ರಸ್ತರು ಕಾಡಿನಿಂದ ಹೆಚ್ಚಿನ ಪ್ರಯೋಜನಗಳನ್ನು ಪಡೆಯುತ್ತಿದ್ದರು. ಮುಖ್ಯವಾಗಿ ಬೇಟೆ, ಕಿರುಉತ್ಪನ್ನ, ನೀರು, ಉರುವಲು, ಸೊಪ್ಪು ಮತ್ತು ಮೇವಿಗಾಗಿ ಕಾಡನ್ನು ಉಪಯೋಗಿಸುತ್ತಿದ್ದರು. ಗುಡ್ಡಗಾಡು ಪ್ರದೇಶದಲ್ಲಿ ವಾಸವಿದ್ದುದರಿಂದ ಅರಣ್ಯ ಸಂಪನ್ಮೂಲಗಳನ್ನೆಲ್ಲಾ ತಮಗೆ ಬೇಕಾದಷ್ಟು ಬಳಸಿಕೊಳ್ಳುತ್ತಿದ್ದರು.

ಜೀವನಕ್ಕೆ ಬೇಕಾದ ಪೂರಕ ಸಂಪನ್ಮೂಲಗಳನ್ನು ಇವರು ಕಾಡಿನಿಂದ ಅನಾಯಾಸವಾಗಿ ಪಡೆಯುತ್ತಿದ್ದರು; ಕಾಡಿನ ಸಂಪನ್ಮೂಲಗಳು ಇವರ ಬದುಕಿಗೆ ಆಧಾರವನ್ನು ಕೊಡುತ್ತಿತ್ತು; ಇವರು ತಮ್ಮೆಲ್ಲಾ ಅವಶ್ಯಕತೆಗಳಿಗಾಗಿ ಹೆಚ್ಚಾಗಿ ಕಾಡನ್ನು ಆಶ್ರಯಿಸಿದ್ದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೭. ಪ್ರಕೃತಿ ಮತ್ತು ಕುಣಬಿಯರ ನಡುವಿನ ಸಂಬಂಧ

ಮನುಷ್ಯ ತನ್ನ ಪ್ರಕೃತಿಗೆ ಅವಲಂಬನೆಯಾಗಿರುತ್ತಾನೆ. ತನ್ನ ಊರು ಬಿಟ್ಟು ಒಂದು ದಿನ ಹೊರಗಡೆ ಇರಲು ತಡವರಿಸುತ್ತಾನೆ. ಸುತ್ತ ಮುತ್ತಲ ವಾತಾವರಣಕ್ಕೆ ಅವನು ಒಗ್ಗಿಕೊಂಡಿರುತ್ತಾನೆ, ಪ್ರೀತಿಸುತ್ತಾನೆ, ಪೂಜಿಸುತ್ತಾನೆ. ಅದನ್ನು ಬಿಟ್ಟು ಇರಲಾರದಷ್ಟು ಹಚ್ಚಿಕೊಂಡಿರುತ್ತಾನೆ. ಹಾಗೆಯೇ ಕುಣಬಿಯರು ಪ್ರಕೃತಿಗೆ ಎಷ್ಟು ಹೊಂದಿಕೊಂಡಿದ್ದರು, ಒಗ್ಗಿಕೊಂಡಿದ್ದರು ಮತ್ತು ಅವಲಂಬನೆಯಾಗಿದ್ದರು ಎಂಬುದನ್ನು ಅಧ್ಯಯನ

ಮಾಡಲಾಗಿದೆ. ಎಲ್ಲಾ ಕುಣಬಿ ಕುಟುಂಬಗಳು (೧೦೦%) ಪ್ರಕೃತಿಯನ್ನು ಅತ್ಯಂತ ಹೊಂದಿಕೊಂಡಿದ್ದರು ಎಂಬ ಭಾವನೆಯನ್ನು ವ್ಯಕ್ತಪಡಿಸಿರುತ್ತಾರೆ.

ಕುಣಬಿಯರು ಪ್ರಕೃತಿಯ ಆರಾಧಕರು. ಪ್ರಕೃತಿಯಲ್ಲಿ ದೊರೆಯುತ್ತಿದ್ದ ಗುಂಡಾಕಾರದ ಕಲ್ಲುಗಳನ್ನು, ಮಣ್ಣು, ಮರ, ಗಿಡ, ಬೆಟ್ಟ, ಗುಡ್ಡಗಳನ್ನು ಇವರು ದೇವರೆಂದು ಪೂಜಿಸುತ್ತಿದ್ದರು. ನೀರಿನ ಹೊಂಡವನ್ನು ದೇವರ ಜಾಗ ಎಂದು ಪೂಜಿಸುತ್ತಿದ್ದರು. ಯಾವುದೇ ಗಿಡಗಳನ್ನು ಕಡಿಯುವ ಮೊದಲು ಗ್ರಾಮದ ದೇವರಿಗೆ ಪೂಜೆ ಮಾಡಿ ಕ್ಷಮೆ ಕೋರಿಕೊಂಡು ಅಗತ್ಯಕ್ಕೆ ಬೇಕಾದಷ್ಟು ಮಾತ್ರ ಕಡಿಯುತ್ತಿದ್ದರು. ತಮ್ಮ ಊರಿಗೆಂದೇ ಇಂತಿಷ್ಟು ಪರಿಧಿಯನ್ನು ನಿಗದಿ ಮಾಡಿಕೊಂಡು ಸೀಮೆ ಎಂದು ಪಾಲಿಸುತ್ತಿದ್ದರು. ಕಲ್ಲು ಮರಗಳನ್ನು ಹಿರಿಯರ ಜೀವಾತ್ಮಗಳು ಎಂದು ನಂಬಿ ಪೂಜಿಸುತ್ತಿದ್ದರು. 'ನಾವು ದೇವರ ಮಧ್ಯೆಯೇ ಇದ್ದೇವೆ' ಎಂದು ಭಾವಿಸಿಕೊಂಡು ಪ್ರಕೃತಿಯ ಮಧ್ಯೆ ಸ್ವಚ್ಛಂಧವಾಗಿ ಬದುಕು ಸಾಗಿಸುತ್ತಿದ್ದರು. ಆ ಭಾವನೆ ಅವರನ್ನು ಬೆಚ್ಚನೆ ಸಲಹುತ್ತಿತ್ತು. ದಿನದಲ್ಲಿ ಒಂದು ಸಲ ಯಾವುದಾದರೂ ಉದ್ಧೇಶಕ್ಕೆ ಕಾಡಿಗೆ ಹೋಗಿ ಬರದಿದ್ದರೆ ಇವರಿಗೆ ಸಮಾಧಾನವೇ ಆಗುತ್ತಿರಲಿಲ್ಲ. ಕಾಡು ಮತ್ತು ಇವರು ತಾಯಿ ಮಕ್ಕಳು ಇದ್ದಂತೆ ಇರುತ್ತಿದ್ದರು.

ಕಾಡಿನ ಪ್ರಕೃತಿ ಜೊತೆಗೆ ಕುಣಬಿಯರು ಭಾವನಾತ್ಮಕ ನಂಟನ್ನು ಹೊಂದಿದ್ದರು. ಪ್ರಕೃತಿ ತಮಗೆ ಬೇಕಾದ್ದನ್ನು ನೀಡಿ ಸರ್ವಕಾಲದಲ್ಲೂ ರಕ್ಷಿಸುತ್ತದೆ ಎಂಬ ಸುರಕ್ಷತಾ ಭಾವನೆಯಿಂದ ಇವರು ಬದುಕು ಸಾಗಿಸುತ್ತಿದ್ದರು ಎಂಬ ಅಂಶವನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೮. ಕುಣಬಿಯರು ಆಚರಿಸುತ್ತಿದ್ದ ಹಬ್ಬಗಳು

ಆಚರಿಸುವ ಹಬ್ಬಗಳು ಮನುಷ್ಯನಿಗೆ ನವ ಉಲ್ಲಾಸ, ಆಸಕ್ತಿ ವೃದ್ಧಿಸುತ್ತವೆ. ಇವು ನವನವೀನತೆಯನ್ನು ತುಂಬುತ್ತವೆ ಎಂಬ ಉದ್ಧೇಶದಿಂದಲೇ ಆಚರಿಸಲಾಗುತ್ತದೆ. ಹಬ್ಬಗಳು ಸಮೃದ್ಧಿಯ ಸಂಕೇತ ಕೂಡಾ ಆಗಿದೆ. ಆದ್ದರಿಂದ ಕುಣಬಿಯರ ಧಾರ್ಮಿಕ ಆಚರಣೆಗಳನ್ನು ಅಧ್ಯಯನ ಮಾಡಲಾಗಿದೆ. ಅವರು ಮೊದಲು ಎಷ್ಟು ಸಮೃದ್ಧರಾಗಿದ್ದರು ಎಂಬುದನ್ನು ಅವರು ಆಚರಿಸುತ್ತಿದ್ದ ಹಬ್ಬಗಳಿಂದ ಅಳೆಯಲಾಗಿದೆ. ಸ್ಥಳಾಂತರದ ಮೊದಲು ಸಾಕಷ್ಟು ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದಾಗಿ ಎಲ್ಲಾ (೧೦೦%) ಸಂತ್ರಸ್ತ ಕುಟುಂಬಗಳು ಪ್ರತಿಕ್ರಿಯಿಸಿವೆ.

ಹೋಳಿ, ಸಂಕ್ರಾಂತಿ, ಯುಗಾದಿ, ದೀಪಾವಳಿ, ದಸರಾ, ರಾಕಿ ಪೂರ್ಣಿಮಾ, ನಾಗರಪಂಚಮಿ, ತುಳಸಿ ವಿವಾಹ, ಗಣೇಶ ಚತುರ್ಥಿ, ಸಿಗ್ಮಾ, ಪುಗಡಿ, ಮಹಾಶಿವರಾತ್ರಿಯಲ್ಲಿ ಗುಡೇಪರ್ವ, ಗುಡಿಪಾಡವ, ಅಮವಾಸ್ಯೆಯಲ್ಲಿ ಮಾಳು ಮುಂತಾದ ಹಬ್ಬಗಳನ್ನು ಸ್ಥಳಾಂತರದ ಮೊದಲು ಕುಣಬಿಯರು ಆಚರಿಸುತ್ತಿದ್ದರು. ವರ್ಷಕ್ಕೆ ಒಂದು ಸಲ ಮೇ ತಿಂಗಳಲ್ಲಿ ಮಂಗಳವಾರ ಅಥವಾ ಶುಕ್ರವಾರ 'ವಾರ್' ಆಚರಣೆ

ಮಾಡುತ್ತಿದ್ದರು. ಹಬ್ಬದ ಸಮಯದಲ್ಲಿ ಮನೆಗಳಿಗೆ ಬಣ್ಣ ಬಳಿದು, ಮನೆ ತುಂಬಾ ಬಣ್ಣದ ಕಾಗದ ಅಂಟಿಸಿ ಮನೆಯನ್ನು ಸಾಧ್ಯವಾದಷ್ಟು ಶೃಂಗಾರಗೊಳಿಸುತ್ತಿದ್ದರು. ಬೇರೆ ಊರಿನ ನೆಂಟರಿಷ್ಟರನ್ನು ಆಮಂತ್ರಿಸುತ್ತಿದ್ದರು. ಬೇರೆ ಊರಿನ ಹಬ್ಬಗಳಲ್ಲಿ ಕೂಡಾ ಇವರು ಭಾಗಿಯಾಗುತ್ತಿದ್ದರು.

ಸಂತ್ರಸ್ತ ಕುಣಬಿಯರು ಸ್ಥಳಾಂತರ ಪೂರ್ವದಲ್ಲಿ ವಿವಿಧ ಹಬ್ಬಗಳನ್ನು ಸಾಕಷ್ಟು ವಿಜೃಂಭಣೆಯಿಂದ, ಸಂತೋಷದಿಂದ, ತಮ್ಮದೇ ಆದ ಅನನ್ಯತೆಯಿಂದ ಆಚರಿಸುತ್ತಿದ್ದರು. ಅವರು ಆಚರಣೆಗಳಲ್ಲಿ ಸಮೃದ್ಧವಾಗಿದ್ದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೯. ಕುಣಬಿಯರ ಸಾಂಸ್ಕೃತಿಕ ಆಚರಣೆಗಳು

ಮನಸ್ಸಿನ ನೆಮ್ಮದಿ ಮತ್ತು ಸಮೃದ್ಧಿಯ ಸಂಕೇತವಾಗಿ ಮನುಷ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಾನೆ. ಆದ್ದರಿಂದ ಸ್ಥಳಾಂತರದ ಮೊದಲು ಕುಣಬಿಯರ ಸಾಂಸ್ಕೃತಿಕ ಬದುಕು ಹೇಗಿತ್ತು ಎಂಬುದನ್ನು ಅಧ್ಯಯನ ಮಾಡಲಾಗಿದೆ. ಅವರು ಸಮೃದ್ಧವಾದ ಸಂಸ್ಕೃತಿಯನ್ನು ಹೊಂದಿದ್ದರು ಎಂಬುದಾಗಿ ಎಲ್ಲಾ (೧೦೦%) ಸಂತ್ರಸ್ತರು ಅಭಿಪ್ರಾಯಪಟ್ಟಿದ್ದಾರೆ.

ಪ್ರಕೃತಿಯ ಕಂದಮ್ಮಗಳಾದ ಕುಣಬಿಯರು ಅತ್ಯಂತ ಮಹತ್ವಪೂರ್ಣವೂ, ವೈವಿಧ್ಯಮಯವೂ ಆಗಿರುವ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದ್ದರು. ಬಹಳ ಶ್ರೀಮಂತವಾದ ಸಂಸ್ಕೃತಿ ಅವರದಾಗಿತ್ತು. ಅವರು ತಮ್ಮದೇ ಆದ ವೈವಿಧ್ಯಮಯ ಜಾನಪದ ಹಾಡು ಮತ್ತು ಕುಣಿತವನ್ನು ಪ್ರದರ್ಶನ ಮಾಡುತ್ತಿದ್ದರು. ಕರಡಿ ಕುಣಿತ, ನವಿಲು ಕುಣಿತ, ಗೌಳಿಗನ ಪಾತ್ರ, ಗಂಡ-ಹೆಂಡತಿ ಪಾತ್ರ, ಕುಣಬಿ ಯಕ್ಷಗಾನ, ಪಕ್ಷಿಗಳ ಕುಣಿತಗಳು ಹೀಗೆ ಸುಗ್ಗಿ ದಿನಗಳಲ್ಲಿ ರಾತ್ರಿಯೆಲ್ಲಾ ಬೇರೆ ಬೇರೆ ರೀತಿಯ ಕುಣಿತಗಳ ಪ್ರದರ್ಶನ ಮಾಡಿ ವಿಜೃಂಭಿಸುತ್ತಿದ್ದರು. ಗಣೇಶ ಚತುರ್ಥಿಯಂದು ಭಜನಾ ಕಾರ್ಯಕ್ರಮ ಹಾಗೂ ಕುಣಿತಗಳನ್ನು ನೆರವೇರಿಸುತ್ತಿದ್ದರು. ಹೋಳಿ ಸಂದರ್ಭದಲ್ಲಿ ೫ ದಿವಸ ಊರೂರಲ್ಲಿ ಅಲೆದಾಡುತ್ತಾ ಕೋಲಾಟ (ಹೋಳಿಸಿಗ್ಮಾ), ಪುಗಡಿ ನರ್ತಿಸುತ್ತಿದ್ದರು. ಹೋಳಿ ಹಬ್ಬದ ಸಮಯಲ್ಲಿ ೪ ದಿವಸ ರಾಮ, ಲಕ್ಷ್ಮಣ, ಸೀತಾ, ರಾಧಾಕೃಷ್ಣ ನಾಟಕ ಮುಂತಾದ ಕಲೆಗಳ ಪ್ರದರ್ಶನವನ್ನು ಮಾಡುತ್ತಿದ್ದರು. ಇದರಲ್ಲಿ ಅವರ ಪುಗಡಿಯಾಟ ಹಾಗೂ ಹೋಳಿಸಿಗ್ಮಾ ತುಂಬಾ ಜನಪ್ರಿಯವಾಗಿತ್ತು. ಹೋಳಿ ಸಂದರ್ಭದಲ್ಲಿ ಕೋಲಾಟವಾಡುತ್ತಾ ನೆರೆಯ ಗೋವಾ ರಾಜ್ಯಕ್ಕೂ ಹೋಗಿ ಬರುತ್ತಿದ್ದರು. ಈ ಕಲೆಗಳ ಪ್ರದರ್ಶನವನ್ನು ಸಮೃದ್ಧಿಯ ಸಂಕೇತವಾಗಿ ಮಾಡುತ್ತಿದ್ದರು. ಸಣ್ಣಪುಟ್ಟ ಊರುಗಳಲ್ಲಿ ಕಡಿಮೆ ಸದಸ್ಯರಿದ್ದುದರಿಂದ ಪಕ್ಕದ ಊರುಗಳಲ್ಲಿನ ತಮ್ಮ ಸಂಬಂಧಿಕರ ಆಚರಣೆಗಳಲ್ಲಿ ಭಾಗಿಯಾಗುತ್ತಿದ್ದರು. ಯಾವಾಗಲೂ ಕೆಲಸ ಮಾಡಿ ದಣಿದ ದೇಹಗಳಿಗೆ ಈ ಪ್ರದರ್ಶನಗಳು ಮುದ ನೀಡುತ್ತಿದ್ದವು. ಮನಸ್ಸಿಗೆ ಮನೋರಂಜನೆ ನೀಡುತ್ತಿತ್ತು.

ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ಅನನ್ಯ ಸಂಸ್ಕೃತಿಯನ್ನು ಹೊಂದಿದ್ದು ಎಲ್ಲರೂ ಬೆರೆತು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಅತ್ಯಂತ ವಿಜೃಂಭಣೆಯಿಂದ ಕೈಗೊಂಡು ಸಂತೋಷದಿಂದ ಜೀವನ ಕಳೆಯುತ್ತಿದ್ದರು: ಈ ಚಟುವಟಿಕೆಗಳು ಅವರ ಮನೋರಂಜನೆಯ ಸಾಧನವಾಗಿತ್ತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೧೦. ಸಾಮಾಜಿಕ ಪಿಡುಗುಗಳು ಮತ್ತು ಕುಣಬಿ ಸಮುದಾಯ

ಪಿಡುಗುಗಳಿಗೂ ಜಾತಿಗಳಿಗೂ ನಂಟು ಇರುತ್ತದೆ. ಅವು ತಮ್ಮಲ್ಲಿ ಅಂತಹ ಆಚರಣೆಗಳನ್ನು ನಂಬಿಕೆ ಎಂಬ ನೆಲೆಗಟ್ಟಿನಲ್ಲಿ ಕೈಗೊಂಡು ಮನುಷ್ಯನ ಧನಾತ್ಮಕ ಪ್ರಗತಿಗೆ ಮಾರಕವಾಗುತ್ತವೆ. ಆದ್ದರಿಂದ ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ಯಾವುದಾದರೂ ಸಾಮಾಜಿಕ ಪಿಡುಗುಗಳನ್ನು ಹೊಂದಿದ್ದಾರೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಅವರ ಸಮುದಾಯದಲ್ಲಿ ವರದಕ್ಷಿಣೆ, ಬಾಲ್ಯವಿವಾಹ, ದೇವದಾಸಿ, ಜೀತಪದ್ದತಿ, ಅಸ್ಪೃಶ್ಯತೆ ಈ ರೀತಿಯಾದ ಯಾವುದೇ ಸಾಮಾಜಿಕ ಪಿಡುಗುಗಳು ಇರಲಿಲ್ಲ. ಯಾರೂ ಇವರನ್ನು ಅಸ್ಪೃಶ್ಯರಂತೆ ಕಾಣುತ್ತಿರಲಿಲ್ಲ. ಸಾಮಾನ್ಯವಾಗಿ ಸಣ್ಣ ವಯಸ್ಸಿಗೆ ಮದುವೆಯಾಗುತ್ತಿದ್ದರೇ ಹೊರತು ಬಾಲ್ಯ ವಿವಾಹದಂತಹ ಪದ್ಧತಿ ಇರಲಿಲ್ಲ ಎಂಬುದಾಗಿ ಎಲ್ಲಾ(೧೦೦%) ಸಂತ್ರಸ್ತ ಕುಣಬಿಯರು ಅಭಿಪ್ರಾಯಪಟ್ಟಿದ್ದಾರೆ.

ಕುಣಬಿಯರು ಯಾವುದೇ ರೀತಿಯ ಸಾಮಾಜಿಕ ಪಿಡುಗುಗಳನ್ನು ಹೊಂದಿರಲಿಲ್ಲ. ಪಿಡುಗು ಮುಕ್ತ ಸಮುದಾಯ ಇವರಾಗಿದ್ದು ಬೇರೆಯವರಿಗೆ ಆದರ್ಶಪ್ರಾಯರಾಗಿದ್ದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೧೧. ಕುಣಬಿಯರು ಪಾಲಿಸುತ್ತಿದ್ದ ರೂಢಿ ಸಂಪ್ರದಾಯಗಳು

ಮನುಷ್ಯ ಹಲವಾರು ರೂಢಿಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುತ್ತಿರುತ್ತಾನೆ. ಅವು ಅವನಿಗೆ ಅರಿವಿಲ್ಲದಂತೆ ಅವನ ಜೀವನದ ಅವಿಭಾಜ್ಯ ಅಂಗಗಳಾಗಿ ಬಿಡುತ್ತವೆ. ಆದರೆ ಇವು ಧನಾತ್ಮಕವಾಗಿದ್ದರೆ ಮನುಷ್ಯ ಪ್ರಗತಿಯನ್ನು ಹೊಂದುತ್ತಾನೆ. ಸಮಾಜದಲ್ಲಿ ಮಾನ್ಯತೆಯನ್ನು ಪಡೆಯುತ್ತಾನೆ. ಋಣಾತ್ಮಕವಾಗಿದ್ದರೆ ಅವು ಮನುಷ್ಯನ ಜೀವನದ ಮೇಲೆ ವ್ಯರಿತಿಕ್ತ ಪರಿಣಾಮವನ್ನು ಬೀರುತ್ತವೆ. ಅವಶ್ಯವಾಗಿ ಅವನು ಅವುಗಳನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕುಣಬಿಯರು ಯಾವ ರೀತಿಯ ರೂಢಿ ಸಂಪ್ರದಾಯಗಳನ್ನು ಪಾಲಿಸುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ. ಅವರು ಹಂದಿ, ಕೋಳಿ, ಕುರಿ, ಮೇಕೆ, ಸಾಕುತ್ತಿರಲಿಲ್ಲ ಮತ್ತು ಮುಟ್ಟುತ್ತಿರಲಿಲ್ಲ. ಸಾಕು ಪ್ರಾಣಿಗಳ ಮಾಂಸ ತಿನ್ನುತ್ತಿರಲಿಲ್ಲ. ಮದ್ಯಪಾನ ಮಾಡುತ್ತಿರಲಿಲ್ಲ. ಮುಟ್ಟು, ಬಾಣಂತಿ, ಮಗು ಹುಟ್ಟಿದಾಗ ಮತ್ತು ಹೆಣ್ಣು ಮಗಳು ಋತುಮತಿಯಾದಾಗ ಮೈಲಿಗೆ ಶಾಸ್ತ್ರ ಆಚರಣೆ ಮಾಡುತ್ತಿದ್ದರು. ಅಂತರ್ಜಾತಿ ವಿವಾಹ ಮತ್ತು ಪ್ರೀತಿ ವಿವಾಹ ಸ್ವಜಾತಿಯಲ್ಲೇ ಆದರೂ ವಿರೋಧ ಇತ್ತು. ಈ ರೀತಿ ಮದುವೆಯಾದರೆ ಜಾತಿಯಿಂದ ಹೊರಗಡೆ ಇಡುತ್ತಿದ್ದರು.

ಯಾವುದೇ ಸಮಯದಲ್ಲಿ ಮದುವೆಯಾದರೂ ದಂಪತಿಗಳಿಗೆ ನಿಶೇಖಪ್ರಸ್ತ ಶಾಸ್ತ್ರವನ್ನು ವರ್ಷದ ಸುಗ್ಗಿಯಲ್ಲಿ ಒಂದು ದಿನ ಮಾಡುತ್ತಿದ್ದರು. ಒಂದು ವೇಳೆ ದಂಪತಿಗಳು ಕದ್ದು ಒಂದಾದರೆ, ಅಥವಾ ಗರ್ಭಿಣಿಯಾದರೆ ಅವರನ್ನು ಜಾತಿಯಿಂದ ಬಿಟ್ಟು ಬಿಡುತ್ತಿದ್ದರು. ಮದುವೆ ಆದ ಮೇಲೆ ಯಾರೂ ವಿಚ್ಛೇದನ ಮಾಡಿಕೊಳ್ಳುವ ಹಾಗಿಲ್ಲ. ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುತ್ತಿರಲಿಲ್ಲ ಮತ್ತು ಅವರನ್ನು ಹೊರಗಡೆ ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ. ಹೊರಗಡೆ ಹೋದವರು ಯಾರನ್ನಾದರೂ ಇಷ್ಟ ಪಟ್ಟು ಮದುವೆ ಆಗಬಹುದು ಎಂಬ ಭಯದಿಂದ ಈ ತರಹ ಮಾಡುತ್ತಿದ್ದರು. ಬೇರೆಯವರ ಮನೆಯಲ್ಲಿ ಊಟ, ನೀರು ಮುಟ್ಟುತ್ತಿರಲಿಲ್ಲ. ಹೆಂಗಸರು ಬೇರೆಯವರ ಮನೆಗೆ ಹೋಗುತ್ತಿರಲಿಲ್ಲ. ಬೇರೆ ಸಮುದಾಯದವರ ಜೊತೆಗೆ ಮಾತನಾಡುತ್ತಿರಲಿಲ್ಲ, ಬೆರೆಯುತ್ತಿರಲಿಲ್ಲ. ಭತ್ತ ಬೆಳೆಯುವುದು ಮತ್ತು ಕೃಷಿ ಮಾಡುವುದು ಬಿಟ್ಟು ಯಾವ ಉದ್ಯೋಗವನ್ನೂ ಇವರು ಮಾಡುತ್ತಿರಲಿಲ್ಲ. ಇತರೆ ಕೆಲಸಗಳು ತಮ್ಮ ಸಮುದಾಯದವರು ಮಾಡುವ ಉದ್ಯೋಗ ಅಲ್ಲ ಎಂದು ನಡೆಸಿಕೊಂಡು ಬರುತ್ತಿದ್ದರು. ಈ ಎಲ್ಲಾ ರೂಢಿ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುತ್ತಿದ್ದರು ಎಂದು ಎಲ್ಲಾ(೧೦೦%) ಸಂತ್ರಸ್ತ ಕುಟುಂಬಗಳು ಅಭಿಪ್ರಾಯಪಟ್ಟಿದ್ದಾರೆ.

ಕುಣಬಿಯರು ತುಂಬಾ ಸಂಕುಚಿತ ಮನೋಭಾವನೆಯನ್ನು ಹೊಂದಿದ್ದರು. ಕುಟುಂಬದವರಿಗೆ ಹೆಚ್ಚಿನ ಸ್ವಾತಂತ್ರ್ಯವಿರಲಿಲ್ಲ. ಜಾತಿಯ ಕಟ್ಟುಪಾಡುಗಳು ತುಂಬಾ ಕಟ್ಟುನಿಟ್ಟಾಗಿದ್ದವು. ಕಠಿಣ ರೂಢಿ ಸಂಪ್ರದಾಯಗಳಿಂದ ತಮ್ಮ ಬದುಕಿಗೆ ತಾವೇ ಸಾಕಷ್ಟು ಕಡಿವಾಣ ಹಾಕಿಕೊಂಡಿದ್ದರು. ಯಾವುದೇ ರೀತಿಯ ದುರಾಭ್ಯಾಸ ಹೊಂದಿರಲಿಲ್ಲ. ಅವರ ರೂಢಿಸಂಪ್ರದಾಯಗಳಲ್ಲಿ ಧನಾತ್ಮಕ ಮತ್ತು ಋಣಾತ್ಮಕವಾದ ಎರಡೂ ಅಂಶಗಳು ಇದ್ದವು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೧೨. ಕುಣಬಿಯರ ಸಾಂಪ್ರದಾಯಿಕ ಉಡುಪು

ತಾವು ಉಡುವ ಉಡುಪು ತಮ್ಮನ್ನು ಅಭಿವ್ಯಕ್ತಗೊಳಿಸುತ್ತವೆ. ಮನುಷ್ಯ ಅವನ ಸಂಪ್ರದಾಯ, ಆಚರಣೆ ಮತ್ತು ಆಸಕ್ತಿಗೆ ತಕ್ಕಂತೆ ಉಡುಪು ಧರಿಸುತ್ತಾನೆ. ಅದು ಅವನಿಗೆ ಮುದ ನೀಡುತ್ತದೆ. ಕುಣಬಿಯರು ಮೊದಲು ಯಾವ ರೀತಿಯ ಉಡುಪು ಧರಿಸುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ. ವಯಸ್ಸಾದ ಕುಣಬಿ ಪುರುಷರು ಲಂಗೋಟಿ ಧರಿಸುತ್ತಿದ್ದರು. ಮಹಿಳೆಯರು ಕುಪ್ಪಸ ಧರಿಸದೇ ಸೀರೆ ಉಡುತ್ತಿದ್ದರು. ಅವರು ಹೆಚ್ಚಾಗಿ ಅವರದೇ ಆದ ಜನಸಮುದಾಯಗಳ ಜೊತೆಗೆ ಬದುಕುತ್ತಿದ್ದರಿಂದ ಇಂತಹ ಉಡುಪುಗಳನ್ನು ಯಾವುದೇ ರೀತಿಯ ಸಂಕೋಚವಿಲ್ಲದೇ ತೊಡುತ್ತಿದ್ದರು. ಇದು ಅವರ ಸಾಂಸ್ಕೃತಿಕ ಉಡುಪಾಗಿದ್ದು ಅವರಿಗೆ ಸಂತೃಪ್ತಿಯನ್ನು ನೀಡುತ್ತಿತ್ತು. ಈ ಮಾಹಿತಿಯಿಂದ ಕುಣಬಿಯರು ಸಾಂಪ್ರದಾಯಿಕ ಉಡುಪು ಧರಿಸುತ್ತಿದ್ದರು ಎಂಬುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

೩.೧.೨.೧೩. ಸ್ಥಳಾಂತರಪೂರ್ವದಲ್ಲಿ ಆಸ್ತಿಯನ್ನು ಹೊಂದಿದ್ದವರ ಮಾಹಿತಿ

ಕುಣಬಿಯರು ಆಸ್ತಿಯನ್ನು ಹೋದಿದ್ದರೇ, ಎಷ್ಟು ಕುಟುಂಬಗಳು ಸಂಪತ್ತನ್ನು ಹೊಂದಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ. ಕರ್ನಾಟಕ ವಿದ್ಯುತ್ ನಿಗಮದಿಂದ ಸಂತ್ರಸ್ತರ ಸಂಪತ್ತಿನ ಬಗ್ಗೆ ನಿಖರ ಮತ್ತು ವಿವರವಾದ ಮಾಹಿತಿ ಲಭ್ಯವಿರದ ಕಾರಣ ಕುಟುಂಬಗಳಿಂದ ನೇರವಾಗಿ ವಿವರನ್ನು ಪಡೆದುಕೊಳ್ಳಲಾಗಿದೆ.

ಕೋಷ್ಠಕ ಸಂಖ್ಯೆ. ೩.೬. ಆಸ್ತಿಯನ್ನು ಹೊಂದಿದ್ದವರ ವರ್ಗೀಕರಣ

ಆಸ್ತಿಯ ವಿವರ	ಹೊಂದಿದ್ದ ಕುಟುಂಬಗಳ ಸಂಖ್ಯೆ	ಪ್ರತಿಶತ
ಆಸ್ತಿ ಇತ್ತು	೧೦೪	೮೨.೫೪
ಆಸ್ತಿ ಇರಲಿಲ್ಲ	೨೨	೧೭.೪೬

ಆಧಾರ: ಕ್ಷೇತ್ರಕಾರ್ಯ


ಕೋಷ್ಠಕ ಸಂಖ್ಯೆ ೩.೬.ರಲ್ಲಿನ ಮಾಹಿತಿಯಂತೆ ಸಂತ್ರಸ್ತ ಕುಣಬಿಯರಲ್ಲಿ ಶೇಕಡಾ ೮೨.೫೪ರಷ್ಟು ಕುಟುಂಬಗಳು ಆಸ್ತಿಯನ್ನು ಹೊಂದಿದ್ದರು. ಶೇಕಡಾ ೧೭.೪೬ರಷ್ಟು ಕುಟುಂಬಗಳು ಅವರ ಸ್ವಂತ ಆಸ್ತಿಯನ್ನು ಹೊಂದಿರಲಿಲ್ಲ. ಸಂತ್ರಸ್ತ ಕುಣಬಿಯರಲ್ಲಿ ಅತೀ ಹೆಚ್ಚು ಕುಟುಂಬಗಳು ಸ್ಥಳಾಂತರಪೂರ್ವದಲ್ಲಿ ತಮ್ಮದೇ ಆದ ಸ್ವಂತ ಆಸ್ತಿಯನ್ನು ಹೊಂದಿದ್ದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೧೪. ಸಂತ್ರಸ್ತ ಕುಣಬಿಯರು ಹೊಂದಿದ್ದ ಸಂಪತ್ತಿನ ವಿವರ

ಕುಣಬಿಯರು ಯಾವ ರೀತಿಯ ಸಂಪತ್ತನ್ನು ಹೊಂದಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ೩.೪ರಲ್ಲಿ ನೀಡಿರುವಂತೆ ಪ್ರತಿಶತ ೮೩.೩೩ರಷ್ಟು (೧೦೫) ಕುಟುಂಬಗಳು ಹೊಲ ಹೊಂದಿದ್ದವು. ಹೆಚ್ಚಿನವರು (೮೦ ಕುಟುಂಬಗಳು) ೧-೧೦ ಎಕರೆ ಹೊಲ ಹೊಂದಿದ್ದು ೧೦ ಕುಟುಂಬಗಳು ೬೦ ಎಕರೆಗಳವರೆಗೂ ಹೊಲ ಹೊಂದಿದ್ದವು. ಪ್ರತಿಶತ ೮೪.೯೨ರಷ್ಟು (೧೦೭) ಕುಟುಂಬಗಳು ಮರಗಳನ್ನು ಹೊಂದಿದ್ದವು. ೧೮ ಕುಟುಂಬಗಳು ೧೫೦ ರವರೆಗೂ ಮರಗಳನ್ನು ಹೊಂದಿದ್ದವು. ಪ್ರತಿಶತ ೮೭.೩೦ರಷ್ಟು (೧೧೦) ಕುಟುಂಬಗಳು ಜಾನುವಾರುಗಳನ್ನು ಹೊಂದಿದ್ದವು. ಶೇಕಡಾ ೧೦೭ರಷ್ಟು ಕುಟುಂಬಗಳು ಸುಮಾರು ಮೂವತ್ತರವರೆಗೂ ಜಾನುವಾರುಗಳನ್ನು ಹೊಂದಿದ್ದವು.

ಸ್ಥಂಭ ನಕಾಶೆ ಸಂಖ್ಯೆ: ೩.೪. ಹೊಂದಿದ್ದ ಸಂಪತ್ತಿನ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಳಾಂತರ ಪೂರ್ವದಲ್ಲಿ ಹೆಚ್ಚಿನ ಸಂತ್ರಸ್ತರು ಸಾಕಷ್ಟು ಹೊಲ, ಜೀವನೋಪಾಯಕ್ಕೆ ಬೇಕಾದ ಮರಗಳು ಹಾಗೂ ಜಾನುವಾರುಗಳನ್ನು ಹೊಂದಿದ್ದು ಆಸ್ತಿ ಮತ್ತು ಸಂಪನ್ಮೂಲಗಳಲ್ಲಿ ಸ್ವಾವಲಂಭಿಯಾಗಿದ್ದರು. ದಿನನಿತ್ಯದ ಬದುಕನ್ನು ಸಮೃದ್ಧವಾಗಿ ಕಳೆಯುತ್ತಿದ್ದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೧೫. ಬೇಸಾಯದ ವಿಧಾನ

ಸ್ಥಳಾಂತರಪೂರ್ವದಲ್ಲಿ ಕುಣಬಿಯರು ಯಾವ ರೀತಿಯ ಬೇಸಾಯದ ವಿಧಾನವನ್ನು ಅಳವಡಿಸಿಕೊಂಡಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ. ಪ್ರತಿಶತ ೩೬.೫೪ (೩೮ ಕುಟುಂಬಗಳು) ಸ್ಥಿರ ಬೇಸಾಯದ ಜೊತೆಗೆ ಸ್ಥಳಾಂತರ ಬೇಸಾಯ ಕೂಡಾ ಮಾಡುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಇದನ್ನು ಅವರು ಕುಮರಿ ಎಂದು ಕರೆಯುತ್ತಿದ್ದರು. ಕಾಡಿನ ಪಕ್ಕದಲ್ಲಿ ಹೊಲ ಇದ್ದವರು ಕಾಡು ಸವರಿ ತಟ್ಟುಗಳನ್ನು ನಿರ್ಮಿಸಿ ರಾಗಿ ಬೆಳೆಯುತ್ತಿದ್ದರು. ಸ್ವಂತ ಆಸ್ತಿಯಷ್ಟೇ ಕುಮರಿ ಜಾಗ ಹೊಂದಿದ್ದರಿಂದ ಇವರಿಗೆ ಸಾಕಷ್ಟು ಸಂಪಾದನೆ ದೊರೆಯುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

೩.೧.೨.೧೬. ಕುಣಬಿಯರು ಹೊಂದಿದ್ದ ನೀರಾವರಿ ವ್ಯವಸ್ಥೆ

ಸ್ಥಳಾಂತರ ಪೂರ್ವದಲ್ಲಿ ಸಂತ್ರಸ್ತರು ವ್ಯವಸಾಯಕ್ಕೆ ಹಾಗೂ ಬಳಕೆಗೆ ಯಾವ ರೀತಿಯ ನೀರಾವರಿ ಸೌಲಭ್ಯವನ್ನು ಹೊಂದಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ. ನೀರಿಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ, ವರ್ಷಪೂರ ನೀರು ಸಮೃದ್ಧವಾಗಿ ದೊರೆಯುತ್ತಿತ್ತು ಎಂದು ಎಲ್ಲಾ (೧೦೦%) ಮಾಹಿತಿದಾರರು ಅಭಿಪ್ರಾಯಪಟ್ಟಿದ್ದಾರೆ. ಕಾಳಿ ನದಿಯ ಸ್ವಾಭಾವಿಕ ನಾಲೆಗಳ ಮೂಲಕ ನೀರನ್ನು ಹಾಯಿಸಿಕೊಂಡು ಕುಡಿಯಲು ಮತ್ತು ನೀರಾವರಿಗಾಗಿ ಬಳಸುತ್ತಿದ್ದರು. ಶೇಕಡಾ ೮೮ರಷ್ಟು ಕುಟುಂಬಗಳಿಗೆ ನೇರವಾಗಿ ನದಿ ನೀರು ಲಭ್ಯವಾಗುತ್ತಿತ್ತು. ಸಾಕಷ್ಟು ಕುಟುಂಬಗಳಿಗೆ ಝರಿ ನೀರು ಕೂಡಾ ಲಭ್ಯವಾಗುತ್ತಿತ್ತು. ಕೊಳವೆ ಬಾವಿಯನ್ನು ತೋಡಿಸಿರಲಿಲ್ಲ. ಏತ ನೀರಾವರಿ ರೂಢಿಯಲ್ಲಿರಲಿಲ್ಲ. ಅದರ ಅವಶ್ಯಕತೆ ಇರಲಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ.

ಕುಣಬಿಯರು ನೀರಾವರಿಯಲ್ಲಿ ಸಮೃದ್ಧತೆಯನ್ನು ಹೊಂದಿದ್ದರು. ನದಿ, ನಾಲೆ ಹಾಗೂ ಝರಿಗಳಿಂದ ಅವರಿಗೆ ಪ್ರಾಕೃತಿಕವಾಗಿ ವರ್ಷಪೂರ್ತಿ ನೀರು ದೊರೆಯುತ್ತಿತ್ತು ಎಂಬ ಅಂಶಗಳನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೨.೧೭. ಬೆಳೆಯುತ್ತಿದ್ದ ಆಹಾರದ ಬೆಳೆಗಳ ಮಾಹಿತಿ

ಸ್ಥಳಾಂತರ ಪೂರ್ವದಲ್ಲಿ ಏನೆಲ್ಲಾ ಆಹಾರದ ಬೆಳೆ ಬೆಳೆಯುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೭. ಆಹಾರದ ಬೆಳೆ ಬೆಳೆಯುತ್ತಿದ್ದ ಕುಟುಂಬಗಳ ವರ್ಗೀಕರಣ

ಭತ್ತ (ಕುಟುಂಬಗಳು)				ರಾಗಿ (ಕುಟುಂಬಗಳು)			ಕಬ್ಬು (ಕುಟುಂಬಗಳು)		ತರಕಾರಿ (ಕುಟುಂಬಗಳು)	
೧ ಬೆಳೆ	೨ ಬೆಳೆ	೩ ಬೆಳೆ	ಚೀಲ	೧ ಬೆಳೆ	೨ ಬೆಳೆ	ಚೀಲ	೧-೨ ಎಕರೆ	೩-೫ ಎಕರೆ	ಸ್ವಂತಕ್ಕೆ	ಮಾರಾಟಕ್ಕೆ
೧೯	೭೪	೧೧	೨೦-೪೫೦	೬	೩	೫-೫೦	೧೮	೧೩	೧೦೨	೧೨

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೭.ರ ಮಾಹಿತಿಯಂತೆ ದಿನನಿತ್ಯದ ಬದುಕಿಗಾಗಿ ಕುಣಬಿಯರು ಭತ್ತ, ರಾಗಿ, ಕಬ್ಬು ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದರು. ಹೆಚ್ಚಿನ ಕುಟುಂಬಗಳು (೭೪) ಎರಡು ಬೆಳೆ ಹಾಗೂ ೧೧ ಕುಟುಂಬಗಳು ಮೂರು ಬೆಳೆ ಭತ್ತವನ್ನು ಬೆಳೆಯುತ್ತಿದ್ದರು. ಸುಮಾರು ೨೦ ಚೀಲದಿಂದ ೪೫೦ ಚೀಲದವರೆಗೆ ಭತ್ತವನ್ನು ಪ್ರತೀ ವರ್ಷ ಬೆಳೆಯುತ್ತಿದ್ದರು. ಇವರು ಸ್ಥಳೀಯ ಭತ್ತದ ತಳಿಗಳನ್ನು ಬೆಳೆಯುತ್ತಿದ್ದರು.


೧೧ ಕುಟುಂಬಗಳು ಕುಮರಿ ಜಾಗದಲ್ಲಿ ಮತ್ತು ತಮ್ಮ ಮಜಲು ಗದ್ದೆಗಳಲ್ಲಿ ವರ್ಷಕ್ಕೆ ೫-೫೦ ಚೀಲದವರೆಗೆ ರಾಗಿಯನ್ನು ಬೆಳೆಯುತ್ತಿದ್ದರು. ಶೇಕಡಾ ೩೧ ಕುಟುಂಬಗಳು ಕಬ್ಬು ಬೆಳೆದು ಬೆಲ್ಲವನ್ನು ತಯಾರಿಸುತ್ತಿದ್ದರು. ೧೧೪ ಕುಟುಂಬಗಳು ಬೆಂಡೆಕಾಯಿ, ತೊಂಡೆಕಾಯಿ, ಹಲಸಂದೆ, ಮೆಣಸಿನಕಾಯಿ, ಸೌತೆಕಾಯಿ, ಹಾಗಲಕಾಯಿ, ಈರುಳ್ಳಿ, ಶುಂಠಿ, ಅರಶಿನ ಹೀಗೆ ಎಲ್ಲಾ ರೀತಿಯ ತರಕಾರಿ ಬೆಳೆಯುತ್ತಿದ್ದರು.

ಕುಣಬಿಯರು ಸ್ಥಳಾಂತರ ಪೂರ್ವದಲ್ಲಿ ತಮ್ಮ ದಿನನಿತ್ಯದ ಆಹಾರದಲ್ಲಿ ಸ್ವಾವಲಂಭಿಯಾಗಿದ್ದು, ತಮಗೆ ಬೇಕಾದ್ದನ್ನು ತಾವೇ ಬೆಳೆದುಕೊಂಡು ಪರಿಪೂರ್ಣತೆಯಿಂದ ಸಂತೃಪ್ತ ಜೀವನ ನಡೆಸುತ್ತಿದ್ದರು ಎಂಬ ಅಂಶವನ್ನು ಈ ಮಾಹಿತಿಯಿಂದ ಪಡೆದುಕೊಳ್ಳಲಾಗಿದೆ.

೩.೧.೨.೧೮. ಬೆಳೆಯುತ್ತಿದ್ದ ವಾಣಿಜ್ಯ ಬೆಳೆಗಳ ಮಾಹಿತಿ

ಸ್ಥಳಾಂತರ ಪೂರ್ವದಲ್ಲಿ ಯಾವೆಲ್ಲಾ ವಾಣಿಜ್ಯ ಬೆಳೆ ಬೆಳೆಯುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ ೩.೫. ಬೆಳೆಯುತ್ತಿದ್ದ ವಾಣಿಜ್ಯ ಬೆಳೆಗಳ ವರ್ಗೀಕರಣ



ಸ್ಥಂಭ ನಕಾಶೆ ಸಂಖ್ಯೆ ೩.೫. ರಲ್ಲಿ ತೋರಿಸಿರುವಂತೆ ಕುಣಬಿಯರು ತೆಂಗು, ಬಾಳೆ, ಮಾವು, ಹಲಸು, ಗೋಡಂಬಿ, ಹುಣಸೆ ಬೆಳೆಯುತ್ತಿದ್ದರು. ೧೮ ರಿಂದ ೭೨ ರವರೆಗಿನ ಕುಟುಂಬಗಳು ಈ ಎಲ್ಲಾ ಮರಗಳನ್ನು ೧ ರಿಂದ ೫ರಷ್ಟು ಹೊಂದಿದ್ದರು. ೧೧ ರಿಂದ ೨೧ ಕುಟುಂಬಗಳು ಇವುಗಳನ್ನು ೬ ರಿಂದ ೧೫ ಮರಗಳನ್ನು ಹೊಂದಿದ್ದರು. ೧ ರಿಂದ ೧೩ ಕುಟುಂಬಗಳು ೧೬ ರಿಂದ ೩೦ ಮರಗಳನ್ನೂ ೧ ರಿಂದ ೪ ಕುಟುಂಬಗಳು ೩೧ ರಿಂದ ೫೦ರವರೆಗೂ ಹೊಂದಿದ್ದವು. ಹೆಚ್ಚಿನ ಕುಟುಂಬಗಳು ಬಾಳೆ, ಮಾವುಗಳನ್ನು ಹೆಚ್ಚಾಗಿ ಹೊಂದಿದ್ದರು. ೪೩ ಕುಟುಂಬಗಳು ಅಡಿಕೆ ಬೆಳೆಯುತ್ತಿದ್ದು ಸುಮಾರು ೩೦೦ ರವರೆಗೂ ಅಡಿಕೆ ಗಿಡಗಳನ್ನು ಹೊಂದಿದ್ದರು.


ಸ್ಥಂಭ ನಕಾಶೆಯ ಈ ಮಾಹಿತಿಯಿಂದ ತಿಳಿದುಬರುವುದೇನೆಂದರೆ ಕುಣಬಿಯರು ಮೊದಲು ತಮಗೆ ಬೇಕಾದ ಎಲ್ಲಾ ಬೆಳೆಗಳನ್ನು ತಾವು ಬೆಳೆದುಕೊಂಡು ಕೈತುಂಬಾ ಕೆಲಸ ಮತ್ತು ಸಂಪಾದನೆ ಪಡೆಯುತ್ತಿದ್ದರು.

೩.೧.೨.೧೯. ಸಂಪಾದನೆಯ ಇತರೇ ಮೂಲಗಳ ಮಾಹಿತಿ

ಕಡಿಮೆ ಜಮೀನು ಹೊಂದಿದ ಹಾಗೂ ಜಮೀನು ರಹಿತ ಕುಟುಂಬಗಳು ಜೀವನಕ್ಕಾಗಿ ಯಾವ ರೀತಿಯಾಗಿ ಸಂಪಾದನೆ ಮಾಡಿಕೊಳ್ಳುತ್ತಿದ್ದರು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ ೩.೬.ರಲ್ಲಿ ತೋರಿಸಿದಂತೆ ಸಂತ್ರಸ್ತರಲ್ಲಿ ಪ್ರತಿಶತ ೪೨.೦೬ ರಷ್ಟು ಕುಟುಂಬಗಳು ತಮ್ಮ ಸ್ವಂತ ಊರಲ್ಲೇ ಕೃಷಿ ಕೂಲಿ ಮಾಡುತ್ತಿದ್ದರು. ಪ್ರತಿಶತ ೧೫.೮೮ ರಷ್ಟು ಕುಟುಂಬಗಳು ಹೊಲವನ್ನು ಖೇಣಿ ತೆಗೆದುಕೊಂಡು ಭತ್ತ ಬೆಳೆಯುತ್ತಿದ್ದರು. ಶೇಕಡಾ ೨೦.೬೩ರಷ್ಟು ಕುಟುಂಬಗಳು ಅರಣ್ಯ ಭೂಮಿಯಲ್ಲಿ ಬೆಳೆ ತೆಗೆಯುತ್ತಿದ್ದರು. ಹೀಗೆ ಜೀವನಕ್ಕಾಗಿ ಕೃಷಿ, ಕೃಷಿಕೂಲಿ, ಅರಣ್ಯ ಭೂಮಿ ದುಡಿಮೆ, ಗೋವಾಕ್ಕೆ ಕೃಷಿ ಕೂಲಿಗೆ ಹೋಗುವುದು ಮುಂತಾದ ರೀತಿಯಿಂದ ಸಂಪಾದನೆ ಮಾಡುತ್ತಿದ್ದರು.

ಸ್ಥಂಭ ನಕಾಶೆ ಸಂಖ್ಯೆ ೩.೬. ಸಂಪಾದನೆಯ ಇತರೇ ಮೂಲಗಳ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಜಮೀನನ್ನು ಹೊಂದಿಲ್ಲದವರು ಮತ್ತು ಕಡಿಮೆ ಜಮೀನನ್ನು ಹೊಂದಿದ್ದವರು ಕೂಡಾ ವಿವಿಧ ಮೂಲಗಳಿಂದ ಸಂಪಾದನೆ ಮಾಡಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿದ್ದರು ಎಂಬ ಅಂಶವನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

೩.೧.೨.೨೦. ಸಾಲದ ಮಾಹಿತಿ

ಸ್ಥಳಾಂತರ ಪೂರ್ವದಲ್ಲಿ ಏನಾದರೂ ಸಾಲ ಮಾಡುತ್ತಿದ್ದರೋ ಎಂಬ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಯಾರೂ ಸಾಲ ಪಡೆಯುತ್ತಿರಲಿಲ್ಲ. ಸಾಲ ತೆಗೆದುಕೊಂಡು ವ್ಯವಹಾರ ಮಾಡುವುದು ಕುಣಬಿಯರಿಗೆ ಅಭ್ಯಾಸ ಇರಲಿಲ್ಲ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಮನೋಭಾವದವರು ಎಂದು ಎಲ್ಲಾ (೧೦೦%) ಸಂತ್ರಸ್ತ ಕುಟುಂಬಗಳು ಅಭಿಪ್ರಾಯಪಟ್ಟಿದ್ದಾರೆ.

ಸಾಲ ಪಡೆಯುವ ಮನೋಧರ್ಮ, ಇಚ್ಛಾಶಕ್ತಿ, ಅವಶ್ಯಕತೆ ಅವರಿಗೆ ಇರಲಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ಕುಣಬಿಯರ ಸ್ಥಳಾಂತರಪೂರ್ವದ ಬದುಕಿನ ಬಗ್ಗೆ ಅಧ್ಯಯನದ ಅವಶ್ಯಕತೆಗೆ ತಕ್ಕಂತೆ ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದೆ. ಈ ಮೇಲಿನ ಎಲ್ಲಾ ಅಂಶಗಳ ವಿಶ್ಲೇಷಣೆಯಿಂದ ಇವರು ಆಗ ಯಾವ ರೀತಿಯಾಗಿ ಬದುಕುತ್ತಿದ್ದರು? ಅವರ ಬದುಕಿನ ಮೂಲ ಸ್ವರೂಪವೇನು? ಎಂಬ ಅಂಶಗಳನ್ನು ತಿಳಿದುಕೊಳ್ಳಲಾಗಿದೆ. ಇಲ್ಲಿ ಅವರ ಮೂಲ ಬದುಕಿನ ಬಗ್ಗೆ ಹಲವು ಅಗತ್ಯ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಇವರು ಗುಡ್ಡಗಾಡು ಪ್ರದೇಶದಲ್ಲಿ ವಾಸವಿದ್ದವರಾಗಿದ್ದು ಕಾಡಿನ ಪರಿಸರಕ್ಕೆ ಹೊಂದಿಕೊಂಡವರು. ಮಾಲಿನ್ಯ, ವಾಸನೆ, ನಿರ್ಬಂಧ ರಹಿತ ವಾತಾವರಣಕ್ಕೆ ಒಗ್ಗಿಕೊಂಡವರು. ಸ್ವಂತ ಆಸ್ತಿ, ವಿವಿಧ ರೀತಿಯ ಆದಾಯದ ಮೂಲ, ಕಾಡಿನಲ್ಲಿ ಉಳುಮೆ ಭೂಮಿ(ಕುಮರಿ), ನೀರು, ಬೇಟೆ ಮತ್ತು ಕಿರು ಸಂಪನ್ಮೂಲಗಳನ್ನು ಅನಾಯಾಸವಾಗಿ ಬಳಕೆ ಮಾಡಿಕೊಂಡು ತಮ್ಮ ಜೀವನವನ್ನು ಸಮೃದ್ಧವಾಗಿ ಕಳೆಯುತ್ತಿದ್ದರು. ತಮ್ಮದೇ ಸಮುದಾಯಗಳ ಮಧ್ಯೆ ತಮ್ಮ ಸಾಂಪ್ರದಾಯಿಕ ವಾಸವಿದ್ದು ಇತರ ಸಮುದಾಯಗಳ ಜೊತೆ ಬೆರೆಯಲು ಇಚ್ಛಿಸದವರು. ಕುಟುಂಬದ ಆಸ್ತಿಯೆಲ್ಲಾ ಯಜಮಾನನ ಹೆಸರಿನಲ್ಲಿದ್ದು ಕುಟುಂಬದ ಗಾತ್ರ ಎಷ್ಟೇ ದೊಡ್ಡದಾಗಿದ್ದರೂ ಒಂದೇ ಅವಿಭಕ್ತ ಕುಟುಂಬದಲ್ಲಿ ಬದುಕುತ್ತಿದ್ದರು. ಪ್ರಕೃತಿಯ ವಿಭಿನ್ನ ಆರಾಧನೆ, ವಿಶೇಷ ಹಬ್ಬ ಹರಿದಿನಗಳ ಆಚರಣೆ, ಅನನ್ಯ ಸಾಂಸ್ಕೃತಿಕ ಕಲೆಗಳ ಪ್ರದರ್ಶನ, ಕಟ್ಟುನಿಟ್ಟಿನ ರೂಢಿ ಸಂಪ್ರದಾಯಗಳು ಇವರ ಜೀವನದ ಅವಿಭಾಜ್ಯ ಅಂಗಗಳಂತಿದ್ದವು. ಸಾಮಾಜಿಕ ಪಿಡುಗು ಮುಕ್ತ ಹಾಗೂ ಸಾಲಮುಕ್ತ ಸಮುದಾಯವಾಗಿದ್ದು ಇತರರಿಗೆ ಮಾದರಿಯಾಗಿದ್ದರು. ಈ ಎಲ್ಲಾ ಮಾಹಿತಿಗಳ ಆಧಾರದ ಮೇಲೆ ಸಂತ್ರಸ್ತ ಕುಣಬಿಯರು ಸ್ಥಳಾಂತರ ಪೂರ್ವದಲ್ಲಿ ಆರ್ಥಿಕವಾಗಿ ಸಮೃದ್ಧ; ಸಾಮಾಜಿಕವಾಗಿ ಅನನ್ಯ, ಆಡಂಬರರಹಿತ, ಮೌಲ್ಯಯುತ ಮತ್ತು ಸ್ವಚ್ಛಂದವಾದ ಜೀವನವನ್ನು ಸಾಗಿಸುತ್ತಿದ್ದರು ಎಂಬುದನ್ನು ಕಂಡುಕೊಳ್ಳಲಾಗಿದೆ.


೩.೧.೩. ಯೋಜನೆ ಪ್ರಾರಂಭ ಹಾಗೂ ಸ್ಥಳಾಂತರದ ಸಂದರ್ಭದಲ್ಲಿನ ಪರಿಸ್ಥಿತಿ

ಸೂಪಾ ಅಣೆಕಟ್ಟು ಯೋಜನೆ ಪ್ರಾರಂಭ ಹಾಗೂ ಸ್ಥಳಾಂತರದ ಸಂದರ್ಭದಲ್ಲಿ ಕುಣಬಿಯರ ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಮಾಹಿತಿದಾರರು ನೀಡಿದ ಅಭಿಪ್ರಾಯಗಳ ಆಧಾರದ ಮೇಲೆ ವಿವರಿಸಿ ವಿಶ್ಲೇಷಿಸಲಾಗಿದೆ. ಯೋಜನಾ ಪ್ರಕ್ರಿಯೆಯನ್ನು ಸಂತ್ರಸ್ತರಾಗುವವರ ಸಹಭಾಗಿತ್ವದೊಂದಿಗೆ ಅವರಿಗೆ ಪೂರಕವಾಗಿ ಕೈಗೊಂಡಿರುತ್ತಾರೆಯೇ ಎಂಬುದನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

೩.೧.೩.೧. ಅಣೆಕಟ್ಟು ಕಟ್ಟುವ ಮಾಹಿತಿ ಸಂತ್ರಸ್ತರಾಗುವವರಿಗೆ ದೊರೆತಿರುವ ಬಗೆ

ಜನರನ್ನು ಸ್ಥಳಾಂತರಕ್ಕೆ ಒಳಪಡಿಸುವ ಯಾವುದೇ ಯೋಜನೆಗಳನ್ನು ನಿರ್ಮಿಸಬೇಕಾದರೆ ಸಂತ್ರಸ್ತರಿಗೆ ಪೂರ್ವದಲ್ಲಿ ತಿಳಿಸಿ ಒಪ್ಪಿಗೆ ಪಡೆಯಬೇಕಾಗುತ್ತದೆ. ಸೂಪಾ ಪಟ್ಟಣದಲ್ಲಿ ಕಾಳಿ ನದಿಗೆ ಅಣೆಕಟ್ಟು ಕಟ್ಟುವ ಮಾಹಿತಿ ಅಲ್ಲಿನ ಜನರಿಗೆ ಯಾವ ರೀತಿಯಾಗಿ ದೊರೆಯಿತು? ಕೆ.ಪಿ.ಸಿ.ಯವರು ಯಾವ ರೀತಿಯಾಗಿ ಜನರಿಗೆ ಮಾಹಿತಿಯನ್ನು ತಿಳಿಸಿದರು? ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಪೈ ನಕಾಶೆ ಸಂಖ್ಯೆ. ೩.೧. ಅಣೆಕಟ್ಟು ಕಟ್ಟುವ ಮಾಹಿತಿ ಗೊತ್ತಾದ ಬಗೆಯ ವರ್ಗೀಕರಣ



ಪೈ ನಕಾಶೆ ೩.೧.ರಲ್ಲಿನ ಮಾಹಿತಿಯಂತೆ ಸಂತ್ರಸ್ತರಾಗುವವರಿಗೆ ಮಾಹಿತಿ ದೊರೆತಿದೆ. ದಿನಾಂಕ ೨೯-೧೦-೧೯೭೩ರಂದು ಭಾರತದ ಆಗಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಸೂಪಾ ಪಟ್ಟಣಕ್ಕೆ ಬಂದು ಭಾಷಣ ಮಾಡುತ್ತಾರೆ ಆದ್ದರಿಂದ ಜನರೆಲ್ಲಾ ಸೇರಬೇಕು ಎಂದಿದ್ದ ಕಾರಣ ಸಾಧ್ಯವಾದಷ್ಟು ಜನರು ಅಲ್ಲಿ ನೆರೆದಿದ್ದರು. ಪ್ರಧಾನಿಯವರು ಸೂಪಾ ಪಟ್ಟಣದಲ್ಲಿ ಕಾಳಿ ಜಲವಿದ್ಯುತ್ ಯೋಜನೆಗೆ ಅಡಿಗಲ್ಲು ಹಾಕಿ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಅವರು ಅಲ್ಲಿ ಅಣೆಕಟ್ಟು ಕಟ್ಟುವ, ಭೂಮಿ ಮುಳುಗಡೆಯಾಗುವ, ಸ್ಥಳಾಂತರವಾಗುವ ಬಗ್ಗೆ ಭಾಷಣದಲ್ಲಿ ಹೇಳಿದ್ದರು. ಇದರಿಂದಾಗಿ ಈ ವಿಚಾರ ತಿಳಿಯಿತು ಎಂದು ಶೇಕಡಾ ೫೫ರಷ್ಟು ಮಾಹಿತಿದಾರರು ಪ್ರತಿಕ್ರಿಯಿಸಿರುತ್ತಾರೆ. ಆನಂತರ ಕೆ.ಪಿ.ಸಿ. ಅಧಿಕಾರಿಗಳು ಜಮೀನು ಸರ್ವೆ ಮಾಡಲು ಬಂದಾಗ ಸಂತ್ರಸ್ತರು ಯೋಜನೆ ಬಗ್ಗೆ ಪ್ರಶ್ನಿಸಿ ವಿಷಯವನ್ನು ತಿಳಿದುಕೊಂಡಿರುತ್ತಾರೆ. ಮುಂದಿನ ದಿನಗಳಲ್ಲಿ ಕೆಲವು ಊರುಗಳಲ್ಲಿ ಡಂಗುರ ಸಾರಿಸಿದ್ದರಿಂದ ಜನರಿಗೆ ವಿಷಯ ತಿಳಿಯಿತು. ಎಲ್ಲರೂ ಸ್ಥಳಾಂತರದ ಬಗ್ಗೆಯೇ ಮಾತನಾಡುತ್ತಿದ್ದರಿಂದ ಮಾಹಿತಿ ದೊರೆಯಿತು ಎಂದು ಪ್ರತಿಕ್ರಿಯಿಸಿದ್ದಾರೆ.

ಈ ವಿಚಾರವಾಗಿ ಇಲಾಖೆಯ ಅಧಿಕಾರಿಗಳನ್ನು ಸಂದರ್ಶಿಸಿದಾಗ ಆ ಭೂಮಿ ಅವರದ್ದೇನು ಸ್ವತಂತ್ರ ಆಸ್ತಿಯಲ್ಲ. ಸರ್ಕಾರದ ಭೂಮಿ. ಸರ್ಕಾರ ಯಾವಾಗ ಬೇಕಾದರೂ ವಶಪಡಿಸಿಕೊಳ್ಳಬಹುದು. ಜನರಲ್ಲಿ ಕೇಳುವಂತದ್ದು ಏನೂ ಇಲ್ಲ. ಸರ್ಕಾರ ಭೂಸ್ವಾಧೀನ ಮಾಡಿಕೊಂಡು ಯೋಜನೆ ಅನುಷ್ಠಾನಗೊಳಿಸಲು ಆದೇಶಿಸುತ್ತದೆ. ಇಲಾಖೆ ಪಾಲಿಸುತ್ತದೆ ಎಂಬ ಉತ್ತರ ನೀಡುತ್ತಾರೆ. ಸೂಪಾ ಯೋಜನೆ ಕಾರ್ಯಗತಗೊಳಿಸುವ ಸಮಯದಲ್ಲಿ ಪರಿಸರ ಹೋರಾಟಗಾರರು ಅಥವಾ ಸಂಘಟನೆಗಳು ಇಲ್ಲವಾಗಿತ್ತು. ಅದರ ಅರಿವು ಕೂಡಾ ಈ ಜನರಿಗೆ ಇದ್ದಿಲ್ಲವಾಯಿತು ಎಂದು ಪ್ರತಿಕ್ರಿಯಿಸಿರುತ್ತಾರೆ.

ಭೂಮಿ ಸ್ವಂತದ್ದಾದರೂ ಸರ್ಕಾರದ ಎದುರು ಜಮೀನುದಾರರು ನೆಪ ಮಾತ್ರವಾಗಿದ್ದರು. ಮನೆ, ಜಮೀನು ಮುಳುಗಡೆಯಾಗುವಂತಹ ಸ್ಥಿತಿ ಬಂದಿದ್ದರೂ ಪೂರ್ವಭಾವಿಯಾಗಿ ತಿಳಿಸಿರಲಿಲ್ಲ. ಸಂತ್ರಸ್ತರಾಗುವವರಿಗೆ ಅನೌಪಚಾರಿಕವಾಗಿ ಮಾಹಿತಿ ತಿಳಿಯಿತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೩.೨. ಯೋಜನೆಯ ಬಗೆಗೆ ತಿಳಿದಾಗ ಕುಣಬಿಯರಲ್ಲಿ ಉಂಟಾದ ಮೊದಲ ಭಾವನೆ

ಅಣೆಕಟ್ಟು ಕಟ್ಟಿ, ಊರು ಮುಳುಗಡೆಯಾಗಿ ಸ್ಥಳಾಂತರವಾಗುವ ವಿಚಾರ ತಿಳಿದ ತಕ್ಷಣ ಏನು ಮಾಡಬೇಕು, ಎಲ್ಲಿಗೆ ಹೋಗಬೇಕು, ಎಲ್ಲವನ್ನೂ ಬಿಟ್ಟು ಹೇಗೆ ಹೋಗಬೇಕು ಎಂದು ನೆನೆದು ಬೇಸರವಾಯಿತು. ಎಲ್ಲಾ ಕಳೆದುಕೊಂಡು ಬದುಕುವುದಕ್ಕಿಂತ ಸಾಯುವುದೇ ಮೇಲು. ಸರ್ಕಾರದ ಮುಂದೆ ತಮ್ಮದೇನೂ ನಡೆಯುವುದಿಲ್ಲ ಎಂಬ ಭಾವನೆಗಳು ಮೂಡಿದವು ಎಂದು ಎಲ್ಲಾ ಸಂತ್ರಸ್ತರು ಪ್ರತಿಕ್ರಿಯಿಸಿದ್ದಾರೆ.

ಶತಮಾನಗಳಿಂದ ಬದುಕಿ ಬಾಳಿದ, ತಮ್ಮ ಜೀವನಕ್ಕೆ ಆಸರೆಯಾಗಿದ್ದ ಆಸ್ತಿ, ಊರು, ಪರಿಸರ ಮತ್ತು ಬಂಧುಗಳನ್ನು ಕಳೆದುಕೊಂಡು ಬದುಕುವ ಸಂದರ್ಭ ಏಕಾಏಕಿಯಾಗಿ ಬಂದಾಗ ಜನರ ಮಾನಸಿಕ ಪರಿಸ್ಥಿತಿ ಅತಂತ್ರ, ಬೇಸರ ಮತ್ತು ಅಸಹಾಯಕಗೊಳ್ಳುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೩.೧.೩.೩. ಯೋಜನೆಗೆ ಮೊದಲು ಪ್ರತಿಕ್ರಿಯಿಸಿದ ಬಗೆ

ಸೂಪಾ ಜಲಾಶಯ ಯೋಜನೆ ಮತ್ತು ಮುಳುಗಡೆ ಬಗ್ಗೆ ತಿಳಿದಾಗ ತಬ್ಬಿಬ್ಬಾಗಿದ್ದಾರೆ. ವೇದನೆಯನ್ನು ತಡೆಯಲಾರದೇ ಎಲ್ಲರೂ ಅತ್ತಿದ್ದಾರೆ ಎಂದು ಪ್ರತಿಶತ ೪೨ರಷ್ಟು ಸಂತ್ರಸ್ತರು ಪ್ರತಿಕ್ರಿಯಿಸಿದ್ದಾರೆ. ತಕ್ಷಣಕ್ಕೆ ಅಳಲಿಲ್ಲ. ಅತ್ತು ಮಾಡುವುದಾದರೂ ಏನು ಎಂಬುದಾಗಿ ಶೇಕಡಾ ೧೬ರಷ್ಟು ಸಂತ್ರಸ್ತರು ಪ್ರತಿಕ್ರಿಯಿಸಿದ್ದಾರೆ. ಸರ್ಕಾರ ಯಾವಾಗಲೂ ಹೇಳಿದ್ದನ್ನು ಮಾಡೋದೇ ಇಲ್ಲ. ಹಾಗೆಯೇ ಈ ಅಣೆಕಟ್ಟು ಕೂಡಾ ಕಟ್ಟುವುದಿಲ್ಲ ಎಂದು ಕೊಂಡು ತಮ್ಮನ್ನು ತಾವು ಸಮಾಧಾನ ಮಾಡಿಕೊಂಡಿದ್ದರು. ಹಾಗೊಂದು ವೇಳೆ ಕಟ್ಟಿದರೂ ನೀರು ಬರುವವರೆಗೂ ತಮ್ಮ ಜಾಗದಿಂದ ಕದಲಬಾರದೆಂದು ಶೇಕಡಾ ೪೨ರಷ್ಟು ಕುಟುಂಬದವರು ನಿರ್ಧರಿಸಿದ್ದರು.

ಅಣೆಕಟ್ಟು ಕಟ್ಟಿದರೂ ಏನೇ ಆದರೂ ನೀರು ಬರೋವರೆಗೂ ತಮ್ಮ ನೆಲದಲ್ಲೇ ಇರಬೇಕೆಂದು ಸಂತ್ರಸ್ತರು ನಿರ್ಧರಿಸಿರುತ್ತಾರೆ. ಸ್ಥಳಾಂತರವಾಗಬೇಕಾದಾಗ ಸಾಕಷ್ಟು ತಬ್ಬಿಬ್ಬು, ವೇದನೆ ಮತ್ತು ಹತಾಶೆ ಜನರನ್ನು ಕಾಡಿತ್ತು ಎಂಬುದನ್ನು ತಿಳಿದುಕೊಳ್ಳಲಾಗಿದೆ.

೩.೧.೩.೪. ಯೋಜನಾ ಪ್ರಕ್ರಿಯೆಗಳಿಗೆ ಸಂತ್ರಸ್ತರ ಒಪ್ಪಿಗೆ ಪಡೆದುಕೊಂಡಿರುವ ಬಗ್ಗೆ ಮಾಹಿತಿ

ಸೂಪಾ ತಾಲ್ಲೂಕಿನಲ್ಲಿ ಅಣೆಕಟ್ಟು ಕಟ್ಟಲು, ಜನರ ಭೂಮಿಯನ್ನು ಬಳಸಿಕೊಳ್ಳಲು, ಪುನರ್ವಸತಿ ಕೇಂದ್ರ ಆಯ್ಕೆ, ಪರ್ಯಾಯ ಕೃಷಿ ಭೂಮಿ ಆಯ್ಕೆ ಸಂಬಂಧಿಸಿದಂತೆ ಸಂತ್ರಸ್ತರ ಒಪ್ಪಿಗೆ ಮತ್ತು ಸಹಭಾಗಿತ್ವವನ್ನು ಕೆ.ಪಿ.ಸಿ. ಪಡೆದುಕೊಳ್ಳಲಿಲ್ಲ ಎಂದು ಎಲ್ಲಾ ಮಾಹಿತಿದಾರರು ಪ್ರತಿಕ್ರಿಯಿಸಿದ್ದಾರೆ.

ಈ ವಿಷಯವಾಗಿ ಅಧಿಕಾರಿಗಳು ವ್ಯತಿರಿಕ್ತವಾಗಿ ಪ್ರತಿಕ್ರಿಯಿಸಿದ್ದಾರೆ. ಮೊದಲು ಒಪ್ಪಿಗೆ ಪಡೆಯಲಾಗಿತ್ತು ಎಂದರೆ ಮಗದೊಮ್ಮೆ ಅದರ ಅವಶ್ಯಕತೆ ಏನು? ಅದು ಸರ್ಕಾರದ ಯೋಜನೆ. ಜನರಿಗಾಗಿರುವ ಯೋಜನೆ. ಸ್ಥಳಾಂತರಕ್ಕೆ ಆದೇಶ ಕೊಟ್ಟ ಮೇಲೆ ಅದನ್ನು ಪಾಲಿಸಲೇಬೇಕು. ಆಗೋದಿಲ್ಲ ಎನ್ನುವುದಕ್ಕೆ ಅವರು ಯಾರು? ಸಾಕಷ್ಟು ಹಣ, ಸೌಲಭ್ಯ ನೀಡಿದ್ದೇವೆ. ಅವರು ತಮ್ಮ ಸ್ವ ಇಚ್ಛೆಯಿಂದಲೇ ಸ್ಥಳಾಂತರಗೊಂಡಿರುತ್ತಾರೆ ಎಂದು ಪ್ರತಿಕ್ರಿಯಿಸಿದ್ದಾರೆ.

ಸರ್ಕಾರವು ದೇಶದ ಹಿತಾಸಕ್ತಿಗೋಸ್ಕರ ತಮಗೆ ತಿಳಿದಿದ್ದನ್ನು ಮಾಡುತ್ತದೆ. ಸಂತ್ರಸ್ತರಾಗುವವರ ಒಪ್ಪಿಗೆಯನ್ನು ಪಡೆದುಕೊಳ್ಳುವುದಿಲ್ಲ. ಅಲ್ಲಿಯ ನಿವಾಸಿಗಳಿಗೆ ಏನು ಬೇಕು? ಅವರು ಎಲ್ಲಿರಬೇಕು, ಹೇಗಿರಬೇಕು ಎಂಬುದನ್ನು ಅವರ ಸಹಭಾಗಿತ್ವದಲ್ಲಿ ನಿರ್ಧರಿಸುವ ಅಗತ್ಯವಿಲ್ಲ. ದೇಶದ ಹಿತ ಎಂಬ ಹಣೆಪಟ್ಟಿಯನ್ನು ಇಟ್ಟುಕೊಂಡು ಯಾರಿಗೆ ಏನು ಮಾಡಿದರೂ ಅದು ಸರ್ಕಾರದ ಕೆಲಸ. ಅದು ಇರುವುದೇ ಹಾಗೆ. ಎಲ್ಲರೂ ಅದಕ್ಕೆ ಶರಣಾಗಲೇ ಬೇಕು ಎಂಬ ದರ್ಪ ಮತ್ತು ಧೋರಣೆಯನ್ನು ವ್ಯಕ್ತಪಡಿಸಿರುವುದು ಈ ಯೋಜನಾ ಪ್ರಕ್ರಿಯೆಯ ಅಧ್ಯಯನದಿಂದ ಸ್ಪಷ್ಟವಾಗಿದೆ.

೩.೧.೩.೫. ಸಂತ್ರಸ್ತರು ಕಳೆದುಕೊಳ್ಳುವ ಆಸ್ತಿ ಮೋಜಣಿ


ಸಂತ್ರಸ್ತ ಕುಣಬಿಯರಲ್ಲಿ ಶೇಕಡಾ ೮೪ರಷ್ಟು ಕುಟುಂಬಗಳು ಅವರ ಸಂಪನ್ಮೂಲಗಳನ್ನು ಕೆ.ಪಿ.ಸಿ ಯವರು ಮೋಜಣಿ ಮಾಡಿದ್ದಾರೆಂದು ಒಪ್ಪಿಕೊಂಡಿರುತ್ತಾರೆ. ಶೇಕಡಾ ೧೬ರಷ್ಟು ಕುಟುಂಬಗಳು ಯಾರೂ ಕೂಡ ಮೋಜಣಿ ಮಾಡಲಿಲ್ಲ ಎಂಬ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

ಕೆ.ಪಿ.ಸಿ. ಸಂತ್ರಸ್ತರ ಸಂಪನ್ಮೂಲಗಳನ್ನು ನಿಖರವಾಗಿ ಮೋಜಣಿ ಮಾಡಲಿಲ್ಲ. ಕೆಲವರ ಆಸ್ತಿಯನ್ನು ಮೋಜಣಿ ಮಾಡಿ ಹಲವರಿಗೆ ಅಂದಾಜು ಲೆಕ್ಕದಲ್ಲಿ ಪರಿಹಾರ ಹಂಚಿಕೆ ಮಾಡಿರುತ್ತಾರೆ. ಇದು ಕೆಲವರ ಪರ ಇತ್ತು ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೩.೬. ಸ್ಥಳಾಂತರಗೊಳ್ಳುವ ಸಮಯದಲ್ಲಿ ಕೆ.ಪಿ.ಸಿ. ನೀಡಿದ್ದ ಆಶ್ವಾಸನೆಗಳು

ಸಂತ್ರಸ್ತರನ್ನು ಸ್ಥಳಾಂತರಗೊಳಿಸುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ನಿಗಮವು ಸಂತ್ರಸ್ತರಿಗೆ ಏನೇನು ಆಶ್ವಾಸನೆಗಳನ್ನು ನೀಡಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಪೈ ನಕಾಶೆ ಸಂಖ್ಯೆ: ೩.೨. ಸ್ಥಳಾಂತರಗೊಳ್ಳುವ ಸಮಯದಲ್ಲಿ ಕೆ.ಪಿ.ಸಿ. ನೀಡಿದ್ದ ಆಶ್ವಾಸನೆಗಳು



ಆಧಾರ: ಕ್ಷೇತ್ರಕಾರ್ಯ


ಪೈ ನಕಾಶೆ ಸಂಖ್ಯೆ ೩.೨ರ ಮಾಹಿತಿಯಂತೆ ಕೆ.ಪಿ.ಸಿ. ಸಂತ್ರಸ್ತರಾದವರಿಗೆ ವಿವಿಧ ಆಶ್ವಾಸನೆಗಳನ್ನು ನೀಡಿದೆ. ನೀರಾವರಿ ಕೃಷಿ ಜಮೀನು, ಸೂಪಾ ಜಲಾಶಯದಿಂದ ಕುಡಿಯಲು ಹಾಗೂ ಕೃಷಿಗೆ ನೀರು ಸರಬರಾಜು, ಉಚಿತ ವಿದ್ಯುತ್, ಪ್ರತಿಯೊಂದು ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ, ಪುನರ್ವಸತಿ ಕೇಂದ್ರದಲ್ಲಿ ಉತ್ತಮ ರಸ್ತೆ, ಶಾಲೆ, ದೇವಸ್ಥಾನ ನಿರ್ಮಾಣ ಮಾಡಿ ಕೊಡುವುದಾಗಿ ಆಶ್ವಾಸನೆ ನೀಡಿದ್ದರೆಂದು ಎಲ್ಲಾ ಸಂತ್ರಸ್ತರು ಪ್ರತಿಕ್ರಿಯಿಸಿದ್ದಾರೆ.

ಕೆ.ಪಿ.ಸಿ. ತನ್ನ ಕಾರ್ಯಸಿದ್ಧಿಗೋಸ್ಕರ ಆಶಾದಾಯಕ ಆಶ್ವಾಸನೆಗಳನ್ನು ನೀಡಿ ಸಂತ್ರಸ್ತರನ್ನು ಸ್ಥಳಾಂತರಕ್ಕೆ ಒಲೈಸಿತ್ತು. ಅಣೆಕಟ್ಟು ಕಟ್ಟುವ ಸಂದರ್ಭದಲ್ಲಿ ಸೂಪಾ ಜಲಾಶಯದಿಂದ ಸಂತ್ರಸ್ತರ ಬಳಕೆಗೆ ಮತ್ತು ನೀರಾವರಿಗೆ ನೀರು ಪೂರೈಕೆ ಮಾಡಲು ಅದು ನಿರ್ಧರಿಸಿತ್ತೆಂದು ಮತ್ತು ಅದಕ್ಕೆ ಅವಕಾಶ ಇದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೩.೧.೩.೭. ಕುಣಬಿಯರು ಸ್ಥಳಾಂತರಗೊಂಡ ಸಂದರ್ಭಗಳು

ಸಂತ್ರಸ್ತರಾದವರು ತಮ್ಮ ಮೂಲನೆಲೆಯಿಂದ ಯಾವ್ಯಾವ ಸಂದರ್ಭಗಳಲ್ಲಿ ಸ್ಥಳಾಂತರವಾಗಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಪೈ ನಕಾಶೆ ಸಂಖ್ಯೆ ೩.೩. ಸಂತ್ರಸ್ತರು ಸ್ಥಳಾಂತರಗೊಂಡ ವಿವಿಧ ಸಂದರ್ಭಗಳ ವರ್ಗೀಕರಣ



ಪೈ ನಕಾಶೆ ಸಂಖ್ಯೆ ೩.೩.ರ ಮಾಹಿತಿಯ ಪ್ರಕಾರ ಸಂತ್ರಸ್ತರು ವಿವಿಧ ಸಂದರ್ಭಗಳಲ್ಲಿ ಸ್ಥಳಾಂತರಗೊಂಡಿರುತ್ತಾರೆ. ಶೇಕಡಾ ೧೦ರಷ್ಟು ಕುಟುಂಬಗಳು ಅಣೆಕಟ್ಟು ಕಟ್ಟಲು ಪ್ರಾರಂಭಿಸುವಾಗ, ಪ್ರತಿಶತ ೭ರಷ್ಟು ಪುನರ್ವಸತಿ ಕೇಂದ್ರ ತಯಾರಿಗೊಂಡ ತಕ್ಷಣ, ಶೇಕಡಾ ೫೯ರಷ್ಟು ಕುಟುಂಬಗಳು ಅಣೆಕಟ್ಟು ಕೆಲಸ ಮುಕ್ತಾಯವಾಗುತ್ತಿದ್ದಂತೆ ಸ್ಥಳಾಂತರಗೊಂಡವು. ಪ್ರತಿಶತ ೨೪ರಷ್ಟು ಕುಟುಂಬಗಳು ಅಣೆಕಟ್ಟಿನ ಹಿನ್ನೀರಿನಿಂದ ಜಮೀನು ಮುಳುಗಡೆಯಾಗುವ ಸಂದರ್ಭದಲ್ಲಿ ಸ್ಥಳಾಂತರವಾದವು.

ಸಂತ್ರಸ್ತರು ಎಲ್ಲರೂ ಒಂದೇ ಸಲ ಸ್ಥಳಾಂತರವಾಗದೇ ವಿವಿಧ ಸಂದರ್ಭದಲ್ಲಿ ಸ್ಥಳಾಂತರವಾದರು ಎಂಬ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಸಂತ್ರಸ್ತರಿಗೆ ಅವರ ಜಮೀನಿನ ಅವಶ್ಯಕತೆ ಮತ್ತು ಅದರ ಜೊತೆಗೆ ಅವರು ಹೊಂದಿದ್ದ ಭಾವನಾತ್ಮಕ ಸಂಬಂಧ ಅವರನ್ನು ಸ್ಥಳಾಂತರಗೊಳ್ಳದಂತೆ ತಡೆದಿತ್ತು ಎಂಬುದು ಅಧ್ಯಯನದಿಂದ ಕಂಡುಬಂದಿದೆ.

೩.೧.೩.೮. ಸಂತ್ರಸ್ತರನ್ನು ಸ್ಥಳಾಂತರಗೊಳಪಡಿಸಿದ ರೀತಿ

ಸಂತ್ರಸ್ತರನ್ನು ಅವರ ಮೂಲನೆಲೆಯಿಂದ ಹೇಗೆ ಎಬ್ಬಿಸಲಾಯಿತು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೮. ಸ್ಥಳಾಂತರಗೊಳಪಡಿಸಿದ ರೀತಿಯ ವರ್ಗೀಕರಣ

ರೀತಿ	ಒಟ್ಟು ಕುಟುಂಬಗಳು	ಪ್ರತಿಶತ
ಒತ್ತಾಯಪೂರ್ವಕವಾಗಿ	೧೧೦	೮೭
ಸ್ವ-ಇಚ್ಛೆಯಿಂದ	೧೬	೧೩

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೮.ರ ಮಾಹಿತಿಯಂತೆ ಶೇಕಡಾ ೧೩ರಷ್ಟು ಕುಟುಂಬಗಳು ಸ್ವ ಇಚ್ಛೆಯಿಂದ ಸ್ಥಳಾಂತರಗೊಂಡಿರುತ್ತಾರೆ. ಯಾರಿಗೆ ಹೆಚ್ಚಿಗೆ ಜಮೀನು ಇಲ್ಲವಾಗಿತ್ತೋ ಅವರು ಸ್ಥಳಾಂತರಕ್ಕೆ ವಿರೋಧ ಒಡ್ಡಿರಲಿಲ್ಲ. ಆದರೆ ಪ್ರತಿಶತ ೮೭ರಷ್ಟು ಕುಣಬಿ ಕುಟುಂಬಗಳನ್ನು ಒತ್ತಾಯ ಪೂರ್ವಕವಾಗಿ ಸ್ಥಳಾಂತರಗೊಳಿಸಲಾಗಿದೆ. ಪೊಲೀಸರು ತಮ್ಮ ಬಲಪ್ರಯೋಗದಿಂದ ಜನರನ್ನು ಮನೆಯಿಂದ ಹೊರಗೆ ದಬ್ಬಿದ್ದಾರೆ. ಸಾಮಾನು ಸರಂಜಾಮುಗಳನ್ನು ಬೀದಿಗೆ ಬಿಸಾಡಿ ಸ್ಥಳಾಂತರಕ್ಕೆ ಒತ್ತಾಯಿಸಿದ್ದಾರೆ ಎಂಬ ಮಾಹಿತಿಯು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಲಭ್ಯವಾಗಿದೆ.

ಸಂತ್ರಸ್ತರಾದವರಿಗೆ ಸ್ಥಳಾಂತರವಾಗಲು ಇಷ್ಟವಿಲ್ಲದಿದ್ದರೂ ಪರಿಸ್ಥಿತಿಯ ತೀವ್ರತೆಯಿಂದಾಗಿ ಅವರನ್ನು ಒತ್ತಾಯ ಪೂರ್ವಕವಾಗಿ ಸ್ಥಳಾಂತರಗೊಳಿಸಲೇಬೇಕಾಯಿತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೩.೯. ಸ್ಥಳಾಂತರದ ಸಂದರ್ಭದಲ್ಲಿ ಸಂತ್ರಸ್ತರ ಸಾಮಾಜಿಕ ಪರಿಸ್ಥಿತಿ

ಇತರೇ ಸಮುದಾಯದವರಿಗಿಂತ ಕುಣಬಿಯರು ಸಾಮಾಜಿಕವಾಗಿ ಮೌಲ್ಯಯುತ ಬದುಕು ಸಾಗಿಸುತ್ತಿದ್ದರು. ಯಾವುದೇ ದುರಾಭ್ಯಾಸಗಳಿಲ್ಲದೇ, ಬೇರೆಯವರ ಜೊತೆಗೆ ತಂಟೆತಕರಾರಿಲ್ಲದೇ ತಮ್ಮ ಪಾಡಿಗೆ ತಾವು ಬದುಕುತ್ತಿದ್ದರು. ನದಿ ಪಾತ್ರದಲ್ಲಿ ಬದುಕುತ್ತಿದ್ದರಿಂದ ಇವರು ಸಮೃದ್ಧವಾಗಿದ್ದರು. ತಮ್ಮಷ್ಟಕ್ಕೆ ತಾವಿದ್ದವರನ್ನು ಈ ಸ್ಥಳಾಂತರ ನಲುಗಿಸಿ ಬಿಟ್ಟಿತು. ಪರಿಸ್ಥಿತಿಯನ್ನು ನಿಭಾಯಿಸಿಕೊಳ್ಳಲು ಅವರಲ್ಲಿ ಸಾಮಾಜಿಕ ಕೌಶಲ್ಯಗಳಿರಲಿಲ್ಲ. ಕನ್ನಡ ಭಾಷಾ ಜ್ಞಾನದ ಅಭಾವ, ಅನಕ್ಷರತೆ, ಮುಂದಾಳತ್ವವಿಲ್ಲದೇ ಇರುವುದು, ಬಾಹ್ಯ ಪ್ರಪಂಚದ ಬಗ್ಗೆ ಜ್ಞಾನ ಇಲ್ಲದೇ ಇರುವುದು, ಸಾಮಾಜಿಕ ಚಟುವಟಿಕೆಗಳ ಬಗ್ಗೆ ಆಸಕ್ತಿ ಇಲ್ಲದಿರುವುದು ಈ ಎಲ್ಲಾ ಅಂಶಗಳಿಂದಾಗಿ ಇವರು ಯೋಜನಾ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾಗಲಿಲ್ಲ. ನಿಖರವಾಗಿ ಆಸ್ತಿ ಸರ್ವೆ ಮಾಡಿಸುವುದು, ಹೆಚ್ಚಿನ ಪರಿಹಾರ ಧನವನ್ನು ಪಡೆಯಲು ಪೈಪೋಟಿ ನಡೆಸುವುದು, ಹೋರಾಟ ಮಾಡುವುದು ಈ ಸಮುದಾಯದಿಂದ ಸಾಧ್ಯವಾಗಲಿಲ್ಲ. ವ್ಯವಹಾರ ಜ್ಞಾನವಿಲ್ಲದ ಇವರು ಸುಮ್ಮನಿದ್ದು ಬಿಟ್ಟರು. ಆಸ್ತಿ ಕಳೆದುಕೊಂಡ ಇವರಿಗೆ ಬೇರೆ ಊರಲ್ಲಿರುವ ಸಂಬಂಧಿಕರಿಗಿಂತ ಕಡಿಮೆ ಸ್ಥಾನಮಾನಕ್ಕೆ ಬಂದೆವು ಎಂಬ ಭಾವನೆ, ನಾಚಿಕೆ, ಹತಾಶೆ ಕಾಡಿದೆ ಎಂದು ಶೇಕಡಾ ೭೨ ರಷ್ಟು ಸಂತ್ರಸ್ತರು ಅಭಿಪ್ರಾಯಪಟ್ಟಿದ್ದಾರೆ. ಸ್ಥಳಾಂತರದ ಭೀತಿಯಲ್ಲಿದ್ದ ಇವರು ಆ ದಿನಗಳಲ್ಲಿ ತಮ್ಮ ಸಾಂಸ್ಕೃತಿಕ ಚಟುವಟಿಕೆಗಳನ್ನು, ಧಾರ್ಮಿಕ ಆಚರಣೆಗಳನ್ನು ಸರಿಯಾಗಿ ಕೈಗೊಳ್ಳುತ್ತಿರಲಿಲ್ಲ. ಎಲ್ಲೆಲ್ಲೂ ಬರೀ ನೋವಿನ ಛಾಯೆ ಕಾಡಿತ್ತು ಎಂದು ಶೇಕಡಾ ೨೭ ರಷ್ಟು ಸಂತ್ರಸ್ತರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆಯಾಗಿ ಸ್ಥಳಾಂತರದ ಸಂದರ್ಭದಲ್ಲಿ ಕುಣಬಿಯರು ಸಾಮಾಜಿಕವಾಗಿ ಕುಗ್ಗಿ ಹೋದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧೩.೧೦. ಸ್ಥಳಾಂತರದ ಸಂದರ್ಭದಲ್ಲಿ ಸಂತ್ರಸ್ತರ ಆರ್ಥಿಕ ಪರಿಸ್ಥಿತಿ

ಸ್ಥಳಾಂತರ ಯಾವಾಗ ಆಗಬೇಕಾಗುತ್ತೋ ಎನ್ನುವ ಭೀತಿಯಲ್ಲಿ ಜೀವನ ಸಾಗಿಸುತ್ತಿದ್ದರಿಂದ ರೈತರು ಸಮರ್ಪಕವಾಗಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಭತ್ತದ ಕಟಾವು ಆಗಿರದೇ ಇದ್ದ ಕಾರಣ ಅಣೆಕಟ್ಟಿನ ಹಿನ್ನೀರು ಬಂದಾಗ ಬೆಳೆಗಳು ಮುಳುಗಿ ಹೋದವು. ಇದರಿಂದಾಗಿ ಬರಬೇಕಾಗಿದ್ದ ಆದಾಯ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು ಎಂದು ಶೇಕಡಾ ೪೮ರಷ್ಟು ಸಂತ್ರಸ್ತರು ಮಾಹಿತಿ ನೀಡಿದ್ದಾರೆ. ಸ್ಥಳಾಂತರವಾಗಬೇಕಾಗಿದ್ದ ಕಾರಣ ಎಲ್ಲೂ ಏನೂ ಕೆಲಸ ನಡೆಯುತ್ತಿದ್ದಿಲ್ಲ. ಉದ್ಯೋಗ ಹಾಗೂ ಸಂಬಳ ಇಲ್ಲದೇ ಜೀವನ ಸಾಗಿಸುವಲ್ಲಿ ಕಷ್ಟ ಎದುರಿಸಬೇಕಾಯಿತು ಎಂದು ಶೇಕಡಾ ೨೮ರಷ್ಟು ಸಂತ್ರಸ್ತರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆಯಾಗಿ ಸ್ಥಳಾಂತರ ಕುಣಬಿಯರಲ್ಲಿ ಆರ್ಥಿಕ ನಷ್ಟ ತಂದೊಡ್ಡಿತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧೩.೧೧. ಸಾಮಾನು ಸಾಗಣೆ ವ್ಯವಸ್ಥೆಯ ಪೂರೈಕೆ

ಸಂತ್ರಸ್ತರು ಸ್ಥಳಾಂತರಗೊಂಡಾಗ ಅವರ ಸಾಮಾನುಗಳನ್ನು ಪುನರ್ವಸತಿ ಕೇಂದ್ರಕ್ಕೆ ಸಾಗಿಸಲು ಕೆ.ಪಿ.ಸಿ. ವಾಹನ ವ್ಯವಸ್ಥೆ ಮಾಡಿತ್ತು ಎಂದು ಶೇಕಡಾ ೯೪ರಷ್ಟು ಸಂತ್ರಸ್ತರು ವ್ಯಕ್ತಪಡಿಸಿದ್ದಾರೆ. ಪ್ರತಿಶತ ೬ರಷ್ಟು ಸಂತ್ರಸ್ತರು ತಮಗೆ ಬೇಕಾದಾಗ ಬಂದಿದ್ದರಿಂದ ತಾವಾಗಿಯೇ ಸಾಮಾನುಗಳನ್ನು ಸಾಗಿಸಿಕೊಂಡು ಬಂದರು.

ಕೆ.ಪಿ.ಸಿ.ಯವರು ಮಾಡಿದ ಉತ್ತಮ ಕೆಲಸ ಎಂದರೆ ವಾಹನ ನೀಡಿದ್ದೊಂದೇ. ಅವರಿಗೆ ನಾವು ಅಲ್ಲಿಂದ ಆದಷ್ಟು ಬೇಗ ತೆರವುಗೊಳ್ಳಬೇಕಿತ್ತು. ಇಲ್ಲದಿದ್ದರೆ ಅವರು ಅದನ್ನು ಕೂಡಾ ನೀಡುತ್ತಿರಲಿಲ್ಲ ಎಂದು ಸಂತ್ರಸ್ತರು ವ್ಯಕ್ತಪಡಿಸಿದ್ದಾರೆ.

ಕೆ.ಪಿ.ಸಿ. ತಮ್ಮ ಕಾರ್ಯವನ್ನು ಮುಗಿಸುವುದಕ್ಕೋಸ್ಕರ ಸ್ಥಳಾಂತರವಾಗಲು ಸಂತ್ರಸ್ತರಿಗೆ ಗಾಡಿಯ ಸಹಾಯ ಮಾಡಿತ್ತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ಸ್ಥಳಾಂತರದ ಸಂದರ್ಭದಲ್ಲಿ ಕುಣಬಿಯರ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಅಧ್ಯಯನ ಮಾಡಿ ಕೆಲವು ಪ್ರಮುಖ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಯೋಜನೆಯ ಬಗ್ಗೆ ಸಂತ್ರಸ್ತರಾಗುವವರಿಗೆ ಅನೌಪಚಾರಿಕವಾಗಿ ತಿಳಿಯಿತು. ಅವರಿಗೆ ಮುಂಚಿತವಾಗಿ ಸೂಚಿಸಿರಲಿಲ್ಲ. ಅವರ ಒಪ್ಪಿಗೆ ಪಡೆದುಕೊಂಡಿರಲಿಲ್ಲ. ಯೋಜನಾ ಪ್ರಕ್ರಿಯೆಗಳಲ್ಲಿ ಸಂತ್ರಸ್ತರ ಸಂಪೂರ್ಣ ಸಹಭಾಗಿತ್ವವನ್ನು ಪಡೆದುಕೊಳ್ಳಲಿಲ್ಲ. ಸ್ಥಳಾಂತರದ ಸುದ್ದಿ ಸಂತ್ರಸ್ತರಲ್ಲಿ ಹತಾಶೆ, ದುಗುಡ ಮತ್ತು ತಿರಸ್ಕಾರದ ಭಾವನೆಯನ್ನು ಮೂಡಿಸಿತ್ತು. ಅವರಿಗೆ ಆಶಾದಾಯಕ ಆಶ್ವಾಸನೆಗಳನ್ನು ನೀಡಿ ಬಲಪ್ರಯೋಗದಿಂದ ಒತ್ತಾಯಪೂರ್ವಕವಾಗಿ ಸ್ಥಳಾಂತರಿಸಲಾಯಿತು. ಸ್ಥಳಾಂತರದ ಸಂದರ್ಭದಲ್ಲಿ ಅವರ ಪರಿಸ್ಥಿತಿ ದುಃಖಕರ, ಅತಂತ್ರ, ಅಸಹಾಯಕ ಹಾಗೂ ನಷ್ಟದಾಯಕವಾಗಿತ್ತು. ಅವರ

ಆಸ್ತಿಯನ್ನು ನಿಖರವಾಗಿ ಸರ್ವೆ ಮಾಡಲಿಲ್ಲ. ಅವರು ಸಾಮಾಜಿಕವಾಗಿ ಕುಗ್ಗಿ ಆರ್ಥಿಕವಾಗಿ ನಷ್ಟ ಅನುಭವಿಸದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.


೩.೧.೪. ಪುನರ್ವಸತಿ ಕೇಂದ್ರದಲ್ಲಿನ ಆರಂಭಿಕ ಪರಿಸ್ಥಿತಿ

ಸಂತ್ರಸ್ತರು ತಮ್ಮ ಮೂಲಸ್ಥಾನದಿಂದ ಸ್ಥಳಾಂತರಗೊಂಡು ಪುನರ್ವಸತಿ ಕೇಂದ್ರಕ್ಕೆ ಆಗಮಿಸಿದ ಆರಂಭದ ವರ್ಷಗಳಲ್ಲಿ ಅವರ ಜೀವನ ಹೇಗಿತ್ತು ಎಂಬುದನ್ನು ಇಲ್ಲಿ ವಿಮರ್ಶಿಸಲಾಗಿದೆ.

೩.೧.೪.೧. ಮೊದಲು ವಾಸವಾಗಿದ್ದ ಗ್ರಾಮ ಮತ್ತು ಪುನರ್ವಸತಿ ಕೇಂದ್ರದ ನಡುವಿನ ಅಂತರ

ಯೋಜನಾ ಸಂತ್ರಸ್ತರನ್ನು ಅವರ ವಾಸಸ್ಥಾನದಿಂದ ೧೦೦ ಕಿ.ಮೀ ದೂರದ ಒಳಗೆ ಪುನರ್‌ನೆಲೆಗೊಳಿಸುವುದು ಕಾನೂನಿನ ಪ್ರಕಾರ ಕಡ್ಡಾಯವಾಗಿರುತ್ತದೆ. ಅವರ ಮೂಲ ಸಂಸ್ಕೃತಿ, ವಾಯುಗುಣ, ಭಾಷೆ ಇವುಗಳಿಗೆ ಹೆಚ್ಚು ತೊಡಕಾಗಬಾರದೆಂದು ಈ ರೀತಿಯಾಗಿ ಮಾಡಲಾಗುತ್ತದೆ. ಆದ್ದರಿಂದ ಸೂಪಾ ಸಂತ್ರಸ್ತರನ್ನು ತಮ್ಮ ಮೂಲನೆಲೆಯಿಂದ ಎಷ್ಟು ದೂರದಲ್ಲಿ ಪುನರ್ವಸತಿಗೊಳಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ. ೩.೭. ಮೊದಲಿನ ಗ್ರಾಮ ಮತ್ತು ಪು.ಕೇ.ದ ನಡುವಿನ ಅಂತರದ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೭.ರಲ್ಲಿ ತೋರಿಸಿರುವ ಮಾಹಿತಿಯಂತೆ ಸಂತ್ರಸ್ತರಿಗಾಗಿ ಹೆಚ್ಚೆಂದರೆ ೩೫-೫೦ಕಿ.ಮೀ. ದೂರದಲ್ಲಿ ಪುನರ್ವಸತಿ ನೆಲೆಯನ್ನು ಗುರುತಿಸಿರುತ್ತಾರೆ. ನಿಗಧಿತ ದೂರದ ಒಳಗಡೆ ಪುನರ್ವಸತಿಗೊಳಿಸಲು ನಿರ್ಧರಿಸಿರುತ್ತಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೪.೨. ಆರಂಭದಲ್ಲಿ ಎದರುರಿಸಿದ್ದ ಮಾನಸಿಕ ಸವಾಲುಗಳು

ಮಳೆಗಾಲದಲ್ಲಿ ಸಂತ್ರಸ್ತರನ್ನು ಒತ್ತಾಯಪೂರ್ವಕವಾಗಿ ಕೆ.ಪಿ.ಸಿ.ಯವರ ವಾಹನದಲ್ಲಿ ರಾಮನಗರ ಪುನರ್ವಸತಿ ಕೇಂದ್ರಕ್ಕೆ ತಂದು ಇಳಿಸಿದಾಗ ಅನ್ಯ ಲೋಕಕ್ಕೆ ಬಂದ ಅನುಭವ ಆಯಿತು. ವಾಹನದಲ್ಲಿ ಹೇರಿಕೊಂಡು ಬಂದು ಬಿಸಾಕಿ ಹೋದಂತೆ ಅನ್ನಿಸಿತು. ಪಾಪಿಗಳು, ಭಿಕಾರಿಗಳು, ದಿಕ್ಕಿಲ್ಲದವರು, ಏನು ಮಾಡಬೇಕು, ಎಲ್ಲಿಗೆ ಹೋಗಬೇಕು, ಯಾರಲ್ಲಿ ಹೇಳಬೇಕು, ಇಲ್ಲಿ ಹೇಗೆ ಬದುಕಬೇಕು, ದಿಕ್ಕು ತೋಚದಾಯಿತು, ಇಲ್ಲಿರುವುದಕ್ಕಿಂತ ಸಾಯುವುದೇ ಮೇಲು ಎಂದೆನಿಸಿತು ಎಂದು ಎಲ್ಲಾ (೧೦೦%) ಸಂತ್ರಸ್ತರು ಪ್ರತಿಕ್ರಿಯಿಸಿದ್ದಾರೆ.

ಎಲ್ಲಾ ಕಳೆದುಕೊಂಡ ವ್ಯಕ್ತಿಗಳನ್ನು ಅಪರಿಚಿತ ಜಾಗಕ್ಕೆ ಒತ್ತಾಯಪೂರ್ವಕವಾಗಿ ತಂದು ಬಿಟ್ಟಾಗ ಮನಸ್ಸು ಅಪರಿಚಿತ, ಖೇದಕರ, ತಿರಸ್ಕೃತ, ನಿರಾಶೆ ಮತ್ತು ಜಿಗುಪ್ಸೆಗೊಳ್ಳುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೪.೩. ಪುನರ್ವಸತಿ ಕೇಂದ್ರದಲ್ಲಿ ತಕ್ಷಣಕ್ಕೆ ಮಾಡಿದ್ದ ವ್ಯವಸ್ಥೆಗಳು

ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಕೆ.ಪಿ.ಸಿಯವರು ತಕ್ಷಣಕ್ಕೆ ಏನೂ ವ್ಯವಸ್ಥೆ ಮಾಡಿಕೊಡಲಿಲ್ಲ ಎಂದು ಶೇಕಡಾ ೯೬.೮೨ರಷ್ಟು ಸಂತ್ರಸ್ತರು ಹೇಳಿಕೊಂಡಿದ್ದಾರೆ. ಶೆಡ್ಡು, ಆಹಾರ, ಕುಡಿಯುವ ನೀರು ಒದಗಿಸಿದರು ಎಂದು ಶೇಕಡಾ ೩.೧೭ರಷ್ಟು ಕುಣಬಿಯರು ವ್ಯಕ್ತಪಡಿಸಿದ್ದಾರೆ. ಲೋಂಡಾದ ಹತ್ತಿರ ನಿರ್ಮಿಸಿದ್ದ ೩೦೦ ಶೀಟಿನ ಶೆಡ್ಡುಗಳು ಅವರ ಮನೆ ನಿವೇಷನಗಳಿಂದ ತುಂಬಾ ದೂರದಲ್ಲಿದ್ದ ಕಾರಣ ಹೆಚ್ಚಿನ ಕುಣಬಿಯರು ಶೆಡ್ಡುಗಳಿಗೆ ಹೋಗಲಿಲ್ಲ. ಅದು ಅವರಿಗೆ ಪೂರಕವಾಗಿರಲಿಲ್ಲ. ಶೆಡ್ಡುಗಳು ಗಾಳಿಗೆ ಹಾರಿ ಹೋಗುವಂತಿದ್ದವು. ಅವರಿಗೆ ಅಲ್ಲಿ ಅವಕಾಶ ಸಿಗಲಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕೆ.ಪಿ.ಸಿ.ಯವರು ಸಂತ್ರಸ್ತರಾದವರಿಗೆ ಪುನರ್ವಸತಿ ಕೇಂದ್ರದಲ್ಲಿ ಆರಂಭಿಕ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಿಕೊಡಲಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೪.೪. ಆರಂಭದಲ್ಲಿ ಎದುರಿಸಿದ ಸಾಮಾಜಿಕ ಸವಾಲುಗಳು

ಸ್ಥಳಾಂತರವಾಗಿ ಪುನರ್ವಸತಿ ಕೇಂದ್ರಕ್ಕೆ ಬಂದ ಆರಂಭದಲ್ಲಿ ಕುಣಬಿಯರು ಸಾಮಾಜಿಕವಾಗಿ ಹಲವು ಸವಾಲುಗಳನ್ನು ಎದುರಿಸಬೇಕಾಯಿತು. ಮೊದಲನೆಯದಾಗಿ ಅವರ ನಿವೇಶನಗಳನ್ನು ಕಂಡುಕೊಳ್ಳುವುದು. ಕೆ.ಪಿ.ಸಿ.ಯವರು ಯಾರ ನಿವೇಶನ ಯಾವುದು ಎಂಬುದನ್ನು ತೋರಿಸಿರಲಿಲ್ಲ. ಅದು ಎಲ್ಲಿದೆ ಎಂದು ತಿಳಿಯದೇ ಪುನರ್ವಸತಿ ಕೇಂದ್ರದಲ್ಲಿ ಅಲೆದಾಡಿ ಅವರಿವರಿಗೆ ಕೇಳಿಕೊಂಡು ತಮ್ಮ ನಿವೇಶನವನ್ನು ಕಷ್ಟಪಟ್ಟು ಹುಡುಕಿಕೊಂಡಿದ್ದಾರೆ. ಮನೆ ಕಟ್ಟಿಕೊಳ್ಳುವುದು ಸಂತ್ರಸ್ತರಿಗೆ ದೊಡ್ಡ ಸವಾಲಾಗಿತ್ತು. ಕೆ.ಪಿ.ಸಿ. ಯವರು ಕಾಡನ್ನು ಕಡಿದು ನಿವೇಶನಗಳನ್ನು ಗುರುತಿಸಿದ್ದರು. ಆದರೆ ಮರದ ಬೊಡ್ಡೆಗಳನ್ನು ತೆಗೆದಿರಲಿಲ್ಲ. ಅವುಗಳನ್ನು ಕಿತ್ತು ತೆಗೆಯುವುದೇ ಒಂದು

ದೊಡ್ಡ ಕೆಲಸವಾಗಿತ್ತು. ಎಲ್ಲಾ ಸಂತ್ರಸ್ತರು ಅವರವರಿಗೆ ಬೇಕಾದ ಮನೆಗಳನ್ನು ಕಟ್ಟಿಕೊಳ್ಳಲು ಪರಿಶ್ರಮಿಸುತ್ತಿದ್ದರು. ಕೆಲಸಕ್ಕೆ ಆಳು ಸಿಗುತ್ತಿರಲಿಲ್ಲ. ಇತರರ ಪರಿಚಯವಿರಲಿಲ್ಲ. ಮನೆಗೆ ಬೇಕಾದ ಸಾಮಾಗ್ರಿಗಳು ಸಿಗುತ್ತಿರಲಿಲ್ಲ. ಖರೀದಿ ಮಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಮಳೆಗಾಲ ಆಗಿದ್ದರಿಂದ ಭಾರೀ ಮಳೆ, ಗಾಳಿ ಮತ್ತು ಚಳಿಯಿತ್ತು. ಹಾಕಿಕೊಂಡ ಗುಡಿಸಲಿನ ಹುಲ್ಲು ಗಾಳಿಗೆ ಹಾರಿ ಹೋಗಿ ಮನೆಯೆಲ್ಲಾ ಸೋರುತ್ತಿತ್ತು. ಹಾಸಿಗೆ, ಹೊದಿಕೆಯಿಲ್ಲದೇ ತುಂಬಾ ಚಳಿಯನ್ನು ತಡೆದುಕೊಳ್ಳಲಾರದ ಪರಿಸ್ಥಿತಿ ಎಂದು ಶೇಕಡಾ ೯೭ರಷ್ಟು ಸಂತ್ರಸ್ತ ಕುಣಬಿ ಕುಟುಂಬದವರು ಅನುಭವ ಹಂಚಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳನ್ನು, ವಯಸ್ಸಾದವರನ್ನು ಜೋಪಾನ ಮಾಡುವುದು ದೊಡ್ಡ ಸವಾಲಾಗಿ ಪರಿಣಮಿಸಿತು ಎಂದು ಶೇಕಡಾ ೭೬ರಷ್ಟು ಕುಟುಂಬಗಳು ಹೇಳಿದ್ದಾರೆ. ಮಳೆ, ಚಳಿ, ಹಸಿವನ್ನು ತಾಳಲಾರದೇ ಮನೆಯ ಸದಸ್ಯರಿಗೆ ಅನಾರೋಗ್ಯ ಉಂಟಾಯಿತು ಎಂದು ಶೇಕಡಾ ೮೩ರಷ್ಟು ಕುಟುಂಬದವರು ಹೇಳಿಕೊಂಡಿದ್ದಾರೆ. ತತ್ಕಾಲಕ್ಕೆ ಸರಿಯಾಗಿ ಔಷಧಿ ದೊರೆಯದೇ ಸಾವುಗಳಾದವು ಎಂದು ಶೇಕಡಾ ೧೬ರಷ್ಟು ಕುಟುಂಬದವರು ತಿಳಿಸಿದ್ದಾರೆ. ಒಲೆ ಉರಿಸಲು ಉರುವಲು ಇಲ್ಲವಾಗಿತ್ತು. ಕಾಡು ಕಡಿದು ಮೈದಾನವಾದ್ದರಿಂದ ತುಂಬಾ ಗಾಳಿ ಬರುತ್ತಿತ್ತು. ಬೆಂಕಿಯನ್ನು ಉರಿಸಲು ಆಗುತ್ತಿರಲಿಲ್ಲ. ಗಾಳಿಗೆ ದೀಪ ಉರಿಯುತ್ತಿರಲಿಲ್ಲ. ಎಲ್ಲಾದರೂ ಹೋಗಲಿಕ್ಕೆ, ಏನಾದರೂ ತರಲಿಕ್ಕೆ ರಸ್ತೆಗಳು ಕೆಸರು ತುಂಬಿ ಕಾಲು ಊರಿ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಕಾಡು ಕಡಿದು ಮಣ್ಣು ಹಾಕಿ ರಸ್ತೆ ಮಾಡಿದ್ದರಿಂದ ಅದು ಹೂಳಿನಿಂದ ತುಂಬಿತ್ತು.

ಕುಡಿಯುವ ನೀರು ಎಲ್ಲಾ ಮನೆಗಳಿಗೆ ಪೂರೈಕೆಯಿರಲಿಲ್ಲ. ಅದನ್ನು ಶೇಖರಿಸಿ ಇಟ್ಟುಕೊಳ್ಳಲು ಜಾಗ, ಪಾತ್ರೆ ಸಾಮಾನುಗಳು ಇರಲಿಲ್ಲ. ಮನೆ ಇಲ್ಲದ ಕಾರಣ ವಿದ್ಯುತ್ ಸೌಲಭ್ಯ ದೊರೆತಿರಲಿಲ್ಲ. ಜನರಿಗೆ ಆಹಾರ ಮತ್ತು ದನಕರುಗಳಿಗೆ ಮೇವಿನ ಸಮಸ್ಯೆ ಇತ್ತು ಎಂದು ಶೇಕಡಾ ೮೫ರಷ್ಟು ಹೇಳಿಕೊಂಡಿದ್ದಾರೆ. ತಮ್ಮ ಮೂಲ ನೆಲೆಯಿಂದ ತಂದ ಅಕ್ಕಿ ಒಂದು ವರ್ಷದಲ್ಲಿ ಖಾಲಿಯಾಯಿತು. ನಂತರದ ದಿನಗಳಲ್ಲಿ ಹೊಟ್ಟೆಗೆ ಅನ್ನ ಇಲ್ಲವಾಗಿತ್ತು. ಪುನರ್ವಸತಿ ಕೇಂದ್ರದಲ್ಲಿ ಸಂಬಂಧಿಕರೆಲ್ಲಾ ಬೇರೆ ಬೇರೆ ಕಡೆಯಾಗಿದ್ದರು. ಇದರಿಂದಾಗಿ ಅವರ ಸಂಬಂಧ, ನೆರೆಹೊರೆ ಇಲ್ಲವಾಯಿತು. ಹೆಚ್ಚಿನ ಸಂದರ್ಭದಲ್ಲಿ ಅವರು ಎಲ್ಲಿದ್ದಾರೆ ಎಂಬುದೇ ತಿಳಿದಿರಲಿಲ್ಲ. ಇದರಿಂದ ಬೇಸರವಾಗುತ್ತಿತ್ತು, ಹೊತ್ತು ಕಳೆಯುವುದೇ ಕಷ್ಟವಾಗುತ್ತಿತ್ತು ಎಂದು ಶೇಕಡಾ ೮೧ರಷ್ಟು ಕುಟುಂಬದವರು ಹೇಳಿಕೊಂಡಿದ್ದಾರೆ.

ಇಲ್ಲಿ ಮೊದಲು ವಾಸವಾಗಿದ್ದವರ ಜೊತೆ ಬೆರೆಯುವ ಸಮಸ್ಯೆಯಾಗಿತ್ತು ಎಂದು ಶೇಕಡಾ ೧೬ರಷ್ಟು ಕುಟುಂಬಗಳು ಹೇಳಿಕೊಂಡಿದ್ದಾರೆ. ರಾಮನಗರ ಪುನರ್ವಸತಿ ಕೇಂದ್ರ ಸಿತಾವಾಡ, ಅಡಾಳಿ ಜನರ ಸೀಮೆ ಅಂದರೆ ಸ್ಮಶಾನವಾಗಿತ್ತು. ಕಾಡಿನಿಂದ ತುಂಬಿದ್ದ ಇದು ಸೂಪಾ ಸಂತ್ರಸ್ತರ ನಾಡಾಯಿತು. ಸಿತಾವಾಡ ಒಂದು ಕಡೆಯಲ್ಲಿ ಇನ್ನೊಂದು ಕಡೆಯಲ್ಲಿ ಅಡಾಳಿ. ರಾಮನಗರ ಮಧ್ಯಕ್ಕೆ ಬಂದು ಬಿಟ್ಟಿತು. ಯಾರ ಮನೆಗಳು ಆಚೀಚೆ

ಬದಿಯಲ್ಲಿ ಬಂದವು ಅಲ್ಲಿ ಸಮಸ್ಯೆ ಎದುರಾಯಿತು. ಸಿತಾವಾಡ ಕುಣಬಿ ಸಮುದಾಯವನ್ನೇ ಹೊಂದಿದ ಮೂವತ್ತೆರಡು ಕುಟುಂಬಗಳುಳ್ಳ ಒಂದು ಸಣ್ಣ ಸಮುದಾಯ. ಅಡಾಳಿ ೫೦ ಕುಟುಂಬಗಳನ್ನು ಹೊಂದಿದ ಗೌಳಿಗರನ್ನು ಒಳಗೊಂಡ ಒಂದು ಪ್ರತ್ಯೇಕ ಸಮುದಾಯ. ಅಡಾಳಿ, ರಾಮನಗರ ಹಾಗೂ ಸಿತಾವಾಡ ಈ ಮೂರು ಮಜಿರೆಗಳು ಸ್ವಲ್ಪ ದೂರದಲ್ಲೇ ಇದ್ದುಕೊಂಡು ತನ್ನದೇ ಆದ ಪ್ರತ್ಯೇಕತೆಯನ್ನು ಹೊಂದಿದೆ. ಆದರೆ ರಾಮನಗರದಲ್ಲಿ ಎಲ್ಲಾ ೪೮ ಗ್ರಾಮಗಳ ವಿವಿಧ ಜನ ಸಮುದಾಯದ ಜನರು ಛಿದ್ರಗೊಂಡು ನೆಲೆ ಕಂಡಿದ್ದರಿಂದ ಯಾರಿಗೆ ಯಾರೂ ಸಂಬಂಧ ಇಲ್ಲದಂತೆ ಬದುಕುವ ಸಂದರ್ಭ ಈ ತುಂಬು ಸಮುದಾಯದ ಕುಣಬಿಯರಿಗೆ ತೊಡಕಾಗಿ ಕಾಡಿತು. ಇಲ್ಲಿ ಎಲ್ಲರ ಜೊತೆಗೆ ಬದುಕುವುದು, ಎಲ್ಲರ ಮಧ್ಯೆ ಬದುಕುವುದು ಇವರಿಗೆ ಸವಾಲಾಗಿ ಪರಿಣಮಿಸಿತು.

ಪುನರ್ವಸತಿ ಕೇಂದ್ರದಲ್ಲಿ ಅನುಭವಿಸಿದ್ದ ಆರಂಭಿಕ ಸಾಮಾಜಿಕ ಸವಾಲುಗಳ ಅಧ್ಯಯನದಿಂದ ಕೆಲವು ಪ್ರಮುಖ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಕೆ.ಪಿ.ಸಿ. ಸಂತ್ರಸ್ತರಿಗೆ ಸರಿಯಾದ ಮಾರ್ಗದರ್ಶನ ನೀಡಲಿಲ್ಲ. ಸಹಾಯಕ್ಕಾಗಿ ಅಧಿಕಾರಿಗಳನ್ನು ನೇಮಿಸಿರಲಿಲ್ಲ. ನಿವೇಶನಗಳನ್ನು ಸರಿಯಾಗಿ ಗುರುತಿಸಿರಲಿಲ್ಲ, ವ್ಯವಸ್ಥಿತಗೊಳಿಸಿರಲಿಲ್ಲ. ಮನೆಗಳನ್ನು ಕಟ್ಟಿಕೊಳ್ಳಲು ಪ್ರಾಮಾಣಿಕ ಸಹಕಾರ ನೀಡಲಿಲ್ಲ. ಆರಂಭಿಕ ಸೌಲಭ್ಯಗಳು ದೊರೆಯದೇ ಇದ್ದ ಕಾರಣ ಸಂತ್ರಸ್ತರು ನಲುಗಬೇಕಾಯಿತು. ದಿಕ್ಕಿಲ್ಲದ ಭಿಕಾರಿಗಳಾಗಬೇಕಾಯಿತು. ಉಪವಾಸ, ಅನಾರೋಗ್ಯ, ಸಾವಿನಂತಹ ಕಷ್ಟಕ್ಕೆ ಸಿಲುಕಿ ವೇದನೆ ಪಡಬೇಕಾಯಿತು. ಮೂಲ ಊರುಗಳಲ್ಲಿ ಅರಣ್ಯದಲ್ಲಿ ಸುಖವಾಗಿ ಬದುಕುತ್ತಿದ್ದ ಇವರ ಬದುಕು ಪುನರ್ವಸತಿ ಕೇಂದ್ರದಲ್ಲಿ ಅರಣ್ಯರೋದನ ಆಗಬೇಕಾಯಿತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೪.೫. ಆರಂಭದಲ್ಲಿ ಎದುರಿಸಿದ ಆರ್ಥಿಕ ಸವಾಲುಗಳು

ಸ್ಥಳಾಂತರಗೊಂಡು ಪುನರ್ವಸತಿ ಕೇಂದ್ರಕ್ಕೆ ಬಂದಾಗ ಪರಿಹಾರ ಧನವಿದ್ದ ಕಾರಣ ಸ್ವಲ್ಪ ದಿನ ಜೀವನ ಮಾಡಲು ಸಾಧ್ಯವಾಯಿತು. ಕೆ.ಪಿ.ಸಿ. ಅವರಿಗೆ ನೀಡಿದ್ದ ಜಮೀನು ದೂರದಲ್ಲಿದ್ದು ಸಂತ್ರಸ್ತರು ಆ ಕಡೆ ಗಮನ ಹರಿಸದಾದರು. ಅದು ಮತ್ತೆ ಕಾಡಾಯಿತು. ದುಡಿದು ಸಂಪಾದನೆ ಮಾಡಲು ಇಲ್ಲಿ ಭತ್ತ ಬೆಳೆಯುವ ಕೆಲಸ ಇರಲಿಲ್ಲ. ಕುಣಬಿಯರಿಗೆ ಬೇರೆ ಉದ್ಯೋಗ ತಿಳಿದಿರಲಿಲ್ಲ ಎಂದು ಶೇಕಡಾ ೯೦ರಷ್ಟು ವ್ಯಕ್ತಪಡಿಸಿದ್ದಾರೆ. ಇದು ಸಂಪೂರ್ಣವಾಗಿ ಸಂತ್ರಸ್ತರನ್ನು ಹೊಂದಿದ್ದ ಪ್ರತ್ಯೇಕವಾದ ಹೊಸ ಪುನರ್ವಸತಿ ಕೇಂದ್ರವಾದ್ದರಿಂದ ಇಲ್ಲಿ ಸಂಬಳ ಕೊಟ್ಟು ದುಡಿಸಿಕೊಳ್ಳುವ ಸಾಮರ್ಥ್ಯ ಯಾರಿಗೂ ಇರಲಿಲ್ಲ. ಸಂಬಳದ ಕೆಲಸವಿಲ್ಲದೇ ಜನ ಕೈಚೆಲ್ಲಿ ಕುಳಿತುಕೊಳ್ಳುವ ಸಂದರ್ಭ ಒದಗಿ ಬಂದಿತು. ಕೆಲವರು ಹತ್ತಿರದ ಬೀರಂಪಲ್ಲಿ, ಅಂಬೇಲಿಗಳಿಗೆ ಭತ್ತದ ಕೆಲಸಕ್ಕೆ ತೆರಳುತ್ತಿದ್ದರು. ಆ ಸಮಯದಲ್ಲಿ ಇವರ ಮನೆಯಲ್ಲಿ ಜೋಡಿಸಿಟ್ಟಿದ್ದ ಸೌದೆ, ಹಾರೆ,

ಪಿಕಾಶಿ, ಕೊಡಲಿ, ಮರ ಮುಟ್ಟು, ಪಾತ್ರೆಗಳು ಹೀಗೆ ಸಣ್ಣಪುಟ್ಟ ವಸ್ತುಗಳು ಕೂಡಾ ಕಳ್ಳತನವಾಗುತ್ತಿತ್ತು ಎಂದು ಶೇಕಡಾ ೨೨ರಷ್ಟು ಕುಟುಂಬದವರು ಮಾಹಿತಿ ಹಂಚಿಕೊಂಡಿದ್ದಾರೆ.

ಕೆ.ಪಿ.ಸಿ.ಯವರು ಸಂತ್ರಸ್ತರ ಆರ್ಥಿಕ ಪುನರ್ನಿರ್ಮಾಣಕ್ಕಾಗಿ ಸಮರ್ಪಕ ವ್ಯವಸ್ಥೆ ಮಾಡಿಕೊಡಲಿಲ್ಲ ಎಂಬುದನ್ನು ಆರಂಭಿಕವಾಗಿ ಕುಣಬಿಯರು ಎದುರಿಸಿದ್ದ ಸಮಸ್ಯೆಗಳ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೪.೬. ಸಂತ್ರಸ್ತರ ಸಾಕುಪ್ರಾಣಿಗಳ ಪರಿಸ್ಥಿತಿ

ಸ್ಥಳಾಂತರಪೂರ್ವದಲ್ಲಿ ಇವರು ದನ, ಎತ್ತು, ಎಮ್ಮೆ, ಕೋಣ, ನಾಯಿ ಮತ್ತು ಬೆಕ್ಕುಗಳನ್ನು ಸಾಕುತ್ತಿದ್ದರು. ಸ್ಥಳಾಂತರವಾಗುವ ದಿನ ಜಾನುವಾರುಗಳು ಕಾಡಿಗೆ ಮೇವಿಗಾಗಿ ಹೋಗಿದ್ದವು. ಎಕಾಏಕಿ ನೀರು ಬಂದಿದ್ದರಿಂದ ಇವರು ಓಡಿ ಬಂದರು. ಆದರೆ ಅವರ ಜಾನುವಾರುಗಳು ಅಲ್ಲೇ ಉಳಿದವು. ಸುಮಾರು ನೂರಾರು ಜಾನುವಾರುಗಳನ್ನು ಅವರು ಕಾಡಲ್ಲೇ ಬಿಟ್ಟು ಬಂದರು. ಶೇಕಡಾ ೮ರಷ್ಟು ಕುಟುಂಬದವರು ಮೊದಲೇ ಅವರ ಸಂಬಂಧಿಕರ ಮನೆಗೆ ಸಾಕಿಕೊಳ್ಳಲು ಕೊಟ್ಟಿದ್ದರು. ಅದೇ ಊರಲ್ಲಿ ಇರುವ ಎತ್ತರದ ಗುಡ್ಡದಲ್ಲಿ ಮನೆ ಮಾಡಿಕೊಂಡು ವಾಸವಿದ್ದವರಿಗೆ ಒಂದು ಕುಟುಂಬ ತಮ್ಮ ದನಕರುಗಳನ್ನು ಕೊಟ್ಟು ಬಂದಿರುತ್ತದೆ. ಪುನರ್ವಸತಿ ಕೇಂದ್ರ ಸಂಪೂರ್ಣವಾಗಿ ಮೈದಾನ ಪ್ರದೇಶವಾಗಿತ್ತು. ಗಾಳಿ, ಮಳೆಗೆ ಸರಿಯಾದ ದನದ ಕೊಟ್ಟಿಗೆ ಹಾಗೂ ಮೇವು ಇಲ್ಲದಿದ್ದುದರಿಂದ ಒಂದೇ ವರ್ಷದಲ್ಲೇ ಸತ್ತು ಹೋದವು. ಪುನರ್ವಸತಿ ಕೇಂದ್ರದಲ್ಲಿ ಕಾಡಿಗೆ ಮೇಯಲು ಹೋದ ದನಗಳನ್ನು ಹುಲಿಗಳು ತಿಂದವು ಎಂದು ಶೇಕಡಾ ೮ರಷ್ಟು ಕುಟುಂಬಗಳು ಮಾಹಿತಿ ನೀಡಿದ್ದಾರೆ. ಶೇಕಡಾ ೧೬ರಷ್ಟು ಕುಟುಂಬಗಳು ಇಲ್ಲಿ ಸಾಕಿಕೊಳ್ಳಲು ಯಾವುದೇ ಸೌಕರ್ಯವಿಲ್ಲದ ಕಾರಣ ಮಾರಿದ್ದಾರೆ. ಸ್ಥಳಾಂತರದ ಭರಾಟೆಯಲ್ಲಿ ನಾಯಿ ಮತ್ತು ಬೆಕ್ಕುಗಳು ಏನಾದವು ಎಂಬುದೇ ಗೊತ್ತಿಲ್ಲ. ಬಹುಶಃ ಅವು ನೀರಿನಲ್ಲಿ ಕೊಚ್ಚಿಕೊಂಡು ಹೋಗಿರಬೇಕು ಎಂದು ತುಂಬಾ ಖೇದಕರ ರೀತಿಯಲ್ಲಿ ಹೇಳಿಕೊಳ್ಳುತ್ತಾರೆ. ಸುಮಾರು ಜನರ ಮನೆಗಳಲ್ಲಿ ಜೇನು ಗೂಡು ಕಟ್ಟಿಕೊಂಡಿದ್ದವು ಅವು ಕೂಡಾ ನೀರಿನಲ್ಲಿ ಕೊಚ್ಚಿಕೊಂಡು ಹೋದವು ಎಂದಿದ್ದಾರೆ.

ಈ ಎಲ್ಲಾ ಮಾಹಿತಿಗಳನ್ನು ವಿಮರ್ಶಿಸಿದಾಗ ಅಣೆಕಟ್ಟು ಯೋಜನೆ ಕೇವಲ ಜನರಿಗಷ್ಟೇ ತೊಂದರೆ ನೀಡಿಲ್ಲ. ಜಾನುವಾರುಗಳನ್ನು ಕೂಡಾ ಇನ್ನಿಲ್ಲದಂತೆ ಮಾಡಿದವು ಎಂಬುದು ತಿಳಿದು ಬರುತ್ತದೆ.

೩.೧.೪.೭. ಸಂತ್ರಸ್ತ ಕುಣಬಿಯರಿಗೆ ದೊರೆತಿರುವ ಪರಿಹಾರ

ಕೆ.ಪಿ.ಸಿ. ಸಂತ್ರಸ್ತ ಕುಣಬಿಯರಿಗೆ ನೀಡಿರುವ ಪರಿಹಾರವನ್ನು ಅಧ್ಯಯನ ಮಾಡಲಾಗಿದೆ. ಈ ಮಾಹಿತಿಗಳನ್ನು ಸಂತ್ರಸ್ತರಿಂದಲೇ ನೇರವಾಗಿ ಪಡೆಯಲಾಗಿದೆ.

ಕೋಷ್ಟಕ ಸಂಖ್ಯೆ ೩.೯. ದೊರೆತಿರುವ ಪರಿಹಾರದ ವರ್ಗೀಕರಣ

ಹಣ (ಎಕರೆಗೆ) ಸಾವಿರಗಳಲ್ಲಿ			ಮನೆ		ನಿವೇಶನ (ಗುಂಟೆಗಳಲ್ಲಿ)		ಕೃಷಿಭೂಮಿ (ಎಕರೆ)				ಉದ್ಯೋಗ		ಇತರೇ	
೨.೫	೩.೫	೫	ದೊರೆತಿದೆ	ಇಲ್ಲ	೨.೫	೫	೧	೨–೩	೪–೫	<೫	ದೊರೆತಿದೆ	ಇಲ್ಲ	ದೊರೆತಿದೆ	ಇಲ್ಲ
ಕುಟುಂಬಗಳ ಸಂಖ್ಯೆ														
೭೩	೨೭	೭	೦	೧೨೬	೬	೧೦೭	೭	೮	೮೯	೮	೦	೧೨೬	೦	೧೨೬
ಕುಟುಂಬಗಳ ಸಂಖ್ಯೆ (ಶೇಕಡಾಗಳಲ್ಲಿ)														
೫೭.೯೩	೨೧.೪೨	೫.೫೫	೦	೧೦೦	೪.೭೬	೮೪.೯೨	೫.೫೫	೬.೩೪	೭೦.೬೩	೬.೩೪	೦	೧೦೦	೦	೧೦೦

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೯.ರ ಮಾಹಿತಿಯಂತೆ ಕರ್ನಾಟಕ ವಿದ್ಯುತ್ ನಿಗಮದವರು ಸಂತ್ರಸ್ತರ ಕೃಷಿಭೂಮಿಗಳನ್ನು ಮೋಜಣಿ ಮಾಡಿದ್ದು ಆ ಭೂಮಿಯ ಫಲವತ್ತತೆಗೆ ತಕ್ಕಂತೆ ವಿವಿಧ ಬೆಲೆಯಲ್ಲಿ ಹಣವನ್ನು ಪರಿಹಾರವಾಗಿ ನೀಡಿದ್ದಾರೆ. ಹೆಚ್ಚಿನವರು ಎಕರೆಗೆ ೨.೫ ಸಾವಿರ, ಇನ್ನುಳಿದಂತೆ ಎಕರೆಗೆ ೩.೫ ಸಾವಿರ, ೫ ಸಾವಿರದಂತೆ ಹಣದ ರೂಪದ ಪರಿಹಾರವನ್ನು ಪಡೆದಿದ್ದಾರೆ. ಭೂಮಿಯಿಲ್ಲದವರಿಗೂ ಖರ್ಚಿಗೆಂದು ಒಂದಿಷ್ಟು ಹಣವನ್ನು ನೀಡಲಾಗಿದೆಯೆಂದು ವಿದ್ಯುತ್ ನಿಗಮದ ಅಧಿಕಾರಿಗಳು ಪ್ರತಿಕ್ರಿಯಿಸಿರುತ್ತಾರೆ. ಸಂತ್ರಸ್ತರಿಗೆ ಮನೆ ಕಟ್ಟಿ ಕೊಡುತ್ತೇವೆ ಎಂದು ನಿಗಮದವರು ಆಶ್ವಾಸನೆ ನೀಡಿರಲಿಲ್ಲ. ಅದರಂತೆ ಯಾವ ಸಂತ್ರಸ್ತರು ಕೂಡಾ ವಸತಿ ಸೌಕರ್ಯವನ್ನು ಪಡೆದುಕೊಳ್ಳಲಿಲ್ಲ. ಹೆಚ್ಚಿನವರಿಗೆ ೫ ಗುಂಟೆ, ಇನ್ನುಳಿದಂತೆ ೨.೫ ಗುಂಟೆ ವಸತಿ ನಿವೇಶನವನ್ನು ನೀಡಲಾಗಿದೆ. ಸ್ಥಳಾಂತರದ ಮೊದಲು ಜಮೀನು ಇದ್ದವರಿಗೆ ೫ ಗುಂಟೆ ಹಾಗೂ ಇಲ್ಲದವರಿಗೆ ೨.೫ ಗುಂಟೆ ನಿವೇಶನ ನೀಡಲಾಗಿದೆ ಎಂದು ವಿದ್ಯುತ್ ನಿಗಮದವರು ಮಾಹಿತಿ ನೀಡಿದ್ದಾರೆ. ಶೇಕಡಾ ೫ ರಷ್ಟು ೧ ಎಕರೆ, ಪ್ರತಿಶತ ೭ರಷ್ಟು ೨–೩ ಎಕರೆ, ಶೇಕಡಾ ೭೦ ರಷ್ಟು ೫ ಎಕರೆ ಹಾಗೂ ಶೇಕಡಾ ೭ರಷ್ಟು ಕುಟುಂಬದವರು ೫ ಎಕರೆಗಿಂತ ಹೆಚ್ಚು ಕೃಷಿ ಭೂಮಿಯನ್ನು ಪಡೆದುಕೊಂಡಿದ್ದಾರೆ.

ಸೂಪಾ ಜಲಾಶಯ ಯೋಜನೆಯ ಪ್ರಥಮ ಉಪಹಂತದಲ್ಲಿ ಸ್ಥಳಾಂತರಗೊಂಡ ಸಂತ್ರಸ್ತ ಕುಟುಂಬದವರಿಗೆ ರಾಮನಗರದಲ್ಲಿ ಒಂದಿಷ್ಟು ಪರಿಹಾರ ನೀಡಿದ್ದಾರೆ. ಅದರಂತೆ ಎರಡನೇ ಉಪಹಂತದಲ್ಲಿ ಸ್ಥಳಾಂತರಗೊಂಡವರಿಗೆ ಕೆಲವರಿಗೆ ಮಾತ್ರ ಅರ್ಧಂಭರ್ಧ ಪರಿಹಾರ ನೀಡಿರುತ್ತಾರೆ. ಆದರೆ ಮೂರನೇ ಉಪಹಂತದಲ್ಲಿ ಸ್ಥಳಾಂತರಗೊಂಡ ಸೂಪಾ ಯೋಜನಾ ಸಂತ್ರಸ್ತರಿಗೆ ಕೆ.ಪಿ.ಸಿ.ಯವರು ಏನನ್ನೂ ನೀಡಲಿಲ್ಲ ಎಂದು ಸಂತ್ರಸ್ತ ಕುಟುಂಬದವರು ಹೇಳಿಕೊಂಡಿದ್ದಾರೆ. ಈ ಬಗ್ಗೆ ಕೆ.ಪಿ.ಸಿ. ಅಧಿಕಾರಿಗಳನ್ನು ಸಂದರ್ಶಿಸಿದಾಗ ನಾವು ಒಂದೇ ಸಲ ಅಣೆಕಟ್ಟು ಕಟ್ಟಿದ್ದೇವೆ, ಅದರಲ್ಲೇನೂ ಹಂತಗಳು ಇಲ್ಲ. ರಾಮನಗರದಲ್ಲಿ ಬೇಕಾದಷ್ಟು ಸೌಲಭ್ಯ ನೀಡಿದ್ದೇವೆ. ಜೋಯಿಡಾ ಟೌನ್‌ಶಿಪ್ ದು:ಸ್ಥಿತಿ ಮತ್ತು ಸಂತ್ರಸ್ತರ ಕುರಿತು ಪ್ರಶ್ನಿಸಿದಾಗ ನಮ್ಮ ಯೋಜನೆಯಡಿಯಲ್ಲಿ ರಾಮನಗರ ಟೌನ್‌ಶಿಪ್ ಮಾತ್ರ. ಜೋಯಿಡಾದ್ದು ನಮಗೆ ಸಂಬಂಧ ಇಲ್ಲ, ಅಲ್ಲಿ ಯಾರಿಗೂ ಪುನರ್ವಸತಿ ಕಲ್ಪಿಸಿಲ್ಲ ಎಂದು ಪ್ರತಿಕ್ರಿಯಿಸಿರುತ್ತಾರೆ.

ಯೋಜನೆಯವರು ಹೇಳಿಕೊಳ್ಳೋದಕ್ಕೆ ಹಾಗೂ ಅಂಕಿ ಅಂಶಗಳನ್ನು ತೋರಿಸುವುದಕ್ಕಾಗಿ ಪ್ರಥಮ ಉಪಹಂತದಲ್ಲಿ ಒಂದಿಷ್ಟು ಕೆಲಸ ಕಾರ್ಯಗಳನ್ನು ಮಾಡಿ ಉಳಿದ ಇನ್ನೆರಡು ಉಪ ಹಂತಗಳಲ್ಲಿ ಮುಳುಗಡೆಗೊಳಗಾದವರಿಗೆ ಸರಿಯಾಗಿ ಪುನರ್ವಸತಿ ಸೌಲಭ್ಯ ನೀಡಲಿಲ್ಲ ಎಂಬುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

೩.೧.೪.೮. ಪರಿಹಾರ ಧನ ಪಡೆಯುವಲ್ಲಿ ಎದುರಾದ ತೊಂದರೆಗಳು

ಸಂತ್ರಸ್ತ ಕುಣಬಿಯರಿಗೆ ಪರಿಹಾರ ಧನವನ್ನು ಪಡೆದುಕೊಳ್ಳಲು ಸಾಕಷ್ಟು ತೊಂದರೆಗಳು ಎದುರಾಗಿವೆ. ಪರಿಹಾರ ಧನವನ್ನು ಕುಟುಂಬದ ಮುಖ್ಯಸ್ಥರ ಹೆಸರಿನ ಖಾತೆಗೆ ಜಮಾಯಿಸದೇ ವಿಶೇಷ ಭೂಸ್ವಾಧೀನಾಧಿಕಾರಿಯವರ ಖಾತೆಗೆ ಜಮಾ ಮಾಡಿದ್ದರು. ಇಂತಹ ಅವ್ಯವಸ್ಥೆಗೆ ಬೇಸತ್ತ ಸಂತ್ರಸ್ತರು ಕೋರ್ಟ್ ಮೆಟ್ಟಿಲೇರಿದರು. ಈ ಸಂದರ್ಭದಲ್ಲಿ ಭಾಷೆ ದೊಡ್ಡ ತೊಡಕಾಗಿತ್ತು ಎಂದು ಹೆಚ್ಚಿನವರು ಅಭಿಪ್ರಾಯಪಟ್ಟಿದ್ದಾರೆ. ಕೋರ್ಟ್‌ನಲ್ಲಿ ವಾದ ಮಾಡಲಿಕ್ಕೆ ಅವರಿವರ ಸಹಾಯ ಪಡೆದುಕೊಳ್ಳಲು ಕನ್ನಡ ಬರುತ್ತಿರಲಿಲ್ಲ. ಸಂತ್ರಸ್ತರೆಲ್ಲಾ ಅವಿದ್ಯಾವಂತರಾಗಿದ್ದದ್ದು ಕೂಡಾ ನೆರವನ್ನು ಪಡೆಯಲು, ಹೆಚ್ಚಿಗೆ ಹೋರಾಡಲು ತೊಡಕಾಯಿತು. ಯೋಗ್ಯ ಪರಿಹಾರಕ್ಕಾಗಿ ಹೋರಾಡಲು ಇವರಲ್ಲಿ ಯಾರಿಗೂ ಮುಂದಾಳತ್ವ ಇರಲಿಲ್ಲ. ಪರಿಹಾರದಲ್ಲಿ ಶೇಕಡಾ ೨೫ ರಷ್ಟು ವಕೀಲರಿಗೆ ನೀಡಬೇಕಾದ್ದರಿಂದ ಬಂದದ್ದೆಲ್ಲಾ ಖರ್ಚಿಗೆ ಸರಿಯಾಗುತ್ತದೆ ಎಂಬ ಕಾರಣಕ್ಕೆ ಹೆಚ್ಚಿನ ಹೋರಾಟ ಮಾಡಲಿಲ್ಲ. ಕೋರ್ಟ್‌ಗಾಗಿ ಕಾರವಾರಕ್ಕೆ ತೆರಳಬೇಕಾಗಿತ್ತು. ಆದರೆ ಸರಿಯಾದ ಸಾರಿಗೆ ವ್ಯವಸ್ಥೆಯಿರಲಿಲ್ಲ, ಹಣಕಾಸಿನ ಸಮಸ್ಯೆ ಇತ್ತು. ಅವಿಭಕ್ತ ಕುಟುಂಬದಲ್ಲಿದ್ದ ಕಾರಣ ಪರಿಹಾರ ಕೇವಲ ಯಜಮಾನನ ಹೆಸರಿಗೆ ದೊರಕಿತ್ತು. ಉಳಿದವರಿಗೆ ಪರಿಹಾರ ಸಿಗಲಿಲ್ಲ ಎಂದು ಶೇಕಡಾ ೩೭ ರಷ್ಟು ಕುಟುಂಬದವರು ಹೇಳಿಕೊಂಡಿದ್ದಾರೆ. ಯಾರು ಶಕ್ತರಿದ್ದರೋ ಅವರೆಲ್ಲಾ ಸಾಕಷ್ಟು ಹೋರಾಟ ಮಾಡಿ

ಪರಿಹಾರವನ್ನು ಪಡೆದುಕೊಂಡರು. ಆದರೆ ಕುಣಬಿ ಜನ ಅನಕ್ಷರಸ್ಥರು ಇದ್ದ ಕಾರಣ ಬಹಳ ಕಡಿಮೆ ಪರಿಹಾರ ದೊರೆತಿದೆ ಎಂದಿದ್ದಾರೆ. ಬ್ರಾಹ್ಮಣ ಸಮುದಾಯದವರೆಲ್ಲಾ ಸಾಕಷ್ಟು ಪರಿಹಾರವನ್ನು ಪಡೆದುಕೊಂಡಿದ್ದಾರೆ ಎಂಬ ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಕೆ.ಪಿ.ಸಿ. ಅಧಿಕಾರಿಗಳಲ್ಲಿ ಪ್ರಶ್ನಿಸಿದಾಗ ಯಾರು ಶಕ್ತರೋ ಅವರು ಹೆಚ್ಚು ಪಡೆದುಕೊಂಡರು. ಯಾರಿಗೆ ಆ ಶಕ್ತಿಯಿಲ್ಲವೋ ಅವರು ಕೊಟ್ಟಿದ್ದನ್ನು ತೆಗೆದುಕೊಂಡರು. ಬೇಕಾದರೆ ಕೋರ್ಟಿಗೆ ಹಾಕಲಿ, ಪರಿಹಾರ ತೆಗೆದುಕೊಳ್ಳಲಿ. ಇದು ಸರ್ಕಾರದ ಹಣ ಕೊಡಿ ಎಂದರೆ ಕೊಡುತ್ತೇವೆ ಬೇಡ ಅಂದರೆ ಬಿಡುತ್ತೇವೆ, ನಮ್ಮದೇನೂ ಇಲ್ಲ ಎಂಬ ಪ್ರತಿಕ್ರಿಯೆ ನೀಡಿದ್ದಾರೆ.

ಈ ಎಲ್ಲಾ ಮಾಹಿತಿಗಳಿಂದ ತಿಳಿದುಬರುವುದೇನೆಂದರೆ ಕೆ.ಪಿ.ಸಿ. ಎಲ್ಲರಿಗೂ ಒಂದೇ ಮಾನದಂಡದಲ್ಲಿ ಪರಿಹಾರ ನೀಡಿಲ್ಲ. ಸಂತ್ರಸ್ತರಿಗೆ ಯೋಗ್ಯ ಪರಿಹಾರ ಸಿಗಲಿಲ್ಲ ಮತ್ತು ಸಿಕ್ಕಂತಹ ಹಣ ಕೂಡಾ ನೆಮ್ಮದಿಯಾಗಿ ಸಿಗಲಿಲ್ಲ. ಅದು ಅವರಿಗೆ ದಕ್ಕಲಿಲ್ಲ. ಯಾರಿಗೆ ಕನ್ನಡ ಭಾಷಾ ಜ್ಞಾನ, ಹೋರಾಟ ಮಾಡುವ ಶಕ್ತಿ ಇತ್ತೋ ಅವರಿಗೆ ಯೋಗ್ಯ ಪರಿಹಾರ ದೊರೆತಿರುವ ಅಂಶ ವ್ಯಕ್ತವಾಗಿದೆ.

೩.೧.೪.೯. ಪಡೆದ ಪರಿಹಾರ ಹಾಗೂ ಮಾರುಕಟ್ಟೆ ಮೌಲ್ಯಕ್ಕೆ ಹೊಂದಿಕೆ

ಸಂತ್ರಸ್ತರ ಮನೆ, ಮರ, ಗಿಡ ಹಾಗೂ ಇತರೇ ಆಸ್ತಿ ನಷ್ಟಕ್ಕೆ ಕೆ.ಪಿ.ಸಿ. ಪರಿಹಾರವಾಗಿ ನೀಡಿರುವ ಹಣ ಆಗಿನ ಮಾರುಕಟ್ಟೆ ಮೌಲ್ಯಕ್ಕೆ ಸಮನಾಗಿದೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಶೇಕಡಾ ೮೬ರಷ್ಟು ಕುಟುಂಬಗಳು ಮಾರುಕಟ್ಟೆ ಬೆಲೆಗೆ ಸರಿಯಾಗಿ ಪರಿಹಾರ ದೊರೆತಿಲ್ಲ ಎಂದಿದ್ದಾರೆ. ಶೇಕಡಾ ೧೪ರಷ್ಟು ಅದೆಲ್ಲಾ ನಮಗೆ ಗೊತ್ತಾಗುವುದಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಹೊರಗಿನ ಪ್ರಪಂಚದ ಬಗ್ಗೆ ಜ್ಞಾನ ಇದ್ದವರು, ಹೋರಾಟ ಮಾಡಲು ಶಕ್ತಿ ಇದ್ದವರು ಬೇಕಾದಷ್ಟು ಪರಿಹಾರ ತೆಗೆದುಕೊಂಡರು, ಆ ಸಾಮರ್ಥ್ಯ ಇಲ್ಲದವರು ಕೆ.ಪಿ.ಸಿ. ನೀಡಿದ್ದನ್ನು ತೆಗೆದುಕೊಂಡು ನಷ್ಟ ಅನುಭವಿಸಿದರು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಆದರೆ ಸಂತ್ರಸ್ತರ ಭೂಮಿಗೆ, ಅವರ ನಷ್ಟಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಕೇವಲ ಒಮ್ಮೆ ನೀಡುವ ಪರಿಹಾರ ಅವರ ಜೀವನವನ್ನು ಸರಿಪಡಿಸುವುದಿಲ್ಲ. ಅವರ ಭೂಮಿ ತಲೆತಲಾಂತರಕ್ಕೆ ವರ್ಗಾವಣೆಯಾಗುತ್ತದೆ. ಆದ್ದರಿಂದ ಕೆ.ಪಿ.ಸಿ. ನೀಡಿದ ಪರಿಹಾರ, ಸಣ್ಣ ನಿವೇಶನ, ನೀರಿಲ್ಲದ ಫಲವತ್ತತೆಯಿಲ್ಲದ ಕೃಷಿ ಜಮೀನು ಅವರ ನಷ್ಟಕ್ಕೆ ಯೋಗ್ಯ ಪರಿಹಾರ ಅಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

೩.೧.೪.೧೦. ಪರಿಹಾರ ಧನವನ್ನು ವ್ಯಯಿಸಿದ ಉದ್ದೇಶಗಳು

ಪರಿಹಾರವಾಗಿ ದೊರೆತ ಹಣವನ್ನು ಕುಣಬಿಯರು ಯಾವ ಯಾವ ಉದ್ದೇಶಗಳಿಗಾಗಿ ವ್ಯಯಿಸಿರುತ್ತಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ: ೩.೧೦. ಪರಿಹಾರ ಧನವನ್ನು ವ್ಯಯಿಸಿದ ಉದ್ದೇಶಗಳ ವರ್ಗೀಕರಣ

ಕ್ರ.ಸಂ.	ಉದ್ದೇಶ	ಒಟ್ಟು	ಪ್ರತಿಶತ
೧	ಮನೆ ಕಟ್ಟಿಕೊಳ್ಳಲು	೧೦೭	೮೪.೦೬
೨	ದೈನಂದಿನ ವೆಚ್ಚಕ್ಕೆ	೧೦೦	೭೯.೬೫
೩	ಮದುವೆಗೆ	೨೫	೧೯.೧೨
೪	ಸ್ವಂತ ಹೊಲ ಖರೀದಿ ಮಾಡಲು	೧೧	೮.೧೫
೫	ಔಷಧೋಪಚಾರಕ್ಕೆ	೫೭	೪೫.೩೮
೬	ಕೃಷಿ ಭೂಮಿಯನ್ನು ವ್ಯವಸಾಯ ಯೋಗ್ಯವನ್ನಾಗಿಸಲು	೧೩	೧೦.೭೪
೭	ಮನೆಗೆ ಅಗತ್ಯ ವಸ್ತುಗಳನ್ನು ಖರೀದಿಸಲು	೨೨	೧೭.೦೩
೮	ದುಂದುವೆಚ್ಚ	೨	೧.೭೩
೯	ಪಾಲು ಮಾಡಿಕೊಂಡರು	೪೯	೩೮.೮೮
೧೦	ಕೃಷಿಗೆ ನೀರಾವರಿ ಸೌಲಭ್ಯ	೯	೭.೮೫

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ಸಂಖ್ಯೆ ೩.೧೦ರ ಮಾಹಿತಿಯಂತೆ ಹೆಚ್ಚಿನ ಕುಟುಂಬಗಳು ದೈನಂದಿನ ವೆಚ್ಚದ ಜೊತೆಗೆ ಮನೆ ಕಟ್ಟಿಕೊಳ್ಳಲು ಹಣ ಬಳಸಿಕೊಂಡಿದ್ದಾರೆ. ಶೇಕಡಾ ೮ರಷ್ಟು ಕುಟುಂಬದವರು ಸ್ವಂತ ಹೊಲ ಖರೀದಿ ಮತ್ತು ಕೃಷಿಗೆ ನೀರಾವರಿ ಸೌಲಭ್ಯ ಮಾಡಿಕೊಂಡಿದ್ದಾರೆ. ಇನ್ನುಳಿದಂತೆ ಔಷಧೋಪಚಾರಕ್ಕೆ, ಕೃಷಿ ಭೂಮಿಯನ್ನು ವ್ಯವಸಾಯ ಯೋಗ್ಯವನ್ನಾಗಿಸಲು, ಮನೆಗೆ ಅಗತ್ಯ ವಸ್ತುಗಳನ್ನು ಖರೀದಿಸಲು, ಮದುವೆಗೆ ವ್ಯಯಿಸಿದ್ದಾರೆ.

ಈ ಮೇಲಿನ ಮಾಹಿತಿಗಳನ್ನು ಗಮನಿಸಿದಾಗ ಕುಣಬಿಯರು ಹಣವನ್ನು ಸಾಧ್ಯವಾದಷ್ಟು ಸದುಪಯೋಗಪಡಿಸಿಕೊಂಡಿರುವುದು ಕಂಡುಬರುತ್ತದೆ. ಆದರೆ ಹಣ ತುಂಬಾ ಕಡಿಮೆ ಸಿಕ್ಕಿದೆ. ಯಾವುದೇ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬ ಅಭಿಪ್ರಾಯ ಅಧ್ಯಯನದ ಸಮಯದಲ್ಲಿ ವ್ಯಕ್ತವಾಗಿದೆ.

೩.೧.೪.೧೧. ಪರಿಹಾರ ಸಿಗಲು ಬಾಕಿಯಿರುವ ಮಾಹಿತಿ

ಶೇಕಡಾ ೮ ರಷ್ಟು ಕುಟುಂಬದವರು ಪರಿಹಾರ ಸಿಗಲಿಲ್ಲ, ಕೋರ್ಟ್‌ನಲ್ಲಿ ವ್ಯಾಜ್ಯೆ ಇದೆ ಎಂದು ಪ್ರತಿಕ್ರಿಯಿಸಿದ್ದಾರೆ. ಪ್ರತಿಶತ ೮ರಷ್ಟು ಕುಟುಂಬದವರು ಪರಿಹಾರ ಬಾಕಿಯಿಲ್ಲ ಎಂದಿದ್ದಾರೆ. ಯಾರಿಗೆ ಆಸ್ತಿ ಇರಲಿಲ್ಲವೋ ಅವರು ದೊರೆತ ಪರಿಹಾರಕ್ಕೆ ಸಂತುಷ್ಟರಾಗಿದ್ದಾರೆ. ಶೇಕಡಾ ೯ರಷ್ಟು ಕುಟುಂಬದವರು ಗೊತ್ತಿಲ್ಲ ಎಂದಿದ್ದಾರೆ. ವಿದ್ಯಾಭ್ಯಾಸವಿಲ್ಲದ, ಮಾಹಿತಿಯಿಲ್ಲದ ಕುಟುಂಬದವರು ಈ ರೀತಿಯಾಗಿ ಉತ್ತರಿಸಿರುತ್ತಾರೆ. ಶೇಕಡಾ ೭೫ರಷ್ಟು ಕುಟುಂಬದವರು ಆಗ ಸಿಕ್ಕ ಪರಿಹಾರ ಸಾಕಾಗಲಿಲ್ಲ. ಈಗೆಲ್ಲಾ

ಭೂಮಿಗೆ ತುಂಬಾ ಬೆಲೆಯಿದೆ. ಈಗ ಆ ಜಮೀನು ಇದ್ದಿದ್ದರೆ ರಾಜರ ತರಹ ಬದುಕಬಹುದಿತ್ತು. ಕೆ.ಪಿ.ಸಿ.ಗೆ ಪ್ರತೀ ವರ್ಷವೂ ಕೋಟಿಗಟ್ಟಲೆ ಲಾಭ ಬರುತ್ತಿದೆ. ಆದ್ದರಿಂದ ಸಂತ್ರಸ್ತರಿಗೆ ಇನ್ನೂ ಪರಿಹಾರ ಕೊಡಬೇಕು ಎಂಬ ಬೇಡಿಕೆಯನ್ನು ಇಟ್ಟಿದ್ದಾರೆ.

ಇದರಿಂದ ಕಂಡು ಬರುವುದೇನೆಂದರೆ ಪರಿಹಾರ ಎಂಬುದು ಕೇವಲ ಒಮ್ಮೆ ಕೊಟ್ಟು ಬಿಡುವುದಲ್ಲ. ಸಂತ್ರಸ್ತರಿಗೆ ಯೋಜನೆಯಿಂದ ನಿರಂತರ ಸದುಪಯೋಗವಾಗುತ್ತಿರಬೇಕು. ಭೂಮಿಯ ಮೌಲ್ಯ ಎಂದಿಗೂ ಹೆಚ್ಚುತ್ತಿರುತ್ತದೆ. ಹಾಗೆಯೇ ಕಳೆದುಕೊಂಡವರ ನಷ್ಟ ಕೂಡಾ ಹೆಚ್ಚಾಗುತ್ತದೆ. ಸಂತ್ರಸ್ತರಿಗಾಗುವ ಭೂಮಿಯ ನಷ್ಟ ಅವರ ಜೀವನ ನಷ್ಟ. ಆದ್ದರಿಂದ ಪರಿಹಾರ ದೀರ್ಘಕಾಲೀನ ಆಗಿರಬೇಕು.

ಹೀಗೆ ಸಂತ್ರಸ್ತ ಕುಣಬಿಯರ ಪುನರ್ವಸತಿ ಕೇಂದ್ರದಲ್ಲಿನ ಆರಂಭಿಕ ಬದುಕನ್ನು ಪರಾಮರ್ಶಿಸಿದಾಗ ಸಾಕಷ್ಟು ಮಾನಸಿಕ ವೇದನೆ ಮತ್ತು ಕಷ್ಟಗಳನ್ನು ಅನುಭವಿಸಿರುವುದು ಕಂಡುಬಂದಿದೆ. ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರವಾದಾಗ ಅಲ್ಲಿ ಜೀವನಕ್ಕೆ ಪೂರಕವಾಗಿರುವ ಯಾವುದೇ ರೀತಿಯ ಸಮರ್ಪಕ ಸೌಲಭ್ಯಗಳಿಲ್ಲದೇ ಸಾಕಷ್ಟು ಪರದಾಡುವಂತಾಗಿದೆ. ಕೆ.ಪಿ.ಸಿ. ನೀಡಿದ್ದ ಆಶ್ವಾಸನೆ ಪ್ರಕಾರ ಇವರಿಗೆ ಪರಿಹಾರ ದೊರೆತಿರುವುದಿಲ್ಲ. ದೊರೆತ ಪರಿಹಾರ ಕೂಡಾ ಅಸಮರ್ಪಕವಾಗಿದ್ದು ಇದನ್ನು ಪಡೆದುಕೊಳ್ಳಲು ಅನಾವಶ್ಯಕ ಶ್ರಮ ಪಡಬೇಕಾಯಿತು ಮತ್ತು ತುಂಬಾ ಕಳೆದುಕೊಳ್ಳಬೇಕಾಯಿತು. ಕೆಲವರಿಗೆ ಪ್ರಸ್ತುತದವರೆಗೂ ಪರಿಹಾರ ದೊರೆತಿಲ್ಲ. ಸಂತ್ರಸ್ತರಿಗೆ ದೊರೆತ ಪರಿಹಾರ ಅವರು ತಮ್ಮ ಜೀವನವನ್ನು ಸಮರ್ಪಕವಾಗಿ ಮತ್ತೆ ಕಟ್ಟಿಕೊಳ್ಳಲು ಸಾಕಾಗಲಿಲ್ಲ. ಸ್ಥಳಾಂತರದಿಂದಾಗಿ ಇವರ ಬದುಕು ಮತ್ತು ಸಂಪತ್ತು ಸಾಕಷ್ಟು ಹಾನಿಗೊಳಬೇಕಾಯಿತು ಎಂಬ ಅಂಶಗಳನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫. ಸಂತ್ರಸ್ತ ಕುಣಬಿಯರ ಪ್ರಸ್ತುತದ ಪರಿಸ್ಥಿತಿ

ಸೂಪಾ ಜಲಾಶಯದ ಸಂತ್ರಸ್ತರ ಪುನರ್ವಸತಿ ಕೇಂದ್ರಗಳಾದ ರಾಮನಗರ ಮತ್ತು ಜೋಯಿಡಾ ಟೌನ್‌ಶಿಪ್‌ಗಳಲ್ಲಿ ಮಾತ್ರಾ ಕುಣಬಿಯರು ವಾಸವಿದ್ದು ಅವರ ಪ್ರಸ್ತುತ ಪರಿಸ್ಥಿತಿ ಹೇಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೩.೧.೫.೧. ಕುಣಬಿಯರು ಪುನರ್ವಸತಿ ಕೇಂದ್ರದಲ್ಲಿ ವಾಸವಿರುವ ಪ್ರದೇಶಗಳು

ಸಂತ್ರಸ್ತ ಕುಣಬಿಯರು ಪುನರ್ವಸತಿ ಕೇಂದ್ರದಲ್ಲಿ ಎಲ್ಲೆಲ್ಲಿ ವಾಸವಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೧೧. ಕುಣಬಿಯರು ಪುನರ್ವಸತಿ ಕೇಂದ್ರದಲ್ಲಿ ವಾಸವಿರುವ ಪ್ರದೇಶಗಳ ವರ್ಗೀಕರಣ

ಕ್ರ.ಸಂ	ಗಲ್ಲಿಯ ಹೆಸರು	ಒಟ್ಟು ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಗಣೇಶ ಗಲ್ಲಿ	೧೫	೧೧.೯೦
೨	ಸಾಯಿಗಲ್ಲಿ	೧೬	೧೨.೭೦
೩	ನಾಗನಾಥ ಗಲ್ಲಿ	೬	೪.೭೬
೪	ಸರಸ್ವತಿ ಗಲ್ಲಿ	೮	೬.೩೫
೫	ಆನಂದೇಶ್ವರಿಗಲ್ಲಿ	೫	೩.೯೬
೬	ಹನುಮಾನ್ ಗಲ್ಲಿ	೨೬	೨೦.೬೩
೭	ಅಣ್ಣಾ ಹಜಾರೆ ಗಲ್ಲಿ	೪	೩.೧೭
೮	ಗೌಳಾದೇವಿ ಗಲ್ಲಿ	೫	೩.೯೬
೯	ದುರ್ಗಾ ಗಲ್ಲಿ	೧	೦.೮೦
೧೦	ಲಕ್ಷ್ಮೀ ಗಲ್ಲಿ	೭	೫.೫೬
೧೧	ಸಿದ್ಧೇಶ್ವರ ಗಲ್ಲಿ	೫	೩.೯೬
೧೨	ಮೈನ್ ಮಾರ್ಕೆಟ್	೧	೦.೮೦
೧೩	ರಾಮಲಿಂಗ ಗಲ್ಲಿ	೮	೬.೩೫
೧೪	ಕಾನ್‌ಕೋನ್‌ಕರ್ ಗಲ್ಲಿ	೩	೨.೩೯
೧೫	ಕೃಷ್ಣಾಗಲ್ಲಿ	೪	೩.೧೭
೧೬	ಬಾಳ್ ಕೃಷ್ಣಾಗಲ್ಲಿ	೭	೫.೫೬
೧೭	ಜಿ.ಪ.ಕಾಲೋನಿ	೨	೧.೫೯
೧೮	ಜೋಯಿಡಾ ಟೌನ್‌ಶಿಪ್	೩	೨.೩೯
ಒಟ್ಟು		೧೨೬	೧೦೦

ಆಧಾರ: ಕ್ಷೇತ್ರಕಾರ್ಯ

ಕೆ.ಪಿ.ಸಿ. ಗುರುತಿಸಿದ ರಾಮನಗರ ಟೌನ್‌ಶಿಪ್, ಜೋಯಿಡಾ ಟೌನ್‌ಶಿಪ್ ಮತ್ತು ಕ್ಯಾಸೆಲ್‌ರಾಕ್ ಟೌನ್‌ಶಿಪ್ ಎಂಬ ಪುನರ್ವಸತಿ ಕೇಂದ್ರಗಳಲ್ಲಿ ರಾಮನಗರ ಟೌನ್‌ಶಿಪ್ ಮತ್ತು ಜೋಯಿಡಾ ಟೌನ್‌ಶಿಪ್‌ಗಳಿಗೆ ಕುಣಬಿಯರ ಹಂಚಿಕೆಯಾಗಿರುತ್ತದೆ. ಕೋಷ್ಟಕ ಸಂಖ್ಯೆ ೩.೧೧ರ ಮಾಹಿತಿಯಂತೆ ಅಲ್ಲಿ ಕುಣಬಿಯರು ವಿವಿದೆಡೆ ವಾಸವಿದ್ದಾರೆ. ಇಲ್ಲಿನ ವಾಸಿಗಳು ಅವರವರ ಗಲ್ಲಿಗೆ ತಮಗೆ ಬೇಕಾದ ಹೆಸರನ್ನು ನೀಡಿರುತ್ತಾರೆ. ರಾಮನಗರದಲ್ಲಿನ ಎಲ್ಲಾ ಗಲ್ಲಿಗಳಲ್ಲಿ ಇತರ ಸಮುದಾಯಗಳೊಂದಿಗೆ ಕುಣಬಿಯರು ಹಂಚಿಕೆಯಾಗಿರುತ್ತಾರೆ. ಆದರೆ ಹನುಮಾನ್‌ಗಲ್ಲಿ, ಸಾಯಿಗಲ್ಲಿ ಮತ್ತು ಗಣೇಶಗಲ್ಲಿಯಲ್ಲಿ ಹೆಚ್ಚಿನ ಕುಣಬಿಯರು ವಾಸವಿದ್ದಾರೆ.

ಸ್ಥಳಾಂತರ ಪೂರ್ವದಲ್ಲಿ ಇವರು ತಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದ್ದರು. ಈಗ ಇಲ್ಲಿ ಇತರರ ಜೊತೆಗೆ ಬೆರೆಯಲಾರದೇ ಒಬ್ಬಂಟಿ ಕುಟುಂಬದ ತರಹ ಬದುಕುತ್ತಿದ್ದಾರೆ. ಚದುರಿದ ರೀತಿಯಲ್ಲಿ ನಿವೇಶನ ಹಂಚಿದ ಕಾರಣ ಅವರ

ಸಮುದಾಯದ ಜೊತೆಗೆ ಸಾಮರಸ್ಯ, ಅನ್ಯೋನ್ಯ ಸಂಬಂಧ, ಸಹಬಾಳ್ವೆಯನ್ನು ಕಡಿದು ಹಾಕಿದಂತಾಗಿದೆ. ಅವರು ಒಬ್ಬರಿಗೊಬ್ಬರು ಬೆರೆಯದಂತಾಗಿದ್ದಾರೆ. ಪುನರ್ವಸತಿ ಕೇಂದ್ರ ವಿಸ್ತಾರವಾಗಿದ್ದ ಕಾರಣ ಮಹಿಳೆಯರು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆರಳುವುದಿಲ್ಲ. ಆದ್ದರಿಂದ ಇವರ ಸಂಪರ್ಕ ಇತರರ ಜೊತೆಗೆ ಬೆರೆಯಲಿಲ್ಲ. ಕುಣಬಿಯರೇ ಹೇಳುವಂತೆ ರಾಮನಗರದಲ್ಲಿ ಅವರ ಸಮುದಾಯದವರು ಎಷ್ಟಿದ್ದಾರೆ, ಎಲ್ಲೆಲ್ಲಿ ಅವರ ಮನೆಗಳಿವೆ ಎಂಬುದು ಅವರಿಗೆ ತಿಳಿದಿಲ್ಲ. ಅಷ್ಟರ ಮಟ್ಟಿಗೆ ಇವರು ಪುನರ್ವಸತಿ ಕೇಂದ್ರದಲ್ಲೆಲ್ಲಾ ಎಲ್ಲೆಂದರಲ್ಲಿ ಹಂಚಿ ಹೋಗಿದ್ದಾರೆ. ನಗರದಲ್ಲಿದ್ದಂತೆ ಪ್ರತಿಯೊಂದೂ ಮನೆಯ ಸುತ್ತಮುತ್ತ ಬೇರೆ ಬೇರೆ ಜಾತಿ ಸಮುದಾಯದ ಜನರು ವಾಸ ಮಾಡುವಂತಾಗಿದೆ.

ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ಅವರ ಪಾರಂಪರಿಕ ಬದುಕಿಗೆ ಅನುಗುಣವಾಗಿ ಮಾಡದೇ ಅವೈಜ್ಞಾನಿಕ ರೀತಿಯಲ್ಲಿ ಮಾಡಿರುತ್ತಾರೆ. ಅವರ ಹಿಂದಿನ ಬದುಕಿನ ಯಾವುದೇ ಅಂಶಗಳನ್ನು ಪರಿಗಣಿಸಿ ಅದಕ್ಕೆ ಇಲ್ಲಿ ಮಾನ್ಯತೆ ನೀಡಿರುವುದಿಲ್ಲ. ಅವರ ಸಾಮಾಜಿಕ, ಪ್ರಾಕೃತಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಗೆ ವಿರುದ್ಧವಾಗಿ ಹಾಗೂ ಅವರ ಜೀವನ, ಸ್ವಭಾವಕ್ಕೆ ಪೂರಕವಾಗದಂತೆ ಮನೆನಿವೇಶನ ಹಂಚಿಕೆ ಮಾಡಿರುತ್ತಾರೆ. ಇದರಿಂದಾಗಿ ಕುಣಬಿಯರ ನೆಲೆಗಳು ಎಲ್ಲಾ ಕಡೆ ಹಂಚಿ ಹೋಗಿವೆ. ಅವರು ಇತರೇ ಸಮುದಾಯದವರ ಜೊತೆಗೆ ಬೆರೆಯದಂತಾಗಿದ್ದಾರೆ ಎಂಬ ಗಂಭೀರ ವಿಷಯವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೨. ಮಾಹಿತಿದಾರರ ಉದ್ಯೋಗ ಮತ್ತು ಆದಾಯ

ಮಾಹಿತಿದಾರರ ಉದ್ಯೋಗ ಮತ್ತು ಆದಾಯ ಪ್ರಸ್ತುತ ಪರಿಸ್ಥಿತಿಯದ್ದು ಆದ ಕಾರಣ ಅದನ್ನು ಈ ವಿಭಾಗದಲ್ಲಿ ವಿಶ್ಲೇಷಿಸಲಾಗಿದೆ. ಆದರೆ ಸಂತ್ರಸ್ತರ ಸ್ಥಿತಿಗತಿಯ ಎಲ್ಲಾ ೪ ವಿಭಾಗಗಳಿಗೂ ಈ ಮಾಹಿತಿ ಅನ್ವಯವಾಗುತ್ತದೆ.

ಕೋಷ್ಟಕ ಸಂಖ್ಯೆ: ೩.೧೨. ಮಾಹಿತಿದಾರರ ಉದ್ಯೋಗ ಮತ್ತು ಆದಾಯದ ವರ್ಗೀಕರಣ

ಕ್ರ ಸ	ವೃತ್ತಿ	ವೈಯಕ್ತಿಕ ವಾರ್ಷಿಕ ಆದಾಯ (ಸಾವಿರಗಳಲ್ಲಿ)										ಒಟ್ಟು
		ಆದಾಯವಿಲ್ಲ		೧೦–೨೦		೨೧–೪೦		೪೧–೮೦		೮೧–೧೨೦		
		ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	
೧	ನಿರುದ್ಯೋಗ	೬೮	೫೩.೯೭	–	–	–	–	–	–	–	–	೬೮
೨	ಖೇಣಿಕೃಷಿ	–	–	೧	೦.೭೯	೧	೦.೭೯	೧	೦.೭೯	–	–	೩
೩	ಕೃಷಿಕೂಲಿ	–	–	೨೦	೧೫.೮೮	–	–	–	–	–	–	೨೦
೪	ಕೃಷಿಯೇತರ ಕೂಲಿ	–	–	೨೪	೧೯.೦೫	೬	೪.೭೬	–	–	–	–	೩೦
೫	ಡ್ರೈವರ್	–	–	೧	೦.೭೯	೧	೦.೭೯	–	–	–	–	೨
೬	ಕರಕುಶಲ	–	–	–	–	–	–	–	–	೧	೦.೭೯	೧
೭	ಸರ್ಕಾರಿ ನೌಕರಿ	–	–	–	–	–	–	–	–	–	–	–
೮	ಅರೆಸರ್ಕಾರಿ ನೌಕರಿ	–	–	–	–	೨	೧.೫೮	–	–	–	–	೨
ಒಟ್ಟು		೬೮	೫೩.೯೭	೪೬	೩೬.೫೧	೧೦	೭.೯೨	೧	೦.೭೯	೧	೦.೭೯	೧೨೬

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೧೨.ರಲ್ಲಿ ನೀಡಿರುವ ಮಾಹಿತಿಯಂತೆ ಶೇಕಡಾ ೫೩.೯೭ರಷ್ಟು ಮಾಹಿತಿದಾರರು ಯಾವುದೇ ರೀತಿಯ ಉದ್ಯೋಗ ಮಾಡುತ್ತಿಲ್ಲ. ಪ್ರತಿಶತ ೧೬.೬೭ರಷ್ಟು ಮಾಹಿತಿದಾರರು ಪಕ್ಕದ ಊರುಗಳಾದ ಅಂಬೇಲಿ, ಬೀರಂಪಲ್ಲಿಗಳಲ್ಲಿ ಖೇಣಿ ಕೃಷಿ, ಕೃಷಿಕೂಲಿ ಮಾಡುತ್ತಿದ್ದಾರೆ. ಇವರುಗಳ ವಾರ್ಷಿಕ ಆದಾಯ ೧೦ ಸಾವಿರದಿಂದ ೨೦ ಸಾವಿರದ ಮಧ್ಯೆ ಇರುತ್ತದೆ. ಶೇಕಡಾ ೧೯.೦೫ರಷ್ಟು ಮಾಹಿತಿದಾರರು ಕೃಷಿಯೇತರ ಕೂಲಿ ಮಾಡುತ್ತಿದ್ದು ಗೌಂಡಿ, ಮರಳು ತುಂಬುವುದು, ಬೇಲಿ ಕಟ್ಟುವುದು, ಮುಂತಾದ ಕೆಲಸಗಳಲ್ಲಿ ನಿರತರಾಗಿದ್ದಾರೆ.

ಸಂತ್ರಸ್ತರಲ್ಲಿ ಅರ್ಧಕ್ಕಿಂತ ಹೆಚ್ಚಿನ ಜನರು ನಿರುದ್ಯೋಗಿಗಳಾಗಿದ್ದಾರೆ. ಉಳಿದವರಿಗೆ ಕೂಡಾ ಕೆಲವು ದಿನವಷ್ಟೇ ಕೆಲಸ ದೊರೆಯುತ್ತಿದ್ದು ಸಂಬಳ ಆಕರ್ಷಕವಾಗಿಲ್ಲ ಎಂಬ ಅಂಶವು ಈ ಕೋಷ್ಟಕದಿಂದ ಅರಿಯಬಹುದಾಗಿದೆ.

೩.೧.೫.೩. ಸಂತ್ರಸ್ತರ ಸ್ವಂತ ಜಮೀನಿನ ಸದ್ಯದ ಪರಿಸ್ಥಿತಿ

ಕೆ.ಪಿ.ಸಿ. ಯಿಂದ ಪರಿಹಾರವಾಗಿ ೧೧೨ ಸಂತ್ರಸ್ತ ಕುಟುಂಬಗಳಿಗೆ ಜಮೀನು ದೊರೆತಿದ್ದು ಅದು ಈಗ ಏನಾಗಿದೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೧೩. ಸ್ವಂತ ಜಮೀನಿನ ಸದ್ಯದ ಪರಿಸ್ಥಿತಿಯ ವರ್ಗೀಕರಣ

ಸ್ವಂತ ಜಮೀನಿನ ಸ್ಥಿತಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಜಮೀನು ಇದೆ	೪೮	೪೨.೮೬
ಮಾರಲಾಗಿದೆ	೪೦	೩೫.೭೧
ಜಂಟಿ ಖಾತೆಯಲ್ಲಿದೆ	೧೦	೮.೯೩
ಯಜಮಾನ ನೀಡಲಿಲ್ಲ	೧೪	೧೨.೫

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೧೩ರ ಮಾಹಿತಿಯಂತೆ ಶೇಕಡಾ ೪೨.೮೬ರಷ್ಟು ಕುಟುಂಬಗಳ ಜಮೀನು ಅವರವರ ಹೆಸರಲ್ಲಿ ಇದೆ. ಪ್ರತಿಶತ ೩೫.೭೧ರಷ್ಟು ಕುಟುಂಬಗಳ ಜಮೀನು ಮಾರಾಟವಾಗಿದೆ. ಉಳಿದಂತೆ ಅಣ್ಣತಮ್ಮಂದಿರ ಹೆಸರಲ್ಲಿ ಜಂಟಿ ಖಾತೆಯಲ್ಲಿದೆ, ಕುಟುಂಬದ ಯಜಮಾನ ಜಮೀನು ನೀಡಲಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ಕಾಡನ್ನು ಕಡಿದು ಪುನರ್ವಸತಿ ಕೇಂದ್ರ ಮತ್ತು ಕೃಷಿ ಭೂಮಿ ತಯಾರಿ ಮಾಡಿದ ಪ್ರಾರಂಭದಲ್ಲಿ ಸಂತ್ರಸ್ತರು ಹೊಲವನ್ನೆಲ್ಲಾ ಪಾಳು ಬಿಟ್ಟಿದ್ದರಿಂದ ಮುಂದಿನ ದಿನದಲ್ಲಿ ಅದು ಉಳುಮೆಗೆ ಯೋಗ್ಯವಾಗಿರಲಿಲ್ಲ. ಜಮೀನು ಕುಟುಂಬದ ಯಜಮಾನನ ಹೆಸರಿಗೆ ಬಂದಿದ್ದು ಅದನ್ನು ಉಳಿಸಿಕೊಂಡರೆ ಕುಟುಂಬದವರಿಗೆ ಪಾಲುಮಾಡಿ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಮಾರಿಬಿಟ್ಟರು. ಹಣವನ್ನು ಸರಿಯಾಗಿ ಹಂಚಲಿಲ್ಲ. ಹೆಚ್ಚಿನ ಸಂದರ್ಭದಲ್ಲಿ ಯಜಮಾನನೇ ಬಳಸಿಕೊಂಡಿದ್ದಾನೆ ಎಂದು ಹೇಳಿಕೊಂಡಿದ್ದಾರೆ. ಇನ್ನೂ ಜಂಟಿ ಖಾತೆಯಲ್ಲಿರುವುದನ್ನು ತಮ್ಮ ಹೆಸರಿನ ಖಾತೆಗೆ ಮಾಡಿಕೊಳ್ಳಲು ಹಣದ ಕೊರತೆಯಿದೆ. ಮೋಜಣಿಯವರು ಲಂಚಕ್ಕಾಗಿ ಬೇಡಿಕೆಯಿಡುತ್ತಾರೆ ಹಾಗೂ ಎಷ್ಟೋ ಸಂದರ್ಭದಲ್ಲಿ ಒಂದಿಷ್ಟು ಹಣ ಪಡೆದುಕೊಂಡು ಕೆಲಸ ಮಾಡಿಕೊಡಲಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ಭೂಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಕೆ.ಪಿ.ಸಿ.ಯವರು ಜಮೀನು ಮೋಜಣಿ ಮಾಡುವಾಗ ಕುಟುಂಬದ ಸದಸ್ಯರ ಸಂಖ್ಯೆ, ಪರಿಸ್ಥಿತಿ, ಜಮೀನಿನ ವಿವರವನ್ನು ಆಧುನೀಕರಣ ಮಾಡಿದ್ದರೆ ಸಿಗಬೇಕಾಗಿದ್ದ ಪರಿಹಾರ ಕುಟುಂಬದ ಎಲ್ಲರಿಗೂ ಸಿಗುತ್ತಿತ್ತು. ಸಂತ್ರಸ್ತರಿಗೆ ಪರಿಹಾರವಾಗಿ ನೀಡಿದ ಜಮೀನು ವಿವಿಧ ಕಾರಣಗಳಿಂದ ಸಂತ್ರಸ್ತರಿಗೆ ಪ್ರಯೋಜನಕಾರಿಯಾಗಲಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೪. ಜಮೀನನ್ನು ಹೊಂದಿರುವ ರೈತರು ಸಾಗುವಳಿ ಮಾಡುತ್ತಿರುವ ವಿವರ

ಇನ್ನೂ ಮಾರಾಟ ಮಾಡದೇ ಜಮೀನನ್ನು ಉಳಿಸಿಕೊಂಡವರು ಸಾಗುವಳಿ ಮಾಡುತ್ತಿದ್ದಾರೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೧೪. ಸಾಗುವಳಿ ಮಾಡುತ್ತಿರುವವರ ವರ್ಗೀಕರಣ

ಸಾಗುವಳಿ	ಒಟ್ಟು	ಪ್ರತಿಶತ
ಮಾಡುತ್ತಿದ್ದಾರೆ	೫೦	೬೯.೪೪
ಮಾಡುತ್ತಿಲ್ಲ	೨೪	೩೩.೩೩


ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೧೪.ರ ಮಾಹಿತಿಯ ಪ್ರಕಾರ ಜಮೀನು ಹೊಂದಿದವರಲ್ಲಿ ಶೇಕಡಾ ೬೯.೪೪ರಷ್ಟು ಕುಟುಂಬಗಳು ಆದಾಯ ಪಡೆಯುತ್ತಿದ್ದಾರೆ. ಸ್ಥಳಾಂತರವಾದಾಗ ಜಮೀನು ಪಡೆದುಕೊಂಡವರಲ್ಲಿ ಇದು ಶೇಕಡಾ ೪೪.೬೪ ಆಗುತ್ತದೆ. ಉಳಿದಂತೆ ಜಮೀನು ಪಾಳು ಬಿಟ್ಟಿದ್ದಾರೆ.

೩.೧.೫.೫. ಜಮೀನಿನಲ್ಲಿ ಬೆಳೆಯುತ್ತಿರುವ ಬೆಳೆಗಳ ವಿವರ

ಜಮೀನನ್ನು ಹೊಂದಿದವರು ಏನೇನು ಬೆಳೆ ಬೆಳೆಯುತ್ತಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ. ೩.೮. ಬೆಳೆಯುತ್ತಿರುವ ಬೆಳೆಗಳ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೮.ರಲ್ಲಿ ನೀಡಿರುವಂತೆ ಜಮೀನಿನಲ್ಲಿ ಬೆಳೆ ಇದೆ. ಸಿತಾವಾಡದಲ್ಲಿನ ಜಮೀನು ಸ್ವಲ್ಪ ಫಲವತ್ತತೆಯನ್ನು ಹೊಂದಿದೆ. ಭೂಮಿ ಸಮತಟ್ಟು ಇದೆ. ಆದ್ದರಿಂದ ಅಲ್ಲಿ ಜಮೀನನ್ನು ಹೊಂದಿದ ೮ ಕುಟುಂಬಗಳು ಮಾತ್ರ ೧/೪ ಎಕರೆ, ೧/೨ ಎಕರೆ ಭತ್ತ ಬೆಳೆಯುತ್ತಿದ್ದಾರೆ. ೨ ಕುಟುಂಬಗಳು ಒಂದು ಎಕರೆ, ಎರಡು ಎಕರೆ ಕಬ್ಬು ಬೆಳೆಯುತ್ತಿದ್ದಾರೆ. ೨ ಕುಟುಂಬಗಳು ೫ ಎಕರೆ ಭೂಮಿಯಲ್ಲಿ ಕಬ್ಬು ಬೆಳೆಯುತ್ತಿದ್ದಾರೆ. ೬ ಕುಟುಂಬಗಳು ಗೋಡಂಬಿ ಗಿಡಗಳನ್ನು ನೆಟ್ಟಿದ್ದು ಅದರ ಫಸಲನ್ನು ಹರಿಯುವುದಕ್ಕೆ ಹೋಗುವುದಿಲ್ಲ. ೩೪ ಕುಟುಂಬಗಳು ದಾಂಡೇಲಿ ವೆಸ್ಟ್‌ಕೋಸ್ಟ್ ಪೇಪರ್

ಮಿಲ್‌ಗೆ ನೀಲಗಿರಿ ನೆಡಲು ಭೋಗ್ಯಕ್ಕೆ (ಲೀಸ್) ಕೊಟ್ಟಿದ್ದಾರೆ. ಇಲ್ಲಿ ಕುಟುಂಬಗಳ ಸಂಖ್ಯೆ ಮಾತ್ರಾ ಒಂದಿಷ್ಟು ಇದ್ದು ಯಾರಿಗೂ ತೃಪ್ತಿಕರ ಫಸಲು ಮತ್ತು ಆದಾಯ ಬರುತ್ತಿಲ್ಲ.

ಒಟ್ಟಾರೆಯಾಗಿ ಹೇಳಬೇಕೆಂದರೆ ಕೆ.ಪಿ.ಸಿ. ಸಂತ್ರಸ್ತರಿಗಾಗಿ ನೀಡಿರುವ ಕಾಡು ಕಡಿದ ಜಮೀನು ಅವರಿಗೆ ಆದಾಯವನ್ನು ಕೊಡಲಿಲ್ಲ ಎಂಬ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೬. ಜಮೀನಿನಲ್ಲಿ ಆದಾಯ ಗಳಿಸಲು ಇರುವ ಸವಾಲುಗಳು

ಸಂತ್ರಸ್ತ ಕುಣಬಿಯರು ಕೆ.ಪಿ.ಸಿ.ಇಂದ ಪಡೆದುಕೊಂಡಿರುವ ಜಮೀನಿನಿಂದ ಲಾಭ ಪಡೆದುಕೊಳ್ಳಲು ಸಾಧ್ಯವಾಗದೇ ಇರುವುದಕ್ಕೆ ಕಾರಣಗಳನ್ನು ಅಧ್ಯಯನ ಮಾಡಲಾಗಿದೆ. ಮನೆಯಿಂದ ಜಮೀನು ದೂರ ಇರುವುದು, ಫಲವತ್ತತೆಯಿಲ್ಲ, ಭೂಮಿ ಸಮತಟ್ಟಾಗಿಲ್ಲ, ನೀರಾವರಿ ಸೌಲಭ್ಯವಿಲ್ಲ, ಜಮೀನಿಗೆ ರಸ್ತೆಯಿಲ್ಲ, ವಾಹನ ವ್ಯವಸ್ಥೆಯಿಲ್ಲ, ಕಾಡುಪ್ರಾಣಿಗಳ ಹಾವಳಿ, ಕಳ್ಳರ ಹಾವಳಿ, ಪಾಂಡರಿ ನದಿಯ ಮರಳು ಬೆಳೆಗಳ ಮೇಲೆ ರಾಶಿ ಬೀಳುವುದು, ಗಣಿಗಾರಿಕೆಯಿಂದ ಜಮೀನು ಹಾಳಾಗಿದೆ, ರೋಗಬಾಧೆ, ಜಂಟಿ ಖಾತೆಯಲ್ಲಿದೆ, ಇಲಾಖೆಗಳಿಂದ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಇಲ್ಲ, ಆಧುನಿಕ ತಂತ್ರಜ್ಞಾನದ ಸೌಲಭ್ಯ ಮತ್ತು ಮಾಹಿತಿ ಇಲ್ಲ, ಬ್ಯಾಂಕು ಸಾಲ ಸೌಲಭ್ಯವಿಲ್ಲ ಈ ಎಲ್ಲಾ ಕಾರಣಗಳಿಂದ ರೈತರು ತಮ್ಮ ಹೊಲದಲ್ಲಿ ವ್ಯವಸಾಯ ಮಾಡುತ್ತಿಲ್ಲ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

ಸಂತ್ರಸ್ತರ ಜಮೀನುಗಳೆಲ್ಲಾ ಹಾರ್ಲಿ, ಅಡಾಳಿ, ಅಕ್ರಾಳಿ, ಸಿತಾವಾಡ ಮಜಿರೆಗಳಲ್ಲಿ ಇರುವುದರಿಂದ ಇದು ಸಂತ್ರಸ್ತರ ವಾಸಸ್ಥಾನದಿಂದ ೧-೯ ಕಿ.ಮೀ. ದೂರದಲ್ಲಿದೆ. ಬೆಳೆ ಬೆಳೆಯಲು ಬೀಜ ಮತ್ತು ಔಷಧ ಸಾಗಾಣಿಕೆ ಮಾಡುವುದು, ಆಳು ಕರೆದುಕೊಂಡು ಹೋಗುವುದು, ನೀರು ಹಾಯಿಸುವುದು, ಕಾವಲು ಕಾಯುವುದು, ಬೆಳೆ ಕಟಾವು ಮಾಡುವುದು, ಮಾರಾಟಕ್ಕೆ ವ್ಯವಸ್ಥೆ ಎಲ್ಲವೂ ದುಬಾರಿಯಾಗುತ್ತದೆ. ಅಸಲು ಕೂಡಾ ದೊರೆಯುವುದಿಲ್ಲ. ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ಜಮೀನು ಮಧ್ಯದಲ್ಲೇ ಮನೆ ಮಾಡಿಕೊಂಡು ವಾಸವಿದ್ದರು. ಇಲ್ಲಿ ಮನೆಯೆಲ್ಲೋ ಜಮೀನು ಎಲ್ಲೋ ಎಂಬಂತಾಗಿದೆ. ಅಷ್ಟು ದೂರವಿರುವುದರಿಂದ ಜಮೀನಿಗೂ ಅವರಿಗೂ ಸಂಬಂಧವೇ ಇಲ್ಲದಂತಾಗಿದೆ.

ಕೆ.ಪಿ.ಸಿ ಪುನರ್ವಸತಿ ಕೇಂದ್ರವನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಸಂತ್ರಸ್ತರಾಗುವವರ ಸ್ಥಳಾಂತರಪೂರ್ವ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವರ ಜಮೀನು ಮತ್ತು ಅವರ ವಸತಿ ಪ್ರದೇಶಗಳನ್ನು ಒಂದೇ ಕಡೆಗೆ ಇರುವ ಹಾಗೆ ಮಾಡಬಹುದಿತ್ತು. ಮನೆ ನಿವೇಶನ ಮತ್ತು ಜಮೀನು ನಿರ್ಮಾಣಕ್ಕಾಗಿ ಕಾಡನ್ನು ಬಳಸಿದ್ದರಿಂದ ಇದು ಸಾಧ್ಯವಿತ್ತು. ಅಲ್ಲೇ ಪಾಂಡರಿ ನದಿ ಕೂಡಾ ಹರಿಯುತ್ತಿತ್ತು. ಸಂತ್ರಸ್ತರು ತಮ್ಮ ತಮ್ಮ ಸ್ವಂತ ಜಮೀನಿನಲ್ಲೇ ವಾಸವಿದ್ದು ಬೆಳೆ ಬೆಳೆದುಕೊಳ್ಳುತ್ತಿದ್ದರು. ಬೆಳೆಗಳನ್ನು ರಕ್ಷಿಸಿಕೊಳ್ಳುತ್ತಿದ್ದರು. ಅದಲ್ಲದೇ ಅವರಿಗೆ ಈಗ ಎದುರಾಗಿರುವ ವಸತಿ

ನಿವೇಶನ ಸಮಸ್ಯೆ ಕೂಡ ಇರುತ್ತಿರಲಿಲ್ಲ. ಎಲ್ಲರೂ ಸ್ವಚ್ಛಂದವಾಗಿ ಮನೆ ಮಾಡಿಕೊಂಡು, ಬೆಳೆ ಬೆಳೆದುಕೊಂಡು ಮೊದಲಿನ ಹಾಗೆ ಕಾಡಿನ ವಾಸ ಮಾಡುತ್ತಿದ್ದರು. ಈಗಿರುವ ರಾಮನಗರ ಪಟ್ಟಣ ಕೂಡಾ ವಿಸ್ತಾರವಾಗಿ ಬೆಳೆಯುತ್ತಿತ್ತು. ಕೆ.ಪಿ.ಸಿಯವರು ರೈತರ ಭೂಮಿ ಅಭಿವೃದ್ಧಿ, ಟೌನ್‌ಶಿಪ್ ಅಭಿವೃದ್ಧಿಗೆ ಹೆಚ್ಚು ಹಣ ಖರ್ಚಾಗುತ್ತದೆ ಎಂದು ಒಂದು ಕಡೆ ಸಂತ್ರಸ್ತರನ್ನು ರಾಶಿ ಹಾಕಿದರು. ಇನ್ನೊಂದು ಕಡೆ ಜಮೀನನ್ನು ನೀಡಿದರು. ಈಗ ಇವೆರಡೂ ಒಂದಕ್ಕೊಂದು ಸಂಬಂಧ ಇಲ್ಲದ ಹಾಗೆ ಇದೆ. ಈಗಲಾದರೂ ಸಂತ್ರಸ್ತ ಕುಟುಂಬಗಳು ಅವರ ಜಮೀನುಗಳಲ್ಲೇ ನೆಲೆ ನಿಂತು ವಾಸ ಮಾಡುವ ಮನಸ್ಸು ಮಾಡಿದರೆ ಪಶುಪಾಲನೆ, ಜೇನುಸಾಕಾಣಿಕೆ, ಮಾವು, ಹಲಸು, ಗೇರುಬೀಜ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆದುಕೊಂಡು ಸಮೃದ್ಧವಾಗಿ ಬದುಕಬಹುದು. ಮನೆ ಹಾಗೂ ಜಮೀನು ನಡುವೆ ತುಂಬಾ ಅಂತರವಿದ್ದು ಲಾಭದಾಯಕ ಬೆಳೆ ತೆಗೆಯಲು ಸಾಧ್ಯವಾಗದೇ ಇರುವ ಕಾರಣ ಸಂತ್ರಸ್ತರು ವ್ಯವಸಾಯ ಮಾಡುವುದಿಲ್ಲ ಎಂಬ ಅಂಶ ಅಧ್ಯಯನದಿಂದ ಕಂಡುಬಂದಿದೆ.

ಸಂತ್ರಸ್ತರಿಗೆ ನೀಡಿದ ಜಮೀನು ಕಪ್ಪು, ಕೆಂಪು ಮತ್ತು ಶೇಡಿ ಮಣ್ಣನ್ನು ಹೊಂದಿದೆ. ಹೆಚ್ಚಿನ ಕುಟುಂಬದವರ ಜಮೀನು ಕೆಂಪು ಮಣ್ಣು ಮತ್ತು ಬಿಳಿ (ಶೇಡಿ) ಮಣ್ಣನ್ನು ಹೊಂದಿದೆ. ಕಲ್ಲು ಭೂಮಿ, ಮರಳು ಭೂಮಿಯಾಗಿದೆ. ಇಳಿಜಾರು ಪ್ರದೇಶವಾಗಿದ್ದು ಶೇಕಡಾ ೨೯ರಷ್ಟು ಕುಟುಂಬಗಳ ಜಮೀನು ಸಮತಟ್ಟು ಭೂಮಿಯನ್ನು ಹೊಂದಿದೆ. ಬಿಳಿ, ಕರಲು ಮತ್ತು ಶೇಡಿ ಮಣ್ಣನ್ನು ಹೊಂದಿದ ಜಮೀನಿನಲ್ಲಿ ಫಸಲು ಬರಲಿಲ್ಲ. ಕಲ್ಲು ಭೂಮಿಯನ್ನು ಹೊಂದಿದ ಜಮೀನಿನಲ್ಲಿ ದೊಡ್ಡವು, ಸಣ್ಣವು ಕಲ್ಲುಬಂಡೆಗಳಿವೆ. ಕೆಂಪು ಹರಳು ಕಲ್ಲುಗಳು ಜಮೀನಿನ ತುಂಬಾ ಇವೆ. ಮಳೆಗಾಲದಲ್ಲಿ ಪಾಂಡರಿ ನದಿಯ ಮರಳು ಬಂದು ಫಸಲು ಮುಚ್ಚಿ ಮರಳು ಭೂಮಿಯಾಗುತ್ತದೆ. ಆ ಮರಳನ್ನು ತೆಗೆದು ಬೆಳೆ ಬೆಳೆಯಲು ಸಾಧ್ಯವಾಗುವುದಿಲ್ಲ, ಇಳಿಜಾರಿನಲ್ಲಿ ಭತ್ತ ಬೆಳೆಯಲು ಸಾಧ್ಯವಾಗುವುದಿಲ್ಲ. ಮೂಲತಃ ರೈತರಾಗಿದ್ದ ಸಂತ್ರಸ್ತರಿಗೆ ಯಾವ ರೀತಿಯ ಜಮೀನು ನೀಡಿದರೆ ಅವರು ವ್ಯವಸಾಯ ಮಾಡಬಹುದು ಎಂದು ಕೆ.ಪಿ.ಸಿ. ಮೊದಲೇ ಗಾಢವಾಗಿ ಆಲೋಚಿಸಬೇಕಿತ್ತು. ಎಲ್ಲವನ್ನೂ ಪೂರ್ವಯೋಜಿತವಾಗಿ ಆಲೋಚನೆ ಮಾಡಿ ಪುನರ್ವಸತಿ ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಹೆಚ್ಚಿನ ಸಂಖ್ಯೆಯ ಸಂತ್ರಸ್ತರ ಜಮೀನು ಇಳಿಜಾರು ಪ್ರದೇಶ, ಕಲ್ಲಭೂಮಿ, ಮರಳು ಭೂಮಿ ಮತ್ತು ಶೇಡಿ ಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಅನುಕೂಲಕರವಾಗಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

ಶೇಕಡಾ ೨ರಷ್ಟು ಕುಟುಂಬಗಳು ತಮ್ಮ ಜಮೀನಿಗೆ ತೆರೆದ ಬಾವಿಯ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿವೆ. ಬಾವಿ ತೋಡಿ ನಂತರ ಉಪಯೋಗಿಸದೇ ಖಾಲಿ ಬಿಟ್ಟಿದೆ. ಒಂದು ಕುಟುಂಬ ಕೊಳವೆ ಬಾವಿ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಬಾವಿ ತೋಡಿದಾಗ ಶೇಡಿ ಮಣ್ಣು ದೊರೆತಿದ್ದು ಅದು ಹಾಳಾಗದಿರಲು ಸಿಮೆಂಟು ರಿಂಗ್ ಹಾಕಬೇಕಾಗಿ ಬಂದ ಕಾರಣ ಹಣಕಾಸಿನ ಕೊರತೆಯಿಂದ ಅರ್ಧಕ್ಕೆ ಬಿಟ್ಟಿದ್ದಾರೆ. ನೀರು

ಆಳದಲ್ಲಿರುವುದರಿಂದ ನೀರೆತ್ತಲು ಪಂಪ್, ನೀರು ಹಾಯಿಸಲು ಪೈಪು ಎಲ್ಲಾ ದುಬಾರಿ ಆಗುತ್ತದೆ. ಎಲ್ಲಾ ಮಾಡಿದರೂ ಲಾಭಕ್ಕಿಂತ ಅಧಿಕ ಖರ್ಚಾಗುತ್ತದೆ ಎಂದು ವ್ಯವಸಾಯ ಮಾಡುವುದಿಲ್ಲ. ಕೆ.ಪಿ.ಸಿ.ಗೆ ಸೂಪಾ ಜಲಾಶಯದಿಂದ ನೀರಾವರಿ ಒದಗಿಸಲು ಸಾಧ್ಯವಾಗದಿದ್ದರೂ ಹತ್ತಿರದಲ್ಲೇ ಹರಿಯುವ ಪಾಂಡರಿ ನದಿಯಿಂದಾದರೂ ಕಾಲುವೆ ನೀರಾವರಿ ವ್ಯವಸ್ಥೆ ಮಾಡಿ ಕೊಟ್ಟಿದ್ದರೆ ರೈತರಿಗೆ ಅನುಕೂಲವಾಗುತ್ತಿತ್ತು. ರೈತರ ಜಮೀನಿನಲ್ಲಿ ನೀರಾವರಿ ವ್ಯವಸ್ಥೆ ಇಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಈ ಎಲ್ಲಾ ಮಾಹಿತಿಯಿಂದ ತಿಳಿದುಬರುವುದೆಂದರೆ ಸಂತ್ರಸ್ತರ ಕೃಷಿ ಬದುಕು, ಕೃಷಿ ವ್ಯವಸ್ಥೆ, ಉತ್ಪಾದನಾ ದಾರಿ ಸಂಪೂರ್ಣವಾಗಿ ನೆಲಕಚ್ಚಿದೆ. ರೈತರ ಜಮೀನು ಕಾಡಾಗಿದೆ. ಎಲ್ಲಾ ರೈತರು ತಮ್ಮ ಮೂಲ ಬದುಕಿನ ಉತ್ಪಾದನಾ ಮೂಲವನ್ನು ಕಳೆದುಕೊಂಡಿದ್ದಾರೆ. ಜಮೀನು ಇದ್ದರೂ ಸರಿಯಾದ ವ್ಯವಸ್ಥೆಯಿಲ್ಲದೇ, ಪ್ರೋತ್ಸಾಹ, ಆಧುನಿಕ ವಿಧಾನ, ಸೌಲಭ್ಯಗಳ ಮಾಹಿತಿಯಿಲ್ಲದೇ ರೈತರ ಉಪಯೋಗಕ್ಕೆ ಲಭ್ಯವಾಗಿಲ್ಲ.

೩.೧.೫.೭. ಜಮೀನನ್ನು ಸಾಗುವಳಿ ಮಾಡಲು ಅವಶ್ಯಕವಿರುವ ಸೌಲಭ್ಯಗಳು

ಜಮೀನನ್ನು ಉಳಿಸಿಕೊಂಡವರು ಸಾಗುವಳಿ ಮಾಡಿ ಬೆಳೆ ಬೆಳೆಯಲು ಕೆಲವು ಸೌಲಭ್ಯಗಳ ಬೇಡಿಕೆಯಿತ್ತಿದ್ದಾರೆ. ಸೂಪಾ ಜಲಾಶಯದಿಂದ ನೀರಾವರಿ ಸೌಲಭ್ಯ ದೊರಕಿಸಿಕೊಡಬೇಕು. ಮಣ್ಣಿನ ಸಾರ ಹೆಚ್ಚಿಸಬೇಕು. ಆಧುನಿಕ ಬೆಳೆ ಮತ್ತು ತಂತ್ರಜ್ಞಾನದ ಬಗ್ಗೆ ಮಾಹಿತಿ ತರಬೇತಿ ಮತ್ತು ಪಡೆದುಕೊಳ್ಳಲು ಸಾಲಸೌಲಭ್ಯ ದೊರಕಿಸಿಕೊಡಬೇಕು. ಜಮೀನಿಗೆ ರಸ್ತೆ ನಿರ್ಮಾಣವಾಗಬೇಕು. ಜಮೀನಿಗೆ ವಿದ್ಯುತ್ ಬೇಲಿ ನಿರ್ಮಾಣ ಮಾಡಬೇಕು. ಮಾರುಕಟ್ಟೆ ಸೌಲಭ್ಯ ದೊರಕಿಸಿಕೊಡಬೇಕು ಎಂಬ ಸೌಲಭ್ಯಗಳನ್ನು ಬಯಸಿದ್ದಾರೆ.

೩.೧.೫.೮. ಉದ್ಯೋಗಕ್ಕಾಗಿ ವಲಸೆ

ರಾಮನಗರದಲ್ಲಿ ಉದ್ಯೋಗದ ಅವಕಾಶ ಇಲ್ಲದೇ ಇರುವ ಕಾರಣ ಸಂತ್ರಸ್ತ ಕುಣಬಿಯರು ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ಹೋಗಿರುವ ಬಗ್ಗೆ ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೧೫. ಹೊರಗಿನ ಊರುಗಳಲ್ಲಿ ಕೆಲಸ ಮಾಡುತ್ತಿರುವವರ ಮಾಹಿತಿಯ ವರ್ಗೀಕರಣ

ಜನರು	ಊರುಗಳು					ಒಟ್ಟು
	ಗೋವಾ	ಮಹಾರಾಷ್ಟ್ರ	ಬೆಳಗಾವಿ	ಶಿರ್ಸಿ	ರಾಯಚೂರು	
ಮಹಿಳೆ	೪	೦	೦	೦	೦	೪
ಪುರುಷ	೨೦	೧೩	೧	೧	೧	೩೬
ಒಟ್ಟು	೨೪	೧೩	೧	೧	೧	೪೦

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೧೫ರ ಪ್ರಕಾರ ೪ ಮಹಿಳೆಯರು ಮತ್ತು ೩೬ ಪುರುಷರು ಸೇರಿದಂತೆ ಒಟ್ಟು ೪೦ ಕುಣಬಿಯರು ತಮ್ಮ ಊರು ಬಿಟ್ಟು ಹೊರಗಿನ ರಾಜ್ಯ ಮತ್ತು ಊರುಗಳಲ್ಲಿ ದುಡಿಯುತ್ತಿದ್ದಾರೆ.

ಊರಲ್ಲಿ ಯಾರೂ ಇಲ್ಲ ಎಂಬ ವಿಷಯ ಅಧ್ಯಯನದ ಸಮಯದಲ್ಲಿ ಕೇಳಿಬಂದಿದೆ. ಆದರೆ ಹೊರಗಿನ ಊರುಗಳಲ್ಲಿ ದುಡಿಯುತ್ತಿರುವವರು ಕೇವಲ ೪೦ ಜನರು ಮಾತ್ರ. ಸರಾಸರಿ ನೋಡುವುದಾದರೆ ೧/೪ ಭಾಗದ ಕುಟುಂಬದವರು ಕೂಡಾ ಹೊರಗಡೆ ಕೆಲಸ ಮಾಡುತ್ತಿಲ್ಲ ಎನ್ನಬಹುದು. ಗೋವಾ, ಮಹಾರಾಷ್ಟ್ರ ಇವರಿಗೆ ಹತ್ತಿರದ ಊರುಗಳಾದ ಕಾರಣ ಅಲ್ಲಿಗೆ ಸುಲಭವಾಗಿ ಕೆಲಸಕ್ಕೆ ತೆರಳುತ್ತಾರೆ. ಈಗಿನ ಕಾಲದಲ್ಲಿ ಉದ್ಯೋಗಕ್ಕಾಗಿ ಸ್ವಂತ ಊರು ಬಿಟ್ಟಿರಬೇಕಾದ ಪರಿಸ್ಥಿತಿ ಅನಿವಾರ್ಯವಾಗಿದೆ. ಎಲ್ಲರಿಗೂ ಇದ್ದ ಊರಲ್ಲಿ ಕೆಲಸ ಸಿಗುವುದಿಲ್ಲ. ಜೀವನ ವೆಚ್ಚಕ್ಕಾದರೂ ಕೆಲಸ ಹುಡುಕಿಕೊಂಡು ದುಡಿಯಲೇ ಬೇಕು. ಕುಣಬಿಯರು ಇದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ಎಲ್ಲಾದರೂ ಆಗಲಿ ಸಾಧ್ಯವಾದಷ್ಟು ಉದ್ಯೋಗಗಳನ್ನು ಪಡೆದುಕೊಳ್ಳಬೇಕಾದ ಅನಿವಾರ್ಯತೆ ಇದೆ.

೩.೧.೫.೯. ಕುಟುಂಬದ ವಾರ್ಷಿಕ ವೆಚ್ಚದ ವಿವರ

ಕುಣಬಿಯರು ತಮ್ಮ ಜೀವನೋಪಾಯಕ್ಕಾಗಿ ವಾರ್ಷಿಕವಾಗಿ ಎಷ್ಟು ವ್ಯಯಿಸುತ್ತಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೧೬. ವಾರ್ಷಿಕ ವೆಚ್ಚದ ವರ್ಗೀಕರಣ

ಕ್ರ ಸ.	ವಿವರ	ಖರ್ಚು ಮಾಡುವ ಹಣ (ಸಾವಿರಗಳಲ್ಲಿ)						
		೧-೪	೫-೯	೧೦-೨೦	೨೦-೪೦	೪೧-೬೦	೬೧-೯೦	ಒಟ್ಟು
೧	ಆಹಾರ	೪	೭೦	೩೬	೧೦	-	-	೧೨೬
೨	ಬಟ್ಟೆ	೯೮	೨೦	೮	-	-	-	೧೨೬
೩	ವಸತಿ	-	-	-	-	-	-	-
೪	ಔಷಧಿ	೧೦೬	೨೦	-	-	-	-	೧೨೬
೫	ವಿದ್ಯಾಭ್ಯಾಸ	೮೦	೧೦	-	-	-	-	೯೦
೬	ಮನರಂಜನೆ	೧೧೦	-	-	-	-	-	೧೧೦
೭	ಪ್ರಯಾಣ	೧೦೬	-	೨೦	-	-	-	೧೨೬
೮	ಅತಿಥಿ ಸತ್ಕಾರ	-	-	-	-	-	-	-
೯	ಹವ್ಯಾಸ	-	-	-	-	-	-	-
೧೦	ದುಶ್ಚಟಗಳು	೯೪	೧೦	-	-	-	-	೧೦೪
೧೧	ಹಬ್ಬಗಳು	೧೨	೧೦೨	೧೦	-	-	-	೧೨೪

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೧೬ರ ಮಾಹಿತಿಯಂತೆ ಕುಟುಂಬದ ಖರ್ಚು ಇದೆ. ಇವರೆಲ್ಲಾ ಪಡಿತರ ಅಕ್ಕಿ ಅನ್ನ ಉಣ್ಣುತ್ತಿದ್ದು ಊರಲ್ಲಿರುವವರ ಆಹಾರದ ವೆಚ್ಚ ತೀರಾ ಕಡಿಮೆ ಇದೆ. ಪರಸ್ಥಳಗಳಲ್ಲಿ ಕೆಲಸ ಮಾಡುವವರು ಊರಿಗೆ ಬಂದು ಹೋಗುವ ಕಾರಣ ಪ್ರಯಾಣದ ವೆಚ್ಚ ಅಧಿಕ ಇದೆ. ಯುಗಾದಿ ಮತ್ತು ದೀಪಾವಳಿ ಹಬ್ಬಗಳಿಗಾಗಿ ಬಟ್ಟೆ ಖರೀದಿ ಮಾಡುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಇವರ ಜೀವನ ತುಂಬಾ ಕನಿಷ್ಠಮಟ್ಟದಲ್ಲಿದೆ.

೩.೧.೫.೧೦. ಕುಟುಂಬದ ಉಳಿತಾಯದ ವಿವರ

ಸಂತ್ರಸ್ತ ಕುಣಬಿಯರ ಉಳಿತಾಯ ಪ್ರವೃತ್ತಿಯ ಬಗ್ಗೆ ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೧೭ ಉಳಿತಾಯದ ವರ್ಗೀಕರಣ

ಕ್ರ ಸಂ	ಸಂಸ್ಥೆಯ ಹೆಸರು	ಉಳಿತಾಯದ ವಿಧಾನ ಮತ್ತು ಮೊತ್ತ ರೂಗಳಲ್ಲಿ				ಒಟ್ಟು ಉಳಿತಾಯ ಮಾಡುವವರು	ಪ್ರತಿಶತ ಕುಟುಂಬ
		ವಾರ ೧೦ರೂ	ಮಾಸಿಕ ೧೦೦ರೂ	ಅರ್ಧ ವಾರ್ಷಿಕ ೧೫೦ ೧೫೦೦ರೂ	ವಾರ್ಷಿಕ ೬೦೦೦ರೂ		
೧	ಸ್ವ ಸ. ಸಂಘ	೫೮	೬	೦	೦	೬೪	೫೦.೭೯
೨	ಅಂಚೆ ಉಳಿತಾಯ	೨	೧	೦	೦	೩	೨.೩೪
೩	ಜೀವ ವಿಮೆ	೦	೦	೭	೨	೯	೭.೧೫
೪	ಬ್ಯಾಂಕ್	೦	೦	೨	೨	೪	೩.೧೭
೫	ಸಹಕಾರಿ ಸಂಘ	೦	೦	೧	೨	೩	೨.೩೯
	ಒಟ್ಟು	೬೦	೭	೧೦	೬	೮೩	೬೫.೮೫

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೧೭ರಲ್ಲಿ ನೀಡಿರುವ ಮಾಹಿತಿಯಂತೆ ಶೇಕಡಾ ೫೦ರಷ್ಟು ಕುಟುಂಬದವರು ಸ್ವಸಹಾಯ ಸಂಘಗಳಲ್ಲಿ ಉಳಿತಾಯ ಮಾಡುತ್ತಿದ್ದಾರೆ. ಉಳಿದಂತೆ ಅಂಚೆ ಕಛೇರಿಯಲ್ಲಿ, ಜೀವ ವಿಮಾ ಪಾಲಿಸಿ, ಬ್ಯಾಂಕ್, ಸಹಕಾರಿ ಸಂಘದಲ್ಲಿ ಉಳಿತಾಯ ಮಾಡುತ್ತಿರುವವರ ಸಂಖ್ಯೆ ಕಡಿಮೆ. ಸ್ವಸಹಾಯ ಸಂಘದಲ್ಲಿ ಉಳಿತಾಯ ಮಾಡುವವರಲ್ಲಿ ಶೇಕಡಾ ೯೦ರಷ್ಟು ಕುಟುಂಬಗಳು ವಾರಕ್ಕೆ ೧೦ ರೂಪಾಯಿ, ಮಾಸಿಕ ೧೦೦ ರೂಪಾಯಿಯನ್ನು ಶೇಕಡಾ ೯ರಷ್ಟು ಕುಟುಂಬಗಳು ಉಳಿತಾಯ ಮಾಡುತ್ತಿವೆ. ಹೆಚ್ಚಿನವರು ಶ್ರೀ.ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸ್ವಸಹಾಯ ಸಂಘದಲ್ಲಿ ಉಳಿತಾಯ ಮಾಡುತ್ತಿದ್ದಾರೆ. ಈ ಹಿಂದೆ ಹೆಚ್ಚಿನ ಕುಣಬಿಯರು ಈ ಸಂಘಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದು ಇದೀಗ ಇವರ ಸಂಖ್ಯೆ ಕಡಿಮೆಯಾಗಿದೆ. ಪಡೆದುಕೊಂಡ ಸಾಲವನ್ನು ಮರುಪಾವತಿ ಮಾಡುವುದು ಹೆಚ್ಚಿನ ಜನರಿಗೆ ಕಷ್ಟವಾಗುತ್ತದೆ. ಸಾಲ ಪಡೆಯುವ ಉದ್ಧೇಶಕ್ಕಾಗಿ ಸಂಘದಲ್ಲಿ ಉಳಿತಾಯ ಮಾಡುತ್ತಾರೆ. ಅದು ಸಾಧ್ಯವಾಗದ ಸಂದರ್ಭದಲ್ಲಿ ಸಂಘವನ್ನು ತೊರೆಯುತ್ತಾರೆ ಎಂಬ ಅಂಶಗಳು ವ್ಯಕ್ತವಾಗಿವೆ.

ಸಂತ್ರಸ್ತ ಕುಣಬಿಯರ ಹಣದ ಉಳಿತಾಯ ಮಟ್ಟ ಕಡಿಮೆ ಇದೆ. ಅಂತರ ರಾಜ್ಯಗಳಿಗೆ ಹೋಗಿ ದುಡಿಯುವವರು ಮತ್ತು ವ್ಯವಸಾಯ ಮಾಡುವ ಕೆಲವು ಕುಟುಂಬದಲ್ಲಿ ಜೀವ ವಿಮೆ, ಬ್ಯಾಂಕ್ ಮತ್ತು ಸಹಕಾರಿ ಸಂಘಗಳಲ್ಲಿ ಉಳಿತಾಯ ಮಾಡಿದ್ದಾರೆ. ಉಳಿದಂತೆ ಸ್ವಸಹಾಯ ಸಂಘದಲ್ಲಿ ವಾರಕ್ಕೆ ಹತ್ತು ರೂಪಾಯಿ ಉಳಿತಾಯ ಮಾಡಿರುವುದು ಕಂಡುಬಂದಿದೆ. ಜನರಿಗೆ ಉದ್ಯೋಗ ಇಲ್ಲದೇ ಈ ರೀತಿಯ ಪರಿಸ್ಥಿತಿ ಬಂದಿದೆ. 'ದಿನ ನಿತ್ಯದ ಬದುಕು ಸಾಗಿಸುವುದೇ ಕಷ್ಟವಾಗಿದೆ ಇನ್ನು ಉಳಿತಾಯವನ್ನು

ಎಲ್ಲಿಂದ ಮಾಡಲಿ' ಎಂಬ ಅಭಿಪ್ರಾಯವನ್ನು ಮಾಹಿತಿದಾರರು ವ್ಯಕ್ತಪಡಿಸಿದ್ದಾರೆ. ಬ್ಯಾಂಕುಗಳು, ಅಂಚೆ ಕಛೇರಿಗಳು, ಸಹಕಾರಿ ಸಂಘಗಳು ಸಂತ್ರಸ್ತರಿಗೆ ಉದ್ಯೋಗಕ್ಕಾಗಿ ಪ್ರೋತ್ಸಾಹ ನೀಡಿ ಉಳಿತಾಯ ಮಹತ್ವದ ಅರಿವನ್ನು ನೀಡಿದರೆ ಇವರು ಕೂಡಾ ಉಳಿತಾಯವನ್ನು ಮಾಡಿ ತಮ್ಮ ಜೀವನದ ಭದ್ರತೆಯನ್ನು ಕಾಪಾಡಿಕೊಂಡು ಬರಬಹುದು.

೩.೧.೫.೧೧. ಬ್ಯಾಂಕ್ ಸಾಲ ಹೊಂದಿದವರ ಮಾಹಿತಿ

ಸಂತ್ರಸ್ತ ಕುಣಬಿಯರು ಬ್ಯಾಂಕ್ ಸಾಲ ಸೌಲಭ್ಯವನ್ನು ಹೋಂದಿದ್ದಾರೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ೩.೧೮. ಬ್ಯಾಂಕ್ ಸಾಲ ಹೊಂದಿದವರ ವರ್ಗೀಕರಣ

ಸಾಲ ಸೌಲಭ್ಯ	ಒಟ್ಟು ಕುಟುಂಬಗಳು	ಪ್ರತಿಶತ
ಪಡೆದುಕೊಂಡಿದ್ದಾರೆ	೮	೬.೩೫
ಪಡೆದುಕೊಂಡಿಲ್ಲ	೧೧೮	೯೩.೬೫

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೧೮.ರಲ್ಲಿನ ಮಾಹಿತಿಯಂತೆ ಸಂತ್ರಸ್ತರಲ್ಲಿ ಪ್ರತಿಶತ ೬.೩೫ರಷ್ಟು ಕುಟುಂಬಗಳು ಮಾತ್ರಾ ರಾಮನಗರ ಸೂಪಾ ಜಲಾಶಯ ಸಂತ್ರಸ್ತರ ಕೋ-ಆಪರೇಟಿವ್ ಸೊಸೈಟಿಯಿಂದ ಸಾಲ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ. ಹೊಲದಲ್ಲಿ ಬಾವಿ ತೋಡಿಸಲು, ಕಬ್ಬಿನ ಹೊಲಕ್ಕೆ ನೀರಾವರಿ ಸೌಲಭ್ಯ ಮಾಡಿಕೊಳ್ಳಲು, ಮನೆ ಕಟ್ಟಲು, ಆಟೋ ಖರೀದಿ ಮಾಡಲು, ವಿದ್ಯಾಭ್ಯಾಸಕ್ಕಾಗಿ, ಟ್ರ್ಯಾಕ್ಟರ್ ಖರೀದಿಸಲು, ದನಗಳನ್ನು ಖರೀದಿಸಲು ಹಾಗೂ ಹೊಲ ಖರೀದಿಸಲು ಉಪಯೋಗಿಸಿಕೊಂಡಿರುತ್ತಾರೆ. ಸಾಲ ತೆಗೆದುಕೊಂಡು ವ್ಯವಹಾರ ಮಾಡುವ ಜ್ಞಾನವಿಲ್ಲದೇ ಇರುವುದು, ಮರುಪಾವತಿ ಸಮಸ್ಯೆ ಹಾಗೂ ಸಾಲ ಪಡೆದುಕೊಳ್ಳಲು ಪ್ರಭಾವಿ ವ್ಯಕ್ತಿಗಳ ಬೆಂಬಲ ಬೇಕಾದ್ದರಿಂದ ಸಾಕಷ್ಟು ಜನ ಈ ಸೌಲಭ್ಯದಿಂದ ಹೊರಗುಳಿದಿದ್ದಾರೆ.


ಒಟ್ಟಾರೆಯಾಗಿ ಹೇಳಬೇಕೆಂದರೆ ಸ್ಥಳಾಂತರ ಪೂರ್ವದಲ್ಲಿ ಭದ್ರ ಹಾಗೂ ಸ್ವಾಯತ್ತ ಆರ್ಥಿಕ ವ್ಯವಸ್ಥೆಯನ್ನು ಹೊಂದಿ ಸುಖವಾಗಿ ಬದುಕುತ್ತಿದ್ದ ಕುಣಬಿಯರ ಆರ್ಥಿಕ ಜೀವನ ಹದಗೆಟ್ಟಿದೆ. ಬಡತನ ಇವರ ಸಂತ್ರಸ್ತ ಜೀವನಕ್ಕೆ ದೊಡ್ಡ ಸವಾಲಾಗಿ ಕಾಡುತ್ತಿದೆ. ಕೈಗೊಂದು ಕೆಲಸಕ್ಕಾಗಿ ಕುಣಬಿಯರು ಹಾತೊರೆಯುತ್ತಿದ್ದಾರೆ.

೩.೧.೫.೧೨. ಪ್ರಸ್ತುತ ಒಂದು ನಿವೇಶನದಲ್ಲಿರುವ ಮನೆ ಮತ್ತು ಕುಟುಂಬಗಳ ವಿವರ

ಕರ್ನಾಟಕ ವಿದ್ಯುತ್ ನಿಗಮವು ಕೃಷಿ ಮತ್ತು ಕೃಷಿಕೂಲಿ ಕುಟುಂಬ ಒಂದಕ್ಕೆ ನೀಡಿದ್ದ ೧೨೦*೮೦ ಮತ್ತು ಕೃಷಿಯೇತರ ಕುಟಂಬದ ೬೦*೪೫ ಅಳತೆಯ ಒಂದು ನಿವೇಶನದಲ್ಲಿ ಪ್ರಸ್ತುತ ವಾಸವಾಗಿರುವ ಒಟ್ಟು ಕುಟುಂಬಗಳು, ಅದರಲ್ಲಿ ಅವರು ಮಾಡಿಕೊಂಡಿರುವ ಒಟ್ಟು ಮನೆಗಳು ಮತ್ತು ಒಂದೇ ಮನೆಯಲ್ಲಿ ವಾಸವಿದ್ದು ಪಾಲಾಗಿ ಬೇರೆ ಬೇರೆಯಾಗಿ ಹಾಕಿಕೊಂಡಿರುವ ಒಟ್ಟು ಒಲೆಗಳು ಇವುಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ೩.೯.ರಲ್ಲಿನ ಮಾಹಿತಿಯಂತೆ ಶೇಕಡಾ ೬೮.೨೬ರಷ್ಟು ಕುಟುಂಬಗಳು ಒಂದು ನಿವೇಶನದಲ್ಲಿ ಒಂದೇ ಮನೆ ಮಾಡಿಕೊಂಡು ವಾಸ ಮಾಡುತ್ತಿವೆ. ಪ್ರತಿಶತ ೨೭.೭೮ರಷ್ಟು ಕುಟುಂಬಗಳು ೨-೪ ಹಾಗೂ ಶೇಕಡಾ ೩.೯೬ ಕುಟುಂಬಗಳು ೫-೭ ಮನೆ ಮಾಡಿಕೊಂಡು ವಾಸ ಮಾಡುತ್ತಿವೆ. ಈ ಮಾಹಿತಿಯಿಂದ ತಿಳಿದುಬರುವುದೇನೆಂದರೆ ಶೇಕಡಾ ೩೧.೭೪ರಷ್ಟು ಕುಟುಂಬಗಳಲ್ಲಿ ಒಂದು ಮನೆ ನಿವೇಶನದಲ್ಲಿ ೨-೭ ರಷ್ಟು ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ.

ಸ್ಥಂಭ ನಕಾಶೆ ಸಂಖ್ಯೆ: ೩.೯. ಒಂದು ನಿವೇಶನದಲ್ಲಿರುವ ಮನೆ ಮತ್ತು ಕುಟುಂಬಗಳ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಶೇಕಡಾ ೪೪.೪೪ರಷ್ಟು ಕುಟುಂಬಗಳಲ್ಲಿ ಒಂದು ನಿವೇಶನದಲ್ಲಿನ ಒಂದು ಮನೆಯಲ್ಲಿ ಒಂದೊಂದೇ ಕುಟುಂಬಗಳು ವಾಸವಾಗಿವೆ. ಪ್ರತಿಶತ ೫೦.೮೦ರಷ್ಟು ಕುಟುಂಬಗಳಲ್ಲಿ ಒಂದೇ ನಿವೇಶನದಲ್ಲಿ ೨-೪ ಕುಟುಂಬಗಳು ವಾಸ ಮಾಡುತ್ತಿವೆ.

ಶೇಕಡಾ ೪.೭೬ರಷ್ಟು ಕುಟುಂಬಗಳು ಒಂದು ನಿವೇಶನದಲ್ಲಿ ೫-೭ ಕುಟುಂಬಗಳಾಗಿ ವಾಸವಾಗಿದ್ದಾರೆ. ಈ ಮಾಹಿತಿಯಿಂದ ತಿಳಿದುಬರುವುದೇನೆಂದರೆ ಶೇಕಡಾ ೫೫.೫೬ರಲ್ಲಿ ಒಂದು ನಿವೇಶನದಲ್ಲಿ ಒಂದಕ್ಕಿಂತ ಹೆಚ್ಚು ಅಂದರೆ ೨-೭ ಕುಟುಂಬಗಳು ವಾಸ ಇವೆ.

ಶೇಕಡಾ ೬೪.೨೮ರಷ್ಟು ಕುಟುಂಬಗಳಲ್ಲಿ ಒಂದು ಮನೆಯಲ್ಲಿ ಒಂದೇ ಒಲೆ ಹಾಕಿಕೊಂಡು ಬದುಕುತ್ತಿದ್ದಾರೆ. ಇನ್ನುಳಿದಂತೆ ಶೇಕಡಾ ೨೯.೩೭ರಷ್ಟು ಕುಟುಂಬಗಳು ಒಂದು ನಿವೇಶನದಲ್ಲಿ ಒಂದೇ ಮನೆ ಮಾಡಿಕೊಂಡು ಅದರಲ್ಲಿ ೨-೪ ಒಲೆ ಹಾಕಿಕೊಂಡು ಬೇರೆ ಬೇರೆ ಕುಟುಂಬಗಳಂತೆ ಬದುಕುತ್ತಿದ್ದಾರೆ. ಶೇಕಡಾ ೬.೩೫ರಷ್ಟು ಕುಟುಂಬಗಳು ಒಂದು ಮನೆಯಲ್ಲಿ ೫-೭ ಒಲೆ ಹಾಕಿಕೊಂಡು ಬದುಕುತ್ತಿದ್ದಾರೆ. ಈ ಮಾಹಿತಿಯಿಂದ ತಿಳಿದುಬರುವುದೆಂದರೆ ಶೇಕಡಾ ೩೫.೭೨ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿ ಒಂದು ನಿವೇಶನದಲ್ಲಿ ಒಂದು ಮನೆ ಮಾಡಿಕೊಂಡು ಅದರಲ್ಲಿ ಒಂದಕ್ಕಿಂತ ಹೆಚ್ಚು ಅಂದರೆ ೨, ೩, ೪, ೫, ೬, ೭ ಇಷ್ಟು ಬೇರೆ ಬೇರೆ ಒಲೆ ಹಾಕಿಕೊಂಡು ತಮ್ಮ ಅಡುಗೆ ತಾವು ಮಾಡಿಕೊಂಡು ಬೇರೆ ಬೇರೆ ಕುಟುಂಬಗಳಂತೆ ಬದುಕುತ್ತಿದ್ದಾರೆ. ನಾಲ್ಕು ತಲೆಮಾರಿನ ಸದಸ್ಯರು ಒಂದೇ ನಿವೇಶನ-ಒಂದೇ ಮನೆ ಆದರೆ ಆ ಮನೆಯಲ್ಲಿ ೨ ರಿಂದ ೭ ಬೇರೆ ಬೇರೆ ಕುಟುಂಬಕ್ಕೆ ಒಲೆಗಳು. ಇವರ ದುಡಿಮೆ, ವೆಚ್ಚ ಅವರವರಿಗೇ ಸಂಬಂಧಿಸಿದ್ದು. ಇವರು ಬೇರೆ ಬೇರೆ ಕುಟುಂಬಗಳಿದ್ದಂತೆ. ಇಲ್ಲಿ ಇವರಿಗೆ ಸ್ವತಂತ್ರವಾಗಿರುವುದು ಅಡುಗೆ ಮನೆ ಮಾತ್ರ. ಉಳಿದಂತೆ ಮಲಗಲು, ಸ್ನಾನ ಮಾಡಲು, ಶೌಚಾಲಯ, ಬಟ್ಟೆ ತೊಳೆಯಲು, ಪಾತ್ರೆ ತೊಳೆಯಲು, ಅಂಗಳ ಎಲ್ಲರಿಗೂ ಒಂದೇ. ಎಲ್ಲೆಲ್ಲಿ ಸ್ಥಳಾವಕಾಶ ಇದೆಯೋ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಯಾರಿಗೆ ಬೇಕೋ ಅವರು ಉಪಯೋಗಿಸಿಕೊಳ್ಳುತ್ತಾರೆ.

೩೫ ವರ್ಷಗಳ ಹಿಂದೆ ಸ್ಥಳಾಂತರವಾದಾಗ ಯೋಜನೆಯವರು ಇವರ ಕುಟುಂಬದ ಮುಖ್ಯಸ್ಥನ ಹೆಸರಿಗೆ ಒಂದು ನಿವೇಶನ ನೀಡಿರುತ್ತಾರೆ. ಆದರೆ ಈಗ ನಾಲ್ಕು ತಲೆಮಾರಿನ ಸದಸ್ಯರು ಆ ಒಂದು ನಿವೇಶನದಲ್ಲಿ ಉಸಿರುಗಟ್ಟಿದ ರೀತಿಯಲ್ಲಿ ಬದುಕುವ ಹಾಗಾಗಿದೆ. ೬ ತಿಂಗಳಿಂದ ಹಿಡಿದು ೯೦ ವರ್ಷ ವಯಸ್ಸಿನ; ೭ ಕುಟುಂಬಗಳವರೆಗಿನ ಸುಮಾರು ೩೦ ರವರೆಗೆ ಸದಸ್ಯರು ಒಂದೇ ಮನೆಯಲ್ಲಿ ಬೇರೆ ಬೇರೆ ಒಲೆ ಹಾಕಿಕೊಂಡೋ ಅಥವಾ ಒಂದೇ ನಿವೇಶನದಲ್ಲಿ ಸಣ್ಣ ಸಣ್ಣ ಗುಡಿಸಲು ಹಾಕಿಕೊಂಡೋ ಬದುಕು ಸಾಗಿಸುತ್ತಿದ್ದಾರೆ. ೩೫ ವರ್ಷಗಳ ಕೆಳಗೆ ಕೆ.ಪಿ.ಸಿ.ಯವರು ಪರಿಗಣಿಸಿದ್ದ ಒಂದು ಕುಟುಂಬ ಈಗ ಕನಿಷ್ಠ ಹತ್ತು ಕುಟುಂಬಗಳಾಗಿವೆ. ಒಂದು ಕುಟುಂಬ ಇರಬೇಕಾದ ನಿವೇಶನದಲ್ಲಿ ೨ ರಿಂದ ೭ ರವರೆಗೆ ಕುಟುಂಬಗಳು ಹಾಗೂ ಒಂದು ಕುಟುಂಬದಲ್ಲಿ ೫ ರಿಂದ ೩೦ ಜನರವರೆಗೆ ವಾಸವಿದ್ದು ಉಸಿರುಗಟ್ಟಿದ ವಾತಾವರಣವನ್ನು ನಿರ್ಮಿಸಿವೆ. ಇದು ಅವರ ವಸತಿ ಕೊರತೆಯನ್ನು ಎತ್ತಿ ಹಿಡಿಯುತ್ತದೆ.

ಇವರೆಲ್ಲರೂ ಗ್ರಾಮೀಣ ವಸತಿ ಕಾರ್ಯಕ್ರಮ ದೊರೆಯದೇ ಇರುವವರು ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರು. ನಿವೇಶನಕ್ಕಾಗಿ ಸಾಕಷ್ಟು ಅರ್ಜಿ


ಹಾಕಿದರೂ ಯಾವುದೇ ಪ್ರಯೋಜನವಾಗಲಿಲ್ಲ, ಮನೆ ಕೊಡುತ್ತೇವೆ ಎಂದು ಎಲ್ಲಾ ದಾಖಲಾತಿ ತೆಗೆದುಕೊಂಡು, ನಂತರ ಮನೆ ಪಾಸಾಗಿದೆಯೆಂದು ಸಹಿ ಮಾಡಿಸಿಕೊಂಡು ಸ್ವಲ್ಪ ದಿನದಲ್ಲಿ ಎಲ್ಲಾ ವ್ಯವಸ್ಥೆಯಾಗುತ್ತದೆ ಎಂದು ಮನೆಗೆ ಕಳುಹಿಸುತ್ತಾರೆ. ಕಾದು ಕಾದು ಪಂಚಾಯತ್‌ಗೆ ಕೇಳಲು ಹೋದರೆ ನಿನಗೆ ಯಾರು ಮನೆ ಕೊಡುತ್ತಾರೆ ಹೋಗು ಎಂದು ಜೋರು ಮಾಡಿ ಕಳುಹಿಸುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಮ್ಮಂತಹ ಬಡವರಿಗೆ ಬೆಲೆಯೇ ಇಲ್ಲ ಎಂದು ಸಂತ್ರಸ್ತರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಹೆಚ್ಚಿನ ಕುಣಬಿ ಕುಟುಂಬಗಳು ಪ್ರತ್ಯೇಕ ನಿವೇಶನಗಳಿಲ್ಲದೆ ಇರುವ ಒಂದೊಂದೇ ನಿವೇಶನದಲ್ಲಿ ರಾಶಿ ಗುಡಿಸಲು ಕಟ್ಟಿಕೊಂಡಿದ್ದಾರೆ. ಶೇಕಡಾ ೪೫ ಕುಣಬಿಯರ ಮನೆ ಪರಿಸ್ಥಿತಿ ತೀರಾ ದುಸ್ಥಿತಿಯಲ್ಲಿದ್ದು ಹೆಂಚು ಮತ್ತು ಶೀಟು ಮಿಶ್ರಿತ ಗುಡಿಸಲು ಹಾಕಿಕೊಂಡಿದ್ದಾರೆ.

ಕುಣಬಿಯರಿಗೆ ನಿವೇಶನ ಮತ್ತು ಮನೆಯ ಕೊರತೆ ಗಂಭೀರವಾಗಿದ್ದು ಅವರು ಉಸಿರುಗಟ್ಟಿದ ವಾತಾವರಣದಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೧೫. ಪ್ರಸ್ತುತ ಒಂದು ಕುಟುಂಬದಲ್ಲಿರುವ ಒಟ್ಟು ಸದಸ್ಯರ ಸಂಖ್ಯೆಯ ಮಾಹಿತಿ

ಕುಣಬಿಯರ ಮನೆಯಲ್ಲಿನ ಸದಸ್ಯರ ಮಿತಿಯನ್ನು ತಿಳಿದುಕೊಳ್ಳುವ ಸಲುವಾಗಿ ಒಂದು ಕುಟುಂಬದಲ್ಲಿ ಎಷ್ಟು ಸದಸ್ಯರು ವಾಸಿಸುತ್ತಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ: ೩.೧೦. ಒಂದು ಕುಟುಂಬದಲ್ಲಿರುವ ಒಟ್ಟು ಸದಸ್ಯರ ಸಂಖ್ಯೆಯ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೧೦.ರ ಮಾಹಿತಿಯಂತೆ ಶೇಕಡಾ ೫೪.೭೬ರಷ್ಟು ಕುಟುಂಬಗಳಲ್ಲಿ ಕುಟುಂಬವೊಂದಕ್ಕೆ ೧-೯ ಸದಸ್ಯರು ವಾಸಿಸುತ್ತಿದ್ದಾರೆ. ಪ್ರತಿಶತ ೪೦.೪೮ರಷ್ಟು ಕುಟುಂಬಗಳಲ್ಲಿ ೧೦-೨೦ ಜನರಂತೆ ಹಾಗೂ ಶೇಕಡಾ ೪.೭೬ರಷ್ಟು ಕುಟುಂಬಗಳಲ್ಲಿ ಕುಟುಂಬವೊಂದಕ್ಕೆ ೨೧-೩೦ ಸದಸ್ಯರಂತೆ ವಾಸವಿದ್ದಾರೆ.

ಶೇಕಡಾ ೧೭.೪೬.ರಷ್ಟು ಕುಟುಂಬಗಳಲ್ಲಿ ಕುಟುಂಬವೊಂದಕ್ಕಿರುವ ಮಿತಿಯಷ್ಟು ಜನ ವಾಸವಿದ್ದಾರೆ. ಉಳಿದಂತೆ ಎಲ್ಲಾ ಕುಟುಂಬಗಳಲ್ಲಿ ಮಿತಿಗಿಂತ ಹೆಚ್ಚು ಜನರು ವಾಸ ಮಾಡುತ್ತಿದ್ದಾರೆ. ಅದರಲ್ಲೂ ಶೇಕಡಾ ೪೫.೨೩.ರಷ್ಟು ಕುಟುಂಬಗಳು ಒತ್ತೊತ್ತಾಗಿ ಬದುಕುತ್ತಿವೆ. ಮನೆಯನ್ನು ಕಟ್ಟಿಕೊಳ್ಳಲು ನಿವೇಶನ ಮತ್ತು ಹಣದ ಕೊರತೆ ಇರುವುದರಿಂದ ಇವರು ಇಂತಹ ದುಸ್ಥಿತಿ ಎದುರಿಸಬೇಕಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೩.೧.೫.೧೪. ಮನೆಯ ವಿಧ ಹಾಗೂ ಕೊಠಡಿಗಳ ಸಂಖ್ಯೆ

ಸಂತ್ರಸ್ತ ಕುಣಬಿಯರು ಯಾವ ರೀತಿಯ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅವರ ಮನೆಯ ಪರಿಸ್ಥಿತಿ ಉತ್ತಮವಾಗಿದೆಯೇ? ಅಲ್ಲಿ ಸಾಕಷ್ಟು ಕೊಠಡಿಗಳ ವ್ಯವಸ್ಥೆ ಇದೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೧೯. ಮನೆಯ ವಿಧದ ವರ್ಗೀಕರಣ ಮತ್ತು ಕೊಠಡಿಗಳ ಸಂಖ್ಯೆ

ಕ್ರ ಸಂ.	ಮನೆಯ ವಿಧ	ಕುಟುಂಬಗಳ ಸಂಖ್ಯೆ	ಪ್ರತಿಶತ	ಕೊಠಡಿಗಳ ಸಂಖ್ಯೆ	ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಆರ್.ಸಿ.ಸಿ	೯	೭.೧೫	೨-೪	೫೩	೪೨.೦೬
೨	ಹೆಂಚು	೯೧	೭೨.೨೨	೫-೭	೬೪	೫೦.೭೯
೩	ಶೀಟು	೧೮	೧೪.೨೮	೮-೧೦	೯	೭.೧೫
೪	ಗುಡಿಸಲು	೮	೬.೩೫	–	–	–

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೧೯.ರಲ್ಲಿ ತೋರಿಸಿರುವಂತೆ ಕುಣಬಿಯರು ಆರ್.ಸಿ.ಸಿ. (೭.೧೫%), ಹೆಂಚು (೭೨.೨೨%), ಶೀಟು (೧೪.೨೮%) ಮತ್ತು ಗುಡಿಸಲು (೬.೩೫%) ಮನೆಗಳನ್ನು ಹೊಂದಿದ್ದಾರೆ. ಕೆಲವು ಆರ್.ಸಿ.ಸಿ ಹಾಗೂ ಹೆಂಚಿನ ಮನೆಗಳು ಸ್ವಲ್ಪ ಭಾಗ ಶೀಟಿನ ಮೇಲ್ಛಾವಣಿ ಹೊಂದಿವೆ. ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಹೆಚ್ಚು ಇದ್ದು ದೊಡ್ಡ ಮನೆ ಕಟ್ಟಿಕೊಳ್ಳಲು ಹಣಕಾಸಿನ ಕೊರತೆ ಇರುವುದರಿಂದ ಈ ತರಹ ಮಾಡಿಕೊಂಡಿರುವುದಾಗಿ ಅಭಿಪ್ರಾಯ ವ್ಯಕ್ತವಾಗಿದೆ. ಪ್ರತಿಶತ ೬.೩೫.ರಷ್ಟು ಕುಟುಂಬಗಳು ಶೀಟು ಮತ್ತು ಹೆಂಚಿನಿಂದ ಗುಡಿಸಲು ಮನೆ ಮಾಡಿಕೊಂಡಿದ್ದಾರೆ. ಮನೆಗಳ ಗೋಡೆ ತುಂಬಾ ತಗ್ಗಾಗಿದ್ದು ಒಂದೇ ನಿವೇಶನದಲ್ಲಿ ಹೆಚ್ಚು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ತೀರಾ

ಇತ್ತೀಚಿನ ದಿನಗಳವರೆಗೂ ಮಾಹಿತಿದಾರರ ಕುಟುಂಬಗಳು ಗುಡಿಸಲಿನ ಜೀವನವನ್ನು ಮಾಡಿದ್ದು ಇದೀಗ ಇಷ್ಟಾದರೂ ಉತ್ತಮ ಮನೆಗಳನ್ನು ಮಾಡಿಕೊಂಡಿರುವುದಾಗಿ ಅಭಿಪ್ರಾಯ ವ್ಯಕ್ತವಾಗಿದೆ. ಮನೆ ನಿರ್ಮಾಣ ಮಾಡಲು ಬೇಕಾದ ಸಾಮಾನುಗಳನ್ನು ಕಾಡಿನಿಂದ ತರಲು ಅನುಮತಿಯಿರುವುದಿಲ್ಲ. ಖರೀದಿಸಲು ಇವರಿಗೆ ಸಾಧ್ಯವಾಗುವುದಿಲ್ಲ. ಸುಮಾರು ಮನೆಗಳ ಸ್ಥಿತಿ ತುಂಬಾ ದುಃಖಕರವಾಗಿದೆ. ಕೆಲವು ಮನೆಗಳು ತುಂಬಾ ಚಿಕ್ಕದಾಗಿವೆ.

ಕೋಷ್ಠಕ ೩.೧೯.ರ ಎರಡನೇ ಭಾಗದಲ್ಲಿ ತೋರಿಸಿರುವಂತೆ ಮಾಹಿತಿದಾರರಲ್ಲಿ ಶೇಕಡಾ ೪೨.೦೬ರಷ್ಟು ಕುಟುಂಬಗಳ ಮನೆಗಳು ೨-೪ ಕೊಠಡಿಗಳನ್ನು, ಶೇಕಡಾ ೫೦.೭೯ರಷ್ಟು ಕುಟುಂಬಗಳು ೫-೭ ಕೊಠಡಿಗಳನ್ನು, ಶೇಕಡಾ. ೭.೧೫.ರಷ್ಟು ಕುಟುಂಬಗಳು ೮-೧೦ ಕೊಠಡಿಗಳನ್ನು ಹೊಂದಿವೆ. ದೊಡ್ಡ ದೊಡ್ಡ ಕುಟುಂಬಗಳು ಹೆಚ್ಚು ಕೊಠಡಿಗಳನ್ನು ಹೊಂದಿವೆ. ಇವು ಮಣ್ಣಿನಿಂದ ನಿರ್ಮಿತವಾಗಿದ್ದು, ನೆಲಕ್ಕೆ ಸೆಗಣಿಯನ್ನು ಸಾರಿಸುತ್ತಾರೆ. ಕೊಠಡಿಗಳು ಸಣ್ಣ ಸಣ್ಣದಾಗಿದ್ದು ಇವುಗಳಲ್ಲಿ ಯಾವುದೇ ರೀತಿಯ ಸೌಲಭ್ಯಗಳಿರುವುದಿಲ್ಲ. ಅವಿಭಕ್ತ ಕುಟುಂಬಗಳಲ್ಲಿ ಪ್ರತಿಯೊಂದೂ ಕುಟುಂಬಗಳಿಗೆ ಎರಡು-ಮೂರು ಕೊಠಡಿಗಳು ಮಾತ್ರ ಇವೆ. ಹೆಚ್ಚಿನ ಜನರಿಗೆ ಮಲಗಲು ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ ಇರುವುದಿಲ್ಲ.

ಮಾಹಿತಿದಾರರ ಮನೆಗಳ ಸ್ಥಿತಿ ಉತ್ತಮವಾಗಿಲ್ಲ. ಸ್ಥಳಾಂತರಗೊಂಡು ಇಷ್ಟು ವರ್ಷಗಳು ಕಳೆದರೂ ಅವರಿಗೆ ಒಂದು ಉತ್ತಮವಾದ ಮನೆ ನಿರ್ಮಾಣ ಮಾಡಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೧೫. ಮನೆಯಲ್ಲಿರುವ ಮೂಲಭೂತ ಸೌಲಭ್ಯಗಳು

ಸಂತ್ರಸ್ತ ಕುಣಬಿಯರ ಮನೆಯಲ್ಲಿ ಮೂಲಭೂತ ಸೌಲಭ್ಯಗಳು ಇವೆಯೇ ಅಥವಾ ಅವುಗಳ ಕೊರತೆ ಇದೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ. ೩.೨೦. ಮನೆಯಲ್ಲಿರುವ ಮೂಲಭೂತ ಸೌಲಭ್ಯಗಳ ವರ್ಗೀಕರಣ

ಕ್ರ. ಸಂ	ಮೂಲಭೂತ ಸೌಲಭ್ಯಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಸ್ನಾನದ ಕೊಠಡಿ	೩೨	೨೫.೩೯
೨	ಶೌಚಾಲಯ	೮೯	೭೦.೬೩
೩	ವಿದ್ಯುತ್ ಸೌಲಭ್ಯ	೧೧೬	೯೨.೦೬

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ೩.೨೦.ರಲ್ಲಿನ ಮಾಹಿತಿಯಂತೆ ಹೆಚ್ಚಿನ ಮನೆಗಳಿಗೆ ಪ್ರತ್ಯೇಕ ಸ್ನಾನದ ಕೊಠಡಿ ಇಲ್ಲ. ಎಲ್ಲಾ ಮನೆಗಳಿಗೆ ಶೌಚಾಲಯ ಮತ್ತು ವಿದ್ಯುತ್ ಸೌಲಭ್ಯವಿಲ್ಲ. ಸಂತ್ರಸ್ತರ ಮನೆಯಲ್ಲಿರುವ ಸ್ನಾನದ ಕೊಠಡಿಗಳು ಸುವ್ಯಸ್ಥಿತವಾಗಿಲ್ಲ. ಹೆಚ್ಚಿನ ಸ್ನಾನದ ಕೊಠಡಿಗಳಿಗೆ

ಗೋಡೆ, ಬಾಗಿಲು, ಕಿಟಕಿಗಳು ಇಲ್ಲ. ಮನೆಗೆ ಹೊಂದಿಕೊಂಡಂತೆ ಅರ್ಧ ಗೋಡೆ ಕಟ್ಟಿ ಮರೆ ಮಾಡಿ ಒಲೆ ಹಾಕಿಕೊಂಡು ಒಂದು ದೊಡ್ಡ ಕಲ್ಲು ಹಾಸಿರುವುದೇ ಸ್ನಾನದ ಕೊಠಡಿ. ಶೌಚಾಲಯದ ಪರಿಸ್ಥಿತಿ ಕೂಡಾ ಭಿನ್ನವಾಗಿಲ್ಲ. ಕೆ.ಪಿ.ಸಿ. ಎಲ್ಲರಿಗೂ ಭಾಗ್ಯಜ್ಯೋತಿ ಸಂಪರ್ಕವನ್ನು ಕಲ್ಪಿಸಿದುದರಿಂದ ೧೧೬ ಕುಟುಂಬಗಳಿಗೆ ವಿದ್ಯುತ್ ಸೌಲಭ್ಯವಿದೆ. ಉಳಿದ ೧೦ ಮನೆಗಳಲ್ಲಿ ವಿದ್ಯುತ್ ಸೌಲಭ್ಯ ಇರುವುದಿಲ್ಲ. ಇಂದಿಗೂ ಅವರು ದೀಪದ ಬೆಳಕಿನಲ್ಲಿ ರಾತ್ರಿಯನ್ನು ಕಳೆಯುತ್ತಾರೆ. ಕೆ.ಪಿ.ಸಿ. ಮಾಡಿದ ವಿದ್ಯುತ್ ವ್ಯವಸ್ಥೆ ಹಳೆಯದಾಗಿ ಕಿತ್ತುಕೊಂಡು ಹೋಗಿದೆ. ಹಣಕಾಸಿನ ತೊಂದರೆಯಿಂದಾಗಿ ಸಾಕಷ್ಟು ಜನರಿಗೆ ಇನ್ನು ಕೂಡಾ ಹೆಚ್ಚಿನ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ.

ಕುಣಬಿ ಕುಟುಂಬಗಳು ಶೌಚಾಲಯ, ಸ್ನಾನದ ಕೊಠಡಿ ಮತ್ತು ವಿದ್ಯುತ್ ಸೌಲಭ್ಯದ ಕೊರತೆ ಎದುರಿಸುತ್ತಿರುವುದನ್ನು ಕಂಡುಕೊಳ್ಳಲಾಗಿದೆ.

೩.೧.೫.೧೬. ಉರುವಲಿನ ವ್ಯವಸ್ಥೆ

ಕಾಡಿನಲ್ಲಿ ವಾಸವಿದ್ದು ಅಲ್ಲಿಂದ ಉರುವಲನ್ನು ಉಚಿತವಾಗಿ ಪಡೆಯುತ್ತಿದ್ದ ಇವರ ಈಗಿನ ಉರುವಲಿನ ವ್ಯವಸ್ಥೆ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೨೧. ಉರುವಲಿನ ವ್ಯವಸ್ಥೆಗಳ ವರ್ಗೀಕರಣ

ಕ್ರ ಸಂ.	ಉರುವಲಿನ ವ್ಯವಸ್ಥೆ	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಕಟ್ಟಿಗೆ ಉರುವಲು ಒಲೆ	೧೨೬	೧೦೦
೨	ಸೀಮೆ ಎಣ್ಣೆ ಒಲೆ	೦	೦
೩	ಗೋಬರ್ ಗ್ಯಾಸ್ ಒಲೆ	೧	೦.೭೯
೪	ಅಡುಗೆ ಅನಿಲ ಒಲೆ	೧	೦.೭೯

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೨೧.ರ ಮಾಹಿತಿಯಂತೆ ಉರುವಲಿಗಾಗಿ ಎಲ್ಲಾ ಕುಟುಂಬಗಳು ಕಟ್ಟಿಗೆಯನ್ನು ಅವಲಂಭಿಸಿವೆ. ಒಂದು ಕುಟುಂಬ ಗೋಬರ್ ಗ್ಯಾಸ್ ಒಲೆ ಮತ್ತು ಒಂದು ಕುಟುಂಬ ಅಡುಗೆ ಅನಿಲ ಒಲೆಯ ವ್ಯವಸ್ಥೆಯನ್ನು ಹೊಂದಿವೆ.

ಗೋಬರ್ ಗ್ಯಾಸ್ ಒಲೆಯ ಸೌಲಭ್ಯ ಮಾಡಿಕೊಳ್ಳಲು ಸೆಗಣಿಗಾಗಿ ಮನೆಯಲ್ಲಿ ಜಾನುವಾರುಗಳಿಲ್ಲ. ಅಡುಗೆ ಅನಿಲ ಸೌಲಭ್ಯಕ್ಕಾಗಿ ಹಣಕಾಸಿನ ಕೊರತೆಯಿದೆ. ಅದನ್ನು ಪಡೆಯಬೇಕಾದರೆ ಪ್ರಭಾವಿ ವ್ಯಕ್ತಿಗಳಿಂದ ಒತ್ತಡ ತರಬೇಕು. ಹೆಚ್ಚಿನ ಹಣವನ್ನು ವ್ಯಯಿಸಬೇಕಾಗುತ್ತದೆ. ವರ್ಷಗಟ್ಟಲೆ ಕಾಯಬೇಕಾಗಿದೆ. ಈ ಎಲ್ಲಾ ಕಾರಣಗಳಿಂದ ಕಟ್ಟಿಗೆ

ಒಲೆಯನ್ನೇ ಅವಲಂಭಿಸಿದ್ದಾರೆ. ಈಗಲೂ ಪುನರ್ವಸತಿ ಕೇಂದ್ರದ ಸುತ್ತಾ ಕಾಡಿದ್ದರೂ ಅಲ್ಲಿಂದ ಕಟ್ಟಿಗೆ ಸಂಗ್ರಹಿಸುವ ಹಾಗಿಲ್ಲ. ಕಟ್ಟಿಗೆ ಡಿಪೋದಿಂದ ಖರೀದಿ ಮಾಡಬೇಕು. ಹಣಕಾಸಿನ ಕೊರತೆ ಮತ್ತು ಅಡುಗೆ ಅನಿಲ ಸೌಲಭ್ಯ ಸುಲಭವಾಗಿ ದೊರೆಯದೇ ಇದ್ದ ಕಾರಣ ಸಂತ್ರಸ್ತರು ಇನ್ನು ಕೂಡಾ ಒಲೆ ಉರಿಸಲು ಕಟ್ಟಿಗೆಯನ್ನೇ ಅವಲಂಭಿಸಿರುತ್ತಾರೆ. ಆದರೆ ಉರುವಲಿನ ವ್ಯವಸ್ಥೆ ಅವರಿಗೆ ದುಬಾರಿಯಾಗುತ್ತಿದೆ ಎಂಬ ಮಾಹಿತಿ ಅಧ್ಯಯನದಿಂದ ಕಂಡುಬಂದಿದೆ.

೩.೧.೫.೧೭. ಅಡುಗೆ ಮನೆ ವ್ಯವಸ್ಥೆಗಳು

ಸಂತ್ರಸ್ತರ ಜೀವನ ಮಟ್ಟದ ಒಳನೋಟಕ್ಕಾಗಿ ತಮ್ಮ ಅಡುಗೆ ಮನೆಗಳಲ್ಲಿ ಅವರು ಯಾವ ರೀತಿಯ ವ್ಯವಸ್ಥೆಗಳನ್ನು ಹೊಂದಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೨೨. ಅಡುಗೆ ಮನೆ ವ್ಯವಸ್ಥೆಗಳ ವರ್ಗೀಕರಣ

ಅಡುಗೆ ಮನೆ ವ್ಯವಸ್ಥೆಗಳು	ಒಟ್ಟು ಕುಟುಂಬಗಳು	ಪ್ರತಿಶತ
ವಿದ್ಯುತ್ ಒಲೆ	೦	೦
ಕುಕ್ಕರ್	೨	೧.೫೯
ಮಿಕ್ಸರ್	೧೮	೧೪.೨೮
ಮಣ್ಣಿನ ಪಾತ್ರೆಗಳು	೩	೨.೩೮
ಅಲ್ಯುಮಿನಿಯಂ ಪಾತ್ರೆಗಳು	೭	೫.೫೫
ಸ್ಟೀಲ್ ಪಾತ್ರೆಗಳು	೧೧೬	೯೨.೦೬

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೨೨.ರ ಮಾಹಿತಿಯಂತೆ ಸಂತ್ರಸ್ತರ ಮನೆಗಳಲ್ಲಿ ಅಡುಗೆ ಮನೆ ವ್ಯವಸ್ಥೆಗಳ ಕೊರತೆಯ ತೀವ್ರತೆಯನ್ನು ಕಾಣಬಹುದು. ಆಧುನಿಕ ಅಡುಗೆ ಸೌಲಭ್ಯಗಳಾದ ಕುಕ್ಕರ್ ಮತ್ತು ಮಿಕ್ಸರ್ ಸೌಲಭ್ಯವನ್ನು ಪಡೆದುಕೊಳ್ಳಲು ಅವರಲ್ಲಿ ಹಣಕಾಸಿನ ಕೊರತೆಯಿದೆ. ಕಟ್ಟಿಗೆ ಉರುವಲು ಒಲೆಯಲ್ಲಿ ಈ ಕುಕ್ಕರ್‌ನ್ನು ಅಡುಗೆಗಾಗಿ ಬಳಸಲಾಗುವುದಿಲ್ಲ. ೩ ಕುಟುಂಬಗಳು ತೀರಾ ಬಡತನದಲ್ಲಿದ್ದು ಅವರ ಮನೆಯಲ್ಲಿ ಅಲ್ಯುಮಿನಿಯಂ ಪಾತ್ರೆಯಾಗಲೀ ಅಥವಾ ಸ್ಟೀಲ್ ಪಾತ್ರೆಯಾಗಲೀ ಲಭ್ಯವಿಲ್ಲ. ಅವರು ಈಗಲೂ ಅಡುಗೆಗಾಗಿ ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದಾರೆ. ೭ ಕುಟುಂಬಗಳು ಅಲ್ಯುಮಿನಿಯಂ ಪಾತ್ರೆಗಳನ್ನು ಹೊಂದಿದ್ದು ಅದು ಬೆರಳೆಣಿಕೆಯಷ್ಟಿದೆ. ಅವರು ಮಣ್ಣಿನ ಪಾತ್ರೆಗಳನ್ನು ಕೂಡಾ ಉಪಯೋಗಿಸುತ್ತಾರೆ. ೧೧೬ ಕುಟುಂಬಗಳು ಸ್ಟೀಲ್ ಪಾತ್ರೆಗಳನ್ನು ಹೊಂದಿದ್ದು ಅವುಗಳ ಸಂಖ್ಯೆ ತೀರಾ ಕಡಿಮೆಯಿದೆ. ಹಾಗೂ ಕಡಿಮೆ ದರದ ಸ್ಟೀಲ್

ಪಾತ್ರೆಗಳನ್ನು ಉಪಯೋಗಿಸುತ್ತಿದ್ದಾರೆ. ಇವರು ಅಲ್ಯುಮಿನಿಯಂ ಮತ್ತು ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದಾರೆ.

ಭಾರತವು ದೇಶದ ಅಭಿವೃದ್ಧಿಗಾಗಿ ಲೆಕ್ಕವಿಲ್ಲದಷ್ಟು ಬೃಹತ್ ಯೋಜನೆಗಳನ್ನು ಕೈಗೊಂಡು ಪ್ರಗತಿಯಲ್ಲಿ ವಿಶ್ವದ ಮುಂಚೂಣಿಯಲ್ಲಿದೆ ಎಂದು ತನ್ನನ್ನು ತಾನು ಅಭಿವ್ಯಕ್ತಿಗೊಳಿಸುತ್ತಿದೆ. ಆದರೆ ಅದಕ್ಕಾಗಿ ಸರ್ವಸ್ವವನ್ನೂ ಬಿಟ್ಟು ಕೊಟ್ಟ ತ್ಯಾಗಿಗಳ ಪ್ರಸ್ತುತದ ಜೀವನ ಸ್ಥಿತಿ ಈ ರೀತಿಯಾಗಿದೆ. ಸ್ಥಳಾಂತರಗೊಂಡು ಮೂವತ್ತೈದು ವರ್ಷಗಳೇ ಕಳೆದರೂ ಅವರ ಪರಿಸ್ಥಿತಿ ಈ ತರಹ ಇದೆ. ಅತ್ಯಂತ ಕಷ್ಟದಲ್ಲಿ ಬದುಕುತ್ತಿರುವ ಸಂತ್ರಸ್ತರ ಕುಟುಂಬಗಳಲ್ಲಿ ಇರುವುದನ್ನಾದರೂ ಅಡುಗೆ ಮಾಡಿ ಉಣ್ಣಲು ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಅಭಿವೃದ್ಧಿಯ ಅಬ್ಬರದಲ್ಲಿ ಅವರ ಬದುಕು ತೀರಾ ಬಡವಾಗಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೧೮. ನೀರು ಪೂರೈಕೆ ವ್ಯವಸ್ಥೆ

ಸಂತ್ರಸ್ತ ಕುಟುಂಬಗಳಿಗೆ ನೀರು ಪೂರೈಕೆ ಆಗುತ್ತಿರುವ ವ್ಯವಸ್ಥೆಗಳನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ೩.೨೩.ರ ಮಾಹಿತಿಯಂತೆ ಶೇಕಡಾ ೧೨.೬೯ರಷ್ಟು ಕುಟುಂಬಗಳಿಗೆ ಸ್ವಂತ ನಲ್ಲಿಯ ವ್ಯವಸ್ಥೆ ಇದೆ. ಉಳಿದಂತೆ ನೀರಿಗಾಗಿ ಸರ್ಕಾರಿ ನಲ್ಲಿಯನ್ನು ಅವಲಂಭಿಸಿದ್ದಾರೆ. ರಾಮನಗರ ಟೌನ್‌ಶಿಪ್ ಮಲೆನಾಡಿನಲ್ಲಿ ಇರುವುದಾದರೂ ಯಾರೂ ಕೂಡಾ ಸ್ವಂತ ತೆರೆದ ಬಾವಿ ವ್ಯವಸ್ಥೆಯನ್ನು ಹೊಂದಿಲ್ಲ. ಶೇಕಡಾ ೨೬.೧೯ರಷ್ಟು ಕುಟುಂಬಗಳಿಗೆ ಸರ್ಕಾರಿ ತೆರೆದ ಬಾವಿ ಸೌಲಭ್ಯವಿದೆ. ಪ್ರತಿಶತ ೫೦.೭೯ರಷ್ಟು ಕುಟುಂಬಗಳಿಗೆ ಸರ್ಕಾರಿ ಕೊಳವೆ ಬಾವಿ ಸನಿಹವಿದೆ. ಶೇಕಡಾ ೧೨.೭೦ರಷ್ಟು ಕುಟುಂಬಗಳಿಗೆ ಪಾಂಡರಿ ನದಿ ಹತ್ತಿರದಲ್ಲಿ ಇದ್ದು ಬಟ್ಟೆ ತೊಳೆಯಲು ಅದನ್ನು ಉಪಯೋಗಿಸುತ್ತಾರೆ.

ಕೋಷ್ಟಕ ಸಂಖ್ಯೆ. ೩.೨೩. ನೀರು ಪೂರೈಕೆ ವ್ಯವಸ್ಥೆಗಳ ವರ್ಗೀಕರಣ

ಕ್ರ ಸಂ.	ನೀರು ಪೂರೈಕೆ ವ್ಯವಸ್ಥೆ	ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಸ್ವಂತ ನಳ್ಳಿ	೧೬	೧೨.೬೯
೨	ಸರ್ಕಾರಿ ನಳ್ಳಿ	೧೧೦	೮೭.೩೧
೩	ಸ್ವಂತ ತೆರೆದ ಬಾವಿ	೦	೦
೪	ಸರ್ಕಾರಿ ತೆರೆದ ಬಾವಿ	೩೩	೨೬.೧೯
೫	ಸರ್ಕಾರಿ ಕೊಳವೆ ಬಾವಿ	೬೪	೫೦.೭೯
೬	ತೊರೆ/ಹಳ್ಳ	೬	೪.೭೬
೭	ನದಿ	೧೬	೧೨.೭೦

ಆಧಾರ: ಕ್ಷೇತ್ರಕಾರ್ಯ

ಆರ್ಥಿಕವಾಗಿ ಸ್ವಲ್ಪ ಅನುಕೂಲಕರವಾಗಿರುವ ಕುಟುಂಬಗಳು ಪ್ರಭಾವಿ ವ್ಯಕ್ತಿಗಳ ಸಹಾಯವನ್ನು ಪಡೆದುಕೊಂಡು ಸ್ವಂತ ನಲ್ಲಿಯನ್ನು ಹಾಕಿಕೊಂಡಿದ್ದಾರೆ. ಸರ್ಕಾರಿ ನಲ್ಲಿಯನ್ನು ಕೆ.ಪಿ.ಸಿ. ಮೂವತ್ತೈದು ವರ್ಷಗಳಷ್ಟು ಹಿಂದೆ ಹಾಕಿದ್ದು ಈಗ ಎಲ್ಲಾ ಮುರಿದು ಹೋಗಿದೆ. ಆದರೂ ಇಲ್ಲಿ ಯಾವುದೇ ಯೋಜನೆಗಳಿಂದ ಇದನ್ನು ನವೀಕರಣ ಮಾಡಲಾಗಲಿಲ್ಲ. ಸರ್ಕಾರಿ ನಲ್ಲಿಗಳ ಸಂಖ್ಯೆ ಕಡಿಮೆ ಇದ್ದು ಹೆಚ್ಚು ಕುಟುಂಬಗಳು ಒಂದೇ ನಲ್ಲಿಯಿಂದ ನೀರನ್ನು ಪಡೆಯುತ್ತಿವೆ. ನದಿ ನೀರು ಹದಿನೈದು ದಿನಕ್ಕೊಮ್ಮೆ ೧೫ ನಿಮಿಷ ತೆಳ್ಳಗೆ ಬಂದು ಹೋಗುತ್ತದೆ. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಯಾರು ಪ್ರಭಾವಿ ವ್ಯಕ್ತಿಗಳಿರುತ್ತಾರೋ ಅವರ ಮನೆಕಡೆಗೆ ಬೇಕಾದಷ್ಟು ನೀರು ಪೂರೈಸಿಕೊಳ್ಳುತ್ತಾರೆ. ಉಳಿದ ಕಡೆಗೆ ಗ್ರಾಮಪಂಚಾಯತ್‌ನವರಿಗೆ ನೀರು ಬಿಡುವ ಅಭ್ಯಾಸವೇ ಇಲ್ಲ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಪಾಂಡರಿ ನದಿಯಲ್ಲಿ ಅಕ್ರಮ ಮರಳುಗಾರಿಕೆ ಮಾಡುತ್ತಿರುವುದರಿಂದ ಪೂರೈಕೆಯಾಗುತ್ತಿರುವ ನೀರು ತುಂಬಾ ಕೊಳಕಾಗಿದೆ. ಕುಡಿಯಲಿಕ್ಕಾಗಲೀ, ಸ್ನಾನಕ್ಕಾಗಲೀ ಇದು ಯೋಗ್ಯವಿಲ್ಲ. ಹಣಕಾಸಿನ ತೊಂದರೆ ಹಾಗೂ ಸವಳು ಇರುವುದರಿಂದ ಯಾರೂ ಸ್ವಂತ ಬಾವಿಯನ್ನು ತೋಡಿಸಿಕೊಳ್ಳಲಿಲ್ಲ. ಕೆ.ಪಿ.ಸಿ.ಯವರು ರಾಮನಗರದಲ್ಲಿ ತೆರೆದ ಬಾವಿಯನ್ನು ನಿರ್ಮಾಣ ಮಾಡಿದ್ದು ಕೆಲವರು ಅದರ ನೀರನ್ನು ಉಪಯೋಗಿಸುತ್ತಿದ್ದಾರೆ. ಬಾವಿ ತುಂಬಾ ಆಳವಾಗಿದ್ದು ನೀರು ಸೇದಲು ಕಷ್ಟವಿದೆ. ಅದು ಹಳೆಯದಾಗಿದ್ದು ಕಸ, ಗಿಡ, ಗಂಟಿ ತುಂಬಿದೆ. ಅದಲ್ಲದೇ ಬಾವಿಗಳು ತುಂಬಾ ದೂರದಲ್ಲಿವೆ. ಕೊಳವೆ ಬಾವಿ ಮೂವತ್ತೈದು ವರ್ಷಗಳಷ್ಟು ಹಳೆಯದಾಗಿದ್ದು ನೀರು ಬರುವುದಿಲ್ಲ. ನಡುರಾತ್ರಿ ಪ್ರಯತ್ನ ಪಟ್ಟರೆ ಸ್ವಲ್ಪ ನೀರು ಬರುತ್ತದೆ. ರಾಮನಗರ ಪುನರ್ವಸತಿ ಕೇಂದ್ರ ಕಾಡಾಗಿದ್ದ ಕಾರಣ ಭೂಪ್ರದೇಶ ಎತ್ತರ ತಗ್ಗುಗಳಿಂದ ಕೂಡಿದೆ. ಎತ್ತರದ ದಿಣ್ಣೆಗಳಲ್ಲಿ ವಾಸಿಸುವ ಕುಟುಂಬಗಳಿಗೆ ಈ ಬಾವಿ ಹಾಗೂ ಕೊಳವೆ ಬಾವಿಗಳಿಂದ ನೀರನ್ನು ತರುವುದು ಕಷ್ಟವಾಗುತ್ತಿದೆ. ಪುನರ್ವಸತಿ ಕೇಂದ್ರ ಕಾಡಿನ ಮಧ್ಯೆ ಇರುವುದರಿಂದ ಅಲ್ಲಿ ಒಂದು ಸಣ್ಣ ನಾಲೆ ಹರಿಯುತ್ತದೆ. ಇದು ಪುನರ್ವಸತಿ ಕೇಂದ್ರಕ್ಕೆ ಸುತ್ತುವರಿದು ಹರಿಯುತ್ತದೆ. ಹನುಮಾನ್ ಗಲ್ಲಿ, ಲಕ್ಷ್ಮಿಗಲ್ಲಿ, ಕೃಷ್ಣಾಗಲ್ಲಿಯ ಕೆಲವರು ಇಲ್ಲಿ ಬಟ್ಟೆ ತೊಳೆಯುತ್ತಾರೆ. ಗಣೇಶಗಲ್ಲಿಯ ಕುಟುಂಬಗಳು ಪಾಂಡರಿ ನದಿಯಲ್ಲಿ ಬಟ್ಟೆ ತೊಳೆಯುತ್ತಾರೆ. ಕೆ.ಪಿ.ಸಿ. ಮಾಡಿರುವ ನೀರಿನ ವ್ಯವಸ್ಥೆ ತುಂಬಾ ಹಳೆಯದಾಗಿದ್ದು ಸಂತ್ರಸ್ತ ಕುಟುಂಬದವರಿಗೆ ಸಾಕಾಗುವುದಿಲ್ಲ. ಜೋಯಿಡಾ ಟೌನ್‌ಶಿಪ್‌ನಲ್ಲಿ ಸರ್ಕಾರಿ ನಲ್ಲಿಯಿಂದ ನೀರನ್ನು ಪಡೆದುಕೊಳ್ಳುತ್ತಿದ್ದಾರೆ.

ಈ ಎಲ್ಲಾ ಮಾಹಿತಿದಾರರ ಮನೆ, ಜಮೀನು ಮತ್ತು ಅಪಾರ ಸಂಪತ್ತು ಕಾಳಿ ನದಿಯಿಂದ ನಿರ್ಮಿತವಾದ ಸೂಪಾ ಜಲಾಶಯದಲ್ಲಿ ಮುಳುಗಿ ಹೋಗಿದೆ. ಆದರೆ ಸಂತ್ರಸ್ತರಾದ ಇವರು ಕುಡಿಯುವ ನೀರಿಗಾಗಿ ವ್ಯಥೆ ಪಡಬೇಕಿದೆ. ಅಪಾರ ಜಲರಾಶಿಯಿದ್ದರೂ ಅದರೊಡಲ ಸಂತ್ರಸ್ತರು ನೀರಿಲ್ಲದೇ ಹಾಹಾಕಾರಗೊಂಡಿರುತ್ತಾರೆ. ಒಂದಿಷ್ಟು ಪೂರೈಕೆಯಾಗುತ್ತಿರುವ ನೀರು ತುಂಬಾ ಕೊಳಕಾಗಿದ್ದು ಅದು ಯಾವುದಕ್ಕೂ

ಯೋಗ್ಯವಿರುವುದಿಲ್ಲ. ನೀರು ಪೂರೈಕೆಯಲ್ಲಿಯೂ ತುಂಬಾ ತಾರತಮ್ಯ ನಡೆಯುತ್ತಿದ್ದು ಸಂತ್ರಸ್ತರು ನೀರಿಗಾಗಿ ಪರದಾಡುತ್ತಿರುವುದು ಕಂಡುಬಂದಿದೆ. ಪುನರ್ವಸತಿ ಕೇಂದ್ರದಲ್ಲಿ ನೀರು ಪೂರೈಕೆ ತುಂಬಾ ಅವ್ಯವಸ್ಥಿತವಾಗಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೧೯. ಕುಡಿಯುವ ಹಾಗೂ ಬಳಕೆಯ ನೀರು ಸಂಗ್ರಹಣಾ ವ್ಯವಸ್ಥೆ

ಸಂತ್ರಸ್ತ ಕುಟುಂಬಗಳು ನೀರನ್ನು ಶೇಖರಿಸಿಡಲು ತಮ್ಮ ಮನೆಯಲ್ಲಿ ಏನು ವ್ಯವಸ್ಥೆ ಹೊಂದಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಅವರ ಬಡತನದ ತೀವ್ರತೆಯ ಹಿನ್ನೆಲೆಯಲ್ಲಿ ಇದಕ್ಕೆ ಒತ್ತು ನೀಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೨೪. ನೀರು ಸಂಗ್ರಹಣಾ ವ್ಯವಸ್ಥೆಗಳ ವರ್ಗೀಕರಣ

ಕ್ರ. ಸಂ.	ನೀರು ಸಂಗ್ರಹಣಾ ವ್ಯವಸ್ಥೆ	ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಪಾತ್ರೆಗಳಲ್ಲಿ ಮಾತ್ರಾ	೬	೪.೭೬
೨	ಕೊಡಗಳಲ್ಲಿ ಮಾತ್ರಾ	೧೦	೭.೯೪
೩	ಪ್ಲಾಸ್ಟಿಕ್ ಡ್ರಮ್	೮೦	೬೩.೫೦
೪	ಸಿಮೆಂಟ್ ತೊಟ್ಟಿ	೩೦	೨೩.೮೦

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೨೪.ರ ಮಾಹಿತಿಯಂತೆ ಶೇಕಡಾ ೪.೭೬ರಷ್ಟು ಕುಟುಂಬಗಳು ಕುಡಿಯುವ ಮತ್ತು ಬಳಕೆಯ ನೀರನ್ನು ಶೇಖರಿಸಿಡಲು ಸಣ್ಣ ಸಣ್ಣ ಪಾತ್ರೆಗಳನ್ನು ಹೊಂದಿದ್ದಾರೆ. ಪ್ರತಿಶತ ೭.೯೪ರಷ್ಟು ಕುಟುಂಬಗಳು ಕೊಡಗಳನ್ನು, ಪ್ರತಿಶತ ೬೩.೫೦ರಷ್ಟು ಕುಟುಂಬಗಳು ಪ್ಲಾಸ್ಟಿಕ್ ಡ್ರಮ್‌ಗಳನ್ನು, ಶೇಕಡಾ ೨೩.೮೦ ಕುಟುಂಬಗಳು ಸಿಮೆಂಟ್ ತೊಟ್ಟಿಯನ್ನು ಹೊಂದಿವೆ.

೧೬ ಕುಟುಂಬಗಳಲ್ಲಿ ಕುಡಿಯುವ ಮತ್ತು ಬಳಕೆಯ ನೀರನ್ನು ಶೇಖರಿಸಿಡಲು ಒಂದು ಸಣ್ಣ ಪ್ಲಾಸ್ಟಿಕ್ ಡ್ರಮ್‌ನ ವ್ಯವಸ್ಥೆ ಕೂಡಾ ಇಲ್ಲದ್ದು ಅಧ್ಯಯನದಿಂದ ಕಂಡುಬಂದಿದೆ. ಸಣ್ಣ ಸಣ್ಣ ಅಡುಗೆ ಪಾತ್ರೆಗಳಲ್ಲಿ, ಕೊಡಗಳಲ್ಲಿ ನೀರನ್ನು ಶೇಖರಿಸಿಡುತ್ತಾರೆ. ಅದರಲ್ಲೂ ೬ ಕುಟುಂಬಗಳಿಗೆ ಒಂದಿಷ್ಟು ಕೊಡಗಳನ್ನು ಖರೀದಿಸಲು ಸಹ ಹಣಕಾಸಿನ ತೊಂದರೆಯಿದೆ. ಅಡುಗೆ ಪಾತ್ರೆಗಳಲ್ಲೇ ನೀರನ್ನು ತುಂಬಿಕೊಂಡು ಅಡುಗೆ ಮಾಡಲು ಒಂದಕ್ಕೊಂದು ಬದಲಾಯಿಸಿಕೊಂಡು ನಿಭಾಯಿಸುತ್ತಿದ್ದಾರೆ. ಪ್ಲಾಸ್ಟಿಕ್ ಡ್ರಮ್‌ಗಳನ್ನು ಹೊಂದಿರುವ ಕೆಲವು ಕುಟುಂಬಗಳು ಸಿಮೆಂಟ್ ತೊಟ್ಟಿಯನ್ನೂ ಹೊಂದಿವೆ. ಸಣ್ಣ ಪಾಸ್ಟಿಕ್ ಡ್ರಮ್ ಮತ್ತು ಸಣ್ಣ ಸಣ್ಣ ತೊಟ್ಟಿಗಳನ್ನು ಕಟ್ಟಿಕೊಂಡಿದ್ದಾರೆ. ನೀರು ಶೇಖರಿಸಿಡುವ ಹೆಚ್ಚಿನ ಸೌಲಭ್ಯಕ್ಕಾಗಿ ಹಣಕಾಸಿನ ತೊಂದರೆ, ಮನೆಯಲ್ಲಿ ಇಟ್ಟುಕೊಳ್ಳಲು ಸ್ಥಳದ

ಕೊರತೆಯಿದೆ. ನೀರು ಪೂರೈಕೆಯ ಅಭಾವವಿದ್ದು, ಶೇಖರಿಸಿಡಲು ನೀರಾದರೂ ಎಲ್ಲಿಂದ ತರುವುದು ಎಂಬ ಅಭಿಪ್ರಾಯ ಸಿಮೆಂಟ್ ತೊಟ್ಟಿ ಮತ್ತು ಪ್ಲಾಸ್ಟಿಕ್ ಡ್ರಮ್‌ಗಳನ್ನು ಹೊಂದಿದವರಲ್ಲಿ ವ್ಯಕ್ತವಾಗಿದೆ.

ಮನುಷ್ಯನಿಗೆ ಅತೀ ಅವಶ್ಯವಾಗಿರುವ ನೀರಿನ ಪೂರೈಕೆಯ ಅಭಾವವಿರುವುದು ಇಲ್ಲಿ ಕಂಡುಬಂದಿದೆ. ಅದರಲ್ಲೂ ವಿಪರ್ಯಾಸ ಎಂದರೆ ದೊರೆತ ನೀರನ್ನಾದರೂ ಸಂಗ್ರಹಿಸಿಡಲು ಮಾಹಿತಿದಾರರ ಕುಟುಂಬಗಳಲ್ಲಿ ಸೌಲಭ್ಯವಿರುವುದಿಲ್ಲ. ಜೀವನಾವಶ್ಯಕ ವಸ್ತುಗಳಿಗೆ ಕೂಡಾ ಈ ರೀತಿಯಲ್ಲಿ ಕೊರತೆ ಇದ್ದರೆ ಅವರ ಹೆಚ್ಚಿನ ಅವಶ್ಯಕತೆಗಳು ನೀಗುವುದಾದರೂ ಹೇಗೆ? ಕೆಲವು ಸಂತ್ರಸ್ತರಿಗೆ ಒಂದಿಷ್ಟು ಪರಿಕರಗಳನ್ನು ಖರೀದಿಸಲು ಹಣವಿಲ್ಲದಿರುವುದು, ಅದನ್ನು ಇಟ್ಟುಕೊಳ್ಳಲು ಮನೆಯಲ್ಲಿ ಸ್ಥಳಾವಕಾಶವಿಲ್ಲದಿರುವುದು ವಿಪರ್ಯಾಸವೇ ಸರಿ.

ಮಾಹಿತಿದಾರರಾದ ಸೂಪಾ ಜಲಾಶಯ ಸಂತ್ರಸ್ತ ಕುಣಬಿಗಳಲ್ಲಿ ಕೆಲವರು ಕುಡಿಯುವ ನೀರನ್ನು ಶೇಖರಿಸಿಡಲು ಕೊಡಗಳನ್ನೂ ಖರೀದಿಸದ ಸ್ಥಿತಿಯಲ್ಲಿ ಇದ್ದಾರೆ. ಇವರ ಮನೆಗಳಲ್ಲಿ ತುಂಬಾ ಬಡತನ ಇದೆ ಎಂಬ ಅಂಶವನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

೩.೧.೫.೨೦. ಕುಟುಂಬಗಳು ಹೊಂದಿರುವ ಕೈತೋಟ

ಸ್ಥಳಾಂತರಪೂರ್ವದಲ್ಲಿ ತಮಗೆ ಬೇಕಾದ ತರಕಾರಿ ಹಾಗೂ ಹಣ್ಣು ಹಂಪಲುಗಳನ್ನು ತಾವೇ ಬೆಳೆದುಕೊಳ್ಳುತ್ತಿದ್ದ ಇವರ ಈಗಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೨೫. ಕೈತೋಟದ ವರ್ಗೀಕರಣ

ಕ್ರಸಂ	ಕೈತೋಟದ ಮಾಹಿತಿ	ಮರ/ಗಿಡಗಳ ಸಂಖ್ಯೆ				ಪ್ರತಿಶತ
		೧ ರಿಂದ ೩	೪ ರಿಂದ ೬	೭ ರಿಂದ ೧೦	ಒಟ್ಟು	
೧	ಹೂವಿನ ಗಿಡಗಳು	೭೦	೫	೦	೭೫	೫೯.೫೨
೨	ತರಕಾರಿ ಗಿಡಗಳು	೩೪	೦	೦	೩೪	೨೬.೯೮
೩	ಪೇರಲೆ ಹಣ್ಣಿನ ಗಿಡ	೫೨	೧	೦	೫೩	೪೨.೦೬
೪	ರಾಮಫಲ/ಸೀತಾಫಲ	೬	೦	೧	೭	೫.೫೫
೫	ನೆಲ್ಲಿ ಕಾಯಿ ಗಿಡ	೭	೦	೦	೭	೫.೫೫
೬	ಪುನಾರ್ಪುಳಿ ಗಿಡ	೮	೦	೦	೮	೬.೩೫
೭	ನಿಂಬೆ ಗಿಡ	೧೩	೦	೦	೧೩	೧೦.೩೨
೮	ಅನಾನಾಸು	೬	೦	೦	೬	೪.೭೬
೯	ಗೋಡಂಬಿ ಮರ	೧೭	೧	೧	೧೯	೧೫.೦೮
೧೦	ಮಾವಿನ ಮರ	೩೦	೨	೧	೩೩	೨೬.೧೯
೧೧	ಹಲಸಿನ ಮರ	೪೬	೪	೦	೫೦	೩೯.೬೮
೧೨	ಬಾಳೆ ಗಿಡಗಳು	೨೩	೭	೫	೩೫	೨೭.೭೮
೧೩	ತೆಂಗಿನ ಮರ	೩೬	೧೦	೧	೪೭	೩೭.೩೦
೧೪	ಅಡಿಕೆ ಮರ	೫	೦	೧	೬	೪.೭೬
೧೫	ಕಬ್ಬು	೭	೦	೦	೭	೫.೫೫

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೨೫.ರ ಮಾಹಿತಿಯಂತೆ ಶೇಕಡಾ ೫೯.೫೨ರಷ್ಟು ಕುಟುಂಬಗಳಲ್ಲಿ ಕೈತೋಟವಿದ್ದು ಅದರಲ್ಲಿ ಹೂವಿನ ಗಿಡಗಳಿವೆ. ಪ್ರತಿಶತ ೪೦ರಷ್ಟು ಕುಟುಂಬಗಳಲ್ಲಿ ಕೈತೋಟ ಇಲ್ಲ. ಸ್ಥಳಾಂತರಪೂರ್ವದಲ್ಲಿ ಅವರು ಸಾಕಷ್ಟು ಸಂಖ್ಯೆಯಲ್ಲಿ ಹೂವಿನ ಗಿಡಗಳು, ಹಣ್ಣಿನ ಮರಗಳು, ಅಡಿಕೆ, ಬಾಳೆ, ತೆಂಗಿನ ಮರಗಳನ್ನು ಬೆಳೆದಿದ್ದರು. ಆದರೆ ಸ್ಥಳಾಂತರದ ನಂತರದಲ್ಲಿ ಕೆಲವೇ ಕುಟುಂಬಗಳಲ್ಲಿ ಅದರಲ್ಲೂ ಕಡಿಮೆ ಸಂಖ್ಯೆಯಲ್ಲಿ ಗಿಡಗಳಿವೆ. ಒಂದು ನಿವೇಶನದಲ್ಲಿ ಅಧಿಕ ಮನೆಗಳು, ನೀರಿನ ಅಭಾವ, ಬೇಲಿ ಕೊರತೆ ಇದೆ. ಹಂದಿ, ದನ, ಕೋಳಿಗಳು ಬಂದು ಹಾಳು ಮಾಡುತ್ತವೆ. ಬೆಳೆದ್ದದಕ್ಕೂ ಏನೂ ದೊರೆಯುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಎಲ್ಲವನ್ನೂ ತಾವೇ ಸ್ವತಃ ಬೆಳೆದುಕೊಂಡು ತಿನ್ನುತ್ತಿದ್ದ ಇವರು ಈಗ ಏನೂ ಬೆಳೆಯಲಾರದ ಸ್ಥಿತಿಯಲ್ಲಿ ಇದ್ದಾರೆ. ಮನೆಯ ಒಳಗೂ ಮನೆಯ ಹೊರಗೂ ಏನೂ

ಇಲ್ಲದೇ ಸಂತ್ರಸ್ತರ ಮನೆಗಳು ಬಿಕೋ ಎನ್ನುತ್ತಿವೆ. ದಾರಿದ್ರ್ಯ, ಬೇಜಾರು ಇವರನ್ನು ಕಾಡುತ್ತಿದೆ ಎಂಬ ಅಂಶವನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೨೧. ದೈನಂದಿನ ಆಹಾರ

ಹಾಲು, ಮೊಸರು, ತುಪ್ಪ, ಹಾಲಿನ ಚಹಾ, ಅಡುಗೆ ಎಣ್ಣೆ, ತೆಂಗಿನಕಾಯಿ, ಸೊಪ್ಪು, ಬೇಳೆಕಾಳುಗಳು ಇವು ಇಂದಿನ ದಿನದಲ್ಲಿ ಎಲ್ಲರೂ ಸಾಮಾನ್ಯವಾಗಿ ದಿನನಿತ್ಯಲೂ ಉಪಯೋಗಿಸುವ ಆಹಾರವಾಗಿದೆ. ಪ್ರತೀ ದಿನವೂ ಇವುಗಳು ಇಲ್ಲದೇ ಆಹಾರ ಸಂಪೂರ್ಣ ಆಗುವುದೇ ಇಲ್ಲ. ಹಾಗೆಯೇ ಕುಣಬಿಯರು ಕೂಡಾ ಸ್ಥಳಾಂತರಪೂರ್ವ ಬದುಕಿನಲ್ಲಿ ಇವುಗಳನ್ನು ಯಥೇಚ್ಚವಾಗಿ ಬಳುಸುತ್ತಿದ್ದರು. ಇವರ ಈಗಿನ ಆಹಾರ ಲಭ್ಯತೆ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೨೬. ದೈನಂದಿನ ಆಹಾರ ಬಳಕೆಯ ವರ್ಗೀಕರಣ

ಕ್ರ.ಸಂ.	ವಿವರ	ಇಲ್ಲ	ಎಂದಾದರೂ	ಪ್ರತಿ ದಿನ	ಒಟ್ಟು ಉಪಯೋಗಿಸುವವರು	ಪ್ರತಿಶತ
೧	ಹಾಲು	೧೦೩	೪	೧೯	೨೩	೧೮.೨೫
೨	ಮೊಸರು	೧೧೭	೪	೫	೯	೭.೧೫
೩	ಬೆಣ್ಣೆ/ತುಪ್ಪ	೧೧೬	೬	೪	೧೦	೭.೯೪
೪	ಟೀ/ಕಾಫಿ/ಕಷಾಯ	೫	೭	೧೧೪	೧೨೧	೯೬.೦೩
೫	ತರಕಾರಿ	೨	೧೧	೧೧೩	೧೨೪	೯೮.೪೧
೬	ಎಣ್ಣೆ	೧	೧೪	೧೧೧	೧೨೫	೯೯.೨೧
೭	ತೆಂಗಿನಕಾಯಿ	೧	೪೫	೮೦	೧೨೫	೯೯.೨೧
೮	ಸೊಪ್ಪು	೨	೧೦೧	೨೩	೧೨೪	೯೮.೪೧
೯	ಬೇಳೆ ಕಾಳುಗಳು	೪	೧೦೯	೧೩	೧೨೨	೯೬.೮೩
೧೦	ಸಿಹಿ ತಿನಿಸು	೦	೧೨೬	೦	೧೨೬	೧೦೦
೧೧	ಗಡ್ಡೆ ಗೆಣಸು	೧೨೪	೨	೦	೨	೧.೫೯
೧೨	ಕಾಡಿನ ಸೊಪ್ಪು	೧೨೨	೩	೧	೪	೩.೧೭
೧೩	ಅಣಬೆ	೧೧೫	೧೦	೧	೧೧	೮.೭೩
೧೪	ಮಾಂಸ	೬೮	೫೮	೦	೫೮	೪೬.೦೩
೧೫	ಮೀನು	೯	೧೧೭	೦	೧೧೭	೯೨.೮೬
೧೬	ಅಕ್ಕಿ	೦	೦	೧೨೬	೧೨೬	೧೦೦
೧೭	ರಾಗಿ	೧೨೫	೦	೧	೧	೦.೭೯
೧೮	ಜೋಳ	೧೨೫	೦	೧	೧	೦.೭೯
೧೯	ಗೋಧಿ	೧೦೮	೧೭	೧	೧೮	೧೪.೨೯

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೨೬.ರ ಮಾಹಿತಿಯ ಪ್ರಕಾರ ಶೇಕಡಾ ೮೧ರಷ್ಟು ಕುಟುಂಬಗಳು ಲಭ್ಯತೆ ಇಲ್ಲದ ಕಾರಣ ಹಾಲನ್ನು ಉಪಯೋಗಿಸುವುದಿಲ್ಲ. ಇವರಿಗೆ ಬೇಕಾದಷ್ಟು ಆಹಾರ ದೊರೆಯುವುದಿಲ್ಲ. ಕಾಡಿನಲ್ಲಿರುವಾಗ ಬೇಟೆಯಾಡುತ್ತಿದ್ದು ಆಗಾಗ ಕಾಡು ಪ್ರಾಣಿಗಳ ಮಾಂಸವನ್ನು ಬಳಸುತ್ತಿದ್ದರು. ಮೀನುಗಳನ್ನು ಹಿಡಿದು ತಿನ್ನುತ್ತಿದ್ದರು. ಆದರೆ ಈಗ ಅವು ದೊರೆಯುವುದಿಲ್ಲ. ಸಾಕಿದ ಪ್ರಾಣಿಗಳನ್ನು ಇವರು ತಿನ್ನುವುದಿಲ್ಲ. ಆದ್ದರಿಂದ ಎಂದಾದರೂ ಸಿಕ್ಕರೆ, ಬೇರೆ ಊರಿನವರು ಯಾರಾದರೂ ಕೊಟ್ಟರೆ ಮಾಂಸ ಸೇವಿಸುತ್ತಾರೆ. ದಿನದ ಊಟಕ್ಕೆ ಎಲ್ಲರೂ ಅನ್ನವನ್ನು ಉಪಯೋಗಿಸುತ್ತಿದ್ದು ಹೆಚ್ಚಿನವರು ಪಡಿತರ ಅಕ್ಕಿಗೆ ಅವಲಂಭಿತರಾಗಿದ್ದಾರೆ. ಅನ್ನ, ಉಪ್ಪು, ಮೆಣಸು ಬಿಟ್ಟು ಉಳಿದವನ್ನು ಅಪರೂಪಕ್ಕೆ ಕಾಣುವಷ್ಟು ಬಡತನ ಸುಮಾರು ಕುಟುಂಬದಲ್ಲಿದೆ.

ಅನುಕೂಲವಾಗಿರುವ ಕೆಲವು ಕುಟುಂಬಗಳ ಹೊರತಾಗಿ ಎಲ್ಲರೂ ತಮ್ಮ ದಿನನಿತ್ಯದ ಆಹಾರಕ್ಕಾಗಿ ಸಾಕಷ್ಟು ಕಷ್ಟಪಡುತ್ತಿದ್ದಾರೆ. ಆಹಾರದಲ್ಲಿ ಸ್ವಾವಲಂಬಿಯಾಗಿ ಬದುಕುತ್ತಿದ್ದ ಕುಣಬಿಯರ ಆಹಾರ ವ್ಯವಸ್ಥೆ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ಆಹಾರದ ಕೊಂಡಿಗಳು ನಾಶ ಆಗಿದೆ. ಸಾಕಷ್ಟು ಕುಟುಂಬಗಳಲ್ಲಿ ಒಲೆ ಉರಿಸಲು, ಏನಾದರೂ ತಯಾರಿ ಮಾಡಲು, ಉಣ್ಣಲು ಏನೇನೂ ಇರುವುದಿಲ್ಲ. ಮಳೆಗಾಲದಲ್ಲಿ ಇವರು ಆಹಾರವಿಲ್ಲದೇ ತತ್ತರಿಸಿ ಹೋಗುತ್ತಾರೆ. ಇದೀಗ ಪಡಿತರ ಅಕ್ಕಿ ದೊರೆಯುವುದರಿಂದಾಗಿ ದಿನದಲ್ಲಿ ಒಂದಿಷ್ಟು ಊಟವಾದರೂ ಸಿಗುತ್ತದೆ. ಅದಕ್ಕೆ ಏನಾದರೂ ಸಾಂಬಾರು ಮಾಡಿಕೊಳ್ಳುವುದು ಕೂಡಾ ಕೆಲವು ಜನರಿಗೆ ಸಾಧ್ಯವಾಗುವುದಿಲ್ಲ.

ಆಹಾರದಲ್ಲಿ ಪರಿಪೂರ್ಣರಾಗಿದ್ದ ಕುಣಬಿಯರು ಇದೀಗ ಆಹಾರಕ್ಕೆ ಗತಿಯಿಲ್ಲದೇ ಪರದಾಡುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೨೨. ಸಾಕು ಪ್ರಾಣಿಗಳು

ಸ್ಥಳಾಂತರ ಪೂರ್ವದಲ್ಲಿ ಎಲ್ಲರ ಮನೆಯಲ್ಲಿಯೂ ಆಕಳು, ಎತ್ತು, ಎಮ್ಮೆ, ಕೋಣ, ನಾಯಿ, ಬೆಕ್ಕುಗಳು ಇದ್ದವು. ಆದರೆ ಈಗ ಪುನರ್ವಸತಿ ಕೇಂದ್ರದಲ್ಲಿ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ೩.೨೭. ಸಾಕು ಪ್ರಾಣಿಗಳ ವರ್ಗೀಕರಣ

ಕ್ರಸಂ	ಪ್ರಾಣಿಗಳ ಹೆಸರು	ಇಲ್ಲದ ಕುಟುಂಬಗಳ ಸಂಖ್ಯೆ		ಇರುವ ಪ್ರಾಣಿಗಳ ಸಂಖ್ಯೆ				ಇರುವ ಒಟ್ಟು ಕುಟುಂಬಗಳು	ಇರುವ ಕುಟುಂಬಗಳ ಪ್ರತಿಶತ
		ಇಲ್ಲ	ಪ್ರತಿಶತ	೧	೨–೪	೫–೧೦	೧೧–೨೦		
೧	ಆಕಳು	೧೦೮	೮೫.೭೧	೮	೭	೧	೨	೧೮	೧೪.೨೯
೨	ಎತ್ತು	೧೨೧	೯೬.೦೩	೨	೩	೦	೦	೫	೩.೯೬
೩	ಎಮ್ಮೆ	೧೨೧	೯೬.೦೩	೦	೪	೦	೧	೫	೩.೯೬
೪	ಕೋಣ	೧೨೬	೧೦೦	೦	೦	೦	೦	೦	೦
೫	ನಾಯಿ	೧೧೩	೮೯.೬೮	೧೩	೦	೦	೦	೧೩	೧೦.೩೨
೬	ಬೆಕ್ಕು	೧೧೪	೯೦.೪೮	೧೨	೦	೦	೦	೧೨	೯.೫೨
						ಒಟ್ಟು		೫೩	೪೨.೦೫

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ಸಂಖ್ಯೆ ೩.೨೭. ರ ಮಾಹಿತಿಯ ಪ್ರಕಾರ ಶೇಕಡಾ ೫೮ರಷ್ಟು ಕುಟುಂಬಗಳಲ್ಲಿ ಯಾವುದೇ ರೀತಿಯ ಪ್ರಾಣಿಗಳಿಲ್ಲ. ಇದೀಗ ಇಲ್ಲಿ ಮನುಷ್ಯರು ಬದುಕುವುದೇ ಕಷ್ಟ, ಇನ್ನೆಲ್ಲಿ ಇವುಗಳನ್ನು ಸಾಕುವುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಜಾಗ, ನೀರು, ಆಹಾರದ ಕೊರತೆಯಿಂದಾಗಿ ಪ್ರಾಣಿಗಳನ್ನು ಸಾಕಿಕೊಳ್ಳಲಿಲ್ಲ. ಕುಣಬಿಯರು ತಮಗೂ ಪ್ರಾಣಿಗಳಿಗೂ ಇದ್ದ ನಂಟನ್ನು ಕಳೆದುಕೊಂಡಿದ್ದಾರೆ. ಇದು ಅವರಿಗೆ ಬೇಸರ ತಂದಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೨೩. ಮನೆಯಲ್ಲಿರುವ ವಿದ್ಯುತ್ ಸಲಕರಣೆಗಳು

ಇಂದು ಪ್ರತಿಯೊಬ್ಬರ ಮನೆಯಲ್ಲಿಯೂ ಬೇಕಾದಷ್ಟು ವಿದ್ಯುತ್ ಸಲಕರಣೆಗಳ ಸೌಲಭ್ಯ ಇರುತ್ತದೆ. ವಿದ್ಯುತ್ ಉತ್ಪಾದನೆಗಾಗಿ ತಮ್ಮ ಜೀವನ ತ್ಯಾಗ ಮಾಡಿದ ಸಂತ್ರಸ್ತರ ಮನೆಯಲ್ಲಿ ಇದು ಎಷ್ಟಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ ೩.೨೮. ವಿದ್ಯುತ್ ಸಲಕರಣೆ ವ್ಯವಸ್ಥೆಗಳ ವರ್ಗೀಕರಣ

ಕ್ರ ಸಂ.	ವಿದ್ಯುತ್ ಸಲಕರಣೆಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಫ್ಯಾನ್	೩೨	೨೫.೪೦
೨	ಇಸ್ತ್ರಿ ಪೆಟ್ಟಿಗೆ	೧೦	೭.೯೪
೩	ವಿದ್ಯುತ್ ಬ್ಯಾಟರಿ	೧	೦.೭೯
೪	ಶೀಥಲ ಯಂತ್ರ	೧	೦.೭೯

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ೩.೨೮.ರ ತೋರಿಸಿರುವಂತೆ ಸಂತ್ರಸ್ತರ ಮನೆಗಳಲ್ಲಿ ಸೌಲಭ್ಯ ಇದೆ. ಫ್ಯಾನ್ ಸೌಲಭ್ಯಗಳಲ್ಲಿ ಹೆಚ್ಚಿನವು ಸಣ್ಣ ಸಣ್ಣ ಫ್ಯಾನ್‌ಗಳೇ ಆಗಿವೆ. ಮನೆಗಳು ಒಂದೊಂದೇ ಫ್ಯಾನ್‌ಗಳನ್ನು ಹೊಂದಿವೆ. ಅವುಗಳನ್ನು ಇಟ್ಟುಕೊಳ್ಳಲು ಅವರುಗಳ ಮನೆಗಳಲ್ಲಿ ವ್ಯವಸ್ಥೆ ಇರುವುದಿಲ್ಲ. ಇಸ್ತ್ರಿ ಪೆಟ್ಟಿಗೆಗಳನ್ನು ಹೊಂದಿರುವ ಹತ್ತು ಕುಟುಂಬಗಳು ಸ್ವಲ್ಪ ಅನುಕೂಲಕರ ಮನೆಯವರು ಆಗಿದ್ದಾರೆ. ಪ್ರಭಾವಿ ವ್ಯಕ್ತಿಗಳು, ಸಮುದಾಯದ ಮುಖಂಡರುಗಳು, ಕಾಲೇಜು ವಿದ್ಯಾಭ್ಯಾಸ ಹಾಗೂ ಮಕ್ಕಳು ಹೊರರಾಜ್ಯದಲ್ಲಿ ದುಡಿಮೆ ಮಾಡುತ್ತಿರುವವರ ಮನೆಯಲ್ಲಿ ಈ ಸೌಲಭ್ಯವಿದೆ. ಹಳೆಯ ಶೀತಲ ಯಂತ್ರ ಮಾರಾಟಕ್ಕೆ ಇದ್ದದ್ದನ್ನು ಖರೀದಿಸಿದ್ದರಿಂದ ಒಂದು ಮನೆಯಲ್ಲಿ ಈ ವ್ಯವಸ್ಥೆ ಇದೆ. ಆಧುನಿಕತೆ ಇಷ್ಟು ಮುಂದುವರಿದರೂ ಮಾಹಿತಿದಾರರಾದ ಸಂತ್ರಸ್ತ ಕುಣಬಿಯರ ಹೆಚ್ಚಿನ ಮನೆಗಳಲ್ಲಿ ಆಧುನಿಕ ಸಲಕರಣೆಗಳು ತೀರಾ ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ. ಜೀವನದ ಅಗತ್ಯ ವಸ್ತುಗಳಿಲ್ಲದೇ ಸಂಕಷ್ಟಪಡುತ್ತಿರುವ ಹೆಚ್ಚಿನ ಕುಟುಂಬಗಳು ಈ ಎಲ್ಲಾ ವಸ್ತುಗಳನ್ನು ಹೊಂದಲು ಸಾಕಷ್ಟು ವರ್ಷಗಳೇ ಬೇಕಾಗಬಹುದು. ಯೋಜನೆಗಳ ಪ್ರೋತ್ಸಾಹ ಮತ್ತು ಉದ್ಯೋಗದ ಅವಕಾಶಗಳು ಸಂತ್ರಸ್ತರು ಅವಶ್ಯ ಆಧುನಿಕ ವಸ್ತುಗಳನ್ನು ಹೊಂದಲು ಸಹಾಯ ಮಾಡಬಲ್ಲುದು.

೩.೧.೫.೨೪. ಪೀಠೋಪಕರಣ ವ್ಯವಸ್ಥೆಗಳು

ಇಂದಿನ ನಾವಿನ್ಯದ ಯುಗದಲ್ಲಿ ಎಲ್ಲರೂ ಪೀಠೋಪಕರಣಗಳಿಂದ ಮನೆಯ ಸೌಂದರ್ಯ ಹಾಗೂ ಸೌಕರ್ಯವನ್ನು ಹೆಚ್ಚಿಸಲು ಒತ್ತು ಕೊಡುತ್ತಾರೆ. ಸಂತ್ರಸ್ತರ ಮನೆಯಲ್ಲಿ ಇದರ ಲಭ್ಯತೆ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ. ೩.೨೯. ಪೀಠೋಪಕರಣ ವ್ಯವಸ್ಥೆಗಳ ವರ್ಗೀಕರಣ

ಕ್ರ. ಸಂ.	ಪೀಠೋಪಕರಣಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಪ್ಲಾಸ್ಟಿಕ್ ಕುರ್ಚಿ	೧೧೨	೮೮.೮೯
೨	ಟೇಬಲ್	೬೦	೪೭.೬೧
೩	ಮಂಚ	೩೩	೨೬.೧೯
೪	ಸೋಫಾ	೧೩	೧೦.೩೨
೫	ಕಪಾಟು	೧೮	೧೪.೨೯

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ಸಂಖ್ಯೆ ೩.೨೯.ರ ಮಾಹಿತಿಯ ಪ್ರಕಾರ ಸಂತ್ರಸ್ತ ಕುಣಬಿಯರ ಮನೆಗಳಲ್ಲಿ ಕನಿಷ್ಠ ಮಟ್ಟದ ಪೀಠೋಪಕರಣಗಳ ಕೊರತೆ ಇದೆ. ಶೇಕಡಾ ೧೧.೧೧ರಷ್ಟು ಕುಟುಂಬಗಳಲ್ಲಿ ಪ್ಲಾಸ್ಟಿಕ್ ಕುರ್ಚಿ ಸಹ ಇಲ್ಲ. ಟೇಬಲ್, ಮಂಚ, ಸೋಫಾ ಮತ್ತು

ಕಪಾಟು ಹೊಂದಿರುವವರ ಸಂಖ್ಯೆ ತೀರಾ ಕಡಿಮೆ ಇದೆ. ೬೦ ಮನೆಗಳಲ್ಲಿ ಸಣ್ಣದಾದ ಮರದ ಮತ್ತು ಪ್ಲಾಸ್ಟಿಕ್ ಟೇಬಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ ಹೆಚ್ಚಿನವು ಅತೀ ಸಣ್ಣದಾಗಿದ್ದು ಸ್ಟೂಲ್ ಇದ್ದಷ್ಟಿದೆ. ೩೩ ಕುಟುಂಬಗಳಲ್ಲಿ ಮಂಚಗಳಿದ್ದು ಹೆಚ್ಚಿನವು ಕಬ್ಬಿಣದ ಸಣ್ಣ ಮಂಚಗಳಾಗಿದ್ದು ಅತಿಥಿಗಳು ಕುಳಿತುಕೊಳ್ಳಲು ಮನೆಯ ಛಾವಡಿಯಲ್ಲಿ ಇಟ್ಟಿರುತ್ತಾರೆ. ೧೩ ಕುಟುಂಬಗಳಲ್ಲಿ ಸೋಫಾ ಸೌಲಭ್ಯವಿದ್ದು ಇದ್ದು ರಸ್ತೆಯಲ್ಲಿ ದೊರೆಯುವ ಒಂದು ಸಾವಿರ ರೂಪಾಯಿಯದ್ದು ಆಗಿರುತ್ತದೆ. ೧೮ ಕುಟುಂಬಗಳು ತಮ್ಮ ಮನೆಯಲ್ಲಿ ಕಪಾಟುಗಳನ್ನು ಹೊಂದಿದ್ದು ಇವುಗಳಲ್ಲಿ ಕೆಲವೇ ಕೆಲವು ಕಬ್ಬಿಣದ ಬೀರಾಗಿವೆ. ಹೆಚ್ಚಿನವು ಮನೆಯ ಗೋಡೆಗಳಲ್ಲಿ ಮರದಿಂದ ಮಾಡಿದ ಸಣ್ಣ ಸಣ್ಣ ಕಪಾಟುಗಳಾಗಿವೆ.

ಸಂತ್ರಸ್ತರ ಮನೆಗಳಲ್ಲಿ ಕನಿಷ್ಠತಮ ಪೀಠೋಪಕರಣಗಳ ಕೊರತೆ ಇದೆ ಎಂಬುದನ್ನು ಈ ಎಲ್ಲಾ ಮಾಹಿತಿಗಳಿಂದ ತಿಳಿದುಕೊಳ್ಳಲಾಗಿದೆ.

೩.೧.೫.೨೫. ಸ್ವಂತ ವಾಹನ ವ್ಯವಸ್ಥೆ

ಆಧುನಿಕ ಯುಗದಲ್ಲಿ ಪ್ರತಿಯೊಂದೂ ಮನೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಾಹನ ಸೌಲಭ್ಯವಿರುತ್ತದೆ. ಇವರಲ್ಲಿ ಇದರ ಪರಿಸ್ಥಿತಿ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೩೦. ವಾಹನ ವ್ಯವಸ್ಥೆಗಳ ವರ್ಗೀಕರಣ

ಕ್ರ ಸಂ.	ವಾಹನಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಸೈಕಲ್	೨೮	೨೨.೨೨
೨	ದ್ವಿ ಚಕ್ರವಾಹನ	೨೦	೧೫.೮೮
೩	ಆಟೋ	೧	೦.೭೯
೪	ಟ್ರ್ಯಾಕ್ಟರ್	೧	೦.೭೯
೫	ಟಿಲ್ಲರ್	೧	೦.೭೯
೬	ಕಾರು	೪	೩.೧೭

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೩೦ರಲ್ಲಿ ತೋರಿಸಿರುವಂತೆ ಸಂತ್ರಸ್ತರ ಮನೆಯಲ್ಲಿ ವಾಹನ ವ್ಯವಸ್ಥೆ ಇದೆ. ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಸೈಕಲ್ ವಿತರಣೆಯಾಗಿರುವುದರಿಂದ ೨೮ ಕುಟುಂಬಗಳಲ್ಲಿ ಸೈಕಲ್ ಸೌಕರ್ಯ ಇದೆ.

ಶೇಕಡಾ ೪೩.೬೫ರಷ್ಟು ಕುಟುಂಬಗಳು ಸೈಕಲ್ ಸೇರಿದಂತೆ ಇತರೆ ವಾಹನ ಸೌಲಭ್ಯ ಹೊಂದಿದ್ದಾರೆ. ಆದರೆ ಪ್ರತಿಶತ ೫೬.೩೫ರಷ್ಟು ಕುಟುಂಬಗಳು ಯಾವುದೇ ರೀತಿಯ ಸ್ವಂತ ವಾಹನ ಸೌಲಭ್ಯವನ್ನು ಹೊಂದಿಲ್ಲ. ಸ್ವಂತ ವಾಹನ ಇದ್ದಿದ್ದರೆ ಅವರ ಕೃಷಿ ಕೆಲಸಗಳಿಗೆ ಅನುಕೂಲವಾಗುತ್ತಿತ್ತು. ಕುಣಬಿಯರಲ್ಲಿ ಸ್ವಂತ ವಾಹನದ ಕೊರತೆ ಇದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೨೬. ಮನೋರಂಜನಾ ಸಾಧನಗಳು

ಕೋಷ್ಟಕ ಸಂಖ್ಯೆ: ೩.೩೧. ಮನೋರಂಜನಾ ಸಾಧನಗಳ ವರ್ಗೀಕರಣ

ಕ್ರ ಸಂ.	ಮನೋರಂಜನಾ ಸಾಧನಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ರೇಡಿಯೋ	೪	೩.೧೭
೨	ಟೇಪ್ ರೆಕಾರ್ಡರ್	೨	೧.೫೯
೩	ಟಿ.ವಿ.	೭೯	೬೨.೭೦
ಒಟ್ಟು		೮೫	೬೭.೪೬

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೩೧ರಲ್ಲಿ ತೋರಿಸಿರುವಂತೆ ಕುಣಬಿಯರ ಮನೆಗಳಲ್ಲಿ ಮನೋರಂಜನಾ ಸಾಧನಗಳ ಸೌಲಭ್ಯವಿದೆ. ಟಿ.ವಿ. ಹೊಂದಿರುವವರ ಪೈಕಿ ಹೆಚ್ಚಿನವರದ್ದು ಪೋರ್ಟೆಬಲ್ ಟಿ.ವಿ ಆಗಿದ್ದು ಜಾಸ್ತಿ ಕುಟುಂಬಗಳು ಆ್ಯಂಟನಾ ಸೌಲಭ್ಯವನ್ನು ಮಾತ್ರ ಹೊಂದಿವೆ.

ಶೇಕಡಾ ೩೨.೫೪ರಷ್ಟು ಕುಟುಂಬಗಳಲ್ಲಿ ಯಾವುದೇ ರೀತಿಯ ಮನೋರಂಜನಾ ಸಾಧನಗಳಿಲ್ಲ. ಇವರು ಹೊರಗಡೆ ಹೋಗಿ ಯಾವುದೇ ಕಾರ್ಯಕ್ರಮಗಳನ್ನು ವೀಕ್ಷಿಸುವ ಅಭ್ಯಾಸವನ್ನು ಬೆಳೆಸಿಕೊಂಡಿಲ್ಲ. ಆ ಸಾಮರ್ಥ್ಯ ಕೂಡಾ ಅವರಲ್ಲಿಲ್ಲ. ಮನುಷ್ಯ ಆಧುನಿಕವಾಗಿ ಮನೋರಂಜನೆಗಾಗಿ ಏನೆಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದರೂ ಬಡ ಸಂತ್ರಸ್ತರಿಗೆ ಅವೆಲ್ಲಾ ದಕ್ಕದಾಗಿದೆ.

ಸ್ಥಳಾಂತರ ಪೂರ್ವದಲ್ಲಿ ವರ್ಷದ ಕೆಲವು ದಿನಗಳ ಸಾಂಸ್ಕೃತಿಕ ಆಚರಣೆಗಳಲ್ಲಿ ಇವರು ಮನೋರಂಜನೆಯನ್ನು ಪಡೆದುಕೊಳ್ಳುತ್ತಿದ್ದರು. ಆದರೆ ಇಲ್ಲಿ ಯಾವುದೇ ರೀತಿಯ ಮನೋರಂಜನೆಯಿಲ್ಲದೇ ಸಂತ್ರಸ್ತ ಕುಣಬಿಯರ ಮನಸ್ಥಿತಿ ತುಂಬಾ ದುಃಖಕರವಾಗಿದೆ ಎಂಬುದು ಅಧ್ಯಯನದ ಸಂದರ್ಭದಲ್ಲಿ ವ್ಯಕ್ತವಾಗಿದೆ.

೩.೧೫.೨೭. ಸಂಪರ್ಕ ಸಾಧನಗಳ ವ್ಯವಸ್ಥೆ

ಇಂದಿನ ಆಧುನಿಕ ಯುಗದಲ್ಲಿ ಮಾಹಿತಿ ರವಾನೆಯು ಅತೀ ವೇಗಗೊಂಡಿದೆ. ಪ್ರತಿಯೊಬ್ಬರ ಕೈಗೂ ಕನಿಷ್ಠ ಒಂದು ಮೊಬೈಲು ಬಂದಿದೆ. ಸಂತ್ರಸ್ತ ಕುಣಬಿಯರಲ್ಲಿ ಈ ಪರಿಸ್ಥಿತಿ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ. ೩.೩೨. ಹೊಂದಿರುವ ಸಂಪರ್ಕ ಸಾಧನಗಳ ವರ್ಗೀಕರಣ

ಕ್ರ. ಸಂ.	ಸಂಪರ್ಕ ಸಾಧನಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಮೊಬೈಲು	೧೧೭	೯೨.೮೬
೨	ದೂರವಾಣಿ	೧	೦.೭೯
ಒಟ್ಟು		೧೧೮	೯೩.೬೫

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ೩.೩೨.ರಲ್ಲಿ ತೋರಿಸಿರುವಂತೆ ಮಾಹಿತಿದಾರರ ಕುಟುಂಬದಲ್ಲಿ ಸಂಪರ್ಕ ಸಾಧನಗಳ ಸೌಲಭ್ಯವಿದೆ. ಶೇಕಡಾ ೬.೩೫ ಕುಟುಂಬಗಳಲ್ಲಿ ಇಂದಿಗೂ ಇದು ಲಭ್ಯವಿರುವುದಿಲ್ಲ. ಹೆಚ್ಚಿನವರ ಮನೆಯಲ್ಲಿ ಒಂದೊಂದೇ ಮೊಬೈಲು ಇದೆ. ಮೊಬೈಲು ಇದ್ದರೂ ಅದಕ್ಕೆ ಕರೆನ್ಸಿ ಹಾಕಿಕೊಳ್ಳಲು ಎಷ್ಟೋ ಜನರಿಗೆ ಕಷ್ಟವಿದೆ. ಕಾಡು ಪ್ರದೇಶವಾದ್ದರಿಂದ ಸರಿಯಾಗಿ ನೆಟ್‌ವರ್ಕ್ ಸಿಗುವುದಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಒಬ್ಬರ ಮನೆಯಲ್ಲಿ ದೂರವಾಣಿ ಸೌಲಭ್ಯವಿದೆ. ಮಾಹಿತಿದಾರರಾದ ಸಂತ್ರಸ್ತ ಕುಣಬಿಯರ ಮನೆಗಳಲ್ಲಿ ಸಂಪರ್ಕ ಸಂವಹನದ ಮಾಧ್ಯಮಗಳ ಕೊರತೆ ಇದೆ. ಎಲ್ಲಾ ಕುಟುಂಬಗಳು ಈ ಸೌಲಭ್ಯವನ್ನು ಇಂದಿಗೂ ಹೊಂದಿರುವುದಿಲ್ಲ ಎಂಬ ಮಾಹಿತಿಗಳನ್ನು ಇಲ್ಲಿನ ಅಧ್ಯಯನಗಳಿಂದ ಕಂಡುಕೊಳ್ಳಲಾಗಿದೆ.

೩.೧೫.೨೮. ಬಟ್ಟೆಯ ಲಭ್ಯತೆ

ಈ ಆಧುನಿಕ ಯುಗದಲ್ಲಿ ಮನುಷ್ಯ ದಿನಕ್ಕೊಂದು ಉಡುಪು ಧರಿಸುತ್ತಾನೆ. ಬಾಹ್ಯ ಸೌಂದರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವ ಇಂದಿನ ದಿನಗಳಲ್ಲಿ ಧರಿಸಲು ಸಾಕಷ್ಟು ಉಡುಪನ್ನು ಎಲ್ಲರೂ ಹೊಂದಿರುತ್ತಾರೆ. ಸಂತ್ರಸ್ತರಲ್ಲಿ ಈ ಪರಿಸ್ಥಿತಿ ಹೇಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ. ೩.೩೩. ಬಟ್ಟೆಯ ಲಭ್ಯತೆಯ ವರ್ಗೀಕರಣ

ಕ್ರ. ಸಂ.	ಅಗತ್ಯ ವಸ್ತುಗಳು	ಹೊಂದಿರುವ ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಉಡುಪು	೧೧೭	೯೨.೮೬
೨	ಹೊದಿಕೆ	೧೧೫	೯೧.೨೭

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೩೩ರಲ್ಲಿನ ಮಾಹಿತಿಯಂತೆ ಸಂತ್ರಸ್ತರಲ್ಲಿ ಬಟ್ಟೆಯ ಲಭ್ಯತೆ ಇದೆ. ಶೇಕಡಾ ೭.೧೫ರಷ್ಟು ಕುಟುಂಬಗಳಲ್ಲಿ ತೊಡುವ ಬಟ್ಟೆಗೆ ತೊಂದರೆ ಇದೆ. ಶೇಕಡಾ ೮.೭೩ರಷ್ಟು ಕುಟುಂಬಗಳಲ್ಲಿ ಹೊದಿಕೆಗೆ ತೊಂದರೆ ಇದೆ. ಉಡುಪು ಮತ್ತು ಹೊದಿಕೆ ಮನುಷ್ಯನಿಗೆ ಸಾಕಷ್ಟು ಸಂಖ್ಯೆಯಲ್ಲಿರುವುದು ಅಗತ್ಯವಾಗಿದೆ. ಹಬ್ಬದ ಸಂದರ್ಭದಲ್ಲಿ ಬಟ್ಟೆ ಖರೀದಿ ಮಾಡುವುದರಿಂದಾಗಿ ಅವರ ಹತ್ತಿರ ಉಡುಪುಗಳು ಇವೆ. ಆದರೆ ಹೊರಗಿನ ಜನರಿಗೆ ಹೋಲಿಸಿದರೆ ಇವರ ಹತ್ತಿರ ಇರುವ ಬಟ್ಟೆಗಳು, ಹೊದಿಕೆಗಳು ಏನೇನೂ ಅಲ್ಲ. ಆದರೆ ಅವರು ಅದರಲ್ಲೇ ಸಮಾಧಾನ ಮಾಡಿಕೊಂಡಿದ್ದಾರೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಮಾಹಿತಿದಾರರಾದ ಸಂತ್ರಸ್ತ ಕುಣಬಿಯರು ಉಡುಪು ಮತ್ತು ಹೊದಿಕೆಯ ವಿಷಯದಲ್ಲಿ ಕೂಡಾ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

೩.೧.೫.೨೯. ಕುಟುಂಬದ ಶೈಕ್ಷಣಿಕ ಮಟ್ಟ

ಇಂದು ಎಲ್ಲರೂ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಶಿಕ್ಷಣವೇ ಅಭಿವೃದ್ಧಿಯ ಸೂಚ್ಯಂಕ ಎನ್ನುವಷ್ಟು ಮಟ್ಟಿಗೆ ಇದು ಎಲ್ಲರನ್ನೂ ಪ್ರಭಾವಿಸಿದೆ. ಅಂತೆಯೇ ಕುಣಬಿಯಲ್ಲಿ ಇದರ ಮಟ್ಟ ಎಷ್ಟಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೩೪. ಕುಟುಂಬದ ಶೈಕ್ಷಣಿಕ ಮಟ್ಟದ ವರ್ಗೀಕರಣ

ಶೈಕ್ಷಣಿಕ ಮಟ್ಟ	ಒಟ್ಟು ಕುಟುಂಬಗಳು	ಪ್ರತಿಶತ
ಎಸ್.ಎಸ್.ಎಲ್.ಸಿ.	೮೨	೬೫.೦೭೯
ಐ.ಟಿ.ಐ.	೧೧	೮.೭೩
ನರ್ಸಿಂಗ್	೧	೦.೭೯
ಇತರೇ ಡಿಪ್ಲೊಮಾ	೬	೪.೭೬


ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ. ೩.೩೪ ರಲ್ಲಿ ನೀಡಿರುವ ಮಾಹಿತಿಯಂತೆ ಸಂತ್ರಸ್ತ ಕುಣಬಿಯರ ಶೇ.೬೫ ಕುಟುಂಬಗಳಲ್ಲಿ ಹತ್ತನೇ ತರಗತಿಗಿಂತ ಹೆಚ್ಚು ಓದಿದವರು ಇರುವುದಿಲ್ಲ. ಕನ್ನಡ ಭಾಷಾ ಜ್ಞಾನದ ಕೊರತೆ, ಬಡತನ, ಮಾಹಿತಿಯ ಕೊರತೆ ಇವರನ್ನು ಶೈಕ್ಷಣಿಕವಾಗಿ ಹಿಂದುಳಿಯುವಂತೆ ಮಾಡಿದೆ. ವಿದ್ಯಾರ್ಜನೆ ಎಂದರೆ ಹತ್ತನೇ ತರಗತಿ ಮಾತ್ರಾ ಎಂದು ಅವರು ನಿಗಧಿಪಡಿಸಿಕೊಂಡಿದ್ದಾರೆ. ಇಂದಿನ ಶೈಕ್ಷಣಿಕ ಯುಗದಲ್ಲಿ ಇವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೩೦. ಮಾಹಿತಿದಾರರಿಗೆ ತಿಳಿದಿರುವ ಭಾಷೆಗಳು

ಮನುಷ್ಯ ತನಗೆ ಬೇಕಾದ್ದನ್ನು ಪಡೆದುಕೊಳ್ಳುವಲ್ಲಿ ಆತನಲ್ಲಿರುವ ಭಾಷಾ ಪ್ರಾವಿಣ್ಯತೆ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಸಂತ್ರಸ್ತರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಅವರ ಭಾಷೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ ೩.೧೧. ತಿಳಿದಿರುವ ಭಾಷೆಗಳ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೧೧.ರಲ್ಲಿ ತೋರಿಸಿರುವಂತೆ ಶೇಕಡಾ ೧೭.೪೬ರಷ್ಟು ಮಾಹಿತಿದಾರರಿಗೆ ಕೊಂಕಣಿ ಭಾಷೆ ಬಿಟ್ಟು ಬೇರೆ ಯಾವ ಭಾಷೆಯನ್ನೂ ಮಾತನಾಡಲು ಬರುವುದಿಲ್ಲ. ಶೇಕಡಾ ೭೬.೧೯ರಷ್ಟು ಕೊಂಕಣಿ ಭಾಷೆಯ ಜೊತೆಗೆ ಮರಾಠಿ ಭಾಷಾ ಜ್ಞಾನವಿದೆ. ಶೇಕಡಾ ೬.೩೫ರಷ್ಟು ಮಾತ್ರಾ ಕನ್ನಡ ಭಾಷೆಯ ಜ್ಞಾನವಿದೆ. ಆದರೆ ಇವರಿಗೆ ಕನ್ನಡ ಬರವಣಿಗೆಯು ತಿಳಿದಿರುವುದಿಲ್ಲ. ಮಾತನಾಡಲು ಸಹ ಅಲ್ಪ ಸ್ವಲ್ಪ ಬರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ. ಒಟ್ಟಾರೆಯಾಗಿ ಶೇಕಡಾ ೯೩.೬೫ ಮಾಹಿತಿದಾರರಿಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ. ಸಂಶೋಧಕರು ಮಾಹಿತಿ ಸಂಗ್ರಹಣೆಗಾಗಿ ಪ್ರತಿ ಬಾರಿಯೂ ಕನ್ನಡ ಮತ್ತು ಕೊಂಕಣಿ ಮಾತನಾಡಲು ಬರುವ ಭಾಷಾಂತರ ಸಹಾಯಕರ ಸಹಾಯವನ್ನು ಪಡೆದುಕೊಳ್ಳಬೇಕಾಯಿತು. ಎಷ್ಟೇ ಆದರೂ ಇದು ಸಂಶೋಧಕರ ಸಂಶೋಧನೆಗೆ ಒಂದು ದೊಡ್ಡ ತೊಡಕಾಗಿ ಪರಿಣಮಿಸಿತು. ಕರ್ನಾಟಕದವರಾಗಿದ್ದು ಕನ್ನಡ ಭಾಷೆಯ ಜ್ಞಾನವಿಲ್ಲದಿರುವುದು ಅವರ ದುಸ್ಥಿತಿಗೆ ಹಿಡಿದ ಮೊದಲ ಕನ್ನಡಿಯಂತಿದೆ.

ಕುಣಬಿಯರಲ್ಲಿ ಕನ್ನಡ ಭಾಷಾ ಜ್ಞಾನದ ಕೊರತೆ ಗಂಭೀರವಾಗಿದೆ ಎಂಬುದನ್ನು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

೩.೧.೫.೩೧. ಉನ್ನತ ಶಿಕ್ಷಣಕ್ಕೆ ಇರುವ ಸವಾಲುಗಳು

ಸಂತ್ರಸ್ತ ಕುಣಬಿಯರ ಶೈಕಣಿಕ ಮಟ್ಟ ಉತ್ತಮವಾಗಿಲ್ಲ ಎಂಬ ಮಾಹಿತಿ ಅಧ್ಯಯನದಿಂದ ವ್ಯಕ್ತವಾಗಿದೆ. ಆದ್ದರಿಂದ ಶಿಕ್ಷಣದ ವೈಫಲ್ಯಕ್ಕೆ ಕಾರಣವಾದಂತಹ ಅಂಶಗಳನ್ನು ಅಧ್ಯಯನ ಮಾಡಲಾಗಿದೆ. ಕುಣಬಿಯರಲ್ಲಿ ಬಡತನ, ಹೆತ್ತವರ ಅನಕ್ಷರತೆ, ಭಾಷಾ ಅಜ್ಞಾನ, ಹೊರಗಿನವರೊಂದಿಗೆ ಸಂಬಂಧದ ಕೊರತೆ, ಸ್ಥಳೀಯವಾಗಿ ಶೈಕ್ಷಣಿಕ ಸಂಸ್ಥೆಗಳ ಅಲಭ್ಯತೆ, ಸಾರಿಗೆ ಸಂಪರ್ಕದ ಕೊರತೆ, ಅಧಿಕ ಪ್ರಯಾಣ ವೆಚ್ಚ, ವಸತಿ ನಿಲಯದಲ್ಲಿ ಅವಕಾಶ ಪಡೆದುಕೊಳ್ಳಲು ವಿಫಲತೆ, ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ಇಲ್ಲದೇ ಇರುವುದು, ಸ್ಥಳೀಯವಾಗಿ ಉದ್ಯೋಗದ ಅವಕಾಶ ಅಲಭ್ಯ ಈ ಎಲ್ಲಾ ಕಾರಣಗಳಿಂದಾಗಿ ಇವರು ಶೈಕ್ಷಣಿಕವಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೩೨. ಪ್ರಸ್ತುತ ಪಾಲಿಸುತ್ತಿರುವ ರೂಢಿ ಸಂಪ್ರದಾಯಗಳು

ಸ್ಥಳಾಂತರಪೂರ್ವದಲ್ಲಿ ಸಾಕಷ್ಟು ರೂಢಿ ಸಂಪ್ರದಾಯಗಳಿಗೆ ಕಟ್ಟುಬಿದ್ದಿದ್ದ ಕುಣಬಿಯರು ಈಗಲೂ ಯಾವ ಸಂಪ್ರದಾಯಗಳನ್ನು ಪಾಲಿಸುತ್ತಿದ್ದಾರೆ? ಅವರಲ್ಲಿ ಬದಲಾವಣೆಗಳಾಗಿವೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೩೫. ಪಾಲಿಸುತ್ತಿರುವ ರೂಢಿ ಸಂಪ್ರದಾಯಗಳ ವರ್ಗೀಕರಣ

ಕ್ರ ಸ	ಪಾಲಿಸುತ್ತಿರುವ ರೂಢಿ ಸಂಪ್ರದಾಯಗಳು	ಒಟ್ಟು	ಪ್ರತಿಶತ
೧	ಕುರಿ, ಕೋಳಿ, ಮೇಕೆ ಸಾಕಲ್ಲ ಹಾಗೂ ಮುಟ್ಟುವುದೂ ಇಲ್ಲ	೧೨೬	೧೦೦
೨	ಸಾಕು ಪ್ರಾಣಿ ಪಕ್ಷಿಗಳ ಮಾಂಸವನ್ನು ತಿನ್ನುವುದಿಲ್ಲ	೧೨೬	೧೦೦
೩	ಮದ್ಯಪಾನ ಮಾಡುವುದಿಲ್ಲ	೯೨	೭೩.೫೮
೪	ಬೇರೆ ಜಾತಿಯವರ ಮನೆಯಲ್ಲಿ ನೀರು ಕೂಡಾ ಕುಡಿಯುವುದಿಲ್ಲ	೭೬	೬೦.೭೪
೫	ಬೇರೆ ಜಾತಿಯವರ ಮನೆಗೆ ಹೋಗುವುದಿಲ್ಲ	೭೦	೫೫.೫೫
೬	ಅಂತರ್ಜಾತಿ ವಿವಾಹ, ಜಾತಿಯೊಳಗಿನಲ್ಲಿಯೂ ಪ್ರೇಮವಿವಾಹ ಮಾಡಿಕೊಳ್ಳುವುದಿಲ್ಲ	೧೨೬	೧೦೦
೭	ಕುಟುಂಬದ ವ್ಯವಹಾರದಲ್ಲಿ ಹಿರಿಯರ ನಿರ್ಧಾರವೇ ಅಂತಿಮ	೧೨೩	೯೭.೧೯
೮	ಹಿರಿಯರ ಒಪ್ಪಿಗೆಯಿಲ್ಲದೇ ಮದುವೆ ಮಾಡಿಕೊಂಡರೆ ಜಾತಿಯಿಂದಲೇ ಬಹಿಷ್ಕಾರ	೧೨೬	೧೦೦
೯	ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಿಸುವುದಿಲ್ಲ	೮೧	೬೪.೫೭
೧೦	ಹೆಣ್ಣು ಮಕ್ಕಳು, ಹೆಂಗಸರನ್ನು ಹೊರಗಡೆ ಕೆಲಸಕ್ಕೆ ಕಳುಹಿಸುವುದಿಲ್ಲ	೪೪	೩೪.೯೨

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೩೫.ರ ಪ್ರಕಾರ ಹೈನುಗಾರಿಕೆ, ಮಾಂಸಾಹಾರ, ವಿವಾಹ ಈ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಕುಣಬಿಯರ ಸಂಪ್ರದಾಯಗಳು ಬದಲಾಗಿಲ್ಲ. ವ್ಯಸನ, ಜಾತೀಯತೆ ಮತ್ತು ವಿದ್ಯಾಭ್ಯಾಸದ ಆಚರಣೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬಂದಿದೆ. ಹೆಣ್ಣು ಮಕ್ಕಳ ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವಲ್ಪ ಪ್ರಗತಿಯಾಗಿದೆ.

ಆಧುನಿಕ ಯುಗದ ಔದ್ಯೋಗಿಕ ಪೈಪೋಟಿಯಲ್ಲಿ ಮನುಷ್ಯ ಜಾತಿಕಸುಬು, ಮೂಲಕಸುಬು, ಸಂಪ್ರದಾಯ ಎಂಬುದನ್ನು ನೋಡದೇ ಎಲ್ಲಾ ರಂಗಗಳಲ್ಲಿಯೂ ಸ್ಪರ್ಧೆಗಿಳಿಯುತ್ತಿದ್ದಾನೆ. ತನಗೆ ಆದಾಯ ತರುವ ಯಾವುದೇ ಉದ್ಯೋಗವಿರಲಿ ಅದು ನ್ಯಾಯಯುತವಾಗಿದ್ದರೆ ಅದನ್ನು ಧಾರಾಳವಾಗಿ ಮಾಡುತ್ತಾನೆ. ಅದರಲ್ಲೂ ಕುರಿ ಮತ್ತು ಮೇಕೆ ಸಾಕುವ ಉದ್ಯಮ ಇಂದು ತುಂಬಾ ಸುಲಭವಾಗಿ ಆದಾಯ ತರುವ ಉದ್ಯೋಗವಾಗಿದೆ. ಮತ್ತು ಇದನ್ನು ಆ ಜಾತಿ ಈ ಜಾತಿ ಎನ್ನದೇ ಎಲ್ಲರೂ ಮಾಡುತ್ತಾರೆ. ಆದರೆ ಯಾವುದೇ ಉದ್ಯೋಗವಿಲ್ಲದೇ ಖಾಲಿಯಿರುವ ಮತ್ತು ಸಾಕಷ್ಟು ಅವಕಾಶ ಇರುವ ಕುಣಬಿಯರು ತಮ್ಮ ಹಿಂದಿನ ಸಂಪ್ರದಾಯಕ್ಕೆ ಕಟ್ಟುಬಿದ್ದಿದ್ದಾರೆ. ಅವರ ಜಮೀನು ಕಾಡಿನ ಮಧ್ಯೆ ಇದ್ದು ಅಲ್ಲಿ ಅವರಿಗೆ ಪಶುಸಂಗೋಪನೆ ಅದರಲ್ಲೂ ಮೇಕೆ ಸಾಕಲು ಬೇಕಾದಷ್ಟು ಅವಕಾಶವಿದೆ. ಆದರೂ ಅವರು ಸಂಪ್ರದಾಯ ಎಂದುಕೊಂಡು ತಮ್ಮ ಆದಾಯವನ್ನು ತಾವೇ ಕಳೆದುಕೊಳ್ಳುತ್ತಿದ್ದಾರೆ. ಯಾವುದೇ ಪ್ರಾಣಿ ಪಕ್ಷಿಗಳನ್ನು ಸಾಕುತ್ತಿದ್ದೇವೆ ಎಂದರೆ ಅದನ್ನು ತಿನ್ನಬೇಕು ಎಂದೇನಿಲ್ಲ. ಅಥವಾ ತಿನ್ನುವುದಿಲ್ಲ ಎಂದರೆ ಸಾಕಬಾರದು ಅಂತಿಲ್ಲ. ಇವರ ಸಮುದಾಯದವರು ಯಾರೂ ಕೂಡಾ ಮದ್ಯಪಾನ ಮಾಡುವಂತಿಲ್ಲ. ಆದರೆ ಈಗಿನ ಕುಣಬಿ ಯುವಕರಲ್ಲಿ ಮದ್ಯಪಾನ ಸಾಮಾನ್ಯವಾಗಿದೆ.

ಇಂದು ಎಲ್ಲರೂ ಎಲ್ಲಾ ಜಾತಿಯ ಮನೆಗೆ ಹೋಗುತ್ತಾರೆ. ಕೆಲಸ, ಊಟ ಮಾಡುತ್ತಾರೆ. ಎಲ್ಲಾ ಜಾತಿಯವರು ಔದ್ಯೋಗಿಕವಾಗಿ ಬೆರೆತಿದ್ದಾರೆ. ಆದರೆ ಕುಣಬಿಯರು ಈಗಲೂ ಇಂತಹ ಸಂಪ್ರದಾಯಕ್ಕೆ ಕಟ್ಟು ಬಿದ್ದು ಉದ್ಯೋಗದ ಅವಕಾಶದಿಂದ ವಂಚಿತರಾಗಿದ್ದಾರೆ.

ಈ ಆಧುನಿಕ ಯುಗದಲ್ಲಿ ಪ್ರೇಮವಿವಾಹ, ಅಂತರ್ಜಾತಿ ವಿವಾಹ, ಹಿರಿಯರ ಒಪ್ಪಿಗೆ ಇಲ್ಲದೇ ನಡೆಯುವ ವಿವಾಹ ಸರ್ವೇ ಸಾಮಾನ್ಯವಾಗಿದೆ. ಆಧುನಿಕ ಪ್ರಪಂಚದ ನಾಗಾಲೋಟದಲ್ಲಿ ಹೆಜ್ಜೆ ಇಡಬೇಕಾದರೆ ವ್ಯಕ್ತಿಯೊಬ್ಬರಿಗೆ ಸರಿಸಾಟಿಯಾಗುವ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ನಿರ್ಧಾರ ಬದುಕಿಗೆ ಪೂರಕವಾಗಿರುತ್ತದೆ. ದೊಡ್ಡವರು ಹೇಳಿದ ಹಾಗೆ ಇರಬೇಕು. ಜಾತಿ ನಿಯಮದಂತೆ ನಡೆಯಬೇಕು. ತಾನೇ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇಲ್ಲ. ತಪ್ಪಿದರೆ ಜಾತಿಯಿಂದ ಬಹಿಷ್ಕಾರ ಮಾಡುವುದು ಇವೆಲ್ಲಾ ಅಭಿವೃದ್ಧಿಯನ್ನು ಕತ್ತರಿಸಿದಂತೆ. ಕುಣಬಿಯರು ಈ ಸಂಪ್ರದಾಯಕ್ಕೆ ಅತಿಯಾಗಿ ಜೋತು ಬಿದ್ದು ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡುವುದಿಲ್ಲ. ಹೊರಗಡೆ ಉದ್ಯೋಗಕ್ಕೆ ಕಳಿಸುವುದಿಲ್ಲ. ಇದರಿಂದ ಅವರ ಸಾಂಸಾರಿಕ ಬದುಕಿನ ಎರಡು ಗಾಲಿಗಳ ಆದಾಯದಲ್ಲಿ ಅಸಮತೋಲನ ಕಂಡುಬಂದಿದೆ. ಒಬ್ಬರ

ದುಡಿಮೆ ಕನಿಷ್ಟ ೫ ರಿಂದ ೬ ಜನರಿಗೆ ಅನ್ನ ನೀಡಬೇಕಾಗಿದೆ. ಗಂಡಸರು ಕೂಡಾ ತಮ್ಮ ಜೀವನಕ್ಕೆ ಪೂರಕ ಅಥವಾ ಅನುಕೂಲವಾಗುವ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. ಹಿರಿಯರ ನಿರ್ಧಾರ ಅವರ ಆಧುನಿಕ ಪೈಪೋಟಿಗೆ ಪೂರಕವಾಗಿರುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ತಮಗೆ ಬೇಕಾದ್ದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಯಾವಾಗ ಒಬ್ಬ ವ್ಯಕ್ತಿಯಿಂದ ಸಂಪೂರ್ಣವಾಗಿ ಕಸಿದುಕೊಳ್ಳಲಾಗುತ್ತೋ ಆಗ ಆ ವ್ಯಕ್ತಿ ಪೂರ್ತಿ ಅಧಃಪತನಕ್ಕಿಳಿಯುತ್ತಾನೆ ಎಂಬುದಕ್ಕೆ ಕುಣಬಿಯರ ಈ ರೂಢಿ ಸಂಪ್ರದಾಯಗಳೇ ಸಾಕ್ಷಿ.

ಕುಣಬಿಯರು ಅವೈಜ್ಞಾನಿಕವಾದ ರೂಢಿ ಸಂಪ್ರದಾಯಗಳನ್ನು ಇಂದಿಗೂ ಪಾಲಿಸುತ್ತಿದ್ದಾರೆ. ಸಂಪ್ರದಾಯಕ್ಕೆ ಕಟ್ಟುಬಿದ್ದು ಆರ್ಥಿಕ ಅಧಃಪತನ ಎದುರಿಸುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೩೩. ಪ್ರಸ್ತುತ ಆಚರಿಸುತ್ತಿರುವ ಸಾಂಸ್ಕೃತಿಕ ಆಚರಣೆಗಳು

ಸ್ಥಳಾಂತರ ಪೂರ್ವದಲ್ಲಿ ಸಾಂಸ್ಕೃತಿಕ ಸಮೃದ್ಧತೆಯನ್ನು ಹೊಂದಿದ್ದ ಕುಣಬಿಯರ ಪ್ರಸ್ತುತ ಸಾಂಸ್ಕೃತಿಕ ಆಚರಣೆಗಳನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೩೬. ಪ್ರಸ್ತುತ ಆಚರಿಸುತ್ತಿರುವ ಸಾಂಸ್ಕೃತಿಕ ಆಚರಣೆಗಳ ವರ್ಗೀಕರಣ

ಕ್ರಸಂ.	ಸಾಂಸ್ಕೃತಿಕ ಆಚರಣೆಗಳು	ಒಟ್ಟು	ಪ್ರತಿಶತ
೧	ಹೋಳಿ ಸಿಗ್ಮಾ	೯	೭.೮೫
೨	ಪುಗಡಿ	೦	೦
೩	ಕುಣಿತಗಳು	೦	೦
೪	ನಾಟಕ ಪ್ರದರ್ಶನ	೦	೦
೫	ಯಕ್ಷಗಾನ ಪ್ರದರ್ಶನ	೦	೦
೬	ರಾಮಾಯಣ ಕೇಳ್	೦	೦
	ಒಟ್ಟು	೯	೭.೮೫

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೩೬.ರ ಮಾಹಿತಿಯ ಪ್ರಕಾರ ಪ್ರಸ್ತುತ ಶೇಕಡಾ ೮ರಷ್ಟು ಕುಣಬಿಯರು ಹೋಳಿ ಸಿಗ್ಮಾವನ್ನು ಆಚರಿಸುತ್ತಿದ್ದಾರೆ. ರಾಮನಗರದ ಅಡಾಳಿ ಮಜಿರೆಯಲ್ಲಿ ಗೌಳಿಗರು ವಾಸ ಮಾಡುತ್ತಿದ್ದಾರೆ. ಅವರಿಗೆ ಹೊಂದಿಕೊಂಡಂತೆ ರಾಮಲಿಂಗ ಗಲ್ಲಿ ಇದ್ದು ಇಲ್ಲಿನ ಭಾಮ್ಮೈಕರ್‌ರವರು ಸೇರಿ ಹೋಳಿ ಸಿಗ್ಮಾ ಆಚರಿಸುತ್ತಾರೆ. ಇನ್ನುಳಿದಂತೆ ಇತರರು ಯಾವ ಆಚರಣೆಗಳನ್ನೂ ಆಚರಿಸುತ್ತಿಲ್ಲ.

ಕುಣಬಿಯರು ಪುನರ್ವಸತಿ ಕೇಂದ್ರದಲ್ಲಿ ಎಲ್ಲಾ ಕಡೆ ವಿವಿಧ ಸಮುದಾಯಗಳ ಮಧ್ಯೆ ಹರಡಿಕೊಂಡಿದ್ದಾರೆ. ತಮ್ಮ ಸ್ವಂತದವರು ಎಲ್ಲೆಲ್ಲೋ ಹೋಗಿದ್ದಾರೆ. ಉದ್ಯೋಗ,

ಆದಾಯ ಮತ್ತು ಮಾನಸಿಕ ನೆಮ್ಮದಿ ಇಲ್ಲ. ಈ ಎಲ್ಲಾ ಕಾರಣಗಳಿಂದ ಸಾಂಸ್ಕೃತಿಕ ಆಚರಣೆ ಮಾಡುತ್ತಿಲ್ಲ.

ಸ್ಥಳಾಂತರ ಪೂರ್ವದಲ್ಲಿ ಸಂಪದ್ಭರಿತ, ವೈಶಿಷ್ಟ್ಯಪೂರ್ಣ ಹಾಗೂ ಅಪೂರ್ವವಾಗಿದ್ದ ಕುಣಬಿಯರ ಸಾಂಸ್ಕೃತಿಕ ಲೋಕ ಈಗ ಸಂಪೂರ್ಣವಾಗಿ ಅಳಿದು ಹೋಗಿದೆ. ಅವೈಜ್ಞಾನಿಕವಾದ ಪುನರ್ವಸತಿ ವ್ಯವಸ್ಥೆ ಕುಣಬಿಯರ ಸಾಂಸ್ಕೃತಿಕ ಬದುಕನ್ನು ಬಲಿ ತೆಗೆದುಕೊಂಡಿದೆ ಎಂಬ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೩೪. ಸಮುದಾಯ ಸಂಘಗಳೊಂದಿಗೆ ಕುಣಬಿಯರು

ಮನುಷ್ಯ ಅಭಿವೃದ್ಧಿಯನ್ನು ಹೊಂದಬೇಕಾದರೆ ಸಂಘಟನೆಗಳಲ್ಲಿ ಭಾಗಿಯಾಗಿ ಜ್ಞಾನ ಮತ್ತು ಸಹಾಯವನ್ನು ಪಡೆದುಕೊಳ್ಳಬೇಕಾಗುತ್ತದೆ. ಕುಣಬಿಯರು ತಮ್ಮ ಅಭಿವೃದ್ಧಿಗೋಸ್ಕರ ಸಾಮಾಜಿಕ ಸಂಘಟನೆಗಳೊಂದಿಗೆ ಭಾಗಿಯಾಗಿದ್ದಾರೆಯೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ. ೩.೩೭. ಸಮುದಾಯ ಸಂಘಗಳೊಂದಿಗೆ ಭಾಗಿಯಾಗಿರುವ ಮಾಹಿತಿಯ ವರ್ಗೀಕರಣ

ಕ್ರಸಂ.	ಸಂಘಗಳು	ಒಟ್ಟು	ಪ್ರತಿಶತ
೧	ಯುವಕ ಮಂಡಲ	೪	೩.೪೬
೨	ಯುವತಿ ಮಂಡಲ	೦	೦
೩	ಭಜನಾ ಮಂಡಳಿ	೧	೦.೭೯
೪	ಸ್ವ ಸಹಾಯ ಸಂಘಗಳು	೬೪	೫೦.೩೬
೫	ಕುಣಬಿ ಸಮುದಾಯ ಸಂಘ	೨೮	೨೨.೨೨
	ಒಟ್ಟು	**೯೭**	**೭೬.೮೩**

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ಸಂಖ್ಯೆ ೩.೩೭.ರಲ್ಲಿನ ಮಾಹಿತಿಯಂತೆ ಶೇಕಡಾ ೨೩ರಷ್ಟು ಕುಟುಂಬಗಳು ಯಾವುದೇ ಸಂಘಗಳಲ್ಲಿ ಭಾಗಿಯಾಗಿಲ್ಲ. ಸಾಲ ಸೌಲಭ್ಯ ದೊರೆಯುತ್ತದೆ ಎಂಬ ಉದ್ಧೇಶದಿಂದ ಸ್ವಸಹಾಯ ಸಂಘದಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆ. ಹೆಚ್ಚಿನವರು ಶ್ರೀ. ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸ್ವ ಸಹಾಯ ಸಂಘದಲ್ಲಿ ಸದಸ್ಯರಾಗಿದ್ದಾರೆ. ಸಾಲ ಮರು ಪಾವತಿಸಲಾಗದೇ ಸಾಕಷ್ಟು ಕುಟುಂಬಗಳು ಸಂಘದಿಂದ ಹೊರಗಡೆ ಬಂದಿದ್ದಾರೆ. ಕುಣಬಿ ಸಂಘದಲ್ಲಿ ಶೇಕಡಾ ೨೨ರಷ್ಟು ಕುಟುಂಬಗಳು ಸದಸ್ಯತ್ವವನ್ನು ಪಡೆದುಕೊಂಡಿವೆ. ಆದರೆ ಸಂಘದ ಮಾಸಿಕ ಸಭೆಗಳಿಗೆ ಹಾಜರಾಗುವುದಿಲ್ಲ. ಅದರಿಂದ ತಮಗೇನೂ ಪ್ರಯೋಜನವಿಲ್ಲ. ಸುಮ್ಮನೆ ವೆಚ್ಚ ಮಾಡಿಕೊಂಡು ಜೋಯಿಡಾಕ್ಕೆ ಸಭೆಗೆ ಹೋಗುವುದಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ವ್ಯಕ್ತಿಯೊಬ್ಬ ಸಮುದಾಯದ ಸಂಘಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಸಾಮಾಜಿಕ ವಿಚಾರಗಳು ತಿಳಿಯುತ್ತವೆ. ಸಾಮಾಜಿಕ ಸಂಬಂಧಗಳು ಹೆಚ್ಚುತ್ತವೆ. ವ್ಯಕ್ತಿತ್ವ ವಿಕಸನವಾಗುತ್ತದೆ. ಆರ್ಥಿಕ ಲಾಭವಾಗುತ್ತದೆ. ಮನುಷ್ಯ ಹೊರಜಗತ್ತಿಗೆ ತನ್ನನ್ನು ತಾನು ಎಷ್ಟು ಒಡ್ಡಿಕೊಳ್ಳುತ್ತಾನೋ ಅಷ್ಟು ಅಭಿವೃದ್ಧಿಯನ್ನು ಸಾಧಿಸುತ್ತಾನೆ. ಆದರೆ ಈ ಕುಣಬಿಯರು ತಮ್ಮನ್ನು ಹೊರಗಿನ ಪ್ರಪಂಚಕ್ಕೆ ಪರಿಚಯಿಸಿಕೊಳ್ಳಲೇ ಇಲ್ಲ. ಇವರು ಯಾವುದೇ ಸಂಘಟನೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗದೇ ಇರುವುದು ಅಧ್ಯಯನದಿಂದ ಕಂಡುಬಂದಿದೆ.

೩.೧.೫.೩೫. ಕುಣಬಿಯರು ಮತ್ತು ರಾಜಕೀಯ ಚಟುವಟಿಕೆಗಳು

ರಾಜಕೀಯಕ್ಕೆ ಸಂಬಂಧಿಸಿದಂತಹ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಪ್ರಸ್ತುತ ದಿನಮಾನದ ಅತ್ಯಂತ ದೊಡ್ಡ ಅವಶ್ಯಕತೆಯಾಗಿದೆ. ಮನುಷ್ಯ ಅಭಿವೃದ್ಧಿ ಸಾಧಿಸಬೇಕಾದರೆ ರಾಜಕೀಯ ಬೇಕೇ ಬೇಕು ಎನ್ನುವಷ್ಟು ಮಟ್ಟಿಗೆ ಇದು ಜನಜೀವನದ ಮೇಲೆ ಪ್ರಭಾವ ಬೀರಿದೆ. ಸಂತ್ರಸ್ತ ಕುಣಬಿಯರು ಇದರಲ್ಲಿ ಯಾವ ರೀತಿಯಾಗಿ ಭಾಗಿಯಾಗಿದ್ದಾರೆ ಮತ್ತು ಪ್ರಯೋಜನವನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ: ೩.೩೮. ರಾಜಕೀಯ ಚಟುವಟಿಕೆಯಲ್ಲಿ ಭಾಗಿಯಾಗಿರುವ ಮಾಹಿತಿಯ ವರ್ಗೀಕರಣ

ಕ್ರ.ಸಂ.	ಚಟುವಟಿಕೆ	ಒಟ್ಟು	ಪ್ರತಿಶತ
೧	ಮತದಾನದ ಗುರುತಿನ ಚೀಟಿ ಹೊಂದಿರುವುದು	೧೨೬	೧೦೦
೨	ಪ್ರತೀ ಚುನಾವಣೆಯಲ್ಲಿ ಮತ ಚಲಾಯಿಸುವುದು	೧೨೩	೯೭
೩	ಮನೆಯ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಿರುವುದು	೪	೩.೪೬
೪	ಗ್ರಾಮ ಸಭೆಗಳಲ್ಲಿ ಭಾಗವಹಿಸುವುದು	೮	೬.೯೨
೫	ಮಹಿಳಾ ಮೀಸಲಾತಿ ಉಪಯೋಗ ಪಡೆದುಕೊಂಡಿರುವುದು	೨	೧.೭೩

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ೩.೩೮.ರಲ್ಲಿನ ಮಾಹಿತಿಯಂತೆ ಇವರ ರಾಜಕೀಯ ಆಸಕ್ತಿಗಳು ಇವೆ. ಅನಕ್ಷರತೆ, ಚತುರತೆಯ ಕೊರತೆ, ಕನ್ನಡ ಭಾಷಾ ಜ್ಞಾನದ ಕೊರತೆ, ಒಗ್ಗಟ್ಟಿಲ್ಲ ಈ ಕಾರಣಗಳಿಂದ ಇವರು ರಾಜಕೀಯ ಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸುವುದಿಲ್ಲ.

ಮನುಷ್ಯನ ಅಭಿವೃದ್ಧಿಗೆ ರಾಜಕೀಯ ಚಟುವಟಿಕೆ ಪೂರಕವಾಗಿದೆ. ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮಗೆ ಬೇಕಾದ ಅಭ್ಯರ್ಥಿಯನ್ನು ಆರಿಸಬೇಕು. ತಮ್ಮ ಬೇಡಿಕೆಗಳನ್ನು ಪ್ರತಿನಿಧಿಸುವಂತೆ ಅವರಿಗೆ ಒತ್ತಡ ತರಬೇಕು. ಪ್ರತಿಯೊಂದೂ ಗ್ರಾಮ ಸಭೆಗಳಲ್ಲಿ ಭಾಗಿಯಾಗಿ ತಮಗೂ ಅಧಿಕಾರ ಇದೆ, ನಾವೂ ಇದ್ದೇವೆ ಎಂಬುದನ್ನು ತೋರಿಸಬೇಕು. ಕುಣಬಿಯರು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಿಲ್ಲ. ಇದು ಅವರ ಅಭಿವೃದ್ಧಿಗೆ ತೊಡಕಾಗಿದೆ ಎಂಬ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೩೬. ಸೂಪಾ ಅಣೆಕಟ್ಟು ಯೋಜನೆಯಿಂದ ದೊರೆಯುತ್ತಿರುವ ಪ್ರಯೋಜನಗಳು

ಸ್ಥಳಾಂತರದ ಸಂದರ್ಭದಲ್ಲಿ ಸಂತ್ರಸ್ತರಿಗೆ ಸೂಪಾ ಜಲಾಶಯದಿಂದ ಕುಡಿಯುವ ನೀರು, ಕೃಷಿಗೆ ನೀರಾವರಿ, ಉಚಿತ ವಿದ್ಯುತ್ ಸೌಲಭ್ಯ ಹಾಗೂ ಪ್ರತಿಯೊಂದು ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ಉದ್ಯೋಗ ಕೊಡುವುದಾಗಿ ಆಶ್ವಾಸನೆ ನೀಡಿರುತ್ತಾರೆ. ಆದರೆ ಅದನ್ನು ವಾಸ್ತವವಾಗಿ ಪೂರೈಸಿದ್ದಾರೆಯೇ? ಇಲ್ಲವೇ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೩೯. ದೊರೆಯುತ್ತಿರುವ ಪ್ರಯೋಜನಗಳ ವರ್ಗೀಕರಣ

ಕ್ರ.ಸಂ.	ಪ್ರಯೋಜನಗಳು	ಒಟ್ಟು	ಪ್ರತಿಶತ
೧	ಕುಡಿಯಲು ಹಾಗೂ ಗೃಹಬಳಕೆಗೆ ನೀರು	೦	೦
೨	ಕೃಷಿಗೆ ನೀರಾವರಿ	೦	೦
೩	ಸಮರ್ಪಕ ವಿದ್ಯುತ್ ಸಂಪರ್ಕ	೦	೦
೪	ಸರ್ಕಾರಿ ಉದ್ಯೋಗ	೦	೦

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೩೯.ರ ಮಾಹಿತಿಯ ಪ್ರಕಾರ ಕೆ.ಪಿ.ಸಿ. ಆಶ್ವಾಸನೆಯಿತ್ತ ಯಾವ ಸೌಕರ್ಯವನ್ನೂ ದೊರಕಿಸಿಕೊಟ್ಟಿಲ್ಲ.

ಸೂಪಾ ಜಲಾಶಯದಿಂದ ದಾಂಡೇಲಿಗೆ ನೀರು ಪೂರೈಕೆಯಾಗುತ್ತಿದೆ. ಹಳಿಯಾಳಕ್ಕೆ ನೀರು ಪೂರೈಸುವ ಯೋಜನೆ ನಡೆಯುತ್ತಿದೆ. ಆದರೆ ಅದಕ್ಕಾಗಿ ಭೂಮಿಯನ್ನು ತ್ಯಾಗ ಮಾಡಿದವರಿಗೆ ನೀರು ಸರಬರಾಜು ಆಗುತ್ತಿಲ್ಲ. ಉಚಿತ ವಿದ್ಯುತ್ ಕೊಡುವುದಾಗಿ ಆಶ್ವಾಸನೆಯನ್ನಿಟ್ಟು ಕೇವಲ ಭಾಗ್ಯಜ್ಯೋತಿಯ ಒಂದು ಬಲ್ಬು ವ್ಯವಸ್ಥೆ ಮಾಡಿರುತ್ತಾರೆ. ಆದರೆ ವಿದ್ಯುತ್ ಪೂರೈಕೆ ಸಾಕಷ್ಟು ಅಸಮರ್ಪಕವಾಗಿದೆ.

ಸೂಪಾ ಜಲಾಶಯ ಯೋಜನೆಯಿಂದ ಅದರ ಸಂತ್ರಸ್ತರಿಗೆ ಏನೂ ಪ್ರಯೋಜನವಾಗಲಿಲ್ಲ. ಸೌಲಭ್ಯಗಳನ್ನು ದೊರಕಿಸಿಕೊಡುತ್ತೇವೆ ಎಂದು ನೀಡಿದ್ದ ಕೆ.ಪಿ.ಸಿ.ಯ ಆಶ್ವಾಸನೆಗಳು ಹುಸಿಯಾಗಿವೆ. ಸಂತ್ರಸ್ತರು ಸಾಕಷ್ಟು ನಷ್ಟ ಹೊಂದಿದ್ದಾರೆ. ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೧.೫.೩೭. ಸಂತ್ರಸ್ತ ಕುಣಬಿಯರ ಸದ್ಯದ ಅವಶ್ಯಕತೆಗಳು


ಕುಣಬಿಯರ ಸದ್ಯದ ಅವಶ್ಯಕತೆಗಳನ್ನು ಅಧ್ಯಯನ ಮಾಡಲಾಗಿದೆ.

ಕೆಳಗಿನ ಚಪಾತಿ ನಕಾಶೆಯಲ್ಲಿ ನೀಡಿರುವಂತೆ ಕುಡಿಯಲು ಮತ್ತು ಕೃಷಿಗೆ ಸೂಪಾ ಜಲಾಶಯದಿಂದ ನೀರು, ನಿವೇಶನ ಮತ್ತು ಆಶ್ರಯ ಮನೆ, ಹೆಚ್ಚಿನ ಪರಿಹಾರ, ರಸ್ತೆ

ರಿಪೇರಿ, ಸರ್ಕಾರಿ ನೌಕರಿ, ಕಾರ್ಖಾನೆ ಉದ್ಯೋಗ, ಬುಡಕಟ್ಟು ಪಟ್ಟಿಗೆ ಸೇರಿಸುವುದು ಇವು ಕುಣಬಿಯರ ಸದ್ಯದ ಪ್ರಮುಖ ಅವಶ್ಯಕತೆಗಳಾಗಿವೆ.

ಕುಣಬಿಯರ ಅಭಿವೃದ್ಧಿಗಾಗಿ ಸಾಕಷ್ಟು ಅವಶ್ಯಕತೆಗಳಿದ್ದು ಸದ್ಯಕ್ಕೆ ಅವರಿಗೆ ನಿವೇಶನ, ಉದ್ಯೋಗ ಮತ್ತು ಕುಡಿಯುವ ನೀರು ಅತೀ ಅಗತ್ಯವಾಗಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.


ಕುಣಬಿಯರ ಸದ್ಯದ ಅವಶ್ಯಕತೆಗಳು



೩.೧.೪.೩೮. ಕುಣಬಿ ಕುಟುಂಬದ ಸದಸ್ಯರ ಸದ್ಯದ ಆಸಕ್ತಿಗಳು

ಕುಣಬಿಯರು ಸದ್ಯಕ್ಕೆ ತಮಗೆ ಯಾವ ವಿಷಯದಲ್ಲಿ ಆಸಕ್ತಿ ಇದೆ, ತಮಗೆ ಏನು ಬೇಕಾಗಿದೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

ಸ್ಥಂಭ ನಕಾಶೆ. ೩.೧೨. ಸದ್ಯದ ಆಸಕ್ತಿಯ ವರ್ಗೀಕರಣ




ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ೩.೧೨.ರಲ್ಲಿ ತೋರಿಸಿರುವಂತೆ ಕುಟುಂಬದ ಸದ್ಯರು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಹೆಚ್ಚಿನವರು ಕೌಶಲ್ಯ ತರಬೇತಿಯಲ್ಲಿ ಆಸಕ್ತಿ ಹೊಂದಿದ್ದಾರೆ. ಈ ಮಾಹಿತಿಗಳಿಂದ ತಿಳಿದುಬರುವ ವಿಚಾರ ಏನೆಂದರೆ ಸಂತ್ರಸ್ತ ಕುಣಬಿಯರಿಗೆ ತಮ್ಮ ಈಗಿನ ಜೀವನದ ಬಗ್ಗೆ ಬೇಸರ ಇದೆ. ಅದರಿಂದ ಅವರು ಹೊರಗೆ ಬರಬೇಕು ಎಂಬ ಚಿಂತನೆ ಮಾಡಲಾರಂಭಿಸಿದ್ದಾರೆ. ಆದರೆ ಅದಕ್ಕೆ ತಕ್ಕಂತೆ ಅವರಿಗೆ ಸರಿಯಾದ ವ್ಯವಸ್ಥೆ ಮತ್ತು ಮಾರ್ಗದರ್ಶನ, ಸಹಕಾರ ಅತೀ ಅಗತ್ಯವಾಗಿ ಬೇಕಾಗಿದೆ. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಅವರ ಆಸಕ್ತಿಗೆ ಆಸರೆಯಾಗಬೇಕಾಗಿದೆ.

೩.೧.೪.೩೯. ಸಂತ್ರಸ್ತರ ಅಭಿವೃದ್ಧಿಗೆ ಪೂರಕವಲ್ಲದ ವಿದ್ಯಮಾನಗಳು

ಪುನರ್ವಸತಿ ಕೇಂದ್ರದಲ್ಲಿ ನೆಮ್ಮದಿಯಿಂದ ವಾಸ ಹಾಗೂ ಅಭಿವೃದ್ಧಿಗೆ ತೊಂದರೆಯಾಗುತ್ತಿರುವ ವಿದ್ಯಮಾನಗಳನ್ನು ಅಧ್ಯಯನ ಮಾಡಲಾಗಿದೆ.

ಸ್ಥಂಭ ನಕಾಶೆ ಸಂಖ್ಯೆ ೩.೧೩. ಅಭಿವೃದ್ಧಿಗೆ ಪೂರಕವಲ್ಲದ ವಿದ್ಯಮಾನಗಳ ವರ್ಗೀಕರಣ



ಆಧಾರ: ಕ್ಷೇತ್ರಕಾರ್ಯ

ಸ್ಥಂಭ ನಕಾಶೆ ಸಂಖ್ಯೆ ೩.೧೩ರಲ್ಲಿನ ಮಾಹಿತಿಯಂತೆ ಪುನರ್ವಸತಿ ಕೇಂದ್ರದಲ್ಲಿ ಹಲವಾರು ತೊಂದರೆಗಳನ್ನು ಗುರುತಿಸಲಾಗಿದೆ. ಸೂಪಾ ಜಲಾಶಯದ ಇತರೇ ಸಂತ್ರಸ್ತರಿಗೆ ಕೂಡಾ ಇದು ಅನ್ವಯವಾಗುತ್ತದೆ. ಸೂಪಾ ಸಂತ್ರಸ್ತರ ಪುನರ್ವಸತಿ ಕೇಂದ್ರವಾದ ರಾಮನಗರದ ಹನುಮಾನ್ ಗಲ್ಲಿಯಲ್ಲಿ ಅಕ್ರಾಳಿ ಮಜಿರೆ ಕಡೆಗೆ ಕಲ್ಲಿನ ಕೋರೆಯಿದೆ. ಇದನ್ನು ಆಂಧ್ರಪ್ರದೇಶದ ರೆಡ್ಡಿಯವರು ಸುಮಾರು ಮೂವತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದರು. ಸಂತ್ರಸ್ತರ ಭೂಮಿಗಳನ್ನು ಕೂಡಾ ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಇಲ್ಲಿ ಕಲ್ಲನ್ನು ಒಡೆಯುವುದಕ್ಕಾಗಿ ಸ್ಫೋಟಕಗಳನ್ನು ಬಳಸಲಾಗುತ್ತದೆ. ದಿನಾಲೂ ಮಧ್ಯಾಹ್ನ ಈ ಸ್ಫೋಟಕಗಳನ್ನು ಬಳಸುತ್ತಿದ್ದರು. ಇದರಿಂದಾಗಿ ಹನುಮಾನ್‌ಗಲ್ಲಿ, ಅಣ್ಣಾಹಜಾರೆಗಲ್ಲಿ, ಸರಸ್ವತಿಗಲ್ಲಿ, ನಾಗನಾಥಗಲ್ಲಿ, ಹಾಗೂ ಸಾಯಿಗಲ್ಲಿಯವರಿಗೆ ಹೆಚ್ಚಿನ ತೊಂದರೆಯಾಗಿದೆ. ಸ್ಫೋಟಕಗಳಿಂದಾಗಿ ಕುಣಬಿಯರ ಮನೆ ಗೋಡೆಗಳು, ನೆಲಗಳು ತುಂಬಾ ಬಿರುಕು ಬಿಟ್ಟಿವೆ. ನೀರಿನ ತೊಟ್ಟಿಗಳು, ಶೌಚಾಲಯದ ಗೋಡೆಗಳು ಹೀಗೆ ಏನೆಲ್ಲಾ ಗೋಡೆಗಳಿದ್ದಾವೋ ಅವೆಲ್ಲಾ ಬಿರುಕು ಬಿಟ್ಟು ಹಾಳಾಗಿವೆ. ಸಂತ್ರಸ್ತರು ಇದರ ವಿರುದ್ಧ ಸಾಕಷ್ಟು ದನಿಯೆತ್ತಿದರೂ ಪ್ರಯೋಜನವಾಗಲಿಲ್ಲ. ಹೋರಾಟದ ನಾಯಕನಿಗೆ ಒಂದಿಷ್ಟು ಹಣ ಕೊಟ್ಟು ಸುಮ್ಮನೆ ಮಾಡಿ ಬಿಡುತ್ತಾರೆ, ಬೇರೆ ಯಾರಿಗೂ ಪರಿಹಾರ ಸಿಗಲಿಲ್ಲ ಎಂದು ಸಂತ್ರಸ್ತ ಕುಣಬಿಯರು ಪ್ರತಿಕ್ರಿಯಿಸಿದ್ದಾರೆ. ಸೂಪಾ ಜಲಾಶಯದಿಂದ ಒಂದು ಸಲ ಸಂತ್ರಸ್ತರಾದ ಇವರ ವಾಸಸ್ಥಾನಗಳು ಈ ಗಣಿಗಾರಿಕೆಯಿಂದಾಗಿ ನಲುಗುತ್ತಿವೆ.

ಸ್ಫೋಟಕದಿಂದಾಗಿ ಪುನರ್ವಸತಿ ಕೇಂದ್ರದಲ್ಲೆಲ್ಲಾ ಭಾರೀ ತೊಂದರೆಯಾಗುತ್ತಿವೆ ಎಂದು ಎಲ್ಲಾ ಸಂತ್ರಸ್ತರು ಹೇಳಿಕೊಂಡಿದ್ದಾರೆ. ಶೇಕಡಾ ೨೮ ಕುಟುಂಬಗಳು ಇದರ ನೇರ

ಪರಿಣಾಮವನ್ನು ಅನುಭವಿಸುತ್ತಿವೆ. ಇದಲ್ಲದೇ ಕಲ್ಲಿನ ರಾಶಿಗಳನ್ನು ಹಾಕಲು ಸಂತ್ರಸ್ತರ ಜಾಗಗಳನ್ನು ವರ್ಷಕ್ಕೆ ೧೦,೦೦೦ ರೂಪಾಯಿಯಂತೆ ಭೋಗ್ಯಕ್ಕೆ (ಲೀಸ್) ತೆಗೆದುಕೊಂಡಿದ್ದಾರೆ. ಆದರೆ ಇವರ ಕೆಲಸ ಮುಗಿದ ಮೇಲೆ ಈ ಜಮೀನು ಯಾವುದಕ್ಕೂ ಪ್ರಯೋಜನ ಬರುವುದಿಲ್ಲ. ಅಲ್ಲೆಲ್ಲಾ ಕಲ್ಲಿನ ಪುಡಿಗಳು, ಮರಳು, ಹಳೆ ಮಷೀನ್‌ಗಳು ರಾಶಿ ಬಿದ್ದಿವೆ. ಅದಲ್ಲದೇ ಆ ಜಾಗಕ್ಕೆ ಹನುಮಾನ್‌ಗಲ್ಲಿಯಿಂದ ಲಾರಿಗಳು ಹಾದು ಹೋಗುತ್ತಿವೆ. ಇದರಿಂದ ಅಲ್ಲಿನ ವಾಸಿಗಳಾದ ಕುಣಬಿಯರಿಗೆ ನೆಮ್ಮದಿಯ ವಾತಾವರಣವೇ ಇಲ್ಲದಂತಾಗಿದೆ. ಕಲ್ಲು ಸಿಡಿಸುವ ಶಬ್ದ, ಧೂಳು, ವಾಹನದ ಶಬ್ದ, ರಸ್ತೆಗಳೆಲ್ಲಾ ನಾಶವಾಗಿರುವುದು ಇವೆಲ್ಲವುಗಳಿಂದ ಜನರು ಬೇಸತ್ತು ಹೋಗಿದ್ದಾರೆ. ಇಲ್ಲಿನ ಪಕ್ಕದ ಜಮೀನುಗಳಲ್ಲಿ ಸಂತ್ರಸ್ತರು ಗೋಡಂಬಿ ಗಿಡಗಳನ್ನು ನೆಟ್ಟಿದ್ದಾರೆ. ಮೊದಲೆಲ್ಲಾ ಅವುಗಳಲ್ಲಿ ಬಹಳಷ್ಟು ಗೋಡಂಬಿ ಬಿಡುತ್ತಿದ್ದವು. ಈಗ ಅದು ಯಾವುದೂ ಇಲ್ಲದಾಗಿದೆ. ಅಲ್ಲಿ ಹೋಗಲೂ ಸಾಧ್ಯವಿಲ್ಲದಾಗಿದೆ ಎಂದು ಸಂಶೋಧಕರು ಸ್ವತಃ ಆ ಜಾಗಕ್ಕೆ ಭೇಟಿ ಮಾಡಿ ಪರಿಶೀಲನೆ ಮಾಡಿದಾಗ ಸಂತ್ರಸ್ತರು ಹೇಳಿಕೊಂಡಿದ್ದಾರೆ.

ಹಾರ್ಲಿ ಎಂಬ ಊರಲ್ಲಿ ಹೊಲವಿರುವ ಕೆಲವು ರೈತರು ಕಾನ್‌ಕೋನ್ಕರ್ ಕಲ್ಲಿನ ಕೋರೆಗೆ ಹೊಲ ಮಾರಿರುತ್ತಾರೆ. ಕೆಲವರ ಹೊಲ ಇವರ ಕೋರೆಯಿಂದ ಹಾನಿಗೊಳಗಾಗಿದೆ. ಕೆಲವರು ರಾಮನಗರ ಗೇಟ್‌ನಲ್ಲಿ ಆಂಧ್ರಪ್ರದೇಶದ ರೆಡ್ಡಿಯವರ ಇನ್ನೊಂದು ಕೋರೆಗೆ ಜಮೀನು ಕೊಟ್ಟಿದ್ದಾರೆ. ಇದರಿಂದ ಕೂಡಾ ಕೋರೆಯ ಅಂಚಿನಲ್ಲಿರುವ ಕೆಲವರ ಜಮೀನು ಹಾನಿಗೊಳಗಾಗಿದೆ. ಆದರೆ ಇಲ್ಲಿ ಇವರ ಗೋಳನ್ನು ಕೇಳುವವರೇ ಇಲ್ಲದಾಗಿದೆ.

ಇನ್ನೊಂದು ದೊಡ್ಡ ಹಾವಳಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲ್ ದಾಂಡೇಲಿಯ ನೀಲಗಿರಿ ತೋಟಗಳದ್ದು. ರಾಮನಗರ ಮೊದಲು ಪಶ್ಚಿಮ ಘಟ್ಟದ ವೈವಿಧ್ಯ ಕಾಡಿಗೆ ಪ್ರಸಿದ್ಧಿಯಾಗಿದ್ದು ಈಗ ಬರೀ ನೀಲಗಿರಿ ತೋಟಕ್ಕೆ ಮೀಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮದವರು ಸೊಗಸಾದ ಕಾಡನ್ನು ಕಡಿದು ಆ ಕಾಡು ಜಾಗದಲ್ಲಿ ಸಂತ್ರಸರಿಗೆ ಹೊಲವನ್ನು ಹಂಚಿದ್ದರು. ಅದು ಪಾಳು ಬಿದ್ದಿದ್ದಾಗ ಪೇಪರ್ ಕಾರ್ಖಾನೆಯವರು ಆ ಜಾಗಗಳನ್ನು ಲೀಸ್‌ಗೆ ತೆಗೆದುಕೊಂಡು ನೀಲಗಿರಿ ಗಿಡ ನೆಟ್ಟರು. ಇದರಿಂದ ಸಂತ್ರಸ್ತರಿಗೆ ಒಂದಿಷ್ಟು ಆದಾಯ ತಂದುಕೊಡುತ್ತದೆಯಾದರೂ ಇಲ್ಲಿ ತುಂಬಾ ಮೋಸ ನಡೆಯುತ್ತಿದೆ. ಪ್ರಥಮವಾಗಿ ಈ ನೀಲಗಿರಿಯಿಂದಾಗಿ ಪರಿಸರಕ್ಕೆ ಅಪಾಯ ಇದೆಯೆಂದು ಪರಿಸರ ವಿಜ್ಞಾನಿಗಳು ಹೇಳುತ್ತಾರೆ. ನೀಲಗಿರಿ ಗಿಡಗಳನ್ನು ನೆಡುವಾಗ ೫ ಎಕರೆಗೆ ವರ್ಷಕ್ಕೆ ೮-೧೦ ಸಾವಿರದಂತೆ ೫ ವರ್ಷಕ್ಕೆ ಲೆಕ್ಕ ಹಾಕುತ್ತಾರೆ. ಆದರೆ ಅವರು ಗಿಡಗಳನ್ನು ಕಡಿಯಲು ೬-೭ ವರ್ಷ ತೆಗೆದುಕೊಳ್ಳುತ್ತಾರೆ. ತೋಟದಲ್ಲಿ ಗಿಡಗಳೇನಾದರೂ ಕಳ್ಳತನವಾಗಿದ್ದರೆ ಇವರಿಗೆ ನೀಡಬೇಕಾದ ಹಣದಲ್ಲಿ ಕಡಿತ ಮಾಡಿ ನೀಡುತ್ತಾರೆ. ಹೇಗೆ ಬೇಕೋ ಹಾಗೆ ಗಿಡಗಳನ್ನು ಕಡಿದು ಬೊಡ್ಡೆಗಳನ್ನು ಹಾಗೇ ಬಿಟ್ಟು ಹೋಗುತ್ತಾರೆ. ರೈತರಿಗೆ ಆ ಹೊಲ ಬೇಕಾದರೆ ಅವರು ಆ ಬೊಡ್ಡೆಗಳನ್ನು ಕಿತ್ತು ನೆಲ ಸಮ ಮಾಡಿಕೊಳ್ಳಬೇಕು. ಅದಕ್ಕೆ ಎಷ್ಟೊಂದು

ದುಡ್ಡು ಖರ್ಚಾಗುತ್ತದೆ. ಹಾಗೊಂದು ವೇಳೆ ಮತ್ತೆ ತಯಾರಿ ಮಾಡಿಕೊಂಡು ಬೆಳೆ ಬೆಳೆದರೂ ಫಸಲು ಬರುವುದಿಲ್ಲ ಎಂದು ಸಂಶೋಧಕರು ಇಂತಹ ಹೊಲಗಳಿಗೆ ಭೇಟಿ ನೀಡಿ ವೀಕ್ಷಣೆ ಮಾಡಿದಾಗ ಸಂತ್ರಸ್ತರು ಹೇಳಿಕೊಂಡಿದ್ದಾರೆ. ಈ ರೀತಿ ನೀಲಗಿರಿ ತೋಟದಿಂದ ಸಾಕಷ್ಟು ತೊಂದರೆಯಾಗಿದೆ ಎಂದು ಶೇಕಡಾ ೩೮ ಕುಟುಂಬಗಳು ಹೇಳಿಕೊಂಡಿದ್ದಾರೆ.

ಸಂತ್ರಸ್ತರು ಸ್ಥಳಾಂತರವಾಗಿ ಈ ಪುನರ್ವಸತಿ ಕೇಂದ್ರಕ್ಕೆ ಬಂದಾಗಿನ ಸಮಯದಿಂದಲೂ ಅಂದರೆ ಅವರಿಗೆ ತಿಳಿದಿರುವಂತೆ ಸುಮಾರು ಮೂವತ್ತೈದು ವರ್ಷಗಿಳಿಂದಲೂ ಇಲ್ಲಿ ಪಾಂಡರಿ ನದಿಯಲ್ಲಿ ಅಕ್ರಮ ಮರಳುಗಾರಿಕೆ ಎಗ್ಗಿಲ್ಲದೇ ನಡೆಯುತ್ತಿದೆ. ಇದರಿಂದ ಸಂತ್ರಸ್ತರಿಗಾಗುವ ಅತೀ ದೊಡ್ಡ ತೊಂದರೆಯೆಂದರೆ ಅವರ ಜೀವಜಲ ಕಲುಷಿತಗೊಳ್ಳುವುದು. ರಾಮನಗರ ಪುನರ್ವಸತಿ ಕೇಂದ್ರಕ್ಕೆ ಕುಡಿಯುವ ನೀರನ್ನು ಪಾಂಡರಿ ನದಿಯಿಂದ ಪೂರೈಸಲಾಗುತ್ತಿದೆ. ಆದರೆ ಈ ಅಕ್ರಮ ಮರಳುಗಾರಿಕೆಯಿಂದ ತತ್ತರಿಸಿ ಕಲುಷಿತಗೊಂಡ ಈ ನೀರು ಕುಡಿಯಲು ಮಾತ್ರವಲ್ಲ ಬಳಕೆಗೂ ಅಯೋಗ್ಯವಾಗಿದೆ. ನೀರು ತುಂಬಾ ಹಳದಿ ಬಣ್ಣದಿಂದ ತುಂಬಿದ್ದು ಕೆಸರು, ಮರಳುಮಯವಾಗಿರುತ್ತದೆ. ಇದರಲ್ಲಿ ಬಟ್ಟೆ ತೊಳೆಯಲಿಕ್ಕಾಗಲೀ, ಪಾತ್ರೆ ತೊಳೆಯಲಿಕ್ಕಾಗಲೀ ಸಾಧ್ಯವಾಗುವುದಿಲ್ಲ. ಇದನ್ನು ಸ್ವತಃ ಸಂಶೋಧಕರೇ ಪುನರ್ವಸತಿ ಕೇಂದ್ರದಲ್ಲಿ ವಾಸವಿದ್ದಾಗ ಅನುಭವಿಸಿದ್ದಾರೆ. ಈ ಅಕ್ರಮ ಮರಳುಗಾರಿಕೆಯಿಂದ ರಾಮನಗರದ ಸಂತ್ರಸ್ತರ ಜೀಲಜಲವನ್ನು ಕೂಡಾ ಕಿತ್ತುಕೊಂಡಾಗಿದೆ ಎಂದು ಶೇಕಡಾ ೮೪ ಕುಟುಂಬದವರು ಹೇಳಿಕೊಂಡಿದ್ದಾರೆ. ಕೆಲವರ ಜಮೀನು ಮಳೆಗಾಲದಲ್ಲಿ ಪಾಂಡರಿ ನದಿಯ ಪ್ರವಾಹಕ್ಕೆ ಸಿಲುಕಿ ಹಾನಿಗೊಳಗಾಗಿ ನಂತರ ಮರಳು ಕೇಂದ್ರೀಕೃತವಾಗುತ್ತದೆ. ನಂತರ ಆ ಮರಳಿಗೋಸ್ಕರ ನಡೆಯುವ ಪರವಾನಗಿ ರಹಿತ ಮರಳು ಸಾಗಿಸುವ ಗಾಡಿಗಳು ಬಂದು ಹಾಳು ಮಾಡಿ ಹೋಗುತ್ತವೆ.

ರಾಮನಗರ ಸಂಪೂರ್ಣವಾಗಿ ಸೂಪಾ ಜಲಾಶಯ ಸಂತ್ರಸ್ತರ ಪುನರ್ವಸತಿ ಕೇಂದ್ರವಾಗಿದ್ದರೂ ಈಗ ಅಲ್ಲಿ ಸಂತ್ರಸ್ತರನ್ನು ಹುಡುಕಿ ತೆಗೆಯುವ ಪರಿಸ್ಥಿತಿ ಬಂದಿದೆ. ನಾನಾ ಕಾರಣಗಳಿಂದಾಗಿ ಸಂತ್ರಸ್ತರು ತಮ್ಮ ಮನೆ ನಿವೇಷನವನ್ನು, ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ. ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಹೊರಗಿನಿಂದ ಬಂದವರು ದೊಡ್ಡದಾದ ಮನೆ ಕಟ್ಟಿಕೊಂಡು ಹಾಯಾಗಿದ್ದಾರೆ. ಜಾಸ್ತಿ ದುಡ್ಡು ಇದ್ದವರು ಕಡಿಮೆ ಬೆಲೆಯಲ್ಲಿ ದೊರೆಯುವ ಇವರ ಜಮೀನು ಮತ್ತು ಮನೆ ನಿವೇಷನಗಳನ್ನು ಖರೀದಿಸಿ ಸಾಕಷ್ಟು ಹಣವನ್ನು ವಿನಿಯೋಗಿಸಿ ಶ್ರೀಮಂತರಾಗಿದ್ದಾರೆ. ಇದು ಇಲ್ಲಿನ ಸಂತ್ರಸ್ತರಿಗೆ ದೊಡ್ಡ ತೊಂದರೆಯಾಗಿದೆ ಎಂದು ಶೇಕಡಾ ೩೩ ಕುಟುಂಬಗಳು ಹೇಳಿಕೊಂಡಿದ್ದಾರೆ. ಕೃಷಿಭೂಮಿ ಮಾರಾಟವಾಗುತ್ತಿರುವುದು ಕೂಡಾ ಸಂತ್ರಸ್ತರಿಗೆ ಹಿನ್ನಡೆಯಾಗಿದೆ ಎಂದು ಶೇಕಡಾ ೧೮ ಕುಟುಂಬಗಳು ಹೇಳಿಕೊಂಡಿದ್ದಾರೆ. ಒಂದು ವೇಳೆ ಕರ್ನಾಟಕ ವಿದ್ಯುತ್ ನಿಗಮ ಅಥವಾ ಯಾವುದೇ ಸರ್ಕಾರದ ಯೋಜನೆಗಳು ಸಂತ್ರಸ್ತರ

ಹೆಸರಲ್ಲಿ ರಾಮನಗರಕ್ಕೆ ಬಂದರೆ ಅದರ ಪ್ರಯೋಜನಗಳನ್ನು ಹೊರಗಿನಿಂದ ಬಂದ ಜನರು ಇಲ್ಲಿ ದುಡ್ಡು ಕೊಟ್ಟು ತಮ್ಮದಾಗಿಸಿಕೊಳ್ಳುತ್ತಾರೆ. ಬಂದ ಯೋಜನೆಗಳು ಸಂತ್ರಸ್ತರಿಗೆ ದಕ್ಕದೇ ಬೇರೆಯವರೇ ಅದರ ಪ್ರಯೋಜನವನ್ನು ಪಡೆಯುವಂತಾಗಿದೆ ಎಂದು ಸಂತ್ರಸ್ತರು ಹೇಳಿಕೊಂಡಿದ್ದಾರೆ. ಕಾಡಿನಲ್ಲಿ ವಾಸ ಮಾಡುತ್ತಿದ್ದ ತುಂಬಾ ಜನ ಇಲ್ಲಿ ಅತಿಕ್ರಮವಾಗಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಇವರ ಸಂಖ್ಯೆ ದಿನೇ ದಿನೇ ಹೆಚ್ಚಾಗಿದ್ದು ಸಂತ್ರಸ್ತರಿಗೆ ಇಲ್ಲಿ ನೆಲೆಯೇ ಇಲ್ಲವಾಗಿದೆ ಎಂದು ಶೇಕಡಾ ೨೬ ಕುಟುಂಬಗಳು ಹೇಳಿಕೊಂಡಿದ್ದಾರೆ.

ಇಲ್ಲಿ ಉರುವಲು ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. ರಾಮನಗರ ಪುನರ್ವಸತಿ ಕೇಂದ್ರದ ಕಾಡುಗಳೆಲ್ಲಾ ರಕ್ಷಿತಾರಣ್ಯ ಯೋಜನೆಯಿಂದ ಸುತ್ತುವರೆದಿದ್ದು ಯಾರನ್ನೂ ಕೂಡಾ ಕಾಡಿಗೆ ಕಾಲಿಡಲಿಕ್ಕೆ ಬಿಡುವುದಿಲ್ಲ. ಅರಣ್ಯ ಇಲಾಖೆ ಸೌದೆ ತರಲು ತಡೆಯೊಡ್ಡುತ್ತಿದೆ. ಪಕ್ಕದ ಕುಂಬೇಲಿ ಎಂಬ ಊರಿನ ಗೌಳಿಗ ಮಹಿಳೆಯರು ತಂದು ಮಾರುತ್ತಿದ್ದ ಸೌದೆಯನ್ನು ಇವರು ಖರೀದಿಸುತ್ತಿದ್ದರು. ಆದರೆ ಈಗೀಗ ಅವರು ತರುವ ಕಟ್ಟಿಗೆಯನ್ನು ತಡೆದು ಅದನ್ನು ರಸ್ತೆಯಲ್ಲೇ ಬೀಳಿಸಿ ಆ ಮಹಿಳೆಯರನ್ನು ವಾಪಸ್ಸು ಕಳುಹಿಸುತ್ತಾರೆ. ಆ ಮಹಿಳೆಯರು ಬರೀ ಕೈಯಲ್ಲಿ ವಾಪಸ್ಸು ಹೋದ ಮೇಲೆ ಅರಣ್ಯ ಇಲಾಖೆಯಿಂದ ಗಾಡಿ ತಂದು ಅದನ್ನು ಇಲಾಖೆಯವರು ತಮ್ಮ ಮನೆ ಅಡುಗೆಗೆ ಬಳಸಿಕೊಳ್ಳುತ್ತಾರೆಂದು ಆಧ್ಯಯನದ ಸಮಯದಲ್ಲಿ ಸಂತ್ರಸ್ತರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಒಟ್ಟಾರೆಯಾಗಿ ಸಂತ್ರಸ್ತರ ಉರುವಲನ್ನು ಕೂಡಾ ಕಿತ್ತುಕೊಳ್ಳಲಾಗಿದೆ ಎಂದು ಶೇಕಡಾ ೭೦ ಕುಟುಂಬಗಳು ಹೇಳಿಕೊಂಡಿದ್ದಾರೆ.

ಅಣಶಿ ದಾಂಡೇಲಿ ಹುಲಿ ಯೋಜನೆಯ ಬಫರ್ ಝೋನ್ ಪಟ್ಟಿಯಲ್ಲಿ ರಾಮನಗರದ ಹೆಸರಿದೆ. ಆದ್ದರಿಂದ ಈ ವಲಯದಲ್ಲಿ ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸುವ ಹಾಗಿಲ್ಲ. ಮಾಡಲು ಏನೂ ಉದ್ಯೋಗವಿಲ್ಲದ ರಾಮನಗರದಲ್ಲಿ ಯಾವುದಾದರೂ ಕೈಗಾರಿಕೆ ಪ್ರಾರಂಭವಾದರೆ ಉದ್ಯೋಗ ದೊರಕಬಹುದು ಎಂಬ ನಿರೀಕ್ಷೆಯಲ್ಲಿದ್ದರು. ಆದರೆ ಈ ನಿರೀಕ್ಷೆ ಈಗ ಹುಲಿ ಯೋಜನೆಯಿಂದಾಗಿ ಹುಸಿಯಾಗಿದೆ. ಜೋಯಿಡಾ ಟೌನ್‌ಶಿಪ್ ಪುನರ್ವಸತಿ ಕೇಂದ್ರ ಮತ್ತು ಕ್ಯಾಸೆಲ್‌ರಾಕ್ ಪುನರ್ವಸತಿ ಕೇಂದ್ರ ಕೂಡಾ ಈ ಹುಲಿ ಯೋಜನೆಯಡಿಯಲ್ಲಿ ಬರುತ್ತದೆ. ಅಣಶಿ ದಾಂಡೇಲಿ ಹುಲಿ ಯೋಜನೆಯಿಂದ ಭವಿಷ್ಯವೇ ಇಲ್ಲದಂತಾಗಿದೆ ಎಂದು ಶೇಕಡಾ ೩೩ ಕುಟುಂಬಗಳು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ರಾಮನಗರ ಪುನರ್ವಸತಿ ಕೇಂದ್ರಕ್ಕೆ ಕಲ್ಲಿನಕೋರೆ/ಗಣಿಗಾರಿಕೆ, ರಕ್ಷಿತಾರಣ್ಯ ಯೋಜನೆ, ನದಿಯಲ್ಲಿ ಅಕ್ರಮ ಮರಳುಗಾರಿಕೆ, ಹೊರಗಿನವರ ಅತಿಕ್ರಮಣ, ವೆಸ್ಟ್ ಕೋಸ್ಟ್ ನೀಲಗಿರಿ ತೋಟ, ಹೊರಗಿನವರು ಬಂದು ನೆಲೆಸಿರುವುದು, ಕೃಷಿಭೂಮಿ ಮಾರಾಟವಾಗುತ್ತಿರುವುದು, ಅಣಶಿ ದಾಂಡೇಲಿ ಹುಲಿಯೋಜನೆ ಈ ಎಲ್ಲಾ ಯೋಜನೆಗಳಿಂದ ತೊಂದರೆ ಇದ್ದು ಸಂತ್ರಸ್ತರು ಇನ್ನಷ್ಟು ಸಂತ್ರಸ್ತರಾಗಿದ್ದಾರೆ. ಜೋಯಿಡಾ ಟೌನ್‌ಶಿಪ್ ಹಾಗೂ ಕ್ಯಾಸೆಲ್‌ರಾಕ್ ಪುನರ್ವಸತಿ ಕೇಂದ್ರ ಅಣಶಿ ದಾಂಡೇಲಿ ಹುಲಿ

ಯೋಜನೆಯಡಿಯಲ್ಲಿ ಬಂದಿದ್ದು ಸಂತ್ರಸ್ತರು ಇಲ್ಲಿ ನೆಲೆ ನಿಲ್ಲದಂತಾಗಿದೆ. ಯೋಜನೆಗಳಿಂದಾಗಿ ಜನರ ಜೀವನಕ್ಕೆ ಯೋಜನೆ, ಯೋಚನೆ ಇಲ್ಲದಾಗಿದೆ. ತೊಂದರೆ ಕೊಡುವ ಈ ಎಲ್ಲಾ ಯೋಜನೆಗಳನ್ನು ಗಮನಿಸಿದಾಗ ಇದು ಶ್ರೀಮಂತ ಜನಗಳ, ಉದ್ಯಮಿಗಳ ಮತ್ತು ವಸಾಹತುಶಾಹಿ ನೌಕರಶಾಹಿಯ ದರ್ಪದಿಂದ ಉಂಟಾದ ಸಮಸ್ಯೆಗಳಾಗಿವೆ. ಕೈಗೊಳ್ಳುವ ಎಲ್ಲಾ ಕೆಲಸಗಳು, ಯೋಜನೆಗಳು ಇವರುಗಳ ಪೂರಕವೇ ಆಗಿದ್ದರೆ ಈ ತರಹ ಸಂತ್ರಸ್ತರಾದವರ ಕಷ್ಟಗಳನ್ನು ಕೇಳುವವರು ಯಾರಿದ್ದಾರೆ. ಪದೇ ಪದೇ ಸ್ಥಳಾಂತರವಾಗದಿದ್ದರೂ ಎಲ್ಲಾ ಯೋಜನೆಗಳಿಂದ ಇವರು ಇಲ್ಲಿ ಬಂಧಿಯಾಗಿದ್ದಾರೆ. ಯಾವ ಪ್ರಯೋಜನಗಳನ್ನೂ ಪಡೆದುಕೊಳ್ಳದಂತಾಗಿದ್ದಾರೆ.

೩.೧೫.೪೦. ಕೆ.ಪಿ.ಸಿ.ಯವರು ಪು.ಕೇ.ದಲ್ಲಿ ನಿರ್ಮಿಸಿದ್ದ ಸೌಲಭ್ಯಗಳ ಬಗ್ಗೆ ಸಂತ್ರಸ್ತ ಕುಣಬಿಯರ ಅಭಿಪ್ರಾಯ

ಕ.ವಿ.ನಿ.ನಿ.ದವರು ಪುನರ್ವಸತಿ ಕೇಂದ್ರದಲ್ಲಿ ವಿವಿಧ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಇವುಗಳ ಬಗ್ಗೆ ಮಾಹಿತಿದಾರ ಕುಟುಂಬದವರು ಯಾವ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೪೦. ಸೌಲಭ್ಯಗಳ ಬಗ್ಗೆ ಅಭಿಪ್ರಾಯಗಳ ವರ್ಗೀಕರಣ

ಸೌಲಭ್ಯಗಳು	ಸಮರ್ಪಕವಾಗಿದೆ	ಸಮರ್ಪಕವಾಗಿಲ್ಲ
ಒಳರಸ್ತೆಗಳು	೦	೧೨೬
ವಿದ್ಯುತ್ ಸಂಪರ್ಕ	೩೬	೯೦
ಕುಡಿಯುವ ನೀರಿನ ಸೌಲಭ್ಯ	೨೨	೧೦೪
ಶಾಲೆ	೧೨೪	೦೨
ಆಸ್ಪತ್ರೆ	೦೮	೧೧೮

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೦.ರಲ್ಲಿನ ತೋರಿಸಿರುವಂತೆ ಕೆ.ಪಿ.ಸಿಯವರು ರಾಮನಗರ ಪುನರ್ವಸತಿ ಕೇಂದ್ರದಲ್ಲಿ ನಿರ್ಮಿಸಿದ ಒಳರಸ್ತೆಗಳು ಅವ್ಯವಸ್ಥೆಯಿಂದ ಕೂಡಿದ್ದು ಪ್ರಯೋಜನಕಾರಿಯಾಗಲಿಲ್ಲ ಎಂದು ಶೇಕಡಾ ೧೦೦ ಸಂತ್ರಸ್ತ ಕುಣಬಿಯರು ಅಭಿಪ್ರಾಯಪಟ್ಟಿದ್ದಾರೆ. ಕೆ.ಪಿ.ಸಿ.ಯವರು ಒಳರಸ್ತೆಗಳಿಗೆ ದೊಡ್ಡ ಬೋಲ್ಡರ್ಸ್ ಕಲ್ಲುಗಳನ್ನು ಹಾಕಿದ್ದು ಅವೆಲ್ಲಾ ಕಿತ್ತುಕೊಂಡು ಹೋಗಿ ಹೊಂಡಗಳಾಗಿವೆ. ಪ್ರಸ್ತುತ ರಸ್ತೆಗಳು ವಾಹನಗಳ ಸಂಚಾರಕ್ಕೆ ಅಯೋಗ್ಯವಾಗಿವೆ. ರಸ್ತೆಗಳ ಅಭಿವೃದ್ಧಿಯಾಗಬೇಕಿದೆ. ಪುನರ್ವಸತಿ ಸಮಯದಲ್ಲಿ ಕೆ.ಪಿ.ಸಿ.ಯವರು ಹೊಲಗಳಿಗೆ ಚಕ್ಕಡಿ ದಾರಿ ಮಾಡಿದ್ದು ಅದು ಕೆಲವೇ ದಿನಗಳಲ್ಲಿ ಮುಚ್ಚಿಹೋಗಿದೆ ಎಂದು ಸಂತ್ರಸ್ತರು ಹೇಳಿಕೊಂಡಿದ್ದಾರೆ.

ಕೆ.ಪಿ.ಸಿ.ಯವರು ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯವನ್ನು ದೊರಕಿಸಿಕೊಟ್ಟಿದ್ದು ಅವೆಲ್ಲಾ ಕಿತ್ತುಕೊಂಡು ಹೋಗಿವೆ. ಮನೆಗಳಿಗೆ ಒಂದು ಬಲ್ಬು ಸಾಕಾಗುವುದಿಲ್ಲ. ಜಾಸ್ತಿ ಹಾಕಿಸಿಕೊಳ್ಳಲು ನಮ್ಮ ಕೈಯಲ್ಲಿ ಸಾಧ್ಯವಾಗಲಿಲ್ಲ. ಅವರು ಹಾಕಿಕೊಟ್ಟದ್ದೂ ಕೂಡಾ ಪ್ರಯೋಜನಕಾರಿಯಾಗಲಿಲ್ಲ ಎಂದು ಶೇಕಡಾ ೭೨ ಕುಟುಂಬದವರು ಹೇಳಿಕೊಂಡಿದ್ದಾರೆ. ಯಾರು ಅತೀ ಸಣ್ಣ ಗುಡಿಸಲಿನಲ್ಲಿ ವಾಸಮಾಡುತ್ತಿದ್ದಾರೋ ಅವರು ಸಿಕ್ಕಿದ ಒಂದು ಬಲ್ಬಿನಲ್ಲೇ ತೃಪ್ತಿ ಪಡೆದುಕೊಂಡಿದ್ದಾರೆ. ಕುಡಿಯುವ ನೀರಿನ ಸೌಲಭ್ಯವನ್ನು ಸಮರ್ಪಕವಾಗಿ ಮಾಡಲಿಲ್ಲ ಎಂದು ೧೦೪ ಕುಟುಂಬದವರು ಹೇಳಿದ್ದಾರೆ. ರಾಮನಗರದಲ್ಲಿ ಯಾರು ರಾಜಕೀಯ ಮತ್ತು ಪ್ರಭಾವಿ ವ್ಯಕ್ತಿಗಳಿರುತ್ತಾರೋ ಅವರು ನೀರು ಬಿಡುವವರ ಜೊತೆಗೆ ಒಪ್ಪಂದ ಮಾಡಿಕೊಂಡು ಅವರ ಕಡೆಗೆ ಬೇಕಾದ ಹಾಗೆ ನೀರನ್ನು ಬರಮಾಡಿಕೊಂಡಿರುತ್ತಾರೆ. ಉಳಿದವರ ಕಡೆಗೆ ಹದಿನೈದು ದಿನಕ್ಕೊಂದು ಸಲವಾದರೂ ಸಮರ್ಪಕವಾಗಿ ನೀರು ಬರುವುದಿಲ್ಲ. ಯಾರಿಗೆ ನಳ್ಳಿ ಹತ್ತಿರವಿದೆಯೋ ಮತ್ತು ಯಾರು ಈ ಪ್ರಭಾವಿ ವ್ಯಕ್ತಿಗಳ ಮನೆಸಾಲಿನ ಕಡೆಗೆ ವಾಸವಿರುವರೋ ಅವರಿಗೆ ನೀರು ಸಮರ್ಪಕವಾಗಿ ದೊರೆಯುತ್ತಿದೆ ಎಂದು ಪ್ರಯೋಜನ ಪಡೆಯುತ್ತಿರುವ ಶೇಕಡಾ ೧೭ ಕುಟುಂಬಗಳು ಹೇಳಿಕೊಂಡಿದ್ದಾರೆ. ಕೆ.ಪಿ.ಸಿಯವರು ಹಾಕಿದ ನಳ್ಳಿ ಲೈನುಗಳು, ಕೊಳವೆಬಾವಿಗಳು, ತೆರೆದ ಬಾವಿಗಳು ಹಳೆಯದಾಗಿವೆ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲ ಎಂದಿದ್ದಾರೆ. ಕೊಳವೆ ಬಾವಿಗಳಲ್ಲಿ ಸರಿಯಾಗಿ ನೀರು ಬರುವುದಿಲ್ಲ. ಬಾವಿಗಳು ಕಸದಿಂದ ತುಂಬಿ ಹೋಗಿವೆ. ಬಾವಿ ಸುತ್ತಾ ಗಿಡಗಂಟಿಗಳು ಬೆಳೆದಿವೆ. ನಂತರದ ದಿನಗಳಲ್ಲಿ ಇವನ್ನು ಯಾರೂ ದುರಸ್ತಿ ಮಾಡುವ ಕೆಲಸ ಮಾಡಲಿಲ್ಲ.

ಕಾಡಿನಲ್ಲಿದ್ದಾಗ ಕನ್ನಡ ಶಾಲೆಯ ಸೌಲಭ್ಯ ಇಲ್ಲವಾಗಿತ್ತು. ಇದ್ದ ಮರಾಠಿ ಶಾಲೆಗಳು ಕೂಡಾ ದೂರದಲ್ಲಿತ್ತು. ಆದರೆ ಇಲ್ಲಿ ಪುನರ್ವಸತಿ ಕೇಂದ್ರದಲ್ಲಿ ಕನ್ನಡ ಶಾಲೆ ಲಭ್ಯವಿದ್ದು ಮಕ್ಕಳು ಅದರಲ್ಲಿ ವಿದ್ಯಾಭ್ಯಾಸವನ್ನು ಪಡೆದುಕೊಂಡಿದ್ದಾರೆ ಎಂದು ಶೇಕಡಾ ೯೮ ಕುಟುಂಬದವರು ಹೇಳಿಕೊಂಡಿದ್ದಾರೆ. ಸ್ಥಳಾಂತರಪೂರ್ವದಲ್ಲಿ ೪೮ ಊರುಗಳಿಗೆ ಸುಮಾರು ಶಾಲೆಗಳಿದ್ದವು. ಆದರೆ ಇಲ್ಲಿ ಪುನರ್ವಸತಿ ಕೇಂದ್ರದಲ್ಲಿ ಅಷ್ಟೂ ಊರುಗಳಿಗೆ ಒಂದೇ ಶಾಲೆಯಿರುವುದು ಸಾಕಾಗುವುದಿಲ್ಲ ಎಂದು ಶೇಕಡಾ ೨ ಕುಟುಂಬದವರು ಹೇಳಿಕೊಂಡಿದ್ದಾರೆ. ವಿದ್ಯಾಭ್ಯಾಸದ ಬಗ್ಗೆ ಇವರ ಕಾಳಜಿ ಇದರಲ್ಲಿ ವ್ಯಕ್ತವಾಗುತ್ತದೆ. ರಾಮನಗರದಲ್ಲಿ ಕೆ.ಪಿ.ಸಿಯವರು ೨೦ ಬೆಡ್‌ನ ಆಸ್ಪತ್ರೆಯನ್ನು ನಿರ್ಮಿಸಿದ್ದು ಅಲ್ಲಿ ಎಲ್ಲಾ ಸೌಲಭ್ಯಗಳು ಲಭ್ಯವಿಲ್ಲ ಎಂದು ಶೇಕಡಾ ೯೩ ಕುಣಬಿ ಕುಟುಂಬದವರು ಹೇಳಿದ್ದಾರೆ. ಬಡವರಾದ ಇವರಿಗೆ ಬೆಳಗಾವಿ, ದಾಂಡೇಲಿಯಲ್ಲಿ ವೈದ್ಯರ ಭೇಟಿ ಸಾಧ್ಯವಿಲ್ಲ. ಅದಕ್ಕಾಗಿ ಈ ಸರ್ಕಾರಿ ಆಸ್ಪತ್ರೆಯ ಚಿಕಿತ್ಸೆಯನ್ನೇ ಪಡೆದುಕೊಳ್ಳಬೇಕಾಗಿದೆ ಎಂದು ಶೇಕಡಾ ೭ ಕುಟುಂಬದವರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆಯಾಗಿ ಈ ಎಲ್ಲಾ ಮಾಹಿತಿಗಳಿಂದ ತಿಳಿದುಬರುವುದೇನೆಂದರೆ ಕೆ.ಪಿ.ಸಿಯವರು ಪುನರ್ವಸತಿ ಕೇಂದ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸೌಲಭ್ಯಗಳ

ನಿರ್ಮಾಣ ಮಾಡಲಿಲ್ಲ. ಮಾಡಿದ್ದನ್ನು ಕೂಡಾ ಸಮರ್ಪಕವಾಗಿ ಮಾಡಲಿಲ್ಲ. ನಿರ್ಮಿಸಿದ ನಂತರ ಅದರ ಅನುಸರಣೆಯನ್ನು ಮಾಡಲಿಲ್ಲ. ಜಿಲ್ಲಾ ಪಂಚಾಯತ್‌ಗೆ ವರ್ಗಾವಣೆಯಾದ ನಂತರವೂ ಪಂಚಾಯತ್ ಯೋಜನೆಯಡಿಯಲ್ಲಿ ಅಥವಾ ಬೇರಾವುದೇ ಖಾಸಗಿ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಸೂಪಾ ಸಂತ್ರಸ್ತರು ಅದೇ ಅಸ್ತವ್ಯಸ್ಥ ಸ್ಥಿತಿಯಲ್ಲಿ ಭವಿಷ್ಯದ ದಿನಗಳಿಗಾಗಿ ಎದಿರು ನೋಡುತ್ತಿದ್ದಾರೆ. ಆದರೆ ಈ ಸಂತ್ರಸ್ತರ ಕಡೆಗೆ ಯಾರ ಲಕ್ಷ್ಯವೂ ಹರಿಯದಾಗಿದೆ. ಗ್ರಾಮಪಂಚಾಯತ್‌ನವರೂ ಕೂಡಾ ತಮಗೆ ಬಂದಂತಹ ಯೋಜನೆಗಳನ್ನು ಪ್ರಭಾವಿಗಳನ್ನು ಬಳಸಿಕೊಂಡು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಸಂತ್ರಸ್ತರೇ ಹೇಳಿಕೊಂಡಿದ್ದಾರೆ. ಯೋಜನೆಗಳು ದೇಶಕ್ಕಾಗಿ ತ್ಯಾಗ ಮಾಡಿದವರ ಬಾಳಲ್ಲಿ ಸಮೃದ್ಧಿಯನ್ನು ತರಬೇಕು. ಆದರೆ ಯೋಜನೆಗಳ ಫಲಗಳು ಅವರ ಹತ್ತಿರ ಕೂಡಾ ಸುಳಿದಾಡದಿರುವುದು ವ್ಯವಸ್ಥೆಯ ವಿಪರ್ಯಾಸವೇ ಸರಿ.

೩.೧.೫.೪೧. ಸಂತ್ರಸ್ತ ಬದುಕಿನ ಬಗ್ಗೆ ಕುಣಬಿಯರ ಅಭಿಪ್ರಾಯಗಳು

ಸಂತ್ರಸ್ತ ಬದುಕಿನ ಬಗ್ಗೆ ಪುನರ್ವಸತಿ ಕೇಂದ್ರದಲ್ಲಿ ವಾಸಮಾಡುತ್ತಿರುವ ಕುಣಬಿಯರ ಅಭಿಪ್ರಾಯಗಳನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೪೧. ಅಭಿಪ್ರಾಯಗಳ ವರ್ಗೀಕರಣ

ಅಭಿಪ್ರಾಯಗಳು	ಒಟ್ಟು	ಪ್ರತಿಶತ
ಎಲ್ಲಾ ರೀತಿಯಲ್ಲಿ ಮೋಸ ಆಗಿದೆ	೮೩	೬೫
ಎಲ್ಲವೂ ಕಳೆದುಕೊಂಡಿದ್ದೇವೆ	೯೧	೭೨
ತುಂಬಾ ಬೆಲೆ ಬಾಳುವುದನ್ನು ಕಳೆದುಕೊಂಡಿದ್ದೇವೆ	೬೩	೫೦
ಪರಿಹಾರವನ್ನು ಎಲ್ಲರಿಗೂ ಸಮರ್ಪಕವಾಗಿ ನೀಡಲಿಲ್ಲ	೭೩	೫೮
ಪಡೆದುಕೊಂಡದಕ್ಕಿಂತ ಕಳೆದುಕೊಂಡದ್ದೇ ಜಾಸ್ತಿ	೮೬	೬೮
ಅನುಕೂಲ ಇದ್ದವರು ಹೋರಾಟ ಮಾಡಿ ಎಲ್ಲವನ್ನೂ ಪಡೆದುಕೊಂಡು ಬೇರೆ ಕಡೆಗೆ ಹೋದರು	೭೧	೫೬
ಮೊದಲಾದರೆ ಮನೆ ದೊಡ್ಡದಿತ್ತು	೨೧	೧೬
ಕಾಡಿಗೆ ಹೋಗದೆ ಬೈಜಾರಾಗಿದೆ	೪೨	೩೩
ಇಲ್ಲಿ ಏನೂ ಇಲ್ಲ ಎಂದೆನಿಸುತ್ತದೆ	೬೧	೪೮
ಇಲ್ಲಿ ಏನೂ ಇಲ್ಲ. ಇದು ಸ್ಮಶಾನ	೭೩	೫೮
ಈ ವನವಾಸ ಸಾಕಾಗಿದೆ	೧೧೫	೯೧
ಹೊತ್ತು ಕಳೆಯುವುದೇ ಕಷ್ಟವಾಗಿದೆ	೪೮	೩೮
ನಾವು ಪಾಪಿಗಳು	೮೨	೬೫

ಜೀವನ ಹಾಳಾಗುತ್ತಿದೆ	೩೩	೨೬
ನೆಮ್ಮದಿ ಇಲ್ಲ	೪೨	೩೩
ನೆರೆಕರೆ ಸಂಬಂಧ ಇಲ್ಲ	೨೯	೨೩
ಮನೋರಂಜನೆ ಇಲ್ಲ	೧೮	೧೪
ಇಲ್ಲಿ ಇರಲು ಬೇಸರವಾಗುತ್ತದೆ	೯೪	೭೪
ಇಲ್ಲಿ ಇರುವುದಕ್ಕಿಂತ ಸಾಯಬಹುದು	೪೧	೩೨
ಕುಣಬಿ ಸಂಸ್ಕೃತಿ ಹಾಳಾಗಿದೆ	೬೮	೫೩
ಉದ್ಯೋಗ, ಸಂಪಾದನೆ ಇಲ್ಲದೇ ಜನ ಭಿಕಾರಿಗಳಾಗಿದ್ದಾರೆ	೧೨೦	೯೫
ಯುವಕ-ಯುವತಿಯರಿಗೆ ಉದ್ಯೋಗದ ಅವಕಾಶಗಳು ಇಲ್ಲ	೨೫	೧೯
ಯುವಕರು ಉದ್ಯೋಗಕ್ಕಾಗಿ ಊರು ಬಿಟ್ಟು ಇರಬೇಕಾದ ಪರಿಸ್ಥಿತಿ	೫೧	೪೦
ಈಗ ಇಲ್ಲಿ ಯುವಕರು ಹಾಳಾಗುತ್ತಿದ್ದಾರೆ	೯೦	೭೧
ಸರ್ಕಾರದ ಸೌಲಭ್ಯಗಳಿಲ್ಲ	೬೫	೫೧
ಏನೂ ಇಲ್ಲದ ಹಾಳು ಕೊಂಪೆ ಈ ರಾಮನಗರ, ಜೋಯಿಡಾ ಟೌನ್‌ಶಿಪ್	೧೧೦	೮೭
ಇಲ್ಲಿಯ ಅಧಿಕಾರಿಗಳಷ್ಟು ಬೇಜವಾಬ್ದಾರರು ಬೇರೆಲ್ಲೂ ಸಿಗುವುದಿಲ್ಲ	೮೪	೬೬
ಮೋಸ, ವಂಚನೆ, ಅನಾಚಾರಗಳೇ ಇಲ್ಲಿ ನಡೆಯುತ್ತಿರುವುದು	೧೦೧	೮೦
ಇಲ್ಲಿ ಯಾವ ಯೋಜನೆಗಳೂ ನಡೆಯುವುದಿಲ್ಲ. ಬರೀ ಪೇಪರ್‌ನಲ್ಲಿ ಹಣ ಖರ್ಚಾಗಿರುತ್ತದೆ	೬೮	೫೩
ಕೆ.ಪಿ.ಸಿ ನಿರ್ಮಿಸಿದ ರಾಮನಗರ ಸಂಪೂರ್ಣ ಹಾಳಾಗಿದೆ	೧೧೬	೯೨
ಕೆ.ಪಿ.ಸಿ. ಎಲ್ಲರನ್ನೂ ತಂದು ಬೀದಿಗೆ ನಿಲ್ಲಿಸಿದೆ	೧೨೬	೧೦೦
ಜೋಯಿಡಾ ಟೌನ್‌ಶಿಪ್ ಮತ್ತು ಕ್ಯಾಸೆಲ್‌ರಾಕ್‌ನಲ್ಲಿ ಏನೂ ಅಭಿವೃದ್ಧಿ ಕಾರ್ಯ ಮಾಡಲಿಲ್ಲ	೪೬	೩೬
ಕೆ.ಪಿ.ಸಿ.ಸಂತ್ರಸ್ತರ ಭಾವನೆಗಳಿಗೆ ಸ್ಪಂದಿಸುತ್ತಿಲ್ಲ	೫೪	೪೨
ಅಣಶಿ-ದಾಂಡೇಲಿ ಹುಲಿಯೋಜನೆ ನಮ್ಮನ್ನು ಕೈಕಟ್ಟಿಸಿದೆ	೧೬	೧೨
ಮತ್ತೊಮ್ಮೆ ಎದ್ದೇಳುವ ಪರಿಸ್ಥಿತಿ ಬಂದರೆ ಸಾಯುವುದೇ ಮೇಲು	೨೪	೧೯
ಹಿಂದೆ ಇದ್ದ ಊರಿನ ಕಾಡಿನ ಪರಿಸರ ಇದ್ದಿದ್ದರೆ ಚೆನ್ನಾಗಿರುತ್ತಿತ್ತು	೧೦೬	೮೪
ಹಿಂದೆ ಇದ್ದ ಆಸ್ತಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು	೧೦೦	೭೯
ಹಿಂದಿನ ಕಾಡು ಪರಿಸರ ಇಷ್ಟವಾಗುತ್ತದೆ	೧೮	೧೪

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೧.ರಲ್ಲಿ ನೀಡಿರುವಂತೆ ಹೆಚ್ಚಿನ ಮಾಹಿತಿದಾರರು ಹಲವಾರು ಋಣಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶೇಕಡಾ ೫೦ಕ್ಕಿಂತ ಹೆಚ್ಚಿನ ಸಂತ್ರಸ್ತರು ಈ ಮೇಲಿನ ಎಲ್ಲಾ ಭಾವನೆಗಳನ್ನು ಹೊಂದಿದ್ದಾರೆ. ಕಳೆದುಕೊಂಡಿದ್ದರ ಬಗ್ಗೆ

ಅವರಿಗೆ ಪಶ್ಚಾತ್ತಾಪ ಇದೆ. ಯೋಗ್ಯ ಪರಿಹಾರ ಸಿಗದೇ ಪಾಪಿಗಳು ಎಂಬ ಭಾವನೆ ಮೂಡಿದೆ. ಕೆ.ಪಿ.ಸಿ. ಬದುಕನ್ನು ಹಾಳು ಮಾಡಿತು ಎಂದು ಎಲ್ಲರೂ ತಮ್ಮ ಹಿಂದಿನ ಜೀವನವನ್ನು ನೆನೆದುಕೊಂಡು ಕಣ್ಣೀರಿಡುತ್ತಾರೆ.

ಸ್ಥಳಾಂತರಗೊಂಡು ಮೂವತ್ತೈದು ವರ್ಷಗಳೇ ಕಳೆದು ಹೋದರೂ ಇನ್ನು ಕೂಡಾ ಆ ಬದುಕಿನ ಬಗ್ಗೆ ಮಾತನಾಡುವಾಗ ದು:ಖ ಉಮ್ಮಳಿಸಿ ಬರುವುದು ಅಧ್ಯಯನದ ಸಮಯದಲ್ಲಿ ಸಂಶೋಧಕರ ಗಮನಕ್ಕೆ ಬಂದಿದೆ. ಏನೂ ಮಾಡಲಿಕ್ಕಾಗದ ಮನಸ್ಥಿತಿಯಲ್ಲಿ ಅವರು ಜೀವನ ದೂಡುತ್ತಿರುವುದನ್ನು ಗಮನಿಸಲಾಗಿದೆ.

೩.೧.೫.೪೧.೧. ಸಂತ್ರಸ್ತ ಜೀವನದ ಬಗ್ಗೆ ವಿಧವೆಯರ ಅಭಿಪ್ರಾಯಗಳು

ಮಾಹಿತಿದಾರರಲ್ಲಿ ೪೮ ಜನರು ವಿಧವೆಯರಿದ್ದು ಅವರಿಗೆ ಪುನರ್ವಸತಿ ಕೇಂದ್ರದ ಬದುಕಿನ ಬಗ್ಗೆ ಏನನ್ನಿಸುತ್ತದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೪೨. ವಿಧವೆಯರ ಅಭಿಪ್ರಾಯಗಳ ವರ್ಗೀಕರಣ

ಅಭಿಪ್ರಾಯಗಳು	ಒಟ್ಟು	ಪ್ರತಿಶತ
ಮೊದಲು ಕೈತುಂಬಾ ಕೆಲಸ ಇರುತ್ತಿತ್ತು	೪೦	೮೩
ಇಲ್ಲಿ ಏನೂ ಇಲ್ಲ ಎಂದೆನಿಸುತ್ತದೆ	೩೬	೭೫
ಸರ್ಕಾರದ ಸೌಲಭ್ಯಗಳಿಲ್ಲ	೨೮	೫೮
ಬೇಸರವಾಗುತ್ತಿದೆ	೨೬	೫೪
ಬದುಕು ಈ ತರಹ ಆಗಬಾರದಿತ್ತು	೧೧	೨೨

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೨ರಲ್ಲಿ ನೀಡಿರುವ ಮಾಹಿತಿಯ ಪ್ರಕಾರ ಉದ್ಯೋಗ ಇಲ್ಲದೇ, ಸರ್ಕಾರದ ಸೌಲಭ್ಯಗಳಿಲ್ಲದೇ ಜೀವನದಲ್ಲಿ ಏನೂ ಇಲ್ಲ ಎಂಬ ನಿರಾಶೆ ವಿಧವೆಯರಲ್ಲಿ ವ್ಯಕ್ತವಾಗಿದೆ. ಚೆನ್ನಾಗಿ ಬದುಕುತ್ತಿದ್ದ ತಮ್ಮ ಬದುಕು ಈ ತರಹ ಆಗಬಾರದಿತ್ತು ಎಂಬ ಅನಾಥ ಭಾವನೆ ಅವರಲ್ಲಿ ಮೂಡಿದ್ದನ್ನು ಅಧ್ಯಯನದ ಸಮಯದಲ್ಲಿ ಗಮನಿಸಲಾಗಿದೆ. ಪತಿಯನ್ನು, ಆಸ್ತಿಯನ್ನು, ಎಲ್ಲವನ್ನೂ ಕಳೆದುಕೊಂಡು ಇಲ್ಲಿ ಬದುಕು ಸಾಗಿಸಲು ತುಂಬಾ ಬೇಸರವಾಗುತ್ತಿದೆ ಎಂಬುದಾಗಿ ನೋವನ್ನು ವ್ಯಕ್ತಪಡಿಸಿದ್ದಾರೆ. ಸ್ಥಳಾಂತರದ ಮೊದಲು ಇವರು ತುಂಬು ಕುಟುಂಬಗಳಲ್ಲಿ ವಾಸ ಮಾಡುತ್ತಿದ್ದು ಮನೆಯಲ್ಲಿ ಸಾಕಷ್ಟು ಕೆಲಸ ಇರುತ್ತಿತ್ತು. ಊರಲ್ಲಿ ಜಮೀನು ಇದ್ದ ಕಾರಣ ಎಲ್ಲರಿಗೂ ಬೇಕಾದಷ್ಟು ಕೃಷಿಕೂಲಿ ಅಥವಾ ಕೃಷಿಯೇತರ ಕೂಲಿ ದೊರೆಯುತ್ತಿತ್ತು. ಬಿಡುವಿಲ್ಲದ ಕೆಲಸದ ಮಧ್ಯೆ ಹೊತ್ತು ಕಳೆಯುವುದೇ ಗೊತ್ತಾಗುತ್ತಿರಲಿಲ್ಲ. ಸಾಕಷ್ಟು ದಣಿದ ದೇಹ ಮಲಗಿದರೆ ಒಳ್ಳೆಯ ನಿದ್ದೆ ಬರುತ್ತಿತ್ತು. ಆದರೆ ಇಲ್ಲಿ ದುಡಿಮೆಯೂ ಇಲ್ಲ ಮನೆಯಲ್ಲಿ ಏನಾದರೂ ಮಾಡಿಕೊಂಡು ತಿನ್ನಲು ಆಹಾರ ಪದಾರ್ಥಗಳ ಕೊರತೆ ಕೂಡಾ

ಇದೆ. ಮನಸ್ಪೂರ್ವಕವಾಗಿ ಮಾಡಲು ಏನೂ ಕೆಲಸವಿಲ್ಲ. ಸರ್ಕಾರ ಏನೂ ಸಹಾಯ ಮಾಡಲಿಲ್ಲ. ಮಕ್ಕಳು ದೊಡ್ಡವರಾದ ಮೇಲೆ ಸುಮಾರು ಜನರ ವಿಧವಾ ವೇತನ ಕೂಡಾ ರದ್ದಾಗಿದೆ. ಇದರಿಂದಾಗಿ ಅವರಿಗೆ ದೊರೆಯುತ್ತಿದ್ದ ಒಂದಿಷ್ಟು ಸ್ವಂತ ಹಣ ಕೂಡಾ ಇಲ್ಲದಂತಾಗಿದೆ. ಪತಿಯನ್ನು ಕಳೆದುಕೊಂಡು ಬದುಕುವುದೇ ತುಂಬಾ ಬೇಸರದ ವಿಷಯ. ಅದರ ಜೊತೆಗೆ ಇವರು ಜಮೀನು, ಊರು, ತಮ್ಮವರು ಎಲ್ಲವನ್ನೂ ಕಳೆದುಕೊಂಡು ಬೇಸರದಿಂದ ಬದುಕು ಸಾಗಿಸುವಂತಾಗಿದೆ.

ಈ ಮೇಲಿನ ಎಲ್ಲಾ ಮಾಹಿತಿಗಳನ್ನು ನೋಡಿದಾಗ ಸ್ಥಳಾಂತರ ವಿಧವೆಯರಿಗೆ ಒಂದು ರೀತಿಯ ಅನಾಥ ಪ್ರಜ್ಞೆಯನ್ನು ತಂದೊಡ್ಡಿರುವುದು ಕಂಡುಬರುತ್ತದೆ. ಗಂಡನನ್ನು ಕಳೆದುಕೊಂಡವರು ತಮ್ಮ ಆಸ್ತಿ, ಮಕ್ಕಳು, ಸಂಬಂಧಿಕರು ಮತ್ತು ನೆರೆಹೊರೆಯವರ ಜೊತೆಗೆ ಎಲ್ಲವನ್ನೂ ಮರೆತಂತೆ ಬದುಕುತ್ತಾರೆ. ಆದರೆ ಈ ವಿಧವೆಯರು ಗಂಡನನ್ನು ಮಾತ್ರಾ ಕಳೆದುಕೊಂಡಿಲ್ಲ. ತನ್ನ ಜೀವನದ ಎಲ್ಲಾ ಅವಿಭಾಜ್ಯ ಅಂಗಗಳನ್ನೂ ಕಳೆದುಕೊಂಡು ಬದುಕನ್ನು ನಿರಾಸಕ್ತಿಯಿಂದ ಸಾಗಿಸುವ ಪರಿಸ್ಥಿತಿಯಲ್ಲಿದ್ದಾರೆ. ಸಾಯಲಿಕ್ಕೆ ಆಗುವುದಿಲ್ಲವಲ್ಲಾ ಎನ್ನುವ ರೀತಿಯಲ್ಲಿ ಬದುಕುತ್ತಿರುವಂತೆ ಭಾಸವಾಗುತ್ತದೆ. ಈ ಸ್ಥಳಾಂತರ ವಿಧವೆಯರ ಬದುಕನ್ನು ಇನ್ನಷ್ಟು ಅಮಂಗಲಗೊಳಿಸಿದೆ.

೩.೧.೫.೪೧.೨. ಸಂತ್ರಸ್ತ ಜೀವನದ ಬಗ್ಗೆ ಮಹಿಳೆಯರ ಅಭಿಪ್ರಾಯಗಳು

ಮಾಹಿತಿದಾರರಲ್ಲಿ ಒಟ್ಟು ೫೪ ಮಹಿಳೆಯರಿದ್ದು ಪುನರ್ವಸತಿ ಕೇಂದ್ರದ ಬದುಕಿನ ಬಗ್ಗೆ ಅವರ ಅಭಿಪ್ರಾಯಗಳನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ. ೩.೪೩. ಮಹಿಳೆಯರ ಅಭಿಪ್ರಾಯಗಳ ವರ್ಗೀಕರಣ

ಅಭಿಪ್ರಾಯಗಳು	ಒಟ್ಟು	ಪ್ರತಿಶತ
ನೆರೆಕರೆ ಸಂಬಂಧ ಇಲ್ಲ	೩೧	೫೭
ಮನೋರಂಜನೆ ಇಲ್ಲ	೧೬	೨೯
ಉದ್ಯೋಗ ಇಲ್ಲ	೫೦	೯೨
ಸಂಪಾದನೆ ಇಲ್ಲ	೩೬	೬೬
ನೆಮ್ಮದಿ ಇಲ್ಲ	೩೨	೫೯
ನೀರಿನ ಸಮಸ್ಯೆ ಇದೆ	೫೦	೯೨
ಹಣ್ಣು, ತರಕಾರಿ, ಹೂವು ಕೊರತೆ	೨೪	೪೪
ಉರುವಲಿನ ಸಮಸ್ಯೆ	೫೦	೯೨
ಕಳಲೆ, ಅಣಬೆ, ಮೀನು ಇಲ್ಲ	೮	೧೪
ಮಾಂಸ ಸಿಗುತ್ತಿಲ್ಲ	೨೧	೩೮
ಕಾಡಿಗೆ ಹೋಗದೆ ಬೇಜಾರಾಗಿದೆ	೬	೧೧
ಮೊದಲಾದರೆ ಮನೆ ದೊಡ್ಡದಿತ್ತು	೯	೧೬
ಶೌಚಾಲಯದ ಸಮಸ್ಯೆ	೩೯	೭೨

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೩.ರಲ್ಲಿ ನೀಡಿರುವಂತೆ ಮಹಿಳೆಯರಿಂದ ಅಭಿಪ್ರಾಯ ವ್ಯಕ್ತವಾಗಿದೆ. ಪುನರ್ವಸತಿ ಕೇಂದ್ರದಲ್ಲಿ ಎಲ್ಲಾ ಜಾತಿ ಸಮುದಾಯದವರ ಮನೆಗಳನ್ನು ಬೆರೆಸಿ ನಿವೇಷನ ಹಂಚಿರುತ್ತಾರೆ. ಎಷ್ಟೋ ನಿವೇಷನಗಳು ಖಾಲಿಯಾಗಿದ್ದು ಗಿಡಗಳು ಬೆಳೆದು ಕಾಡಿನಂತಾಗಿದೆ. ನಿವೇಷನಗಳು ದೊಡ್ಡದಾಗಿದ್ದು ಮನೆಗಳು ದೂರ ದೂರ ನಿರ್ಮಿತವಾಗಿವೆ. ತಾವು ಹಾಗೂ ತಮ್ಮ ಮನೆಯ ನಿವೇಷನಗಳಲ್ಲಿರುವ ಕುಟುಂಬಗಳ ಜೊತೆಗಷ್ಟೇ ಇವರು ಬೆರೆಯುವುದಾಗಿದೆ. ಪಕ್ಕದಲ್ಲಿ ಬೇರೆ ಜಾತಿ ಸಮುದಾಯದ ಜನ ಇದ್ದರೆ ಅವರಲ್ಲಿ ಮಾತನಾಡಲು ಇವರಿಗೆ ಭಾಷಾ ಸಮಸ್ಯೆ ಇದೆ, ಬೆರೆತು ಗೊತ್ತಿಲ್ಲ, ಬೆರೆಯಲು ಆಸಕ್ತಿ ಇಲ್ಲ ಈ ಎಲ್ಲಾ ಕಾರಣಗಳಿಂದ ಇಲ್ಲಿ ಪುನರ್ವಸತಿ ಕೇಂದ್ರದಲ್ಲಿ ಮಹಿಳೆಯರು ನೆರೆಕರೆಯವರ ಜೊತೆಗೆ ಬೆರೆಯುತ್ತಿಲ್ಲ. ಮೊದಲು ಎಲ್ಲರ ಜೊತೆಗೆ ಬೆರೆತು ಹಬ್ಬ ಹರಿದಿನ, ಸಾಂಸ್ಕೃತಿಕ ಆಚರಣೆಗಳನ್ನು ಆಚರಿಸುತ್ತಿದ್ದರು. ಆಧುನಿಕ ಮನೆರಂಜನೆ ಸಾಧನಗಳಿದ್ದರೂ ಮನುಷ್ಯ ಹೆಚ್ಚು ಖುಷಿ ಪಡುವುದು ತಾನು ಎಲ್ಲರ ಜೊತೆಗೆ ಬೆರೆತು ಆಚರಿಸುವ ಹಬ್ಬಗಳಿಂದ, ಸಾಂಸ್ಕೃತಿಕ ಆಚರಣೆಗಳಿಂದ. ಅವುಗಳೆಲ್ಲಾ ಇಲ್ಲದ ಕಾರಣ ಮನೋರಂಜನೆ ಇಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಪುನರ್ವಸತಿ ಕೇಂದ್ರದಲ್ಲಿ ಮಹಿಳೆಯರಿಗೆ ಮಾಡಲು ಏನೂ ಉದ್ಯೋಗ ಇಲ್ಲ ಆದ್ದರಿಂದ ಸಂಪಾದನೆ ಕೂಡಾ ಇಲ್ಲ ಮತ್ತು ನೆಮ್ಮದಿ ಕೂಡಾ ಇಲ್ಲ. ಪ್ರತಿಯೊಂದೂ ಕುಟುಂಬದಲ್ಲಿಯೂ ಮೂರಕ್ಕಿಂತಲೂ ಹೆಚ್ಚು ಮಹಿಳೆಯರು ಉದ್ಯೋಗ ಇಲ್ಲದೇ, ಸಂಪಾದನೆ ಇಲ್ಲದೇ ಖಾಲಿ ಇದ್ದಾರೆ. ಅವರಿಗೆ ಮಾಡಲು ಏನೂ ಕೆಲಸ ಇರುವುದಿಲ್ಲ. ಒಬ್ಬ ಗಂಡಸು ಸಿಕ್ಕಿದಷ್ಟು ದುಡಿಮೆ ಮಾಡಿ ಕುಟುಂಬದ ಐದಾರು ಜನರನ್ನು ಸಾಕುವ ಪರಿಸ್ಥಿತಿ ಎಲ್ಲಾ ಕುಟುಂಬಗಳಲ್ಲಿಯೂ ಸರ್ವೇ ಸಾಮಾನ್ಯವಾಗಿದೆ. ಕುಡಿಯಲು, ಬಟ್ಟೆ, ಪಾತ್ರೆ ತೊಳೆಯಲು ನೀರಿಲ್ಲದೇ ಮಹಿಳೆಯರು ತುಂಬಾ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ನೀರು ಮತ್ತು ಉರುವಲಿನ ಸಮಸ್ಯೆ ರಾಮನಗರದ ಮಹಿಳೆಯರನ್ನು ಇನ್ನಿಲ್ಲದೇ ಕಾಡುತ್ತಿದೆ. ಪ್ರತಿಯೊಬ್ಬರ ಬಾಯಿಯಲ್ಲೂ ಇದೇ ಮಾತು. ಇರುವುದನ್ನಾದರೂ ಬೇಯಿಸಿ ತಿನ್ನೋಣವೆಂದರೆ ಉರುವಲು ದೊರೆಯುತ್ತಿಲ್ಲ, ಪ್ರತಿಯೊಂದನ್ನೂ ದುಡ್ಡು ಕೊಟ್ಟು ತರಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ತಿನ್ನಲು ಮೊದಲಿನ ಕಾಡಿನ ಉತ್ಪನ್ನಗಳು, ಮಾಂಸ ಇಲ್ಲದೇ ತುಂಬಾ ಬೇಸರ ಆಗುತ್ತದೆ. ಆಯಾಯ ಕಾಲಮಾನದಲ್ಲಿ, ಊಟದ ಸಂದರ್ಭದಲ್ಲಿ ಈ ನೆನಪುಗಳು ತುಂಬಾ ಕಾಡುತ್ತವೆ. ಕಾಡಿನ ಮಧ್ಯೆ ವಾಸಮಾಡುತ್ತಿದ್ದಾಗ ಮಹಿಳೆಯರು ಒಂದಿಲ್ಲ ಒಂದು ಕಾರಣಕ್ಕೆ ಕಾಡಿಗೆ ಹೋಗುತ್ತಿದ್ದರು. ಆದರೆ ಇಲ್ಲಿ ಆ ಸೌಭಾಗ್ಯ ಇಲ್ಲ. ಮೊದಲಿನ ಮನೆಗಳು ಚೆನ್ನಾಗಿಲ್ಲದಿದ್ದರೂ ಅದರಲ್ಲಿ ಜಾಗ ಬೇಕಾದಷ್ಟಿತ್ತು ಇದೀಗ ಇಕ್ಕಟ್ಟಿನಲ್ಲಿ ಬದುಕುವಂತಾಗಿದೆ. ರಾಮನಗರದಲ್ಲಿ ಶೌಚಾಲಯದ ಸಮಸ್ಯೆ ಕಾಡುತ್ತಿದೆ. ಮಹಿಳೆಯರು ಬಹಿರ್ದೆಸೆಗೆ ಹೋಗುವುದೇ ಕಷ್ಟವಾಗಿದೆ.

ಈ ಮೇಲಿನ ಮಾಹಿತಿಗಳನ್ನು ನೋಡಿದಾಗ ಸ್ಥಳಾಂತರ ಮಹಿಳೆಯರನ್ನು ಸಾಕಷ್ಟು ಕಾಡಿದೆ ಎಂಬ ಅಂಶವು ಕಂಡುಬರುತ್ತದೆ. ಅವರ ಸಂಬಂಧಗಳು,

ಮನೋರಂಜನೆ, ನೆಮ್ಮದಿ, ಉದ್ಯೋಗ, ಆದಾಯ, ಕಾಡಿನ ಆಹಾರದ ವಸ್ತುಗಳು, ನೀರಿನ ಮತ್ತು ಉರುವಲಿನ ಸ್ವಾತಂತ್ರ್ಯ, ಕಾಡಿಗೆ ಹೋಗುವ ಸ್ವಾತಂತ್ರ್ಯ, ಮನೆಯ ಸೌಕರ್ಯ, ಶೌಚಾಲಯದ ಸೌಕರ್ಯ ಎಲ್ಲವನ್ನೂ ಈ ಸ್ಥಳಾಂತರ ತಲ್ಲಣಗೊಳಿಸಿದೆ, ಕೆಡಿಸಿಬಿಟ್ಟಿದೆ, ಕಿತ್ತುಕೊಂಡಿದೆ.

೩.೧.೫.೪೧.೩ ಸಂತ್ರಸ್ತ ಜೀವನದ ಬಗ್ಗೆ ವೃದ್ಧರ ಅಭಿಪ್ರಾಯಗಳು

ಮಾಹಿತಿದಾರರಲ್ಲಿ ೬೦-೮೯ ವಯಸ್ಸಿನವರೆಗೆ ೬೮ ವೃದ್ಧರಿದ್ದು ಸಂತ್ರಸ್ತ ಜೀವನದ ಬಗ್ಗೆ ಅವರ ಅಭಿಪ್ರಾಯವನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಠಕ ಸಂಖ್ಯೆ ೩.೪೪. ವೃದ್ಧರ ಅಭಿಪ್ರಾಯಗಳ ವರ್ಗೀಕರಣ

ಅಭಿಪ್ರಾಯಗಳು	ಒಟ್ಟು	ಪ್ರತಿಶತ
ಎಲ್ಲವೂ ಕಳೆದುಕೊಂಡಿದ್ದೇವೆ	೪೬	೬೭
ನಾವು ಪಾಪಿಗಳು	೨೨	೩೨
ಜೀವನ ತುಂಬಾ ಬೇಜಾರಾಗಿದೆ	೩೧	೪೫
ಹೊತ್ತು ಕಳೆಯುವುದೇ ಕಷ್ಟವಾಗಿದೆ	೫೬	೮೨
ಇಲ್ಲಿ ಏನೂ ಇಲ್ಲ	೪೨	೬೧
ಮನೋರಂಜನೆ ಇಲ್ಲ	೧೪	೨೦
ರಾಮನ ವನವಾಸ ಇದ್ದ ಹಾಗೆ ನಮ್ಮ ಬದುಕು	೫೧	೭೫
ಇಲ್ಲಿ ಇರುವುದಕ್ಕಿಂತ ಸಾಯಬಹುದು	೧೮	೨೬
ನಮ್ಮ ಆಹಾರ ನಮಗೆ ಸಿಗುತ್ತಿಲ್ಲ	೩೨	೪೭
ಇಲ್ಲಿ ನಮ್ಮ ಉಡುಪು ಧರಿಸಲು ಮುಜುಗುರ	೬೧	೮೯

ಆಧಾರ: ಕ್ಷೇತ್ರಕಾರ್ಯ

ಕೋಷ್ಠಕ ಸಂಖ್ಯೆ ೩.೪೪ ರಲ್ಲಿ ನೀಡಿರುವಂತೆ ವೃದ್ಧರು ತಮ್ಮ ಅಭಿಪ್ರಾಯವನ್ನು ತುಂಬಾ ದು:ಖದಿಂದ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಅವರಲ್ಲಿ ದು:ಖ ಉಮ್ಮಳಿಸಿ ಬರುತ್ತಿದ್ದುದ್ದನ್ನು ಅಧ್ಯಯನದ ಸಮಯದಲ್ಲಿ ಗಮನಿಸಲಾಗಿದೆ. ಅವರಲ್ಲಿನ ಹತಾಶೆ, ಏಕಾಂಗಿತನ, ನಿರುತ್ಸಾಹ, ಅಸಹಾಯಕತೆ ಅವರನ್ನು ಮೂಲೆಗುಂಪು ಮಾಡಿದೆ.

ಸ್ಥಳಾಂತರಪೂರ್ವದಲ್ಲಿ ಸಾಕಷ್ಟು ಜಮೀನು, ದೊಡ್ಡ ಕುಟುಂಬ, ಕುಟುಂಬಕ್ಕೆ ಯಜಮಾನರಂತಿದ್ದ ವೃದ್ಧರು ಈಗ ಪುನರ್ವಸತಿ ಕೇಂದ್ರದಲ್ಲಿ ಕೆಲಸ ಇಲ್ಲದೇ, ಹಿಂದಿನ ಗೌರವ ಸಿಗದೇ ಮರುಗುತ್ತಿದ್ದಾರೆ. ದಿನ ಕಳೆಯುವುದೇ ಕಷ್ಟವಾಗುತ್ತಿದೆ. ಹೇಗೆ ಹೊತ್ತು ಕಳೆಯಬೇಕೆಂದೇ ತೋಚುತ್ತಿಲ್ಲ. ಬರೀ ಹಿಂದಿನ ಬದುಕನ್ನು ನೆನಪಿಸಿಕೊಂಡು ಹುಚ್ಚು ಹಿಡಿದಂತಾಗಿದೆ ಎಂದು ವೃದ್ಧರು ತುಂಬಾ ಬೇಸರದಿಂದ, ನಿರಾಸೆಯಿಂದ ವ್ಯಕ್ತಪಡಿಸುತ್ತಾರೆ.

ಒಟ್ಟಾರೆಯಾಗಿ ಈ ಮಾಹಿತಿಯಿಂದ ತಿಳಿದುಬರುವುದೇನೆಂದರೆ ಸ್ಥಳಾಂತರ ವಯೋವೃದ್ಧರನ್ನು ಸಾಕಷ್ಟು ಕಾಡಿದೆ. ಹಿಂದಿನ ಬದುಕನ್ನು ಅವರು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಅವರ ಆಹಾರ, ಉಡುಗೆ-ತೊಡುಗೆ, ಸ್ವಾತಂತ್ರ್ಯ, ಸ್ವಾಭಿಮಾನದ ಬದುಕು, ಉಲ್ಲಾಸದಾಯಕವಾದ ಸಂತ್ರಪ್ತ ಜೀವನ ಎಲ್ಲವನ್ನೂ ಕಳೆದುಕೊಂಡು ಪುನರ್ವಸತಿ ಕೇಂದ್ರದಲ್ಲಿ ವ್ಯರ್ಥವಾಗಿ ಕಾಲಕಳೆದಂತಾಗಿದೆ. ಜೀವನದ ಸಾರ್ಥಕತೆಯನ್ನು ಅವರು ಕಳೆದುಕೊಂಡಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೨. ಪುನರ್ವಸತೇತರ ಸಂತ್ರಸ್ತ ಕುಣಬಿಯರ ಪರಿಸ್ಥಿತಿ

ಸೂಪಾ ಜಲಾಶಯದ ನಿರ್ಮಾಣದಿಂದ ಸ್ಥಳಾಂತರಗೊಂಡ ಎಲ್ಲಾ ಸಂತ್ರಸ್ತರು ಪುನರ್ವಸತಿ ಕೇಂದ್ರಕ್ಕೆ ಬಂದು ನೆಲೆಸಿರುವುದಿಲ್ಲ. ಅವರು ಜೋಯಿಡಾ ತಾಲ್ಲೂಕಿನ ಮುಳುಗಡೆಯಾಗದೇ ಇರುವ ವಿಭಿಧ ಊರುಗಳಲ್ಲಿ ವಾಸವಿದ್ದಾರೆ. ಹೆಚ್ಚಿನವರು ತಮ್ಮ ಮೂಲನೆಲೆಯಾದ ಗೋವಾಕ್ಕೆ ಮರಳಿರುವುದಾಗಿ ಅಧ್ಯಯನ ಸಮಯದಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ. ಪುನರ್ವಸತಿ ಕೇಂದ್ರದಲ್ಲಿ ವಾಸವಿರುವ ಸಂತ್ರಸ್ತ ಕುಣಬಿಯರ ಪರಿಸ್ಥಿತಿ ಈ ತರಹ ಇದ್ದರೆ ಇಲ್ಲಿಗೆ ಬರದೇ ಜೋಯಿಡಾ ತಾಲ್ಲೂಕಿನ ಇತರೇ ಊರುಗಳಲ್ಲಿ ವಾಸವಿರುವ ಸಂತ್ರಸ್ತ ಕುಣಬಿಯರ ಪ್ರಸ್ತುತ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಯನಕ್ಕಾಗಿ ೨೫ ಮಾಹಿತಿದಾರರನ್ನು ಸ್ನೋಬಾಲ್ ಸ್ಯಾಂಪ್ಲಿಂಗ್ ಮುಖಾಂತರ ಆಯ್ದುಕೊಳ್ಳಲಾಗಿದೆ. ಅವರನ್ನು ಅವರ ಸ್ವಂತ ಊರುಗಳಲ್ಲಿ ನೇರ ಸಂದರ್ಶನ ಮಾಡಲಾಗಿದೆ. ಅಧ್ಯಯನದಿಂದ ಕಂಡುಕೊಂಡ ಅಂಶಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಕೋಷ್ಟಕ ಸಂಖ್ಯೆ ೩.೪೫. ಸಂದರ್ಶಿಸಿದ ಕುಟುಂಬಗಳ ವರ್ಗೀಕರಣ

ವಾಸವಿರುವ ಊರು	ಒಟ್ಟು ಕುಟುಂಬ	ಸ್ಥಳಾಂತರದ ಉಪಹಂತ	ಸ್ವಂತ ನಿವೇಶನ	ಅತಿಕ್ರಮಣ
ಕುಂಡಲ	೧	೩ನೇ	೦	೧
ಕೆಲೊಲಿ	೧	೩ನೇ	೦	೧
ಕುರಾವಲಿ	೩	೩ನೇ	೧	೨
ಕುಂಬಾರವಾಡ	೨	೩ನೇ	೧	೧
ಡಿಗ್ಗಿ	೨	೩ನೇ	೦	೨
ವಾಗೇಲಿ	೩	೩ನೇ	೧	೨
ಅವೇಡಾ	೩	೨ನೇ	೦	೩
ಜೋಯಿಡಾ	೧	೨ನೇ	೦	೧
ಸಿಟ್ಟೇಗಾಳಿ	೧	೨ನೇ	೦	೧
ಚೌಕನಗಾಳಿ	೨	೨ನೇ	೦	೨
ನಗರಿ	೧	೧ನೇ	೧	೦
ದುಪ್ಪೇವಾಡಿ	೨	೧ನೇ	೦	೨
ಅಪೇಲಿ	೩	೧ನೇ	೦	೩
ಒಟ್ಟು ಕುಟುಂಬಗಳು	**೨೫**	–	**೪**	**೨೧**

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೫.ರಲ್ಲಿ ತೋರಿಸಿರುವಂತೆ ಜೋಯಿಡಾ ತಾಲ್ಲೂಕಿನ ಬೇರೆ ಬೇರೆ ಊರುಗಳಲ್ಲಿ ವಾಸ ಮಾಡುತ್ತಿರುವ ಒಟ್ಟು ೨೫ ಸಂತ್ರಸ್ತ ಕುಣಬಿ ಕುಟುಂಬಗಳನ್ನು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಶೇಕಡಾ ೪೮ ಕುಟುಂಬಗಳು ಸೂಪಾ ಜಲಾಶಯ ಯೋಜನೆಯ ತೃತೀಯ ಉಪಹಂತದಲ್ಲಿ, ಶೇಕಡಾ ೨೮ ಕುಟುಂಬಗಳು ದ್ವಿತೀಯ ಉಪಹಂತದಲ್ಲಿ ಹಾಗೂ ಶೇಕಡಾ ೨೪ ಕುಟುಂಬಗಳು ತೃತೀಯ ಉಪಹಂತದಲ್ಲಿ ಸಂತ್ರಸ್ತರಾಗಿದ್ದಾರೆ. ಇವರಲ್ಲಿ ಶೇಕಡಾ ೧೬ ಕುಟುಂಬದವರು ಸ್ವಂತ ನಿವೇಷನವನ್ನು ಹೊಂದಿರುತ್ತಾರೆ. ಶೇಕಡಾ ೮೪ ಕುಟುಂಬಗಳು ಸ್ವಂತ ನಿವೇಷನವನ್ನು ಹೊಂದಿಲ್ಲ. ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿ ಮನೆ ಮಾಡಿಕೊಂಡು ಬದುಕುತ್ತಿದ್ದಾರೆ.

ಪುನರ್ವಸತಿ ಕೇಂದ್ರಗಳಲ್ಲಿ ವಾಸವಿರದೇ ಇರುವ ಸಂತ್ರಸ್ತರು ಸ್ವಂತ ನಿವೇಷನವನ್ನು ಹೊಂದಿರದೇ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ತಾಲ್ಲೂಕಿನ ವಿವಿಧೆಡೆ ವಾಸವಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೩.೨.೧. ಪುನರ್ವಸತಿ ಕೇಂದ್ರಕ್ಕೆ ಬರದೇ ಇರಲು ನೀಡಿದ ಕಾರಣಗಳು

ಪುನರ್ವಸತಿ ಕೇಂದ್ರದಲ್ಲಿ ನಿವೇಷನ ದೊರೆತಿದ್ದರೂ ಕೆಲವರು ಅಲ್ಲಿಗೆ ಬರದೇ ಇರಲು ಕಾರಣಗಳನ್ನು ನೀಡಿದ್ದಾರೆ.

ಕೋಷ್ಟಕ ಸಂಖ್ಯೆ ೩.೪೬. ಪುನರ್ವಸತಿ ಕೇಂದ್ರಕ್ಕೆ ಬರದೇ ಇರಲು ಕಾರಣಗಳ ವರ್ಗೀಕರಣ

ಕಾರಣಗಳು	ಒಟ್ಟು ಕುಟುಂಬಗಳು	ಪ್ರತಿಶತ
ಮನೆ ನಿವೇಷನ ನೀಡಲಿಲ್ಲ	೫	೨೦
ಮನೆ ನಿವೇಷನ ಎಲ್ಲಿದೆ ಎಂದು ತಿಳಿದಿಲ್ಲ	೧೨	೪೮
ಜಮೀನು ದೊರೆಯಲಿಲ್ಲ	೪	೧೬
ಉದ್ಯೋಗದ ಸಮಸ್ಯೆ	೨೦	೮೦
ಮೂಲಭೂತ ಸೌಕರ್ಯಗಳ ಸಮಸ್ಯೆ	೨೦	೮೦
ಪರಿಚಯ-ಸಂಬಂಧಿಕರಿಲ್ಲದ ಊರು	೧೬	೬೪
ಹೊಲ ಖರೀದಿ ಮಾಡಿರುವುದು	೬	೨೪
ಬೇರೆ ಊರಿಗೆ ಹೋಗಿ ಬದುಕಿ ಗೊತ್ತಿಲ್ಲ	೧೨	೪೮
ನೀರಾವರಿ ಕೃಷಿ ಭೂಮಿ ಇಲ್ಲದೇ ಇರುವುದು	೪	೧೬
ಕೆ.ಪಿ.ಸಿ. ಕೊಟ್ಟಿರುವ ಭೂಮಿ ತುಂಬಾ ದೂರವಿದ್ದು ದುಡಿಮೆಗೆ ಯೋಗ್ಯವಿಲ್ಲ	೪	೧೬
ಅಲ್ಲಿ ತುಂಬಾ ಗಾಳಿ ಮಳೆಯಿದ್ದು ಮನೆಯಿಲ್ಲದಿರುವುದರಿಂದ ಮಕ್ಕಳ ರಕ್ಷಣೆ ಅಸಾಧ್ಯ	೧೯	೭೬

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೬ ರಲ್ಲಿನ ಮಾಹಿತಿಯಂತೆ ಸಂತ್ರಸ್ತರು ಪುನರ್ವಸತಿ ಕೇಂದ್ರಕ್ಕೆ ಬರದೇ ಇರಲು ಕಾರಣಗಳನ್ನು ನೀಡಿದ್ದಾರೆ. ಸಂತ್ರಸ್ತ ಕುಣಬಿಯರು ಮೊದಲು ಹೊಲದ ಕೆಲಸ ಮಾಡುತ್ತಿದ್ದು ಅವರು ಅದೇ ತರಹದ ಕೆಲಸ ಮತ್ತು ವಾತಾವರಣವನ್ನು ಬಯಸುತ್ತಿದ್ದರು. ಇವರು ತಮ್ಮ ಜನಗಳ ಮಧ್ಯೆ ಇರುವುದನ್ನು ಬಯಸುತ್ತಿದ್ದರು. ಈ ಎಲ್ಲಾ ಅಂಶಗಳು ರಾಮನಗರದಲ್ಲಿ ದೊರೆಯುವುದಿಲ್ಲ ಎಂದು ಖಚಿತಪಡಿಸಿಕೊಂಡ ಇವರು ಈ ಮೇಲೆ ಹೇಳಿದ ಊರುಗಳಲ್ಲಿ ನೆಲೆಸಿದರು. ಕೆಲವರು ಹೊಲ ಖರೀದಿ ಮಾಡಿದರು. ಇನ್ನು ಕೆಲವರು ಸರ್ಕಾರಿ ಜಾಗದಲ್ಲಿ ಮನೆಕಟ್ಟಿಕೊಂಡಿದ್ದು ಸ್ವಂತ ಹೊಲವನ್ನು ಹೊಂದಿದ್ದಾರೆ.

ಈ ಮೇಲಿನ ಎಲ್ಲಾ ಮಾಹಿತಿಗಳಿಂದ ತಿಳಿದುಬರುವ ವಿಷಯ ಏನೆಂದರೆ ಸಂತ್ರಸ್ತ ಕುಣಬಿಯರು ಕಾರಣಾಂತರಗಳಿಂದ ಪುನರ್ವಸತಿ ಕೇಂದ್ರಕ್ಕೆ ಬರಲಿಲ್ಲ. ಕೆಲವರಿಗೆ ಪುನರ್ವಸತಿ ಕೇಂದ್ರದಲ್ಲಿ ತಮಗೆ ದೊರೆತ ನಿವೇಷನ ಎಲ್ಲಿದೆ ಎಂಬುದೇ ಗೊತ್ತಾಗದೇ ಇರುವುದು ವಿಪರ್ಯಾಸವೇ ಸರಿ. ತಮ್ಮ ಊರಲ್ಲೇ ಇದ್ದರೆ ಹೇಗಾದರೂ ಮಾಡಿ

ದುಡಿಮೆ ಮಾಡಿಕೊಂಡು ಬದುಕಬಹುದು ಎಂಬ ಉದ್ದೇಶದಿಂದ ಇವರೆಲ್ಲಾ ಪುನರ್ವಸತಿ ಕೇಂದ್ರಕ್ಕೆ ಬರಲಿಲ್ಲ ಎಂಬ ಅಂಶ ಕಂಡುಬಂದಿದೆ.

೩.೨.೨. ಸದ್ಯದ ಸಾಮಾಜಿಕ–ಆರ್ಥಿಕ ಪರಿಸ್ಥಿತಿ

ಈ ೨೫ ಕುಟುಂಬಗಳ ಸದ್ಯದ ಪರಿಸ್ಥಿತಿ ಹೇಗಿದೆ ಎಂಬುದನ್ನು ಮಾದರಿಯಾಗಿ ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೪೭. ಸದ್ಯದ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯ ವರ್ಗೀಕರಣ

ಪರಿಸ್ಥಿತಿ	ಉತ್ತಮ		ಸಾಮಾನ್ಯ		ಉತ್ತಮವಾಗಿಲ್ಲ	
	ಒಟ್ಟು	ಪ್ರತಿಶತ	ಒಟ್ಟು	ಪ್ರತಿಶತ	ಒಟ್ಟು	ಪ್ರತಿಶತ
ವೈಯಕ್ತಿಕ	೨೫	೧೦೦	೦	೦	೦	೦
ಕೌಟುಂಬಿಕ	೯	೩೬	೧೬	೬೪	೦	೦
ವಸತಿ ಸೌಲಭ್ಯ	೨	೮	೨೧	೮೪	೨	೮
ಮನೆಯ ಮೂಲಭೂತ ಸೌಲಭ್ಯಗಳು	೪	೧೬	೧೦	೪೦	೧೧	೪೪
ಸಾಂಸ್ಕೃತಿಕ	೧೩	೫೨	೭	೨೮	೫	೨೦
ಶೈಕ್ಷಣಿಕ	೫	೨೦	೧೦	೪೦	೧೦	೪೦
ಉದ್ಯೋಗ	೧೯	೭೬	೫	೨೦	೧	೪
ಆದಾಯ	೧೦	೪೦	೧೨	೪೮	೩	೧೨

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೭ರಲ್ಲಿ ನೀಡಿರುವಂತೆ ಮಾಹಿತಿದಾರರು ತಮ್ಮ ವೈಯಕ್ತಿಕ ಬದುಕು ಮತ್ತು ಕೌಟುಂಬಿಕ ಬದುಕಿನ ಬಗ್ಗೆ ಅಭಿಪ್ರಾಯಪಟ್ಟಿದ್ದಾರೆ. ಹೆಚ್ಚಿನವರ ವಸತಿ ಸೌಲಭ್ಯ ಮತ್ತು ಮನೆಯ ಮೂಲಭೂತ ಸೌಲಭ್ಯಗಳು ಸಾಮಾನ್ಯವಾಗಿದೆ. ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಉತ್ತಮವಾಗಿದ್ದಾರೆ. ವೈಯಕ್ತಿಕವಾಗಿ ಎಂದರೆ ಅವರ ಚಟಗಳು, ಹವ್ಯಾಸಗಳು, ಆಸಕ್ತಿ, ಸಂತೋಷದಾಯಕ ಮನಸ್ಸು, ಸ್ವಾತಂತ್ರ್ಯಪೂರ್ಣ ಬದುಕು ಇವುಗಳಿಗೆ ಸಂಬಂಧಿಸಿದಂತೆ ಇವರು ಪುನರ್ವಸತಿ ಕೇಂದ್ರದಲ್ಲಿ ವಾಸ ಮಾಡುವವರಿಗಿಂತ ಉತ್ತಮವಾಗಿ ಬದುಕುತ್ತಿದ್ದಾರೆ. ಕೌಟುಂಬಿಕವಾಗಿ ಅಂದರೆ ಕುಟುಂಬದವರು ಉದ್ಯೋಗದ ಸಲುವಾಗಿ ಬೇರೆ ಬೇರೆ ಊರಿಗೆ ವಲಸೆ ಹೋಗದೇ ಇರುವಲ್ಲಿಯೇ ಜೀವನಕ್ಕಾಗಿ ದುಡಿದು ಜೊತೆಯಲ್ಲಿ ಬದುಕುತ್ತಿದ್ದಾರೆ. ಕೌಟುಂಬಿಕ ವೈಮನಸ್ಸು ಇಲ್ಲದೇ ಎಲ್ಲರೂ ಜೊತೆಯಾಗಿ ಇದ್ದಾರೆ. ವಾಸಕ್ಕಾಗಿ ಸಾಧಾರಣ ಮತ್ತು ಸ್ಥಳವಿರುವ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಕೆಲವು ಕುಟುಂಬಗಳ ಮನೆಗಳ ಪರಿಸ್ಥಿತಿ ದುಸ್ಥರವಾಗಿದೆ. ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿರುವುದರಿಂದ ಯಾವತ್ತಾದರೂ ಎದ್ದೇಳುವ ಪರಿಸ್ಥಿತಿ ಬರಬಹುದು ಎಂದು ಅವರ ಹಿಂದಿನ ಸಂಸ್ಕೃತಿಯಂತೆ ಭತ್ತದ ಹುಲ್ಲಿನಿಂದ ಮನೆಯನ್ನು ಕಟ್ಟಿಕೊಂಡಿದ್ದಾರೆ. ಬಿದಿರಿನಿಂದ

ಗೋಡೆಗಳನ್ನು ನಿರ್ಮಿಸಿ ಅದಕ್ಕೆ ಸೆಗಣಿ ಬಳಿದಿದ್ದಾರೆ. ಇದನ್ನು ಗುಡಿಸಲು ಎನ್ನಬಹುದು. ಯಾರ ಮನೆಯಲ್ಲಿಯೂ ಕೂಡಾ ಹೆಚ್ಚೇನು ಮೂಲಭೂತ ಸೌಕರ್ಯಗಳು ಇರುವುದಿಲ್ಲ. ಕಾಡಿನ ಮಧ್ಯೆಯೇ ವಾಸ ಮಾಡುತ್ತಿದ್ದರೂ ಯಾರೂ ಕೂಡಾ ಮನೆಗಳಿಗೆ ಮರದ ಪೀಠೋಪಕರಣಗಳನ್ನು ಮಾಡಿಕೊಂಡಿರುವುದಿಲ್ಲ. ಶೌಚಾಲಯ ನಿರ್ಮಿಸದೇ ಹೆಚ್ಚು ಕುಟುಂಬದವರು ಬಹಿರ್ದೆಸೆಗೆ ಕಾಡಿಗೆ ಹೋಗುತ್ತಾರೆ. ಸ್ನಾನದ ಕೊಠಡಿ ಕೂಡಾ ಉತ್ತಮವಾಗಿಲ್ಲ. ವಿದ್ಯುತ್ ಸೌಲಭ್ಯ ಉತ್ತಮವಾಗಿದೆ ಎಂದು ಹೆಚ್ಚಿನ ಕುಟುಂಬದವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮನೆಯಲ್ಲಿ ಜಾನುವಾರುಗಳನ್ನು ಸಾಕುತ್ತಿದ್ದು ಕಟ್ಟಿಕೊಳ್ಳಲು ದನದ ಕೊಟ್ಟಿಗೆ ನಿರ್ಮಿಸಿಕೊಂಡಿದ್ದಾರೆ. ಮನೆಯ ಎದುರು ಅಂಗಳವಿದ್ದು ಸಾಕಷ್ಟು ಹೂವಿನ ಗಿಡಗಳನ್ನು ಸಾಕಿಕೊಂಡಿದ್ದಾರೆ. ಕಾಡಿನ ಊರುಗಳಲ್ಲಿ ವಾಸವಿರುವುದರಿಂದ ಮನೆಯ ಹಿಂದುಗಡೆ ಕೂಡಾ ಜಾಗವಿದೆ. ಕುಡಿಯುವ ನೀರಿಗಾಗಿ ಸರ್ಕಾರಿ ನಳ್ಳಿ ಮತ್ತು ಕೊಳವೆಬಾವಿ ನೀರನ್ನು ಅವಲಂಭಿಸಿದ್ದಾರೆ.

ಸಾಂಸ್ಕೃತಿವಾಗಿ ಹೆಚ್ಚಿನವರು ಉತ್ತಮವಾದ ಜೀವನವನ್ನು ಹೊಂದಿದ್ದಾರೆ. ಅವರ ಹಳೆ ಊರುಗಳ ಹತ್ತಿರವೇ ಬದುಕುತ್ತಿರುವ ಕಾರಣ ಇತರರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಇವರು ಭಾಗಿಯಾಗುತ್ತಾರೆ. ಮೊದಲಿನಷ್ಟು ಅಲ್ಲದಿದ್ದರೂ ಮನಸ್ಸಿಗೆ ಮುದ ನೀಡುವಷ್ಟು ಸಾಂಸ್ಕೃತಿಕ ಚಟುವಟಿಕೆಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಶೈಕ್ಷಣಿಕವಾಗಿ ಸಾಮಾನ್ಯವಾದ ಪ್ರಗತಿಯಿದೆ. ಕಾಡಿನ ಮಧ್ಯೆಯೇ ವಾಸ ಮಾಡುತ್ತಿರುವುದರಿಂದ ಶಾಲೆಗಳಿಗೆ ಹೋಗುವುದು ಬಹಳ ತೊಂದರೆಯಾಗುತ್ತದೆ. ರಾಮನಗರ ಮತ್ತು ಜೋಯಿಡಾದಲ್ಲಿದ್ದ ಹಾಗೆ ಇವರಿಗೆ ಶಾಲೆ ಹತ್ತಿರ ಇರುವುದಿಲ್ಲ. ಇದರಿಂದ ಇವರು ಶೈಕ್ಷಣಿಕವಾಗಿ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಊರು ಕಡೆ ವಾಸ ಮಾಡುತ್ತಿರುವುದರಿಂದಾಗಿ ಅವರಿಗೆ ಕನಿಷ್ಟಪಕ್ಷ ಹೊಲದ ಕೆಲಸವಾದರೂ ಸಿಗುತ್ತದೆ. ಜೋಯಿಡಾದ ಹತ್ತಿರದ ಊರುಗಳಲ್ಲಿ ವಾಸ ಮಾಡುತ್ತಿರುವವರು ಕೂಡಾ ಪಕ್ಕದ ಹಳ್ಳಿಗೆ ಹೋಗಿ ಹೊಲದ ಕೆಲಸ ಮಾಡಿಕೊಂಡು ಬರುತ್ತಾರೆ. ಹೀಗೆ ಸಾಮಾನ್ಯವಾಗಿ ಎಲ್ಲರಿಗೂ ಕೆಲಸ ಸಿಗುತ್ತಿದೆ. ಆದಾಯ ಸಾಮಾನ್ಯವಾಗಿದೆ ಎಂದು ಹೆಚ್ಚಿನ ಜನರು ಪ್ರತಿಕ್ರಿಯಿಸಿದ್ದಾರೆ.

ಈ ಮೇಲಿನ ಎಲ್ಲಾ ಮಾಹಿತಿಗಳಿಂದ ತಿಳಿದುಬರುವ ಅಂಶ ಏನೆಂದರೆ ಪುನರ್ವಸತೇತರ ಸಂತ್ರಸ್ತರು ಶೈಕ್ಷಣಿಕವಾಗಿ ಬಿಟ್ಟರೆ ವೈಯಕ್ತಿಕ, ಕೌಟುಂಬಿಕ, ಸಾಂಸ್ಕೃತಿಕ ಮತ್ತು ಉದ್ಯೋಗದ ವಿಷಯದಲ್ಲಿ ಇವರು ಉತ್ತಮವಾದ ಜೀವನವನ್ನು ಮಾಡುತ್ತಿದ್ದಾರೆ. ಆದಾಯ, ವಸತಿ ಸೌಲಭ್ಯ ಮತ್ತು ಮನೆಯ ಮೂಲಭೂತ ಸೌಲಭ್ಯಗಳ ವಿಷಯದಲ್ಲಿ ಸಾಮಾನ್ಯವಾದ ಬದುಕನ್ನು ಸಾಗಿಸುತ್ತಿದ್ದಾರೆ. ಬದುಕನ್ನು ಮೊದಲಿನಷ್ಟು ಉತ್ತಮವಾಗಿ ಸಾಗಿಸುತ್ತಿಲ್ಲವಾದರೂ ಸಾಧಾರಣವಾಗಿ ನಡೆಸಿಕೊಂಡು ಬದುಕುತ್ತಿದ್ದಾರೆ.

೩.೨.೩. ಆದಾಯದ ಮೂಲಗಳು

ಸಂತ್ರಸ್ತರ ಆದಾಯದ ವಿವಿಧ ಮೂಲಗಳನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ ೩.೪೮. ಆದಾಯದ ಮೂಲಗಳ ವರ್ಗೀಕರಣ

ಆದಾಯದ ಮೂಲ	ಒಟ್ಟು	ಪ್ರತಿಶತ
ಸ್ವಂತ ಭೂಮಿ ದುಡಿಮೆ	೮	೩೨
ಖೇಣಿ ಭೂಮಿ ದುಡಿಮೆ	೩	೧೨
ಕೃಷಿ ಕೂಲಿ	೧೨	೪೮
ಕೃಷಿಯೇತರ ಕೂಲಿ	೨	೮
ಒಟ್ಟು	**೨೫**	**೧೦೦**

ಆಧಾರ: ಕ್ಷೇತ್ರಕಾರ್ಯ

ಕೋಷ್ಟಕ ಸಂಖ್ಯೆ ೩.೪೮ರಲ್ಲಿ ನೀಡಿರುವ ಮಾಹಿತಿಯಂತೆ ಸಂತ್ರಸ್ತರು ಬೇರೆ ಬೇರೆ ಮೂಲಗಳಿಂದ ಆದಾಯ ಗಳಿಸುತ್ತಿದ್ದಾರೆ. ಸ್ಥಳಾಂತರವಾದ ಮೇಲೆ ದುಡಿಮೆ ಮಾಡಿಕೊಂಡು ಒಂದಿಷ್ಟು ಜಮೀನು ಖರೀದಿ ಮಾಡಿದ್ದಾರೆ. ಮೊದಲೇ ಬೇರೆ ಊರುಗಳಲ್ಲಿದ್ದ ಜಮೀನು ಮುಳುಗಡೆಯಾಗದೇ ಇರುವ ಕಾರಣ ಸ್ಥಳಾಂತರವಾದ ಮೇಲೆ ಅದೇ ಊರುಗಳಲ್ಲಿ ಹೋಗಿ ಅಲ್ಲಿ ವಾಸ ಮಾಡಿ ತಮ್ಮ ಹೊಲದಲ್ಲಿ ದುಡಿಮೆ ಮಾಡಿಕೊಂಡು ಜೀವನ ಮಾಡಿಕೊಂಡಿದ್ದಾರೆ. ಮೊದಲಿನಿಂದಲೂ ಕಡಿಮೆ ಜಮೀನು ಹೊಂದಿದ್ದ ಮತ್ತು ಜಮೀನು ಇಲ್ಲದೇ ಇದ್ದ ಕುಣಬಿಯರು ಊರಲ್ಲಿ ಮತ್ತು ಪಕ್ಕದ ಊರಲ್ಲಿ ಹೊಲವನ್ನು ಖೇಣಿ ತೆಗೆದುಕೊಂಡು ಬದುಕುತ್ತಿದ್ದರು. ಇದೀಗ ಸ್ಥಳಾಂತರವಾದ ಮೇಲೂ ಕೆಲವರು ಖೇಣಿಗೆ ಭೂಮಿ ತೆಗೆದುಕೊಂಡು ದುಡಿಮೆ ಮಾಡಿಕೊಳ್ಳುತ್ತಿದ್ದಾರೆ. ಜೋಯಿಡಾ, ರಾಮನಗರ ಹಾಗೂ ಉಳಿದ ಊರುಗಳಲ್ಲಿರುವವರು ತಮ್ಮ ಊರುಗಳಲ್ಲಿ ಮತ್ತು ಪಕ್ಕದ ಊರುಗಳಿಗೆ ಹೋಗಿ ಕೃಷಿಕೂಲಿ ಮತ್ತು ಕೃಷಿಯೇತರ ಕೂಲಿ ಮಾಡಿಕೊಂಡು ಜೀವನಕ್ಕಾಗಿ ಒಂದಿಷ್ಟು ಸಂಪಾದನೆ ಮಾಡಿಕೊಂಡು ಬದುಕುತ್ತಿದ್ದಾರೆ.

ಈ ಮೇಲಿನ ಎಲ್ಲಾ ಮಾಹಿತಿಗಳಿಂದ ತಿಳಿದುಬರುವ ವಿಚಾರ ಏನೆಂದರೆ ಪುನರ್ವಸತಿ ಕೇಂದ್ರಗಳಿಗೆ ಬರದೇ ಇರುವ ಸಂತ್ರಸ್ತ ಕುಣಬಿಯರು ಏನಾದರೊಂದು ಉದ್ಯೋಗವನ್ನು ಮಾಡಿ ಜೀವನಕ್ಕಾಗಿ ಒಂದಿಷ್ಟು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಊರಲ್ಲಿ, ಪಕ್ಕದೂರಲ್ಲಿ ಕೃಷಿ ಕೂಲಿ ಮತ್ತು ಕೃಷಿಯೇತರ ಕೂಲಿ ಮಾಡಿಕೊಂಡು ಜೀವನಕ್ಕೆ ಸಂಪಾದಿಸುತ್ತಿದ್ದಾರೆ. ಒಂದಿಷ್ಟು ಜನ ಸ್ವಂತ ಜಮೀನು ಹೊಂದಿದ್ದು ಇನ್ನು ಕೆಲವರು ಖೇಣಿಗೆ ಭೂಮಿ ತೆಗೆದುಕೊಂಡು ಸಂಪಾದನೆ ಮಾಡುತ್ತಿದ್ದಾರೆ. ಒಟ್ಟಾರೆಯಾಗಿ ಏನಾದರೊಂದು ಕೆಲಸ ಮಾಡಿ ತಕ್ಕ ಮಟ್ಟಿಗೆ ಸಂಪಾದನೆ ಮಾಡುತ್ತಿದ್ದಾರೆ. ತೀರಾ ಸಂಪಾದನೆ ಇಲ್ಲದೇ ಖಾಲಿ ಇರುವ ಸಂದರ್ಭ ಇವರಿಗೆಲ್ಲಾ ಬರಲಿಲ್ಲ.

೩.೩. ಸಂತ್ರಸ್ತರಲ್ಲದ ಪಾರಂಪರಿಕ ಕುಣಬಿಯರ ಸದ್ಯದ ಪರಿಸ್ಥಿತಿ

ಸೂಪಾ ಜಲಾಶಯದ ಯೋಜನಾ ಸಂತ್ರಸ್ತರಲ್ಲದ ಕುಣಬಿಯರು ಇಂದು ಕೂಡಾ ಕಾಡಿನ ಊರುಗಳಲ್ಲಿ ಸುಂದರವಾದ ಮತ್ತು ಸಂತೋಷದಾಯಕವಾದ ಬದುಕನ್ನು ಬದುಕುತ್ತಿದ್ದಾರೆ. ನಾವು ಅಲ್ಲೇ ಇದ್ದಿದ್ದರೆ ಇವತ್ತು ರಾಜರಂತಿದ್ದೆವು. ಪುನರ್ವಸತಿ ಕೇಂದ್ರದ ಬದುಕು ರಾಮನ ವನವಾಸವಿದ್ದಂತೆ ಎಂಬ ಅಭಿಪ್ರಾಯ ಕ್ಷೇತ್ರಕಾರ್ಯದ ಸಮಯದಲ್ಲಿ ಸಂತ್ರಸ್ತ ಕುಣಬಿಯರಿಂದ ವ್ಯಕ್ತವಾಗಿದೆ. ಕುಣಬಿಯರು ಸ್ಥಳಾಂತರಗೊಂಡಿದ್ದರಿಂದಾಗಿ ಅವರ ಜೀವನ ಧನಾತ್ಮಕವಾಗಿದೆಯೋ ಅಥವಾ ಋಣಾತ್ಮಕವಾಗಿದೆಯೋ ಎಂಬುದನ್ನು ನಿಖರವಾಗಿ ತಿಳಿದುಕೊಳ್ಳುವ ಸಲುವಾಗಿ ಸಂಶೋಧಕರು ಸಂತ್ರಸ್ತರಲ್ಲದ ಕುಣಬಿಯರ ಅಧ್ಯಯನವನ್ನು ಮಾಡಿರುತ್ತಾರೆ. ಅವರ ಸದ್ಯದ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂಬುದನ್ನು ಪ್ರಾತಿನಿಧಿಕವಾಗಿ ಅಧ್ಯಯನ ಮಾಡಲಾಗಿದೆ.

ಸಂಶೋಧಕರು ಜೋಯಿಡಾ ತಾಲ್ಲೂಕಿನಲ್ಲಿ ಕುಣಬಿಯರು ವಾಸಮಾಡುತ್ತಿರುವ ಕಾಡಿನ ಊರುಗಳಾದ ಕುಂಡಲ, ಕೆಲೊಲಿ ಹಾಗೂ ದಿಗಲಾಂಬ ಎಂಬ ಮೂರು ಊರಿನ ಕುಣಬಿಯರನ್ನು ಏಕವಿಷಯಕ ಅಧ್ಯಯನಕ್ಕೆ ಒಳಪಡಿಸಿರುತ್ತಾರೆ. ಕುಂಡಲದಲ್ಲಿ ನಾಲ್ಕು ದಿನ, ಕೆಲೊಲಿಯಲ್ಲಿ ಎರಡು ದಿನ ಹಾಗೂ ದಿಗಲಾಂಬದಲ್ಲಿ ಎರಡು ದಿನ ಸಂಶೋಧಕರು ಕುಣಬಿಯರ ಜೊತೆಗೆ ವಾಸವಿದ್ದು ಅವರ ದೈನಂದಿನ ಜೀವನವನ್ನು ಸಹಜ ಪರಿಸ್ಥಿತಿಯಲ್ಲಿ ಅವಲೋಕನ ಮಾಡಿರುತ್ತಾರೆ. ಅಗತ್ಯಕ್ಕೆ ಅನುಸಾರವಾಗಿ ಅಸಂರಚಿತ ನೇರ ಸಂದರ್ಶನ ಮಾಡಿ ಮಾಹಿತಿಯನ್ನು ಕಲೆಹಾಕಿದ್ದಾರೆ.

ದಿಗಲಾಂಬ, ಕುಂಡಲ ಹಾಗೂ ಕೆಲೊಲಿ ಇವು ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಕುಂಬಾರವಾಡ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ದುರ್ಗಮ ಕಾಡಿನೂರುಗಳು. ಇವು ಅಣಶಿ-ದಾಂಡೇಲಿ ಹುಲಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಇವೆ. ದಿಗಲಾಂಬ ಇದು ಜೋಯಿಡಾದಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿದೆ. ಕುಂಡಲ ಹಾಗೂ ಕೆಲೊಲಿ ಜೋಯಿಡಾದಿಂದ ಸುಮಾರು ೫೦ ಕಿ.ಮೀ. ದೂರದ ದಟ್ಟವಾದ ಕಾಡಿನಲ್ಲಿವೆ. ಇವು ಝೂಲಾವಳಿ, ತೆಲೊಲಿ, ಕಾರಸಿಂಗಳ್ ಊರುಗಳಿಂದ ಸುತ್ತುವರಿದಿದೆ. ಕುಂಡಲದಲ್ಲಿ ಒಟ್ಟು ೩೨ ಮನೆಗಳಿದ್ದು ೩೧ ಮನೆಗಳು ಕುಣಬಿಯರದ್ದೇ ಆಗಿರುತ್ತದೆ. ಅವರನ್ನು ಮಿರಾಶಿಗಳು ಎಂದು ಕರೆಯುತ್ತಾರೆ. ಇವರ ಮಾತೃ ಭಾಷೆ ಕೊಂಕಣಿ. ಕೆಲೊಲಿ ಇದು ೩೦ ಕುಣಬಿ ಕುಟುಂಬಗಳನ್ನು ಹೊಂದಿದ ದಟ್ಟವಾದ ಕಾಡಿನೂರು. ದಿಗಲಾಂಬ ಇದು ನಾಲ್ಕು ಕುಣಬಿ ಕುಟುಂಬಗಳನ್ನು ಹೊಂದಿದ ಊರು. ಇವು ಮೂರು ಕೂಡಾ ಸಂಪೂರ್ಣವಾಗಿ ಕುಣಬಿಯರನ್ನೇ ಹೊಂದಿದ ಊರುಗಳಾದ್ದರಿಂದ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕೋಷ್ಟಕ ಸಂಖ್ಯೆ ೩.೪೯. ಸದ್ಯದ ಪರಿಸ್ಥಿತಿಯ ವರ್ಗೀಕರಣ

ಪರಿಸ್ಥಿತಿ	ಉತ್ತಮ			ಸಾಮಾನ್ಯ			ತೊಂದರೆದಾಯಕ		
	೧	೨	೩	೧	೨	೩	೧	೨	೩
ವೈಯಕ್ತಿಕ	ಇದೆ	ಇದೆ	ಇದೆ	–	–	–	–	–	–
ಕೌಟುಂಬಿಕ	–	–	–	–	ಇದೆ	ಇದೆ	ಇದೆ	–	–
ಆರ್ಥಿಕ	–	–	ಇದೆ	ಇದೆ	ಇದೆ	–	–	–	–
ಶೈಕ್ಷಣಿಕ	–	–	–	–	–	–	ಇದೆ	ಇದೆ	ಇದೆ
ಸಾಂಸ್ಕೃತಿಕ	ಇದೆ	ಇದೆ	ಇದೆ	–	–	–	–	–	–
ಧಾರ್ಮಿಕ	–	–	–	–	–	–	ಇದೆ	ಇದೆ	ಇದೆ
ರಾಜಕೀಯ	ಇದೆ	–	–	–	ಇದೆ	ಇದೆ	–	–	–
ಆರೋಗ್ಯ	–	–	–	ಇದೆ	ಇದೆ	ಇದೆ	–	–	–
ಪ್ರಾಕೃತಿಕ	–	–	–	–	–	–	ಇದೆ	ಇದೆ	ಇದೆ
ಮೂಲಭೂತ ಸೌಲಭ್ಯಗಳು	–	–	–	–	–	–	ಇದೆ	ಇದೆ	ಇದೆ

೧–ದಿಗಲಾಂಬ. ೨–ಕುಂಡಲ. ೩– ಕೆಲೊಲಿ **ಆಧಾರ: ಕ್ಷೇತ್ರಕಾರ್ಯ**

ಕೋಷ್ಟಕ ಸಂಖ್ಯೆ ೩.೪೯.ರಲ್ಲಿ ನೀಡಿರುವಂತೆ ಸಂತ್ರಸ್ತರಲ್ಲದ ಪಾರಂಪರಿಕ ಕುಣಬಿಯರ ಅಧ್ಯಯನ ಮಾಡಲಾಗಿದೆ. ಅವರ ವೈಯಕ್ತಿಕ ಬದುಕಿನ ಅಂಶಗಳಾದ ಹವ್ಯಾಸ, ಅಭ್ಯಾಸ ಹಾಗೂ ಚಟಗಳ ಬಗ್ಗೆ ಅಧ್ಯಯನ ಮಾಡಿದಾಗ ೬೫ ಕುಟುಂಬಗಳಲ್ಲಿ ಯಾರೂ ಕೂಡಾ ದುಶ್ಚಟಗಳನ್ನು ಹೊಂದಿಲ್ಲ ಎಂಬ ಮಾಹಿತಿಯು ವ್ಯಕ್ತವಾಗಿದೆ. ಹಿರಿಯರು ನಡೆಸಿಕೊಂಡು ಬಂದ ಬದ್ಧತೆಯನ್ನು ಕಾಪಾಡಿಕೊಂಡು ಬಂದಿರುತ್ತಾರೆ. ಕೌಟುಂಬಿಕವಾಗಿ ಗಮನಿಸುವುದಾದರೆ ಎಲ್ಲರೂ ಅವಿಭಕ್ತ ಕುಟುಂಬದಲ್ಲಿ ವಾಸವಿದ್ದಾರೆ. ಕುಟುಂಬದಲ್ಲಿ ಯಜಮಾನನಿಗೆ ಸ್ಥಾನಮಾನ, ಹಿರಿಯರಿಗೆ ಗೌರವ ನೀಡುವುದನ್ನು ಈಗಲೂ ಕಾಪಾಡಿಕೊಂಡು ಬಂದಿದ್ದಾರೆ. ಕುಟುಂಬದಲ್ಲಿ ಸಾಮರಸ್ಯ ಹಿಂದೆ ಇದ್ದಷ್ಟು ಈಗ ಇಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಆರ್ಥಿಕವಾಗಿ ನೋಡುವುದಾದರೆ ಎಲ್ಲರೂ ಸಾಮಾನ್ಯವಾದ ಬದುಕನ್ನು ಸಾಗಿಸುತ್ತಿದ್ದಾರೆ. ಹೆಚ್ಚಾಗಿ ಒಂದು ಬೆಳೆ ಭತ್ತವನ್ನು ಬೆಳೆಯುವ ಸ್ವಂತ ಜಮೀನನ್ನು ಹೊಂದಿರುತ್ತಾರೆ. ಕೆಲೊಲಿ ತುಂಬಾ ದಟ್ಟವಾದ, ಹಚ್ಚ ಹಸುರಾದ ಕಾಡಿನಲ್ಲಿದ್ದು ಅಲ್ಲಿಯವರು ಈಗಲೂ ಕುಮರಿ ಬೆಳೆ ಬೆಳೆಯುತ್ತಾರೆ. ಇವರು ತಮ್ಮ ಊರಲ್ಲೇ ಎರಡು ಬೆಳೆ ಭತ್ತ ಬೆಳೆದುಕೊಂಡು ಸುಖವಾಗಿ ಬದುಕುತ್ತಿದ್ದಾರೆ. ಕುಂಡಲ್ ಹಾಗೂ ದಿಗಲಾಂಬದ ಕುಣಬಿಯರಲ್ಲಿ ವಯಸ್ಸಾದವರು ವ್ಯವಸಾಯ ಮಾಡುತ್ತಿದ್ದು ಯುವಕರು ಇದರ ಜೊತೆಗೆ

ಬೇರೆ ಊರುಗಳಲ್ಲಿ ದುಡಿಯುತ್ತಾರೆ. ಮುಖ್ಯವಾಗಿ ಗೋವಾ, ಮಹಾರಾಷ್ಟ್ರ ಮತ್ತು ಜೋಯಿಡಾದಲ್ಲಿ ಕೆಲಸ ಮಾಡುತ್ತಾರೆ. ಆದರೆ ಯಾವ ಹೆಣ್ಣು ಮಕ್ಕಳು ಕೂಡಾ ಉದ್ಯೋಗ ಮಾಡಿ ಸಂಪಾದನೆ ಗಳಿಸುವುದಿಲ್ಲ.

ಶೈಕ್ಷಣಿಕವಾಗಿ ಇವರು ಇನ್ನೂ ಅಷ್ಟಾಗಿ ಮುಂದುವರೆದಿರುವುದಿಲ್ಲ. ವಿದ್ಯಾಭ್ಯಾಸವನ್ನು ಹೆಚ್ಚಾಗಿ ಹತ್ತನೇ ತರಗತಿಗೆ ನಿಲ್ಲಿಸಿರುತ್ತಾರೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಇಲ್ಲಿ ಪ್ರೋತ್ಸಾಹ ಇಲ್ಲ. ಕೆಲೊಲಿಯ ಮಕ್ಕಳು ಶಾಲೆಗೆ ಹೋಗಲು ತುಂಬಾ ಕಷ್ಟವಾದ ಪರಿಸ್ಥಿತಿ ಇದೆ. ದಟ್ಟವಾದ ಕಾಡಿನಲ್ಲಿ ೮ಕಿ.ಮೀ. ದೂರದಲ್ಲಿ ಶಾಲೆ ಇರುವುದರಿಂದ ಮಳೆಗಾಲದಲ್ಲಿ ಸಾಕಷ್ಟು ತ್ರಾಸದಾಯಕವಾಗಿರುತ್ತದೆ.

ಸಾಂಸ್ಕೃತಿಕವಾಗಿ ನೋಡುವುದಾದರೆ ಈ ಮೂರು ಊರುಗಳಲ್ಲಿಯೂ ತಮ್ಮ ಹಿಂದಿನ ಸಾಂಸ್ಕೃತಿಕ ಆಚರಣೆಗಳನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ. ಆದರೆ ಅವರೇ ಹೇಳುವ ಪ್ರಕಾರ ಈ ಪ್ರದೇಶ ಹುಲಿ ಅಭಯಾರಣ್ಯವಾದ ನಂತರ ಅವರಿಗೆ ತಮ್ಮ ಆಚರಣೆಗಳಿಗಾಗಿ ಅಷ್ಟೊಂದು ಸ್ವಾತಂತ್ರ್ಯ ಇರುವುದಿಲ್ಲ. ಆದರೂ ಅವರು ಹೋಳಿಸಿಗ್ಮಾ, ಯುಗಾದಿ ಮುಂತಾದ ಆಚರಣೆಗಳನ್ನು ಆಚರಿಸುತ್ತಿದ್ದಾರೆ. ಕುಂಡಲ್ ಹಾಗೂ ಕೆಲೊಲಿ ಅದ್ಭುತವಾದ ಸಾಂಸ್ಕೃತಿಕ ಸಂಪತ್ತನ್ನು ಇಂದಿಗೂ ಹೊಂದಿದೆ. ಅವರು ತುಂಬಾ ಆನಂದದಾಯಕವಾಗಿ ಎಲ್ಲಾ ಆಚರಣೆಗಳಲ್ಲಿ ಭಾಗಿಯಾಗುತ್ತಿದ್ದಾರೆ.

ಧಾರ್ಮಿಕ ವಿಚಾರಗಳ ಬಗ್ಗೆ ಹೇಳುವುದಾದರೆ ಇವರು ಇನ್ನೂ ತಮ್ಮ ಹಿಂದಿನ ಸಂಪ್ರದಾಯಗಳಿಗೆ ಕಟ್ಟುಬಿದ್ದಿದ್ದಾರೆ. ಹಲವಾರು ಅವೈಜ್ಞಾನಿಕ ರೂಢಿ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುತ್ತಿದ್ದು ವಿದ್ಯಾಭ್ಯಾಸ, ಉದ್ಯೋಗದ ಅವಕಾಶ ಹಾಗೂ ಸಮಾನ ಸ್ಥಾನಮಾನಗಳಿಂದ ವಂಚಿತರಾಗಿದ್ದಾರೆ.

ರಾಜಕೀಯವಾಗಿ ಎಲ್ಲಾ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ ಮತ್ತು ಆಸಕ್ತಿಯನ್ನು ಹೊಂದಿದ್ದಾರೆ.

ಇವರು ತಮ್ಮ ಹಿಂದಿನ ಪರಿಸರದಲ್ಲೇ ವಾಸ ಮಾಡುತ್ತಿರುವುದರಿಂದ ಮಾನಸಿಕವಾಗಿ ನೆಮ್ಮದಿಯಾಗಿದ್ದಾರೆ. ಶಾರೀರಿಕ ಆರೋಗ್ಯವನ್ನು ಹೊಂದಿದ್ದಾರೆ. ಉತ್ತಮ ಆಹಾರ ಸೇವಿಸಿಕೊಂಡು ಸುಖವಾಗಿದ್ದಾರೆ. ಆದರೆ ಹುಲಿ ಅಭಯಾರಣ್ಯವಾದ್ದರಿಂದ ಇವರಿಗೆ ಸ್ಥಳಾಂತರವಾಗುವ ಭೀತಿ ಕಾಡುತ್ತಿದೆ. ಆ ದುಗುಡ ಅವರಲ್ಲಿ ಇದೆ. ಹಾಗೊಂದು ವೇಳೆ ಸ್ಥಳಾಂತರವಾಗುವ ಸಂದರ್ಭ ಬಂದರೆ ಸೂಪಾ ಜಲಾಶಯ ಸಂತ್ರಸ್ತರಿಗಿಂತಲೂ ತುಂಬಾ ಕೆಟ್ಟದಾದ ಬದುಕು ತಮ್ಮದಾಗುತ್ತದೆ ಎಂಬ ಆತಂಕ ಅವರೆಲ್ಲರನ್ನೂ ಆತಂಕಕ್ಕೆ ಈಡು ಮಾಡಿದೆ.

ಪ್ರಾಕೃತಿಕವಾಗಿ ಇವರು ಸುಂದರವಾದ ಹಾಗೂ ಸ್ವಚ್ಛಂದವಾದ ದುರ್ಗಮ ಕಾಡಿನಲ್ಲಿ ಬದುಕುತ್ತಿದ್ದಾರೆ. ಕಾಡಿನ ಸಂಪನ್ಮೂಲ ಸಂಗ್ರಹ ಮತ್ತು ಬೇಟೆಯಾಡುವುದಕ್ಕೆ ಅಡ್ಡಿ ಇದೆ. ಅಭಯಾರಣ್ಯದ ಮಧ್ಯೆ ಬದುಕುವುದರಿಂದಾಗಿ ಸಾಕಷ್ಟು ಸವಾಲುಗಳಿವೆ.

ಹಾವು, ಹುಲಿ, ಕಾಡುಕೋಣ, ಕರಡಿ ಮುಂತಾದ ಕಾಡುಪ್ರಾಣಿಗಳಿಂದ ತೊಂದರೆ ಇದೆ. ಕಾಡಿನಲ್ಲಿ ಮುಕ್ತವಾಗಿ ಸಂಚರಿಸಲು ಸಾಧ್ಯವಿರುವುದಿಲ್ಲ. ಇವರ ಹಿಂದಿನ ಬದುಕಿನ ಸ್ವಾತಂತ್ರ್ಯ ಈಗ ಇಲ್ಲ. ಅರಣ್ಯ ಇಲಾಖೆಯ ಕಪಿಮುಷ್ಠಿಯಲ್ಲಿ ಇವರು ದಿನದೂಡುತ್ತಿದ್ದಾರೆ.

ಮೂಲಭೂತ ಸೌಕರ್ಯಗಳ ಬಗ್ಗೆ ಹೇಳುವುದಾದರೆ ಕೆಲೊಲಿಗೆ ವಿದ್ಯುತ್ ಸಂಪರ್ಕ ಉತ್ತಮವಾಗಿದೆ. ಆದರೆ ರಸ್ತೆ, ವಾಹನ, ಉತ್ತಮ ದಾರಿ, ಸೇತುವೆ, ಶಾಲೆ, ಪೇಟೆ, ಆಸ್ಪತ್ರೆ ಈ ರೀತಿಯ ಯಾವುದೇ ಸೌಲಭ್ಯ ಇಲ್ಲ. ಏಕೋಪಾಧ್ಯಾಯ ಕಿರಿಯ ಪ್ರಾಥಮಿಕ ಶಾಲೆ ಇದ್ದು ಅವರು ಸಮರ್ಪಕವಾಗಿ ಲಭ್ಯವಿರುವುದಿಲ್ಲ. ಕುಂಡಲ್‌ಗೆ ರಸ್ತೆ ಸಂಪರ್ಕವಿದೆ, ಶಾಲೆ ಇದೆ. ವಾಹನ ಸೌಕರ್ಯ ಕೊರತೆ ಇದೆ. ಮಳೆಗಾಲದಲ್ಲಿ ಇಲ್ಲಿಗೆ ಸಂಪರ್ಕ ಕಡಿತಗೊಳ್ಳುತ್ತದೆ.

ಈ ರೀತಿಯಾಗಿ ಸಂತ್ರಸ್ತರಲ್ಲದ ಪಾರಂಪರಿಕ ಕುಣಬಿಯರ ಸದ್ಯದ ಪರಿಸ್ಥಿತಿಯನ್ನು ಅಧ್ಯಯನ ಮಾಡಿದಾಗ ಕಂಡುಕೊಂಡ ಪ್ರಮುಖ ಅಂಶಗಳೇನೆಂದರೆ ಸ್ವಂತ ಆಸ್ತಿ, ಉದ್ಯೋಗ, ಕೌಟುಂಬಿಕ ಜೀವನ, ಸಾಂಸ್ಕೃತಿಕ ಆಚರಣೆಗಳು ಇಲ್ಲಿ ಉತ್ತಮವಾಗಿವೆ. ಆದರೆ ಶೈಕ್ಷಣಿಕವಾಗಿ ಹಾಗೂ ಮೂಲಭೂತ ಸೌಲಭ್ಯಗಳಲ್ಲಿ ಇವರಿಗೆ ಸಾಕಷ್ಟು ಸಮಸ್ಯೆ ಇದೆ. ಮಳೆಗಾಲದಲ್ಲಿ ಇವರ ಬದುಕು ತುಂಬಾ ದುಸ್ತರವಾಗಿದೆ. ಸಂತ್ರಸ್ತ ಕುಣಬಿಯರಿಗಿಂತ ಇವರು ಮಾನಸಿಕವಾಗಿ ಸದೃಢರಾಗಿದಾರೆ. ವ್ಯಾವಹಾರಿಕವಾಗಿ ತುಂಬಾ ಜ್ಞಾನವನ್ನು ಪಡೆದುಕೊಂಡಿದ್ದಾರೆ. ಇತರೇ ಸಮುದಾಯಗಳಂತೆ ತಾವು ಕೂಡಾ ಮುನ್ನುಗ್ಗುತ್ತಿದ್ದಾರೆ. ಪ್ರಕೃತಿಯ ಸಹಜ ಸೌಂದರ್ಯ ಇವರ ಬದುಕನ್ನು ಇನ್ನೂ ಹಾಗೆ ಕಾಪಾಡಿಕೊಂಡು ಬಂದಿದೆ.

೩.೪. ಸೂಪಾ ಸಂತ್ರಸ್ತರ ಮತ್ತು ಸಂತ್ರಸ್ತರಲ್ಲದ ಕುಣಬಿಯರ ಪರಿಸ್ಥಿತಿಯ ತುಲನೆ

ಸೂಪಾ ಸಂತ್ರಸ್ತರು ಹಾಗೂ ಸಂತ್ರಸ್ತರಲ್ಲದ ಕುಣಬಿಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ತುಲನೆ ಮಾಡಿ ವಿಮರ್ಶಿಸಲಾಗಿದೆ. ಸೂಪಾ ಸಂತ್ರಸ್ತರು ವೈಯಕ್ತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ತುಂಬಾ ವಿಘಟಿತರಾಗಿದ್ದಾರೆ. ಮಾನಸಿಕ ವೇದನೆಗಳಿಂದಾಗಿ ಸಾಮಾಜಿಕ-ಆರ್ಥಿಕ ಹಿನ್ನಡೆಯನ್ನು ಎದುರಿಸುತ್ತಿದ್ದಾರೆ. ಎಲ್ಲವನ್ನೂ ಕಳೆದುಕೊಂಡ ಈ ಬಾಳು ವ್ಯರ್ಥ ಎಂಬ ಮನೋವೇದನೆ ಹಾಗೂ ಪಾಪಪ್ರಜ್ಞೆ ಇವರನ್ನು ಕಾಡುತ್ತಿದೆ. ಸಂತ್ರಸ್ತರಲ್ಲದ ಕುಣಬಿಯರು ಕುಟುಂಬ ಜೀವನ, ಆಸ್ತಿ, ಸ್ವಂತ ಊರು, ಪ್ರಾಕೃತಿಕ ಪರಿಸರ, ಸಾಂಸ್ಕೃತಿಕ ಆಚರಣೆಗಳು, ಮಾನಸಿಕ ನೆಮ್ಮದಿ ಇವುಗಳಲ್ಲಿ ಸಮೃದ್ಧವಾಗಿದ್ದಾರೆ.

ಅವರ ಜಮೀನು ನೀರಾವರಿರಹಿತವಾಗಿದ್ದು ನದಿ, ನಾಲೆಗಳಿಂದ ದೂರ ಇದೆ. ಆದರೂ ಅವರು ತೃಪ್ತಿಕರವಾದ ಆದಾಯ ಪಡೆದುಕೊಂಡು ಸಾರ್ಥಕ ಜೀವನ ಸಾಗಿಸುತ್ತಿದ್ದಾರೆ. ಆದರೆ ಸಂತ್ರಸ್ತರು ಮೂರು ಬೆಳೆ ಬೆಳೆಯುವ ನೀರಾವರಿ

ಜಮೀನು ಹೊಂದಿದ್ದು, ನಾಗಿನಾಲಾ, ಪಾಂಡರಿ, ಕಾಳಿ ಮುಂತಾದ ನದಿ ಇಕ್ಕೆಗಳಲ್ಲಿ ಸಮೃದ್ಧವಾಗಿದ್ದ ಇವರ ಅರಣ್ಯದೊಳಗಿನ ಬದುಕು ಏನೂ ಇಲ್ಲದ ಈ ರಾಮನಗರದಲ್ಲಿ ಅರಣ್ಯರೋದನವಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಸಂತ್ರಸ್ತರೇ ಹೇಳುವಂತೆ ಈಗ ಅವರು ತಮ್ಮ ಮೂಲನೆಲೆಯಲ್ಲಿ ಇದ್ದಿದ್ದರೆ ಸುಖವಾಗಿ ಬದುಕುತ್ತಿದ್ದರು. ಯಾಕೆಂದರೆ ತಾಲ್ಲೂಕು ಕೇಂದ್ರವಾಗಿದ್ದ ಸೂಪಾದ ಪಕ್ಕದೂರುಗಳಲ್ಲಿ ಇವರು ವಾಸವಿದ್ದರು. ಪಟ್ಟಣ ಬೆಳೆದಂತೆ ಅದರ ಸುತ್ತಲ ಜನಜೀವನವೂ ಉತ್ತಮಗೊಳ್ಳುತ್ತದೆ. ಹಾಗೆಯೇ ಇವರ ಬದುಕು ಕೂಡಾ ಅತ್ಯಂತ ಶ್ರೀಮಂತವಾಗಿರುತ್ತಿತ್ತು. ಅವರು ಕಳೆದುಕೊಂಡು ಜಮೀನು ಈಗ ತುಂಬಾ ಬೆಲೆಬಾಳುತ್ತಿತ್ತು ಎಂಬುದನ್ನು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

ಉಪಸಂಹಾರ

ಸ್ಥಳಾಂತರ ಪೂರ್ವದಲ್ಲಿ ಎಲ್ಲಾ ರೀತಿಯಲ್ಲೂ ಸ್ವಾವಲಂಬಿಗಳಾಗಿದ್ದು ಸುಭದ್ರವಾದ ಬದುಕನ್ನು ಕಟ್ಟಿಕೊಂಡಿದ್ದ ಕುಣಬಿಯರ ಜೀವನವನ್ನು ಸೂಪಾ ಜಲಾಶಯ ತನ್ನೊಡಲಲ್ಲಿ ಸೇರಿಸಿಕೊಂಡು ಬಿಟ್ಟಿತು. ಸಂತ್ರಸ್ತರು ಸ್ಥಳಾಂತರಗೊಂಡು ಛಿದ್ರರಾದರು. ಪುನರ್ವಸತಿ ಕೇಂದ್ರದಲ್ಲಿ ನೆಲೆಗೊಂಡ ಸಂತ್ರಸ್ತರು ಡೋಲಾಯಮಾನ ಸ್ಥಿತಿಯಲ್ಲಿ ಬದುಕು ಸಾಗಿಸುವ ಹಾಗಾಯಿತು. ಅಲ್ಲಿಗೆ ಬರದೇ ತಮ್ಮ ಊರುಗಳ ಕಡೆಗೆ ವಾಸವಾಗಿರುವವರ ಪರಿಸ್ಥಿತಿ ತೀರಾ ಅಭದ್ರವಾಗಿದೆ. ಸಂತ್ರಸ್ತರಲ್ಲದ ಕುಣಬಿಯರ ಬದುಕು ಸಂತೃಪ್ತಿದಾಯಕವಾಗಿದೆ. ಕುಣಬಿಯರು ಮುಳುಗಡೆ, ಸ್ಥಳಾಂತರದಂತಹ ದೀರ್ಘಕಾಲೀನ ವಿದ್ಯಮಾನಗಳಿಗೆ ತುತ್ತಾಗದಿದ್ದರೆ ಪ್ರಾಯಶಃ ಇಂದು ಅವರು ಆಧುನಿಕ ಸಮಾಜಕ್ಕೆ ಆದರ್ಶಪ್ರಾಯರಾಗಿ ಬದುಕುತ್ತಿದ್ದರು. ಅವರಲ್ಲಿದ್ದ ಸಾಂಸ್ಕೃತಿಕ ವೈಭವ, ಸಾಮಾಜಿಕ ಮೌಲ್ಯಗಳು ನಿಜಕ್ಕೂ ಇಂದಿನ ಸಮಾಜಕ್ಕೆ ಮಾದರಿ. ಆದರೆ ಯೋಜನೆಯಿಂದಾದ ಸ್ಥಳಾಂತರ ಇವರ ಬದುಕನ್ನು ಇನ್ನಿಲ್ಲದಂತೆ ನಲುಗಿಸಿತು. ಅಸಮರ್ಪಕ ಪುನರ್ವಸತೀಕರಣ ಹಾಗೂ ಆಧುನಿಕ ಬದುಕಿಗೆ ಒಗ್ಗಿಕೊಳ್ಳದ ಸಂಪ್ರದಾಯ ಬದ್ಧ ಮನೋಧೋರಣೆಗಳಿಂದಾಗಿ ಇವರು ಇಂದು ಮಾನಸಿಕ, ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಕೊನೆಟಿಪ್ಪಣಿಗಳು

೧. ಕುಣಬಿಯರಿಗೆ ಸಂಬಂಧಿಸಿದ ವಿವಿಧ ಬರಹಗಳಿಂದ ಸಂಗ್ರಹಿಸಿದ ಮಾಹಿತಿ
೨. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರಿಂದ ಈ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.
೩. ಅದೇ
೪. ಅದೇ
೫. ಅದೇ
೬. ಅದೇ
೭. ಬೋರಲಿಂಗಯ್ಯ ಹಿ.ಚಿ., *ಕುಣಬಿಯರು*, ಪುಟ ೦೧
೮. ಅದೇ
೯. ಕರ್ನಾಟಕ ವಿದ್ಯುತ್ ನಿಗಮದ ವರದಿಗಳನ್ನು ಆಧರಿಸಿ ಬರೆಯಲಾಗಿದೆ.
೧೦. ಕುಣಬಿಯರ ಎಷ್ಟು ಕುಟುಂಬಗಳು ಸ್ಥಳಾಂತರಗೊಂಡಿವೆ ಎಂಬುದಕ್ಕೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಸ್ಪಷ್ಟ ಮಾಹಿತಿ ಲಭ್ಯವಾಗಿರುವುದಿಲ್ಲ.

ಅಧ್ಯಾಯ : ನಾಲ್ಕು

ಸಂತ್ರಸ್ತ ಕುಣಬಿಯರ ಪರಿಸ್ಥಿತಿಯ ಪುನರ್ನಿರ್ಮಾಣ

ಪೀಠಿಕೆ

ಸೂಪಾ ಜಲಾಶಯ ಯೋಜನೆಯಿಂದ ಸ್ಥಳಾಂತರಗೊಂಡ ಕುಣಬಿಯರು ಸಮರ್ಪಕ ಪುನರ್ವಸತಿ ಹೊಂದಿಲ್ಲ ಎಂಬುದು ಅಧ್ಯಯನದಿಂದ ವ್ಯಕ್ತವಾಗಿದೆ. ಅವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬ ಅಂಶ ಕಂಡುಬಂದಿದೆ. ಆದ್ದರಿಂದ ಪ್ರಸ್ತುತ ಅಧ್ಯಾಯದಲ್ಲಿ ಸಂತ್ರಸ್ತ ಕುಣಬಿಯರ ಸಮಸ್ಯೆಗಳನ್ನು ಅಧ್ಯಯನ ಮಾಡಲಾಗಿದೆ. ಅದಕ್ಕೆ ಕಾರಣಗಳನ್ನು ಪತ್ತೆ ಹಚ್ಚಲಾಗಿದೆ. ಸಮಸ್ಯೆಗಳು ಸಂತ್ರಸ್ತ ಕುಣಬಿಯರ ಜೀವನದ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಿದೆ ಎಂದು ಪರಿಶೀಲಿಸಲಾಗಿದೆ. ಅದಕ್ಕೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆ. ಸಂತ್ರಸ್ತ ಕುಣಬಿಯರ ಬದುಕನ್ನು ಯಾವ ರೀತಿಯಾಗಿ ಪುನರ್ನಿರ್ಮಾಣ ಮಾಡಬಹುದು ಎಂದು ಮಾದರಿಯನ್ನು ರೂಪಿಸಲಾಗಿದೆ.

೪.೧. ಸಂತ್ರಸ್ತ ಕುಣಬಿಯರು ಎದುರಿಸುತ್ತಿರುವ ಸಮಸ್ಯೆಗಳು

ಕುಣಬಿಯರು ತಮ್ಮ ಮೂಲ ಬದುಕಿನ ಸ್ವರೂಪಗಳಾದ ಕಾಡು ವಾತಾವರಣ, ಸ್ವಾಭಾವಿಕವಾಗಿ ದೊರೆಯುತ್ತಿದ್ದ ನೀರು, ಬೇಟೆ, ಕಾಡಿನ ಉತ್ಪನ್ನಗಳು, ಔಷಧೋಪಚಾರ, ಕಾಡಿನ ಒಡನಾಟ, ಕಾಡಿನ ಪ್ರೀತಿ, ಅಹ್ಲಾದಕರ ಪರಿಸರ, ಸಮಾಜದಲ್ಲಿ ತನ್ನದೇ ಆದ ಗುರುತಿಸಿಕೊಳ್ಳುವಿಕೆ, ತನ್ನ ಕುಟುಂಬ, ಕೌಟುಂಬಿಕ ನಿಷ್ಠೆ, ಘನತೆ, ಗೌರವ, ತನ್ನದೇ ಜನಸಮುದಾಯ, ತನ್ನ ಊರಿನ ಇತರೇ ಸಮುದಾಯ, ಸಾಕು ಪ್ರಾಣಿಗಳೊಂದಿಗೆ ಪ್ರೀತಿಯ ಬದುಕು, ಅನನ್ಯವಾದ ಸಂಸ್ಕೃತಿ, ತಮ್ಮ ಕುಲದ ವಸ್ತ್ರವಿನ್ಯಾಸವುಳ್ಳ ಪಾರಂಪರಿಕ ಉಡುಪು, ಪಾರಂಪರಿಕ ವಸತಿ, ಪಾರಂಪರಿಕ ಆಹಾರ ಪದ್ಧತಿ, ಧಾರ್ಮಿಕ ಆಚರಣೆಗಳು, ರೂಢಿ ಸಂಪ್ರದಾಯಗಳು, ಸಮುದಾಯದ ಸದಸ್ಯರು ನಡೆಸಿಕೊಂಡು ಬಂದಿರುವ ನಿಷ್ಠೆ, ಕುಲಕಸುಬು, ಸ್ವಾವಲಂಬನೆ, ಇತರೇ ಆರ್ಥಿಕ ಚಟುವಟಿಕೆಗಳು, ಮಾರುಕಟ್ಟೆ ವ್ಯವಸ್ಥೆ ಈ ಎಲ್ಲಾ ಆಯಾಮಗಳಲ್ಲಿಯೂ ಸ್ಥಳಾಂತರಗೊಂಡಿದ್ದಾರೆ. ಅವರು ಕೇವಲ ಅವರ ಊರಿನಿಂದ ಸ್ಥಳಾಂತರಗೊಂಡಿಲ್ಲ; ಅವರ ಮೂಲ ಬದುಕಿನಿಂದಲೇ ಸ್ಥಳಾಂತರಗೊಂಡಿದ್ದಾರೆ. ಅವರ ಮೂಲ ಆತ್ಮ ಪರಿಕಲ್ಪನೆಯಿಂದಲೇ ಸ್ಥಳಾಂತರಗೊಂಡಿದ್ದಾರೆ. ಅವರಿಗೆ ಅವರೇ ಸ್ಥಳಾಂತರಗೊಂಡಿದ್ದಾರೆ.

ಸ್ಥಳಾಂತರವು ಬಾಧಿತ ಕುಣಬಿಯರ ಬದುಕನ್ನು ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿದೆ. ಇದರಿಂದಾಗಿ ಇವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕುಣಬಿಯರಲ್ಲಿ ಈ ಕೆಳಗಿನಂತೆ ಸಮಸ್ಯೆಗಳನ್ನು ಗುರುತಿಸಲಾಗಿದೆ.

೧.ಮನೋ-ಸಾಮಾಜಿಕ ಮತ್ತು

೨.ಆರ್ಥಿಕ

೪.೧.೧. ಸಂತ್ರಸ್ತ ಕುಣಬಿಯರು ಎದುರಿಸುತ್ತಿರುವ ಮನೋ–ಸಾಮಾಜಿಕ ಸಮಸ್ಯೆಗಳು

ಸ್ಥಳಾಂತರದಿಂದಾಗಿ ಕುಣಬಿಯರಲ್ಲಿ ಈ ಕೆಳಗಿನ ಮನೋ–ಸಾಮಾಜಿಕ ಸಮಸ್ಯೆಗಳನ್ನು ಗುರುತಿಸಲಾಗಿದೆ. ತಮ್ಮ ಜೀವನದ ಅವಶ್ಯಕತೆಗಳ ಪೂರೈಕೆಯಲ್ಲಿನ ಅಸಮತೋಲನದಿಂದಾಗಿ ಅವರಲ್ಲಿ ಈ ಕೆಳಗಿನ ಸಮಸ್ಯೆಗಳನ್ನು ಕಂಡುಹಿಡಿಯಲಾಗಿದೆ.

೧. ಮನಸ್ಸು ನಂಬಿಕೆಯಿಂದ ಅಪನಂಬಿಕೆಯೆಡೆಗೆ ನಡೆದಿದೆ

ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ತಮ್ಮದೇ ಆದ ಜನ ಸಮುದಾಯದೊಂದಿಗೆ, ತಮ್ಮದೇ ಆದ ಒಂದು ಭೌಗೋಳಿಕ ಪರಿಧಿಯಲ್ಲಿ, ಅವಿಭಕ್ತ ಕುಟುಂಬದಲ್ಲಿ ವಾಸವಿದ್ದರು. ಸಾಕಷ್ಟು ಜಮೀನನ್ನು ಹೊಂದಿರುವ ಇವರು ಜೀವನವನ್ನು ತುಂಬಾ ಸುಗಮವಾಗಿ ಸಾಗಿಸುತ್ತಿದ್ದರು. ಆರ್ಥಿಕ ಬೆಂಬಲ, ಕೌಟುಂಬಿಕ ಬೆಂಬಲ, ಪ್ರಾಕೃತಿಕ ಬೆಂಬಲ ಇವರಿಗೆ ತುಂಬಾ ಚೆನ್ನಾಗಿತ್ತು. ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಕುಟುಂಬದ ಬೆಂಬಲ ದೊರೆಯುತ್ತದೆ ಎಂಬ ನಂಬಿಕೆಯಿತ್ತು. ಪರಸ್ಪರ ನಂಬಿಕೆ, ಗೌರವ, ವಿಶ್ವಾಸದಿಂದ ತುಂಬು ಜೀವನ ನಡೆಸುತ್ತಿದ್ದರು. ಜೀವನವನ್ನು ಸಂಪೂರ್ಣ ಭರವಸೆಯಿಂದ ಸಾಗಿಸುತ್ತಿದ್ದರು. ಕೃಷಿಕರಾದ ಇವರಿಗೆ ಇವರ ಸಾಮರ್ಥ್ಯದ ಬಗ್ಗೆ, ಪರಿಸ್ಥಿತಿಯ ಬಗ್ಗೆ ಸಂಪೂರ್ಣ ನಂಬಿಕೆಯಿತ್ತು. ಎಷ್ಟೇ ಕಷ್ಟವಾದರೂ ತಮ್ಮ ಜಮೀನು ತಮಗೆ ಆಹಾರ ನೀಡುತ್ತದೆ. ಕಾಡಿನ ಉತ್ಪನ್ನಗಳು ತಮ್ಮ ಜೀವನದ ಇತರೇ ಅವಶ್ಯಕತೆಗಳನ್ನು ಭರಿಸುತ್ತವೆ, ನದಿ, ನಾಲೆಗಳು ನೀರಿನ ಭವಣೆಯನ್ನು ತಂದೊಡ್ಡುವುದಿಲ್ಲ ಎಂದು ಬಲವಾಗಿ ನಂಬಿದ್ದರು. ಇವರು ಪ್ರಕೃತಿಯನ್ನು ಬರೀ ಆರಾಧನೆ ಮಾಡುತ್ತಿರಲಿಲ್ಲ; ಜೀವನಕ್ಕಾಗಿ ಬಲವಾಗಿ ನಂಬಿದ್ದರು. ಸಾಕಷ್ಟು ಜಮೀನನ್ನು ಹೊಂದಿದ್ದ ಕಾರಣ ಯಾವುದೇ ಕಾಲಕ್ಕೂ ನೆಮ್ಮದಿಯ ಜೀವನ ಸಾಗಿಸಬಹುದು ಎಂಬ ನಂಬಿಕೆ ಇತ್ತು. ಕೌಟುಂಬಿಕ, ಆರ್ಥಿಕ, ಪ್ರಾಕೃತಿಕ ಭದ್ರತೆ ಇವರು ಬೆಚ್ಚಗಿರುವಂತೆ ಮಾಡಿತ್ತು. ಪೃಕೃತಿಯ ಕಂದಮ್ಮಗಳಾಗಿ ಮುಗ್ಧವಾಗಿ ತಮ್ಮ ಪಾಡಿಗೆ ತಮ್ಮ ಬದುಕು ಸಾಗಿಸುತ್ತಿದ್ದರು. ಕುಟುಂಬದ ಪ್ರೀತಿ, ಕಾಡಿನ ಪ್ರೀತಿ ಇವರನ್ನು ರಕ್ಷಿಸುತ್ತಿತ್ತು. ಇದರಿಂದಾಗಿ ಇವರು ಇವರ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿದ್ದರು. ತಮ್ಮ ಕುಟುಂಬ, ದಾಂಪತ್ಯ ಜೀವನ, ಜೀವನ ಸಂಬಂಧಗಳು ಮತ್ತು ತಮ್ಮ ಜೀವನಾಧಾರವಾದ ಹೊಲದ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಹಾಗೆಯೇ ಸಮಾಜದಲ್ಲಿ ನಂಬಿಕಸ್ಥರಾಗಿ ಬಾಳುತ್ತಿದ್ದರು.

ಆದರೆ ಸೂಪಾ ಜಲಾಶಯ ನಿರ್ಮಾಣ ಅವರ ಬಾಳಿನಲ್ಲಿ ಚಂಡಮಾರುತದ ಪರಿಣಾಮವನ್ನು ಎಬ್ಬಿಸಿತು. ಅವರ ವಾಸಸ್ಥಾನ, ಜಮೀನು ಹಾಗೂ ನಂಬಿದ್ದ ಎಲ್ಲಾ ವ್ಯವಸ್ಥೆಗಳನ್ನು ಕಾಳಿ ನದಿಯ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿಸಿ ಬಿಟ್ಟಿತು. ಅದರಿಂದಾದ ಸ್ಥಳಾಂತರ ಅವರ ಈ ಮೇಲಿನ ಎಲ್ಲಾ ವ್ಯವಸ್ಥೆಗಳನ್ನು ಛಿದ್ರ ಛಿದ್ರ ಮಾಡಿತು. ಆಸ್ತಿ ಕಳೆದುಹೋಯಿತು. ಪರಿಸರ, ಸಾಕುಪ್ರಾಣಿಗಳು ಮುಳುಗಿ ಹೋಯಿತು.

ಕುಟುಂಬ ಒಡೆಯಿತು. ಕೌಟುಂಬಿಕ ನಿಷ್ಠೆ ಚೂರು ಚೂರಾಯಿತು. ಸಂಬಂಧಿಕರು ದೂರವಾದರು. ಸಂಬಂಧಿಕರ ಮತ್ತು ಕುಟುಂಬದ ಸದಸ್ಯರ ಸಂಬಂಧ ಮುರಿದು ಬಿತ್ತು. ಜೀವನಾಧಾರವೆಲ್ಲವೂ ಕಳಚಿಕೊಂಡವು. ಅರಣ್ಯದಲ್ಲಿ ಸುಖವಾಗಿದ್ದ ಬದುಕು ಈಗ ಅರಣ್ಯರೋದನವಾಯಿತು. ಇದರಿಂದಾಗಿ ಅವರು ಏನೇ ಬಂದರೂ ಎದುರಿಸುತ್ತೇವೆ ಅಥವಾ ಜೀವನದ ಸುಖಗಳು ಹೀಗೆ ಇರುತ್ತವೆ ಎಂಬ ನಂಬಿಕೆಯನ್ನು ಕಳೆದುಕೊಂಡು ಬಿಟ್ಟರು. ಇದ್ದ ಎಲ್ಲವನ್ನೂ ಕಳೆದುಕೊಂಡು ಮತ್ತೆ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಎಂದು ಧೃತಿಗೆಟ್ಟರು.

ಸ್ಥಳಾಂತರಗೊಂಡು ಪುನರ್ವಸತಿ ಕೇಂದ್ರಕ್ಕೆ ಬಂದ ಪ್ರಾರಂಭದಲ್ಲಿ ಮತ್ತೆ ನಾವು ಇಲ್ಲಿ ನೆಲೆ ನಿಲ್ಲುತ್ತೇವೆ ಎಂಬ ನಂಬಿಕೆ ಅವರಲ್ಲಿ ಇಲ್ಲವಾಯಿತು. ಅವರನ್ನು ಕೈಹಿಡಿದು ನಡೆಸಬೇಕಾದ ಕೆ.ಪಿ.ಸಿ. ಯೋಜನೆಯವರು ಅವರನ್ನು ಪುನರ್ವಸತಿ ಜಾಗದಲ್ಲಿ ಇಳಿಸಿ ಹೋದ ಮೇಲೆ ತಿರುಗಿಯೂ ನೋಡಲಿಲ್ಲ. ಸರ್ಕಾರದ ಯಾವ ಯೋಜನೆಗಳು ಕೂಡಾ ಇವರ ಕೈಹಿಡಿಯಲಿಲ್ಲ. ದೊರೆತ ಪರಿಹಾರಧನ ಮತ್ತು ಜಮೀನನ್ನು ಪಡೆದುಕೊಳ್ಳುವ ಸಲುವಾಗಿ ಕೌಟುಂಬಿಕ ಕಲಹ ಏರ್ಪಟ್ಟಿತ್ತು. ನಂಬಿಕಸ್ಥ ಕುಟುಂಬದ ಯಜಮಾನ ಮೋಸ ಮಾಡಿದ್ದರಿಂದ ಕುಟುಂಬ ಒಡೆದು ಹೋಯಿತು. ಕುಟುಂಬದ ಸದಸ್ಯರು ದೂರವಾದರು. ಪುನರ್ವಸತಿ ಕೇಂದ್ರದಲ್ಲಿ ಬೇರೆ ಬೇರೆ ಕಡೆ ಮನೆ ನಿವೇಷನ ನೀಡಿದ್ದರಿಂದಾಗಿ ಸಂಬಂಧಿಕರು ಕೂಡಾ ದೂರವಾದರು. ಬೇರೆ ಬೇರೆ ಜಾತಿ ಸಮುದಾಯ, ಬೇರೆ ಬೇರೆ ಊರಿನವರು ಹೀಗೆ ಎಲ್ಲರನ್ನೂ ಒಂದಾಗಿಸಿ ವಿಚಿತ್ರವಾಗಿ ನಿವೇಷನ ನೀಡಿದ್ದರಿಂದ ಇವರು ನೆರೆಹೊರೆಯವರ ಜೊತೆಗೆ ನಂಬಿಕೆಯಿಂದ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಲಿಲ್ಲ. ತಮ್ಮ ಹಿಂದಿನ ಸಾಂಪ್ರದಾಯಿಕ ಉಡುಪು, ಬದುಕು, ಆಚರಣೆ ಇವ್ಯಾವುವನ್ನು ಕೂಡಾ ಮಾಡಲಾಗಲಿಲ್ಲ. ಇದರಿಂದ ಮಾನಸಿಕವಾಗಿ ತುಂಬಾ ನೊಂದರು. ತಾಯಿಯ ಮಡಿಲು ಇಲ್ಲದ ಕಂದಮ್ಮಗಳ ಬದುಕು ಹೇಗಾಗುತ್ತೋ ಹಾಗೆಯೇ ಇವರ ಬದುಕಾಯಿತು. ಎಲ್ಲವನ್ನೂ ಕಳೆದುಕೊಂಡು ನಡು ನೀರಿನಲ್ಲಿ ನಿಂತ ಇವರು ತಮ್ಮ ಜೀವನದ ಮೇಲೆ, ವ್ಯವಸ್ಥೆಯ ಮೇಲೆ, ಸಮಾಜದ ಬಗ್ಗೆ ನಂಬಿಕೆಯನ್ನು ಕಳೆದುಕೊಂಡು ಬಿಟ್ಟರು. ವ್ಯವಸ್ಥಿತವಾಗಿ ಜೀವನ ಮಾಡುತ್ತಿದ್ದ ಇವರಲ್ಲಿ ಇಲ್ಲಿ ಜೀವನವನ್ನಾದರೂ ಹೇಗೆ ಮಾಡಬೇಕು ಎಂಬ ಅಪನಂಬಿಕೆ ಬೇರೂರಿತು. ತಮಗೆ ದೊರೆತಿದ್ದ ಹೊಲದಲ್ಲಿ ಬೆಳೆ ಬೆಳೆಯಲು ಪ್ರಯತ್ನಪಟ್ಟು ಅದು ಸಾಧ್ಯವಾಗಲಿಲ್ಲ ಎನ್ನುವ ಸಂದರ್ಭದಲ್ಲಿ ತಮ್ಮ ಆರ್ಥಿಕ ಜೀವನದ ಮೇಲಿದ್ದ ನಂಬಿಕೆಯನ್ನು ಕೂಡಾ ಕಳೆದುಕೊಂಡರು. ತುಂಬು ಜೀವನದಲ್ಲಿ ಸುಖವಾಗಿ ಬದುಕುತ್ತಿದ್ದ ಇವರ ಬದುಕು ಬಡತನಕ್ಕೆ ಬಂದಿದ್ದರಿಂದಾಗಿ ಅವರ ಜೀವನ ಸಂಗಾತಿ ಮತ್ತು ಮಕ್ಕಳಿಗೆ ನ್ಯಾಯವನ್ನು ದೊರಕಿಸಿಕೊಡಲಾಗಲಿಲ್ಲ. ಬದುಕು ಭದ್ರವಾಗಿಲ್ಲ ಎಂಬ ಅಪನಂಬಿಕೆಯಲ್ಲೇ ಅವರು ಬದುಕು ಸಾಗಿಸುವಂತಾಯಿತು. ನಾವೇನಾದರೂ ಮಾಡಬಲ್ಲೆವು, ನಾವು ಸುಖವಾಗಿರಬಲ್ಲೆವು ಈ ತರಹ ಬದುಕಿನಲ್ಲಿ ಯಾವುದೇ ರೀತಿಯ ನಂಬಿಕೆಯಿಲ್ಲದೇ

ಜೀವನ ಸಾಗಿಸುವಂತಾಯಿತು. ನಂಬಿ ಕೆಟ್ಟವರಿಲ್ಲವೋ ಎನ್ನುತ್ತಾರೆ. ಆದರೆ ಇವರಿಗೆ ಇವರ ಸಾಮರ್ಥ್ಯದ ಮೇಲಿದ್ದ ನಂಬಿಕೆ ಹೋಗಿದೆ.

೨. ಸ್ವಾಯತ್ತತೆಯಿಂದ ನಾಚಿಕೆ ಮತ್ತು ಸಂಶಯದೆಡೆಗೆ

ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ತಮ್ಮ ಜೀವನಕ್ಕೆ ಏನೇನು ಬೇಕು ಅವುಗಳನ್ನೆಲ್ಲಾ ತಾವೇ ಬೆಳೆದುಕೊಳ್ಳುತ್ತಿದ್ದರು. ತಮ್ಮ ದೈಹಿಕ ಕೌಶಲ್ಯದಿಂದ ಕೃಷಿ ಚಟುವಟಿಕೆಗಳನ್ನು ಯಶಸ್ವಿಯಾಗಿ ಮಾಡುತ್ತಿದ್ದರು. ಬೇಟೆಯಾಡಿ, ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಆಹಾರ ಮತ್ತು ಜೀವನಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಸಂಗ್ರಹಿಸುತ್ತಿದ್ದರು. ತಮ್ಮ ಭದ್ರತಾ ಜೀವನಕ್ಕೆ ಬೇಕಾದ ರಕ್ಷಣಾ ತಂತ್ರಗಳನ್ನು ಅರಿತುಕೊಂಡಿದ್ದರು. ಕಾಡುಪ್ರಾಣಿಗಳಿಂದ ತಮ್ಮ ಜಮೀನು ಹಾಗೂ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಿದ್ದರು. ತಮ್ಮ ಜನಸಮುದಾಯದೊಂದಿಗೆ ಬದುಕುವ ಹೊಂದಾಣಿಕೆಯ ತಂತ್ರವನ್ನು ಕರಗತ ಮಾಡಿಕೊಂಡಿದ್ದರು. ತುಂಬು ಕುಟುಂಬದಲ್ಲಿದ್ದ ಇವರು ತುಂಬಾ ಸ್ವಾಯತ್ತ ಮನೋಭಾವನೆಯ ಬದುಕನ್ನು ಸಾಗಿಸುತ್ತಿದ್ದರು. ತಾವು ಯಾರಿಗೂ ಅವಲಂಬನೆಯಾಗುವುದಿಲ್ಲ, ಯಾರಿಗೂ ಕೈಯೊಡ್ಡಿ ನಿಲ್ಲುವುದಿಲ್ಲ, ಸಾಲ ತೆಗೆದುಕೊಂಡು ಜೀವನ ಮಾಡುವುದಿಲ್ಲ ಎಂಬುದು ಅವರ ಮನೋಧರ್ಮವಾಗಿತ್ತು. ಅದರಂತೆ ಅವರು ಜೀವನವನ್ನು ಸಾಗಿಸಿಕೊಂಡು ಸಂತುಷ್ಟರಾಗಿದ್ದರು. ತನ್ನ ಪರಿಸರದಲ್ಲಿ ಯಾವ್ಯಾವ ಕಾಲಕ್ಕೆ ಏನೇನು ದೊರಕುತ್ತದೆ, ಅವುಗಳನ್ನು ಹೇಗೆ ಪಡೆದುಕೊಳ್ಳಬೇಕು ಎಂಬ ಅನ್ವೇಷಣಾ ಚತುರತೆ ಅವರಲ್ಲಿತ್ತು. ಸ್ವತಂತ್ರ ಹಾಗೂ ಸ್ವಾಯತ್ತ ಬದುಕು ಅವರದಾಗಿತ್ತು. ತನ್ನ ಸಮುದಾಯದಲ್ಲಿನ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಯಶಸ್ವಿಯಾಗಿ ಭಾಗಿಯಾಗುತ್ತಿದ್ದರು. ತಮ್ಮದೇ ಕುಲದವರೊಡನೆ ಬದುಕುತ್ತಿದ್ದ ಕಾರಣ ಅಂತಹ ಅವಕಾಶ ಅಲ್ಲಿ ಅವರಿಗಿತ್ತು.

ಆದರೆ ಸ್ಥಳಾಂತರ ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿ ಬಿಟ್ಟಿತು. ಸ್ಥಳಾಂತರದ ಸಂದರ್ಭದಲ್ಲಿ ದೊರೆತ ಪರಿಹಾರ ರೂಪದ ಹಣ, ಆಸ್ತಿ ಅವರ ಕುಟುಂಬವನ್ನು ಒಡೆದು ಹಾಕಿತು. ಅಣ್ಣ ತಮ್ಮಂದಿರ ಮಧ್ಯೆ ಸಂಶಯವನ್ನು ಹುಟ್ಟು ಹಾಕಿತು. ಎಲ್ಲದರಲ್ಲೂ ಸ್ವಾಯತ್ತತೆಯನ್ನು ಸಾಧಿಸಿದ್ದ ತಮಗೆ ಈಗ ಏನೂ ಇಲ್ಲವಲ್ಲ, ಯಾವ ರೀತಿಯಾಗಿ ಜೀವನ ಮಾಡಬೇಕು ಎಂಬ ಸಂಶಯ ಅವರಲ್ಲಿ ಮೂಡಿತು. ತಮಗೆ ಭತ್ತ ಬೆಳೆಯುವುದು ಬಿಟ್ಟರೆ ಇನ್ನಾವ ಕೌಶಲ್ಯಗಳು ತಿಳಿದಿಲ್ಲದ ಕಾರಣ ತಮ್ಮ ಸಾಮರ್ಥ್ಯದ ಬಗ್ಗೆಯೇ ಅವರಿಗೆ ಸಂಶಯ ಮೂಡಿತು. ಹೊಸದೇನಾದರೂ ಕೌಶಲ್ಯಗಳನ್ನು ಕಲಿಯಲು ಸಾಧ್ಯವಾ? ಹೊಸ ರೀತಿಯ ಉದ್ಯೋಗ ಮಾಡಿಕೊಂಡು ಜೀವನಕ್ಕಾಗಿ ಸಂಪಾದಿಸಲು ಸಾಧ್ಯವಾ? ಎಂಬೆಲ್ಲಾ ಸಂಶಯ ಅವರನ್ನು ಕಾಡಿತ್ತು. ಸ್ವಾಯತ್ತವಾಗಿ ಬದುಕುತ್ತಿದ್ದ ಅವರು ಪರಸ್ಪರ ಸಂಶಯದಿಂದ, ತಮ್ಮ ಬಗ್ಗೆಯೇ ಸಂಶಯದಿಂದ ಬದುಕುವಂತಾಯಿತು. ಜೀವನದ ಅವಶ್ಯಕತೆಗಳನ್ನು ಈಡೇರಿಸುವುದಕ್ಕಾಗಿ

ಯಾವುದೇ ಅವಕಾಶಗಳು ದೊರೆಯದೇ ಇದ್ದ ಸಂದರ್ಭದಲ್ಲಿ ತಮಗಿದ್ದ ಸಾಮರ್ಥ್ಯಗಳ ಬಗ್ಗೆ ಅವರಿಗೆ ಅನುಮಾನ ಮತ್ತು ಸಂಶಯ ಮೂಡಿತು. ತನ್ನ ಪಾರಂಪರಿಕ ಉಡುಪನ್ನು ಧರಿಸಲು ಸಂಕೋಚ ಪಡುವಂತಾಯಿತು. ಎಲ್ಲಾ ಇದ್ದವರು ಈಗ ಏನೂ ಇಲ್ಲದವರಾಗಿ ಬದುಕುವುದೇ ಅವರಿಗೆ ಸವಾಲಾಗಿದೆ.

೩. ಉಪಕ್ರಮಿಸುವಿಕೆಯಿಂದ ಅಪರಾಧಿ ಮನೋಭಾವದೆಡೆಗೆ

ಸ್ಥಳಾಂತರ ಪೂರ್ವದಲ್ಲಿ ತಮಗಿದ್ದ ಜಾಗದಲ್ಲಿ ಏನೆಲ್ಲಾ ಬೆಳೆಯಲು ಸಾಧ್ಯವೋ ಅವುಗಳನ್ನು ಬೆಳೆದುಕೊಂಡು ನಾವು ಚೆನ್ನಾಗಿ ಬದುಕಬಲ್ಲೆವು ಎಂಬ ಸ್ವಭಾವ ಅವರಲ್ಲಿತ್ತು. ಕಾಡಿನಲ್ಲಾಗಲೀ, ತಮ್ಮ ಜಮೀನಲ್ಲಾಗಲೀ ಏನೇನು ದೊರೆಯುತ್ತವೆಯೋ ಅವನ್ನೆಲ್ಲಾ ಸದುಪಯೋಗಪಡಿಸಿಕೊಳ್ಳಬೇಕು ಎಂಬ ಮನೋಭಾವನೆ ಹೊಂದಿದ್ದರು. ಜೀವನಕ್ಕಾಗಿ ವಿವಿಧ ರೀತಿಗಳಿಂದ ಸಂಪಾದನೆ ಮಾಡುತ್ತಿದ್ದರು. ಆರ್ಥಿಕ ಚಟುವಟಿಕೆಗಳ ಜೊತೆಗೆ ಕಾಲಕಾಲಕ್ಕೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ಯೋಜಿಸಿ ಕೈಗೊಳ್ಳುತ್ತಿದ್ದರು. ಧಾರ್ಮಿಕ ಮತ್ತು ಸಾಮಾಜಿಕ ಬದುಕಿನಲ್ಲಿಯೂ ಆದರ್ಶತನವನ್ನೇ ಬೆಳೆಸಿಕೊಂಡಿದ್ದರು. ಯಾವುದೇ ರೀತಿಯ ಸಾಮಾಜಿಕ ಅನಿಷ್ಟ ಪದ್ಧತಿಗಳಿಗೆ ಅವರಲ್ಲಿ ಎಡೆಯಿರಲಿಲ್ಲ. ತಮ್ಮವರುಗಳ ಮಧ್ಯೆ ಸಾಮಾಜಿಕ ಮತ್ತು ಪ್ರಾಕೃತಿಕ ಅಂತರ್ ಕ್ರಿಯೆಗಳನ್ನು ಯಶಸ್ವಿಯಾಗಿ ಹೊಂದಿದ್ದರು. ತಮ್ಮ ಸಮುದಾಯದ ಮಧ್ಯೆ ಎಲ್ಲಾ ರಂಗಗಳಲ್ಲಿಯೂ ಭಾಗಿಯಾಗುತ್ತಿದ್ದರು. ದುಡಿಮೆ ಹಾಗೂ ಇತರೇ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗಿಯಾಗುತ್ತಿದ್ದರಿಂದ ಅವರು ಜೀವನವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದರು.

ಆದರೆ ಸ್ಥಳಾಂತರದಿಂದಾಗಿ ಏನೂ ಮಾಡದವರಾಗಿದ್ದಾರೆ. ತಾವು ಅನುಭವಿಸಿದ್ದ ಜಮೀನನ್ನು ತಮ್ಮ ಮಕ್ಕಳಿಗೆ ನೀಡಲಿಕ್ಕೆ ಆಗಲಿಲ್ಲ ಎಂಬ ಅಪರಾಧಿ ಮನೋಭಾವನೆ ಅವರನ್ನು ಕಾಡುತ್ತಿದೆ. ನಾವು ಪಾಪಿಗಳು, ಯಾವ ಜನ್ಮದಲ್ಲಿ ಏನು ಪಾಪ ಮಾಡಿದ್ದೇವೋ ಈ ಜನ್ಮದಲ್ಲಿ ಬದುಕು ಹೀಗಾಯಿತು ಎಂಬ ಅಪರಾಧಿ ಭಾವನೆಯಿಂದ ಬದುಕುತ್ತಿದ್ದಾರೆ. ಬೇರೆ ಬೇರೆ ದುಶ್ಚಟಗಳನ್ನು ತಮ್ಮದಾಗಿಸಿಕೊಂಡು ತಮ್ಮ ಕುಲದ ಸಂಸ್ಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂಬ ಆರೋಪಣೆಯನ್ನು ಹೊತ್ತುಕೊಂಡಿದ್ದಾರೆ.

೪. ಕಾರ್ಯಶೀಲತೆಯಿಂದ ಕೀಳರಿಮೆಯೆಡೆಗೆ

ತಮ್ಮ ಆರ್ಥಿಕ ಚಟುವಟಿಕೆಗಳಲ್ಲಿ ಮತ್ತು ಸಮುದಾಯದ ಸಾಮಾಜಿಕ ಸನ್ನಿವೇಶಗಳಲ್ಲಿ ಸದಾ ಕಾರ್ಯಶೀಲರಾಗಿದ್ದರು. ಅವರು ವಾಸಿಸುತ್ತಿದ್ದ ಪರಿಸರವೇ ಅಂತದ್ದು. ಅವರ ತುಂಬು ಕುಟುಂಬ, ಸಾಕಷ್ಟು ಜಮೀನು, ಕೆಲಸಗಳು ಮತ್ತು ಅವರು ನಡೆಸಿಕೊಂಡು ಬರುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಗಳು ಅವರನ್ನು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಪ್ರೇರೇಪಿಸುತ್ತಿದ್ದವು. ಎಲ್ಲರೂ ಜೊತೆಯಾಗಿಯೇ ಬದುಕುತ್ತಿದ್ದರಿಂದ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ಬದುಕು ಸಾಗಿಸುತ್ತಿದ್ದರು. ನಾವು

ಖಾಲಿ ಇದ್ದೇವೆ ಎಂದು ಯಾವತ್ತೂ ಯಾರಿಗೂ ಅನ್ನಿಸುತ್ತಿರಲಿಲ್ಲ. ಬೆಳಗಿನಿಂದ ರಾತ್ರಿಯವರೆಗೂ ಕೆಲಸ ಮಾಡಿಕೊಂಡು ಆರಾಮ ಕಣ್ತುಂಬಾ ನಿದ್ದೆ ಮಾಡುತ್ತಿದ್ದರು. ಉಳಿದವರಿಗಿಂತ ಆರ್ಥಿಕವಾಗಿ-ಸಾಮಾಜಿಕವಾಗಿ ಆದರ್ಶವಾಗಿ ಬದುಕುತ್ತಿದ್ದೇವೆ ಎಂಬ ಹೆಮ್ಮೆ ಅವರಿಗೆ ಇತ್ತು.

ಸ್ಥಳಾಂತರದಿಂದಾಗಿ ಇವರಿಗೆ ಮಾಡಲಿಕ್ಕೆ ಕೆಲಸಗಳೇ ಇಲ್ಲದೇ ಖಾಲಿ ಇರುವಂತಾಗಿದೆ. ಇದರಿಂದಾಗಿ ಇವರಿಗೆ ಕೀಳರಿಮೆ ಮೂಡಿದೆ. ತಮಗೆ ಗೊತ್ತಿದ್ದ ಒಂದೇ ಒಂದು ಉದ್ಯೋಗವಾದ ಹೊಲದ ಕೆಲಸ ಕೂಡಾ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬ ಕೀಳರಿಮೆ ಬಂದಿದೆ. ಬೇರೆ ಕೆಲಸ ಮಾಡಲು ಅವರು ಏನೂ ಕಲಿತಿಲ್ಲ. ಅಲ್ಲಿ ಹೆಚ್ಚಾಗಿ ಲಭ್ಯವಿರುವ ಕಲ್ಲಿನ ಕೋರೆ ಕೆಲಸ ಮಾಡಲು ಅವರಿಗೆ ಅಷ್ಟು ಸಾಮರ್ಥ್ಯ ಇಲ್ಲ ಎಂಬ ಕೀಳರಿಮೆ ಅವರಲ್ಲಿದೆ. ಸರ್ಕಾರದ ಯಾವುದಾದರೂ ಯೋಜನೆಗಳನ್ನು ಏನಾದರೂ ಮಾಡಿ ಪಡೆದುಕೊಳ್ಳೋಣವೆಂದರೆ ಇವರಿಗೆ ಕನ್ನಡ ಭಾಷೆ ಬರುವುದಿಲ್ಲ. ಕರ್ನಾಟಕದಲ್ಲಿ ಉದ್ಯೋಗವನ್ನು ಪಡೆದುಕೊಳ್ಳಲು ಇವರಿಗೆ ಕನ್ನಡ ಭಾಷಾ ಜ್ಞಾನದ ಕೊರತೆ ಇದೆ. ಇದರಿಂದಾಗಿ ಅವರು ಎಲ್ಲರಂತೆ ವ್ಯವಹರಿಸಲು ಸಾಧ್ಯವಾಗುತ್ತಿಲ್ಲ. ಎಲ್ಲವನ್ನೂ ಕಳೆದುಕೊಂಡು ಏನೂ ಇಲ್ಲದಂತೆ ಬದುಕುತ್ತಿರುವುದು ಇವರಲ್ಲಿ ಕೀಳರಿಮೆಯನ್ನು ತುಂಬಿದೆ.

೫. ಅನನ್ಯತೆಯಿಂದ ಪಾತ್ರ ನಿರ್ವಹಣೆಯ ಗೊಂದಲದೆಡೆಗೆ

ಸ್ಥಳಾಂತರ ಪೂರ್ವದಲ್ಲಿ ಕುಣಬಿಯರು ತಮ್ಮದೇ ಆದ ಅನನ್ಯ ಬದುಕು, ಸಂಸ್ಕೃತಿ, ಆದರ್ಶಗಳನ್ನು ಹೊಂದಿದ್ದರು. ತಾವು ತಮ್ಮ ಜನಸಮುದಾಯದ ಜೊತೆಗೆ ಇದ್ದುದರಿಂದ ಎಲ್ಲರ ಜೊತೆಗೂ ಬೆರೆಯುತ್ತಿದ್ದರು. ತಮ್ಮ ಅನನ್ಯವಾದ ಸಂಸ್ಕೃತಿಯನ್ನು ಆಚರಿಸಿಕೊಂಡು, ಕಾಪಾಡಿಕೊಂಡು ಬರುತ್ತಿದ್ದರು. ಅದರಿಂದ ಅವರು ಸುಖ ಕಂಡುಕೊಳ್ಳುತ್ತಿದ್ದರು. ಕುಣಬಿಯರೆಂದರೆ ಹೀಗೆ, ಅವರ ಆಚರಣೆಗಳೆಂದರೆ ಹೀಗೆ, ಅವರು ತಮ್ಮ ಬದುಕನ್ನು ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬರುತ್ತಾರೆ ಎಂಬ ನಂಬಿಕೆ, ಅಭಿಪ್ರಾಯ ಬೇರೆ ಸಮುದಾಯದವರಲ್ಲಿ ಕೂಡಾ ಇತ್ತು.

ಪುನರ್ವಸತಿ ಕೇಂದ್ರದಲ್ಲಿ ಯಾವುದೇ ಮೂಲ ಆಧಾರಗಳಿಲ್ಲದೇ ಮನೆ ನಿವೇಷನಗಳನ್ನು ಹಂಚಿ ಎಲ್ಲರನ್ನೂ ಛಿದ್ರ ಛಿದ್ರವನ್ನಾಗಿ ಮಾಡಲಾಗಿದೆ. ಅವರಿಗೆ ಇಲ್ಲಿ ಯಾರ ಜೊತೆಗೆ ಬೆರೆಯಬೇಕು, ಹೇಗೆ ಬೆರೆಯಬೇಕು ಎಂಬುದೇ ತಿಳಿಯಲಿಲ್ಲ. ತಮ್ಮ ಮನೆಯೊಳಗೇ ಬಂಧಿಯಾಗಿದ್ದಾರೆ. ಇವತ್ತಿಗೂ ಅವರು ಬೇರೆಯವರೊಂದಿಗೆ ಬೆರೆಯುವುದನ್ನು ಕಲಿತಿಲ್ಲ. ಸಮಾಜದ ಯಾವುದೇ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿಲ್ಲ. ತಾನು ಹೊಂದಿದ್ದ ಸಾಮರ್ಥ್ಯಗಳನ್ನು ಇಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಕುಟುಂಬದಲ್ಲಿ ತಮ್ಮ ಪಾತ್ರವನ್ನು ಕೂಡಾ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಔದ್ಯೋಗಿಕ ಗೊಂದಲದಿಂದಾಗಿ ಜೀವನಕ್ಕಾಗಿ ಏನನ್ನೂ ಸಂಪಾದನೆ

ಮಾಡದವರ ಹಾಗೆ ಆಗಿದ್ದಾರೆ. ಕುಟುಂಬದ ಯಜಮಾನನ ಪಾತ್ರ ಕೂಡಾ ಬದಲಾಗಿದೆ. ಭವಿಷ್ಯದ ಬಗೆಗಿನ ಎಲ್ಲಾ ರೀತಿಯ ಗೊಂದಲಗಳ ಮಧ್ಯೆ ಕುಣಬಿಯರು ಬದುಕನ್ನು ಸಾಗಿಸುತ್ತಿದ್ದಾರೆ. ಜೀವನದ ಯಾವುದಾದರೂ ರೀತಿಯ ಸಂಘರ್ಷಗಳನ್ನು, ಗೊಂದಲಗಳನ್ನು ಯಶಸ್ವಿಯಾಗಿ ಪರಿಹರಿಸಿಕೊಳ್ಳುತ್ತಿದ್ದ ಇವರು ಈ ನಿಟ್ಟಿನಲ್ಲಿ ಈಗ ಅಸಮರ್ಥರಾಗಿದ್ದಾರೆ. ಅವರ ಹಿಂದಿನ ಬದುಕಿಗೂ ಹಾಗೂ ಈಗ ಬದುಕುತ್ತಿರುವ ಬದುಕಿಗೂ ಸಾಕಷ್ಟು ತದ್ವಿರುದ್ಧಗಳು ಇವೆ. ಮುಂದೆ ಜೀವನಕ್ಕಾಗಿ ಕೈಗೊಳ್ಳಬೇಕಾದ ವೃತ್ತಿಯ ಬಗ್ಗೆ ಅವರಿಗೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿಲ್ಲ. ವೃತ್ತಿಯ ಬಗ್ಗೆ ರಚನಾತ್ಮಕ ಪಾತ್ರ ನಿರ್ವಹಣೆಯ ಗೊಂದಲವಿದೆ.

೬. ಆತ್ಮೀಯತೆಯಿಂದ ಏಕಾಂತತೆಯೆಡೆಗೆ

ಸ್ಥಳಾಂತರ ಪೂರ್ವದಲ್ಲಿ ಇವರು ತನ್ನ ಸಮುದಾಯದೊಂದಿಗೇ ವಾಸ ಮಾಡುತ್ತಿದ್ದರಿಂದ ಎಲ್ಲರ ಜೊತೆಗೂ ಆತ್ಮೀಯತೆಯಿಂದ ಬೆರೆಯುತ್ತಿದ್ದರು. ಎಲ್ಲರೊಂದಿಗೂ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡಿದ್ದರು. ಕಾಡಿನ ಜೊತೆಗೆ ತುಂಬಾ ಅನ್ಯೋನ್ಯವಾಗಿದ್ದರು. ದಿನಾಲೂ ಹೊಲದಲ್ಲಿ ಕೆಲಸ ಮಾಡುವುದು, ಕಾಡಿಗೆ ಹೋಗಿ ಏನಾದರೂ ತರುವುದು, ಮನೆಯಲ್ಲಿ ಎಲ್ಲರ ಜೊತೆಗೆ ಚೆನ್ನಾಗಿರುವುದು, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಯಾರ ಜೊತೆಗೂ ಜಗಳವಾಡದೇ ಇರುವುದು ಈ ರೀತಿಯಾಗಿ ಯಾವುದೇ ಬೇಜಾರಿಲ್ಲದೇ ಅನ್ಯೋನ್ಯವಾಗಿದ್ದರು.

ಆದರೆ ಇಲ್ಲಿ ಪುನರ್ವಸತಿ ಕೇಂದ್ರದಲ್ಲಿ ಈ ಮೇಲಿನ ಯಾವ ಅವಕಾಶಗಳು ಕೂಡಾ ಅವರಿಗೆ ಲಭ್ಯವಿಲ್ಲ. ತಾವಾಯಿತು ತಮ್ಮ ಮನೆಯೂ ಆಯಿತು ಎಂದು ಬದುಕುವ ಪರಿಸ್ಥಿತಿ. ಇವರು ಯಾರ ಜೊತೆಗೂ ಬೆರೆಯುವುದಿಲ್ಲ. ಇವರ ಸಮುದಾಯದವರು ಎಲ್ಲೆಲ್ಲಿ ಇದ್ದಾರೆಂದು ಇವರಿಗೆ ತಿಳಿದಿಲ್ಲ. ಅವರನ್ನು ಹುಡುಕಿ ಅವರ ಮನೆಗಳಿಗೆ ಭೇಟಿ ನೀಡುವ ಸಂಪ್ರದಾಯ ಇವರಲ್ಲಿಲ್ಲ. ಬೇರೆ ಜನರ ಹಾಗೆ ಇವರು ಅನ್ಯಜಾತಿ, ಅನ್ಯ ಸಮುದಾಯದ ಜೊತೆಗೆ ಸಾಮಾಜಿಕ ಸಂಪರ್ಕ, ಸಂಬಂಧಗಳನ್ನು ಬೆಳೆಸಿಕೊಂಡಿಲ್ಲ. ಮಾಡಲು ಏನೂ ಇಲ್ಲದೇ ಮನೆಯಲ್ಲಿ ಸುಮ್ಮನೆ ಕಾಲ ಕಳೆಯುತ್ತಿದ್ದಾರೆ. ಇದು ಅವರಿಗೆ ಹುಚ್ಚು ಹಿಡಿದಂತಾಗಿಸಿದೆ. ಬದುಕು ಬೋರಾಗಿದೆ. ಊರಲ್ಲಾದರೆ ಕಾಡಿಗಾದರೂ ಹೋಗಿ ಬರುತ್ತಿದ್ದೆವು ಆದರೆ ಇಲ್ಲಿ ಏನೇನೂ ಇಲ್ಲದೇ ಯಾಕಾದರೂ ಜೀವನ ಬೇಕು ಎಂಬಷ್ಟು ಬೇಜಾರಾಗಿದೆ ಎಂಬ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಅವರ ಮಕ್ಕಳು, ಮೊಮ್ಮಕ್ಕಳು ಕೂಡಾ ಹಿಂದಿನವರ ಹಾಗೆ ಸಾಮಾಜಿಕ ಸಂಬಂಧಗಳ ಕೊರತೆ ಎದುರಿಸುತ್ತಿದ್ದಾರೆ. ಕುಣಬಿಯರು ಕನಿಷ್ಠತಮ ಸಾಮಾಜಿಕತೆಯನ್ನು ಹೊಂದಿದವರು. ಈಗಲೂ ಇವರಿಗೆ ಪಕ್ಕದ ಮನೆಯವರ ಬಗ್ಗೆ ತಿಳಿದಿರುವುದಿಲ್ಲ. ಯಾರಾದರೂ ಮನೆ ಬಾಗಿಲಿಗೆ ಬಂದರೆ ಹೊರಗಡೆ ಬಂದು ಮಾತನಾಡಿಸುವುದು ಇಲ್ಲ. ಒತ್ತಾಯವಾಗಿ ಕರೆದು ಹಟತೊಟ್ಟು

ಮಾತನಾಡಿಸಬೇಕು. ಈ ರೀತಿಯ ಏಕಾಂತ ಭಾವನೆ ಅವರನ್ನು ಇನ್ನಷ್ಟು ಮೂಲೆಗುಂಪು ಮಾಡಿಬಿಡುತ್ತದೆ.

೭. ಸೃಷ್ಟಿಶೀಲತೆಯಿಂದ ನಿಲುಗಡೆಯೆಡೆಗೆ

ಸ್ಥಳಾಂತರ ಪೂರ್ವದಲ್ಲಿ ತಮ್ಮ ಎಲ್ಲಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸೃಷ್ಟಿಶೀಲತೆಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನ ಪಡುತ್ತಿದ್ದರು. ಮಕ್ಕಳ ಪೋಷಣೆ, ಕುಟುಂಬವನ್ನು ಸಲಹುವುದು, ಕೆಲಸ ಕಾರ್ಯವನ್ನು ಕಾಲಕ್ಕೆ ತಕ್ಕಂತೆ ಮಾಡುವುದು ಹೀಗೆ ತನ್ನ ಮುಂದುವರಿಯುವಿಕೆಗೆ ಏನೆಲ್ಲಾ ಅಗತ್ಯವಿದೆಯೋ ಅವುಗಳನ್ನೆಲ್ಲಾ ಪೂರೈಸಿಕೊಳ್ಳಲು ಪ್ರಯತ್ನ ಪಡುತ್ತಿದ್ದರು.

ಆದರೆ ಸ್ಥಳಾಂತರವಾದ ನಂತರ ಏನು ಮಾಡಬೇಕು? ಹೇಗೆ ಮಾಡಬೇಕು? ಎಂದು ತೋಚದೇ ತನಗೆ ತಿಳಿದ್ದನ್ನು ಮಾಡಿ ಯಶಸ್ಸು ಕಾಣದೇ ಜೀವನ ನಿಂತ ನೀರಿನಂತಾಗಿದೆ. ಯಾವಾಗಲೂ ತನ್ನ ಹಿಂದಿನ ಬದುಕನ್ನು ನೆನಪಿಸಿಕೊಳ್ಳುತ್ತಾ ಇದೀಗ ಯಾವುದರಲ್ಲಿ ತೊಡಗಿಸಿಕೊಂಡರೆ ಯಶಸ್ವಿಯನ್ನು ಕಾಣಬಹುದು ಎಂಬುದು ಅವರಿಗೆ ಅರಿವಾಗುತ್ತಿಲ್ಲ. ಕೈಗೆ ಸಿಗುವ ಒಂದಿಷ್ಟು ಕೆಲಸಗಳನ್ನು ಮಾಡುತ್ತಾ ಜೀವನವನ್ನಷ್ಟೇ ಸಾಗಿಸುತ್ತಿದ್ದಾರೆ. ಸ್ವಲ್ಪ ವಯಸ್ಸಾದವರಂತೂ ಏನೂ ಕೆಲಸವಿಲ್ಲದೇ ನಿಷ್ಕ್ರಿಯರಾಗಿದ್ದಾರೆ. ಕುಟುಂಬದಲ್ಲಿ ಒಬ್ಬರೋ ಇಬ್ಬರೋ ದುಡಿದು ಇಡೀ ಜೀವನವನ್ನು ಸಾಗಿಸುವ ಪರಿಸ್ಥಿತಿ. ಸಂಪಾದನೆ ಮಾಡುವವರಿಗಿಂತ ಎರಡು ಪಟ್ಟು ಸದಸ್ಯರು ಮನೆಯಲ್ಲಿರುವುದು ಕಂಡುಬರುತ್ತದೆ. ಇದು ಅವರ ಕೆಲಸ ಕಾರ್ಯಗಳ ನಿಲುಗಡೆಯೇ ಸರಿ.

೮. ಸಮಗ್ರತೆಯಿಂದ ಹತಾಶೆಯೆಡೆಗೆ


ಸ್ಥಳಾಂತರ ಪೂರ್ವದಲ್ಲಿ ಎಲ್ಲಾ ಸಂದರ್ಭಗಳನ್ನು ಯಶಸ್ವಿಯಾಗಿ ಪೂರೈಸಿಕೊಳ್ಳುತ್ತಿದ್ದ ಇವರು ಸಮಗ್ರತೆಯ ಮನೋಭಾವನೆಯನ್ನು ಹೊಂದಿದ್ದರು. ಜೀವನದ ಸಾರ್ಥಕ್ಯವನ್ನು ಕಾಣುತ್ತಿದ್ದರು. ಆತ್ಮ ತೃಪ್ತಿ, ಸಂತುಷ್ಟಿಯ ಭಾವ ಇವರನ್ನು ಜೀವನದ ಬಗ್ಗೆ ಧನಾತ್ಮಕ ಮನೋಧೋರಣೆಯನ್ನು ಹೊಂದುವಂತೆ ಮಾಡಿತ್ತು. ತಮ್ಮ ಜೀವನದ ಬಗ್ಗೆ ಅವರಿಗೆ ಹೆಮ್ಮೆ ಇತ್ತು. ಎಲ್ಲವೂ ಅವರು ಅಂದುಕೊಂಡಂತೆ ಅವರ ಕೈಯಲ್ಲೇ ಇದ್ದಂತೆ ನೆರವೇರುತ್ತಿದ್ದವು. ತಮಗೆ ಏನು ಮಾಡಬೇಕು ಎಂದೆನಿಸುತ್ತದೋ ಹಾಗೆ ಮಾಡಲು ಎಲ್ಲಾ ಅನುಕೂಲಗಳು ಇದ್ದವು. ಹಾಸಿಗೆ ಇದ್ದಷ್ಟೇ ಕಾಲು ಚಾಚು ಎಂಬ ನಾಣ್ಣುಡಿಯನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದ ಇವರು ಸಾಲವಿಲ್ಲದೇ ಸುಖವಾಗಿ ಬದುಕುತ್ತಿದ್ದರು. ಮನುಷ್ಯನ ಸಮಗ್ರತೆಗೆ ಮನೆ, ಕುಟುಂಬ, ಜಮೀನು, ಪ್ರಾಕೃತಿಕ ವಾತಾವರಣ, ನೀರು, ಕಾಡು, ಸ್ವಾತಂತ್ರ್ಯ ಇವೆಲ್ಲವುಗಳಿಗಿಂತ ಇನ್ನೇನು ಬೇಕು?

ಆದರೆ ಪುನರ್ವಸತಿ ಕೇಂದ್ರದಲ್ಲಿ ಅವರು ಏನೂ ಅಂದುಕೊಳ್ಳಕ್ಕೂ ಆಗುತ್ತಿಲ್ಲ. ಏನು ಅಂದುಕೊಳ್ಳಬೇಕೆಂದೇ ಅವರಿಗೆ ತಿಳಿದಿಲ್ಲ. ತಮ್ಮ ಜಮೀನಿನಲ್ಲಿ ಬೆಳೆ ಬೆಳೆಯಲು

ಪ್ರಯತ್ನಿಸಿ ಹತಾಶರಾದರು. ಏನಾದರೂ ಮಾಡಿ ಸಂಪಾದನೆ ಮಾಡಲಿಕ್ಕೆ ಅವರು ಹೆಚ್ಚಿನ ತೆರೆದ ಮನಸ್ಸಿನವರು ಅಲ್ಲ. ಯಾರ ಹತ್ತಿರವೂ ಮಾತನಾಡುವುದಿಲ್ಲ. ಯಾರನ್ನೂ ಭೇಟಿಯಾಗುವುದಿಲ್ಲ. ಹೇಗೆ ಬರುತ್ತೋ ಹಾಗೆ ಜೀವನ ಮಾಡಿಕೊಂಡು ಬಂದು ಇದೀಗ ಮಕ್ಕಳಿಗೆ ನ್ಯಾಯ ದೊರಕಿಸಿಕೊಡಲಾರದೇ ಹತಾಶರಾಗಿದ್ದಾರೆ. ಸ್ಥಳಾಂತರ ತಂದ ನೋವು ಇನ್ನೂ ಅವರ ಮನಸ್ಸಿನಿಂದ ಮಾಸಿಲ್ಲ. ಆ ಊರಿನ ನೆನೆಪು ಇನ್ನೂ ಅವರಿಗೆ ಕಾಡುತ್ತಿದೆ. ಹಿಂದಿನ ಜೀವನವನ್ನು ನೆನೆಸಿಕೊಂಡು ಈಗಿನ ಜೀವನವನ್ನು ಮತ್ತೆ ಕಟ್ಟಿಕೊಳ್ಳಲು ಸಾಧ್ಯವಾಗದೇ, ಏನು ಮಾಡಬೇಕು ಎಂದು ತೋಚದೇ, ಏನು ಮಾಡಲು ಹೋಗದೇ ಪೇಚಿಗೆ ಸಿಲುಕಿ ಇದೀಗ ಹತಾಶರಾಗಿದ್ದಾರೆ. ಜೀವನ ವ್ಯರ್ಥವಾಯಿತಲ್ಲಾ, ಮತ್ತೆಂದೂ ಆ ಬದುಕು ಸಿಗುವುದಿಲ್ಲವಲ್ವಾ ಎಂಬ ಕೊರಗು ಅವರಿಗೆ ಕಾಡಿ ಅವರು ಜೀವನದಲ್ಲಿ ಸಂಪೂರ್ಣವಾಗಿ ಹತಾಶರಾಗಿದ್ದಾರೆ. ಸ್ಥಳಾಂತರ ಹೆಚ್ಚಾಗಿ ಕಾಡಿದ್ದು ತೊಂದರೆ ಕೊಟ್ಟಿದ್ದು ಇದೀಗ ಇಳಿವಯಸ್ಸಿನಲ್ಲಿ ವಾಸ ಮಾಡುತ್ತಿರುವ ವಯೋವೃದ್ಧರಿಗೆ. ಅವರ ವಯಸ್ಸಿಗೆ ಈಗ ಮುಪ್ಪು ಬಂದಿದೆ. ಆದರೆ ಅವರ ಮನಸ್ಸಿಗೆ ಸ್ಥಳಾಂತರವಾದಾಗಲೇ ಮುಪ್ಪು ಬಂದಿದೆ. ಸ್ಥಳಾಂತರವಾದಾಗ ಕನ್ನಡ ಭಾಷೆ ಬಂದಿದ್ದರೆ ಇನ್ನಷ್ಟು ಪರಿಹಾರವನ್ನು ಪಡೆದುಕೊಳ್ಳಬಹುದಿತ್ತಲ್ವಾ ಎನ್ನುವ ಹತಾಶಾ ಭಾವನೆ ಅವರನ್ನು ಸುಡುತ್ತಿದೆ.


ಸೂಪಾ ಜಲಾಶಯ ಸಂತ್ರಸ್ತ ಕುಣಬಿಯರಲ್ಲಿ ಈ ರೀತಿಯಾದ ಮನೋ–ಸಾಮಾಜಿಕ ಸಮಸ್ಯೆಗಳು ಕಂಡುಬಂದಿದ್ದು ಇದು ಅವರ ಅಭಿವೃದ್ಧಿಗೆ ಸವಾಲಾಗಿ ಬಿಟ್ಟಿದೆ. ಇವು ಅವರನ್ನು ಅವರಲ್ಲೇ ಬಂಧಿಯಾಗುವಂತೆ ಮಾಡಿವೆ. ಸ್ಥಳಾಂತರ ಅವರ ಬದುಕು, ಆಲೋಚನಾ ಲಹರಿ, ಸೃಜನಶೀಲತೆ, ಮನೋಪ್ರವೃತ್ತಿ, ಮನೋಧೋರಣೆ, ಆಸೆ, ಆಸಕ್ತಿ, ಆಕಾಂಕ್ಷೆ, ಹವ್ಯಾಸ, ಅಭ್ಯಾಸ, ಇಚ್ಛಾಶಕ್ತಿ, ನಿಷ್ಠೆ, ಸಂಬಂಧಗಳು, ಸಂವಹನ, ಬೆರೆಯುವಿಕೆ ಇವೆಲ್ಲವುಗಳ ಮೇಲೆ ಋಣಾತ್ಮಕವಾದ ಪರಿಣಾಮವನ್ನು ಬೀರಿದೆ.

೪.೧.೧.೧. ಕುಣಬಿಯರು ಎದುರಿಸುತ್ತಿರುವ ಇನ್ನಿತರೆ ಸಾಮಾಜಿಕ ಸಮಸ್ಯೆಗಳು; ಕಾರಣಗಳು ಮತ್ತು ಪರಿಣಾಮಗಳು



ಪುನರ್ವಸತಿ ಕೇಂದ್ರದಲ್ಲಿರುವ ಸಂತ್ರಸ್ತ ಕುಣಬಿಯರು ಬಹುಮುಖ್ಯವಾಗಿ ಬಡತನ ಮತ್ತು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದಕ್ಕೆ ಈ ರೀತಿಯ ಅಂಶಗಳು ಕಾರಣೀಭೂತವಾಗಿದ್ದು ಅವರ ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಮೇಲೆ ಭಾರೀ ಪರಿಣಾಮವನ್ನು ಬೀರಿವೆ.

೪.೧.೧.೨. ಕುಣಬಿಯರು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು; ಕಾರಣ ಮತ್ತು ಪರಿಣಾಮಗಳು



ಪುನರ್ವಸತಿ ಕೇಂದ್ರದಲ್ಲಿರುವ ಸಂತ್ರಸ್ತ ಕುಣಬಿಯರು ಈ ಆರ್ಥಿಕ ಸಮಸ್ಯೆಯನ್ನು ಗಂಭೀರವಾಗಿ ಎದುರಿಸುತ್ತಿದ್ದಾರೆ. ಹಾಗೂ ಈ ಸಮಸ್ಯೆ ಅವರ ಸಂತ್ರಸ್ತ ಬದುಕನ್ನು ಇನ್ನಷ್ಟು ಸಂತ್ರಸ್ತವನ್ನಾಗಿಸಿದೆ.

ಈ ರೀತಿಯಾದ ವೈಯಕ್ತಿಕ, ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಸಂತ್ರಸ್ತ ಕುಣಬಿಯರು ಹಲವಾರು ಸಮಸ್ಯೆಗಳನ್ನು ಹೊಂದಿದ್ದಾರೆ. ಇದರಿಂದಾಗಿ ಅವರು ಮಾನಸಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಸಂತ್ರಸ್ತರಾದ ಇತರೇ ಸಮುದಾಯಗಳ ಮಧ್ಯೆ ಕುಣಬಿಯರು ಇನ್ನು ಕೂಡಾ ಸಾಕಷ್ಟು ಹಿಂದೆ ಉಳಿದಿದ್ದಾರೆ. ಕೆಲವೇ ಕೆಲವು ಜನರನ್ನು ಬಿಟ್ಟರೆ ಉಳಿದವರು ಪ್ರಗತಿಯ ಹಾದಿಯನ್ನು ತುಳಿದಿಲ್ಲ. ಇದಕ್ಕೆ ಬಾಹ್ಯ ಅಂಶಗಳು ಎಷ್ಟು ಕಾರಣವೋ ಅದಕ್ಕಿಂತ ಹೆಚ್ಚಾಗಿ ಕುಣಬಿಯರ ಆಂತರಿಕ ಅಂಶಗಳೇ ಕಾರಣವಾಗಿವೆ. ಇವರ ಸ್ವಭಾವ, ಕನ್ನಡ ಭಾಷೆಯ ಬಗ್ಗೆ ಅಸಡ್ಡೆ, ನಾಯಕರ ಮತ್ತು ಅಧಿಕಾರಿಗಳ ದುರಾಡಳಿತ, ಅಸಹಕಾರ ಮನೋಭಾವನೆ ಇವರನ್ನು ಇನ್ನು ಕೂಡಾ ಮುಖ್ಯವಾಹಿನಿಗೆ ತರಲಿಲ್ಲ.

೪.೨. ಸಂತ್ರಸ್ತರ ಪುನರ್ವಸತಿಗೆ ಪರಿಹಾರೋಪಾಯಗಳು

ಯೋಜನಾ ಸಂತ್ರಸ್ತರನ್ನು ಯೋಗ್ಯ ಹಾಗೂ ಸಮರ್ಪಕವಾಗಿ ಪುನರ್ವಸತಿಗೊಳಿಸುವುದು ಅತೀ ಅಗತ್ಯವಾಗಿದೆ. ಅದಕ್ಕಾಗಿ ಯಾವುದೇ ಒಂದು ಪುನರ್ವಸತಿ ಯೋಜನೆಯನ್ನು ಹೇಗೆ ಕೈಗೊಳ್ಳಬೇಕು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

೧. ವೈಯಕ್ತಿಕ ಪುನರ್ವಸತಿ

ತಾನು ಹುಟ್ಟಿ ಬೆಳೆದ ಮನೆ, ವಾತಾವರಣ, ಭೂಮಿ, ಆಸ್ತಿ, ನಾಡನ್ನು ಬಿಟ್ಟು ಬೇರೆಡೆಗೆ ಸ್ಥಳಾಂತರವಾದಾಗ ಯಾವುದೇ ವ್ಯಕ್ತಿಗಾದರೂ ಸಹಿಸಲಾರದ ವೇದನೆ, ದುಃಖ, ಜೀವ–ಜೀವನವನ್ನೇ ಕಳೆದುಕೊಂಡ ಆಘಾತ ಬರದಿರದು. ಇದರಿಂದ ಅವರು ಬೇರಡೆ ನೆಲೆಗೊಳ್ಳಲಾಗದೇ ಅತೀವವಾದ ಮಾನಸಿಕ ವೇದನೆಯಿಂದ ನರಳುವಂತಾಗುತ್ತದೆ. ಇದರಿಂದಾಗಿ ಅವರು ಬೇರೆ ಜನರ ಜೊತೆಗೆ ಬೆರೆಯುವುದು, ಕೆಲಸ ಕಾರ್ಯಗಳನ್ನು ಮಾಡುವುದು ಮತ್ತು ಸಂತೋಷವಾಗಿರುವುದನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದ ಸ್ಥಳಾಂತರಗೊಂಡ ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಪುನರ್ವಸತಿ ಅತೀ ಅಗತ್ಯವಾಗಿರುತ್ತದೆ. ಯಾವುದೇ ಒಂದು ಯೋಜನೆಯಿಂದಾಗಿ ಸ್ಥಳಾಂತರವಾಗುವ ಜನರು ಮತ್ತು ಮುಳುಗಡೆಯಾಗುವ ಪ್ರದೇಶವನ್ನು ಮೊದಲೇ ಗುರುತಿಸಬೇಕು. ಸ್ಥಳಾಂತರವಾಗುವ ಜನರಿಗೆ ಯೋಜನೆಯ ಪೂರ್ವದಲ್ಲಿಯೇ ಸರಿಯಾದ ಆಪ್ತಸಮಾಲೋಚನೆ, ಸಲಹೆ, ಮಾರ್ಗದರ್ಶನ ನೀಡಬೇಕು. ಆಪ್ತಸಮಾಲೋಚನೆ ಮಾಡುವುದರಿಂದ ಅವರ ನೋವುಗಳು, ಆಲೋಚನೆಗಳು ಮತ್ತು ಯೋಜನೆಗಳನ್ನು ತಿಳಿದುಕೊಳ್ಳಬಹುದು.

ಇದನ್ನು ವೃತ್ತಿಪರ ಸಮಾಜಕಾರ್ಯದ ಮುಖ್ಯ ವಿಧಾನಗಳಾದ ಏಕವ್ಯಕ್ತಿ ಅಧ್ಯಯನ, ವೃಂದಗತ ಕಾರ್ಯ, ಸಮುದಾಯ ಕಾರ್ಯ, ಸಾಮಾಜಿಕ ಅಭಿವೃದ್ಧಿ ಆಡಳಿತ ಮತ್ತು ಸಮಾಜ ಕಾರ್ಯ ಸಂಶೋಧನೆ ಇವುಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದರಿಂದ ವೈಯಕ್ತಿಕ ಪುನರ್ವಸತಿಯನ್ನು ಯಶಸ್ವಿಯಾಗಿ ಮಾಡಬಹುದು. ವ್ಯಕ್ತಿ ಮತ್ತು ವೃಂದ ಆಪ್ತಸಮಾಲೋಚನೆಯ ಮೂಲಕ ಅಭಿವೃದ್ಧಿಗಾಗಿ ಅವರಲ್ಲಿರುವ ವೈಯಕ್ತಿಕ ಸಮಸ್ಯೆಗಳನ್ನು ಹೋಗಲಾಡಿಸಬಹುದು. ಸಮುದಾಯದಲ್ಲಿ ಯೋಜನೆ ಮತ್ತು ಸ್ಥಳಾಂತರ, ಪುನರ್ವಸತಿ ಮತ್ತು ಮುಂದಿನ ಜೀವನದ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಕೈಗೊಂಡು ಯೋಜನಾ ಬಾಧಿತರಲ್ಲಿ ಭವಿಷ್ಯದ ಭಯ, ಆತಂಕಗಳನ್ನು ಹೋಗಲಾಡಿಸಿ ಮುಂದಿನ ಜೀವನಕ್ಕಾಗಿ ಧೈರ್ಯವಾಗಿ ಮುನ್ನುಗ್ಗುವಂತೆ ಪ್ರೇರಣೆ, ಮಾರ್ಗದರ್ಶನ ಮಾಡಬಹುದು. ಸಮಾಜ ಕಾರ್ಯ ಸಂಶೋಧನೆಯ ಮುಖಾಂತರ ಸಂತ್ರಸ್ತರ ಸ್ಥಳಾಂತರ ಪೂರ್ವ ಸಾಮಾಜಿಕ–ಆರ್ಥಿಕ ಅಧ್ಯಯನವನ್ನು ಮಾಡಬಹುದು. ಅವರ ಹಿಂದಿನ ಬದುಕಿನ ರೀತಿಯಲ್ಲೇ ಅವರನ್ನು ಮುಂದೆ ಪುನರ್ವಸತಿ ಕೇಂದ್ರದಲ್ಲಿ ಕೂಡಾ ನೆಲೆಗೊಳ್ಳುವಂತೆ ಸಾಮಾಜಿಕ ಅಭಿವೃದ್ಧಿ ಆಡಳಿತದ ಮೂಲಕ ಸಮಾಜ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೨. ಕೌಟುಂಬಿಕ ಪುನರ್ವಸತಿ

ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಬುಡಕಟ್ಟು ಜನರನ್ನು ಒಳಗೊಂಡಂತೆ ಹಲವಾರು ಸಮುದಾಯಗಳು ಪಾರಂಪರಿಕ ಅವಿಭಕ್ತ ಕುಟುಂಬಗಳಾಗಿ ವಾಸ ಮಾಡುತ್ತಿರುತ್ತಾರೆ. ಸ್ಥಳಾಂತರದ ಪರಿಹಾರ ನೀಡುವುದಕ್ಕಾಗಿ ಅವರನ್ನು ಪ್ರತ್ಯೇಕ ಕುಟುಂಬಗಳಾಗಿ ಪರಿಗಣಿಸಿ ಪರಿಹಾರ ನೀಡಬೇಕಾಗುತ್ತದೆ. ಇದರಿಂದಾಗಿ ಅವರ ಕೌಟುಂಬಿಕ ಜೀವನವನ್ನು ಒಡೆದಂತಾಗುತ್ತದೆ. ಹಲವಾರು ಸಂದರ್ಭದಲ್ಲಿ ಕೇವಲ ಯಜಮಾನನಿಗೆ ಮಾತ್ರ ಪರಿಹಾರ ಧನವನ್ನು ನೀಡಿದಾಗ ಕುಟುಂಬದ ಇತರರ ನಡುವೆ ಆಸ್ತಿಗಾಗಿ ಕೌಟುಂಬಿಕ ಕಲಹ ಏರ್ಪಡುತ್ತದೆ. ಆದ್ದರಿಂದ ಪುನರ್ವಸತಿ ನೆಲೆಯಲ್ಲಿ ಅವರನ್ನು ಕೌಟುಂಬಿಕವಾಗಿ ನಲೆಗೊಳಿಸುವುದು, ಅವರ ಆಸ್ತಿಯ ಒಡೆತನಗಳಿಗೆ ಸಮಸ್ಯೆಯಾಗದಂತೆ ಪರಿಹಾರವನ್ನು ಹಂಚುವುದು, ಉತ್ತಮ ಕೌಟುಂಬಿಕ ಜೀವನಕ್ಕೆ ಮಾರ್ಗದರ್ಶನ ನೀಡುವುದು ಅತೀ ಅಗತ್ಯ.

೩. ಸಾಮುದಾಯಿಕ ಪುನರ್ವಸತಿ

ಸ್ಥಳಾಂತರಗೊಳ್ಳುವವರು ಸಾಮಾನ್ಯವಾಗಿ ತಮ್ಮದೇ ಜಾತಿಯ ಕುಲಬಾಂಧವರೊಂದಿಗೆ ಅವರದ್ದೇ ಆದ ಪ್ರತ್ಯೇಕ ಸಮುದಾಯದಲ್ಲಿ ವಾಸ ಮಾಡುತ್ತಿರುತ್ತಾರೆ. ಸ್ಥಳಾಂತರದ ಪ್ರಕ್ರಿಯೆಯಲ್ಲಿ ಇದನ್ನು ಪರಿಗಣಿಸದೇ ಪುನರ್ವಸತಿಗೊಳಿಸಿದಾಗ ಸಂತ್ರಸ್ತರು ತಮ್ಮ ಸಮುದಾಯದ ಅನನ್ಯತೆಯನ್ನು ಕಳೆದುಕೊಂಡು ಬಿಡುತ್ತಾರೆ. ಇದರಿಂದಾಗಿ ಇವರು ತಮ್ಮ ಸಾಂಸ್ಕೃತಿಕತೆ, ಉಡುಗೆ ಸ್ವಾತಂತ್ರ್ಯ, ಆಹಾರ ಸ್ವಾತಂತ್ರ್ಯವನ್ನು ಕಳೆದುಕೊಂಡು ಬಿಡುತ್ತಾರೆ. ಆದ್ದರಿಂದ ಪುನರ್ವಸತಿ

ಸಂದರ್ಭದಲ್ಲಿ ಅವರು ಸ್ಥಳಾಂತರಕ್ಕಿಂತ ಹಿಂದೆ ಯಾವ ರೀತಿಯ ಸಾಮುದಾಯಿಕ ಚೌಕಟ್ಟಿನಲ್ಲಿ ವಾಸ ಮಾಡುತ್ತಿದ್ದಾರೋ ಅದೇ ಸಾಮುದಾಯಿಕತೆಯಲ್ಲಿ ಪುನರ್ವಸತಿಗೊಳಿಸಬೇಕಾಗುತ್ತದೆ.

೪. **ಸಾಮುದಾಯಿಕ ಸಂಪನ್ಮೂಲದ ಪುನರ್ವಸತಿ**

ಸ್ಥಳಾಂತರಕ್ಕಿಂತ ಮೊದಲು ಜನರು ತಮ್ಮ ಸುತ್ತ ಮುತ್ತಲ ಸಮುದಾಯ ಸಂಪನ್ಮೂಗಳನ್ನು ಅಗತ್ಯಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಿರುತ್ತಾರೆ. ಕಲ್ಲು, ಮಣ್ಣು, ಮರಳು, ಉರುವಲು, ಮೇವು, ಸೊಪ್ಪು, ಕಾಡಿನ ಕಿರು ಸಂಪನ್ಮೂಲಗಳು, ನೀರು, ಉಳುಮೆ ಜಾಗ ಇತ್ಯಾದಿಯಾಗಿ ಬಳಸಿಕೊಳ್ಳುತ್ತಾರೆ. ಆದ್ದರಿಂದ ಪುನರ್ವಸತಿ ನೆಲೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಇವುಗಳು ಲಭ್ಯವಿರುವಂತೆ ಮಾಡುವುದು ಒಳಿತು. ಅವರಿಗೆ ಬೇಕಾದ ಸಾಮುದಾಯಿಕ ಸಂಪನ್ಮೂಲಗಳಿಗೆ ಯಾವುದೇ ರೀತಿಯ ಕೊರತೆ ಇಲ್ಲದಿದ್ದರೆ ಮಾತ್ರ ಅವರು ತಾವು ಮೊದಲಿನಂತೆ ವಾಸವಿದ್ದೇವೆ ಎಂದು ಭಾವಿಸಿಕೊಳ್ಳಲು ಸಾಧ್ಯ.

೫. **ಪರಿಸರದ ಪುನರ್ವಸತಿ**

ಸಂತ್ರಸ್ತರು ಹೆಚ್ಚಾಗಿ ಕಾಡು ಪ್ರದೇಶದಲ್ಲಿ, ಸ್ವಾಭಾವಿಕ ಪ್ರದೇಶದಲ್ಲಿ, ತುಂಬಾ ಶಾಂತವಾದ ಪ್ರದೇಶದಲ್ಲಿ ವಾಸವಾದವರಾಗಿರುತ್ತಾರೆ. ಆದ್ದರಿಂದ ಅವರಿಗೆ ಅನುಕೂಲವಾಗುವಂತೆ ಪುನರ್ವಸತಿ ಕೇಂದ್ರದಲ್ಲಿ ಸಾಮಾಜಿಕ ಅರಣ್ಯ ನಿರ್ಮಾಣ ಮಾಡಿಕೊಟ್ಟರೆ ಸ್ವಲ್ಪ ಮಟ್ಟಿಗಾದರೂ ಅವರ ಹಿಂದಿನ ಪರಿಸರದ ಪುನರ್ವಸತಿಯಾದಂತಾಗುತ್ತದೆ.

೬. **ಸಾಮಾಜಿಕ ಸಂಘಟನೆಗಳ ಪುನರ್ವಸತಿ**

ಸಂತ್ರಸ್ತರು ಭಜನಾ ಮಂಡಳಿ, ಯುವಕ–ಯುವತಿಯರ ಸಂಘಗಳು, ಸ್ವ ಸಹಾಯ ಸಂಘಗಳು, ಮನೋರಂಜನಾ ಕೇಂದ್ರಗಳು, ಕ್ರೀಡೆಗಳು ಹೀಗೆ ಹಲವಾರು ಸಾಮಾಜಿಕ ಕೊಂಡಿಗಳನ್ನು ಇಟ್ಟುಕೊಂಡು ಬದುಕಿರುತ್ತಾರೆ. ಸ್ಥಳಾಂತರದಿಂದಾಗಿ ಇವೆಲ್ಲವುಗಳನ್ನು ಮುರಿದಂತಾಗುತ್ತದೆ. ಪುನರ್ವಸತಿ ಕೇಂದ್ರದಲ್ಲಿ ಇವುಗಳಿಗೆಲ್ಲಾ ಅವಕಾಶವಿರುವಂತೆ ಪುನರ್ವಸತಿಯಾದರೆ ಅವರು ಮತ್ತೆ ಸಾಮಾಜಿಕ ಕೊಂಡಿಗಳನ್ನು ಬೆಳೆಸಿಕೊಳ್ಳಬಹುದು.

೭. **ಶೈಕ್ಷಣಿಕ ಪುನರ್ವಸತಿ**

ಏಕಾಏಕಿ ಸ್ಥಳಾಂತರವಾದಾಗ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಕಾಡಿನ ಜನರ ಭಾಷೆ, ನಾಡಿನ ಜನರ ಭಾಷೆಗೆ ಹೊಂದಾಣಿಕೆಯಾಗುವುದಿಲ್ಲ. ಸಂತ್ರಸ್ತರು ಮಾನಸಿಕವಾಗಿ ಆರ್ಥಿಕವಾಗಿ ಕುಗ್ಗಿ ಹೋಗಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೊಡಕುಂಟಾಗುತ್ತದೆ. ಆಧುನಿಕ ಶಿಕ್ಷಣಕ್ಕೆ ಕಾಡಿನ ಮಕ್ಕಳು ಹೊಂದಿಕೊಳ್ಳುವುದು ಕಷ್ಟವಾಗಬಹುದು. ಆದ್ದರಿಂದ ಪುನರ್ವಸತಿ ಕೇಂದ್ರದಲ್ಲಿ ಸಂತ್ರಸ್ತ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ತೊಡಕುಂಟಾಗದಂತೆ ಪುನರ್ವಸತಿ ಮಾಡಬೇಕು.

೮. **ಸಾಂಸ್ಕೃತಿಕ ಪುನರ್ವಸತಿ**

ಸ್ಥಳಾಂತರಪೂರ್ವದಲ್ಲಿ ಜನರು ಅವರದ್ದೇ ಆದ ಸಾಂಸ್ಕೃತಿಕ ಚಟುವಟಿಕೆಗಳನ್ನು, ರೂಢಿ ಸಂಪ್ರದಾಯಗಳನ್ನು ನಡೆಸಿಕೊಂಡು ಬರುತ್ತಿರುತ್ತಾರೆ. ಸ್ಥಳಾಂತರವಾದಾಗ ಅವರ ಈ ಚಟುವಟಿಕೆಗಳಿಗೆ ಪ್ರೋತ್ಸಾಹ ಸಿಗದೇ ಇರಬಹುದು. ಇತರ ಸಮುದಾಯಗಳ ಸಹಕಾರ ಸಿಗದೇ ಇರಬಹುದು. ಆದ್ದರಿಂದ ಅವರ ಸಾಂಸ್ಕೃತಿಕ ಅನನ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪುನರ್ವಸತಿ ಮಾಡಬೇಕು. ಪುನರ್ವಸತಿ ಕೇಂದ್ರದಲ್ಲಿ ಅವರ ಸಾಂಸ್ಕೃತಿಕ ಆಚರಣೆಗಳಿಗೆ ಪೂರಕವಾಗುವಂತೆ ಪನರ್ವಸತಿ ಮಾಡಬೇಕು.

೯. **ಧಾರ್ಮಿಕ ಪುನರ್ವಸತಿ**

ವಿವಿಧ ಧರ್ಮದ ಜನರನ್ನು ಒಂದು ಕಡೆ ಪುನರ್ ನೆಲೆಗೊಳಿಸಿದಾಗ ಅವರ ಧರ್ಮದ ಆಚರಣೆಗಳಿಗೆ ತೊಂದರೆ ಬರದಂತೆ ಪುನರ್ವಸತಿಗೊಳಿಸಬೇಕು. ಅವರವರ ಧರ್ಮದ ಆರಾಧನಾ ಸ್ಥಳಗಳನ್ನು ಮತ್ತೆ ನಿರ್ಮಾಣ ಮಾಡುವುದು, ಅವರವರ ಧರ್ಮದ ಸ್ಮಶಾನ ನಿರ್ಮಾಣ ಮಾಡುವುದು ಧಾರ್ಮಿಕ ಪುನರ್ವಸತಿಯಾಗುತ್ತದೆ.

೧೦. **ಆರ್ಥಿಕ ಚಟುವಟಿಕೆಗಳಾದ ಭೂಮಿ, ದುಡಿಮೆ, ಬಂಡವಾಳ, ಸಂಸ್ಥೆಗಳ ಪುನರ್ವಸತಿ**

ಕಳೆದುಕೊಂಡ ಭೂಮಿಗೆ ಫಲವತ್ತತೆಯ, ನೀರಿನ ಸೌಲಭ್ಯವಿರುವ ವ್ಯವಸಾಯ ಭೂಮಿಯನ್ನು ಪುನರ್ವಸತಿ ಕೆಂದ್ರದಲ್ಲಿ ದೊರಕಿಸಿಕೊಡುವುದು. ಅವರವರ ಕೌಶಲ್ಯಕ್ಕೆ ತಕ್ಕಂತೆ ಉದ್ಯೋಗಾವಕಾಶ, ಉದ್ಯೋಗದ ಕೌಶಲ್ಯ ಒದಗಿಸುವುದು, ಪೂರಕ ಉದ್ಯೋಗವನ್ನು ದೊರಕಿಸಿಕೊಡುವುದು. ಜೀವವಿಮೆ, ಬೆಳೆ ವಿಮೆ, ಸಹಕಾರಿ ಸಂಘ ಇವುಗಳಿಗೆ ವ್ಯವಸ್ಥೆ ಮಾಡುವುದು. ವ್ಯವಸಾಯ, ವಸತಿ ನಿರ್ಮಾಣಕ್ಕಾಗಿ ಬ್ಯಾಂಕು ಸಾಲ ಸೌಲಭ್ಯ ದೊರಕಿಸಿಕೊಡುವುದು. ಈ ಎಲ್ಲಾ ವ್ಯವಸ್ಥೆಗಳಿಂದ ಆರ್ಥಿಕ ಪುನರ್ವಸತಿ ಸೌಲಭ್ಯವನ್ನು ನೀಡುವುದು.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ತಕ್ಕಂತೆ ಪುನರ್ವಸತಿ ಯೋಜನೆಯನ್ನು ಹಮ್ಮಿಕೊಂಡರೆ ಯೋಜನಾ ಸಂತ್ರಸ್ತರಿಗೆ ಸಮಸ್ಯೆಗಳು ಬಂದೊದಗುವುದು ಕಡಿಮೆಯಾಗುತ್ತದೆ. ಅವರು ಉತ್ತಮವಾದ ರೀತಿಯಲ್ಲಿ ಮತ್ತೆ ತಮ್ಮ ಜೀವನವನ್ನು ಕಟ್ಟಿಕೊಳ್ಳಬಹುದಾಗಿದೆ.

೪.೩. ಸಂತ್ರಸ್ತ ಕುಣಬಿಯರ ಪರಿಸ್ಥಿತಿಯ ಪುನರ್ನಿರ್ಮಾಣ

ಸ್ಥಳಾಂತರ ಮತ್ತು ಅಸಮರ್ಪಕ ಪುನರ್ವಸತಿ ಯೋಜನೆಯಿಂದಾಗಿ ಸಂತ್ರಸ್ತರು ಮನೋ-ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದರಿಂದಾಗಿ ಅವರು ಮಾನಸಿಕ, ಸಾಮಾಜಿಕ ಮತ್ತು ಆರ್ಥಿಕ ವಿಪತ್ತನ್ನು ಅನುಭವಿಸುತ್ತಿದ್ದಾರೆ. ಪ್ರಾಕೃತಿಕ ವಿಕೋಪಗಳಿಂದ ಉಂಟಾಗುವ ನಷ್ಟವನ್ನು ವಿಪತ್ತು ಎಂದು ಪರಿಗಣಿಸುವ ನಮ್ಮ ದೇಶದಲ್ಲಿ ಕೋಟ್ಯಂತರ ಜನರನ್ನು ತಮ್ಮ ಮೂಲನೆಲೆಯಿಂದ ಎಬ್ಬಿಸಿ

ತಲೆತಲಾಂತರಕ್ಕೆ ನಷ್ಟವನ್ನು ತಂದೊಡ್ಡುವ ಸ್ಥಳಾಂತರವು ವಿಪತ್ತು ಎನಿಸುವುದಿಲ್ಲ. ರಾಷ್ಟ್ರೀಯ ಹಿತ, ಅಭಿವೃದ್ಧಿ ಎಂಬ ಹೆಸರಿನಲ್ಲಿ ಕೈಗೊಳ್ಳುವ ಯೋಜನೆಗಳು ತಮ್ಮಿಂದ ಉಂಟಾಗುವ ಸಂತ್ರಸ್ತರ ನಷ್ಟವನ್ನು ರಾಷ್ಟ್ರೀಯ ವಿಪತ್ತು ಎಂದು ಪರಿಗಣಿಸುವುದಿಲ್ಲ. ಅವರ ಪುನರ್ವಸತಿ ಕಾರ್ಯಕ್ರಮವನ್ನು ಒಂದು ರಾಷ್ಟ್ರೀಯ ಕಾರ್ಯಕ್ರಮವಾಗಿ ಕೈಗೊಳ್ಳುವುದಿಲ್ಲ. ಯಶಸ್ವಿಯಾಗಿ ಅವುಗಳನ್ನು ಅನುಷ್ಠಾನಗೊಳಿಸುವುದಿಲ್ಲ. ಆದ್ದರಿಂದ ಸಂತ್ರಸ್ತರನ್ನು ವಿನೂತನವಾಗಿ ಪುನರ್ನಿರ್ಮಾಣ ಮಾಡುವ ಆಲೋಚನೆಯನ್ನು ಪ್ರಸ್ತುತ ಅಧ್ಯಯನ ಹೊಂದಿದೆ.

ಹೀಗೆ ಸಂತ್ರಸ್ತ ಕುಣಬಿಯರು ಎದುರಿಸುತ್ತಿರುವ ಸಮಸ್ಯೆಗಳು ಅದಕ್ಕೆ ಕಾರಣಗಳು ಹಾಗೂ ಪರಿಣಾಮಗಳನ್ನು ಅಧ್ಯಯನ ಮಾಡಲಾಗಿದೆ. ಅವರಲ್ಲಿ ಮನೋ-ಸಾಮಾಜಿಕ ವಿಪತ್ತನ್ನು ಗುರುತಿಸಲಾಗಿದೆ. ಇದರಿಂದಾಗಿ ಮಾನವನ ಉನ್ನತಿಗಾಗಿ ಅವನ ಮನೋವೈಜ್ಞಾನಿಕ ಅಭಿವೃದ್ಧಿಯ ಅಗತ್ಯತೆಯನ್ನು ಅರಿಯಲಾಗಿದೆ. ಸಂತ್ರಸ್ತ ಕುಣಬಿಯರ **ಮನೋ-ಸಾಮಾಜಿಕ-ಆರ್ಥಿಕ ಪುನರ್ನಿರ್ಮಾಣ**ದ ಚಿಂತನೆ ಮಾಡಿ ಮನೋ-ವೈಜ್ಞಾನಿಕ, ಮನೋ-ಸಾಮಾಜಿಕ ಮತ್ತು ಮನೋ-ಆರ್ಥಿಕ ಅಭಿವೃದ್ಧಿ ಎಂಬ ಮಾದರಿಗಳನ್ನು **ವೃತ್ತಿಪರ ಸಮಾಜಕಾರ್ಯದ ವಿ**ಧಾನಗಳ ಅಡಿಯಲ್ಲಿ ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

೪.೩.೧. ಸಂತ್ರಸ್ತ ಕುಣಬಿಯರ ಮನೋ-ವೈಜ್ಞಾನಿಕ ಪುನರ್ನಿರ್ಮಾಣ

ಮನುಷ್ಯ ತನ್ನ ಬದುಕಿನಲ್ಲಿ ಬದಲಾವಣೆಯನ್ನು ಕಾಣುವಲ್ಲಿ ಅವನ ಮನಸ್ಥಿತಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಧನಾತ್ಮಕವಾದ ಧೋರಣೆ, ಆಲೋಚನೆ, ಕ್ರಿಯೆ, ಧೃಢ ನಿರ್ಧಾರ, ಸೃಜನಶೀಲತೆ ಯಾರನ್ನೇ ಆದರೂ ಯಶಸ್ಸಿನತ್ತ ಒಯ್ಯುತ್ತದೆ. ಇದಕ್ಕೆ ತಕ್ಕುದಾದ ಸಲಹೆ, ಮಾರ್ಗದರ್ಶನ, ಪ್ರೋತ್ಸಾಹ ದೊರೆತು ನಿರಂತರ ಪ್ರಯತ್ನ ಇದ್ದರೆ ವ್ಯಕ್ತಿಯೊಬ್ಬ ನಿಶ್ಚಿತ ಗುರಿಯನ್ನು ಮುಟ್ಟಬಹುದು. ಆದರೆ ತಾನು ಬದಲಾವಣೆ ಹೊಂದಬೇಕು ಎಂಬ ವಿಚಾರ ವ್ಯಕ್ತಿಯೊಬ್ಬನಲ್ಲಿ ಮೂಡಿದಾಗ ಮಾತ್ರ ಇವೆಲ್ಲಾ ಲಭಿಸಲು ಸಾಧ್ಯ.

ಕುಣಬಿಯರು ಹೊರ ರಾಜ್ಯದಿಂದ ಬಂದು ಕಾಡಿನಲ್ಲಿ ನೆಲೆಸಿದ್ದ ಕಾರಣಕ್ಕೋ ಅಥವಾ ಅವರ ರೂಢಿ ಸಂಪ್ರದಾಯಗಳ ಪ್ರಭಾವವೋ ತುಂಬಾ ಮುಚ್ಚಿದ ಸ್ವರೂಪದ ಸ್ವಭಾವವನ್ನು ಹೊಂದಿದ್ದಾರೆ. ತಮ್ಮದೇ ಜಾತಿ ಸಮುದಾಯದ ಮಧ್ಯೆ ನೆಲೆಸಿಕೊಂಡು ತಮ್ಮ ಕಟ್ಟುಪಾಡುಗಳಿಂದ ಆಚೆ ಆಲೋಚಿಸಲಾರರು. ಅದನ್ನು ಬಿಟ್ಟು ಹೊರಗೆ ಬರಲಾರರು. ಸ್ಥಳಾಂತರಗೊಂಡು ಸಂತ್ರಸ್ತರಾದ ಕುಣಬಿಯರ ಮಾನಸಿಕ ಪರಿಸ್ಥಿತಿ ಇನ್ನೂ ಹೆಚ್ಚಿಗೆ ವಿಕೋಪಕ್ಕೀಳಿದಿದೆ. ಅವರ ಹಿನ್ನಡೆಗೆ ಮನೋಪ್ರವೃತ್ತಿ ಮತ್ತು ಮನೋಧೋರಣೆಗಳೇ ಕಾರಣೀಭೂತವಾಗಿವೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಆದ್ದರಿಂದ ಅವರಲ್ಲಿ ಬದುಕನ್ನು ಸವಾಲಾಗಿ ತೆಗೆದುಕೊಂಡು ಯೋಜನಾಬದ್ಧವಾಗಿ ಮನ್ನಡೆಸಿಕೊಂಡು ಹೋಗುವ ಮನಸ್ಸು ಮತ್ತು ಕೌಶಲ್ಯವನ್ನು

ತುಂಬಬೇಕಾಗಿದೆ. ಸಂತ್ರಸ್ತ ಕುಣಬಿಯರ ಮನಸ್ಸನ್ನು ಯಾವ ರೀತಿಯಾಗಿ ತಯಾರಿ ಮಾಡುವ ಅವಶ್ಯಕತೆ ಇದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೪.೩.೧.೧. ಸಂತ್ರಸ್ತ ಕುಣಬಿಯರು ಸ್ವ–ವಾಸ್ತವೀಕರಣ ಹೊಂದುವಂತೆ ಮಾಡುವುದು

ಸ್ಥಳಾಂತರವಾಗಿ ಮೂವತ್ತೈದು ವರ್ಷಗಳೇ ಕಳೆದರೂ ಸಂತ್ರಸ್ತ ಕುಣಬಿಯರು ಇನ್ನೂ ಕೂಡಾ ಹಳೆ ಜೀವನದ ಗುಂಗಿನಲ್ಲಿ ವಾಸ ಮಾಡುತ್ತಿದ್ದಾರೆ. ಹಿಂದಿನ ಬದುಕಿನ ವೈಶಿಷ್ಟ್ಯ, ಲಾಭಗಳನ್ನು ನೆನೆದು ಈಗಲೂ ಏನೂ ಮಾಡದ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಹಿಂದಿನ ಸಂಪನ್ಮೂಲ, ಬದುಕು ಈಗ ಇದ್ದಿದ್ದರೆ ಎನ್ನುವ ಇತಿಹಾಸದ ಆಲೋಚನೆಯಿಂದ ನೋವನ್ನು ತಂದುಕೊಳ್ಳುತ್ತಿದ್ದಾರೆ. ಆದ್ದರಿಂದ ಅವರ ಮನಸ್ಸನ್ನು ಪ್ರಸ್ತುತ ಬದುಕಿಗೆ ಸ್ವ–ವಾಸ್ತವೀಕರಣಗೊಳಿಸುವುದು ಅತೀ ಅಗತ್ಯವಾಗಿದೆ. ಪ್ರಥಮವಾಗಿ ಅವರನ್ನು ಹತಾಶ ಭಾವನೆಯಿಂದ ಹೊರಗೆ ತರಬೇಕು. ನೋವು, ಪ್ರಸ್ತುತದ ಬಗೆಗಿನ ತಾತ್ಸಾರ, ಹೊಸದೇನನ್ನೂ ಸ್ವೀಕಾರ ಮಾಡದ ಸ್ವಭಾವ, ತನ್ನನ್ನು ತಾನು ಅಭಿವ್ಯಕ್ತಗೊಳಿಸಿಕೊಳ್ಳದೇ ಸಂಕುಚಿತವಾಗಿರುವ ಸ್ವಭಾವ ಮುಂತಾದವುಗಳಿಂದ ಅವರು ಹೊರಗೆ ಬರಬೇಕು. ತಮ್ಮ ಹಿಂದಿನ ಮತ್ತು ಈಗಿನ ಬದುಕಿನ ನಡುವಿನ ಸೌಭಾಗ್ಯ ಮತ್ತು ದೌರ್ಭಾಗ್ಯಗಳ ಚಿಂತನೆಗಳ ಸಂಘರ್ಷಗಳಿಂದ ಮುಕ್ತರಾಗಬೇಕು. ಪರಿಸ್ಥಿತಿ ಮತ್ತು ವ್ಯವಸ್ಥೆಯ ಬಗ್ಗೆ ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ಆಲೋಚನೆ ಮಾಡುವಂತಾಗಬೇಕು. ಪ್ರಸ್ತುತ ಇರುವ ವ್ಯವಸ್ಥೆಯನ್ನು ಸ್ವೀಕಾರ ಮಾಡಿ ಎಲ್ಲರ ಜೊತೆಗೆ ನವಿರಾದ ಸಂಬಂಧಗಳನ್ನು ಏರ್ಪಡಿಸಿಕೊಳ್ಳಬೇಕು. ಜೀವನದ ಎಲ್ಲಾ ಆಗು ಹೋಗುಗಳನ್ನು ವಾಸ್ತವಕ್ಕೆ ತಂದು ಆಲೋಚನೆ ಮಾಡಿ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಂಡು ಅದರಂತೆ ಸಾಹಸದಿಂದ ಮನ್ನಡೆದು ಜೀವನದಲ್ಲಿ ಆಂತರಿಕ ಸಂತುಷ್ಟತೆಯನ್ನು ಹೊಂದಬೇಕು. ಈ ರೀತಿಯಾಗಿ ಅವರು ಸ್ವ–ವಾಸ್ತವೀಕರಣಗೊಂಡಾಗ ಮಾತ್ರ ಎಲ್ಲವನ್ನೂ ತೆರೆದ ಮನಸ್ಸಿನಿಂದ ನೋಡಿ ಅವಲೋಕನ ಮಾಡಿ ಮುಕ್ತವಾಗಿ ಬದುಕಲು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಎಷ್ಟೇ ಯೋಜನೆಗಳು ಬಂದರೂ ಅವರು ಅವರಲ್ಲೇ ಬಂಧಿಯಾಗಿರುತ್ತಾರೆ.

೪.೩.೧.೨. ಸ್ವ–ಅರಿವು ಹೊಂದಿ ಸ್ವಯಂ ಪರಿಶೋಧನೆ ಮತ್ತು ಸ್ವಯಂ ವರ್ಧನೆಯಿಂದ ಸ್ವಯಂ ಪರಿಪೂರ್ಣತೆ ಸಾಧಿಸುವುದು

ಸ್ವ–ಅರಿವು ಎಂದರೆ ವ್ಯಕ್ತಿಯೊಬ್ಬ ತನ್ನಲ್ಲಿರುವ ಸಾಧಕ ಬಾಧಕಗಳನ್ನು ತಿಳಿದುಕೊಳ್ಳುವುದು. ಸ್ವಯಂ ಪರಿಶೋಧನೆ ಎಂದರೆ ತನ್ನ ಶಕ್ತಿ, ದೌರ್ಬಲ್ಯ, ಅವಕಾಶಗಳು, ತೊಂದರೆಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಅದಕ್ಕೆ ತಕ್ಕಂತೆ ಜೀವನದ ತಯಾರಿಯನ್ನು ಮಾಡಿಕೊಳ್ಳುವುದು. ಕುಣಬಿಯರು ತಮ್ಮ ಶಕ್ತಿ–ಸಾಮರ್ಥ್ಯಗಳು ಮತ್ತು ಬಲಹೀನತೆಯ ಅರಿವನ್ನು ಹೊಂದಬೇಕು. ಇವರು ತಮ್ಮ

ಹಿಂದಿನ ಶಕ್ತಿ ಸಾಮರ್ಥ್ಯಗಳನ್ನು ಪುನರ್ ಮನನ ಮಾಡಿಕೊಂಡು ತಮ್ಮನ್ನು ತಾವು ತಿಳಿದುಕೊಳ್ಳಬೇಕು. ತಮ್ಮ ಬಗ್ಗೆ ಅರಿವನ್ನು ಹೊಂದಿ ಅದರಲ್ಲಿ ಯೋಗ್ಯ ಬದಲಾವಣೆಗಳನ್ನು ತಂದುಕೊಳ್ಳಬೇಕು. ತಮ್ಮ ಸಾಮರ್ಥ್ಯಗಳನ್ನು ಬಳಕೆ ಮಾಡಿಕೊಳ್ಳುವಲ್ಲಿ ಅರಿವು ಹೆಚ್ಚಿಸಿಕೊಳ್ಳಬೇಕು. ಆತ್ಮ ವಿಶ್ವಾಸವನ್ನು ವೃದ್ಧಿಸಿಕೊಳ್ಳಬೇಕು. ಆಶಾಭಂಗಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ರಕ್ಷಣಾ ತಂತ್ರಗಳನ್ನು ಬೆಳೆಸಿಕೊಳ್ಳಬೇಕು. ಬದಲಾವಣೆಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು. ಅವಕಾಶಗಳು ದೊರೆತಾಗ ಪ್ರತಿಕ್ರಿಯಿಸಲು ಸಿದ್ಧರಾಗಿರಬೇಕು. ಪ್ರಾಮಾಣಿಕತೆಯಿಂದ ಎಲ್ಲರೂ ಒಗ್ಗಟ್ಟಾಗಬೇಕು. ಯಶಸ್ಸಿನತ್ತ ತಾವೇ ದಾಪುಗಾಲು ಇಡಬೇಕು.

ಕುಣಬಿಯರು ತಮ್ಮಲ್ಲಿ ಸೃಜನಶೀಲತೆಯನ್ನು ವಿಕಾಸ ಮಾಡಿಕೊಂಡು ಸಮಸ್ಯೆಯ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಸಮಸ್ಯೆಗೂ ತಮಗೂ ಸಂಬಂಧವೇ ಇಲ್ಲದಂತೆ ಬಂದ ಹಾಗೆ ಕಾಲ ಕಳೆಯಬಾರದು. ಸಮಸ್ಯೆ ಪರಿಹಾರಕ್ಕೆ ಅಗತ್ಯವಾದ ಮಾಹಿತಿಯನ್ನು ಪಡೆದುಕೊಂಡು ಅದನ್ನು ಹೋಗಲಾಡಿಸಿಕೊಳ್ಳಲು ಶಕ್ತಿ ಮೀರಿ ಪ್ರಯತ್ನ ಪಡಬೇಕು. ಸಮಾಜದ ಆಗುಹೋಗುಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ ಆಸಕ್ತಿ ತೋರಿ ತಮ್ಮ ಮನೋಭಾವನೆಯನ್ನು ಧನಾತ್ಮಕವಾಗಿ ಬದಲಾಯಿಸಿಕೊಳ್ಳಬೇಕು.

ಯೋಜನೆಯಿಂದ ಸಂತ್ರಸ್ತರಾಗಿ ಬಡತನ, ಮಾನಸಿಕ ವೇದನೆ, ಗೊಂದಲಮಯ ವಾತಾವರಣ ಈ ರೀತಿಯಲ್ಲಿ ಉಂಟಾದ ಬದಲಾವಣೆಗಳು ಅವರಿಗೆ ಹುಟ್ಟಿದ ಮಕ್ಕಳ ಮೇಲೆ ಪರಿಣಾಮ ಬೀರಿರಬೇಕು. ಮೂರು ತಲೆಮಾರುಗಳು ಹೀಗೆ ಬದುಕು ಸಾಗಿ ಬಂದಿರುವುದರಿಂದಾಗಿ ಅವರಲ್ಲಿ ಭವಿಷ್ಯದ ಬಗ್ಗೆ ಆಲೋಚನಾ ಸಾಮರ್ಥ್ಯ, ವಿವೇಚನಾಶಕ್ತಿ, ತರ್ಕಸಾಮರ್ಥ್ಯ, ನಿರ್ವಹಣಾ ಕೌಶಲ್ಯಗಳಲ್ಲಿ ಕೊರತೆ ಉಂಟಾಗಿದೆ. ಅವರ ವರ್ತನೆ, ಮನೋಭಾವ, ವಿಚಾರ ಎಲ್ಲವೂ ಧನಾತ್ಮಕವಾಗಿ ಬದಲಾಗಲು ಸಾಧ್ಯವಾಗದ ರೀತಿಯಲ್ಲಿದೆ. ಆದರೂ ಪ್ರಸ್ತುತ ತಲೆಮಾರುಗಳು ತುಂಬಾ ತೀವ್ರಗತಿಯಲ್ಲಿ ಬದಲಾಗುತ್ತಿರುವುದರಿಂದ ಕುಣಬಿಯರು ಕೂಡಾ ತೀವ್ರತರವಾಗಿ ಬದಲಾಗಲೇಬೇಕು.

ಅಧಿಕಾರಿಗಳು ಮೋಸ ಮಾಡುತ್ತಾರೆ, ಸರ್ಕಾರ ಏನೂ ಮಾಡಲಿಲ್ಲ ಎಂದು ಖಾಲಿ ಇರುವ ಬದಲು ತಮ್ಮ ಪಾಲಿಗೆ ಬಂದ ಮನೆ, ನಿವೇಶನ, ಜಮೀನು ಇವುಗಳನ್ನು ಎಷ್ಟು ಉಪಯೋಗಿಸಿಕೊಳ್ಳಲಾಗುತ್ತೋ ಅಷ್ಟು ಪ್ರಯತ್ನಪಡುವ ಮನಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ನಾವು ಹೀಗೇ ಇರುವುದು, ನಾವು ಇಂತದ್ದೇ ಮಾಡುವುದು, ಅದಿಲ್ಲದಿದ್ದರೆ ನಾವು ಬೇರೆ ಮಾಡಲಿಕ್ಕೆ ಆಗುವುದಿಲ್ಲ ಎಂಬ ಮನೋಭಾವನೆಯನ್ನು ಹೋಗಲಾಡಿಸಿ ಅದರಿಂದ ಹೊರಗೆ ಬರಬೇಕು. ಸಮಾಜದಲ್ಲಿ ಏನೇ ಹೊಸತನ ಕಂಡುಬಂದರೂ ಅದನ್ನು ನಾವು ತಿಳಿದುಕೊಳ್ಳಬೇಕು, ಪಡೆದುಕೊಳ್ಳಬೇಕು ಎಂಬ ಉತ್ಸುಕತೆಯನ್ನು ಬೆಳೆಸಿಕೊಳ್ಳಬೇಕು. ಯಾವ ಪ್ರಯೋಜನಗಳಿರಬಹುದು ಅಥವಾ ಯಾವುದೇ ಯೋಜನೆಗಳಿರಬಹುದು ತಮ್ಮ ಕಾಲು ಬುಡಕ್ಕೆ ಬಂದು ಬೀಳುವುದಿಲ್ಲ.

ಅದನ್ನು ನಾವು ಸಾಕಷ್ಟು ಗಂಡಾಂತರಗಳನ್ನು ಎದುರಿಸಿಯೇ ನಮ್ಮದಾಗಿಸಿಕೊಳ್ಳಬೇಕು. ಬರುವ ಗಂಡಾಂತರಗಳನ್ನು ಸ್ವೀಕರಿಸುವ ಮುಕ್ತ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು.

ಮನೋಧೋರಣೆಗಳು ವ್ಯಕ್ತಿಯ ಎಲ್ಲಾ ವರ್ತನೆಗಳ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ಕುಣಬಿಯರು ತಮ್ಮ ಮನೋಧೋರಣೆಗಳನ್ನು ಅವಶ್ಯವಾಗಿ ಬದಲಾಯಿಸಿಕೊಳ್ಳಬೇಕು. ಅಪೇಕ್ಷಿತ ಮನೋಧೋರಣೆಗಳನ್ನು ಬೆಳೆಸಿಕೊಳ್ಳಬೇಕು. ಇವರಲ್ಲಿ ಹೆಚ್ಚಿನವರು ತಟಸ್ಥ ಮನೋಧೋರಣೆಯನ್ನು ಹೊಂದಿದ್ದಾರೆ. ಕೆಲವರು ಋಣಾತ್ಮಕವಾದ ಮನೋಧೋರಣೆಯನ್ನು ಹೊಂದಿದ್ದಾರೆ. ಧನಾತ್ಮಕ ಮನೋಧೋರಣೆ ಕೇವಲ ಕೆಲವೇ ಜನರಲ್ಲಿದೆ. ಬೇರೆ ಬೇರೆ ಚಟುವಟಿಕೆಗಳಲ್ಲಿ, ಯೋಜನೆಗಳಲ್ಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮನೋಧೋರಣೆಯನ್ನು ಬೆಳೆಸಿಕೊಳ್ಳಬೇಕು. ಭಾವನೆಗಳನ್ನು ಮುಕ್ತವಾಗಿ ಅಭಿವ್ಯಕ್ತಗೊಳಿಸುವ ಮನೋಧೋರಣೆ ಇರಬೇಕು. ಇವರು ಸಹಕಾರ ಮನೋಭಾವ, ಸಾಂಘಿಕ ಮನೋಭಾವ, ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು ಅತೀ ಅಗತ್ಯವಿದೆ.

ಯಾವ ಕಾರ್ಯವನ್ನು ಮಾಡಬೇಕಾದರೂ ಆಸಕ್ತಿಯಿರಬೇಕು. ಇದು ಕೆಲಸ ಕಾರ್ಯಗಳನ್ನು ಪ್ರಚೋದಿಸುತ್ತದೆ. ಸಕ್ರಿಯವಾಗಿ ಪಾಲ್ಗೊಳ್ಳುವಂತೆ, ಶ್ರಮವಹಿಸುವಂತೆ ಪ್ರೇರೇಪಿಸುತ್ತದೆ. ಯೋಜನಾ ಬಾಧಿತರಾಗಿ ಎಲ್ಲವನ್ನೂ ಕಳೆದುಕೊಂಡ ಕಾರಣ ಇವರಲ್ಲಿ ಆಸಕ್ತಿ ಕಡಿಮೆಯಾಗಿರಬಹುದು. ಆದರೂ ಅದನ್ನೇ ತಲೆತಲಾಂತರಕ್ಕೂ ಮುಂದುವರಿಸಿಕೊಂಡು ಬರುವುದು ಸರಿಯಲ್ಲ. ಜೀವನದ ಪ್ರಗತಿಗಾಗಿ ಪ್ರತಿಯೊಂದು ಆಗು ಹೋಗುಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಲೇ ಬೇಕು.

ಸರ್ಕಾರದ ಕಾರ್ಯಕ್ರಮಗಳು ಕೂಡಾ ಯೋಜನಾ ಬಾಧಿತ ಕುಟುಂಬದವರ ಮನಸ್ಸನ್ನು ಅರಿಯಬೇಕು. ಭವಿಷ್ಯಕ್ಕೆ ಸಂಬಂಧ ಪಟ್ಟಂತೆ ಅವರಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂಬುದನ್ನು ಮನಗಾಣಬೇಕು. ಆಸಕ್ತಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ಯೋಜನಾ ಬದ್ಧವಾಗಿ ತಯಾರಿಸಬೇಕು. ಯೋಜನೆಯು ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳನ್ನು ರೂಪಿಸಿಕೊಂಡಿರಬೇಕು. ಯೋಜನೆಯ ಅಗತ್ಯತೆ ಮತ್ತು ಪ್ರಾಮುಖ್ಯತೆಯ ಬಗ್ಗೆ ತಿಳಿಹೇಳಬೇಕು. ಅವರನ್ನು ಅವರು ಈಗಿರುವ ಮನಸ್ಥಿತಿಯಿಂದ, ಪರಿಸ್ಥಿತಿಯಿಂದ ಅವಶ್ಯವಾಗಿ ಹೊರಗೆ ತರಲೇಬೇಕು. ಇದಕ್ಕೆ ಸರ್ಕಾರದ ವಿವಿಧ ಇಲಾಖೆಗಳ ಸಹಕಾರ ಅತೀ ಅಗತ್ಯ.

ಕುಣಬಿಯರಿಗೆ ಆಂತರಿಕ ಅಭಿಪ್ರೇರಣೆ ಮತ್ತು ಬಾಹ್ಯ ಅಭಿಪ್ರೇರಣೆ ಅಗತ್ಯವಾಗಿ ಆಗಬೇಕಾಗಿದೆ. ಅಭಿಪ್ರೇರಣೆ ಎಂದರೆ ವ್ಯಕ್ತಿಯನ್ನು ಕಾರ್ಯೋನ್ಮುಖನನ್ನಾಗಿ ಅಥವಾ ಕ್ರಿಯಾಶೀಲನನ್ನಾಗಿ ಮಾಡುವಂತಹ ಪ್ರಕ್ರಿಯೆಯಾಗಿದೆ. ಅಗತ್ಯತೆಗಳ ಪೂರೈಕೆಗಾಗಿ ವ್ಯಕ್ತಿ ಅಭಿಪ್ರೇರಣೆಯನ್ನು ಹೊಂದಿರಬೇಕಾಗಿರುತ್ತದೆ.

ಈ ರೀತಿಯಾಗಿ ಅವರಲ್ಲಿ ಮನೋ-ವೈಜ್ಞಾನಿಕ ಪುನರ್ನಿರ್ಮಾಣ ಮಾಡಬೇಕಾದರೆ ವೃತ್ತಿಪರ ಸಮಾಜಕಾರ್ಯದಲ್ಲಿನ ವಿಧಾನಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದು ಫಲದಾಯಕವಾಗಬಹುದು. ಪ್ರತಿಯೊಬ್ಬರ ಮನೆಭೇಟಿ ಮಾಡಿ ವ್ಯಕ್ತಿಗತ ಮತ್ತು ವೃಂದಗತ ಆಪ್ತಸಮಾಲೋಚನೆ ಕೈಗೊಳ್ಳಬೇಕು. ಜೀವನದ ಅವಕಾಶಗಳಿಗಾಗಿ ಮತ್ತು ಜೀವನದ ಹೋರಾಟಕ್ಕಾಗಿ ಅವರ ಮನಸ್ಥಿತಿಯನ್ನು ತಯಾರಿ ಮಾಡಬೇಕು. ವೃಂದಗತ ಸಮಾಜಕಾರ್ಯದಲ್ಲಿ ಇವರ ಸಾಮಾಜಿಕ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಶೈಕ್ಷಣಿಕ ಮತ್ತು ಪ್ರಗತಿ ವರ್ಧನಾ ವೃಂದ ಕಾರ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಂಡು ಅವರು ಅದರಲ್ಲಿ ಪರಿಣಾಮಕಾರಿಯಾಗಿ ಭಾಗಿಯಾಗುವಂತೆ ಮಾಡಬೇಕು. ತನ್ನ ಎಲ್ಲಾ ವೈಯಕ್ತಿಕ ಮತ್ತು ಸಾಮಾಜಿಕ ನ್ಯೂನತೆಗಳನ್ನು ಹೋಗಲಾಡಿಸುವಲ್ಲಿ ಇಂತಹ ಪ್ರಕ್ರಿಯೆಗಳು ಅವರಿಗೆ ಸಹಕಾರಿಯಾಗಬೇಕು.

ಬದುಕನ್ನು ಹೀಗೆ ಹಾಳು ಮಾಡಿಕೊಳ್ಳುವ ಬದಲು ಬದುಕಿಗೊಂದು ಒಳ್ಳೆ ಉದ್ದೇಶವನ್ನು ಇಟ್ಟುಕೊಂಡು ಅದನ್ನು ಸಾಧಿಸುವಲ್ಲಿ ಉಪಕ್ರಮಿಸುವ ಮನೋಭಾವನೆಯನ್ನು ಮತ್ತೆ ಅವರಲ್ಲಿ ಬೆಳೆಸಬೇಕಾಗಿದೆ. ಈ ಹಂತದಲ್ಲಿ ಸಮಗ್ರತೆ ಮತ್ತು ಹತಾಶೆಯ ಭಾವನೆಗಳ ಮಧ್ಯೆ ಸಮತೋಲನವನ್ನು ಉಂಟುಮಾಡಿ, ಕೇವಲ ಹಿಂದಿನ ತೃಪ್ತಿದಾಯಕವಾದ ಜೀವನದ ಬಗ್ಗೆ ನೆನೆದು ಚಿಂತೆಗೊಳಗಾಗದೇ ಮುಂದಿನ ಜನಾಂಗದ ದಿನವನ್ನು ಆಶಾಭಾವದಿಂದ ಹಾಗೂ ಉತ್ಪಾದನಾತ್ಮಕವಾಗಿ ಕಳೆಯುವಂತೆ ಅವರಲ್ಲಿ ವಿವೇಕ, ಬುದ್ಧಿವಂತಿಕೆಯನ್ನು ತುಂಬಬೇಕಾಗಿದೆ. ಇವರು ಬಾಹ್ಯ ಪ್ರಪಂಚಕ್ಕೆ ತೆರೆದುಕೊಳ್ಳಬೇಕು. ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬೇಕು. ಸಹಾಯ ಮಾಡಲು ಬರುವವರಿಗೆ ಸ್ಪಂದಿಸಬೇಕು. ನಂಬಿಕೆ ಬೆಳೆಸಿಕೊಳ್ಳಬೇಕು. ಆಸಕ್ತಿ ತೋರಬೇಕು. ಪ್ರಪಂಚವನ್ನು ಕಣ್ತೆರೆದು ನೋಡಲು ಮನಸ್ಸು ಮಾಡಬೇಕು. ಧನಾತ್ಮಕವಾಗಿ ಬದಲಾವಣೆಯಾಗುವ ಅಗತ್ಯತೆಯನ್ನು ಕಂಡುಕೊಳ್ಳಬೇಕು. ಅವರ ಬದುಕಿನ ಪರಿಪೂರ್ಣತೆಗಾಗಿ ಸ್ವತಃ ಕುಣಬಿಯರು, ಇಲಾಖೆಗಳು, ಸಂಘ ಸಂಸ್ಥೆಗಳು, ವೃತ್ತಿಪರ ಸಮಾಜಕಾರ್ಯಕರ್ತರು ಒಂದುಗೂಡಿ ವಿನೂತನ ಕಾರ್ಯಕ್ರಮದೊಂದಿಗೆ ವಿಶೇಷ ಕಾಳಜಿ, ಆಸಕ್ತಿ, ಪ್ರೋತ್ಸಾಹ ಮತ್ತು ಮಾರ್ಗದರ್ಶನ ಕೈಗೊಳ್ಳುವ ಅವಶ್ಯಕತೆ ಇದೆ. ಮತ್ತು ಅದನ್ನು ಸಾಧ್ಯವಾದಷ್ಟು ಜರೂರಾಗಿ ಕೈಗೊಳ್ಳಬೇಕಾದ ಅನಿವಾರ್ಯತೆ ಇದೆ.

೪.೩.೨. ಸಂತ್ರಸ್ತ ಕುಣಬಿಯರ ಮನೋ-ಸಾಮಾಜಿಕ ಪುನರ್ನಿರ್ಮಾಣ

ಮನೋ-ಸಾಮಾಜಿಕ ಪುನರ್ನಿರ್ಮಾಣ ಎಂದರೆ ವ್ಯಕ್ತಿ-ಸಮಾಜ ಮತ್ತು ಅಲ್ಲಿನ ಸಂಘ ಸಂಸ್ಥೆಗಳ ನಡುವೆ ಸಂಬಂಧವನ್ನು ಉತ್ತಮವಾದ ರೀತಿಯಲ್ಲಿ ಪುನರ್ನಿರ್ಮಾಣ ಮಾಡುವುದು. ಕುಣಬಿಯರು ಸಮುದಾಯದ ಇತರರೊಡನೆ ಬೆರೆತು, ಸಮುದಾಯ ಸಂಘಗಳಲ್ಲಿ ಧನಾತ್ಮಕ ರೀತಿಯಲ್ಲಿ ಭಾಗಿಯಾಗಿ, ತಮ್ಮ ಬೇಡಿಕೆಗಳನ್ನು ಅರಿತು ಅವುಗಳನ್ನು ಯಶಸ್ವಿಯಾಗಿ ಪೂರೈಸಿಕೊಂಡು ಬದುಕನ್ನು ಅಭಿವೃದ್ಧಿಯತ್ತ ಒಯ್ಯುವಂತೆ

ಮಾಡಬೇಕಾಗಿದೆ. ಇದಕ್ಕಾಗಿ ಅವರಿಗೆ ಬದಲಾಗಿರುವ ಸಾಮಾಜಿಕ ಸನ್ನಿವೇಶಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಡಬೇಕು. ತಮ್ಮ ಜಾತಿಯ ಕಟ್ಟುನಿಟ್ಟಿನ ರೂಢಿ ಸಂಪ್ರದಾಯಗಳ ಋಣಾತ್ಮಕತೆಯ ಬಗ್ಗೆ ವಿವೇಚನೆ ಮೂಡಿಸಬೇಕು. ವೇಗದ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕಾದರೆ ಆಧುನಿಕ ಸಮಾಜ ಯಾವ ರೀತಿ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಿದೆ ಎಂಬ ಅರಿವು ಅವರಲ್ಲಿ ಮೂಡುವಂತೆ ಮಾಡಬೇಕು. ಆಧುನಿಕ ಸಮಾಜಕ್ಕೆ ತಮ್ಮ ಬದುಕನ್ನು ಒಗ್ಗಿಸಲು ತಮ್ಮ ಸಂಪ್ರದಾಯ ಬದ್ಧ ಆಚರಣೆಗಳಲ್ಲಿ ವೈಜ್ಞಾನಿಕವಾದ ಬದಲಾವಣೆಯನ್ನು ಹೊಂದಲೇಬೇಕಾದ ಅನಿವಾರ್ಯತೆಯ ಅರಿವು ಮೂಡಿಸಬೇಕು. ಅದಕ್ಕಾಗಿ ಅವರಿಗೆ ಆಪ್ತಸಮಾಲೋಚನೆ, ಸಲಹೆ, ಮಾರ್ಗದರ್ಶನ, ಪ್ರೋತ್ಸಾಹ ಅತೀ ಅಗತ್ಯ. ಸಮಾಜ ಕಾರ್ಯ ಅಧ್ಯಯನದ ವ್ಯಕ್ತಿಗತ, ವೃಂದಗತ ಹಾಗೂ ಸಮುದಾಯ ಅಭಿವೃದ್ಧಿ ಸಮಾಜಕಾರ್ಯ ಮತ್ತು ಸಾಮಾಜಿಕ ಅಭಿವೃದ್ಧಿ ಆಡಳಿತ ಎಂಬ ವಿಧಾನಗಳನ್ನು ಅಳವಡಿಸಿಕೊಂಡು ಇವರಲ್ಲಿ ಮನೋ–ಸಾಮಾಜಿಕ ಪುನರ್ನಿರ್ಮಾಣವನ್ನು ಮಾಡಬಹುದಾಗಿದೆ.

ಪುನರ್ವಸತಿ ಕೇಂದ್ರದಲ್ಲಿ ಸರ್ಕಾರದ ವತಿಯಿಂದ ಸಲಹಾ ಕೇಂದ್ರವನ್ನು ಸ್ಥಾಪಿಸಬೇಕು. ಸಮುದಾಯ ಸಂಘಟಕ ಮತ್ತು ಆಪ್ತಸಮಾಲೋಕ ಹುದ್ದೆಯನ್ನು ತೆರೆಯಬೇಕು. ಸಮುದಾಯ ಸಂಘಟಕರು ಸಮುದಾಯದ ಮನೆಭೇಟಿ ಮಾಡಿ ಅವರ ವೈಯಕ್ತಿಕ, ಸಾಮಾಜಿಕ, ಆರ್ಥಿಕ ಅಂಶಗಳನ್ನು ಅಧ್ಯಯನ ಮಾಡಬೇಕು. ವೃಂದಕಾರ್ಯದ ಮೂಲಕ ಸಂಘಗಳನ್ನು ಸ್ಥಾಪಿಸಿ ಅದರಲ್ಲಿ ಎಲ್ಲರೂ ಸದಸ್ಯತ್ವವನ್ನು ಪಡೆದುಕೊಳ್ಳವಂತೆ ಮಾರ್ಗದರ್ಶನ ಮತ್ತು ಪ್ರೇರಣೆ ನೀಡಬೇಕು. ಸಮುದಾಯವನ್ನು ಸಂಘಟಿಸಿ ಸರ್ಕಾರದ ಸವಲತ್ತುಗಳನ್ನು ಯಾವ ರೀತಿಯಾಗಿ ಪಡೆದುಕೊಳ್ಳಬೇಕು, ಯೋಜನೆಗಳ ಸದುಪಯೋಗ ಹೇಗೆ ತೆಗೆದುಕೊಳ್ಳಬೇಕು ಎಂಬ ಮಾರ್ಗದರ್ಶನ ನೀಡಬೇಕು. ಸಲಹಾ ಕೇಂದ್ರಕ್ಕೆ ಆಹ್ವಾನಿಸಿ ಅಗತ್ಯ ಆಪ್ತಸಮಾಲೋಚನೆ ಮಾಡಬೇಕು. ಅಭಿವೃದ್ಧಿಗೆ ಹೆಜ್ಜೆ ಇಡುವ ಹಾಗೆ ಅವರನ್ನು ಪ್ರೇರೇಪಿಸಬೇಕು. ಅದಕ್ಕೆ ತಕ್ಕುದಾದ ಕೌಶಲ್ಯ ಮತ್ತು ಸಹಾಯ ಧನಕ್ಕಾಗಿ ಇತರೇ ಸಂಸ್ಥೆಗಳೊಂದಿಗೆ ಸಂಪರ್ಕ ಏರ್ಪಡಿಸಬೇಕು. ಸಮಾಜದ ಸಂಸ್ಥೆಗಳ ಜೊತೆಗೆ ಸಂಬಂಧ ಮತ್ತು ಬಾಂಧವ್ಯವನ್ನು ರೂಪಿಸಿಕೊಳ್ಳುವಂತೆ ಸಲಹೆ, ಮಾರ್ಗದರ್ಶನ ನೀಡಬೇಕು. ಇವರಲ್ಲಿ ಸಾಮಾಜಿಕ ಅಂತರ್ ಕ್ರಿಯೆ, ಸಾಮಾಜಿಕ ಸಾಮರ್ಥ್ಯಗಳು ಮತ್ತು ಪರಿಣಾಮಕಾರಿ ಸಂವಹನವನ್ನು ವೃದ್ಧಿಸಬೇಕು. ಇವರ ಮಾನವ ಶಕ್ತಿ ಸದ್ಬಳಕೆಯಾಗುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು.

ಸಂತ್ರಸ್ತ ಕುಣಬಿಯರ ಹಿಂದುಳಿರುವಿಕೆಗೆ ಪ್ರಮುಖವಾಗಿ ಕಾರಣವಾಗಿರುವಂತಹ ಅವರ ಕಠಿಣ ರೂಢಿಸಂಪ್ರದಾಯಗಳಲ್ಲಿ ಗಣನೀಯವಾಗಿ ಬದಲಾವಣೆಗಳನ್ನು ತರಿಸುವಲ್ಲಿ ಸಾಮಾಜಿಕ ಸಂಘಟನೆಗಳು ಹಾಗೂ ವೃತ್ತಿಪರ ಸಮಾಜಕಾರ್ಯಕರ್ತರು ಮಹತ್ತರವಾದ ಪಾತ್ರವನ್ನು ವಹಿಸಬೇಕಾಗಿದೆ.

೪.೩.೩. ಸಂತ್ರಸ್ತ ಕುಣಬಿಯರ ಮನೋ-ಆರ್ಥಿಕ ಪುನರ್ನಿರ್ಮಾಣ

ಆರ್ಥಿಕ ಪುನರ್ನಿರ್ಮಾಣ ಎಂದರೆ ಜಮೀನು, ಉದ್ಯೋಗ, ಬಂಡವಾಳ, ಉಳಿತಾಯ ಮತ್ತು ಆರ್ಥಿಕ ಸಂಸ್ಥೆಗಳನ್ನು ಉನ್ನತೀಕರಿಸುವುದು. ಮನೋ-ಆರ್ಥಿಕ ಎಂದರೆ ಆರ್ಥಿಕ ಚಟುವಟಿಕೆಗಳ ವೃದ್ಧಿಗಾಗಿ ಸಂತ್ರಸ್ತ ಕುಣಬಿಯರಲ್ಲಿ ಧನಾತ್ಮಕ ಧೋರಣೆ, ಸೃಜನಶೀಲತೆ, ಅಭಿಪ್ರೇರಣೆ ಮತ್ತು ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ತುಂಬುವುದು. ಅದಕ್ಕಾಗಿ ವೃತ್ತಿಯ ಬಗ್ಗೆ ಅವರಲ್ಲಿರುವ ನಿಷ್ಕ್ರೀಯ ಮನೋಭಾವವನ್ನು ಹೋಗಲಾಡಿಸಬೇಕು. ಆರ್ಥಿಕ ವಿಚಾರಗಳಲ್ಲಿ ಅವರು ಪಾಲಿಸುತ್ತಿರುವ ಋಣಾತ್ಮಕ ರೂಢಿಸಂಪ್ರದಾಯಗಳನ್ನು ಹೋಗಲಾಡಿಸಬೇಕಾದ ಅನಿವಾರ್ಯತೆಯನ್ನು ಮನವರಿಕೆ ಮಾಡಬೇಕು. ಎಲ್ಲಾ ವಿಧದ ಆರ್ಥಿಕ ರಂಗಗಳಲ್ಲಿ ಮುನ್ನುಗ್ಗುವಂತೆ ಅವರಲ್ಲಿ ಜಾಗೃತಿ ಮೂಡಿಸಬೇಕು. ಸರ್ಕಾರದ ವಿವಿಧ ಇಲಾಖೆಗಳು ಅಲ್ಲಿ ಆರ್ಥಿಕತೆಗೆ ಮೂಲಭೂತ ಸಂಪನ್ಮೂಲಗಳ ವೃದ್ಧಿ, ಮೌಲ್ಯವರ್ಧನಾ ಚಟುವಟಿಕೆಗಳಿಗೆ ತರಬೇತಿ ಮತ್ತು ಪ್ರೋತ್ಸಾಹ, ಹಾಗೂ ಇರುವ ಜಮೀನಿನ ಸಮರ್ಪಕ ಸದ್ಬಳಕೆಗೆ ಪೂರಕವಾಗುವಂತಹ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬೇಕು. ಯಾರಲ್ಲಿ ಹೊಲವಿದೆಯೋ ಅಲ್ಲಿ ಭೂಸಾರ ಸಂರಕ್ಷಣೆ ಮಾಡಬೇಕು. ಉಳುಮೆ, ಬಿತ್ತನೆ, ನೀರಾವರಿಗೆ ವೈಜ್ಞಾನಿಕ ವಿಧಾನವನ್ನು ದೊರಕಿಸಿಕೊಡಬೇಕು. ಬೇಸಾಯ ಮತ್ತು ಮಾರಾಟಕ್ಕಾಗಿ ಯೋಗ್ಯ ಸಾರಿಗೆ ಸಂಪರ್ಕ ಸೌಲಭ್ಯ ಒದಗಿಸಬೇಕು. ಪೂರಕ ಮಾರುಕಟ್ಟೆ ಸೌಲಭ್ಯ ನಿರ್ಮಾಣ ಮಾಡಬೇಕು. ಜಮೀನು ಅಭಿವೃದ್ಧಿ ಮತ್ತು ಫಲದಾಯಕ ಬೆಳೆ ಬೆಳೆಯಲು ರಿಯಾಯಿತಿ ದರದಲ್ಲಿ ಬ್ಯಾಂಕ್ ಸಾಲ ಸೌಲಭ್ಯ ದೊರಕುವಂತೆ ಮಾಡಬೇಕು. ರಾಮನಗರದಲ್ಲಿ ಕಾರ್ಖಾನೆಗಳ ನಿರ್ಮಾಣವಾದರೆ ಎಲ್ಲರಿಗೂ ಉದ್ಯೋಗ ಸೌಲಭ್ಯ ದೊರೆಯುತ್ತದೆ. ಹಣಕಾಸಿನ ಸಂಸ್ಥೆಗಳು ಇವರಿಗೆ ಕೌಶಲ್ಯ ವೃದ್ಧಿ ತರಬೇತಿಗಳನ್ನು ಕೈಗೊಂಡು ಸ್ವ-ಉದ್ಯೋಗವನ್ನು ಮಾಡುವಂತೆ ಸಲಹೆ, ಮಾರ್ಗದರ್ಶನ, ಸಹಾಯ ಮತ್ತು ಪ್ರೇರೇಪಣೆ ನೀಡಬೇಕು. ಅವರು ಲಾಭದಾಯಕ ಚಟುವಟಿಕೆಗಳನ್ನು ಕೈಗೊಂಡು ಉಳಿತಾಯ ಮಾಡುವಂತೆ ವೃತ್ತಿ ಮಾರ್ಗದರ್ಶನ ಶಿಬಿರಗಳನ್ನು ಎಲ್ಲಾ ಸಮುದಾಯ ಸಂಘ ಸಂಸ್ಥೆಗಳು ಏರ್ಪಡಿಸಬೇಕು. ಒಟ್ಟಾರೆಯಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಮುನ್ನುಗ್ಗುವಂತೆ ಕುಣಬಿಯರನ್ನು ಪ್ರೋತ್ಸಾಹಿಸಬೇಕು.

ರಾಮನಗರವು ಸಂತ್ರಸ್ತರ ಪುನರ್ವಸತಿ ಕೇಂದ್ರವಾಗಿರುವುದರಿಂದ ಇದನ್ನು ವಿಶೇಷ ಆಡಳಿತ ವಲಯ ಎಂದು ಪರಿಗಣಿಸಬೇಕು. ಇಲ್ಲಿ ವೃತ್ತಿ ಮಾರ್ಗದರ್ಶನ ಕೇಂದ್ರ ತೆರೆಯಬೇಕು. ವ್ಯವಹಾರ ಆಪ್ತಸಮಾಲೋಚನೆ ಸೌಲಭ್ಯ ಎಲ್ಲಾ ಸಂತ್ರಸ್ತರಿಗೂ ಲಭ್ಯವಾಗುವಂತೆ ಮಾಡಬೇಕು. ಪ್ರತಿಯೊಬ್ಬರೂ ಏನಾದರೊಂದು ಕೆಲಸ ಮಾಡಿ ಆದಾಯಗಳಿಸುವಂತೆ ಪ್ರೇರೇಪಣೆ ನೀಡಬೇಕು. ಜಾರಿಯಾಗುವ ಎಲ್ಲಾ ಯೋಜನೆಗಳನ್ನು ಸಂತ್ರಸ್ತರಿಗೆ ತಲುಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂಬುದನ್ನು ಆಡಳಿತ ವರ್ಗದವರಿಗೆ ಮನವರಿಕೆ ಮಾಡಬೇಕು. ಯೋಜನೆಯ ಪ್ರಯೋಜನಗಳನ್ನು ಹೇಗೆ

ಪಡೆದುಕೊಳ್ಳಬೇಕು ಎಂಬುದನ್ನು ಸಂತ್ರಸ್ತರಿಗೆ ತಿಳಿ ಹೇಳಬೇಕು. ನಿಷ್ಪಕ್ಷವಾದ, ನಿರ್ಭಯವಾದ, ಪ್ರಾಮಾಣಿಕವಾದ, ಪರಿಶುದ್ಧವಾದ, ದಕ್ಷವಾದ ಆಡಳಿತ ವ್ಯವಸ್ಥೆ ಇಲ್ಲಿ ಅವಶ್ಯವಾಗಿ ಜಾರಿಯಾಗಬೇಕಾಗಿದೆ. ಸಂತ್ರಸ್ತರು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳನ್ನು ಕೂಲಂಕುಷವಾಗಿ ವಿಶ್ಲೇಷಿಸಿ ಅವುಗಳಿಗೆ ಯೋಗ್ಯ ಪರಿಹಾರವನ್ನು ಸರ್ಕಾರ ನೀಡಬೇಕಾಗಿದೆ.

ಉಪಸಂಹಾರ

ಪುನರ್ವಸತಿ ಕೇಂದ್ರಗಳಲ್ಲಿನ ಸಂತ್ರಸ್ತ ಕುಣಬಿಯರು ಎದುರಿಸುತ್ತಿರುವ ಸಮಸ್ಯೆ, ಕಾರಣ ಹಾಗೂ ಪರಿಣಾಮಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಪುನರ್ವಸತಿಗಾಗಿ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆ. ಅವರ ಪುನರ್ನಿರ್ಮಾಣಕ್ಕಾಗಿ ಮನೋವೈಜ್ಞಾನಿಕ ವೃತ್ತಿಪರ ಸಮಾಜಕಾರ್ಯದ ತಳಹದಿಯಡಿಯಲ್ಲಿ ಮನೋ–ಸಾಮಾಜಿಕ–ಆರ್ಥಿಕ ಪುನರ್ನಿರ್ಮಾಣ ಮಾದರಿಯನ್ನು ರೂಪಿಸಿ ಪ್ರಸ್ತುತ ಪಡಿಸಲಾಗಿದೆ. ಯಾವುದೇ ವ್ಯಕ್ತಿಯ ಮನೋಧೋರಣೆ ಮತ್ತು ಆಲೋಚನೆ ಧನಾತ್ಮಕವಾಗಿ ಪರಿವರ್ತನೆಗೊಂಡು ಪ್ರಸ್ತುತ ಬದುಕಿನ ಬಗ್ಗೆ ಇಚ್ಛಾಶಕ್ತಿ ಹೆಚ್ಚಾದರೆ ಅವರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ತನ್ನಿಂತಾನೇ ಸುಧಾರಣೆಯಾಗಿ ಬದುಕು ಸುಗಮವಾಗುತ್ತದೆ ಎಂಬುದಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಹೆಚ್ಚು ಒತ್ತು ಕೊಡಲಾಗಿದೆ.

ಅಧ್ಯಾಯ : ಐದು

ಸಮಾರೋಪ

ಪೀಠಿಕೆ

ರಾಷ್ಟ್ರೀಯ ಅಭಿವೃದ್ಧಿ ಎಂಬ ಇಚ್ಛಾಶಕ್ತಿಯನ್ನು ಇಟ್ಟುಕೊಂಡು ಕೈಗೊಳ್ಳಲಾದ ಬೃಹತ್ ಅಭಿವೃದ್ಧಿ ಯೋಜನೆಗಳ ತಾತ್ವಿಕತೆ ಹಾಗೂ ಪರಿಣಾಮಗಳ ಅಧ್ಯಯನ ಮಾಡಿ ಸಂತ್ರಸ್ತರ ಪುನರ್ವಸತಿ ಮತ್ತು ಪುನರ್ನಿರ್ಮಾಣ ಮಾದರಿಗಳನ್ನು ರೂಪಿಸಲಾಗಿದೆ. ಈ ಒಂದು ಆಳವಾದ ಅಧ್ಯಯನದಿಂದ ಕೆಲವು ಪ್ರಮುಖ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಮೌಲ್ಯಯುತವಾದ ಸಲಹೆಗಳನ್ನು ನೀಡಲಾಗಿದೆ.

೫.೧. ಅಧ್ಯಯನದ ಫಲಿತಗಳು

೧) ಸೂಪಾ ಜಲಾಶಯ ನಿರ್ಮಾಣದ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮವು ನಿಯಮಾನುಸಾರವಾಗಿ ಕಾರ್ಯನಿರ್ವಹಿಸದ ಕಾರಣದಿಂದ ಸಂತ್ರಸ್ತರನ್ನು ಸಕಾಲಕ್ಕೆ ಸೂಕ್ತವಾದ ರೀತಿಯಲ್ಲಿ ಪುನರ್ವಸತಿಗೊಳಿಸುವುದು ಸಾಧ್ಯವಾಗದೆ ಸಮುದಾಯಗಳು ಇಂದಿಗೂ ಸಂಕಷ್ಟದಲ್ಲಿ ಬದುಕುವಂತಾಗಿದೆ.

೨) ಯೋಜನೆಯು ಕಾಲಬದ್ಧವಾಗಿ ಅನುಷ್ಠಾನಗೊಳ್ಳದೆ ಇರುವುದರಿಂದ ಸಂಕಷ್ಟಕ್ಕೆ ಒಳಗಾದ ಸಂತ್ರಸ್ತ ಕುಣಬಿಯರ ಬದುಕಿನ ಮೇಲೆ ಋಣಾತ್ಮಕ ಪರಿಣಾಮ ಉಂಟಾಗಿದ್ದು ವ್ಯಕ್ತಿಗತವಾಗಿ ಮಾನಸಿಕ ಹಿಂಜರಿತ, ಸಾಮಾಜಿಕ ಮತ್ತು ಆರ್ಥಿಕ ತೊಂದರೆಯನ್ನು ಎದುರಿಸುವಂತಾಗಿದೆ.

೩) ಸರ್ಕಾರದ ಯೋಜನೆಯ ಉದ್ದೇಶ ಈಡೇರಿದೆಯಾದರೂ ಸಂತ್ರಸ್ತ ಸಮುದಾಯದವರಿಗೆ ಪುನರ್ವಸತಿ ಕಾರ್ಯವು ಸಮರ್ಪಕವಾಗಿ ನಡೆಯದ ಕಾರಣ ತಡವಾಗಿಯಾದರೂ ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

೫.೨. ಸಲಹೆಗಳು

೧) ಯಾವುದೇ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ ಪೂರ್ವದಲ್ಲಿ ಅಲ್ಲಿನ ಮೂಲನಿವಾಸಿಗಳ ಬದುಕಿನ ಅನನ್ಯತೆಯ ಆಳವನ್ನು ಅಧ್ಯಯನ ಮಾಡಬೇಕು. ಸ್ಥಳಾಂತರವಾದ ಮೇಲೆ ಅವರ ಬದುಕಿನ ಅಪರೂಪತೆಗಳನ್ನು ಮತ್ತೆ ಪಡೆದುಕೊಳ್ಳಲು ಸಾಧ್ಯವೇ? ಅದಕ್ಕೆ ಯಾವುದೇ ರೀತಿಯ ತೊಡಕು, ನಷ್ಟ ಉಂಟಾಗುವುದಿಲ್ಲವೇ ಎಂಬುದನ್ನು ಮಾನವಶಾಸ್ತ್ರಜ್ಞರಿಂದ ಅಧ್ಯಯನಕ್ಕೊಳಪಡಿಸಿ ದೃಢೀಕರಿಸಿಕೊಳ್ಳಬೇಕು. ಒಂದು ವೇಳೆ ಅಪರೂಪದ ವೈಶಿಷ್ಟ್ಯವನ್ನು ಅವರು ಹೊಂದಿದ್ದಲ್ಲಿ ಹಾಗೂ ಅದನ್ನು ಮತ್ತೆಂದೂ ಕಟ್ಟಿಕೊಳ್ಳಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಆ ನಿಗಧಿತ ಜಾಗದಲ್ಲಿ ಅಂತಹ ಯೋಜನೆಗಳನ್ನು ನಿರ್ಮಿಸಲೇ ಬಾರದು.

೨) ಪ್ರಾಕೃತಿಕ-ಸಾಮಾಜಿಕ-ಆರ್ಥಿಕ ದೃಷ್ಟಿಯಿಂದ ಅತ್ಯಂತ ಕಡಿಮೆ ನಷ್ಟಕ್ಕೊಳಗಾಗುವ ಪ್ರದೇಶದಲ್ಲಿ ಬೃಹತ್ ಯೋಜನೆಗಳನ್ನು ಕೈಗೊಂಡರೆ ಉತ್ತಮ. ಜನರ ಸ್ಥಳಾಂತರಕ್ಕೆ ಈಡುಮಾಡುವ ಬೃಹತ್ ಯೋಜನೆಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿದರೆ ಉತ್ತಮ.

೩) ಮೂಲನಿವಾಸಿಗಳ ಸ್ಥಳಾಂತರಕ್ಕೆ ಕಾರಣವಾಗುವ ಯಾವುದೇ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ ಪ್ರಾರಂಭದಲ್ಲೇ ಸಂತ್ರಸ್ತರಾಗುವವರ ಕುಟುಂಬದ ಸದಸ್ಯರಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ಅವರನ್ನು ವ್ಯವಸ್ಥಿತ ಆರ್ಥಿಕ ಮತ್ತು ಔದ್ಯೋಗಿಕ ಪುನರ್ವಸತಿಗೆ ತಯಾರಿ ನಡೆಸಬೇಕು. ಅವರ ಸಂತ್ರಸ್ತ ಜೀವನದ ಬಗ್ಗೆ ಆಪ್ತಸಮಾಲೋಚನೆ, ಯೋಗ್ಯ ಮಾರ್ಗದರ್ಶನ, ಬೆಂಬಲ, ಪ್ರೋತ್ಸಾಹ ನೀಡಲು ಸಲಹಾ ಮತ್ತು ಮಾರ್ಗದರ್ಶನ ಕೇಂದ್ರವನ್ನು ತೆರೆಯಬೇಕು.

೪) ಸಂತ್ರಸ್ತರಾಗುವವರ ಸಾಮಾಜಿಕ-ಆರ್ಥಿಕ ಸಮೀಕ್ಷೆ ನಡೆಸಿ, ಯೋಜನಾ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿಯೂ ಸಂತ್ರಸ್ತರಾಗುವವರ ಸಂಪೂರ್ಣ ಸಹಭಾಗಿತ್ವವನ್ನು ಪಡೆದು ಹಿಂದಿನ ಬದುಕಿಗೆ ಹೊಂದಿಕೆಯಾಗುವಂತೆ ಪುನರ್ವಸತಿ ಕೇಂದ್ರ ಗುರುತಿಸಬೇಕು.

೫) ಸರ್ಕಾರವು ಅಭಿವೃದ್ಧಿ ಯೋಜನೆಗೆ ನೀಡುವಷ್ಟೇ ಪ್ರಾಮುಖ್ಯತೆಯನ್ನು ಪುನರ್ವಸತಿ ಯೋಜನೆಗೂ ನೀಡಬೇಕು. ಭೂಸ್ವಾಧೀನಗೊಳಿಸುವ ಪೂರ್ವದಲ್ಲಿ ಸಂತ್ರಸ್ತರ ಆಸ್ತಿ ದಾಖಲಾತಿಗಳನ್ನು ಆಧುನೀಕರಣಗೊಳಿಸಿ (ಅಪ್ಡೇಟ್) ನಿಖರವಾಗಿ ಮೋಜಣಿ ಮಾಡಿ ಸಂತ್ರಸ್ತರಾಗುವವರ ಸಂಪತ್ತನ್ನು ಸಾಧ್ಯವಾದಷ್ಟು ಹೆಚ್ಚು ಮೌಲೀಕರಿಸಿ ಯೋಗ್ಯ ಪರಿಹಾರವನ್ನು ನೀಡಬೇಕು. ಪುನರ್ವಸತಿ ಯೋಜನೆಯನ್ನು ನಿಗಧಿತ ಅವಧಿಯೊಳಗೆ ಪೂರ್ತಿಗೊಳಿಸಿ ಸಂತ್ರಸ್ತರಿಗೆ ಹೆಚ್ಚಿನ ನಷ್ಟವಾಗದಂತೆ ಹಾಗೂ ಪರಿಹಾರ ಪಡೆಯುವಲ್ಲಿ ಯಾವುದೇ ರೀತಿಯ ಸಮಸ್ಯೆಗಳಾಗದಂತೆ

ನೋಡಿಕೊಳ್ಳಬೇಕು. ಯೋಜನೆಯ ಲಾಭದಿಂದ ಸಂತ್ರಸ್ತರಿಗೆ ನಿರಂತರ ಲಾಭ ಹಂಚಿಕೆಯಾಗಬೇಕು.

೬) ಸ್ಥಳಾಂತರವಾಗುತ್ತಿರುವ ಸಂದರ್ಭದಲ್ಲಿ ಪುನರ್ವಸತಿ ಕೇಂದ್ರದಲ್ಲಿ ಸಂತ್ರಸ್ತರಿಗೆ ಬೇಕಾದಂತಹ ತತ್‌ಕ್ಷಣದ ಎಲ್ಲಾ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ಪೂರೈಸಬೇಕು. ಪುನರ್ವಸತಿ ಕೇಂದ್ರದಲ್ಲಿ ಆಪ್ತಸಮಾಲೋಚನಾ ಕೇಂದ್ರ, ಸಲಹಾ ಕೇಂದ್ರ, ವೃತ್ತಿ ಮಾರ್ಗದರ್ಶನ ಕೇಂದ್ರಗಳನ್ನು ತೆರೆದು ಸಂತ್ರಸ್ತರಿಗೆ ಎಲ್ಲಾ ರೀತಿಯಲ್ಲೂ ಹಿತಕರ ಭಾವನೆ ಮೂಡುವ ಹಾಗೆ ಮಾಡಬೇಕು.

೭) ಯಾವುದೇ ಯೋಜನಾ ಸಂತ್ರಸ್ತರಿಗೆ ಪರಿಹಾರವಾಗಿ ದೊರೆತ ಜಮೀನನ್ನು ಮಾರಾಟ ಮಾಡುವ ಅವಕಾಶವನ್ನು ನೀಡಬಾರದು.

೮) ಸೂಪಾ ಜಲಾಶಯದಿಂದ ರಾಮನಗರಕ್ಕೆ ನಾಲೆಯ ಮೂಲಕ ನೀರು ಪೂರೈಕೆ ಮಾಡಿ ಸಂತ್ರಸ್ತರಿಗೆ ಕುಡಿಯುವ ನೀರು ಮತ್ತು ನೀರಾವರಿ ಸೌಲಭ್ಯ ಒದಗಿಸಿಕೊಡಬೇಕು. ಹಾಗೂ ಅಲ್ಲಿ ಒಂದು ಬೃಹತ್ತಾದ ಕೆರೆ ನಿರ್ಮಾಣ ಮಾಡಬೇಕು.

೯) ರಾಮನಗರದಲ್ಲಿ ಕೆ.ಪಿ.ಸಿ. ನಿರ್ಮಿಸಿದ್ದ ರಸ್ತೆ, ಬಾವಿ, ಕೊಳವೆಬಾವಿ, ನಳ್ಳಿ, ವಿದ್ಯುತ್, ಗೋಕಟ್ಟೆ, ಇತ್ಯಾದಿ ಸಾರ್ವಜನಿಕ ಮೂಲಭೂತ ಸೌಲಭ್ಯಗಳು ನಶಿಸಿಹೋಗಿದ್ದು ಅವೆಲ್ಲವುಗಳನ್ನೂ ಶೀಘ್ರವಾಗಿ ಪುನರ್ನಿರ್ಮಾಣ ಮಾಡಬೇಕು. ಹೆಚ್ಚಿನದಾಗಿ ಶಾಲೆ, ಆಟದ ಮೈದಾನ, ಸಾರ್ವಜನಿಕ ಉದ್ಯಾನವನ, ಸಾಮಾಜಿಕ ಅರಣ್ಯ ಮುಂತಾದುವುಗಳನ್ನು ಶೀಘ್ರವಾಗಿ ನಿರ್ಮಿಸಬೇಕು.

